ವಿಷಯಾನುಕ್ರಮಣಿಕೆ

|| ಓಂ ಶ್ರೀ ದುರ್ಗಾಯೈ ನಮಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂಖ್ಯಾ-೫೭)

ಮಾರ್ಕಂಡೇಯ ಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೩

ಅನುವಾದಕ

ಆಸ್ಥಾನವಿದ್ವಾನ್, ಪಾಟಣಕರ ಚಂದ್ರಶೇಖರಭಟ್ಟ

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1954

ಪ್ರಸ್ತಾವನೆ

ಮಹರ್ಷಿ ವೇದವ್ಯಾಸಮುನಿ ರಚಿತವಾದ ಮಾರ್ಕಂಡೇಯ ಮಹಾಪುರಾಣದ ಕನ್ನಡ ಅನುವಾದ ರಚನೆಯನ್ನು ಮುಂದುವರೆಸಿಕೊಂಡು ಬಂದುದರ ಪರಿಣಾಮವಾಗಿ ಅದರ ಮೂರನೆಯ ಸಂಚಿಕೆಯನ್ನೀಗ ವಾಚಕರ ಮುಂದಿಡಲು ಅತ್ಯಂತ ಕುತೂಹಲಿಯಾಗಿದ್ದೇನೆ.

ಭರತಖಂಡದ ದಿವ್ಯಭವಿಷ್ಯವನ್ನು ರೂಪಿಸುವ ಕೂರ್ಮಮೂರ್ತಿಯ ಸನ್ನಿವೇಶವನ್ನು ವರ್ಣಿಸುವ ಐವತ್ತೈದನೆಯ ಅಧ್ಯಾಯದಿಂದ ಪ್ರಾರಂಭಹೊಂದಿದ ಈ ಸಂಚಿಕೆಯಲ್ಲಿ ಕ್ರಮವಾಗಿ ಸ್ವಾಯಂಭುವ–ಸ್ವಾರೋಚಿಷ-ಔತ್ತಮ–ತಾಮಸ–ರೈವತ–ಚಾಕ್ಷುಷ–ವೈವಸ್ವತ ಮತ್ತು ಸಾವರ್ಣಿಕ ಮನುರಾಜರ ಮನ್ವಂತರ ಚರಿತ್ರೆಗಳು ವರ್ಣಿಸಲ್ಪಟ್ಟಿವೆ.

ಪಾವನವಾಗಿದ್ದ ಮನ್ವಂತರಚರಿತ್ರೆಯ ಶ್ರವಣವು ಪುಣ್ಯ–ಚಿತ್ತಶುದ್ಧಿ–ಉತ್ತಮಸಂಸ್ಕಾರಗಳನ್ನು ಕೊಡುವಂತೆಯೇ ಕಥಾದೃಷ್ಟಿಯಿಂದ ಅಘಟಿತಘಟನಾಮಯವೂ ಅದ್ಭುತವೂ ಆದ ಆ ಚರಿತ್ರೆಯ ಪರಿಶೀಲನೆಯು ಚಿತ್ತಕ್ಕೆ ಚಮತ್ಕಾರವನ್ನು ಉಂಟುಮಾಡುವುದರಲ್ಲಿ ಸಂದೇಹವಿಲ್ಲ. ಮನ್ವಂತರಾಧಿಪತಿಯೆನಿಸುವ ಉಚ್ಚಪದವಿಯನ್ನು ಹೊಂದುವ ಮಹಾನುಭಾವರ ಜನ್ಮವು ಆಶ್ಚರ್ಯಗೊಳಿಸುವಂತಹುದಾಗಿರುವುದು.

ಸ್ವಾರೋಚಿಷನೆಂಬ ಮನುರಾಜನು ಕಲಿ ಎಂಬ ಗಂಧರ್ವ, ವರೂಥಿನೀ ಎಂಬ ಅಪ್ಸರಾಂಗನೆ—ಇವರಲ್ಲಿ ಜನಿಸಿದ ಸ್ವರೋಚಿ ಎಂಬುವನ ಪುತ್ರನು. ದೇಶದರ್ಶನ ಕುತೂಹಲಿಯಾದ ವಿಪ್ರನೋರ್ವನು ಪಾದುಕಾಸಿದ್ಧಿಯಬಲದಿಂದ ಸಂಜೆಯೊಳಗೆ ಹಿಂತಿರುಗಿ ಬರುವೆನೆಂಬ ನಂಬಿಕೆಯಿಂದ ಹಿಮಾಚಲಕ್ಕೆ ಹೋಗಿ ಅಲ್ಲಲ್ಲಿ ಸುಂದರಗಿರಿ ಸನ್ನಿವೇಶಗಳನ್ನು ನೋಡಿ ಹಿಗ್ಗುತ್ತಿರುವಷ್ಟರಲ್ಲಿ ಪಾದಸಿದ್ಧಿಯನ್ನು ಕೊಟ್ಟಿರುವ ರಸಲೇಪನವನ್ನು ಕಳೆದುಕೊಂಡು ಸಂಜೆಯೊಳಗೆ ಮನೆಯನ್ನು ಸೇರಲು ಅಶಕ್ತನಾಗುವನು. ಮತ್ತು ಸಂಧ್ಯಾಕಾಲದ ಕರ್ಮಾನುಷ್ಠಾನದ ಲೋಪಕ್ಕೆ ಭಯಪಟ್ಟು ಚಿಂತಾಗ್ರಸ್ತನಾಗಿರುವನು. ಆಗ ವರೂಥಿನಿ ಎಂಬ ಅಪ್ಸರಾಂಗನೆಯು ಅವನನ್ನು ನೋಡಿ ರೂಪ-ಲಾವಣ್ಯಗಳಿಗೆ ಬೆರಗಾಗಿ ಅವನನ್ನು ಕಾಮಿಸುವಳು. ಲೀಲಾವಿಲಾಸತರಂಗಗಳಿಂದ ಮೋಹಗೊಳಿಸಿ

ರತಿಸುಖ ಪ್ರಪಂಚಕ್ಕೆ ತಂದು ಧರ್ಮಪಥವನ್ನು ಕಣ್ಮರೆಮಾಡುವ ಅಪ್ಸರಾಂಗನೆಯೆಲ್ಲಿ! ಒಂದು ಹೊತ್ತಿನ ಕರ್ಮಾನುಷ್ಠಾನಲೋಪಕ್ಕೆ ಅಂಜುವ ಅಚಲ ಶ್ರದ್ಧಾವಂತನಾದ ಧಾರ್ಮಿಕವಿಪ್ರನೆಲ್ಲಿ! ಕಡೆಗೂ ವರೂಥಿನಿಯ ಪ್ರಾರ್ಥನೆಯು ವಿಪ್ರನಲ್ಲಿ ಸಾರ್ಥಕವಾಗದು.

ಪರಸ್ತ್ರಿಯಂ ನಾಭಿಲಷೇತ್ ಇತ್ಯುಚುರ್ಗುರವೋ ಮಮ ।
ತೇನ ತ್ವಾಂ ನಾಭಿವಾಞ್ಛಾಮಿ ಕಾಮಂ ವಿಲಪ ಶುಷ್ಯ ವಾ ॥

"ಪರಸ್ತ್ರೀಸಂಗವನ್ನು ಆಶಿಸಲಾಗದು" ಎಂದು ನನಗೆ ಗುರೂಪದೇಶವಿರುವುದರಿಂದ ನಿನ್ನಲ್ಲಿ ನಾನು ಇಷ್ಟವನ್ನು ಹೊಂದಲಾರೆನು. ನೀನು ಎಷ್ಟೇ ಕೇಳು, ಗೋಳಿಡು, ಅಳು ಅಥವಾ ಹಾಳಾಗು ಎಂದು ವಿಪ್ರನು ಆಕೆಯನ್ನು ಧಿಕ್ಕರಿಸುವನು. ಮುಂದೆ ವಿಪ್ರನು ಗತ್ಯಂತರವಿಲ್ಲದೆ ಅನನ್ಯಭಾವದಿಂದ ಅನುಷ್ಠಾನಲೋಪವಿಲ್ಲದ ಹಾಗೆ ಕರುಣಿಸಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲು ಅಗ್ನಿಯು ತನ್ನ ತೇಜಸ್ಸು-ಪ್ರಭಾವಗಳನ್ನು ಕರುಣಿಸುವನು. ಆಗಿನ ಉಜ್ವಲರೂಪನನ್ನು ಕಂಡ ವರೂಥಿನಿಗೆ ಮಾತ್ರ ಕಾಮಪೀಡೆಯು ದ್ವಿಗುಣವಾಯಿತು. ವಿಪ್ರನು ಕ್ಷಣಮಾತ್ರದಲ್ಲಿ ಮನೆಗೆ ಸೇರಿದನು.

ಇತ್ತ ಕಲಿ ಎಂಬ ಗಂಧರ್ವನು ಚಿರಕಾಲದಿಂದ ವರೂಥಿನಿಯಲ್ಲಿ ಆಶೆ ತೋರಿಸಿ ವಿಫಲನಾಗಿದ್ದನು. ಈ ಸಮಯವನ್ನು ಸಾರ್ಥಕಪಡಿಸಿಕೊಳ್ಳಲು ಹವಣಿಸಿದ ಕಲಿಗಂಧರ್ವನು ಆ ವಿಪ್ರನ ರೂಪದಿಂದ ವರೂಥಿನಿಗೆ ಕಾಣಿಸಿಕೊಂಡನು. ಮತ್ತೆ ತನ್ನ ಮನಮೋಹಕ ವಿಪ್ರನು ಅಲ್ಲಿಗೆ ಬಂದಂತೆ ಗಂಧರ್ವನ ವಂಚನೆಯಿಂದ ಅರಿತ ವರೂಥಿನಿಯು ದೈನ್ಯದಿಂದ ಅವನ ಬಳಿಯಲ್ಲಿ ತನ್ನ ಮನೋರಥವನ್ನು ಈಡೇರಿಸುವಂತೆ ಕೇಳಿಕೊಂಡಳು. ತರುವಾಯ ವಿಪ್ರನ ಉಜ್ವಲರೂಪವನ್ನು ಧ್ಯಾನಿಸುತ್ತ ಗಂಧರ್ವನ ಸಂಗ ಹೊಂದಿದ ವರೂಥಿನಿಯು ಪುತ್ರನನ್ನು ಪ್ರಸವಿಸಿದಳು. ಅಗ್ನಿಯಂತೆ ತೇಜಸ್ವಿಯಾಗಿ ಜನಿಸಿದ ಆ ಪುತ್ರನೇ ಸ್ವರೋಚಿಯು.

ಸ್ವರೋಚಿಯು ತಾರುಣ್ಯದಲ್ಲಿ ಪ್ರೇಯಸಿರೊಡನೆ ವಿಹರಿಸುತ್ತ ಪ್ರಣಯ ಕೇಳಿಗಳಲ್ಲಿ, ಕ್ರೀಡಾವಿನೋದಗಳಲ್ಲಿ ತೊಡಗಿದುದು ಸ್ಪೃಹಣೀಯವಾಗಿತ್ತು. ಇದನ್ನು ಚಕ್ರಪಾಕಪಕ್ಷಿಯು ವರ್ಣಿಸುತ್ತ ಈ ವಿಧದ ದಾಂಪತ್ಯಪ್ರೇಮವು ಬಹು ವಿರಳವೆಂದು ಹೇಳಿದೆ.

> ಅಭೀಷ್ಟಾ ಕಸ್ಯಚಿತ್ಕಾನ್ತಾ ಕಾನ್ತಃ ಕಸ್ಯಾಶ್ಚಿದೀಪ್ಸಿತಃ ।
> ಪರಸ್ಪರಾನುರಾಗಾಢ್ಯಂ ದಾಮ್ಪತ್ಯಮತಿದುರ್ಲಭಮ್ ॥
>
> ಧನ್ಯೋಽಯಂ ದಯಿತಾಭೀಷ್ಟೋ ಹ್ಯೇತಾಶ್ಚಾಸ್ಯಾತಿವಲ್ಲಭಾಃ ।
> ಪರಸ್ಪರಾನುರಾಗೋ ಹಿ ಧನ್ಯಾನಾಮೇವ ಜಾಯತೇ ॥

ರೈವತಮನ್ವಂತರ ಚರಿತ್ರೆಯಲ್ಲಿ ಪುತ್ರವಂತಮಾನವರ ಮನವೊಪ್ಪುವ ಒಂದು ಸನ್ನಿವೇಶವು ಹೃದಯಂಗಮವಾಗಿದೆ. ಋತವಾಕ್ ಎಂಬ ಮುನಿಯು ತನಗೆ ಹುಟ್ಟಿದ ದುಷ್ಪುತ್ರನ ವಿಷಯವಾಗಿ ಖೇದದಿಂದ ಈ ರೀತಿ ಹೇಳುತ್ತ—

> ಅಪುತ್ರತಾ ಮನುಷ್ಯಾಣಾಂ ಶ್ರೇಯಸೇ ನ ಕುಪುತ್ರತಾ ।
> ಕುಪುತ್ರೋ ಹೃದಯಾಯಾಸಂ ಸರ್ವದಾ ಕುರುತೇ ಪಿತುಃ ॥

ಮಾನವರಿಗೆ ಕುಪುತ್ರನು ಹುಟ್ಟಿ ಸಂತತವಾಗಿ ಚಿಂತಿಸುವಂತಹ ದುರ್ದಶೆ-ಗಿಂತಲೂ ಸಂತತಿಯಿಲ್ಲದೆ ಅಪುತ್ರರಾಗಿರುವುದು ಮೇಲು ಎಂದು ಕೊರಗುವನು. ಆದರೆ ರೇವತೀನಕ್ಷತ್ರದೋಷದಿಂದ ಆ ದೋಷವು ಸಂಭವಿಸಿದುದು ವೇದ್ಯವಾಗಿ ಋತವಾಕ್‌ಮುನಿಯ ಅಮೋಘಶಾಪದಿಂದ ರೇವತೀನಕ್ಷತ್ರವು ಭೂಪತನವಾಗು-ವುದು. ಅದರ ಪರಿಣಾಮವಾಗಿ ಆವಿರ್ಭವಿಸಿದ ರೇವತಿ ಎಂಬಾಕೆಯಲ್ಲಿ ದುರ್ಗ-ಮರಾಜನ ಪುತ್ರನಾಗಿ ಜನಿಸಿದವನು ರೈವತಮನುವಾಗುವನು.

ಹೀಗೆ ಪ್ರತಿಯೊಂದು ಚರಿತ್ರೆಯಲ್ಲಿ ಒಂದಲ್ಲ, ಮತ್ತೊಂದು ವಿಧದಿಂದ ಪ್ರತಿಯೊಂದು ವ್ಯಕ್ತಿಯ ಜೀವನ ಸನ್ನಿವೇಶವನ್ನು ಪ್ರತಿಬಿಂಬಿಸುವ ಘಟನೆಗಳು ಸೇರಿರುತ್ತವೆ. ಕಡೆಯಲ್ಲಿ ಸಾವರ್ಣಿಕಮನ್ವಂತರ ಚರಿತ್ರೆಯ ಪೀಠಿಕೆಯಾಗಿ ಸಾವರ್ಣಿಕನ ಪೂರ್ವಜನ್ಮವೃತ್ತಾಂತದಲ್ಲಿ ಮುಖ್ಯವಾದ ಶ್ರೀದೇವಿಯ ಅನು-ಗ್ರಹವನ್ನು ವರ್ಣಿಸುವ ನೆಪದಿಂದ ಸಂಪೂರ್ಣ ದೇವೀಮಾಹಾತ್ಮ್ಯವು ಸೇರಿ-ಕೊಂಡಿದೆ.

ದೇವಿಯ ಮಾಹಾತ್ಮ್ಯದಲ್ಲಿ ಮಧು-ಕೈಟಭಸಂಹಾರ, ಮಹಿಷಾಸುರ-ಮರ್ದನ ಮತ್ತು ಶುಂಭ-ನಿಶುಂಭ ವಧ—ಎಂದು ಮೂರು ಚರಿತ್ರೆಗಳಿವೆ. ದೇವತೆಗಳು ದುಷ್ಟದಾನವರನ್ನು ದಮನಮಾಡಲಾಗದೆ ಸ್ವರ್ಗಸುಖಭ್ರಷ್ಟರಾ-ಗಿರುವ ಸಮಯದಲ್ಲಿ ದೇವಿಯನ್ನು ಸ್ತುತಿಮಾಡಿದಾಗ ದೇವಿಯು ಬಗೆಬಗೆಯ ರೂಪಗಳಿಂದ ಕಾಣಿಸಿಕೊಂಡುದನ್ನು ದೇವಿಯ ಉತ್ಪತ್ತಿಯೆನ್ನುವರು. ತಾತ್ತ್ವಿಕ-ವಾಗಿ ದೇವಿಯು ಜನ್ಮವಿಲ್ಲದವಳು. ಬ್ರಹ್ಮನ ಸ್ತುತಿಯಿಂದ ಪ್ರಸನ್ನಳಾದ

ಯೋಗನಿದ್ರಾರೂಪಿಣಿಯಾದ ದೇವಿಯು ವಿಷ್ಣುನೇತ್ರವೆಂಬ ಮಂದಿರವನ್ನು ಬಿಟ್ಟು ಬಂದು ಅನುಗ್ರಹವನ್ನೀಯಲು ಮಹಾವಿಷ್ಣು ಪರಮಾತ್ಮನು ಆ ದಾನವರನ್ನು ಸಂಹರಿಸುವನು. ದೇವತೆಗಳಲ್ಲಿ ಪ್ರಸರಿಸಿದ ಶಕ್ತಿಯ ಅಂಶಗಳು ಒಂದುಕಡೆ ಸಮಷ್ಟಿಯಾಗಿ ಸೇರಿ ದೇವಿಯು ಮೂರ್ತೀಭವಿಸಿ ಮಹಿಷಾಸುರನನ್ನು ವಧಿಸುವಳು. ಹಾಗು ಶುಂಭ-ನಿಶುಂಭರಮನವ್ಯಾಮೋಹಕ ರೂಪವನ್ನು ತೆಗೆದುಕೊಂಡು ಬಂದು " ನಾನು ಹಿಂದೆ ಕೈಗೊಂಡ ಪ್ರತಿಜ್ಞೆಯಂತೆ—

ಯೋ ಮಾಂ ಜಯತಿ ಸಙ್ಗ್ರಾಮೇ ಯೋ ಮೇ ದರ್ಪಂ ವ್ಯಪೋಹತಿ ।
ಯೋ ಮೇ ಪ್ರತಿಬಲೋ ಲೋಕೇ ಸ ಮೇ ಭರ್ತಾ ಭವಿಷ್ಯತಿ ॥

ನನ್ನನ್ನು ಸಂಗ್ರಾಮದಲ್ಲಿ ಗೆದ್ದ ವೀರನು ನನಗೆ ಪತಿಯಾಗುವನು " ಎಂದು ಪ್ರಚಾರಮಾಡಿದ ವಾಣಿಯನ್ನು ಕೇಳಿ ನಿಖಿಲೈಶ್ವರ್ಯಮದಮತ್ತರೂ ರತ್ನಭುಜರೆಂಬ ಅಹಂಕಾರಾರೂಢರೂ ಆದ ನಿಶುಂಭ-ಶುಂಭರು ಯುದ್ಧಕ್ಕೆ ಬಂದು ಮರಣಹೊಂದುವರು. ಇವರಿಂದ ದೇವಿಯ ಸರ್ವಶಕ್ತಿ-ಸರ್ವಾತ್ಮತೆಗಳು ವ್ಯಕ್ತಿ ಹೊಂದುವುವು.

ಈ ದೇವೀಮಾಹಾತ್ಮ್ಯವು ದೇವಿಯನ್ನು ಉಪಾಸನಮಾಡುವ ಪಾವನವೂ ಸ್ತುತಿರೂಪವೂ ಆದ ವಾಙ್ಮಯವು. ಇದು ಜಪ, ಪುರಶ್ಚರಣ, ಹೋಮ ಮುಂತಾದ ವಿಧಾನಗಳಿಂದ ಭಕ್ತರಿಗೆ ಇಷ್ಟಸಿದ್ಧಿಯನ್ನು ಉಂಟುಮಾಡುವ ಮಂತ್ರವಿದ್ಯೆಯ ಸ್ವರೂಪವಾಗಿ ಶಿಷ್ಟರಲ್ಲಿ ಪ್ರಖ್ಯಾತಿಯನ್ನು ಹೊಂದಿದೆ.

ಇಂತು ಅನೇಕ ವಿಷಯಗಳನ್ನೊಳಗೊಂಡು ತೊಂಭತ್ತನೆಯ ಅಧ್ಯಾಯವು ಪೂರ್ಣವಾಗಿ ಈ ಸಂಚಿಕೆಯು ಮುಕ್ತಾಯವಾಗಿರುವುದು.

ಆಳುವ ಮಹಾಸ್ವಾಮಿಯವರು **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಬಿ , ಜಿ. ಸಿ. ಎಸ್. ಐ.,** ರವರ ಆಜ್ಞೆಯಂತೆ ಸಂಸ್ಕೃತವಲ್ಲಿದ್ದ ಈ ಗ್ರಂಥವನ್ನು ಕನ್ನಡಿಗರ ತಿಳಿವಳಿಕೆಗಾಗಿ ಕನ್ನಡಕ್ಕೆ ಪರಿವರ್ತನ ಮಾಡಿರುತ್ತೇನೆ. ಆಸ್ತಿಕಶಿರೋಮಣಿಗಳಾದ ಮಹಾಪ್ರಭುಗಳವರು ಪವಿತ್ರ ವಾಙ್ಮಯದ ಪ್ರಸಾರದಿಂದ ಸರಸ್ವತೀದೇವಿಯ ಉಪಾಸಕರಾಗಿ ಲೋಕಕ್ಕೆ ಮಹೋಪಕಾರವನ್ನು ಮಾಡುತ್ತ ಭರತಖಂಡದ ರಾಜಾಧಿರಾಜರಲ್ಲಿ ಅದ್ವಿತೀಯರೆಂದು ಖ್ಯಾತಿಗಳಿಸಿರುವರು. ಕರ್ಣಾಟಕದ ಪ್ರಜಾಕೋಟಿಯ ಭಾಗ್ಯದೇವತೆಯಂತಿರುವ ಮಹಾಸ್ವಾಮಿಯವರು ಸತ್ಪತ್ನೀ-ಪುತ್ರರತ್ನ-ಪರಿವಾರಸಮೇತರಾಗಿ

ದೀರ್ಘಾಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನು ಚಿರಕಾಲ ಅನುಭವಿಸು-ವಂತೆ ಕರುಣಿಸಲೆಂದು ಶ್ರೀ ಚಾಮುಂಡಾಂಬಿಕೆಯನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಹೀಗೆ ಈ ಗ್ರಂಥವು ಪ್ರಕಾಶಕ್ಕೆ ಬಂದು ಸಜ್ಜನರ ಸೇವೆಮಾಡಲು ಅವಕಾಶಮಾಡಿಕೊಟ್ಟ ಮಹನೀಯರಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತ ವಾಚಕರ ಹೃದಯದಲ್ಲಿ ಜ್ಞಾನಪ್ರಕಾಶವನ್ನು ಬೀರುವ ಈ ಗ್ರಂಥದಿಂದ ರಾಜಮನೆತನದ ಕೀರ್ತಿಯು ಆಚಂದ್ರಾರ್ಕವಾಗಿ ಉಜ್ವಲವಾಗಿರಲೆಂದು ಕೋರುತ್ತೇನೆ.

ಮೈಸೂರು
ತಾ॥ 9—1—1954

ಅನುವಾದಕ
ಪಾಟಣಕರ ಚಂದ್ರಶೇಖರಭಟ್ಟ

ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯ	ಪುಟ
೫೫.	ಭರತಖಂಡದ ಅಧಿದೇವತೆಯಾದ ಕೂರ್ಮಮೂರ್ತಿಯ ಆಕಾರ-ವರ್ಣನೆ. ಆ ಮೂರ್ತಿಯಲ್ಲಿ ಸಮಸ್ತ ದೇಶಗಳ ಅಂತರ್ಭಾವ ಮತ್ತು ಘೋರವಾದ ದೇಶಪೀಡಾಪರಿಹಾರಮಾರ್ಗ.	೧
೫೬.	ಭದ್ರಾಶ್ವವರ್ಷದ ಗಿರಿ-ನದೀ-ದೇಶಗಳ ವರ್ಣನೆ. ಉತ್ತರ ಕುರುವರ್ಷ ನಿರೂಪಣೆ.	೨೨
೫೭.	ಕಿಂಪುರುಷವರ್ಷ, ಹರಿವರ್ಷ, ಮೇರುವರ್ಷ ಮತ್ತು ರಮ್ಯಕ—ಎಂಬ ವರ್ಷಗಳಲ್ಲಿರುವ ಪ್ರಧಾನವಾದ ಗಿರಿ–ನದೀ ವರ್ಣನೆಯು.	೩೦
೫೮.	ಸ್ವಾರೋಚಿಷಮನ್ವಂತರ : ಅರುಣಾನದೀತೀರವಾಸಿಯಾದ ವಿಪ್ರನೋರ್ವನು ಒಬ್ಬ ಅತಿಥಿಯಿಂದ ಪಾದುಕಾಸಿದ್ಧಿಯಲೇಪನ ರಸವನ್ನು ಹೊಂದಿ ಅದರ ಪ್ರಭಾವದಿಂದ ಹಿಮಾಚಲಕ್ಕೆ ಹೋಗುವುದು. ಅಲ್ಲಿ ಪಾದಲೇಪನದ ಭ್ರಂಶ, ಅಷ್ಟರಲ್ಲಿ ವರೂಥಿನಿ ಎಂಬ ಅಪ್ಸರಾಂಗನೆಯು ವಿಪ್ರನನ್ನು ಕಾಮಿಸುವುದು. ಅವಳನ್ನು ಧಿಕ್ಕರಿಸಿ ಸೂರ್ಯನು ಅಸ್ತಮಯವಾಗುವಷ್ಟರಲ್ಲಿ ತನ್ನ ಮನೆಯನ್ನು ಸೇರುವಂತೆ ಅನುಗ್ರಹಿಸಲು ಅಗ್ನಿಯನ್ನು ಪ್ರಾರ್ಥಿಸುವುದು.	೩೪
೫೯.	ವಿಪ್ರನಲ್ಲಿ ಅಗ್ನಿದೇವನ ಆವೇಶ. ವಿಪ್ರನು ಅಗ್ನಿಯಂತೆ ಕಂಗೊಳಿಸುವುದು. ಆಗ ವರೂಥಿನಿಯು ಮತ್ತಷ್ಟು ಕಾಮಪೀಡೆಗೆ ತುತ್ತಾಗುವುದು. ವಿಪ್ರನು ಹಿಂತಿರುಗುವುದು. ಕಲಿ ಎಂಬ ವಿದ್ಯಾಧರನು ವಿಪ್ರನ ರೂಪದಿಂದ ಕಾಣಿಸಿಕೊಂಡು ವರೂಥಿನಿಯ ಪ್ರಣಯಕ್ಕೆ ಪಾತ್ರನಾದುದು.	೫೫
೬೦.	ಕಲಿವಿದ್ಯಾಧರನನ್ನು ವಿಪ್ರನೆಂದು ತಿಳಿದು ಅವನಲ್ಲಿ ಅಗ್ನಿತೇಜಸ್ಸನ್ನು ಧ್ಯಾನಿಸುತ್ತ ಸಂಗಹೊಂದಿದ ವರೂಥಿನಿಯು ಅಂತಹ ಪುತ್ರನನ್ನು ಪ್ರಸವಿಸಿದುದು. ಪುತ್ರನಿಗೆ “ ಸ್ವರೋಚಿ ” ಎಂಬ ನಾಮಾಂಕನ. ಅವನು ಮನೋರಮಾ ಎಂಬುವಳನ್ನು ಮದುವೆಯಾದುದು.	೬೩

ಅಧ್ಯಾಯ	ವಿಷಯ	ಪುಟ
೬೧.	ಸ್ವರೋಚಿಯು ಮನೋರಮೆಯ ಸಖಿಯರಾದ **ವಿಭಾವರೀ-**ಕಲಾವತೀ ಎಂಬ ಕನ್ಯೆಯರನ್ನು ವಿವಾಹವಾದುದು. **ಸ್ವರೋಚಿಗೆ** ಎಲ್ಲ ಪ್ರಾಣಿಗಳ ಭಾಷಾಜ್ಞಾನ, ಪದ್ಮಿನಿ ಎಂಬ **ನಿಧಿವಿದ್ಯೆಯ** ಪ್ರಾಪ್ತಿ.	೮೦
೬೨.	ಸ್ವರೋಚಿರಾಜನ ಪ್ರೇಯಸೀಪ್ರಣಯವನ್ನು ವಿಡಂಬನೆಯೆಂದು ಚಕ್ರವಾಕಪಕ್ಷಿ ಮತ್ತು ಮೃಗಾಂಗನೆ—ಇವು ತಿರಸ್ಕರಿಸುವುದು.	೮೬
೬೩.	ಸ್ವರೋಚಿರಾಜನಿಗೆ ಮನೋರಮಾ ಮುಂತಾದವರಲ್ಲಿ ಪುತ್ರಪ್ರಾಪ್ತಿ. ಪುತ್ರರಲ್ಲಿ ರಾಜ್ಯಭಾರವನ್ನಿರಿಸುವುದು. ಸ್ವರೋಚಿಗೆ ಮೃಗಾಂಗನೆಯಲ್ಲಿ ಸ್ವಾರೋಚಿಷ ಪುತ್ರನು ಜನಿಸುವುದು. ಹಂಸವು ಸ್ವರೋಚಿಯನ್ನು ಜರಿದು ಮಾತನಾಡುವುದು.	೯೪
೬೪.	ಸ್ವಾರೋಚಿಷ ಮನ್ವಂತರದ ಋಷಿ-ಮುಂತಾದವರ ವರ್ಣನೆಯು.	೧೦೬
೬೫.	ನಿಧಿಸ್ವರೂಪವರ್ಣನೆ. ನಿಧಿಭೋಗವಂತರಾದ ಮಹಾನುಭಾವರು ಮತ್ತು ಅವರಲ್ಲಿರುವ ಸ್ವಭಾವ-ಚರಿತ್ರೆಗಳ ವೈಶಿಷ್ಟ್ಯ.	೧೦೯
೬೬.	ಔತ್ತಮಮನ್ವಂತರ: ಉತ್ತಮರಾಜನು ಪತ್ನಿಯ ಔದಾಸೀನ್ಯದಿಂದ ಪತ್ನಿಯನ್ನು ತ್ಯಜಿಸುವುದು. ಮತ್ತು ರಾಕ್ಷಸನು ಅಪಹರಿಸಿ ಭಾರ್ಯೆಯನ್ನು ಕಳೆದುಕೊಂಡ ದ್ವಿಜನಿಗೆ ಭಾರ್ಯಾನ್ವೇಷಣದ ಉಪಕಾರಮಾಡುವುದು.	೧೨೨
೬೭.	ರಾಕ್ಷಸನಿಂದ ಬಿಡಿಸಿ ಸೌಮ್ಯಶೀಲಳಾದ ದ್ವಿಜನ ಸತಿಯನ್ನು ದ್ವಿಜನಿಗೆ ತಂದೊಪ್ಪಿಸಿದುದು.	೧೪೨
೬೮.	ಪತ್ನೀತ್ಯಾಗದಿಂದ ಖಿನ್ನನಾದ ರಾಜನು ಸುಚರಿತಳಾಗಿ ಪತ್ನಿಯು ಪಾತಾಳದಲ್ಲಿ ಇರುವುದನ್ನು ಮುನಿಯಿಂದ ತಿಳಿದು ಆಕೆಯ ಉದಾಸೀನ ಸ್ವಭಾವಕ್ಕೆ ಕಾರಣವನ್ನು ಕೇಳುವುದು.	೧೫೩
೬೯.	ಮುನಿಯ ಮಿತ್ರವಿಂದಾ ಇಷ್ಟಿಯ ಅನುಷ್ಠಾನದಿಂದ ಪ್ರಣಯವತಿಯಾದ ಮಹಿಷಿ ಮತ್ತು ರಾಜರ ಸಮಾಗಮ. ಔತ್ತಮಮನುವಿನ ಜನನ.	೧೬೨

ಅಧ್ಯಾಯ	ವಿಷಯ	ಪುಟ
೨೦.	ಔತ್ತಮಮನ್ವಂತರದ ವರ್ಣನೆಯು.	೧೨೫
೨೧.	ತಾಮಸಮನ್ವಂತರ : ದೀರ್ಘಾಯುವಾದ ಸ್ವರಾಷ್ಟ್ರನೆಂಬ ರಾಜನಿಂದ ಮೃಗಾಂಗನೆಯಲ್ಲಿ ತಾಮಸನೆಂಬ ಮನುವಿನ ಉತ್ಪತ್ತಿ.	೧೮೦
೨೨.	ರೈವತಮನ್ವಂತರ : ಋತವಾಕ್ ಎಂಬುವನು ರೇವತಿಯನ್ನು ಶಪಿಸುವುದು. ರೇವತಿಯ ಕಾಂತಿಪ್ರಸರದಿಂದ ಹುಟ್ಟಿದ ರೇವತೀ ಕನ್ಯೆಯನ್ನು ದುರ್ಗಮರಾಜನು ಪಾಣಿಗ್ರಹಣಮಾಡುವುದು. ರೈವತಮನುವಿನ ಉತ್ಪತ್ತಿ.	೧೯೬
೨೩.	ಚಾಕ್ಷುಷಮನ್ವಂತರ : ಅನಮಿತ್ರರಾಜನ ಪಟ್ಟದರಸಿಯಾದ ಭದ್ರಾದೇವಿಯಲ್ಲಿ ಜನಿಸಿದ ಜನ್ಮಾಂತರ ಸಂಸ್ಕಾರಪೂರ್ಣನಾದ ಆನಂದಕುಮಾರನು ಮನುಅಧಿಕಾರಕ್ಕೆ ಬರುವುದು.	೨೧೨
೨೪.	ವೈವಸ್ವತಮನ್ವಂತರ : ಸೂರ್ಯನಿಂದ ಸಂಜ್ಞಾದೇವಿಯಲ್ಲಿ ವೈವಸ್ವತಮನುವು ಜನ್ಮವೆತ್ತುವುದು. ವಿಶ್ವಕರ್ಮನು ಸೂರ್ಯಬಿಂಬವನ್ನು ನಿಸ್ತೇಜವನ್ನಾಗಿಮಾಡುವುದು.	೨೩೨
೨೫.	ದೇವ-ಋಷಿಗಳು ಮಾಡಿದ ಸೂರ್ಯದೇವತಾಸ್ತೋತ್ರ, ಅಶ್ವಿನೀಕುಮಾರರ ಉತ್ಪತ್ತಿ.	೨೪೩
೨೬.	ವೈವಸ್ವತಮನ್ವಂತರದ ಸಂಪೂರ್ಣವರ್ಣನೆ.	೨೫೩
೨೭.	ಸಾವರ್ಣಿಕಮನ್ವಂತರ : ಋಷಿ–ದೇವ–ರಾಜ–ರಾಜಪುತ್ರರ ನಿರೂಪಣೆ.	೨೫೮
೨೮.	ದೇವೀಮಾಹಾತ್ಮ್ಯದಲ್ಲಿ ಮಧು–ಕೈಟಭದಾನವರ ಉತ್ಪತ್ತಿ, ಬ್ರಹ್ಮನನ್ನು ವಧಿಸುವ ಅವರ ಸಂಕಲ್ಪ, ಬ್ರಹ್ಮನು ಮಾಡಿದ ಯೋಗಮಾಯಾಸ್ತುತಿ. ಮತ್ತು ವಿಷ್ಣುವಿನಿಂದ ಮಧುಕೈಟಭ ಸಂಹಾರ.	೨೬೨
೨೯.	ಮಹಿಷಾಸುರನಿಂದ ದೇವತೆಗಳಿಗೆ ಅಪಜಯ, ದೇವತೆಗಳ ತೇಜೋಂಶಗಳ ಸಮಷ್ಟಿಯಿಂದ ದೇವಿಯ ಆವಿರ್ಭಾವ, ಮಹಿಷಾಸುರನ ಸೈನ್ಯಉದ್ಯೋಗ, ಮತ್ತು ದೇವಿಯಿಂದ ಸೈನ್ಯ ವಧೆಯು.	೨೮೩

ಅಧ್ಯಾಯ	ವಿಷಯ	ಪುಟ
೮೦.	ದೇವಿಯೊಡನೆ ವಿಧವಿಧ ರೂಪವನ್ನು ತಾಳಿ ಮಹಿಷಾಸುರನು ಯುದ್ಧ ಮಾಡುವುದು. ಮಹಿಷಾಸುರನ ಸಂಹಾರ.	೩೦೧
೮೧.	ಇಂದ್ರಾದಿದೇವತೆಗಳು ದೇವಿಯನ್ನು ಸ್ತುತಿಮಾಡುವುದು. ಭದ್ರಕಾಳೀದೇವಿಯು ದೇವತೆಗಳಿಗೆ ಅಭಯವನ್ನು ನೀಡುವುದು.	೩೧೩
೮೨.	ಶುಂಭ-ನಿಶುಂಭಾಸುರರ ದಿಗ್ವಿಜಯ. ಇಂದ್ರಾದಿದೇವತೆಗಳು ಅಧಿಕಾರಭ್ರಷ್ಟರಾಗಿ ದೇವಿಯನ್ನು ಸ್ತುತಿಸುವುದು. ದೇವಿಯು ಪ್ರಸನ್ನಳಾಗುವುದು. ದೇವಿಯ ಮೋಹಕರೂಪವನ್ನು ಕೇಳಿ ಮುಗ್ಧನಾದ ಶುಂಭಾಸುರನು ದೂತನನ್ನು ಕಳುಹಿಸಿದುದು. ದೂತಸಂವಾದ.	೩೨೭
೮೩.	ಧೂಮ್ರಲೋಚನನೆಂಬ ಅಸುರನನ್ನು ದೇವಿಯು ಸಂಹರಿಸಿದುದು.	೩೪೯
೮೪.	ದೇವಿಯಿಂದ ಕಾಳೀದೇವಿಯ ಉತ್ಪತ್ತಿ. ಕಾಳೀದೇವಿಯಿಂದ ಚಂಡಮುಂಡ ಅಸುರರ ವಧೆಯು.	೩೫೫
೮೫.	ರಕ್ತಬೀಜಾಸುರನ ಸಂಗ್ರಾಮ. ರಕ್ತಬೀಜಗಳಿಂದ ಜನಿಸಿದ ರಾಕ್ಷಸರಿಂದ ಸಮರಾಂಗಣವು ತುಂಬಿಹೋದುದು. ಸಪರಿವಾರನಾದ ರಕ್ತಬೀಜಾಸುರನ ಸಂಹಾರ.	೩೬೨
೮೬.	ನಿಶುಂಭಾಸುರನ ಸಂಹಾರ.	೩೭೮
೮೭.	ಶುಂಭಾಸುರನ ಸಂಹಾರ.	೩೮೯
೮೮.	ದೇವತೆಗಳು ನಾರಾಯಣೀಸ್ವರೂಪಳಾದ ದೇವಿಯನ್ನು ಸ್ತುತಿಮಾಡಿದುದು.	೩೯೭
೮೯.	ದೇವಿಯು ದೇವತೆಗಳಿಗೆ ವರವನ್ನು ಕೊಡುವುದು.	೪೧೨
೯೦.	ಸುರಥ-ವೈಶ್ಯರು ಅಚಲಭಕ್ತಿಯಿಂದ ದೇವಿಯನ್ನು ಆರಾಧಿಸುವುದು. ದೇವಿಯು ಪ್ರತ್ಯಕ್ಷಳಾಗಿ ರಾಜ-ವೈಶ್ಯರನ್ನು ವರದಾನಮಾಡಿ ಅನುಗ್ರಹಿಸಿದುದು.	೪೨೨

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚಪಞ್ಚಾಶತ್ತಮೋಽಧ್ಯಾಯಃ

(ಭಾರತವರ್ಷೀಯಕೂರ್ಮಸಂಸ್ಥಾನವರ್ಣನಮ್)

ಕ್ರೌಷ್ಟುಕಿರುವಾಚ :—

ಭಗವನ್ಕಥಿತಂ ಸಮ್ಯಗ್ಭವತಾ ಭಾರತಂ ಮಮ ।
ಸರಿತಃ ಪರ್ವತಾ ದೇಶಾ ಯೇ ಚ ತತ್ರ ವಸನ್ತಿ ವೈ ॥೧॥

ಕಿಂ ತು ಕೂರ್ಮಸ್ತ್ವಯಾ ಪೂರ್ವಂ ಭಾರತೇ ಭಗವಾನ್ ಹರಿಃ ।
ಕಥಿತಸ್ತಸ್ಯ ಸಂಸ್ಥಾನಂ ಶ್ರೋತುಮಿಚ್ಛಾಮ್ಯಶೇಷತಃ ॥೨॥

ಐವತ್ತೈದನೆಯ ಅಧ್ಯಾಯ

ಕ್ರೌಷ್ಟುಕಿ ಮುನಿಯು ಹೀಗೆಂದನು :—

೧. ಪೂಜ್ಯನಾದ ಮಾರ್ಕಂಡೇಯ ಮುನಿಯೇ! ನಿನ್ನಿಂದ ನನಗೆ ಭಾರತವರ್ಷವನ್ನು ವಿಸ್ತಾರವಾಗಿ ವರ್ಣಿಸಿ ಉಪದೇಶಮಾಡಲ್ಪಟ್ಟಿತು. ಭಾರತ-ವರ್ಷದಲ್ಲಿ ಅನೇಕ ನದಿ-ಪರ್ವತ-ದೇಶವಿಶೇಷಗಳಿವೆಯೆಂಬುದನ್ನು ನಾನು ಕೇಳಿದೆನು.

೨. ಆದರೆ ಭಾರತವರ್ಷದಲ್ಲಿ ಪೂಜ್ಯನಾದ ಶ್ರೀಮನ್ನಾರಾಯಣನು ಆಮೆಯ ರೂಪದಿಂದ ಪೂಜ್ಯನಾಗಿರುವನೆಂದು ನಿನ್ನಿಂದ ಹಿಂದೆ ಹೇಳಲ್ಪಟ್ಟಿದೆ. ಆ ಕೂರ್ಮರೂಪದ ಆಕಾರಸನ್ನಿವೇಶವನ್ನು ಸಂಪೂರ್ಣವಾಗಿ ಕೇಳಲು ಆಶಿಸುತ್ತೇನೆ.

ಕಥಂ ಸ ಸಂಸ್ಥಿತೋ ದೇವಃ ಕೂರ್ಮರೂಪೀ ಜನಾರ್ದನಃ ।
ಶುಭಾಶುಭಂ ಮನುಷ್ಯಾಣಾಂ ವ್ಯಜ್ಯತೇ ಚ ತತಃ ಕಥಮ್ ॥೩॥

ಯಥಾ ಮುಖಂ ಯಥಾ ಪಾದಾಸ್ತಸ್ಯ ತದ್ಬ್ರೂಹ್ಯಶೇಷತಃ ॥೪॥

ಮಾರ್ಕಣ್ಡೇಯ ಉವಾಚ :—

ಪ್ರಾಙ್ಮುಖೋ ಭಗವಾನ್ದೇವಃ ಕೂರ್ಮರೂಪೀ ವ್ಯವಸ್ಥಿತಃ ।
ಆಕ್ರಮ್ಯ ಭಾರತಂ ವರ್ಷಂ ನವಭೇದಮಿದಂ ದ್ವಿಜ ॥೫॥

ನವಧಾ ಸಂಸ್ಥಿತೇ ಹ್ಯಸ್ಯ ನಕ್ಷತ್ರಾಣಿ ಸಮನ್ತತಃ ।
ವಿಷಯಾಶ್ಚ ದ್ವಿಜಶ್ರೇಷ್ಠ ಯೇ ಸಮ್ಯಕ್ತಾನ್ನಿಬೋಧ ಮೇ ॥೬॥

---

೩. ಕೂರ್ಮರೂಪವನ್ನು ಸ್ವೀಕರಿಸಿದ ಆ ಜನಾರ್ದನ ಸ್ವಾಮಿಯು ಯಾವ ಸನ್ನಿವೇಶದಿಂದ ಇರುವನು? ಆ ಸ್ವಾಮಿಯ ಸನ್ನಿವೇಶದಿಂದ ಮಾನವರಿಗೆ ಶುಭ ಅಥವಾ ಅಶುಭಫಲಗಳು ಹೇಗೆ ಸೂಚಿಸಲ್ಪಡುವುವು?

೪. ಮತ್ತು ಕೂರ್ಮರೂಪಿಯಾದ ಜನಾರ್ದನನಿಗೆ ಮುಖವು ಹೇಗೆ ಇರುವುದು? ಹಾಗು ಪಾದಗಳು ಹೇಗೆ ಇರುವುವು? ಇದೆಲ್ಲವನ್ನೂ ಸಂಪೂರ್ಣವಾಗಿ ಹೇಳಿ ಉಪಕಾರಮಾಡು.

ಮಾರ್ಕಂಡೇಯ ಮುನಿಯು ಹೇಳಿದನು :—

೫. ಎಲೈ ದ್ವಿಜನಾದ ಕ್ರೌಷ್ಟುಕಿಯೇ! ಪೂಜ್ಯನೂ, ಕೂರ್ಮರೂಪವನ್ನು ಧರಿಸಿದವನೂ ಆದ ಸ್ವಾಮಿಯು ಒಂಭತ್ತು ಖಂಡಗಳಿಂದ ಕೂಡಿದ ಈ ಭಾರತವರ್ಷವನ್ನು ಆಕ್ರಮಿಸಿ ಪೂರ್ವದಿಕ್ಕಿಗೆ ಅಭಿಮುಖನಾಗಿರುವನು.

೬. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಒಂಭತ್ತು ಭಾಗಗಳ ರೂಪದಿಂದ ಇರುವ ಕೂರ್ಮಸಂಸ್ಥಾನದ ಸುತ್ತಲು ಯಾವ ದೇಶಗಳು ಮತ್ತು ಯಾವ ನಕ್ಷತ್ರಗಳು ಇವೆಯೋ; ಅವುಗಳನ್ನು ನೀನು ನನ್ನಿಂದ ಚನ್ನಾಗಿ ತಿಳಿದುಕೊ.

ವೇದಿಮುದ್ರಾರಿಮಾಣ್ಡವ್ಯಾಃ ಶಾಲ್ವಾ ನೀಪಾಸ್ತಥಾ ಶಕಾಃ ।
ಉಜ್ಜಿಹಾನಾಸ್ತಥಾ ವತ್ಸ ಘೋಷಸಙ್ಖ್ಯಾಸ್ತಥಾ ಖಶಾಃ ॥೭॥

ಮಧ್ಯೇ ಸಾರಸ್ವತಾ ಮತ್ಸ್ಯಾಃ ಶೂರಸೇನಾಃ ಸಮಾಥುರಾಃ ।
ಧರ್ಮಾರಣ್ಯಾ ಜ್ಯೋತಿಷಿಕಾ ಗೌರಗ್ರೀವಾ ಗುಡಾಶ್ಮಕಾಃ ॥೮॥

ವೈದೇಹಕಾಃ ಸಪಾಞ್ಚಾಲಾಃ ಸಙ್ಕೇತಾಃ ಕಙ್ಕಮಾರುತಾಃ ।
ಕಾಲಕೋಟಿಸಪಾಷಣ್ಡಾಃ ಪಾರಿಯಾತ್ರನಿವಾಸಿನಃ ॥೯॥

ಕಾಪಿಞ್ಜಲಾಃ ಕುರೋರ್ಬಾಹ್ಯಾಸ್ತಥೈವೋದುಮ್ಬರಾ ಜನಾಃ ।
ಗಜಾಹ್ವಯಾಶ್ಚ ಕೂರ್ಮಸ್ಯ ಜನಾ ಮಧ್ಯನಿವಾಸಿನಃ ॥೧೦॥

ಕೃತ್ತಿಕಾ ರೋಹಿಣೀ ಸೌಮ್ಯಾ ಏತೇಷಾಂ ಮಧ್ಯವಾಸಿನಾಮ್ ।
ನಕ್ಷತ್ರತ್ರಿತಯಂ ವಿಪ್ರ ಶುಭಾಶುಭವಿಪಾಕದಮ್ ॥೧೧॥

---

೭. ವೇದಿ, ಮುದ್ರಾರಿ, ಮಾಂಡವ್ಯ, ಶಾಲ್ವ, ನೀಪ, ಶಕ, ಉಜ್ಜಿಹಾನ, ವತ್ಸ, ಘೋಷ ಮತ್ತು ಖಶ ಎಂಬ ದೇಶಗಳು ಭಾರತವರ್ಷದ ಕೂರ್ಮರೂಪದ ಮಧ್ಯದಲ್ಲಿರುವುವೆಂದು ತಿಳಿಯಬೇಕು.

೮. ಮತ್ತು ಮಧ್ಯಸಾರಸ್ವತ, ಮತ್ಸ್ಯ, ಶೂರಸೇನ, ಮಾಥುರ, ಧರ್ಮಾರಣ್ಯ, ಜ್ಯೋತಿಷಿಕ, ಗೌರಗ್ರೀವ ಹಾಗು ಗುಡಾಶ್ಮಕ—ಎಂಬ ದೇಶಗಳು ಕೂರ್ಮಾಕೃತಿಯ ಮಧ್ಯಭಾಗದಲ್ಲಿ ಇರುವುವು.

೯. ಮತ್ತು ವೈದೇಹಕ, ಪಾಂಚಾಲ, ಸಂಕೇತ, ಕಂಕ, ಮಾರುತ, ಕಾಲಕೋಟಿ, ಪಾಷಂಡ ಮತ್ತು ಪಾರಿಯಾತ್ರಪರ್ವತಸಮೀಪಕ್ಕೆ ಸೇರಿದ ದೇಶಗಳು—ಈ ಜನಪದಗಳು ಕೂರ್ಮರೂಪದ ಮಧ್ಯದಲ್ಲಿವೆ.

೧೦. ಹಾಗು ಕಾಪಿಂಜಲ, ಕುರುಬಾಹ್ಯದೇಶ, ಉದುಂಬರಜನನಿವಾಸ, ಗಜಾಹ್ವಯ ಎಂಬೀ ದೇಶಗಳು ಭಾರತವರ್ಷದಲ್ಲಿ ಪೂಜ್ಯನಾದ ಕೂರ್ಮಮೂರ್ತಿಯ ಮಧ್ಯದಲ್ಲಿ ಇರುವುವು.

೧೧. ಎಲ್ಲೈ ವಿಪ್ರನಾದ ಕ್ರೌಷ್ಟುಕಿಯೆ! ಕೃತ್ತಿಕೆ, ರೋಹಿಣಿ, ಮೃಗಶಿರೆ ಎಂಬ ಈ ಮೂರು ನಕ್ಷತ್ರಗಳು ಕೂರ್ಮಸಂಸ್ಥಾನದ ಮಧ್ಯವಲ್ಲಿ ವಾಸಮಾಡುವ ಈ ದೇಶದ ಜನರಿಗೆ ಶುಭ ಅಥವಾ ಅಶುಭಗಳ ಪರಿಣಾಮವಾದ ಫಲವನ್ನು ಕೊಡುವುವು.

ವೃಷಧ್ವಜೋಽಞ್ಜನಶ್ಚೈವ ಜಮ್ಬ್ವಾಖ್ಯೋ ಮಾನವಾಚಲಃ ।
ಶೂರ್ಪಕರ್ಣೋ ವ್ಯಾಘ್ರಮುಖೋ ಮುರ್ವರಃ ಕರ್ವಟಾಶನಃ ॥೧೨॥

ತಥಾ ಚನ್ದ್ರೇಶ್ವರಾಶ್ಚೈವ ಖಶಾಶ್ಚ ಮಗಧಾಸ್ತಥಾ ।
ಶಿಬಯೋ ಮೈಥಿಲಾಃ ಶುಭ್ರಾಸ್ತಥಾ ವದನದನ್ತುರಾಃ ॥೧೩॥

ಪ್ರಾಗ್ಜ್ಯೋತಿಷಾಃ ಸಲೌಹಿತ್ಯಾಃ ಸಾಮುದ್ರಾಃ ಪುರುಷಾದಕಾಃ ।
ಪೂರ್ಣೋತ್ಕಟೋ ಭದ್ರಗೌರಸ್ತಥೋದಯಗಿರಿರ್ದ್ವಿಜ ॥೧೪॥

ಕಾಶಯೋ ಮೇಖಲಾಮುಷ್ಟಾಸ್ತಾಮ್ರಲಿಪ್ತೈಕಪಾದಪಾಃ ।
ವರ್ಧಮಾನಾಃ ಕೋಸಲಾಶ್ಚ ಮುಖೇ ಕೂರ್ಮಸ್ಯ ಸಂಸ್ಥಿತಾಃ ॥೧೫॥

---

೧೨. ವೃಷಧ್ವಜ, ಅಂಜನ, ಜಂಬೂಪರ್ವತ, ಮಾನವಾಚಲ, ಶೂರ್ಪಕರ್ಣ, ವ್ಯಾಘ್ರಮುಖ, ಮುರ್ವರ ಮತ್ತು ಕರ್ವಟಾಶನ ಎಂಬ ಕೆಲವು ಪರ್ವತಗಳು ಹಾಗು ದೇಶಗಳು ಕೂರ್ಮಾಕಾರದ ಮುಖಭಾಗದಲ್ಲಿ ಇವೆಯೆಂದು ಅರಿಯಬೇಕು.

೧೩. ಹಾಗು ಚಂದ್ರೇಶ್ವರ, ಖಶ, ಮಗಧ, ಶಿಬಿ, ಮೈಥಿಲ, ಶುಭ್ರ ಮತ್ತು ವದನದಂತುರ ಎಂಬುವು ಕೂರ್ಮಸಂಸ್ಥಾನದ ಮುಖಭಾಗವನ್ನು ಅಲಂಕರಿಸಿರುವ ದೇಶಗಳೆಂದು ಅರಿಯಬೇಕು.

೧೪. ದ್ವಿಜನಾದ ಕ್ರೌಷ್ಟುಕಿಯೇ! ಪ್ರಾಗ್ಜ್ಯೋತಿಷ, ಲೌಹಿತ್ಯ, ಸಾಮುದ್ರ, ಪುರುಷಾದಕ, ಪೂರ್ಣೋತ್ಕಟ, ಭದ್ರಗೌರ ಮತ್ತು ಉದಯಗಿರಿ ಎಂಬ ಕೆಲವು ಪರ್ವತಗಳು ಹಾಗು ದೇಶಗಳು ಕೂರ್ಮಾಕಾರದ ಮುಖಭಾಗದಲ್ಲಿ ಇರುವುವು.

೧೫. ಮತ್ತು ಕಾಶಿ, ಮೇಖಲಾ ಮುಷ್ಟ, ತಾಮ್ರಲಿಪ್ತ, ಏಕಪಾದಪ, ವರ್ಧಮಾನ, ಕೋಸಲ—ಎಂಬ ಜನಪದಗಳು ಭಾರತವರ್ಷದಲ್ಲಿ ನೆಲೆಸಿದ ಕೂರ್ಮರೂಪಿಯ ಮುಖಭಾಗದಲ್ಲಿ ಇರುವುವು.

ರೌದ್ರಂ ಪುನರ್ವಸುಃ ಪುಷ್ಯೋ ನಕ್ಷತ್ರತ್ರಿತಯಂ ಮುಖೇ ।
ಪಾದೇ ತದ್ದಕ್ಷಿಣೇ ದೇಶಾಃ ಕ್ರೌಷ್ಟುಕೇ ವದತಃ ಶೃಣು ॥೧೬॥

ಕಲಿಙ್ಗವಙ್ಗಜಠರಾಃ ಕೋಶಲಾ ಮೂಷಿಕಾಸ್ತಥಾ ।
ಚೇದಯಶ್ಚೋರ್ಧ್ವಕರ್ಣಾಶ್ಚ ಮತ್ಸ್ಯಾನ್ಧ್ರಾ ವಿನ್ಧ್ಯವಾಸಿನಃ॥೧೭॥

ವಿದರ್ಭಾ ನಾರಿಕೇಲಾಶ್ಚ ಧರ್ಮದ್ವೀಪಾಸ್ತಥೈಲಿಕಾಃ ।
ವ್ಯಾಘ್ರಗ್ರೀವಾ ಮಹಾಗ್ರೀವಾಸ್ತ್ರೈಪುರಾಃ ಶ್ಮಶ್ರುಧಾರಿಣಃ ॥೧೮॥

ಕೈಷ್ಕಿನ್ಧ್ಯಾ ಹೈಮಕೂಟಾಶ್ಚ ನಿಷಧಾಃ ಕಟಕಸ್ಥಲಾಃ ।
ದಶಾರ್ಣಾ ಹಾರಿಕಾ ನಗ್ನಾ ನಿಷಧಾಃ ಕಾಕುಲಾಲಕಾಃ ॥೧೯॥

---

೧೬. ಕ್ರೌಷ್ಟುಕಿ ಮುನಿಯೇ! ಆದ್ರಾ, ಪುನರ್ವಸು, ಪುಷ್ಯ ನಕ್ಷತ್ರಗಳು ಕೂರ್ಮದ ಮುಖಭಾಗದಲ್ಲಿರುವ ಪ್ರಜೆಗಳಿಗೆ ಶುಭಾಶುಭಗಳನ್ನು ಕೊಡುವುವು. ಮುಂದೆ ಕೂರ್ಮ ಆಕಾರದ ಬಲಗಾಲಿನ ಸ್ಥಳದಲ್ಲಿರುವ ದೇಶ-ಗಳನ್ನು ಹೇಳುವೆನು. ಅದನ್ನು ಕೇಳು.

೧೭. ಕಲಿಂಗ, ವಂಗ, ಜಠರ, ಕೋಶಲ, ಮೂಷಿಕ, ಚೇದಿ, ಊರ್ಧ್ವ-ಕರ್ಣ, ಮತ್ಸ್ಯ, ಆಂಧ್ರ ಮತ್ತು ವಿಂಧ್ಯಗಿರಿ ಸಮೀಪದ ದೇಶಗಳು—ಈ ಜನಪದಗಳು ಕೂರ್ಮದ ದಕ್ಷಿಣಪಾದಭಾಗದಲ್ಲಿ ಇವೆಯೆಂಬುದನ್ನು ತಿಳಿಯಬೇಕು.

೧೮. ವಿದರ್ಭ, ನಾರಿಕೇಲ, ಧರ್ಮದ್ವೀಪ, ಏಲಿಕ, ವ್ಯಾಘ್ರಗ್ರೀವ, ಮಹಾಗ್ರೀವ, ತ್ರೈಪುರ ಮತ್ತು ಶ್ಮಶ್ರುಧಾರಿ ಎಂಬ ದೇಶಗಳು ಕೂರ್ಮ ಆಕಾರದ ದಕ್ಷಿಣಪಾದದಲ್ಲಿ ಇರುವುವು.

೧೯. ಹಾಗು ಕೈಷ್ಕಿಂಧ್ಯ, ಹೇಮಕೂಟ, ನಿಷಧ, ಕಟಕಸ್ಥಲ, ದಶಾರ್ಣ, ಹಾರಿಕ, ನಗ್ನ, ನಿಷಧ, ಕಾಕುಲ ಮತ್ತು ಅಲಕ ಎಂಬುವು ಕೂರ್ಮದ ದಕ್ಷಿಣ ಪಾದದ ಭಾಗಕ್ಕೆ ಸೇರಿದ ದೇಶಗಳಾಗಿವೆ.

ತಥೈವ ಪರ್ಣಶಬರಾಃ ಪಾದೇ ವೈ ಪೂರ್ವದಕ್ಷಿಣೇ ।
ಆಶ್ಲೇಷರ್ಕ್ಷಂ ತಥಾ ಪೈತ್ರ್ಯಂ ಫಾಲ್ಗುನ್ಯಃ ಪ್ರಥಮಾಸ್ತಥಾ ॥೨೦॥

ನಕ್ಷತ್ರತ್ರಿತಯಂ ಪಾದಮಾಶ್ರಿತಂ ಪೂರ್ವದಕ್ಷಿಣಮ್ ।
ಲಙ್ಕಾ ಕಾಲಾಜಿನಾಶ್ಚೈವ ಶೈಲಿಕಾ ನಿಕಟಾಸ್ತಥಾ ॥೨೧॥

ಮಹೇನ್ದ್ರಮಲಯಾದ್ರೌ ಚ ದರ್ದುರೇ ಚ ವಸನ್ತಿ ಯೇ ।
ಕರ್ಕೋಟಕವನೇ ಯೇ ಚ ಭೃಗುಕಚ್ಛಾಃ ಸಕೋಙ್ಕಣಾಃ ॥೨೨॥

ಸರ್ವಾಶ್ಚೈವ ತಥಾಭೀರಾ ವೇಣ್ಯಾಸ್ತೀರನಿವಾಸಿನಃ ।
ಅವನ್ತಯೋ ದಾಸಪುರಾಸ್ತಥೈವಾಕಾರಿಣೋ ಜನಾಃ ॥೨೩॥

---

೨೦. ಹಾಗು ಪರ್ಣ, ಶಬರ ಇವು ಕೂರ್ಮರೂಪದ ಪೂರ್ವ-ದಕ್ಷಿಣ ಭಾಗದ ಪಾದಕ್ಕೆ ಸೇರಿದ ದೇಶಗಳಾಗಿವೆ. ಆಶ್ಲೇಷ, ಮಘ, ಪೂರ್ವಫಲ್ಗುನೀ— ಎಂಬ ಮೂರು ನಕ್ಷತ್ರಗಳು ಈ ದೇಶದ ಜನರಲ್ಲಿ ಶುಭಾಶುಭದಾಯಕವಾಗಿವೆ.

೨೧. ಹೀಗೆ ಕಲಿಂಗ ಮುಂತಾದ ದೇಶದ ಜನರಲ್ಲಿ ಭಾಗ್ಯದಾಯಕವಾದ ಈ ಮೂರು ನಕ್ಷತ್ರಗಳು ಕೂರ್ಮಾಕಾರದ ಪೂರ್ವ-ದಕ್ಷಿಣಪಾದವನ್ನು ಅವಲಂಬಿಸಿವೆ. ಲಂಕಾ, ಕಾಲಾಜಿನ, ಶೈಲಿಕ, ನಿಕಟ—ಈ ದೇಶಗಳು ಕೂರ್ಮದ ದಕ್ಷಿಣ ಕುಕ್ಷಿಯಲ್ಲಿ ಇವೆ.

೨೨. ಮಹೇಂದ್ರ, ಮಲಯ, ದರ್ದುರ ಎಂಬ ಗಿರಿಗಳಿಗೆ ಸೇರಿದ ದೇಶಗಳು, ಕರ್ಕೋಟಕ ವನಕ್ಕೆ ಸೇರಿದ ದೇಶಗಳು ಮತ್ತು ಕೊಂಕಣ, ಭೃಗುಕಚ್ಛ ಇವು ಕೂರ್ಮಮೂರ್ತಿಯ ಕುಕ್ಷಿಯ ದಕ್ಷಿಣಭಾಗದಲ್ಲಿ ಇರುವುವು.

೨೩. ವೇಣೀ ನದಿಯ ತೀರದಲ್ಲಿರುವ ಗೋಪಾಲಕರು ವಾಸಮಾಡುವ ಎಲ್ಲ ಆಭೀರ ದೇಶಗಳು, ಅವಂತಿ, ದಾಸಪುರ, ಆಕಾರಿಜನನಿವಾಸ—ಇವು ಕೂರ್ಮರೂಪದ ದಕ್ಷಿಣಕುಕ್ಷಿಯಲ್ಲಿರುವ ದೇಶಗಳೆಂದು ಅರಿಯಬೇಕು.

ಮಹಾರಾಷ್ಟ್ರಾಃ ಸಕರ್ಣಾಟಾ ಗೋನರ್ದಾಶ್ಚಿತ್ರಕೂಟಕಾಃ ।
ಚೌಲಾಃ ಕೌಲಗಿರಾಶ್ಚೈವ ಕ್ರೌಞ್ಚದ್ವೀಪಜಟಾಧರಾಃ ॥೨೪॥

ಕಾವೇರೀಋಷ್ಯಮೂಕಸ್ಥಾ ನಾಸಿಕ್ಯಾಶ್ಚೈವ ಯೇ ಜನಾಃ ।
ಶಙ್ಖಶುಕ್ತ್ಯಾದಿವೈದೂರ್ಯಶೈಲಪ್ರಾನ್ತಚರಾಶ್ಚ ಯೇ ॥೨೫॥

ತಥಾ ವಾರಿಚರಾಃ ಕೋಲಾಶ್ಚರ್ಮಪಟ್ಟನಿವಾಸಿನಃ ।
ಗಣಬಾಹ್ಯಾಃ ಪುರಾಃ ಕೃಷ್ಣಾ ದ್ವೀಪವಾಸನಿವಾಸಿನಃ ॥೨೬॥

ಸೂರ್ಯಾದ್ರೌ ಕುಮುದಾದ್ರೌ ಚ ತೇ ವಸನ್ತಿ ತಥಾ ಜನಾಃ ।
ರೌದ್ರಸ್ವನಾಃ ಸಪಿಶಿಕಾಸ್ತಥಾ ಯೇ ಕರ್ಮನಾಯಕಾಃ ॥೨೭॥

---

೨೪. ಹಾಗು ಮಹಾರಾಷ್ಟ್ರ, ಕರ್ಣಾಟ, ಗೋನರ್ದ, ಚಿತ್ರಕೂಟಕ, ಚೋಲ, ಕೌಲಗಿರ, ಕ್ರೌಂಚದ್ವೀಪ, ಜಟಾಧರ—ಎಂಬುವು ದಕ್ಷಿಣಕುಕ್ಷಿ-ಭಾಗವನ್ನು ಅವಲಂಬಿಸಿ ಕೂರ್ಮಾಕಾರದಲ್ಲಿರುವ ದೇಶಗಳಾಗಿವೆ.

೨೫. ಕಾವೇರೀತೀರ, ಋಷ್ಯಮೂಕಗಿರಿ, ನಾಸಿಕದೇಶ, ಶಂಖಗಿರಿ, ಶುಕ್ತಿಗಿರಿ, ವೈದೂರ್ಯಗಿರಿ—ಇವುಗಳ ಪ್ರಾಂತದಲ್ಲಿ ವಾಸಮಾಡುವ ಜನರು ಕೂರ್ಮಆಕಾರದ ದಕ್ಷಿಣಕುಕ್ಷಿಯ ಆಶ್ರಯವನ್ನು ಹೊಂದಿರುವರು.

೨೬. ಹಾಗು ವಾರಿಚರ, ಕೋಲ, ಚರ್ಮಪಟ್ಟವಾಸಿ, ಗಣಬಾಹ್ಯ, ಪುರ, ಕೃಷ್ಣಾನದಿಯ ದ್ವೀಪವಾಸಿ—ಎಂದು ಪ್ರಸಿದ್ಧರಾದ ಜನರು ಕೂರ್ಮಾ-ಕಾರದ ದಕ್ಷಿಣಕುಕ್ಷಿ ದೇಶಗಳನ್ನು ಆಶ್ರಯಿಸಿರುವರು.

೨೭. ಸೂರ್ಯಾದ್ರಿ, ಕುಮುದಾದ್ರಿ ಈ ಪರ್ವತಗಳಲ್ಲಿ ವಾಸಮಾಡುವ ಜನರು ಕೂರ್ಮದ ದಕ್ಷಿಣಭಾಗವನ್ನು ಆಶ್ರಯಿಸಿರುವರು. ಮತ್ತು ರೌದ್ರಸ್ವನ, ಪಿಶಿಕ, ಕರ್ಮನಾಯಕ—ಎಂದು ಖ್ಯಾತರಾದ ಜನರ ವಾಸಭೂಮಿಯು ಕೂರ್ಮದ ದಕ್ಷಿಣಕುಕ್ಷಿಗೆ ಸೇರಿದೆ.

ದಕ್ಷಿಣಾಃ ಕೌರುಷಾ ಯೇ ಚ ಋಷಿಕಾಸ್ತಾಪಸಾಶ್ರಮಾಃ ।
ಋಷಭಾಃ ಸಿಹ್ಮಲಾಶ್ಚೈವ ತಥಾ ಕಾಞ್ಚೀನಿವಾಸಿನಃ ॥೨೮॥

ತ್ರಿಲಙ್ಗಾಃ ಕುಞ್ಜರದರೀಕಚ್ಛವಾಸಾಶ್ಚ ಯೇ ಜನಾಃ ।
ತಾಮ್ರಪರ್ಣೀ ತಥಾ ಕುಕ್ಷಿರಿತಿ ಕೂರ್ಮಸ್ಯ ದಕ್ಷಿಣಃ ॥೨೯॥

ಫಾಲ್ಗುನ್ಯಶ್ಚೋತ್ತರಾ ಹಸ್ತಶ್ಚಿತ್ರಾ ಚರ್ಕ್ಷತ್ರಯಂ ದ್ವಿಜ ।
ಕೂರ್ಮಸ್ಯ ದಕ್ಷಿಣೇ ಕುಕ್ಷೌ ಬಾಹ್ಯಪಾದಸ್ತಥಾಪರಮ್ ॥೩೦॥

ಕಾಮ್ಬೋಜಾಃ ಪಹ್ಲವಾಶ್ಚೈವ ತಥೈವ ವಡವಾಮುಖಾಃ ।
ತಥಾ ಚ ಸಿನ್ಧುಸೌವೀರಾಃ ಸಾನರ್ತಾ ವನಿತಾಮುಖಾಃ ॥೩೧॥

---

೨೮. ದಕ್ಷಿಣದಿಕ್ಕಿನ ಕೌರುಷ, ತಾಪಸಾಶ್ರಮಗಳಿಂದ ಶೋಭಿಸುವ ಋಷಿಕ, ಋಷಭ, ಸಿಂಹಲ ಮತ್ತು ಕಾಂಚೀ—ಈ ದೇಶದಲ್ಲಿ ವಾಸಿಸುವ ಪ್ರಜೆಗಳು ಕೂರ್ಮಮೂರ್ತಿಯ ದಕ್ಷಿಣಕುಕ್ಷಿ ಭಾಗವನ್ನು ಹೊಂದಿಕೊಂಡಿರುವರು.

೨೯. ಹಾಗು ತ್ರಿಲಂಗ, ಕುಂಜರ, ಗುಹೆ, ಜಲಾಶಯ ತೀರಗಳಲ್ಲಿರುವ ವಾಸಭೂಮಿ, ತಾಮ್ರಪರ್ಣೀ ನದೀತೀರ—ಈ ಸ್ಥಳಗಳಲ್ಲಿ ವಾಸಮಾಡುವ ಜನರು ಕೂರ್ಮಮೂರ್ತಿಯ ದಕ್ಷಿಣಕುಕ್ಷಿಯನ್ನು ಆಶ್ರಯಿಸಿಕೊಂಡಿರುವರು.

೩೦. ದ್ವಿಜನಾದ ಕ್ರೌಷ್ಟುಕಿಯೇ! ಉತ್ತರೆ, ಹಸ್ತ, ಚಿತ್ರಾ—ಎಂಬ ನಕ್ಷತ್ರಗಳು ಕೂರ್ಮಸಂನಿವೇಶದ ದಕ್ಷಿಣಕುಕ್ಷಿಯಲ್ಲಿದ್ದು ಅಲ್ಲಿನ ಜನರಿಗೆ ಶುಭಾಶುಭಗಳನ್ನು ಕೊಡುವುವು. ಮುಂದೆ ಬಲಭಾಗದ ಹಿಂದಿನ ಪಾದವನ್ನು ವರ್ಣಿಸುವೆನು.

೩೧. ಕಾಂಭೋಜ, ಪಹ್ಲವ, ಬಡಬಾಮುಖ, ಸಿಂಧು, ಸೌವೀರ, ಆನರ್ತ ಮತ್ತು ವನಿತಾಮುಖ—ಇವು ಕೂರ್ಮಮೂರ್ತಿಯ ಹಿಂದಿನ ಬಲಗಾಲಿನಲ್ಲಿರುವ ದೇಶಗಳೆಂದು ಅರಿಯಬೇಕು.

ದ್ರಾವಣಾಃ ಸಾರ್ಗಿಗಾಃ ಶೂದ್ರಾಃ ಕರ್ಣಪ್ರಾಥೇಯಬರ್ಬರಾಃ ।
ಕಿರಾತಾಃ ಪಾರದಾಃ ಪಾಣ್ಡ್ಯಾಸ್ತಥಾ ಪಾರಶವಾಃ ಕಲಾಃ ॥೩೨॥

ಧೂರ್ತಕಾ ಹೈಮಗಿರಿಕಾಃ ಸಿನ್ಧುಕಾಲಕವೈರತಾಃ ।
ಸೌರಾಷ್ಟ್ರಾ ದರದಾಶ್ಚೈವ ದ್ರಾವಿಡಾಶ್ಚ ಮಹಾರ್ಣವಾಃ ॥೩೩॥

ಏತೇ ಜನಪದಾಃ ಪಾದೇ ಸ್ಥಿತಾ ವೈ ದಕ್ಷಿಣೇಽಪರೇ ।
ಸ್ವಾತ್ಯೋ ವಿಶಾಖಾ ಮೈತ್ರಂ ಚ ನಕ್ಷತ್ರತ್ರಯಮೇವ ಚ ॥೩೪॥

ಮಣಿಮೇಘಕ್ಷುರಾದ್ರಿಶ್ಚ ಖಞ್ಜಯೋಽಸ್ತಗಿರಿಸ್ತಥಾ ।
ಅಪರಾನ್ತಿಕಾ ನೋಹಯಾಶ್ಚ ಶಾನ್ತಿಕಾ ವಿಪ್ರಶಸ್ತಕಾಃ ॥೩೫॥

---

೩೨. ದ್ರಾವಣ, ಸಾರ್ಗಿಗ, ಶೂದ್ರದೇಶ, ಕರ್ಣ, ಪ್ರಾಥೇಯ, ಬರ್ಬರ, ಕಿರಾತದೇಶ, ಪಾರದ, ಪಾಂಡ್ಯದೇಶ, ಪಾರಶವ ಮತ್ತು ಕಲ ಎಂಬುವು ಹಾಗೆಯೇ ಕೂರ್ಮಮೂರ್ತಿಯ ಹಿಂದಿನ ಬಲಗಾಲಿನಲ್ಲಿರುವ ದೇಶಗಳಾಗಿವೆ.

೩೩. ಧೂರ್ತಕ, ಹೈಮಗಿರಿಕ, ಸಿಂಧು, ಕಾಲಕ, ವೈರತ, ಸೌರಾಷ್ಟ್ರ, ದರದ, ದ್ರಾವಿಡ ದೇಶಗಳು ಮತ್ತು ಮಹಾಸಮುದ್ರತೀರಭೂಮಿಗಳು ಇವು ಕೂರ್ಮಾಕೃತಿಯ ಹಿಂದಿನ ಬಲಗಾಲಿನಲ್ಲಿ ಸೇರಿಕೊಂಡಿರುವುವು.

೩೪. ಹಿಂದೆ ಹೇಳಿರುವ ಈ ಜನಪದಗಳು ಕೂರ್ಮಸನ್ನಿವೇಶದ ಮತ್ತೊಂದು ದಕ್ಷಿಣಪಾದದಲ್ಲಿ ಇರುವುವು. ಮತ್ತು ಸ್ವಾತೀ, ವಿಶಾಖಾ, ಅನುರಾಧಾ—ಈ ಮೂರು ನಕ್ಷತ್ರಗಳು ಕೂರ್ಮದ ಮತ್ತೊಂದು ದಕ್ಷಿಣಪಾದವನ್ನು ಅವಲಂಬಿಸಿರುವುವು.

೩೫. ಮಣಿಮೇಘ, ಕ್ಷುರಾದ್ರಿ, ಖಂಜಯ, ಅಸ್ತಗಿರಿ, ಅಪರಾಂತಿಕಾ, ನೋಹಯ, ಶಾಂತಿಕ, ವಿಪ್ರಶಸ್ತಕ—ಈ ದೇಶಗಳು ಮತ್ತು ಪರ್ವತನಿವಾಸಗಳು ಕೂರ್ಮಮೂರ್ತಿಯ ಪುಚ್ಛಭಾಗವನ್ನು ಆಶ್ರಯಿಸಿಕೊಂಡಿರುವುವು.

ಕೋಙ್ಕಣಾಃ ಪಞ್ಚನದಕಾ ವಮನಾ ಹ್ಯವರಾಸ್ತಥಾ ।
ತಾರಕ್ಷುರಾ ಹ್ಯಙ್ಗತಕಾಃ ಶರ್ಕರಾಃ ಶಾಲ್ಮವೇಶ್ಮಕಾಃ ॥೩೬॥

ಗುರುಸ್ವರಾಃ ಫಾಲ್ಗುಣಕಾ ವೇಣುಮತ್ಯಾಂ ಚ ಯೇ ಜನಾಃ ।
ತಥಾ ಫಲ್ಗುಲುಕಾ ಘೋರಾ ಗುರುಹಾಶ್ಚ ಕಲಾಸ್ತಥಾ ॥೩೭॥

ಏತೇಕ್ಷಣಾ ವಾಜಿಕೇಶಾ ದೀರ್ಘಗ್ರೀವಾಃ ಸಚೂಲಿಕಾಃ ।
ಅಶ್ವಕೇಶಾಸ್ತಥಾ ಪುಚ್ಛೇ ಜನಾಃ ಕೂರ್ಮಸ್ಯ ಸಂಸ್ಥಿತಾಃ ॥೩೮॥

ಐನ್ದ್ರಂ ಮೂಲಂ ತಥಾಷಾಢಾ ನಕ್ಷತ್ರತ್ರಯಮೇವ ಚ ।
ಮಾಣ್ಡವ್ಯಾಶ್ಚಣ್ಡಖಾರಾಶ್ಚ ಅಶ್ವಕಾಲನದಾಸ್ತಥಾ ॥೩೯॥

---

೩೬. ಕೊಂಕಣ, ಪಂಚನದ, ವಮನ, ಅವರ, ತಾರಕ್ಷುರ, ಅಂಗತಕ, ಶರ್ಕರ, ಶಾಲ್ಮ ಮತ್ತು ವೇಶ್ಮಕ ಎಂಬ ದೇಶಗಳು ಕೂರ್ಮಮೂರ್ತಿಯ ಪುಚ್ಛಭಾಗದಲ್ಲಿ ಇರುವುವು.

೩೭. ಗುರುಸ್ವರ, ಫಾಲ್ಗುಣಕ, ವೇಣುಮತೀ ತೀರದಲ್ಲಿರುವ ಜನರ ವಾಸಭೂಮಿ, ಫಲ್ಗುಲುಕ, ಘೋರ, ಗುರುಕ ಮತ್ತು ಕಲ—ಎಂಬ ದೇಶಗಳು ಕೂರ್ಮಮೂರ್ತಿಯ ಪುಚ್ಛಭಾಗವನ್ನು ಆಶ್ರಯಿಸಿಕೊಂಡಿರುವುವು.

೩೮. ಏತೇಕ್ಷಣ, ವಾಜಿಕೇಶ, ದೀರ್ಘಗ್ರೀವ, ಚೂಲಿಕ ಮತ್ತು ಅಶ್ವಕೇಶ—ಈ ದೇಶಗಳಲ್ಲಿರುವ ಜನರು ಭಾರತವರ್ಷದಲ್ಲಿ ನೆಲೆಸಿದ ಕೂರ್ಮಮೂರ್ತಿಯ ಪುಚ್ಛಭಾಗದಲ್ಲಿ ಇರುವರು.

೩೯. ಮತ್ತು ಜ್ಯೇಷ್ಠ, ಮೂಲ, ಪೂರ್ವಾಷಾಢಾ—ಎಂಬ ಮೂರು ನಕ್ಷತ್ರಗಳು ಈ ದೇಶಗಳಲ್ಲಿ ವಾಸಿಸುವ ಜನರ ಭಾಗ್ಯದಾಯಕವಾಗಿವೆ. ಮಾಂಡವ್ಯ, ಚಂಡಖಾರ, ಅಶ್ವಕಾಲ, ನದ—ಎಂಬ ದೇಶಗಳು ಕೂರ್ಮಮೂರ್ತಿಯ ವಾಮಪಾದದಲ್ಲಿ ಇರುವುವು.

ಕುನ್ಯತಾಲಡಹಾಶ್ಚೈವ ಸ್ತ್ರೀಬಾಹ್ಯಾ ಬಾಲಿಕಾಸ್ತಥಾ ।
ನೃಸಿಹ್ಮಾ ವೇಣುಮತ್ಯಾಂ ಚ ಬಲಾವಸ್ಥಾಸ್ತಥಾಪರೇ ॥೪೦॥

ಧರ್ಮಬದ್ಧಾಸ್ತಥೋಲೂಕಾ ಉರುಕರ್ಮಸ್ಥಿತಾ ಜನಾಃ ।
ತಥಾ ಫಲ್ಗುಲಕಾ ಘೋರಾ ಘುರಲಾ ಹೇಮತಾರಕಾಃ ॥೪೧॥

ಏಕೇಕ್ಷಣಾ ವಾಜಿಕೇಶಾ ದೀರ್ಘಪಾದಾಸ್ತಥೈವ ಚ ।
ವಾಮೇಽಪರೇ ಜನಾಃ ಪಾದೇ ಸ್ಥಿತಾಃ ಕೂರ್ಮಸ್ಯ ಭಾಗುರೇ ॥೪೨॥

ಆಷಾಢಾಶ್ರವಣೇ ಚೈವ ಧನಿಷ್ಠಾ ಯತ್ರ ಸಂಸ್ಥಿತಾ ।
ಕೈಲಾಸೋ ಹಿಮವಾಂಶ್ಚೈವ ಧನುಷ್ಮಾನ್ವಸುಮಾಂಸ್ತಥಾ ॥೪೩॥

---

೪೦. ಕುನ್ಯ, ತಾಲಡಹ, ಸ್ತ್ರೀಬಾಹ್ಯ, ಬಾಲಿಕಾ, ನೃಸಿಂಹ, ವೇಣುಮತೀದೇಶ, ಬಲಾವಸ್ಥಾ—ಎಂಬ ದೇಶಗಳು ಕೂರ್ಮಸಂಸ್ಥಾನದ ಎಡಭಾಗದ ಪಾದವನ್ನು ಆಶ್ರಯಿಸಿಕೊಂಡಿರುವುವು.

೪೧. ಧರ್ಮಬದ್ಧ, ಉಲೂಕ, ಉರುಕರ್ಮ, ಫಲ್ಗುಲಕ, ಘೋರ, ಘುರಲ, ಹೇಮತಾರಕ—ಎಂಬ ದೇಶಗಳಲ್ಲಿ ವಾಸಮಾಡುವ ಜನರು ಕೂರ್ಮ-ರೂಪದ ವಾಮಪಾದಾವಲಂಬಿಗಳೆಂದು ಅರಿಯಬೇಕು.

೪೨. ಎಲೈ ಭಾಗುರ ಪುತ್ರನಾದ ಕ್ರೌಷ್ಟುಕಿಯೇ! ಏಕೇಕ್ಷಣ, ವಾಜಿಕೇಶ, ದೀರ್ಘಪಾದ— ಈ ದೇಶದಲ್ಲಿ ವಾಸಮಾಡುವ ಜನರು ಕೂರ್ಮ ಮೂರ್ತಿಯ ಮತ್ತೊಂದು ವಾಮಪಾದವನ್ನು ಸೇವಿಸಿಕೊಂಡಿರುವರೆಂದು ತಿಳಿಯಬೇಕು.

೪೩. ಉತ್ತರಾಷಾಢಾ, ಶ್ರವಣ, ಧನಿಷ್ಠಾ ನಕ್ಷತ್ರಗಳು ಈ ಸ್ಥಳಗಳ-ಲ್ಲಿರುವ ಜನರ ಶುಭಾಶುಭಗಳನ್ನು ಸೂಚಿಸುವುವು. ಹಾಗು ಕೈಲಾಸ, ಹಿಮಾಲಯ, ಧನುಷ್ಮಾನ್, ವಸುಮಾನ್—ಎಂಬ ಪರ್ವತಗಳು ಕೂರ್ಮ ಮೂರ್ತಿಯ ಎಡಭಾಗದ ಕುಕ್ಷಿಯಲ್ಲಿರುವುವು.

ಕ್ರೌಞ್ಚಾಃ ಕುರುಬಕಾಶ್ಚೈವ ಕ್ಷುರವೀಣಾಶ್ಚ ಯೇ ಜನಾಃ ।
ರಸಾಲಯಾಃ ಸಕೈಕೇಯಾ ಭೋಗಪ್ರಸ್ಥಾಃ ಸಯಾಮುನಾಃ ॥೪೪॥

ಅನ್ತರ್ದ್ವೀಪಾಸ್ತ್ರಿಗರ್ತಾಶ್ಚ ಅಗ್ನೀಜ್ಯಾಃ ಸಾರ್ದನಾ ಜನಾಃ ।
ತಥೈವಾಶ್ವಮುಖಾಃ ಪ್ರಾಪ್ತಾಶ್ಚಿಬಿಡಾಃ ಕೇಶಧಾರಿಣಃ ॥೪೫॥

ದಾಸೇರಕಾ ವಾಟಧಾನಾಃ ಶವಧಾನಾಸ್ತಥೈವ ಚ ।
ಪುಷ್ಕಲಾಧಮಕೈರಾತಾ ಸ್ತಥಾ ತಕ್ಷಶಿಲಾಶ್ರಯಾಃ ॥೪೬॥

ಅಮ್ಬಷ್ಠಾ ಮಾಲವಾ ಭದ್ರಾ ವೇಣುಕಾಃ ಸವದನ್ತಿಕಾಃ ।
ಪಿಙ್ಗಲಾ ಗಾನಕಲಹಾ ಹೂಣಾಃ ಕೋಹಲಕಾಸ್ತಥಾ ॥೪೭॥

ಮಾಣ್ಡವ್ಯಾ ಭೂತಿಯುವಕಾಃ ಶಾತಕಾ ಹೇಮತಾರಕಾಃ ।
ಯಶೋಮತ್ಯಾಃ ಸಗಾನ್ಧಾರಾಃ ಖರಸಾಗರರಾಶಯಃ ॥೪೮॥

---

೪೪. ಕ್ರೌಂಚ, ಕುರುಬಕ, ಕ್ಷುದ್ರವೀಣಾ, ರಸಾಲಯ, ಕೈಕೇಯ, ಭೋಗಪ್ರಸ್ಥ, ಮತ್ತು ಯಾಮುನ—ಈ ದೇಶಗಳಲ್ಲಿ ವಾಸಮಾಡುತ್ತಿರುವ ಜನರು ಕೂರ್ಮಮೂರ್ತಿಯ ಎಡಭಾಗದ ಉದರವನ್ನು ಆಶ್ರಯಿಸಿಕೊಂಡಿರುವರು.

೪೫. ಅಂತರ್ದ್ವೀಪ, ತ್ರಿಗರ್ತ, ಅಗ್ನೀಜ್ಯ, ಸಾರ್ದನ, ಅಶ್ವಮುಖ, ಪ್ರಾಪ್ತ ಚಿಬಿಡ ಮತ್ತು ಕೇಶಧಾರಿ—ಎಂಬ ಖ್ಯಾತಿಯುಳ್ಳ ದೇಶಗಳು ಕೂರ್ಮದ ವಾಮಕುಕ್ಷಿಯಲ್ಲಿ ಇರುವುವು.

೪೬. ದಾಸೇರಕ, ವಾಟಧಾನ, ಶವಧಾನ, ಪುಷ್ಕಲ, ಅಧಮ, ಕೈರಾತ ಮತ್ತು ತಕ್ಷಶಿಲೆಗೆ ಸೇರಿದ ದೇಶಗಳು ಭಾರತವರ್ಷದಲ್ಲಿ ಪೂಜ್ಯನಾದ ಕೂರ್ಮಮೂರ್ತಿಯ ವಾಮಕುಕ್ಷಿಭಾಗದಲ್ಲಿರುವುವು.

೪೭. ಅಂಬಷ್ಠ, ಮಾಲವ, ಭದ್ರ, ವೇಣುಕ, ವದಂತಿಕ, ಪಿಂಗಲ, ಗಾನಕಲಹ, ಹೂಣ ಮತ್ತು ಕೋಹಲಕ ಎಂಬ ದೇಶಗಳು ಕೂರ್ಮಮೂರ್ತಿಯ ವಾಮಕುಕ್ಷಿಯಲ್ಲಿ ಇರುವುವು.

೪೮. ಮಾಂಡವ್ಯ, ಭೂತಿಯುವಕ, ಶಾತಕ, ಹೇಮತಾರಕ, ಯಶೋಮತ್ಯ, ಗಾಂಧಾರ, ಖರ, ಸಾಗರರಾಶಿ—ಎಂಬ ದೇಶಗಳು ಕೂರ್ಮಮೂರ್ತಿಯ ವಾಮಜಠರದಲ್ಲಿ ಪ್ರಸಿದ್ಧವಾಗಿದೆ.

ಯೌಧೇಯಾ ದಾಸಮೇಯಾಶ್ಚ ರಾಜನ್ಯಾಃ ಸ್ಯಾಮಕಾಸ್ತಥಾ ।
ಕ್ಷೇಮಧೂರ್ತಾಶ್ಚ ಕೂರ್ಮಸ್ಯ ವಾಮಕುಕ್ಷಿಮುಪಾಶ್ರಿತಾಃ ॥೪೯॥

ವಾರುಣಂ ಚಾತ್ರ ನಕ್ಷತ್ರಂ ತದ್ವತ್ಪ್ರೋಷ್ಠಪದಾದ್ವಯಮ್ ।
ಯೇನ ಕಿನ್ನರರಾಜ್ಯಂ ಚ ಪಶುಪಾಲಂ ಸಕೀಚಕಮ್ ॥೫೦॥

ಕಾಶ್ಮೀರಕಂ ತಥಾ ರಾಷ್ಟ್ರಮಭಿಸಾರಜನಸ್ತಥಾ ।
ದರದಾಸ್ತ್ವಙ್ಗಣಾಶ್ಚೈವ ಕುಲಟಾ ವನರಾಷ್ಟ್ರಕಾಃ ॥೫೧॥

ಸೈರಿಷ್ಠಾ ಬ್ರಹ್ಮಪುರಕಾಸ್ತಥೈವ ತನಬಾಹ್ಯಕಾಃ ।
ಕಿರಾತಕೌಶಿಕಾನನ್ದಾ ಜನಾಃ ಪಹ್ಲವಲೋಲನಾಃ ॥೫೨॥

---

೪೯. ಯೌಧೇಯ, ದಾಸಮೇಯ, ರಾಜನ್ಯ, ಸ್ಯಾಮಕ ಮತ್ತು ಕ್ಷೇಮಧೂರ್ತ ಎಂಬ ದೇಶಗಳು ಕೂರ್ಮಮೂರ್ತಿಯ ಸಂಸ್ಥಾನದಲ್ಲಿ ವಾಮ-ಕುಕ್ಷಿಯಭಾಗವನ್ನು ಆಶ್ರಯಿಸಿಕೊಂಡಿರುವುವು.

೫೦. ಶತತಾರಾ, ಪೂರ್ವಾಭಾದ್ರಾ, ಉತ್ತರಾಭಾದ್ರಾ–ಎಂಬ ಮೂರು ನಕ್ಷತ್ರಗಳು ಆ ದೇಶಗಳಲ್ಲಿ ವಾಸಮಾಡುವ ಜನರಿಗೆ ಶುಭ-ಅಶುಭಗಳನ್ನು ಕೊಡುವುವು. ಹಾಗು ಕಿನ್ನರರಾಜ್ಯ, ಪಶುಪಾಲ, ಕೀಚಕ—ಎಂಬ ದೇಶಗಳು ಕೂರ್ಮದ ಮತ್ತೊಂದು ವಾಮಪಾದವನ್ನು ಆಶ್ರಯಿಸಿರುವುವು.

೫೧. ಕಾಶ್ಮೀರರಾಜ್ಯ, ಅಭಿಸಾರ, ದರದ, ತ್ವಂಗಣ, ಕುಲಟ, ವನರಾಷ್ಟ್ರಕ ಎಂಬ ದೇಶಗಳಲ್ಲಿ ವಾಸಮಾಡುವ ಜನರು ಕೂರ್ಮ ಆಕಾರದ ಮುಂದಿನ ಎಡಪಾದವನ್ನು ಆಶ್ರಯಿಸಿಕೊಂಡಿರುವರು.

೫೨. ಸೈರಿಷ್ಠ, ಬ್ರಹ್ಮಪುರ, ತನಬಾಹ್ಯಕ, ಕಿರಾತ, ಕೌಶಿಕ, ನಂದ, ಪಹ್ಲವ ಮತ್ತು ಲೋಲನ ಎಂಬ ದೇಶಗಳಲ್ಲಿರುವ ಜನರು ಕೂರ್ಮದ ವಾಮಪಾದದ ಅವಲಂಬನೆಯಿಂದ ಇರುವರು.

ದಾರ್ವಾದಾ ಮರಕಾಶ್ಚೈವ ಕುರಟಾಶ್ಚಾನ್ನದಾರಕಾಃ ।
ಏಕಪಾದಾಃ ಖಶಾ ಘೋಷಾಃ ಸ್ವರ್ಗಭೌಮಾನವದ್ಯಕಾಃ ॥೫೩॥

ತಥಾ ಸಯವನಾ ಹಿಙ್ಗಾಶ್ಚೀರಪ್ರಾವರಣಾಶ್ಚ ಯೇ ।
ತ್ರಿಣೇತ್ರಾಃ ಪೌರವಾಶ್ಚೈವ ಗನ್ಧರ್ವಾಶ್ಚ ದ್ವಿಜೋತ್ತಮ ॥೫೪॥

ಪೂರ್ವೋತ್ತರಂ ತು ಕೂರ್ಮಸ್ಯ ಪಾದಮೇತೇ ಸಮಾಶ್ರಿತಾಃ ।
ರೇವತ್ಯಶ್ವಾಶ್ವಿದೈವತ್ಯಂ ಯಾಮ್ಯಂ ಚರ್ಕ್ಷಮಿತಿ ತ್ರಯಮ್ ॥೫೫॥

ತತ್ರ ಪಾದೇ ಸಮಾಖ್ಯಾತಂ ಪಾಕಾಯ ಮುನಿಸತ್ತಮ ।
ದೇಶೇಷ್ವೇತೇಷು ಚೈತಾನಿ ನಕ್ಷತ್ರಾಣ್ಯಪಿ ವೈ ದ್ವಿಜ ॥೫೬॥

---

೫೩. ದಾರ್ವಾದ, ಮರಕ, ಕುರಟ, ಅನ್ನದಾರಕ, ಏಕಪಾದ, ಖಶ, ಘೋಷ, ಸ್ವರ್ಗಭೌಮ, ಅನವದ್ಯಕ—ಎಂಬ ಖ್ಯಾತಿಹೊಂದಿದ ದೇಶಗಳು ಕೂರ್ಮಸಂಸ್ಥಾನದ ಪೂರ್ವ-ಉತ್ತರದ ವಾಮಪಾದದಲ್ಲಿರುವುವು.

೫೪. ಎಲೈ, ದ್ವಿಜೋತ್ತಮನೆ! ಯವನ, ಹಿಂಗ, ಚೀರಪ್ರಾವರಣ, ತ್ರಿಣೇತ್ರ, ಪೌರವ, ಗಂಧರ್ವ—ಎಂಬ ನಾಮಾಂಕಿತವಾದ ದೇಶಗಳು ಕೂರ್ಮಸಂಸ್ಥಾನದ ಪೂರ್ವೋತ್ತರದ ವಾಮಪಾದದಲ್ಲಿ ಇವೆಯೆಂದು ಅರಿಯಬೇಕು.

೫೫. ಹೀಗೆ ಹಿಂದೆ ಹೇಳಿರುವ ಎಲ್ಲ ದೇಶಗಳು ಕೂರ್ಮಮೂರ್ತಿಯ ಪೂರ್ವ-ಉತ್ತರಗಳಿಗೆ ಸಂಬಂಧಿಸಿದ ವಾಮಪಾದವನ್ನು ಆಶ್ರಯಿಸಿಕೊಂಡಿವೆ. ರೇವತೀ, ಅಶ್ವಿನೀ, ಭರಣೀ—ಈ ಮೂರು ನಕ್ಷತ್ರಗಳು ಈ ದೇಶದ ಜನರಿಗೆ ಶುಭಾಶುಭದಾಯಕಗಳಾಗಿವೆ.

೫೬. ಎಲೈ ಮುನಿಶ್ರೇಷ್ಠನೆ! ಕೂರ್ಮಮೂರ್ತಿಯ ಮುಂದಿನ ವಾಮಪಾದದ ಪ್ರಜೆಗಳ ಫಲಪಾಕವನ್ನು ಈ ಮೂರು ನಕ್ಷತ್ರಗಳು ಉಂಟುಮಾಡುವುವು. ಎಲೈ ದ್ವಿಜನೆ! ಹಿಂದೆ ಹೇಳಿದಂತೆ ಆಯಾಯ ದೇಶಗಳಲ್ಲಿ ಆಯಾಯ ನಕ್ಷತ್ರಗಳು ಭೋಗದಾಯಕಗಳಾಗಿರುವುವು.

ಏತತ್ಪೀಡಾ ಅಮೀ ದೇಶಾಃ ಪೀಡ್ಯನ್ತೇ ಯೇ ಕ್ರಮೋದಿತಾಃ ।
ಯಾನ್ತಿ ಚಾಭ್ಯುದಯಂ ವಿಪ್ರ ಗ್ರಹೈಃ ಸಮ್ಯಗವಸ್ಥಿತೈಃ ||೫೭||

ಯಸ್ಯರ್ಕ್ಷಸ್ಯ ಪತಿರ್ಯೋ ವೈ ಗ್ರಹಸ್ತದ್ಭಾವಿತೋ ಭಯಮ್ ।
ತದ್ದೇಶಸ್ಯ ಮುನಿಶ್ರೇಷ್ಠ ತದುತ್ಕರ್ಷೇ ಶುಭಾಗಮಃ ||೫೮||

ಪ್ರತ್ಯೇಕಂ ದೇಶಸಾಮಾನ್ಯಂ ನಕ್ಷತ್ರಗ್ರಹಸಮ್ಭವಮ್ ।
ಭಯಂ ಲೋಕಸ್ಯ ಭವತಿ ಶೋಭನಂ ವಾ ದ್ವಿಜೋತ್ತಮ ||೫೯||

ಸ್ವರ್ಕ್ಷೈರಶೋಭನೈರ್ಜನ್ತೋಃ ಸಾಮಾನ್ಯಮತಿಭೀತಿದಮ್ ।
ಗ್ರಹೈರ್ಭವತಿ ಪೀಡೋತ್ಥಮಲ್ಪಾಯಾಸಮಶೋಭನಮ್ ||೬೦||

---

೫೭. ವಿಪ್ರನಾದ ಕ್ರೌಷ್ಟುಕಿಯೆ! ಕ್ರಮವಾಗಿ ವರ್ಣಿಸಲ್ಪಟ್ಟ ಆಯಾಯ ದೇಶಗಳು ಈ ನಕ್ಷತ್ರಗಳಿಂದ ಪೀಡಿಸಲ್ಪಡುವುವು. ಹಾಗು ಶುಭ-ಸ್ಥಾನದಲ್ಲಿರುವ ಗ್ರಹಗಳಿಂದ ಶುಭಫಲವಾದ ಅಭ್ಯುದಯವನ್ನೂ ಹೊಂದುವುವು.

೫೮. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಯಾವ ಗ್ರಹವು ಯಾವ ನಕ್ಷತ್ರಕ್ಕೆ ಅಧಿಪತಿಯಾಗಿರುವನೋ; ಆ ಗ್ರಹದಿಂದ ಆಯಾಯ ದೇಶಕ್ಕೆ ಭಯವು ಪ್ರಾಪ್ತಿಯಾಗುವುದು. ಆದರೆ ಗ್ರಹವು ಶುಭಸ್ಥಾನದಲ್ಲಿದ್ದರೆ ದೇಶಕ್ಕೆ ಶುಭವುಂಟಾಗುವುದು.

೫೯. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಹಿಂದೆ ಹೇಳಿರುವ ದೇಶಗಳೆಲ್ಲವೂ ಗ್ರಹ-ನಕ್ಷತ್ರಗಳಿಂದ ಬರುವ ಭಾಗ್ಯಕ್ಕೆ ಅಧೀನವಾದುದು. ಆದ್ದರಿಂದ ಲೋಕಕ್ಕೆ ಭಯವಾಗಲಿ ಕಲ್ಯಾಣವಾಗಲಿ ಗ್ರಹ–ನಕ್ಷತ್ರಗಳಿಂದಲೇ ಆಗುವುದು.

೬೦. ಪ್ರತಿಯೊಂದು ಜಂತುವಿಗೆ ಅಶುಭಸ್ಥಾನದಲ್ಲಿರುವ ತನ್ನ ದೇಶದ ಗ್ರಹ–ನಕ್ಷತ್ರಗಳ ಪೀಡೆಯಿಂದ ಅಲ್ಪವಾದ ಆಯಾಸವನ್ನು ಕೊಡುವ, ಅತಿ ಭಯಂಕರವಾದ ಸಾಮಾನ್ಯ ಭಯವು ಪ್ರಾಪ್ತವಾಗುವುದು.

ತಥೈವ ಶೋಭನಃ ಪಾಕೋ ದುಃಸ್ಥಿತೈಶ್ಚ ತಥಾ ಗ್ರಹೈಃ ।
ಅಲ್ಪೋಪಕಾರಾಯ ನೃಣಾಂ ದೇಶಜ್ಞೈಶ್ಚಾತ್ಮನೋ ಬುಧೈಃ ॥೬೧॥

ದ್ರವ್ಯೇ ಗೋಷ್ಠೇಽಥ ಭೃತ್ಯೇಷು ಸುಹೃತ್ಸು ತನಯೇಷು ವಾ ।
ಭಾರ್ಯಾಯಾಂ ಚ ಗ್ರಹೇ ದುಃಸ್ಥೇ ಭಯಂ ಪುಣ್ಯವತಾಂ ನೃಣಾಮ್ ॥೬೨॥

ಆತ್ಮನ್ಯಥಾಲ್ಪಪುಣ್ಯಾನಾಂ ಸರ್ವತ್ರೈವಾತಿಪಾಪಿನಾಮ್ ।
ನೈಕತ್ರಾಪಿ ಹ್ಯಪಾಪಾನಾಂ ಭಯಮಸ್ತಿ ಕದಾಚನ ॥೬೩॥

ದಿಗ್ದೇಶಜನಸಾಮಾನ್ಯಂ ನೃಪಸಾಮಾನ್ಯಮಾತ್ಮಜಮ್ ।
ನಕ್ಷತ್ರಗ್ರಹಸಾಮಾನ್ಯಂ ನರೋ ಭುಙ್ಕ್ತೇ ಶುಭಾಶುಭಮ್ ॥೬೪॥

---

೬೧. ಹಾಗು ದೇಶದ ಗ್ರಹ-ನಕ್ಷತ್ರಗಳು ಅಶುಭ ಸ್ಥಾನದಲ್ಲಿದ್ದರೆ ಅವುಗಳಿಂದ ತನ್ನ ಶುಭಕರ್ಮದ ಪರಿಪಾಕವು ಅತ್ಯಲ್ಪವಾದ ಉಪಕಾರವನ್ನು ಮಾಡುವುದು. ದೇಶದ ಗ್ರಹ-ನಕ್ಷತ್ರಗಳನ್ನು ಅರಿತ ವಿದ್ವಾಂಸರಿಂದ ಹೀಗೆ ಹೇಳಲ್ಪಟ್ಟಿರುವುದು.

೬೨. ಪುಣ್ಯವಂತರಾದ ಜನರಿಗೆ ನಕ್ಷತ್ರಾಧಿಪತಿಯಾದ ಗ್ರಹವು ಅಶುಭಸ್ಥಾನದಲ್ಲಿದ್ದರೆ ತನ್ನ ದ್ರವ್ಯ, ಗೋಶಾಲೆ, ಭೃತ್ಯವರ್ಗ, ಮಿತ್ರ, ಪುತ್ರ, ಭಾರ್ಯೆ—ಇವರ ವಿಷಯದಲ್ಲಿ ಭಯಪ್ರಾಪ್ತಿಯಾಗುವುದು.

೬೩. ಅಲ್ಪವಾದ ಪುಣ್ಯವುಳ್ಳವರಿಗೆ ಅಂತಹ ಗ್ರಹದಿಂದ ತನ್ನಲ್ಲಿಯೂ ಭಯಪ್ರಾಪ್ತಿಯಾಗುವುದು. ಅತಿ ಪಾಪಿಗಳಿಗೆ ಪುತ್ರ-ಮಿತ್ರ-ಕಳತ್ರ ಮುಂತಾದವರಲ್ಲಿಯೂ ತನ್ನಲ್ಲಿಯೂ ಭಯವುಂಟಾಗುವುದು. ಆದರೆ ಪಾಪವಿಲ್ಲದವರಿಗೆ ಯಾವಾಗಲೂ ಯಾವ ವಿಷಯದಲ್ಲಿಯೂ ಭಯವಿರುವುದಿಲ್ಲ.

೬೪. ಮಾನವನು ಆಯಾಯ ದಿಕ್ಕು, ದೇಶ, ಜನ, ರಾಜ, ನಕ್ಷತ್ರ, ಗ್ರಹ—ಇವುಗಳಿಗೆ ಸಂಬಂಧಿಸಿದ ಸಾಮಾನ್ಯವಾದ ಶುಭ-ಅಶುಭ ಫಲಗಳನ್ನು ತನ್ನ ಕರ್ಮಾಧೀನವಾದ ಶುಭ-ಅಶುಭಗಳೊಡನೆ ಅನುಭವಿಸುವನು.

ಪರಸ್ಪರಾಭಿರಕ್ಷಾ ಚ ಗ್ರಹದೌಃಸ್ಥ್ಯೇ ನ ಜಾಯತೇ ।
ಏತೇಭ್ಯ ಏವ ವಿಪ್ರೇನ್ದ್ರ ಶುಭಹಾನಿಸ್ತಥಾಶುಭೈಃ ॥೬೫॥

ಯದೇತತ್ಕೌರ್ಮಸಂಸ್ಥಾನಂ ನಕ್ಷತ್ರೇಷು ಮಯೋದಿತಮ್ ।
ಏತತ್ತು ದೇಶಸಾಮಾನ್ಯಮಶುಭಂ ಶುಭಮೇವ ಚ ॥೬೬॥

ತಸ್ಮಾದ್ವಿಜ್ಞಾಯ ದೇಶರ್ಕ್ಷಂ ಗ್ರಹಪೀಡಾಂ ತಥಾತ್ಮನಃ ।
ಕುರ್ವೀತ ಶಾನ್ತಿಂ ಮೇಧಾವೀ ಲೋಕವಾದಾಂಶ್ಚ ಸತ್ತಮ ॥೬೭॥

ಆಕಾಶಾದ್ದೇವತಾನಾಂ ಚ ದೈತ್ಯಾದೀನಾಂ ಚ ದೌಹೃದಾಃ ।
ಪೃಥ್ವ್ಯಾಂ ಪತನ್ತಿ ತೇ ಲೋಕೇ ಲೋಕವಾದಾ ಇತಿ ಶ್ರುತಾಃ ॥೬೮॥

---

೬೫. ಎಲೈ ವಿಪ್ರೇಂದ್ರನಾದ ಕ್ರೌಷ್ಟುಕಿಯೇ! ಗ್ರಹಗಳ ಅಶುಭ-ಸ್ಥಾನದ ಸ್ಥಿತಿಯಿಂದ ಪರಸ್ಪರವಾಗಿ ಆಗಬಹುದಾದ ರಕ್ಷಣೆಯು ತಪ್ಪಿಹೋಗುವುದು. ಹಾಗು ಅಶುಭವಾದ ಗ್ರಹಗಳಿಂದ ಮಾನವನಿಗೆ ಶುಭಹಾನಿಯುಂಟಾಗುವುದು.

೬೬. ಕ್ರೌಷ್ಟುಕಿಯೇ! ನನ್ನಿಂದ ನಿನಗೆ ಆಯಾಯ ನಕ್ಷತ್ರಗಳಲ್ಲಿ ಕೂರ್ಮಮೂರ್ತಿಯ ಸಂಸ್ಥಾನವು ವರ್ಣಿಸಲ್ಪಟ್ಟಿತು. ಆ ನಕ್ಷತ್ರಗಳಿಂದ ಉಂಟಾಗುವ ಶುಭ-ಅಶುಭ ಫಲಗಳು ದೇಶಸಾಮಾನ್ಯಕ್ಕೆ ಉಂಟಾಗುವುವು.

೬೭. ಸಾಧೂತ್ತಮನಾದ ಕ್ರೌಷ್ಟುಕಿಯೇ! ಆದುದರಿಂದ ದೇಶದ ನಕ್ಷತ್ರವನ್ನೂ ತನ್ನ ಗ್ರಹಪೀಡೆಯನ್ನೂ ತಿಳಿದು ಮೇಧಾವಿಯಾದ ಮಾನವನು ದೋಷಪರಿಹಾರಕ್ಕೋಸ್ಕರ ಶಾಂತಿಯನ್ನೂ ಲೋಕವಾದದ ಕರ್ತವ್ಯಗಳನ್ನೂ ಆಚರಿಸಬೇಕು.

೬೮. "ದೇವತೆ, ದೈತ್ಯ ಮುಂತಾದವರ ದುಷ್ಟಸಂಕಲ್ಪಗಳು ಆಕಾಶ-ದಿಂದ ಹಾಗೆಯೇ ನೆಲದ ಮೇಲೆ ಬೀಳುತ್ತವೆ" ಎಂಬ ಲೋಕದಲ್ಲಿ ಪ್ರಖ್ಯಾತ-ವಾದ ನಂಬಿಕೆಗಳು ಲೋಕವಾದಗಳೆಂದು ಎನಿಸುವುವು. ಅಂತಹ ಸಂಕಲ್ಪ-ವುಂಟಾಗದಂತೆ ರಕ್ಷಿಸಿಕೊಳ್ಳಬೇಕು.

ತಾಂ ತಥೈವ ಬುಧಃ ಕುರ್ಯಾಲ್ಲೋಕವಾದಾನ್ನ ಹಾಪಯೇತ್ ।
ತೇಷಾಂ ತತ್ಕರಣಾನ್ನೃಣಾಂ ಯುಕ್ತೋ ದುಷ್ಟಾಗಮಕ್ಷಯಃ ॥೬೯॥

ಶುಭೋದಯಂ ಪ್ರಹಾನಿಂ ಚ ಪಾಪಾನಾಂ ದ್ವಿಜಸತ್ತಮ ।
ಪ್ರಜ್ಞಾಹಾನಿಂ ಪ್ರಕುರ್ಯುಸ್ತೇ ದ್ರವ್ಯಾದೀನಾಂ ಚ ಕುರ್ವತೇ॥೭೦॥

ತಸ್ಮಾಚ್ಛಾನ್ತಿಪರಃ ಪ್ರಾಜ್ಞೋ ಲೋಕವಾದರತಸ್ತಥಾ ।
ಲೋಕವಾದಾಂಶ್ಚ ಶಾನ್ತೀಶ್ಚ ಗ್ರಹಪೀಡಾಸು ಕಾರಯೇತ್ ॥೭೧॥

ಅದ್ರೋಹಾನುಪವಾಸಾಂಶ್ಚ ಶಸ್ತಂ ದೇವಾದಿವನ್ದನಮ್ ।
ಜಪೋ ಹೋಮಸ್ತಥಾ ದಾನಂ ಸ್ನಾನಂ ಕ್ರೋಧಾದಿವರ್ಜನಮ್
॥೭೨॥

---

೬೯. ಪ್ರಾಜ್ಞನಾದ ಮಾನವನು ಲೋಕವಾದವನ್ನು ನಂಬಿ ಅದರಂತೆ ವರ್ತಿಸಬೇಕು. ಲೋಕವಾದಗಳನ್ನು ಅಸಡ್ಡೆಮಾಡಬಾರದು. ಅವುಗಳನ್ನು ಹಾಗೆಯೇ ನಡೆಸಿಕೊಂಡು ಬರುವುದರಿಂದ ಜನರಿಗೆ ಅನಿಷ್ಟಶಾಂತಿಯಾಗುವುದು.

೭೦. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೇ ! ಲೋಕವಾದಗಳು ಶುಭಫಲಗಳನ್ನೂ ಪಾಪಹಾನಿಯನ್ನೂ ಉಂಟುಮಾಡುವುವು. ಮತ್ತು ಪ್ರಜ್ಞೆ, ದ್ರವ್ಯ ಮುಂತಾದುವುಗಳ ಹಾನಿಯಿಂದ ಕೆಟ್ಟಫಲವನ್ನು ಕೊಡಲು ಸಮರ್ಥವಾಗಿಯೂ ಇವೆ.

೭೧. ಆದುದರಿಂದ ಪ್ರಾಜ್ಞನಾದ ಮಾನವನು ಗ್ರಹಗಳ ಪೀಡಾಪ್ರಸಂಗಗಳಲ್ಲಿ ಲೋಕವಾದಗಳನ್ನೂ ಶಾಂತಿಕರ್ಮಗಳನ್ನೂ ಆಚರಿಸಬೇಕು. ಲೋಕವಾದ-ಶಾಂತಿಕರ್ಮಗಳಲ್ಲಿ ಆಸಕ್ತಿಯನ್ನು ಹೊಂದಿರಬೇಕು.

೭೨. ಸಾಮಾನ್ಯವಾಗಿ ಪ್ರತಿಯೊಂದು ಪೀಡೆಯ ಪರಿಹಾರಕ್ಕೆ ದ್ರೋಹಬುದ್ಧಿಯನ್ನು ಬಿಡುವುದು, ಉಪವಾಸ, ದೇವಾದಿವಂದನೆ, ಜಪ, ಹೋಮ, ದಾನ, ಸ್ನಾನ, ಕ್ರೋಧ ಮುಂತಾದುವುಗಳ ತ್ಯಾಗ—ಇಂತಹ ಸತ್ಕರ್ಮಗಳನ್ನು ಆಚರಿಸಬೇಕು.

ಅದ್ರೋಹಂ ಸರ್ವಭೂತೇಷು ಮೈತ್ರೀಂ ಕುರ್ಯಾಚ್ಚ ಪಣ್ಡಿತಃ ।
ವರ್ಜಯೇದಸತೀಂ ವಾಚಮತಿವಾದಾಂಸ್ತಥೈವ ಚ ॥೭೩॥

ಗ್ರಹಪೂಜಾಂ ಚ ಕುರ್ವೀತ ಸರ್ವಪೀಡಾಸು ಮಾನವಃ ।
ಏವಂ ಶಾಮ್ಯನ್ತ್ಯಶೇಷಾಣಿ ಘೋರಾಣಿ ದ್ವಿಜಸತ್ತಮ ॥೭೪॥

ಪ್ರಯತಾನಾಂ ಮನುಷ್ಯಾಣಾಂ ಗ್ರಹರ್ಕ್ಷೋತ್ಥಾನ್ಯಶೇಷತಃ ।
ಏಷ ಕೂರ್ಮೋ ಮಯಾಖ್ಯಾತೋ ಭಾರತೇ ಭಗವಾನ್ವಿಭುಃ ॥೭೫॥

ನಾರಾಯಣೋ ಹ್ಯಚಿನ್ತ್ಯಾತ್ಮಾ ಯತ್ರ ಸರ್ವಂ ಪ್ರತಿಷ್ಠಿತಮ್ ।
ಅತ್ರ ದೇವಾಃ ಸ್ಥಿತಾಃ ಸರ್ವೇ ಪ್ರತಿನಕ್ಷತ್ರಸಂಶ್ರಯಾಃ ॥೭೬॥

---

೭೩. ಹಾಗು ಪಂಡಿತನಾದ ಮಾನವನು ಸರ್ವಪ್ರಾಣಿಗಳಲ್ಲಿ ಅದ್ರೋಹದ ವರ್ತನೆಯನ್ನೂ ಮೈತ್ರೀಭಾವವನ್ನೂ ತೋರಿಸಬೇಕು. ಮತ್ತು ಕೆಟ್ಟ ಮಾತನ್ನೂ ಅತಿಯಾದ ಹರಟೆಯ ಮಾತುಗಳನ್ನೂ ವರ್ಜಿಸಬೇಕು.

೭೪. ಎಲೈ ದ್ವಿಜೋತ್ತಮನೇ! ಮಾನವನು ಎಲ್ಲ ಗ್ರಹಪೀಡಾಪ್ರಸಂಗಗಳಲ್ಲಿ ಆಯಾಯ ಗ್ರಹಗಳ ಪೂಜೆಯನ್ನು ಆಚರಿಸಬೇಕು. ಅದರಿಂದ ಎಲ್ಲ ಘೋರವಾದ ವಿಪತ್ತುಗಳು ಶಮನವಾಗುವುವು.

೭೫. ಪವಿತ್ರ ಆಚಾರವಂತರಾದ ಮಾನವರಿಗೆ ಗ್ರಹ-ನಕ್ಷತ್ರಗಳಿಂದಾಗುವ ಅನಿಷ್ಟಗಳು ಪರಿಹಾರವಾಗುವುವು. ಹೀಗೆ ಭಾರತವರ್ಷದಲ್ಲಿ ಪೂಜ್ಯನಾದವನೂ ಸರ್ವವ್ಯಾಪಿಯೂ ಆದ ಕೂರ್ಮಮೂರ್ತಿಯು ನನ್ನಿಂದ ಹೇಳಲ್ಪಟ್ಟಿರುವನು.

೭೬. ಶ್ರೀಮನ್ನಾರಾಯಣದೇವನು ಚಿಂತಿಸಲಾಗದ ಮಹಿಮೆಯುಳ್ಳವನಾಗಿರುವನು. ಅವನಲ್ಲಿ ಎಲ್ಲ ವಿಶ್ವವು ನೆಲೆಸಿರುವುದು. ಪ್ರತಿಯೊಂದು ನಕ್ಷತ್ರವನ್ನು ಅವಲಂಬಿಸಿದ ದೇವತೆಗಳು ನಾರಾಯಣಮೂರ್ತಿಯಲ್ಲಿ ಪ್ರತಿಷ್ಠೆಯನ್ನು ಹೊಂದಿರುವರು.

ತಥಾ ಮಧ್ಯೇ ಹುತವಹಃ ಪೃಥ್ವೀ ಸೋಮಶ್ಚ ವೈ ದ್ವಿಜ ।
ಮೇಷಾದಯಸ್ತ್ರಯೋ ಮಧ್ಯೇ ಮುಖೇ ದ್ವೌ ಮಿಥುನಾದಿಕೌ॥೨೭॥

ಪ್ರಾಗ್ದಕ್ಷಿಣೇ ತಥಾ ಪಾದೇ ಕರ್ಕಿಸಿಂಹೌ ವ್ಯವಸ್ಥಿತೌ ।
ಸಿಂಹಕನ್ಯಾತುಲಾಶ್ಚೈವ ಕುಕ್ಷೌ ರಾಶಿತ್ರಯಂ ಸ್ಥಿತಮ್ ॥೨೮॥

ತುಲಾಥ ವೃಶ್ಚಿಕಶ್ಚೋಭೌ ಪಾದೇ ದಕ್ಷಿಣಪಶ್ಚಿಮೇ ।
ಪೃಷ್ಠೇ ಚ ವೃಶ್ಚಿಕೇನೈವ ಸಹ ಧನ್ವೀ ವ್ಯವಸ್ಥಿತಃ ॥೨೯॥

ವಾಯವ್ಯೇ ಚಾಸ್ಯ ವೈ ಪಾದೇ ಧನುರ್ಗ್ರಾಹಾದಿಕಂ ತ್ರಯಮ್ ।
ಕುಮ್ಭಮೀನೌ ತಥೈವಾಸ್ಯ ಉತ್ತರಾಂ ಕುಕ್ಷಿಮಾಶ್ರಿತೌ ॥೩೦॥

---

೨೭. ಎಲೈ ದ್ವಿಜನೇ! ಕೂರ್ಮಮೂರ್ತಿಯಾದ ನಾರಾಯಣನ ಮಧ್ಯಭಾಗದಲ್ಲಿ ಅಗ್ನಿ, ಭೂಮಿ, ಸೋಮ ದೇವತೆಗಳಿರುವರು. ಹಾಗು ಮಧ್ಯ-ದಲ್ಲಿ ಮೇಷ, ವೃಷಭ, ಮಿಥುನ—ಎಂಬ ಮೂರು ರಾಶಿಗಳು, ಮುಖದಲ್ಲಿ ಮಿಥುನ ಕರ್ಕಾಟಕರಾಶಿಗಳು ಇರುವುವು.

೨೮. ಹಾಗು ಕೂರ್ಮಸ್ವಾಮಿಯ ಪೂರ್ವ ದಕ್ಷಿಣದಿಕ್ಕಿನ ಪಾದದಲ್ಲಿ ಕರ್ಕಾಟಕ, ಸಿಂಹರಾಶಿಗಳು ಇರುವುವು. ಮತ್ತು ಕೂರ್ಮ ಸನ್ನಿವೇಶದ ಕುಕ್ಷಿಯ ಸ್ಥಾನದಲ್ಲಿ ಸಿಂಹ-ಕನ್ಯಾ-ತುಲಾ ಎಂಬ ಮೂರು ರಾಶಿಗಳು ಇರುತ್ತವೆ.

೨೯. ಅದೇ ಕೂರ್ಮಸನ್ನಿವೇಶದ ದಕ್ಷಿಣ-ಪಶ್ಚಿಮದಿಕ್ಕುಗಳ ಭಾಗ-ದಲ್ಲಿರುವ ಪಾದದಲ್ಲಿ ತುಲಾ,ವೃಶ್ಚಿಕ ಎಂಬ ಎರಡು ರಾಶಿಗಳು ಇವೆ. ಮತ್ತು ಪೃಷ್ಠಭಾಗದಲ್ಲಿ ವೃಶ್ಚಿಕರಾಶಿ-ಧನುರಾಶಿಗಳು ಸ್ಥಿತಿಯನ್ನು ಹೊಂದಿವೆ.

೩೦. ಮತ್ತು ಕೂರ್ಮಮೂರ್ತಿಯ ಸನ್ನಿವೇಶದಲ್ಲಿ ವಾಯವ್ಯದಿಕ್ಕಿನ ಕಡೆಯ ಪಾದಭಾಗದಲ್ಲಿ ಧನು-ಮಕರ-ಕುಂಭ—ಎಂಬ ಮೂರು ರಾಶಿಗಳು ಇರುವುವು. ಹಾಗು ಕೂರ್ಮಮೂರ್ತಿಯ ಉತ್ತರ ಕುಕ್ಷಿಭಾಗದಲ್ಲಿ ಕುಂಭ-ಮೀನ ರಾಶಿಗಳು ಇರುತ್ತವೆ.

ಮೀನಮೇಷೌ ದ್ವಿಜಶ್ರೇಷ್ಠ ಪಾದೇ ಪೂರ್ವೋತ್ತರೇ ಸ್ಥಿತೌ ।
ಕೂರ್ಮೇ ದೇಶಾಸ್ತಥರ್ಕ್ಷಾಣಿ ದೇಶೇಷ್ವೇತೇಷು ವೈ ದ್ವಿಜ ॥೮೧॥

ರಾಶಯಶ್ಚ ತಥರ್ಕ್ಷೇಷು ಗ್ರಹರಾಶಿಷ್ವವಸ್ಥಿತಾಃ ।
ತಸ್ಮಾದ್ಗ್ರಹರ್ಕ್ಷಪೀಡಾಸು ದೇಶಪೀಡಾಂ ವಿನಿರ್ದಿಶೇತ್ ॥೮೨॥

ತತ್ರ ಸ್ನಾತ್ವಾ ಪ್ರಕುರ್ವೀತ ದಾನಹೋಮಾದಿಕಂ ವಿಧಿಮ್ ।
ಸ ಏಷ ವೈಷ್ಣವಃ ಪಾದೋ ಬ್ರಹ್ಮನ್ಮಧ್ಯೇ ಗ್ರಹಸ್ಯ ಯಃ ॥೮೩॥

ನಾರಾಯಣಾಖ್ಯೋಽಚಿನ್ತ್ಯಾತ್ಮಾ ಕಾರಣಂ ಜಗತಃ ಪ್ರಭುಃ ॥೮೪॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭಾರತೀಯ-
ಕೂರ್ಮನಿವೇಶೋ ನಾಮ ಪಞ್ಚಪಞ್ಚಾಶತ್ತಮೋಽಧ್ಯಾಯಃ

---

೮೧. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಪೂರ್ವ–ಉತ್ತರಗಳ ಸಂಧಿಯಾದ ಈಶಾನ್ಯದಲ್ಲಿರುವ ಪಾದದಲ್ಲಿ ಮೀನ-ಮೇಷರಾಶಿಗಳು ಇರುತ್ತವೆ. ಹೀಗೆ ಕೂರ್ಮ ಆಕಾರದಲ್ಲಿ ಸಮಸ್ತ ದೇಶಗಳು ಮತ್ತು ಆಯಾಯ ದೇಶಗಳಲ್ಲಿ ಆಯಾಯ ನಕ್ಷತ್ರಗಳು ಇರುವುವು.

೮೨. ಹಾಗು ಆಯಾಯ ನಕ್ಷತ್ರಗಳಲ್ಲಿ ರಾಶಿಗಳೂ ರಾಶಿಗಳಲ್ಲಿ ಗ್ರಹಗಳೂ ವ್ಯವಸ್ಥೆಯಿಂದ ಇರುವುವು. ಆದುದರಿಂದ ಗ್ರಹ-ನಕ್ಷತ್ರಗಳಿಂದ ಆಗುವ ಪೀಡಾಪ್ರಸಂಗದಲ್ಲಿ ದೇಶಕ್ಕೆ ಪೀಡೆಯಾಗುವುದೆಂದು ನಿರ್ದೇಶಮಾಡಬೇಕು.

೮೩. ಅಂತಹ ಸಮಯದಲ್ಲಿ ಸ್ನಾನಮಾಡಿ ದಾನ-ಹೋಮ ಮುಂತಾದ ವಿಧಾನವನ್ನು ಯಥಾವಿಧಿಯಾಗಿ ಆಚರಿಸಬೇಕು. ಬ್ರಹ್ಮರ್ಷಿಯೆ! ಈ ಗ್ರಹ ಮಂಡಲದ ಮಧ್ಯದಲ್ಲಿ ವಿಷ್ಣುವಿನ ಅಂಶರೂಪವಾದ ಪಾದವು ವ್ಯಾಪಿಸಿರುವುದು.

೮೪. ಹೀಗೆ ಖಗೋಳ ಭೂಗೋಳಗಳನ್ನೆಲ್ಲ ವ್ಯಾಪಿಸಿರುವವನೂ, ಮನಸ್ಸಿನಿಂದ ಊಹಿಸಲಾಗದ ಸ್ವರೂಪವುಳ್ಳವನೂ ಮತ್ತು ಸರ್ವೇಶ್ವರನೂ ಆದ ಶ್ರೀಮನ್ನಾರಾಯಣಸ್ವಾಮಿಯು ಜಗತ್ತಿಗೆ ಕಾರಣನಾಗಿರುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತೈದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಟ್ಪಞ್ಚಾಶತ್ತಮೋಽಧ್ಯಾಯಃ

(ಭದ್ರಾಶ್ವ-ಕುರುವರ್ಷನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಏವಂ ತು ಭಾರತಂ ವರ್ಷಂ ಯಥಾವತ್ಕಥಿತಂ ಮುನೇ ।
ಕೃತಂ ತ್ರೇತಾ ದ್ವಾಪರಂ ಚ ತಥಾ ತಿಷ್ಯಂ ಚತುಷ್ಟಯಮ್ ||೧||

ಅತ್ರೈವೈತದ್ಯುಗಾನಾಂ ತು ಚಾತುರ್ವರ್ಣ್ಯಂ ಚ ವೈ ದ್ವಿಜ ||೨||

ಐವತ್ತಾರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಮುಂದೆ ಹೇಳಿದನು :—

೧. ಕ್ರೌಷ್ಟುಕಿಯೇ! ಇದುವರೆಗೆ ಭಾರತ ವರ್ಷವು ಯಥಾಸ್ಥಿತಿಯಾಗಿ ನಿನಗೆ ಹೇಳಲ್ಪಟ್ಟಿತು. ಮತ್ತು ಕೃತ-ತ್ರೇತಾ-ದ್ವಾಪರ-ಕಲಿಯುಗಗಳ ವ್ಯವಸ್ಥೆಯು ಹೇಳಲ್ಪಟ್ಟಿರುವುದು.

೨. ಹಿಂದೆ ಹೇಳಿರುವ ಭಾರತವರ್ಷದಲ್ಲಿ ವಾಸಮಾಡುವ ಜನರಲ್ಲಿ ಮಾತ್ರ ಬ್ರಹ್ಮ-ಕ್ಷತ್ರ-ವಿಟ್-ಶೂದ್ರ ಎಂಬ ಚಾತುರ್ವರ್ಣ್ಯ ಮತ್ತು ಆಯಾಯ ವರ್ಣಗಳಿಗೆ ಪ್ರತ್ಯೇಕವಾದ ಧರ್ಮಗಳ ವ್ಯವಸ್ಥೆಯೂ, ಯುಗಧರ್ಮ ವ್ಯವಸ್ಥೆಯೂ ಇರುವುವು.

ಚತ್ವಾರಿ ತ್ರೀಣಿ ದ್ವೇ ಚೈವ ತಥೈಕಂ ಚ ಶರಚ್ಛತಮ್ ।
ಜೀವನ್ತ್ಯತ್ರ ನರಾ ಬ್ರಹ್ಮನ್ ಕೃತತ್ರೇತಾದಿಷು ಕ್ರಮಾತ್ ॥೩॥

ದೇವಕೂಟಸ್ಯ ಪೂರ್ವಸ್ಯ ಶೈಲೇನ್ದ್ರಸ್ಯ ಮಹಾತ್ಮನಃ ।
ಪೂರ್ವೇಣ ಯತ್ಸ್ಥಿತಂ ವರ್ಷಂ ಭದ್ರಾಶ್ವಂ ತನ್ನಿಬೋಧ ಮೇ ॥೪॥

ಶ್ವೇತಪರ್ಣಶ್ಚ ನೀಲಶ್ಚ ಶೈವಾಲಶ್ಚಾಚಲೋತ್ತಮಃ ।
ಕೌರಞ್ಜಃ ಪರ್ಣಶಾಲಾಗ್ರಃ ಪಞ್ಚೈತೇ ತು ಕುಲಾಚಲಾಃ ॥೫॥

ತೇಷಾಂ ಪ್ರಸೂತಿರನ್ಯೇ ಯೇ ಬಹವಃ ಕ್ಷುದ್ರಪರ್ವತಾಃ ।
ತೈರ್ವಿಶಿಷ್ಟಾ ಜನಪದಾ ನಾನಾರೂಪಾಃ ಸಹಸ್ರಶಃ ॥೬॥

---

೩. ಎಲೈ ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ಕೃತಯುಗ ಮುಂತಾದ ನಾಲ್ಕುಯುಗಗಳಲ್ಲಿ ಕ್ರಮವಾಗಿ ಭಾರತವರ್ಷದಲ್ಲಿ ವಾಸಮಾಡುವ ಮಾನವರು ನಾಲ್ಕು-ಮೂರು-ಎರಡು ಮತ್ತು ಒಂದು ನೂರು ವರ್ಷಗಳ ಆಯುಷ್ಯವನ್ನು ಹೊಂದಿ ಬದುಕುವರು.

೪. ಪೂರ್ವದಿಕ್ಕಿನಲ್ಲಿರುವ, ಅನೇಕ ಮಾಹಾತ್ಮ್ಯಗಳಿಂದ ಕೂಡಿದ ದೇವಕೂಟ ಎಂಬ ಪರ್ವತದ ಪೂರ್ವದಲ್ಲಿರುವ ಭದ್ರಾಶ್ವ ಎಂಬ ವರ್ಷಖಂಡದ ಸನ್ನಿವೇಶವನ್ನು ಹೇಳುವೆನು—ಅದನ್ನು ನನ್ನಿಂದ ಕೇಳು.

೫. ಭದ್ರಾಶ್ವವರ್ಷದಲ್ಲಿ ಶ್ವೇತಪರ್ಣ, ನೀಲ, ಶೈವಾಲ, ಕೌರಂಜ ಮತ್ತು ಪರ್ಣಶಾಲಾಗ್ರ ಎಂಬ ಐದು ಪ್ರಖ್ಯಾತ ಪರ್ವತಗಳು ಕುಲಾಚಲ-ಗಳೆಂದೆನಿಸಿಕೊಂಡಿವೆ.

೬. ಕುಲಾಚಲಗಳ ಸಂತತಿರೂಪವಾಗಿ ಬೇರೆ ಅನೇಕ ಚಿಕ್ಕ ಚಿಕ್ಕ ಪರ್ವತಗಳು ಇರುವುವು. ಅಂತಹ ಪರ್ವತಗಳಿಂದ ನಾನಾಸನ್ನಿವೇಶಗಳಿಂದ ಕೂಡಿದ ಸಹಸ್ರಾರು ದೇಶಗಳು ಆವರಿಸಲ್ಪಟ್ಟಿವೆ.

ತತಃ ಕುಮುದಸಂಕಾಶಾಃ ಶುದ್ಧಸಾನುಸುಮಙ್ಗಲಾಃ ।
ಇತ್ಯೇವಮಾದಯೋಽನ್ಯೇಽಪಿ ಶತಶೋಽಥ ಸಹಸ್ರಶಃ ॥೭॥

ಸೀತಾ ಶಙ್ಖಾವತೀ ಭದ್ರಾ ಚಕ್ರಾವರ್ತಾದಿಕಾಸ್ತಥಾ ।
ನದ್ಯೋಽಥ ಬಹ್ವ್ಯೋ ವಿಸ್ತೀರ್ಣಾಃ ಶೀತತೋಯೌಘವಾಹಿಕಾಃ ॥೮॥

ಅತ್ರ ವರ್ಷೇ ನರಾಃ ಶಙ್ಖಶುದ್ಧಹೇಮಸಮಪ್ರಭಾಃ ।
ದಿವ್ಯಸಙ್ಗಿನಃ ಪುಣ್ಯಾ ದಶವರ್ಷಶತಾಯುಷಃ ॥೯॥

ಅಧನೋತ್ತಮಂ ನ ತೇಷ್ವಸ್ತಿ ಸರ್ವೇ ತೇ ಸಮದರ್ಶನಾಃ ।
ತಿತಿಕ್ಷಾದಿಭಿರಷ್ಟಾಭಿಃ ಪ್ರಕೃತ್ಯಾತ್ಮಗುಣೈರ್ಯುತಾಃ ॥೧೦॥

---

೭. ಹಾಗು ಕುಮುದ, ಸಂಕಾಶ, ಶುದ್ಧಸಾನು, ಸುಮಂಗಳ ಮುಂತಾದ ಮಂಗಳನಾಮಾಂಕಿತವಾದ ನೂರಾರು-ಸಹಸ್ರಾರುಸಂಖ್ಯೆಯಿಂದ ಕೂಡಿದ ಪರ್ವತಗಳು ಭದ್ರಾಶ್ವ ವರ್ಷದಲ್ಲಿ ಶೋಭಿಸುವುವು.

೮. ಮತ್ತು ಭದ್ರಾಶ್ವ ವರ್ಷದಲ್ಲಿ ಸೀತಾ, ಶಂಖಾವತಿ, ಭದ್ರಾ, ಚಕ್ರಾವರ್ತಾ--ಮುಂತಾದ ಶೀತಲವಾದ ನೀರಿನ ಪ್ರವಾಹದಿಂದ ಕೂಡಿ ಹರಿಯುವ, ವಿಸ್ತಾರವಾದ ಅನೇಕ ನದಿಗಳು ಪಾವನಗೊಳಿಸುವುವು.

೯. ಈ ವರ್ಷದಲ್ಲಿ ವಾಸಮಾಡುವ ನರರೆಲ್ಲರೂ ಶಂಖ-ಶುದ್ಧವಾದ ಚಿನ್ನಗಳಂತೆ ಹೊಳೆಯುವ ನಿರ್ಮಲವಾದ ಕಾಂತಿಯುಳ್ಳವರಾಗಿರುವರು. ಮತ್ತು ಪುಣ್ಯವಂತರೂ, ಹತ್ತುಸಹಸ್ರವರ್ಷ ಆಯುಷ್ಯವುಳ್ಳವರೂ ಆಗಿ ದಿವ್ಯಸುಖವನ್ನು ಭುಂಜಿಸುತ್ತಿರುವರು.

೧೦. ಮತ್ತು ಆ ಜನರು ತಿತಿಕ್ಷಾ ಮುಂತಾದ ಪ್ರಕೃತಿಸಿದ್ಧವಾದ ಎಂಟು ಆತ್ಮಗುಣಗಳಿಂದ ಕೂಡಿರುವರು. ಅವರಲ್ಲಿ ಒಬ್ಬರಿಗಿಂತ ಮತ್ತೊಬ್ಬರಲ್ಲಿ ಉತ್ಕರ್ಷ-ಅಪಕರ್ಷಗಳೆಂಬ ಅಧಮೋತ್ತಮತೆಯು ಇರುವುದಿಲ್ಲ. ಎಲ್ಲರೂ ಸಮದರ್ಶನವನ್ನು ಹೊಂದಿರುವರು.

ತತ್ರಾಪ್ಯಶ್ವಶಿರಾ ದೇವಶ್ಚತುರ್ಬಾಹುರ್ಜನಾರ್ದನಃ ।
ಶಿರೋಹೃದಯಮೇಢ್ರಾಙ್ಘ್ರಿ ಹಸ್ತೈಶ್ಚರ್ಕ್ಷತ್ರಯಾನ್ವಿತಃ ॥೧೧॥

ತಸ್ಯಾಪ್ಯೇವಂ ವಿಷಯಾ ವಿಜ್ಞೇಯಾ ಜಗತಃ ಪ್ರಭೋಃ ।
ಕೇತುಮಾಲಮತೋ ವರ್ಷಂ ನಿಬೋಧ ಮಮ ಪಶ್ಚಿಮಮ್ ॥೧೨॥

ವಿಶಾಲಃ ಕಮ್ಬಲಃ ಕೃಷ್ಣೋ ಜಯನ್ತೋ ಹರಿಪರ್ವತಃ ।
ವಿಶೋಕೋ ವರ್ಧಮಾನಶ್ಚ ಸಪ್ತೈತೇ ಕುಲಪರ್ವತಾಃ ॥೧೩॥

ಅನ್ಯೇ ಸಹಸ್ರಶಃ ಶೈಲಾ ಯೇಷು ಲೋಕಗಣಃ ಸ್ಥಿತಃ ॥೧೪॥

ಮೌಲಯಸ್ತೇ ಮಹಾಕಾಯಾಃ ಶಾಕಪೋತಕರಮ್ಭಕಾಃ ।
ಅಚಲಪ್ರಮುಖಾಶ್ಚಾಪಿ ವಸನ್ತಿ ಶತಶೋ ಜನಾಃ ॥೧೫॥

---

೧೧. ಭದ್ರಾಶ್ವಖಂಡದಲ್ಲಿ ಚತುರ್ಭುಜಗಳಿಂದ ಶೋಭಿಸುವ, ಅಶ್ವಶಿರ ಎಂಬ ನಾಮಾಂಕಿತನಾದ ಜನಾರ್ದನಸ್ವಾಮಿಯು ಪೂಜ್ಯನಾಗಿರುವನು. ಈ ಅಶ್ವಶಿರಮೂರ್ತಿಯು ಶಿರ–ಹೃದಯ–ಕೈ-ಕಾಲು–ಅಂಡಕೋಶ ಈ ಸಪ್ತಾಂಗಗಳಲ್ಲಿ ಮೂರು ಮೂರು ನಕ್ಷತ್ರಗಳಿಂದ ಕೂಡಿರುವನು.

೧೨. ಈ ಸನ್ನಿವೇಶದಿಂದ ಕೂಡಿದ ಜಗತ್ಪ್ರಭುವಿನ ಆಯಾಯ ಅವಯವಗಳಲ್ಲಿ ಅನೇಕ ಗಿರಿ-ನದಿ-ಪರ್ವತ ಮುಂತಾದ ದೇಶಗಳು ಇವೆಯೆಂದು ತಿಳಿಯಬೇಕು. ಇನ್ನು ಪಶ್ಚಿಮದಿಕ್ಕಿನಲ್ಲಿರುವ ಕೇತುಮಾಲ ವರ್ಷವನ್ನು ನನ್ನಿಂದ ಕೇಳು.

೧೩. ಕೇತುಮಾಲ ವರ್ಷದಲ್ಲಿ ಏಳು ಕುಲಪರ್ವತಗಳಿರುವುವು. ಆ ಕುಲಪರ್ವತಗಳಿಗೆ ಕ್ರಮವಾಗಿ ವಿಶಾಲ, ಕಂಬಲ, ಕೃಷ್ಣ, ಜಯಂತ, ಹರಿಪರ್ವತ, ವಿಶೋಕ, ವರ್ಧಮಾನ ಎಂಬ ನಾಮಾಂಕನಗಳಿರುವುವು.

೧೪. ಈ ಕುಲಾಚಲಗಳ ಜೊತೆಗೆ ಇತರ ಪರ್ವತಗಳು ಸಾವಿರಾರು ಸಂಖ್ಯೆಯಲ್ಲಿ ನೆಲೆಸಿರುವುವು. ಅವುಗಳಲ್ಲಿರುವ ಪುರ–ಗ್ರಾಮಾದಿ ವಾಸಭೂಮಿಗಳಲ್ಲಿ ಜನಸ್ತೋಮವು ವಾಸಮಾಡುವುದು.

೧೫. ಅಲ್ಲಲ್ಲಿ ವಾಸಮಾಡುವುದರಿಂದ ದೇಶದ ನಾಮಾಂಕನದಿಂದಲೇ ಪ್ರಖ್ಯಾತರಾದ ಮೌಳಿ, ಮಹಾಕಾಯ, ಕರಂಭಕ, ಶಾಕ, ಪೋತ, ಅಚಲ ಎಂಬ ಅನೇಕ ಮಂದಿ ಪ್ರಜೆಗಳು ಅಲ್ಲಿರುವರು.

ಯೇ ಪಿಬನ್ತಿ ಮಹಾನದ್ಯೋ ವಙ್ಕ್ಷುಶ್ಯಾಮಾಂ ಸ್ವಕಮ್ಬಲಾಮ್ ।
ಅಮೋಘಾಂ ಕಾಮಿನೀಂ ಶ್ಯಾಮಾಂ ತಥೈವಾನ್ಯಾಃ ಸಹಸ್ರಶಃ ॥೧೬॥

ಅತ್ರಾಪ್ಯಾಯುಃ ಸಮಂ ಪೂರ್ವೈರತ್ರಾಪಿ ಭಗವಾನ್ಹರಿಃ ।
ವರಾಹರೂಪೀ ಪಾದಾಸ್ಯಹೃತ್ಪೃಷ್ಠೇ ಪಾರ್ಶ್ವತಸ್ತಥಾ ॥೧೭॥

ಮುಖೇ ನಾಸಾದತಶ್ಚೈವ ಕಣ್ಠತಃ ಪುಚ್ಛತಸ್ತಥಾ ॥೧೮॥

ತ್ರಿನಕ್ಷತ್ರಯುತೇ ದೇಶೇ ನಕ್ಷತ್ರಾಣಿ ಯುತಾನಿ ಚ ।
ಇತ್ಯೇತತ್ಕೇತುಮಾಲಂ ತೇ ಕಥಿತಂ ಮುನಿಸತ್ತಮ ॥೧೯॥

ಅತಃ ಪರಂ ಕುರೂನ್ವಕ್ಷ್ಯೇ ನಿಬೋಧೇಹ ಮಮೋತ್ತರಾನ್ ।
ತತ್ರ ವೃಕ್ಷಾ ಮಧುಫಲಾ ನಿತ್ಯಪುಷ್ಪಫಲೋಪಗಾಃ ॥೨೦॥

---

೧೬. ಕೇತುಮಾಲ ವರ್ಷದಲ್ಲಿ ವಂಕ್ಷು, ಶ್ಯಾಮ, ಸ್ವಕಂಬಲ, ಅಮೋಘ, ಕಾಮಿನಿ, ಶ್ಯಾಮಾ ಮುಂತಾದ ನೂರಾರು ನದಿಗಳು ಹರಿಯುತ್ತಿವೆ. ಆ ಪುಣ್ಯ-ಮಹಾನದಿಗಳ ನೀರನ್ನು ಅಲ್ಲಿರುವ ಜನರು ಸೇವಿಸುವರು.

೧೭. ಈ ಕೇತುಮಾಲಖಂಡದಲ್ಲಿರುವ ಜನರ ಆಯುಷ್ಯವು ಹಿಂದಿನ ವರ್ಷದಲ್ಲಿರುವವರಿಗೆ ಸಮಾನವಾಗಿರುವುದು. ಇಲ್ಲಿ ವರಾಹರೂಪದಿಂದ ಸರ್ವೇಶ್ವರನಾದ ವಿಷ್ಣುವು ಪೂಜ್ಯನಾಗಿರುವನು. ಸ್ವಾಮಿಯ ಪಾದ, ಮುಖ, ಹೃದಯ, ವಕ್ಷಸ್ಥಲ ಮತ್ತು ಪಾರ್ಶ್ವ—ಈ ಸಪ್ತಾಂಗಗಳಲ್ಲಿ ಆಯಾಯ ನಕ್ಷತ್ರಗಳು ಇರುವುವು.

೧೮. ವರಾಹಸ್ವಾಮಿಯ ಸಪ್ತಾಂಗಗಳನ್ನು ಆಶ್ರಯಿಸಿರುವ ನಕ್ಷತ್ರಗಳ ಸ್ಥಾನಗಳನ್ನು ಮುಖ, ಮೂಗಿನ ರಂಧ್ರ, ದಂತ, ಕಂಠ, ಪುಚ್ಛಗಳಿಂದೂ ನಿರ್ಣಯಮಾಡಿರುವರು.

೧೯. ಹೀಗೆ ಮೂರು ಮೂರು ನಕ್ಷತ್ರಗಳು ಆಯಾಯ ದೇಶಗಳನ್ನು ಆಶ್ರಯಿಸಿರುವುವು. ಮುನಿಶ್ರೇಷ್ಠನೇ! ಈ ರೀತಿಯಾಗಿ ನಿನಗೆ ಕೇತುಮಾಲ ಎಂಬ ವರ್ಷಖಂಡವನ್ನು ಹೇಳಿರುವೆನು.

೨೦. ಇನ್ನು ಮುಂದೆ ಉತ್ತರಕುರು ಎಂದು ಪ್ರಸಿದ್ಧವಾದ ದೇಶಗಳನ್ನು ವರ್ಣಿಸುವೆನು. ಅವುಗಳನ್ನು ಕೇಳು. ಉತ್ತರಕುರು ಕ್ಷೇತ್ರದಲ್ಲಿರುವ ವೃಕ್ಷಗಳು ಯಾವಾಗಲೂ ಫಲಪುಷ್ಪಗಳಿಂದ ಕೂಡಿ ಮಧುರಸವನ್ನು ಕೊಡುವುವು.

ವಸ್ತ್ರಾಣಿ ಚ ಪ್ರಸೂಯನ್ತೇ ಫಲೇಷ್ವಾಭರಣಾನಿ ಚ ।
ಸರ್ವಕಾಮಪ್ರದಾಸ್ತೇ ಹಿ ಸರ್ವಕಾಲಫಲಪ್ರದಾಃ ॥೨೧॥

ಭೂಮಿರ್ಮಣಿಮಯೀ ವಾಯುಃ ಸುಗನ್ಧಃ ಸರ್ವದಾಸುಖಃ ।
ಜಾಯನ್ತೇ ಮಾನವಾಸ್ತತ್ರ ದೇವಲೋಕಪರಿಚ್ಯುತಾಃ ॥೨೨॥

ಮಿಥುನಾನಿ ಪ್ರಸೂಯನ್ತೇ ಸಮಕಾಲಸ್ಥಿತಾನಿ ವೈ ।
ಅನ್ಯೋನ್ಯಮನುರಕ್ತಾನಿ ಚಕ್ರವಾಕೋಪಮಾನಿ ಚ ॥೨೩॥

ಚತುರ್ದಶಸಹಸ್ರಾಣಿ ತೇಷಾಂ ಸಾರ್ಧಾನಿ ವೈ ಸ್ಥಿತಿಃ ।
ಚನ್ದ್ರಕಾನ್ತಶ್ಚ ಶೈಲೇನ್ದ್ರಃ ಸೂರ್ಯಕಾನ್ತಸ್ತಥಾಪರಃ ॥೨೪॥

---

೨೧. ಮತ್ತು ಅಲ್ಲಿರುವ ವೃಕ್ಷಗಳು ವಸ್ತ್ರಗಳನ್ನೂ ಆಭರಣಗಳನ್ನೂ ಫಲರೂಪವಾಗಿ ಕೊಡುತ್ತವೆ. ಆದುದರಿಂದ ಆ ವೃಕ್ಷಗಳು ಸರ್ವಕಾಲದಲ್ಲಿ ಸರ್ವಕಾಮಗಳನ್ನೂ ಫಲಿಸುವುವು.

೨೨. ಉತ್ತರಕುರು ವರ್ಷದಲ್ಲಿ ಮಣಿಮಯವಾದ ಭೂಮಿಯು ಇರುವುದು. ಯಾವಾಗಲೂ ಸುಖಕರವೂ, ಸುಗಂಧವೂ ಆದ ಗಾಳಿಯು ಬೀಸುವುದು. ಪುಣ್ಯಕ್ಷಯದಿಂದ ದೇವಲೋಕದಿಂದ ಭ್ರಂಶಹೊಂದಿದವರು ಅಲ್ಲಿ ಮಾನವರಾಗಿ ಜನ್ಮವೆತ್ತುವರು.

೨೩. ಅಂತಹ ಮಾನವಸಂತತಿಯಲ್ಲಿ ಜನಿಸಿದ ಸ್ತ್ರೀಪುರುಷರು ಪರಸ್ಪರ ವಿಯೋಗವಿಲ್ಲದಹಾಗೆ ಸಮಕಾಲದಲ್ಲಿ ಜೀವಿಸಿ ದಾಂಪತ್ಯಧರ್ಮವನ್ನು ಅನುಭವಿಸುವರು. ಅವರು ಚಕ್ರವಾಕಪಕ್ಷಿಗಳಂತೆ ವಿಯೋಗದುಃಖವನ್ನು ಸಹಿಸಲಾರದವರೂ ಮತ್ತು ಪ್ರೇಮಾವೇಶವುಳ್ಳವರೂ ಆಗಿರುವರು.

೨೪. ಅಂತಹ ದಂಪತಿರೂಪರಾದ ಪ್ರಜೆಗಳು ಉತ್ತರಕುರು ಪ್ರದೇಶದಲ್ಲಿ ಹದಿನಾಲ್ಕುಸಹಸ್ರಕ್ಕಿಂತಲೂ ಹೆಚ್ಚು ಸಂಖ್ಯೆಯಿಂದ ಇರುವರು. ಅಲ್ಲಿ ಚಂದ್ರಕಾಂತ, ಸೂರ್ಯಕಾಂತ ಎಂಬ ಎರಡು ಮಹಾಪರ್ವತಗಳು ಇವೆ.

ತಸ್ಮಿನ್ಕುಲಾಚಲೇ ವರ್ಷೇ ತನ್ಮಧ್ಯೇ ಚ ಮಹಾನದೀ ।
ಭದ್ರಸೋಮಾ ಪ್ರಯಾತ್ಯುರ್ವ್ಯಾಂ ಪುಣ್ಯಾಮಲಜಲೌಘಿನೀ ॥೨೫॥

ಸಹಸ್ರಶಸ್ತಥೈವಾನ್ಯಾ ನದ್ಯೋ ವರ್ಷೇಽಪಿ ಚೋತ್ತರೇ ।
ತಥಾನ್ಯಾಃ ಕ್ಷೀರವಾಹಿನ್ಯೋ ಘೃತವಾಹಿನ್ಯ ಏವ ಚ ॥೨೬॥

ದಧ್ನೋ ಹ್ರದಾಸ್ತಥಾ ತತ್ರ ತಥಾನ್ಯೇ ಚಾನುಪರ್ವತಾಃ ।
ಅಮೃತಾಸ್ವಾದಕಲ್ಪಾನಿ ಫಲಾನಿ ವಿವಿಧಾನಿ ಚ ॥೨೭॥

ವನೇಷು ತೇಷು ರಮ್ಯಾಣಿ ಶತಶೋಽಥ ಸಹಸ್ರಶಃ ।
ತತ್ರಾಪಿ ಭಗವಾನ್ವಿಷ್ಣುಃ ಪ್ರಾಕ್ಶಿರಾ ಮತ್ಸ್ಯರೂಪವಾನ್ ॥೨೮॥

---

೨೫. ಆ ವರ್ಷಖಂಡದ ಕುಲಾಚಲದಲ್ಲಿ ಮಧ್ಯಭಾಗದಿಂದ ಒಂದು ಮಹಾನದಿಯು ಹುಟ್ಟಿ ಹರಿಯುವುದು. ನಿರ್ಮಲವಾದ ಜಲಪ್ರವಾಹವುಳ್ಳ ಭದ್ರಸೋಮಾ ಎಂಬ ನಾಮಾಂಕಿತವಾದ ಆ ಪವಿತ್ರನದಿಯು ಪರ್ವತದಿಂದ ಭೂಮಿಯಲ್ಲಿ ಬಂದು ಬೀಳುವುದು.

೨೬. ಉತ್ತರಕುರು ಎಂಬ ಈ ವರ್ಷದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಇತರ ನದಿಗಳು ಹರಿಯುವುವು. ಇವುಗಳಲ್ಲಿ ಕೆಲವು ಹಾಲಿನ ಪ್ರವಾಹದಿಂದಲೂ ಮತ್ತೆ ಕೆಲವು ತುಪ್ಪದ ಪ್ರವಾಹದಿಂದಲೂ ಕೂಡಿರುವುವು.

೨೭. ಮತ್ತು ಕೆಲವೆಡೆಗಳಲ್ಲಿ ಮೊಸರಿನಿಂದ ತುಂಬಿದ ಮಡುಗಳು, ಹಾಗು ಅಲ್ಲಲ್ಲಿ ಚಿಕ್ಕಚಿಕ್ಕ ಬೆಟ್ಟಗಳು ಇರುವುವು. ಇಲ್ಲಿರುವ ವಿವಿಧವಾದ ಫಲಗಳು ಅಮೃತ ಆಸ್ವಾದದಂತೆ ಮಧುರವಾಗಿರುವುವು.

೨೮. ಈ ವರ್ಷಖಂಡದಲ್ಲಿರುವ ವನಗಳಲ್ಲಿ ಶತ–ಸಹಸ್ರ ಮುಂತಾದ ಅನೇಕ ಸಂಖ್ಯೆಯಲ್ಲಿ ಲಭಿಸುವ ಫಲಗಳು ಬಹು ರಮಣೀಯವಾಗಿರುವುವು. ಇಲ್ಲಿ ಮಹಾಮಹಿಮನಾದ ವಿಷ್ಣುವು ಪೂರ್ವದಿಕ್ಕಿನ ಕಡೆಗೆ ಶಿರದಿಂದ ಕೂಡಿರುವ ಮತ್ಸ್ಯರೂಪನಾಗಿ ಇರುವನು.

ವಿಭಕ್ತೋ ನವಧಾ ವಿಪ್ರ ನಕ್ಷತ್ರಾಣಾಂ ತ್ರಯಂ ತ್ರಯಮ್ ।
ದೇಶಾಸ್ತತ್ರಾಪಿ ನವಧಾ ವಿಭಕ್ತಾ ಮುನಿಸತ್ತಮ ॥೨೯॥

ಚನ್ದ್ರದ್ವೀಪಃ ಸಮುದ್ರೇ ಚ ಭದ್ರದ್ವೀಪಸ್ತಥಾಪರಃ ।
ತತ್ರಾಪಿ ಪುಣ್ಯೋ ವಿಖ್ಯಾತಃ ಸಮುದ್ರಾನ್ತರ್ಮಹಾಮುನೇ ॥೩೦॥

ಇತ್ಯೇತತ್ಕಥಿತಂ ಬ್ರಹ್ಮನ್ ಕುರುವರ್ಷಂ ಮಯೋತ್ತರಮ್ ।
ಶೃಣು ಕಿಮ್ಪುರುಷಾದೀನಿ ವರ್ಷಾಣಿ ಗದತೋ ಮಮ ॥೩೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಉತ್ತರಕುರುಕಥನಂ ನಾಮ ಷಟ್ಪಞ್ಚಾಶೋಽಧ್ಯಾಯಃ

---

೨೯. ಎಲೈ ವಿಪ್ರನಾದ ಮುನಿಶ್ರೇಷ್ಠನೇ! ವಿಷ್ಣುವಿನ ಮತ್ಸ್ಯರೂಪವು ಒಂಭತ್ತು ಭಾಗಗಳನ್ನು ಹೊಂದಿರುವುದು. ಪ್ರತ್ಯೇಕಭಾಗದಲ್ಲಿ ಮೂರು ಮೂರು ನಕ್ಷತ್ರಗಳು ಇರುವುವು. ಅದರಂತೆ ಆಯಾಯ ಅವಯವಗಳಲ್ಲಿ ದೇಶಗಳು ಒಂಭತ್ತು ಭಾಗಗಳಾಗಿ ವಿಂಗಡಿಸಲ್ಪಟ್ಟವೆ.

೩೦. ಸಮುದ್ರ ತೀರದಲ್ಲಿ ಚಂದ್ರದ್ವೀಪವೆಂಬ ದ್ವೀಪವು ಪ್ರಸಿದ್ಧವಾಗಿದೆ. ಮಹರ್ಷಿಯೆ! ಸಮುದ್ರ ಮಧ್ಯದಲ್ಲಿ ಭದ್ರದ್ವೀಪವೆಂಬ ದ್ವೀಪವು ಅಲ್ಲಿ ಪ್ರಖ್ಯಾತಿಯನ್ನು ಹೊಂದಿರುವುದು.

೩೧. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ಹೀಗೆ ನನ್ನಿಂದ ನಿನಗೆ ಉತ್ತರಕುರು ವರ್ಷವೆಂಬ ಖಂಡವು ವರ್ಣಿಸಲ್ಪಟ್ಟಿರುವುದು. ಇನ್ನು ಮುಂದೆ ಕಿಂಪುರುಷ ಮುಂತಾದ ವರ್ಷಗಳನ್ನು ಹೇಳುವೆನು. ಅವುಗಳನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತಪಞ್ಚಾಶೋಽಧ್ಯಾಯಃ

(ಭುವನಕೋಶೇ ಕಿಮ್ಪುರುಷಾದಿವರ್ಷನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಯತ್ತು ಕಿಮ್ಪುರುಷಂ ವರ್ಷಂ ತತ್ಪ್ರವಕ್ಷ್ಯಾಮ್ಯಹಂ ದ್ವಿಜ ।
ತತ್ರಾಯುರ್ದಶಸಾಹಸ್ರಂ ಪುರುಷಾಣಾಂ ವಪುಷ್ಮತಾಮ್ ॥೧॥

ಅನಾಮಯಾ ಹ್ಯಶೋಕಾಶ್ಚ ನರಾ ಯತ್ರ ತಥಾ ಸ್ತ್ರಿಯಃ ।
ಪ್ಲಕ್ಷಃ ಖಣ್ಡಶ್ಚ ಯತ್ರೋಕ್ತಃ ಸುಮಹಾನ್ನನ್ದನೋಪಮಃ ॥೨॥

ಐವತ್ತೇಳನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೀಗೆಂದನು :—

೧. ಎಲೈ ದ್ವಿಜವರ್ಯನಾದ ಕ್ರೌಷ್ಟುಕಿಯೇ ! ಈಗ ಕಿಂಪುರುಷವೆಂಬ ವರ್ಷಖಂಡವನ್ನು ವರ್ಣಿಸುವೆನು. ಈ ಖಂಡದಲ್ಲಿ ಜನ್ಮವೆತ್ತಿದ ಪುರುಷರಿಗೆ ಹತ್ತು ಸಹಸ್ರ ವರ್ಷಗಳ ಆಯುಷ್ಯವು ಇರುವುದು.

೨. ಮತ್ತು ಕಿಂಪುರುಷ ವರ್ಷದಲ್ಲಿ ಸ್ತ್ರೀಯರು ಹಾಗು ಪುರುಷರು ವ್ಯಾಧಿ-ಚಿಂತೆಗಳಿಂದ ವಿಮುಕ್ತರಾಗಿರುವರು. ನಂದನವನದಂತೆ ರಮಣೀಯವಾದ ಪ್ಲಕ್ಷ ಎಂಬ ಖಂಡವು ಕಿಂಪುರುಷ ವರ್ಷದಲ್ಲಿರುವುದೆಂದು ಹೇಳಲ್ಪಟ್ಟದೆ.

ತಸ್ಯ ತೇ ವೈ ಫಲರಸಂ ಪಿಬನ್ತಃ ಪುರುಷಾಸ್ಸದಾ ।
ಸ್ಥಿರಯೌವನನಿಷ್ಪನ್ನಾಃ ಸ್ತ್ರಿಯಶ್ಚೋತ್ಪಲಗನ್ಧಿಕಾಃ ॥೩॥

ಅತಃ ಪರಂ ಕಿಮ್ಪುರುಷಾದ್ಧರಿವರ್ಷಂ ಪ್ರಚಕ್ಷತೇ ।
ಮಹಾರಜತಸಂಕಾಶಾ ಜಾಯನ್ತೇ ತತ್ರ ಮಾನವಾಃ ॥೪॥

ದೇವಲೋಕಚ್ಯುತಾಃ ಸರ್ವೇ ದೇವರೂಪಾಶ್ಚ ಸರ್ವಶಃ ।
ಹರಿವರ್ಷೇ ನರಾಃ ಸರ್ವೇ ಪಿಬನ್ತೀಕ್ಷುರಸಂ ಶುಭಮ್ ॥೫॥

ನ ಜರಾ ಬಾಧತೇ ತತ್ರ ನ ಜೀರ್ಯನ್ತೇ ಚ ಕರ್ಹಿಚಿತ್ ।
ತಾವನ್ತಮೇವ ತೇ ಕಾಲೇ ಜೀವನ್ತ್ಯಥ ನಿರಾಮಯಾಃ ॥೬॥

ಮೇರುವರ್ಷಂ ಮಯಾ ಪ್ರೋಕ್ತಂ ಮಧ್ಯಮಂ ಯದಿಲಾವೃತಮ್ ।
ನ ತತ್ರ ಸೂರ್ಯಸ್ತಪತಿ ನ ತೇ ಜೀರ್ಯನ್ತಿ ಮಾನವಾಃ ॥೭॥

---

೩. ಆ ಖಂಡದಲ್ಲಿರುವ ಆಲದ ಮರದ ಫಲರಸವನ್ನು ಪಾನಮಾಡುವ ಪುರುಷರು ಮತ್ತು ಸ್ತ್ರೀಯರು ಯಾವಾಗಲೂ ಸ್ಥಿರವಾದ ತಾರುಣ್ಯವುಳ್ಳವರೂ ಸ್ತ್ರೀಯರು ನೈದಿಲೆಹೂವಿನಂತೆ ಸುಗಂಧವುಳ್ಳವರೂ ಆಗಿರುವರು.

೪. ಕಿಂಪುರುಷ ವರ್ಷದ ಮುಂದೆ ಹರಿವರ್ಷವೆಂಬ ನಾಮಾಂಕಿತವಾದ ವರ್ಷವಿದೆಯೆಂದು ಪ್ರಾಜ್ಞರು ಹೇಳುವರು. ಹರಿವರ್ಷದಲ್ಲಿ ಸುವರ್ಣದಂತೆ ತೇಜಸ್ವಿಗಳಾದ ಮಾನವರು ಜನಿಸುವರು.

೫. ಅಂತಹ ಹರಿವರ್ಷದಲ್ಲಿ ದೇವಲೋಕದಿಂದ ಚ್ಯುತಿಹೊಂದಿ ದೇವಕುಮಾರರಂತೆ ಜನ್ಮವೆತ್ತಿದ ಮಾನವರು ಎಲ್ಲರೂ ಆಸ್ವಾದದಿಂದ ಕೂಡಿದ ಇಕ್ಷುರಸವನ್ನು ಪಾನಮಾಡುವರು.

೬. ಹರಿವರ್ಷದಲ್ಲಿ ವಾಸಮಾಡುವ ನರರನ್ನು ಮುಪ್ಪು ಪೀಡಿಸುವುದಿಲ್ಲ. ಆದುದರಿಂದ ಅವರು ಜೀರ್ಣಾವಸ್ಥೆಯನ್ನು ಎಂದೂ ಹೊಂದುವುದಿಲ್ಲ. ಅವರು ಪೂರ್ಣ ಆಯುಷ್ಯದ ವರೆಗೆ ರೋಗವಿಲ್ಲದವರಾಗಿ ಜೀವಿಸುವರು.

೭. ಮೇರುಪರ್ವತದ ಭಾಗವನ್ನು ಅವಲಂಬಿಸಿದ ಮಧ್ಯಭಾಗದಲ್ಲಿರುವ ಇಲಾವೃತವೆಂಬ ವರ್ಷವು ನನ್ನಿಂದ ಹೇಳಲ್ಪಟ್ಟಿರುವುದು. ಆ ಇಲಾವೃತ ವರ್ಷದಲ್ಲಿ ಸೂರ್ಯನು ತಪಿಸುವುದಿಲ್ಲ. ಹಾಗು ಮಾನವರು ಜೀರ್ಣರಾಗುವುದಿಲ್ಲ.

ಲಭನ್ತೇ ನಾತ್ಮಲಾಭಂ ಚ ರಶ್ಮಯಶ್ಚನ್ದ್ರಸೂರ್ಯಯೋಃ ।
ನಕ್ಷತ್ರಾಣಾಂ ಗ್ರಹಾಣಾಂ ಚ ಮೇರೋಸ್ತತ್ರ ಪರಾ ದ್ಯುತಿಃ ॥೮॥

ಪದ್ಮಪ್ರಭಾ ಪದ್ಮಗನ್ಧಾ ಜಮ್ಬೂಫಲರಸಾಶಿನಃ ।
ಪದ್ಮಪತ್ರಾಯತಾಕ್ಷಾಸ್ತು ಜಾಯನ್ತೇ ತತ್ರ ಮಾನವಾಃ ॥೯॥

ವರ್ಷಾಣಾಂ ತು ಸಹಸ್ರಾಣಿ ತತ್ರಾಸ್ಯಾಯುಸ್ತ್ರಯೋದಶ ।
ಶರಾವಾಕಾರಸಂಸ್ಥಾರೋ ಮೇರುಮಧ್ಯೇ ಇಲಾವೃತೇ ॥೧೦॥

ಮೇರುಸ್ತತ್ರ ಮಹಾಶೈಲಸ್ತದಾಖ್ಯಾತಮಿಲಾವೃತಮ್ ।
ರಮ್ಯಕಂ ವರ್ಷಮಸ್ಮಾಚ್ಚ ಕಥಯಿಷ್ಯೇ ನಿಬೋಧ ತಮ್ ॥೧೧॥

---

೮. ಮತ್ತು ಮೇರುಪರ್ವತದ ತೇಜಸ್ಸಿನಿಂದ ಚಂದ್ರ-ಸೂರ್ಯರ ಕಿರಣಗಳು ಮುಂಕಾಗಿ ಅಸ್ತಿತ್ವವನ್ನು ಹೊಂದುವಂತೆ ಇಲ್ಲ. ಹಾಗು ನಕ್ಷತ್ರ-ಗ್ರಹಗಳ ತೇಜಸ್ಸು ಪ್ರಕಾಶಿಸುವುದಿಲ್ಲ. ಮೇರುಗಿರಿಯ ಪ್ರಭೆಯು ಅತಿಶಯವಾಗಿರುವುದು.

೯. ಇಲಾವೃತ ವರ್ಷದಲ್ಲಿ ಮಾನವರು ಪದ್ಮದಂತೆ ಪ್ರಭೆಯುಳ್ಳವರೂ, ಪದ್ಮದಂತೆ ಸುಗಂಧವುಳ್ಳವರೂ, ಪದ್ಮದ ದಳದಂತೆ ದೀರ್ಘವಾದ ಕಣ್ಣುಗಳಿಂದ ಕೂಡಿದವರೂ ಮತ್ತು ನೇರಳೆ ಹಣ್ಣಿನ ರಸವನ್ನು ಪಾನಮಾಡುವವರೂ ಆಗಿರುವರು.

೧೦. ಅಲ್ಲಿ ವಾಸಮಾಡುವ ಮಾನವರಿಗೆ ಹದಿಮೂರು ಸಹಸ್ರ ವರ್ಷಗಳಷ್ಟು ಆಯುಷ್ಯವಿರುವುದು. ಮೇರುಪರ್ವತದ ಮಧ್ಯದಲ್ಲಿರುವ ಇಲಾವೃತವರ್ಷದಲ್ಲಿ ಶರಾವದ ಆಕಾರದಿಂದ ಪರ್ವತವು ಭಾಸವಾಗುವುದು.

೧೧. ಇಲಾವೃತವರ್ಷದಲ್ಲಿ ಮಹಾಶೈಲವಾದ ಮೇರುಪರ್ವತವು ಭಾಸಿಸುವುದರಿಂದ ಅದರ ನಾಮಾಂಕನದಿಂದ ಈ ವರ್ಷವು ಮೇರುವರ್ಷವೆಂದು ಖ್ಯಾತಿಯನ್ನು ಗಳಿಸಿದೆ. ಅದರ ಮುಂದೆ ಇರುವ ರಮ್ಯಕವರ್ಷವನ್ನು ಹೇಳುವೆನು; ಅದನ್ನು ಕೇಳು.

ವೃಕ್ಷಸ್ತತ್ರಾಪಿ ಚೋತ್ತುಙ್ಗೋ ನ್ಯಗ್ರೋಧೋ ಹರಿತಚ್ಛದಃ ।
ತಸ್ಯಾಪಿ ತೇ ಫಲರಸಂ ಪಿಬನ್ತೋ ವರ್ತಯನ್ತಿ ವೈ ॥೧೨॥

ವರ್ಷಾಯುತಾಯುಷಸ್ತತ್ರ ನರಾಸ್ತತ್ಫಲಭೋಗಿನಃ ।
ರತಿಪ್ರಧಾನವಿಮಲಾ ಜರಾದೌರ್ಗನ್ಧ್ಯವರ್ಜಿತಾಃ ॥೧೩॥

ತಸ್ಮಾದಥೋತ್ತರಂ ವರ್ಷಂ ನಾಮ್ನಾಖ್ಯಾತಂ ಹಿರಣ್ಮಯಮ್ ।
ಹಿರಣ್ವತೀ ನದೀ ಯತ್ರ ಪ್ರಭೂತಕಮಲೋಜ್ವಲಾ ॥೧೪॥

ಮಹಾಬಲಾಃ ಸತೇಜಸ್ಕಾ ಜಾಯನ್ತೇ ತತ್ರ ಮಾನವಾಃ ।
ಮಹಾಕಾಯಾ ಮಹಾಸತ್ತ್ವಾ ಧನಿನಃ ಪ್ರಿಯದರ್ಶನಾಃ ॥೧೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭುವನಕೋಶವರ್ಣನಂ
ನಾಮ ಸಪ್ತಪಞ್ಚಾಶೋಽಧ್ಯಾಯಃ

---

೧೨. ರಮ್ಯಕವರ್ಷದಲ್ಲಿಯೂ ಹಸುರುಬಣ್ಣದ ಎಲೆಗಳಿಂದ ಕೂಡಿದ ಉನ್ನತವಾದ ಒಂದು ಆಲದಮರವಿರುವುದು. ಅಲ್ಲಿರುವ ಮಾನವರು ಅದರ ಫಲರಸವನ್ನು ಪಾನಮಾಡುತ್ತ ಜೀವಿಸುತ್ತಿರುವರು.

೧೩. ರಮ್ಯಕವರ್ಷದಲ್ಲಿರುವ ಮಾನವರು ಅಲ್ಲಿರುವ ವಟವೃಕ್ಷದ ಫಲಗಳನ್ನು ಭುಂಜಿಸುತ್ತ ಅದರ ಪ್ರಭಾವದಿಂದ ಹತ್ತುಸಹಸ್ರವರ್ಷ ಆಯುಷ್ಯ-ವುಳ್ಳವರೂ, ರತಿಸುಖದ ಆನಂದಿಗಳೂ ಮತ್ತು ಮುಪ್ಪು-ದುರ್ಗಂಧಗಳಿಂದ ವರ್ಜಿತರೂ ಆಗಿರುವರು.

೧೪. ಆ ರಮ್ಯಕವೆಂಬ ವರ್ಷಖಂಡದಿಂದ ಉತ್ತರದಲ್ಲಿ ಹಿರಣ್ಮಯವೆಂಬ ನಾಮಾಂಕನದಿಂದ ಪ್ರಖ್ಯಾತವಾದ ವರ್ಷವಿರುವುದು. ಆ ಹಿರಣ್ಮಯ ವರ್ಷದಲ್ಲಿ ಹೆಚ್ಚಾದ ತಾವರೆಹೂಗಳಿಂದ ರಾಜಿಸುವ ಹಿರಣ್ವತೀ ಎಂಬ ನದಿಯು ಹರಿಯು-ತ್ತಿರುವುದು.

೧೫. ಆ ವರ್ಷದಲ್ಲಿ ಮಹಾಬಲಿಷ್ಠರೂ, ತೇಜಸ್ವಿಗಳೂ, ಮಹಾ-ಕಾಯರೂ, ಅಧಿಕವಾದ ಧೈರ್ಯವುಳ್ಳವರೂ, ಧನಿಕರೂ ಮತ್ತು ಆಸೆಯನ್ನು ಹುಟ್ಟಿಸುವ ದರ್ಶನವುಳ್ಳವರೂ ಆದ ಮಾನವರು ಜನಿಸುವರು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತೇಳನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಪಞ್ಚಾಶತ್ತಮೋಽಧ್ಯಾಯಃ

ಕ್ರೌಷ್ಟುಕಿರುವಾಚ :—

ಕಥಿತಂ ಭವತಾ ಸಮ್ಯಗ್ಯತ್ಪೃಷ್ಟೋಽಸಿ ಮಹಾಮುನೇ ।
ಭೂಸಮುದ್ರಾದಿಸಂಸ್ಥಾನಂ ಪ್ರಮಾಣಾನಿ ತಥಾ ಗ್ರಹಾಃ ||೧||

ತೇಷಾಂ ಚೈವ ಪ್ರಮಾಣಂ ಯನ್ನಕ್ಷತ್ರಾಣಾಂ ಚ ಸಂಸ್ಥಿತಿಃ ।
ಭೂರಾದಯಸ್ತಥಾ ಲೋಕಾಃ ಪಾತಾಲಾನ್ಯಖಿಲಾನ್ಯಪಿ ||೨||

ಸ್ವಾಯಮ್ಭುವಂ ತಥಾಖ್ಯಾತಂ ಮುನೇ ಮನ್ವನ್ತರಂ ಮಮ ।
ತದನ್ತರಾಣ್ಯಹಂ ಶ್ರೋತುಮಿಚ್ಛೇ ಮನ್ವನ್ತರಾಣಿ ವೈ ||೩||

ಐವತ್ತೆಂಟನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆಂದನು :—

೧. ಮಾರ್ಕಂಡೇಯ ಮಹಾಮುನಿಯೇ! ಭೂಮಿ, ಸಮುದ್ರಗಳ ಸನ್ನಿವೇಶ—ಇವುಗಳ ಪರಿಮಾಣ-ಗ್ರಹಮಂಡಲ—ಮುಂತಾದ ವಿಷಯಗಳಲ್ಲಿ ನನ್ನಿಂದ ಪ್ರಶ್ನಿಸಲ್ಪಟ್ಟಿರುವ ಹಾಗೆಯೇ ನಿನ್ನಿಂದ ಅದೆಲ್ಲವೂ ನನಗೆ ಚನ್ನಾಗಿ ಹೇಳಲ್ಪಟ್ಟಿರುವುದು.

೨. ಮತ್ತು ಗ್ರಹಮಂಡಲದ ಪರಿಮಾಣ, ನಕ್ಷತ್ರಗಳ ಸ್ಥಿತಿ, ಭೂರ್ಲೋಕ ಮುಂತಾದ ಲೋಕಗಳು, ಹಾಗು ಎಲ್ಲ ಪಾತಾಲಲೋಕಗಳು ನಿನ್ನಿಂದ ಕ್ರಮವಾಗಿ ವರ್ಣಿಸಲ್ಪಟ್ಟಿರುವುವು.

೩. ಮಾರ್ಕಂಡೇಯ ಮುನಿಯೇ! ಹಾಗು ಸ್ವಾಯಂಭುವವೆಂಬ ಮನ್ವಂತರವು ನನಗೆ ನಿನ್ನಿಂದ ಉಪದೇಶಿಸಲ್ಪಟ್ಟಿದೆ. ಇನ್ನುಮುಂದೆ ಇತರ ಮನ್ವಂತರಗಳನ್ನು ಕೇಳಲು ಕೂತೂಹಲಿಯಾಗಿರುವೆನು.

ಮನ್ವನ್ತರಾಧಿಪಾನ್ದೇವಾನೃಷೀಂಸ್ತತ್ತನಯಾನ್ನೃಪಾನ್ ||೪||

ಮಾರ್ಕಣ್ಡೇಯ ಉವಾಚ :—

ಮನ್ವನ್ತರಂ ಮಯಾಖ್ಯಾತಂ ತವ ಸ್ವಾಯಮ್ಭುವಂ ಚ ಯತ್ ।
ಸ್ವಾರೋಚಿಷಾಖ್ಯಮನ್ಯತ್ತು ಶೃಣು ತಸ್ಮಾದನನ್ತರಮ್ ||೫||

ಕಶ್ಚಿದ್ದ್ವಿಜಾತಿಪ್ರವರಃ ಪುರೇಽಭೂದರುಣಾಸ್ಪದೇ ।
ವರುಣಾಯಾಸ್ತಟೇ ವಿಪ್ರೋ ರೂಪೇಣಾತ್ಯಶ್ವಿನಾವಪಿ ||೬||

ಮೃದುಸ್ವಭಾವಃ ಸದ್ವೃತ್ತೋ ವೇದವೇದಾಙ್ಗಪಾರಗಃ ।
ಸದಾತಿಥಿಪ್ರಿಯೋ ರಾತ್ರಾವಾಗತಾನಾಂ ಸಮಾಶ್ರಯಃ ||೭||

---

೪. ಮತ್ತು ಇತರ ಮನ್ವಂತರ, ಮನ್ವಂತರಗಳ ಅಧಿಪತಿ, ದೇವತೆ, ಋಷಿ, ರಾಜ, ರಾಜಪುತ್ರ ಮುಂತಾದ ಮನ್ವಂತರಗಳ ವಿಶಿಷ್ಟ ವ್ಯಕ್ತಿಗಳನ್ನು ಕೇಳಬೇಕೆಂದಿರುವೆನು.

ಮಾರ್ಕಂಡೇಯಮುನಿಯು ಇಂತೆಂದನು :—

೫. ಎಲೈ ಕ್ರೌಷ್ಟುಕಿಯೇ ! ನನ್ನಿಂದ ನಿನಗೆ ಸ್ವಾಯಂಭುವ ಮನ್ವಂತರವು ಹೇಳಲ್ಪಟ್ಟಿರುವುದಲ್ಲವೆ ! ಈಗ ಅದರ ಮುಂದಿನ ಸ್ವಾರೋಚಿಷವೆಂಬ ಮತ್ತೊಂದು ಮನ್ವಂತರವನ್ನು ಹೇಳುವೆನು, ಅದನ್ನು ಕೇಳು.

೬. ವರುಣಾನದಿಯ ತೀರದಲ್ಲಿರುವ ಅರುಣ ಎಂಬ ನಗರದಲ್ಲಿ ದ್ವಿಜರಲ್ಲಿ ಶ್ರೇಷ್ಠನೆನಿಸಿರುವವನೂ, ರೂಪದಿಂದ ಅಶ್ವಿನೀದೇವತೆಗಳನ್ನು ಮೀರಿಸಿದವನೂ ಆದ ಒಬ್ಬ ವಿಪ್ರನು ವಾಸಮಾಡಿಕೊಂಡಿದ್ದನು.

೭. ಆ ವಿಪ್ರನು ಮೃದುವಾದ ಸ್ವಭಾವವುಳ್ಳವನೂ, ಸದ್ಾಚಾರವಂತನೂ, ವೇದ-ವೇದಾಂಗಗಳಲ್ಲಿ ಪಾರಂಗತನೂ, ಅತಿಥಿಸತ್ಕಾರದಲ್ಲಿ ಪ್ರೀತಿಯುಳ್ಳವನೂ ಮತ್ತು ರಾತ್ರಿವೇಳೆಯಲ್ಲಿ ಬಂದ ಅತಿಥಿಗಳಿಗೆ ಯಾವಾಗಲೂ ಆಶ್ರಯದಾತನೂ ಆಗಿದ್ದನು.

ತಸ್ಯ ಬುದ್ಧಿರಿಯಂ ತ್ವಾಸೀದಹಂ ಪಶ್ಯೇ ವಸುನ್ಧರಾಮ್ ।
ಅತಿರಮ್ಯವನೋದ್ಯಾನಾಂ ನಾನಾನಗರಶೋಭಿತಾಮ್ ॥೮॥

ಅಥಾಗತೋಽತಿಥಿಃ ಕಶ್ಚಿತ್ಕದಾಚಿತ್ತಸ್ಯ ವೇಶ್ಮನಿ ।
ನಾನೌಷಧಿಪ್ರಭಾವಜ್ಞೋ ಮನ್ತ್ರವಿದ್ಯಾವಿಶಾರದಃ ॥೯॥

ಅಭ್ಯರ್ಥಿತಸ್ತು ತೇನಾಸೌ ಶ್ರದ್ಧಾಪೂತೇನ ಚೇತಸಾ ।
ತಸ್ಯಾಚಖ್ಯೌ ಸ ದೇಶಾಂಶ್ಚ ರಮ್ಯಾಣಿ ನಗರಾಣಿ ಚ ॥೧೦॥

ನದೀವನಾನಿ ಶೈಲಾಂಶ್ಚ ಪುಣ್ಯಾನ್ಯಾಯತನಾನಿ ಚ ॥೧೧॥

ಸ ತತೋ ವಿಸ್ಮಯಾವಿಷ್ಟಃ ಪ್ರಾಹ ತಂ ದ್ವಿಜಸತ್ತಮಮ್ ।
ಅನೇಕದೇಶದರ್ಶಿತ್ವೇನಾತಿಶ್ರಮಸಮನ್ವಿತಃ ॥೧೨॥

---

೮. ಆದರೆ ಆ ವಿಪ್ರನಿಗೆ "ಅತ್ಯಂತ ರಮಣೀಯವಾದ ವನ-ಉದ್ಯಾನ-ಗಳಿಂದ ಕೂಡಿರುವುದೂ, ಅನೇಕ ನಗರಗಳಿಂದ ಶೋಭಿಸಲ್ಪಟ್ಟಿರುವುದೂ ಆದ ಭೂಮಿಯನ್ನು ಸಂಪೂರ್ಣವಾಗಿ ನಾನು ನೋಡಬೇಕು" ಎಂಬ ಬುದ್ಧಿಯು ಉಂಟಾಯಿತು.

೯. ಹೀಗಿರಲು ಒಂದು ಸಮಯದಲ್ಲಿ ಅವನ ಮನೆಗೆ ಒಬ್ಬ ಅತಿಥಿಯು ಬಂದನು. ಆ ಅತಿಥಿಯು ಅನೇಕ ಔಷಧಗಳ ಪ್ರಭಾವವನ್ನು ಅರಿತವನೂ ಮತ್ತು ಮಂತ್ರವಿದ್ಯೆಯಲ್ಲಿ ವಿಶಾರದನೂ ಆಗಿದ್ದನು.

೧೦. ಆ ಗೃಹಸ್ಥ ವಿಪ್ರನು ಶ್ರದ್ಧೆಯಿಂದ ಪವಿತ್ರವಾದ ಅಂತರಂಗದಿಂದ ಅತಿಥಿಯನ್ನು ಪ್ರಾರ್ಥಿಸಿಕೊಂಡನು. ಆಗ ಅತಿಥಿಯು ಗೃಹಸ್ಥನಿಗೆ ಭೂಮಿಯ-ಲ್ಲಿರುವ ಅನೇಕ ದೇಶಗಳನ್ನೂ, ರಮ್ಯವಾದ ನಗರಗಳನ್ನೂ ವರ್ಣಿಸಿದನು.

೧೧. ಮತ್ತು ನದಿ, ವನ, ಪರ್ವತ, ಪುಣ್ಯಕರವಾದ ಆಲಯಗಳು—ಮುಂತಾದುದನ್ನು ಹೇಳಿದನು. ಭೂಮಿಯನ್ನೆಲ್ಲ ನೋಡಬೇಕೆಂದು ಆಶೆಯಿಂದ ಕೂಡಿರುವ ಗೃಹಸ್ಥನನ್ನು ವರ್ಣನೆಯಿಂದ ಆಶ್ಚರ್ಯಗೊಳಿಸಿದನು.

೧೨. ಆಗ ವಿಸ್ಮಯದಿಂದ ಕೂಡಿದ ಗೃಹಸ್ಥನು ವಿಪ್ರೋತ್ತಮನಾದ ಅತಿಥಿಯನ್ನು ಕುರಿತು ಹೇಳಿದನು. ಎಲೈ ಅತಿಥಿಯೇ! ನೀನು ಅನೇಕದೇಶ-ಗಳನ್ನು ನೋಡಿ ಬಂದುದರಿಂದ ಹೆಚ್ಚಾದ ಶ್ರಮವನ್ನು ಹೊಂದಿರಬಹುದು.

ತ್ವಂ ನಾತಿವೃದ್ಧೋ ವಯಸಾ ನಾತಿವೃತ್ತಶ್ಚ ಯೌವನಾತ್ ।
ಕಥಮಲ್ಪೇನ ಕಾಲೇನ ಪೃಥಿವೀಮಟಸಿ ದ್ವಿಜ ॥೧೩॥

ಬ್ರಾಹ್ಮಣ ಉವಾಚ :—

ಮನ್ತ್ರೌಷಧಿಪ್ರಭಾವೇಣ ವಿಪ್ರಾಪ್ರತಿಹತಾ ಗತಿಃ ।
ಯೋಜನಾನಾಂ ಸಹಸ್ರಂ ಹಿ ದಿನಾರ್ಧೇನ ವ್ರಜಾಮ್ಯಹಮ್ ॥೧೪॥

ಮಾರ್ಕಣ್ಡೇಯ ಉವಾಚ :—

ತತಃ ಸ ವಿಪ್ರಸ್ತಂ ಭೂಯಃ ಪ್ರತ್ಯುವಾಚೇದಮಾದರಾತ್ ।
ಶ್ರದ್ದಧಾನೋ ವಚಸ್ತಸ್ಯ ಬ್ರಾಹ್ಮಣಸ್ಯ ವಿಪಶ್ಚಿತಃ ॥೧೫॥

ಮಮ ಪ್ರಸಾದಂ ಭಗವನ್ಕುರು ಮನ್ತ್ರಪ್ರಭಾವಜಮ್ ।
ದ್ರಷ್ಟುಮೇತಾಂ ಮಮ ಮಹೀಮತೀವೇಚ್ಛಾ ಪ್ರವರ್ತತೇ ॥೧೬॥

---

೧೩. ಆದರೆ ವಯಸ್ಸಿನಲ್ಲಿ ನೀನು ಅಷ್ಟೊಂದು ವೃದ್ಧನಾಗಿಲ್ಲ. ಇನ್ನೂ ತಾರುಣ್ಯವನ್ನು ಪೂರ್ತಿಯಾಗಿ ಕಳೆದುಕೊಂಡವನಲ್ಲ. ದ್ವಿಜನೇ! ಆದರೂ ಅಲ್ಪಕಾಲದಲ್ಲಿಯೇ ನೀನು ಸಮಸ್ತ ಭೂಮಿಯಲ್ಲಿ ಹೇಗೆ ಸಂಚಾರ ಮಾಡಿರುವೆ ?

ಅತಿಥಿಯು ಹೀಗೆಂದು ಹೇಳಿದನು :—

೧೪. ಎಲೈ ವಿಪ್ರನೇ! ಮಂತ್ರ-ಔಷಧಿಗಳ ಪ್ರಭಾವದಿಂದ ನನಗೆ ಎಲ್ಲೆಲ್ಲಿಯೂ ಸಂಚಾರಕ್ಕೆ ತಡೆಯಾಗುವುದಿಲ್ಲ. ನಾನು ಅರ್ಧದಿನದಲ್ಲಿ ಒಂದು ಸಹಸ್ರಯೋಜನಗಳಷ್ಟು ದೂರ ನಡೆಯಬಲ್ಲೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೫. ತರುವಾಯ ಗೃಹಸ್ಥವಿಪ್ರನು ಜ್ಞಾನಿಯಾದ ಆ ಅತಿಥಿ ಬ್ರಾಹ್ಮಣನ ಮಾತನ್ನು ನಂಬಿಕೆಯಿಂದ ಕೇಳಿ ಮತ್ತೆ ಆ ಅತಿಥಿಯನ್ನು ಕುರಿತು ಆದರದಿಂದ ಮಾತನಾಡಿದನು.

೧೬. ಪೂಜ್ಯನಾದ ಅತಿಥಿಯೇ! ನೀನು ನನ್ನಲ್ಲಿ ಮಂತ್ರಪ್ರಭಾವದಿಂದ ಲಭಿಸುವ ಅನುಗ್ರಹವನ್ನು ಉಂಟುಮಾಡು. ನನಗೆ ಈ ಭೂಮಂಡಲವನ್ನು ನೋಡಬೇಕೆಂಬ ಮಹತ್ತಾದ ಆಶೆಯಿರುವುದು.

ಪ್ರಾದಾತ್ಸ ಬ್ರಾಹ್ಮಣಸ್ತಸ್ಮೈ ಪಾದಲೇಪಮುದಾರಧೀಃ ।
ಅಭಿಮನ್ತ್ರಯಾಮಾಸ ದಿಶಂ ತೇನಾಖ್ಯಾತಾಂ ಚ ಯತ್ನತಃ ॥೧೭॥

ತೇನಾನುಲಿಪ್ತಪಾದೋಽಥ ಸ ದ್ವಿಜೋ ದ್ವಿಜಸತ್ತಮ ।
ಹಿಮವನ್ತಮಗಾದ್ದ್ರಷ್ಟುಂ ನಾನಾಪ್ರಸ್ರವಣಾನ್ವಿತಮ್ ॥೧೮॥

ಸಹಸ್ರಂ ಯೋಜನಾನಾಂ ಹಿ ದಿನಾರ್ಧೇನ ವ್ರಜಾಮಿ ಯತ್ ।
ಆಯಾಸ್ಯಾಮೀತಿ ಸಞ್ಚಿನ್ತ್ಯ ತದರ್ಧೇನಾಪರೇಣ ಹಿ ॥೧೯॥

ಸಮ್ಪ್ರಾಪ್ತೋ ಹಿಮವತ್ಪೃಷ್ಠಂ ನಾತಿಶ್ರಾನ್ತತನುರ್ದ್ವಿಜ ।
ವಿಚಚಾರ ತತಸ್ತತ್ರ ತುಹಿನಾಚಲಭೂತಲೇ ॥೨೦॥

---

೧೭. ಉದಾರವಾದ ಬುದ್ಧಿಯುಳ್ಳ ಆ ಅತಿಥಿಬ್ರಾಹ್ಮಣನು ಗೃಹಸ್ಥನಿಗೆ ಪಾದಸಿದ್ಧಿಯನ್ನು ಕೊಡುವ ಒಂದು ಲೇಪನದ್ರವ್ಯವನ್ನು ಕೊಟ್ಟನು. ಮತ್ತು ಗೃಹಸ್ಥನು ಕೇಳಿಕೊಂಡಿರುವ ದಿಕ್ಕಿಗೆ ತಡೆಯಿಲ್ಲದೆ ಹೋಗುವಹಾಗೆ ಅಭಿಮಂತ್ರಣ ಮಾಡಿದನು.

೧೮. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಔಷಧಲೇಪದಿಂದ ಕೂಡಿದ ಪಾದವುಳ್ಳ ಗೃಹಸ್ಥವಿಪ್ರನು ಅನೇಕ ಕಾಡು ನದೀ ಪ್ರವಾಹಗಳಿಂದ ಕೂಡಿದ ಹಿಮಾಲಯಪರ್ವತವನ್ನು ನೋಡಲು ಹೊರಟನು.

೧೯. ಆಗ ಅವನು ಮನಸ್ಸಿನಲ್ಲಿ ಹೀಗೆಂದು ಯೋಚಿಸಿಕೊಂಡನು :— ನಾನು ಅರ್ಧಹಗಲಿನಲ್ಲಿ ಒಂದುಸಹಸ್ರ ಯೋಜನಗಳಷ್ಟು ದೂರ ನಡೆಯ-ಬಲ್ಲೆನು, ಇನ್ನುಳಿದ ಅರ್ಧಹಗಲಿನಲ್ಲಿ ಹಿಂದಕ್ಕೆ ಬರುವೆನು.

೨೦. ಹೀಗೆಂದು ಚಿಂತಿಸಿಕೊಂಡು ಹೊರಟ ವಿಪ್ರನು ಹೆಚ್ಚಾಗಿ ಶ್ರಮವಿಲ್ಲದ ಹಾಗೆ ಹಿಮಾಲಯ ಪರ್ವತದ ಮೇಲುಭಾಗಕ್ಕೆ ಬಂದು ಸೇರಿದನು. ಕ್ರೌಷ್ಟುಕಿಯೇ! ತರುವಾಯ ಆ ಹಿಮವತ್ಪರ್ವತದ ಆಯಾಯ ಪ್ರದೇಶಗಳಲ್ಲಿ ಸಂಚಾರ ಮಾಡಿದನು.

ಪಾದಾಕ್ರಾನ್ತೇನ ತಸ್ಯಾಥ ತುಹಿನೇನ ವಿಲೀಯತಾ ।
ಪ್ರಕ್ಷಾಲಿತಃ ಪಾದಲೇಪಃ ಪರಮೌಷಧಿಸಮ್ಭವಃ ॥೨೦॥

ತತೋ ಜಡಗತಿಃ ಸೋಽಥ ಇತಶ್ಚೇತಶ್ಚ ಪರ್ಯಟನ್ ।
ದದರ್ಶಾತಿಮನೋಜ್ಞಾನಿ ಸಾನೂನಿ ಹಿಮಭೂಭೃತಃ ॥೨೨॥

ಸಿದ್ಧಗನ್ಧರ್ವಜುಷ್ಟಾನಿ ಕಿನ್ನರಾಭಿರತಾನಿ ಚ ।
ಕ್ರೀಡಾವಿಹಾರರಮ್ಯಾಣಿ ದೇವಾದೀನಾಮಿತಸ್ತತಃ ॥೨೩॥

ದಿವ್ಯಾಪ್ಸರೋಗಣಶತೈರಾಕೀರ್ಣಾನ್ಯವಲೋಕಯನ್ ।
ನಾತೃಪ್ಯತ ದ್ವಿಜಶ್ರೇಷ್ಠಃ ಪ್ರೋದ್ಭೂತಪುಲಕೋ ಮುನೇ ॥೨೪॥

---

೨೧. ಆಗ ಅವನ ಕಾಲುಗಳಲ್ಲಿ ಅಂಟಿಕೊಂಡು ಕರಗಿಹೋಗುತ್ತಿದ್ದ ಮಂಜಿನಿಂದ ಉತ್ತಮವಾದ ಔಷಧದ ಪ್ರಭಾವದಿಂದ ಕೂಡಿದ ಆ ಪಾದಲೇಪನವು ತೊಳೆದುಹೋಯಿತು.

೨೨. ತರುವಾಯ ಮಂದವಾದ ಗತಿಯುಳ್ಳ ಆ ವಿಪ್ರನು ಒಂದೆಡೆ-ಯಿಂದ ಮತ್ತೊಂದೆಡೆಗೆ ಹೋಗುತ್ತ ಬಹು ರಮಣೀಯವಾದ ಹಿಮಾಲಯ ಪರ್ವತದ ತಪ್ಪಲುಗಳನ್ನು ನೋಡಿದನು.

೨೩. ಸಿದ್ಧ-ಗಂಧರ್ವರಿಂದ ಆಶ್ರಯಿಸಲ್ಪಟ್ಟಿರುವುದೂ, ಕಿನ್ನರರಿಂದ ಪ್ರೀತಿಸಲ್ಪಟ್ಟಿರುವುದೂ, ಮತ್ತು ದೇವತೆ ಮುಂತಾದವರಿಗೆ ಅಲ್ಲಲ್ಲಿ ಕ್ರೀಡಾ-ವಿನೋದಗಳಿಗೆ ಆಸ್ಪದವಾಗಿರುವುದೂ ಆದ ಪರ್ವತಪ್ರದೇಶಗಳನ್ನು ನೋಡಿದನು.

೨೪. ಎಲೈ ಕ್ರೌಷ್ಟುಕಿಯೇ! ನೂರಾರು ಮಂದಿ ದೇವಲೋಕದ ಅಪ್ಸರಾಂಗನೆಯರ ಗುಂಪಿನಿಂದ ಕೂಡಿರುವ ತಪ್ಪಲುಗಳನ್ನು ನೋಡುತ್ತಿದ್ದ ಆ ದ್ವಿಜೋತ್ತಮನು ಆವಿರ್ಭವಿಸಿದ ರೋಮಾಂಚವುಳ್ಳವನಾಗಿ ಎಷ್ಟು ನೋಡಿದರೂ ತೃಪ್ತಿಯಿಲ್ಲದವನಾದನು.

ಕ್ವಚಿತ್ಪ್ರಸ್ರವಣಾದ್ಭ್ರಷ್ಟಜಲಪಾತಮನೋರಮಮ್ ।
ಪ್ರನೃತ್ಯಚ್ಛಿಖಿಕೇಕಾಭಿರನ್ಯತಶ್ಚ ನಿನಾದಿತಮ್ ॥೨೫॥

ದಾತ್ಯೂಹಕೋಯಷ್ಟಿಕಾದ್ಯೈಃ ಕ್ವಚಿಚ್ಚಾತಿಮನೋಹರೈಃ ।
ಪುಂಸ್ಕೋಕಿಲಕಲಾಲಾಪೈಃ ಶ್ರುತಿಹಾರಿಭಿರನ್ವಿತಮ್ ॥೨೬॥

ಪ್ರಫುಲ್ಲತರುಗನ್ಧೇನ ವಾಸಿತಾನಿಲವೀಜಿತಮ್ ।
ಮುದಾ ಯುಕ್ತಃ ಸ ದದೃಶೇ ಹಿಮವನ್ತಂ ಮಹಾಗಿರಿಮ್ ॥೨೭॥

ದೃಷ್ಟ್ವಾ ಚೈತಂ ದ್ವಿಜಸುತೋ ಹಿಮವನ್ತಂ ಮಹಾಚಲಮ್ ।
ಶ್ವೋ ದ್ರಕ್ಷ್ಯಾಮೀತಿ ಸಞ್ಚಿನ್ತ್ಯ ಮತಿಂ ಚಕ್ರೇ ಗೃಹಂ ಪ್ರತಿ ॥೨೮॥

---

೨೫. ಒಂದು ಕಡೆಯಲ್ಲಿ ಜಲಾಶಯದಿಂದ ಕೆಳಗೆ ಧುಮುಕುತ್ತಿರುವ ಜಲಪಾತದಿಂದ ರಮ್ಯವಾದ ಪ್ರದೇಶವನ್ನೂ ಮತ್ತೊಂದು ಕಡೆಯಲ್ಲಿ ಕುಣಿದಾಡುವ ನವಿಲುಗಳ ಕೇಕೆಗಳ ಧ್ವನಿಯಿಂದ ಕೂಡಿರುವ ಪ್ರದೇಶವನ್ನೂ ನೋಡಿ ಆನಂದಿಸಿದನು.

೨೬. ಕೆಲವೆಡೆಗಳಲ್ಲಿ ಭರತಪಕ್ಷಿ, ಟಿಟ್ಟಿಭಪಕ್ಷಿ—ಮುಂತಾದ ರಮಣೀಯ ಪಕ್ಷಿಗಳಿಂದ ರಮಣೀಯವೂ ಮತ್ತೆ ಕೆಲವೆಡೆಗಳಲ್ಲಿ ಕೋಗಿಲೆಗಳ ಕಿವಿಗೆ ಇಂಪಾದ ಮತ್ತು ಮಧುರವಾದ ಧ್ವನಿಗಳಿಂದ ತುಂಬಿರುವುದೂ ಆದ ಸ್ಥಳವನ್ನು ನೋಡಿದನು.

೨೭. ಮತ್ತು ಅರಳಿದ ಹೂಗಳಿಂದ ಕೂಡಿದ ಲತಾ-ವೃಕ್ಷಗಳ ಸುಗಂಧದಿಂದ ಕೂಡಿದ ಗಾಳಿಯು ಬೀಸುತ್ತಿದ್ದ ಮಹಾಗಿರಿಯಾದ ಹಿಮಾಲಯವನ್ನು ಅತ್ಯಾನಂದದಿಂದ ಕೂಡಿ ಆ ವಿಪ್ರನು ನೋಡಿದನು.

೨೮. ಆ ದ್ವಿಜಪುತ್ರನು ಮಹಾಚಲವಾದ ಹಿಮಾಲಯವನ್ನು ಈ ರೀತಿಯಾಗಿ ನೋಡಿ ಆನಂದಪಟ್ಟು ಇನ್ನು ಉಳಿದ ಭಾಗವನ್ನು ನಾಳೆ ನೋಡುವೆನೆಂದು ಯೋಚಿಸಿಕೊಂಡು ಆಗ ಮನೆಗೆ ಹೋಗಲು ಇಷ್ಟಪಟ್ಟನು.

ವಿಭ್ರಷ್ಟಪಾದಲೇಪೋಽಥ ಚಿರೇಣ ಜಡಿತಕ್ರಮಃ ।
ಚಿನ್ತಯಾಮಾಸ ಕಿಮಿದಂ ಮಯಾಜ್ಞಾನಾದನುಷ್ಠಿತಮ್ ॥೨೯॥

ಯದಿ ಪ್ರಲೇಪೋ ನಷ್ಟೋ ಮೇ ವಿಲೀನೋ ಹಿಮವಾರಿಣಾ ।
ಶೈಲೋಽತಿದುರ್ಗಮಶ್ಚಾಯಂ ದೂರಂ ಚಾಹಮಿಹಾಗತಃ ॥೩೦॥

ಪ್ರಯಾಸ್ಯಾಮಿ ಕ್ರಿಯಾಹಾನಿಮಗ್ನಿಶುಶ್ರೂಷಣಾದಿಕಮ್ ।
ಕಥಮತ್ರ ಕರಿಷ್ಯಾಮಿ ಸಙ್ಕಟಂ ಮಹದಾಗತಮ್ ॥೩೧॥

ಇದಮ್ಪರಮಿದಂ ರಮ್ಯಮಿತ್ಯಸ್ಮಿನ್ನರಪರ್ವತೇ ।
ಸಕ್ತದೃಷ್ಟಿರಹಂ ತೃಪ್ತಿಂ ನ ಯಾಸ್ಯೇಽಬ್ದಶತೈರಪಿ ॥೩೨॥

---

೨೯. ಆದರೆ ಕಳೆದುಕೊಂಡ ಪಾದಲೇಪವುಳ್ಳ ಆ ವಿಪ್ರನು ಎಷ್ಟು ಹೊತ್ತು ನಡೆದರೂ ತಡೆಗಟ್ಟಿದ ಗಮನವುಳ್ಳವನಾದನು. ಆಗ ಅವನು "ಹೀಗೆ ಅಜ್ಞಾನದಿಂದ ನಾನೀಗ ಏನು ಮಾಡಿದೆನು" ಎಂದು ಚಿಂತಿಸತೊಡಗಿದನು.

೩೦. ಮಂಜಿನ ನೀರಿನಿಂದ ನನ್ನ ಪಾದಲೇಪನವು ಕರಗಿ ನಾಶವಾಗಿದೆಯೆ! ಹಾಗಾದರೆ ಮುಂದೇನು ಮಾಡಲಿ! ಈ ಪರ್ವತವು ಅತಿದುರ್ಗಮವಾದ ಪ್ರದೇಶವಾಗಿದೆ. ನಾನು ಇಲ್ಲಿಗೆ ಬಹುದೂರ ಬಂದಿರುವೆನು.

೩೧. ಈಗ ಮನೆಗೆ ಹಿಂದಿರುಗಿ ಹೋಗಲಾರದ ನಾನು ಅಗ್ನಿಶುಶ್ರೂಷೆ ಮುಂತಾದ ನಿತ್ಯಕರ್ಮಗಳ ಲೋಪಕ್ಕೆ ಭಾಗಿಯಾಗುವೆನು. ಈಗ ಮಹತ್ತಾದ ಸಂಕಟವು ಬಂದೊದಗಿದೆ. ನಾನೇನು ಮಾಡಲಿ!

೩೨. ಒಂದಕ್ಕಿಂತ ಮತ್ತೊಂದು ರಮ್ಯವಾಗಿದ್ದ ಈ ಸ್ಥಳದಲ್ಲಿ "ಇದು ರಮ್ಯವಾಗಿದೆ; ಇದು ಇನ್ನೂ ಹೆಚ್ಚು ಸುಂದರವಾಗಿದೆ" ಎಂದು ಶ್ರೇಷ್ಠವಾದ ಪರ್ವತಭೂಮಿಯಲ್ಲಿ ಅಂಟಿಕೊಂಡ ದೃಷ್ಟಿಯುಳ್ಳ ನಾನು ನೂರಾರು ವರ್ಷಗಳಾದರೂ ಇದನ್ನು ನೋಡಿ ತೃಪ್ತಿಯನ್ನು ಹೊಂದಲಾರೆನು.

ಕಿನ್ನರಾಣಾಂ ಕಲಾಲಾಪಃ ಸಮುನ್ನಾಚ್ಛ್ರೋತ್ರಹಾರಿಣಃ ।
ಪ್ರಫುಲ್ಲತರುಗನ್ಧಾಂಶ್ಚ ಘ್ರಾಣಮುತ್ಯನ್ತಮ್ಪೃಚ್ಛತಿ ॥೩೩॥

ಸುಖಸ್ಪರ್ಶಸ್ತಥಾ ವಾಯುಃ ಫಲಾನಿ ರಸವನ್ತಿ ಚ ।
ಹರನ್ತಿ ಪ್ರಸಭಂ ಚೇತೋ ಮನೋಜ್ಞಾನಿ ಸರಾಂಸಿ ಚ ॥೩೪॥

ಏವಂ ಗತೇ ತು ಪಶ್ಯೇಯಂ ಯದಿ ಕಂಚಿತ್ತಪೋನಿಧಿಮ್ ।
ಸ ಮಮೋಪದಿಶೇನ್ಮಾರ್ಗಂ ಗಮನಾಯ ಗೃಹಂ ಪ್ರತಿ ॥೩೫॥

ಮಾರ್ಕಣ್ಡೇಯ ಉವಾಚ :—

ಸ ಏವಂ ಚಿನ್ತಯನ್ವಿಪ್ರೋ ಬಭ್ರಾಮ ಚ ಹಿಮಾಚಲೇ ।
ಭ್ರಷ್ಟಪಾದೌಷಧಿಬಲೋ ವೈಕ್ಲವ್ಯಂ ಪರಮಂ ಗತಃ ॥೩೬॥

---

೩೩. ಒಂದುಕಡೆ ಕಿನ್ನರರ ಮಧುರಗಾನಶಬ್ದವು ಸುತ್ತಲೂ ಕಿವಿಯನ್ನು ಆಕರ್ಷಿಸುತ್ತಿದೆ. ಹಾಗು ಲತಾ–ವೃಕ್ಷಗಳಲ್ಲಿರುವ ಹೂಗಳ ಗಂಧವು ಘ್ರಾಣೇಂದ್ರಿಯವನ್ನು ಸೆಳೆಯುತ್ತಿರುವುದು.

೩೪. ಸುಖಕರವಾದ ಸ್ಪರ್ಶಗುಣವುಳ್ಳ ಮಾರುತವೂ ಮಧುರರಸದಿಂದ ಕೂಡಿದ ಫಲಗಳೂ ಮತ್ತು ರಮಣೀಯವಾದ ಸರೋವರಗಳೂ ಬಲಾತ್ಕಾರವಾಗಿ ಮನಸ್ಸನ್ನು ಅಪಹರಿಸುತ್ತಿವೆ.

೩೫. ಇಂತಹ ಸಂದರ್ಭದಲ್ಲಿ ನಾನು ಯಾರಾದರೊಬ್ಬ ಮಹಾತಪಸ್ವಿಯನ್ನು ಕಾಣುವಂತಾದರೆ ಅಂತಹ ತಪಸ್ವಿಯು ನಾನು ಮನೆಗೆ ಹೋಗುವಂತೆ ಮಾರ್ಗವನ್ನು ಉಪದೇಶಿಸಬಹುದಲ್ಲವೆ !

ಮಾರ್ಕಂಡೇಯಮುನಿಯು ಇಂತೆಂದನು :—

೩೬. ಕಳೆದುಕೊಂಡ ಪಾದಲೇಪದ ಮಹಾಪ್ರಭಾವವುಳ್ಳವನಾಗಿ ದೊಡ್ಡ ದುರ್ದಶೆಯನ್ನು ಹೊಂದಿದ ಆ ವಿಪ್ರನು ಹೀಗೆಂದು ಚಿಂತಿಸುತ್ತ ಹಿಮವತ್ಪರ್ವತದ ಪ್ರದೇಶಗಳಲ್ಲಿ ಸುತ್ತಿದನು.

ತಂ ದದರ್ಶ ಭ್ರಮನ್ತಂ ಚ ಮುನಿಶ್ರೇಷ್ಠಂ ವರೂಥಿನೀ ।
ವರಾಪ್ಸರಾ ಮಹಾಭಾಗಾ ಮೌಲೇಯಾ ರೂಪಶಾಲಿನೀ ॥೩೭॥

ತಸ್ಮಿನ್ದೃಷ್ಟೇ ತತಃ ಸಾಭೂದ್ದ್ವಿಜವರ್ಯೇ ವರೂಥಿನೀ ।
ಮದನಾಕೃಷ್ಟಹೃದಯಾ ಸಾನುರಾಗಾ ಹಿ ತತ್ಕ್ಷಣಾತ್ ॥೩೮॥

ಚಿನ್ತಯಾಮಾಸ ಕೋ ನ್ವೇಷ ರಮಣೀಯತಮಾಕೃತಿಃ ।
ಸಫಲಂ ಮೇ ಭವೇಜ್ಜನ್ಮ ಯದಿ ಮಾಂ ನಾವಮನ್ಯತೇ ॥೩೯॥

ಅಹೋಽಸ್ಯ ರೂಪಮಾಧುರ್ಯಮಹೋಽಸ್ಯ ಲಲಿತಾ ಗತಿಃ ।
ಅಹೋ ಗಮ್ಭೀರತಾ ದೃಷ್ಟೇಃ ಕುತೋಽಸ್ಯ ಸದೃಶೋ ಭುವಿ ॥೪೦॥

---

೩೭. ಹೀಗೆ ವಿಪ್ರನು ಪರ್ವತದಲ್ಲಿ ಸುತ್ತುತ್ತಿರಲು ಮಹತ್ತಾದ ಮಾಹಾತ್ಮ್ಯವುಳ್ಳವಳೂ, ರೂಪವತಿಯೂ ಮತ್ತು ಅಪ್ಸರಾಂಗನೆಯಲ್ಲಿ ಗಣ್ಯಳೂ ಆದ ವರೂಥಿನೀ ಎಂಬ ಅಪ್ಸರೆಯು ಅವನನ್ನು ನೋಡಿದಳು.

೩೮. ಆ ವಿಪ್ರನ ದರ್ಶನವುಂಟಾಗಲು ಆಗ ವರೂಥಿನಿಯು ಆ ದ್ವಿಜೋತ್ತಮನಲ್ಲಿ ಹುಟ್ಟಿದ ಅನುರಾಗವುಳ್ಳವಳೂ, ಆ ಕ್ಷಣದಲ್ಲಿಯೇ ಕಾಮವಿಕಾರದಿಂದ ಪೀಡಿಸಲ್ಪಟ್ಟ ಹೃದಯವುಳ್ಳವಳೂ ಆದಳು.

೩೯. ಮತ್ತು ಅವನ ವಿಷಯದಲ್ಲಿ ವರೂಥಿನಿಯು ಚಿಂತಿಸಿದಳು. ಅತಿ ಸುಂದರಾಕಾರದಿಂದ ಶೋಭಿಸುವ ಈ ವ್ಯಕ್ತಿಯು ಯಾರಿರಬಹುದು? ಇವನು ನನ್ನನ್ನು ಧಿಕ್ಕರಿಸದೆ ನನ್ನ ಇಷ್ಟವನ್ನು ನೆರವೇರಿಸುವಂತಾದರೆ ನನ್ನ ಜನ್ಮವು ಸಫಲವಾಗುವುದು.

೪೦. ಆಹಹ! ಇವನ ಮಧುರವಾದ ಸೌಂದರ್ಯವೇನು! ಮುದ್ದಾದ ಗಮನವೇನು? ಇವನ ದೃಷ್ಟಿಯ ಗಾಂಭೀರ್ಯವೆಷ್ಟು! ಇವನನ್ನು ಹೋಲುವ ಮತ್ತೊಂದು ವ್ಯಕ್ತಿಯು ಭೂಲೋಕದಲ್ಲಿ ಎಲ್ಲಿದೆ! ಇವನು ಎಷ್ಟು ಆಶ್ಚರ್ಯಕಾರಿಯಾಗಿರುವನು!

ದೃಷ್ಟ್ವಾ ದೇವಾಸ್ತಥಾ ದೈತ್ಯಾಃ ಸಿದ್ಧಗನ್ಧರ್ವಪನ್ನಗಾಃ ।
ಕಥಮೇಕೋಽಪಿ ನಾಸ್ತ್ಯಸ್ಯ ತುಲ್ಯರೂಪೋ ಮಹಾತ್ಮನಃ ॥೪೧॥

ಯಥಾಹಮಸ್ಮಿನ್ಮಯ್ಯೇಷ ಸಾನುರಾಗಸ್ತಥಾ ಯದಿ ।
ಭವೇದತ್ರ ಮಯಾ ಕಾರ್ಯಸ್ತತ್ಕೃತಃ ಪುಣ್ಯಸಞ್ಚಯಃ ॥೪೨॥

ಯದ್ಯೇಷ ಮಯಿ ಸುಸ್ನಿಗ್ಧಾಂ ದೃಷ್ಟಿಮದ್ಯ ನಿಪಾತಯೇತ್ ।
ಕೃತಪುಣ್ಯಾ ನ ಮತ್ತೋಽನ್ಯಾ ತ್ರೈಲೋಕ್ಯೇ ವನಿತಾ ತತಃ ॥೪೩॥

ಮಾರ್ಕಣ್ಡೇಯ ಉವಾಚ:—

ಏವಂ ಸಞ್ಚಿನ್ತಯನ್ತೀ ಸಾ ದಿವ್ಯಯೋಷಿತ್ಸ್ಮರಾತುರಾ ।
ಆತ್ಮಾನಂ ದರ್ಶಯಾಮಾಸ ಕಮನೀಯತರಾಕೃತಿಮ್ ॥೪೪॥

---

೪೧. ನಾನು ದೇವತೆ, ದೈತ್ಯ, ಸಿದ್ಧ, ಗಂಧರ್ವ, ನಾಗ ಮುಂತಾದವರನ್ನು ಎಷ್ಟೋ ಮಂದಿಯನ್ನು ನೋಡಿರುವೆನು. ಆದರೆ ಈ ಮಹಾತ್ಮನಿಗೆ ಸಮಾನವಾದ ಸೌಂದರ್ಯವುಳ್ಳವನು ಒಬ್ಬನಾದರೂ ಎಲ್ಲಿರುವನು !

೪೨. ನಾನು ಈ ವ್ಯಕ್ತಿಯಲ್ಲಿ ಹೇಗೆ ಅಭಿಲಾಷೆಯನ್ನು ಹೊಂದಿರುವೆನೋ ಹಾಗೆ ಇವನು ನನ್ನಲ್ಲಿ ಅಭಿಲಾಷೆಯನ್ನು ಹೊಂದಿದರೆ ಆಗ ನಾನು ಕೃತಕೃತ್ಯಳಾಗುವೆನು. ಆಗಲೇ ನಾನು ಪುಣ್ಯರಾಶಿಗೆ ಪಾತ್ರಳಾಗುವೆನು.

೪೩. ಈ ಮಹಾತ್ಮನು ನನ್ನಲ್ಲಿ ಸ್ನೇಹಪೂರ್ಣವಾದ ದೃಷ್ಟಿಯನ್ನು ಇರಿಸಿದರೆ ಆಗ ಮೂರುಲೋಕಗಳಲ್ಲಿ ನನ್ನಂತೆ ಪುಣ್ಯವನ್ನುಗಳಿಸಿದ ಬೇರೊಬ್ಬಳು ವನಿತೆಯು ಇರುವುದಿಲ್ಲ.

ಮಾರ್ಕಂಡೇಯಮುನಿಯು ಹೇಳಿದನು :—

೪೪. ಈ ರೀತಿಯಾಗಿ ಚಿಂತಿಸುತ್ತಿದ್ದ ಆ ದೇವಲೋಕದ ಅಪ್ಸರಾಂಗನೆಯು ಕಾಮವಿಕಾರಗಳಿಂದ ಪೀಡಿಸಲ್ಪಟ್ಟವಳಾಗಿ ಅತಿಸುಂದರವಾದ ಆಕಾರದಿಂದ ಶೋಭಿಸುವ ತಾನು ಅವನ ದೃಷ್ಟಿಗೆ ಬೀಳುವಂತೆ ಆದಳು,

ತಾಂ ತು ದೃಷ್ಟ್ವಾ ದ್ವಿಜಸುತಶ್ಚಾರುರೂಪಾಂ ವರೂಥಿನೀಮ್ ।
ಸೋಽಪಚಾರಂ ಸಮಾಗಮ್ಯ ವಾಕ್ಯಮೇತದುವಾಚ ಹ ॥೫೫॥

ಕಾ ತ್ವಂ ಕಮಲಗರ್ಭಾಭೇ ಕಸ್ಯ ಕಿಂ ವಾನುತಿಷ್ಠಸಿ ।
ಬ್ರಾಹ್ಮಣೋಽಹಮಿಹಾಯಾತೋ ನಗರಾದರುಣಾಸ್ಪದಾತ್ ॥೫೬॥

ಪಾದಲೇಪೋಽತ್ರ ಮೇ ಧ್ವಸ್ತೋ ವಿಲೀನೋ ಹಿಮವಾರಿಣಾ ।
ಯಸ್ಯಾನುಭಾವಾದತ್ರಾಹಮಾಗತೋ ಮದಿರೇಕ್ಷಣೇ ॥೫೭॥

ವರೂಥಿನ್ಯುವಾಚ :—

ಮೌಲೇಯಾಹಂ ಮಹಾಭಾಗಾ ನಾಮ್ನಾ ಖ್ಯಾತಾ ವರೂಥಿನೀ ।
ವಿಚರಾಮಿ ಸದೈವಾತ್ರ ರಮಣೀಯೇ ಮಹಾಚಲೇ ॥೫೮॥

---

೫೫. ದ್ವಿಜಪುತ್ರನು ಸುಂದರವಾದ ರೂಪವುಳ್ಳ ಆ ವರೂಥಿನಿಯನ್ನು ನೋಡಿ ಉಪಚಾರವನ್ನು ಸೂಚಿಸುತ್ತ ಹತ್ತಿರಕ್ಕೆ ಹೋಗಿ ಅವಳ ಸಂಗಡ ಈ ಮಾತನ್ನು ಆಡಿದನು.

೫೬. ಕಮಲಗರ್ಭದಂತೆ ಕಾಂತಿಯಿಂದ ರಾಜಿಸುವವಳೆ! ನೀನು ಯಾರು? ಯಾರ ಸಂಬಂಧಿನಿಯು? ಇಲ್ಲಿ ಏನು ಮಾಡುತ್ತಿರುವೆ? ನಾನು ಒಬ್ಬ ವಿಪ್ರನು. ಅರುಣ ಎಂಬ ನಗರದಿಂದ ಇಲ್ಲಿಗೆ ಬಂದಿರುವೆನು.

೫೭. ಎಲೈ, ಮದಿಸಿದಂತೆ ಸುಂದರವಾದ ದೃಷ್ಟಿಯುಳ್ಳವಳೆ! ಯಾವ ಪಾದಲೇಪದ ಪ್ರಭಾವದಿಂದ ನಾನು ಇಲ್ಲಿಗೆ ಬಂದಿರುವೆನೋ ಅಂತಹ ಪಾದ ಲೇಪವು ಇಲ್ಲಿ ಮಂಜಿನ ನೀರಿನಿಂದ ನೀರಾಗಿ ತೊಳೆದು ನಾಶವಾಗಿರುವುದು.

ವರೂಥಿನಿಯು ಹೇಳಿದಳು :—

೫೮. ಎಲೈ ಮಹಾತ್ಮನಾದ ವಿಪ್ರನೇ! ನಾನು ಮೌಲಿವಂಶದಲ್ಲಿ ಜನಿಸಿದ ಮಹಾಭಾಗ್ಯವತಿಯು. ನಾನು ವರೂಥಿನಿ ಎಂಬ ನಾಮಾಂಕನದಿಂದ ಪ್ರಸಿದ್ಧಳಾಗಿರುವೆನು. ನಾನು ಯಾವಾಗಲೂ ರಮಣೀಯವಾದ ಈ ಮಹಾ ಪರ್ವತದಲ್ಲಿ ಸಂಚರಿಸುತ್ತಿರುವೆನು.

ಸಾಹಂ ತ್ವದ್ದರ್ಶನಾದ್ವಿಪ್ರ ಕಾಮಾವೈಕ್ಲವ್ಯತಾಂ ಗತಾ ।
ಪ್ರಶಾಧಿ ಯನ್ಮಯಾ ಕಾರ್ಯಂ ತ್ವದಧೀನಾಸ್ಮಿ ಸಾಂಪ್ರತಮ್ ॥೪೯॥

ಬ್ರಾಹ್ಮಣ ಉವಾಚ :—

ಯೇನೋಪಾಯೇನ ಗಚ್ಛೇಯಂ ನಿಜಗೇಹಂ ಶುಚಿಸ್ಮಿತೇ ।
ತನ್ಮಮಾಚಕ್ಷ್ವ ಕಲ್ಯಾಣಿ ಹಾನಿರ್ನೋಽಖಿಲಕರ್ಮಣಾಮ್ ॥೫೦॥

ನಿತ್ಯನೈಮಿತ್ತಿಕಾನಾಂ ತು ಮಹಾಹಾನಿರ್ದ್ವಿಜನ್ಮನಃ ।
ಭವತ್ಯತಸ್ತ್ವಂ ಹೇ ಭದ್ರೇ ಮಾಮುದ್ಧರ ಹಿಮಾಲಯಾತ್ ॥೫೧॥

ಪ್ರಶಸ್ಯತೇ ನ ಪ್ರವಾಸೋ ಬ್ರಾಹ್ಮಣಾನಾಂ ಕದಾಚನ ।
ಅಪರಾಧ್ಯತಿ ಮೇ ಭೀರು ದೇಶದರ್ಶನಕೌತುಕಮ್ ॥೫೨॥

---

೪೯. ಎಲೈ ವಿಪ್ರೋತ್ತಮನೇ ! ಇಂದು ನಾನು ನಿನ್ನ ದರ್ಶನದಿಂದ ಕಾಮಪೀಡೆಗೆ ಗುರಿಯಾಗಿರುವೆನು. ಮುಂದೆ ನನಗೆ ಕರ್ತವ್ಯವನ್ನು ಅಜ್ಞಾಪಿಸು. ಈಗ ನಾನು ನಿನ್ನ ಅಧೀನಳಾಗಿರುವೆನು.

ಬ್ರಾಹ್ಮಣನು ಹೀಗೆಂದನು:—

೫೦. ಎಲೈ ನಗುಮುಖವುಳ್ಳ ಸುಂದರಿಯೇ ! ಮಂಗಳಮೂರ್ತಿಯೇ ! ನಾನು ಯಾವ ಉಪಾಯದಿಂದ ನನ್ನ ಮನೆಯನ್ನು ಸೇರಬಹುದೋ ಅಂತಹ ಉಪಾಯವನ್ನು ಹೇಳು. ನಮ್ಮ ನಿತ್ಯಕರ್ಮಗಳಿಗೆ ಲೋಪವುಂಟಾಗಿರುವುದು.

೫೧. ಬ್ರಾಹ್ಮಣನಿಗೆ ನಿತ್ಯ-ನೈಮಿತ್ತಿಕ ಕರ್ಮಗಳ ಲೋಪವು ಮಹತ್ತಾದ ಹಾನಿಯನ್ನು ಕೊಡುವುದು. ಮಂಗಳಾಂಗಿಯೇ ! ಆದುದರಿಂದ ನೀನು ನನ್ನನ್ನು ಈ ಹಿಮಾಲಯದುರ್ಗದಿಂದ ಉದ್ಧಾರಮಾಡು.

೫೨. ಭಯಶೀಲಳಾದ ವರೂಥಿನಿಯೇ ! ಬ್ರಾಹ್ಮಣರಿಗೆ ಪ್ರವಾಸವು ಯಾವಾಗಲೂ ಪ್ರಶಸ್ತವಾದುದಲ್ಲ. ಆದರೆ ನನಗೆ ಉಂಟಾದ ದೇಶಗಳನ್ನು ನೋಡಬೇಕೆಂಬ ಅಭಿಲಾಷೆಯು ಈ ಅಪರಾಧಕ್ಕೆ ಕಾರಣವಾಗಿದೆ.

ಸತೋ ಗೃಹೇ ದ್ವಿಜಾಗ್ರ್ಯಸ್ಯ ನಿಷ್ಪತ್ತಿಃ ಸರ್ವಕರ್ಮಣಾಮ್ ।
ನಿತ್ಯನೈಮಿತ್ತಿಕಾನಾಂ ಚ ಹಾನಿರೇವಂ ಪ್ರವಾಸಿನಃ ॥೫೩॥

ಸಾ ತ್ವಂ ಕಿಂ ಬಹುನೋಕ್ತೇನ ತಥಾ ಕುರು ಯಶಸ್ವಿನಿ ।
ಯಥಾ ನಾಸ್ತಂಗತೇ ಸೂರ್ಯೇ ಪಶ್ಯಾಮಿ ನಿಜಮಾಲಯಮ್ ॥೫೪॥

ವರೂಥಿನ್ಯುವಾಚ :—

ಮೈವಂ ಬ್ರೂಹಿ ಮಹಾಭಾಗ ಮಾಭೂತ್ಸ ದಿವಸೋ ಮಮ ।
ಮಾಂ ಪರಿತ್ಯಜ್ಯ ಯತ್ರ ತ್ವಂ ನಿಜಗೇಹಮುಪೈಷ್ಯಸಿ ॥೫೫॥

ಅಹೋ ರಮ್ಯತರಃ ಸ್ವರ್ಗೋ ನ ಯತೋ ದ್ವಿಜನನ್ದನ ।
ಅತೋ ವಯಂ ಪರಿತ್ಯಜ್ಯ ತಿಷ್ಠಾಮೋಽತ್ರ ಸುರಾಲಯಮ್ ॥೫೬॥

---

೫೩. ಮನೆಯಲ್ಲಿ ಒಂದೆಡೆಯಲ್ಲಿ ವಾಸಮಾಡುತ್ತಿದ್ದ ಬ್ರಾಹ್ಮಣನಿಗೆ ಲೋಪವಿಲ್ಲದಹಾಗೆ ಎಲ್ಲ ಕರ್ಮಾನುಷ್ಠಾನವು ನಡೆಯುವುದು. ಪ್ರವಾಸಮಾಡುವವನಿಗೆ ನನ್ನಂತೆ ನಿತ್ಯ–ನೈಮಿತ್ತಿಕ ಕರ್ಮಗಳಿಗೆ ಚ್ಯುತಿಯು ಸಂಭವಿಸುತ್ತದೆ.

೫೪. ಎಲೈ ಕೀರ್ತಿಭಾಜನಳಾದ ವರೂಥಿನಿಯೇ! ಇನ್ನು ಹೆಚ್ಚು ಮಾತೇಕೆ? ಸೂರ್ಯನು ಅಸ್ತಮಯವನ್ನು ಹೊಂದುವಷ್ಟರೊಳಗೆ ನಾನು ನನ್ನ ಮನೆಯನ್ನು ನೋಡುವ ಹಾಗೆ ನೀನು ಯಾವುದಾದರೊಂದು ಉಪಾಯವನ್ನು ಮಾಡು.

ವರೂಥಿನಿಯು ಹೇಳಿದಳು :—

೫೫. ಮಹಾತ್ಮನೇ! ನೀನು ಹೀಗೆ ನುಡಿಯಬೇಡ. ನನ್ನನ್ನು ಇಲ್ಲಿ ಬಿಟ್ಟು ನೀನು ನಿನ್ನ ಮನೆಯನ್ನು ಸೇರುವಂತೆ ಆಗುವ ಅಂತಹ ದಿವಸವು ನನ್ನ ಭಾಗಕ್ಕೆ ಬರುವುದು ಬೇಡ.

೫೬. ಎಲೈ, ಮಹಾತ್ಮನಾದ ದ್ವಿಜಪುತ್ರನೇ! ರಮಣೀಯವಾದ ಸ್ವರ್ಗಲೋಕವು ಇದಕ್ಕಿಂತಲೂ ಹೆಚ್ಚಾದುದಲ್ಲ. ಆದುದರಿಂದ ನಾವು ದೇವತೆಗಳ ವಾಸಭೂಮಿಯಾದ ಸ್ವರ್ಗವನ್ನು ಬಿಟ್ಟು ಸುಂದರವಾದ ಈ ಪ್ರದೇಶದಲ್ಲಿ ವಾಸ-ಮಾಡುತ್ತಿರುವೆವು.

ಸ ತ್ವಂ ಸಹ ಮಯಾ ಕಾನ್ತ ಕಾನ್ತೇಽತ್ರ ತುಹಿನಾಚಲೇ ।
ರಮಮಾಣೋ ನ ಮರ್ತ್ಯಾನಾಂ ಬಾನ್ಧವಾನಾಂ ಸ್ಮರಿಷ್ಯಸಿ ||೫೭||

ಸ್ರಜೋ ವಸ್ತ್ರಾಣ್ಯಲಙ್ಕಾರಾನ್ಭಕ್ಷ್ಯಭೋಜ್ಯಾನುಲೇಪನಮ್ ।
ದಾಸ್ಯಾಮ್ಯತ್ರ ತಥಾಹಂ ತೇ ಸ್ಮರೇಣ ವಶಗಾ ಹೃತಾ ||೫೮||

ವೀಣಾವೇಣುಸ್ವನಂ ಗೀತಂ ಕಿನ್ನರಾಣಾಂ ಮನೋರಮಮ್ ।
ಅಙ್ಗಾಹ್ಲಾದಕರೋ ವಾಯುರುಷ್ಣಾನ್ನಮುದಕಂ ಶುಚಿ ||೫೯||

ಮನೋಽಭಿಲಷಿತಾ ಶಯ್ಯಾ ಸುಗನ್ಧಮನುಲೇಪನಮ್ ।
ಇಹಾಸತೋ ಮಹಾಭಾಗ ಗೃಹೇ ಕಿಂ ತೇ ನಿಜೇಽಧಿಕಮ್ ||೬೦||

---

೫೭. ಎಲೈ ಕಾಂತನೇ! ನೀನು ನನ್ನೊಡನೆ ಸುಂದರವಾದ ಈ ಹಿಮಾಚಲಪ್ರದೇಶದಲ್ಲಿ ರಮಿಸುತ್ತಿರು. ಅದರಿಂದ ಮರ್ತ್ಯರಾಗಿ ಜನಿಸಿದ ಬಂಧುಗಳ ಸ್ಮರಣವೂ ಬಾರದ ಹಾಗೆ ವಿನೋದವುಂಟಾಗುವುದು.

೫೮. ಕಾಮದೇವನಿಂದ ನಿನಗೆ ಪರತಂತ್ರಳಾಗಿ ಮಾಡಲ್ಪಟ್ಟಿರುವ ನಾನು ಈ ಹಿಮಾಚಲದಲ್ಲಿ ವಿಹರಿಸುತ್ತಿದ್ದ ನಿನಗೆ ಮನವೊಪ್ಪುವ ಪುಷ್ಪಮಾಲೆ, ವಸ್ತ್ರ, ಅಲಂಕಾರ, ಭಕ್ಷ್ಯ, ಭೋಜ್ಯ, ಸುಗಂಧ—ಮುಂತಾದ ಎಲ್ಲ ಭೋಗ ಸಾಮಗ್ರಿಯನ್ನು ಕೊಡುವೆನು.

೫೯. ಕಿನ್ನರರ ವೀಣೆ, ಕೊಳಲು, ಮೃದಂಗ ಮುಂತಾದ ವಾದ್ಯ-ಧ್ವನಿಯಿಂದ ಕೂಡಿದ ಗಾನವು ನಿನ್ನ ಮನಸ್ಸಿಗೆ ಆನಂದವನ್ನು ಕೊಡುವುದು. ಮಂದ ಮಾರುತವು ನಿನ್ನ ಅಂಗಕ್ಕೆ ಆಹ್ಲಾದವನ್ನು ಉಂಟುಮಾಡುವುದು. ಮತ್ತು ಪವಿತ್ರವೂ ಸುಖೋಷ್ಣವೂ ಆದ ಅನ್ನ-ಪಾನೀಯಗಳು ನಿನಗೆ ಯಾವಾಗಲೂ ಸಿದ್ಧವಾಗಿರುವುವು.

೬೦. ಹಾಗು ನಿನ್ನ ಮನಸ್ಸಿಗೆ ಇಷ್ಟಬಂದಂತಹ ಶಯನ-ಸುಗಂಧ-ಅನುಲೇಪ ಮುಂತಾದುವುಗಳು ಭೋಗವನ್ನು ಕೊಡುವುವು. ಇಂತಹ ರಮ್ಯ-ಸ್ಥಳದಲ್ಲಿರದೆ ಮನೆಗೆ ಹೋದ ನಿನಗೆ ನಿನ್ನ ಮನೆಯಲ್ಲಿ ಇದಕ್ಕಿಂತಲೂ ಹೆಚ್ಚಾದ ಭೋಗ್ಯವಸ್ತುಗಳೇನಿರುವುವು?

ಇಹಾಸತೋ ನೈವ ಜರಾ ಕದಾಚಿತ್ತೇ ಭವಿಷ್ಯತಿ ।
ತ್ರಿದಶಾನಾಮಿಯಂ ಭೂಮಿರ್ಯೌವನೋಪಚಯಪ್ರದಾ ॥೬೧॥

ಇತ್ಯುಕ್ತ್ವಾ ಸಾನುರಾಗಾ ಸಾ ಸಹಸಾ ಕಮಲೇಕ್ಷಣಾ ।
ಆಲಿಲಿಙ್ಗ ಪ್ರಸೀದೇತಿ ವದನ್ತೀ ಕಲಮುನ್ಮನಾಃ ॥೬೨॥

ಬ್ರಾಹ್ಮಣ ಉವಾಚ :—

ಮಾ ಮಾಂ ಸ್ಪ್ರಾಕ್ಷೀರ್ವ್ರಜಾನ್ಯತ್ರ ದುಷ್ಟೇ ಯಃ ಸದೃಶಸ್ತವ ।
ಮಯಾನ್ಯಥಾ ಯಾಚಿತಾ ತ್ವಮನ್ಯಥೈವಾಭ್ಯುಪೈಷಿ ಮಾಮ್ ॥೬೩॥

ಸಾಯಂ ಪ್ರಾತರ್ಹುತಂ ಹವ್ಯಂ ಲೋಕಾನ್ ಯಚ್ಛತಿ ಶಾಶ್ವತಾನ್ ।
ತ್ರೈಲೋಕ್ಯಮೇತದಖಿಲಂ ಮೂಢೇ ಹವ್ಯೇ ಪ್ರತಿಷ್ಠಿತಮ್ ॥೬೪॥

---

೬೧. ಈ ಪರ್ವತದಲ್ಲಿ ವಾಸಮಾಡುತ್ತಿರುವ ನಿನಗೆ ಎಂದೂ ಮುಪ್ಪು ಬಾಧಿಸುವುದಿಲ್ಲ. ಈ ಸ್ಥಳವು ತಾರುಣ್ಯದ ಅತಿಶಯವನ್ನು ಕೊಡುವ, ಬಾಲ್ಯ-ಕೌಮಾರ-ತಾರುಣ್ಯವೆಂಬ ಮೂರು ದಶೆಗಳನ್ನು ಮಾತ್ರ ಹೊಂದಿದವರ ವಾಸ ಭೂಮಿಯಾಗಿದೆ.

೬೨. ಹೀಗೆಂದು ಹೇಳುತ್ತ ಅನುರಾಗೋದ್ರೇಕದಿಂದ ಕೂಡಿದವಳೂ, ಕುತೂಹಲಾಕ್ರಾಂತಳೂ ಮತ್ತು ಕಮಲದಂತೆ ಸುಂದರ ಕಣ್ಣುಗಳುಳ್ಳವಳೂ ಆದ ವರೂಥಿನಿಯು ತತ್‌ಕ್ಷಣದಲ್ಲಿ "ಅನುಗ್ರಹ ತೋರು" ಎಂದು ಮಧುರ ವಾಗಿ ಹೇಳುತ್ತ ಬ್ರಾಹ್ಮಣನನ್ನು ಆಲಿಂಗಿಸಿದಳು.

ಬ್ರಾಹ್ಮಣನು ಹೀಗೆ ಹೇಳಿದನು :—

೬೩. ಎಲೈ ದುಷ್ಟಳಾದ ನಾರಿಯೇ ! ನನ್ನನ್ನು ಸ್ಪರ್ಶಿಸಬೇಡ. ನಿನಗೆ ಅನುರೂಪನಾದ ಪುರುಷನಿರಬಹುದಾದ ಬೇರೊಂದು ಕಡೆಗೆ ನೀನು ಹೋಗು. ನಾನು ನಿನ್ನಲ್ಲಿ ಒಂದು ವಿಷಯದಲ್ಲಿ ಪ್ರಾರ್ಥನೆ ಮಾಡಿಕೊಂಡೆನು. ನೀನು ಮತ್ತೊಂದು ಬಗೆಯಿಂದ ನನ್ನ ಬಳಿಗೆ ಬಂದೆಯಾ ?

೬೪. ಮೂಢಳಾದ ಅಂಗನೆಯೇ ! ಸಾಯಂಕಾಲ-ಪ್ರಾತಃಕಾಲಗಳಲ್ಲಿ ಹೋಮಮಾಡಿದ ಹವಿಸ್ಸು ಶಾಶ್ವತವಾದ ಸುಖಭೋಗವನ್ನು ಕೊಡುವುದು. ಮೂರು ಲೋಕಗಳೆಲ್ಲವೂ ಯಥಾವಿಧಿಯಾಗಿ ಹೋಮಮಾಡುವ ಹವಿಸ್ಸಿನಲ್ಲಿ ನೆಲೆಸಿದೆಯೆಂದು ತಿಳಿಯಬೇಕು.

ತದುಪಾಯಂ ಸಮಾಚಕ್ಷ್ವ ಯೇನ ಯಾಮಿ ಸ್ವಮಾಲಯಮ್ ॥೬೫॥

ವರೂಥಿನ್ಯುವಾಚ :—

ಕಿಂ ತೇ ನಾಹಂ ಪ್ರಿಯಾ ವಿಪ್ರ ರಮಣೀಯೋ ನ ಕಿಂ ಗಿರಿಃ ।
ಗನ್ಧರ್ವಾನ್ಕಿನ್ನರಾದೀಂಶ್ಚ ತ್ಯಕ್ತ್ವಾಭೀಷ್ಟೋ ಹಿ ಕಸ್ತವ ॥೬೬॥

ನಿಜಮಾಲಯಮಸ್ಮಾದ್ಭವಾನ್ಯಾಸ್ಯತ್ಯಸಂಶಯಮ್ ।
ಸ್ವಲ್ಪಕಾಲಂ ಮಯಾ ಸಾರ್ಧಂ ಭುಙ್ಕ್ಷ್ವ ಭೋಗಾನ್ ಸುದುರ್ಲಭಾನ್ ॥೬೭॥

ಬ್ರಾಹ್ಮಣ ಉವಾಚ :—

ಅಭೀಷ್ಟಾ ಗಾರ್ಹಪತ್ಯಾದ್ಯಾಃ ಸತತಂ ಮೇ ತ್ರಯೋಽಗ್ನಯಃ ।
ರಮ್ಯಂ ಮಮಾಗ್ನಿಶರಣಂ ವೇದೀ ವಿಷ್ಟರಿಣೀ ಪ್ರಿಯಾ ॥೬೮॥

---

೬೫. ಆದುದರಿಂದ ಕರ್ಮಾಧಿಕಾರಿಯಾದ ನನಗೆ ನಿತ್ಯ-ನೈಮಿತ್ತಿಕವಾದ ಹವಿರ್ದಾನಕ್ರಿಯೆಗಳಿಗೆ ಲೋಪವು ಬಾರದಹಾಗೆ ನನ್ನ ಮನೆಗೆ ನಾನು ಹೋಗಲು ಯೋಗ್ಯವಾದ ಉಪಾಯವನ್ನು ಹೇಳುವವಳಾಗು.

ವರೂಥಿನಿಯು ಹೇಳಿದಳು :—

೬೬. ಎಲೈ ವಿಪ್ರೋತ್ತಮನೇ ! ನಾನು ನಿನಗೆ ಇಷ್ಟವಿಲ್ಲದವಳಾಗಿರುವೆನೇ ? ಈ ಮಹಾಗಿರಿಯು ರಮಣೀಯವಾಗಿಲ್ಲವೆ ? ಇಲ್ಲಿರುವ ಗಂಧರ್ವ-ಕಿನ್ನರ ಮುಂತಾದವರನ್ನು ಬಿಟ್ಟು ನಿನಗೆ ಇಷ್ಟರಾದವರು ಬೇರೆ ಯಾರಿರುವರು ?

೬೭. ಮತ್ತು ಈ ಪರ್ವತದಿಂದ ನಿನ್ನ ಸ್ವಗೃಹಕ್ಕೆ ನಿಸ್ಸಂಶಯವಾಗಿ ಮುಂದೆ ತೆರಳುವವನಾಗಿದ್ದೀಯೆ. ಆದರೆ ಈಗ ಸ್ವಲ್ಪಕಾಲದವರೆಗೆ ಇಲ್ಲಿ ವಾಸಮಾಡಿ ಸಾಮಾನ್ಯರಿಗೆ ದುರ್ಲಭವಾದ ಉತ್ತಮಭೋಗಗಳನ್ನು ಭುಂಜಿಸು.

ಬ್ರಾಹ್ಮಣನು ಮತ್ತೆ ಹೀಗೆಂದನು :—

೬೮. ನನಗೆ ಗಾರ್ಹಪತ್ಯ-ಆಹವನೀಯ-ದಕ್ಷಿಣಾಗ್ನಿ ಎಂಬ ಮೂರು ಅಗ್ನಿಗಳು ಎಲ್ಲಕ್ಕಿಂತಲೂ ಹೆಚ್ಚಾಗಿ ಯಾವಾಗಲೂ ಇಷ್ಟರಾಗಿರುವರು. ಅಗ್ನಿಗಳು ವಾಸಮಾಡುವ ಶಾಲೆಯು ನನಗೆ ಇಷ್ಟವಾದುದು. ಹಾಗು ದರ್ಭಾಸನಗಳಿಂದ ಅಲಂಕರಿಸಲ್ಪಟ್ಟಿರುವ ವೇದಿಯು ನನಗೆ ಪ್ರಿಯವಾದುದು.

ವರೂಥಿನ್ಯುವಾಚ :—

ಅಷ್ಟಾವಾತ್ಮಗುಣಾ ಯೇ ಹಿ ತೇಷಾಮಾದ್ಯಾ ದಯಾ ದ್ವಿಜ ।
ತಾಂ ಕರೋಷಿ ಕಥಂ ನ ತ್ವಂ ಮಯಿ ಸದ್ಧರ್ಮಪಾಲಕ ॥೬೯॥

ತ್ವದ್ವಿಮುಕ್ತಾ ನ ಜೀವಾಮಿ ತಥಾ ಪ್ರೀತಿಮತೀ ತ್ವಯಿ ।
ನೈತದ್ವದಾಮ್ಯಹಂ ಮಿಥ್ಯಾ ಪ್ರಸೀದ ಕುಲನನ್ದನ ॥೭೦॥

ಬ್ರಾಹ್ಮಣ ಉವಾಚ :

ಯದಿ ಪ್ರೀತಿಮತೀ ಸತ್ಯಂ ನೋಪಚಾರಾದ್ಬ್ರವೀಷಿ ಮಾಮ್ ।
ತದುಪಾಯಂ ಸಮಾಚಕ್ಷ್ವ ಯೇನ ಯಾಮಿ ಸ್ವಮಾಲಯಮ್॥೭೧॥

ವರೂಥಿನಿಯು ಹೀಗೆಂದಳು :—

೬೯. ಧರ್ಮಪರಿಪಾಲಕನಾದ ದ್ವಿಜೋತ್ತಮನೇ! ಸಂಸ್ಕಾರರೂಪವಾದ ಆತ್ಮಗುಣಗಳು ಎಂಟು ಇರುವುವು. ಅವುಗಳಲ್ಲಿ ದಯೆಯು ಮೊದಲನೆಯದಾಗಿದೆ. ನನ್ನಲ್ಲಿ ಅಂತಹ ದಯೆಯನ್ನು ನೀನು ಏಕೆ ತೋರಿಸುವುದಿಲ್ಲ?

೭೦. ವಂಶವರ್ಧನತತ್ಪರನೇ! ನಿನ್ನಲ್ಲಿ ಅಷ್ಟೊಂದು ಪ್ರೇಮಭರವುಳ್ಳವಳಾಗಿದ್ದೇನೆ. ಆದುದರಿಂದ ನಿನ್ನನ್ನು ಅಗಲಿ ನಾನು ಬದುಕಿರಲಾರೆನು. ನಾನು ಹೇಳುತ್ತಿರುವ ಈ ವಚನವು ಎಂದಿಗೂ ಸುಳ್ಳಾದುದಲ್ಲ. ನನ್ನಲ್ಲಿ ಅನುಗ್ರಹ ತೋರು.

ಬ್ರಾಹ್ಮಣನು ಹೇಳಿದನು :—

೭೧. ನೀನು ನನ್ನಲ್ಲಿ ಪ್ರೇಮಾತಿರೇಕವುಳ್ಳವಳಾಗಿದ್ದೀಯಷ್ಟೇ? ಇದು ನನ್ನಲ್ಲಿ ಉಪಚಾರದಿಂದ ಆಡುವ ಮಾತು ಅಲ್ಲವಷ್ಟೇ? ಹಾಗಾದರೆ ನಾನು ನನ್ನ ಮನೆಗೆ ಯಾವ ಉಪಾಯದಿಂದ ಹೋಗಬಲ್ಲೆನೋ ಅಂತಹ ಉಪಾಯವನ್ನು ಹೇಳು.

ವರೂಥಿನ್ಯುವಾಚ :—

ನಿಜಮಾಲಯಮಪ್ಯಸ್ಮಾದ್ಗಂತಾಸ್ಯಸ್ಯಸಂಶಯಮ್ ।
ಸ್ವಲ್ಪಕಾಲಂ ಮಯಾ ಸಾರ್ಧಂ ಭುಙ್ಕ್ಷ್ವ ಭೋಗಾನ್ ಸುದುರ್ಲಭಾನ್ ॥೭೨॥

ಬ್ರಾಹ್ಮಣ ಉವಾಚ :—

ನ ಭೋಗಾರ್ಥಾಯ ವಿಪ್ರಾಣಾಂ ಶಸ್ಯತೇ ಹಿ ವರೂಥಿನಿ ।
ಇಹ ಕ್ಲೇಶಾಯ ವಿಪ್ರಾಣಾಂ ಚೇಷ್ಟಾ ಪ್ರೇತ್ಯಫಲಪ್ರದಾ ॥೭೩॥

ವರೂಥಿನ್ಯುವಾಚ :—

ಸತ್ಪ್ರಾಣಂ ಮ್ರಿಯಮಾಣಾಯಾ ಮಮ ಕೃತ್ವಾ ಪರತ್ರ ತೇ ।
ಪುಣ್ಯಸ್ಯೈವ ಫಲಂ ಭಾವಿ ಭೋಗಾಶ್ಚಾನ್ಯತ್ರ ಜನ್ಮನಿ ॥೭೪॥

ವರೂಥಿನಿಯು ಮತ್ತೆ ನುಡಿದಳು :—

೭೨. ನಿಸ್ಸಂಶಯವಾಗಿ ನೀನು ಈ ಹಿಮಾಲಯ ಪರ್ವತದಿಂದ ನಿನ್ನ ಸ್ವಗೃಹಕ್ಕೆ ಮುಂದೆ ಒಂದು ಸಮಯದಲ್ಲಿ ಹೋಗುತ್ತೀಯೆ. ಈಗ ಸ್ವಲ್ಪಕಾಲ ನನ್ನ ಸಂಗಡ ಇಲ್ಲಿಯೇ ಇದ್ದು ಇಷ್ಟಪಟ್ಟರೆ ಲಭಿಸಲಾರದಂತಹ ಉತ್ತಮ ಭೋಗಗಳನ್ನು ಅನುಭವಿಸು.

ಬ್ರಾಹ್ಮಣನು ಹೇಳಿದನು :—

೭೩. ಎಲೈ ವರೂಥಿನಿಯೇ! ಬ್ರಾಹ್ಮಣರ ವ್ಯಾಪಾರೋದ್ಯಮಗಳು ಭೋಗಸಾಧನವಾಗಿರಕೂಡದು. ಅದು ಪ್ರಶಸ್ತವಲ್ಲ. ಅವರ ಉದ್ಯಮವು ಇಹಲೋಕದಲ್ಲಿ ಕ್ಲೇಶಕರವೂ ಮರಣಾನಂತರದಲ್ಲಿ ಪರಲೋಕದಲ್ಲಿ ಭೋಗಪ್ರದವೂ ಆಗಿರುವುದು ಶ್ಲಾಘ್ಯವು.

ವರೂಥಿನಿಯು ಹೇಳಿದಳು :—

೭೪. ನಿನ್ನೊಡನೆ ಅಗಲಿದರೆ ಮರಣಹೊಂದುವವಳಾಗಿರುವ ನನ್ನನ್ನು ಮರಣದಿಂದ ರಕ್ಷಿಸಿದ ನಿನಗೆ ಪರಲೋಕದಲ್ಲಿ ಪುಣ್ಯದ ಫಲವು ಲಭಿಸುವುದು. ಮತ್ತು ಮುಂದಿನ ಜನ್ಮಾಂತರಗಳಲ್ಲಿ ಉತ್ತಮವಾದ ಭೋಗಗಳು ದೊರಕುವುವು.

ಏವಂ ಚ ದ್ವಯಮಪ್ಯತ್ರ ತವೋಪಚಯಕಾರಣಮ್ ।
ಪ್ರತ್ಯಾಖ್ಯಾನಾದಹಂ ಮೃತ್ಯುಂ ತ್ವಂ ಚ ಪಾಪಮವಾಪ್ಸ್ಯಸಿ ॥೭೫॥

ಬ್ರಾಹ್ಮಣ ಉವಾಚ :—

ಪರಸ್ತ್ರಿಯಂ ನಾಭಿಲಷೇದಿತ್ಯೂಚುರ್ಗುರವೋ ಮಮ ।
ತೇನ ತ್ವಾಂ ನಾಭಿವಾಞ್ಛಾಮಿ ಕಾಮಂ ವಿಲಪ ಶುಷ್ಯ ವಾ ॥೭೬॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ಸ ಮಹಾಭಾಗಃ ಸ್ಪೃಷ್ಟ್ವಾಪಃ ಪ್ರಯತಃ ಶುಚಿಃ ।
ಪ್ರಾಹೇದಂ ಪ್ರಣಿಪತ್ಯಾಗ್ನಿಂ ಗಾರ್ಹಪತ್ಯಮುಪಾಂಶುನಾ ॥೭೭॥

ಭಗವನ್ ಗಾರ್ಹಪತ್ಯಾಗ್ನೇ ಯೋನಿಸ್ತ್ವಂ ಸರ್ವಕರ್ಮಣಾಮ್ ।
ತ್ವತ್ತ ಆಹವನೀಯೋಽಗ್ನಿರ್ದಕ್ಷಿಣಾಗ್ನಿಶ್ಚ ನಾನ್ಯತಃ ॥೭೮॥

---

೭೫. ಈ ಪ್ರಸಂಗದಲ್ಲಿ ಹೀಗೆ ಮಾಡುವುದರಿಂದ ನನ್ನ ಜೀವನ, ನಿನ್ನ ಪುಣ್ಯಸಂಪಾದನಗಳೆರಡು ನಿನ್ನ ಶ್ರೇಯಸ್ಸಿಗೆ ಸಾಧನಗಳಾಗುವುವು. ಹಾಗಿಲ್ಲದೆ ನನ್ನನ್ನು ನಿರಾಕರಿಸಿದರೆ ನಾನು ಮೃತ್ಯುವಿನ ಪಾಲಾಗುವೆನು. ನೀನು ಆ ಪಾಪಕ್ಕೆ ಭಾಗಿಯಾಗುತ್ತೀಯೆ.

ಬ್ರಾಹ್ಮಣನು ಹೇಳಿದನು :—

೭೬. ಪರನಾರಿಯನ್ನು ಅಭಿಲಾಷೆಮಾಡಬಾರದೆಂದು ನನಗೆ ನನ್ನ ಗುರುಗಳು ಹೇಳಿರುವರು. ಆದ್ದರಿಂದ ನಾನು ನಿನ್ನನ್ನು ಕಾಮಿಸಲಾರೆನು. ನೀನು ನಿನ್ನ ಇಷ್ಟದಂತೆ ಅಳು, ಒಣಗು, ಏನಾದರೂ ಆಗು.

ಮಾರ್ಕಂಡೇಯ ಮುನಿಯು ಉಪದೇಶಮಾಡಿದನು :—

೭೭. ಮಹಾತ್ಮನಾದ ಆ ವಿಪ್ರನು ಈ ರೀತಿಯಾಗಿ ಹೇಳಿ ಶುಚಿಯೂ, ತ್ರಿಕರಣಶುದ್ಧಿಯುಳ್ಳವನೂ ಆಗಿ ಗಾರ್ಹಪತ್ಯ ಎಂಬ ಅಗ್ನಿಯನ್ನು ಉದ್ದೇಶಿಸಿ ನಮಸ್ಕಾರ ಮಾಡಿ ಉಪಾಂಶುಸ್ವರ (ಮೆಲ್ಲಗೆ) ದಿಂದ ಈ ಮಾತನ್ನು ಆಡಿದನು.

೭೮. ಪೂಜ್ಯನಾದ ಗಾರ್ಹಪತ್ಯಾಗ್ನಿಯೇ! ನೀನೇ ಸಮಸ್ತ ಪುಣ್ಯ-ಕರ್ಮಗಳಿಗೆ ಕಾರಣನಾಗಿರುವೆ. ನಿನ್ನಿಂದಲೇ ಆಹವನೀಯ ಅಗ್ನಿಯು ಹುಟ್ಟಿರು-ವುದು. ದಕ್ಷಿಣಾಗ್ನಿಯೆಂಬುದು ನಿನ್ನನ್ನು ಬಿಟ್ಟು ಬೇರೆ ಕಾರಣದಿಂದ ಹುಟ್ಟುವದಲ್ಲ.

ಯುಷ್ಮದಾಪ್ಯಾಯನಾಜ್ಜೇವಾ ವೃಷ್ಟಿಸಸ್ಯಾದಿಹೇತವಃ ।
ಭವನ್ತಿ ಸಸ್ಯಾದಖಿಲಂ ಜಗದ್ಭವತಿ ನಾನ್ಯತಃ ॥೭೯॥

ಏವಂ ತ್ವತ್ತೋ ಭವತ್ಯೇತದ್ಯೇನ ಸತ್ಯೇನ ವೈ ಜಗತ್ ।
ತಥಾಪನುದ್ಯ ಸ್ವಂ ಗೇಹಂ ಪಶ್ಯೇಯಂ ಸತಿ ಭಾಸ್ಕರೇ ॥೮೦॥

ಯಥಾ ವೈ ವೈದಿಕಂ ಕರ್ಮ ಸ್ವಕಾಲೇ ನೋಜ್ಝಿತಂ ಮಯಾ ।
ತೇನ ಸತ್ಯೇನ ಪಶ್ಯೇಯಂ ಗೃಹಸ್ಥೋಽದ್ಯ ದಿವಾಕರಮ್ ॥೮೧॥

ಯಥಾ ಚ ನ ಪರದ್ರವ್ಯೇ ಪರದಾರೇ ಚ ಮೇ ಮತಿಃ ।
ಕದಾಚಿತ್ಸಾಭಿಲಾಷಾಭೂತ್ತಥೈತತ್ಸಿದ್ಧಿಮೇತು ಮೇ ॥೮೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸ್ವಾರೋಚಿಷೇ ಮನ್ವನ್ತರೇ ಬ್ರಾಹ್ಮಣವಾಕ್ಯಂ ನಾಮ ಅಷ್ಟಪಞ್ಚಾಶತ್ತಮೋಽಧ್ಯಾಯಃ

---

೭೯. ನಿಮ್ಮ ತೃಪ್ತಿಯಿಂದ ದೇವತೆಗಳು ಪ್ರಸನ್ನರಾಗಿ ಮಳೆ-ಸಸ್ಯ ಮುಂತಾದುವುಗಳಿಗೆ ಕಾರಣರಾಗುವರು. ಸಸ್ಯವರ್ಗದಿಂದ ಸಮಸ್ತ ಜಗತ್ತಿನ ಚಕ್ರವು ನಡೆಯುವುದು. ಬೇರೆ ಯಾವುದರಿಂದಲೂ ನಡೆಯುವುದಿಲ್ಲ.

೮೦. ಹೀಗೆ ಸಕಲ ವಿಶ್ವವೂ ನಿನ್ನಿಂದ ಸಂಭವಿಸುವುದು. ಯಾವ ನಿನ್ನ ಸತ್ಯಾಂಶವು ಜಗತ್ತಿನ ಪರಿವರ್ತನಕ್ಕೆ ಕಾರಣವಾಗಿರುವುದೋ ಆ ಸತ್ಯಬಲದಿಂದ ಸೂರ್ಯನು ಅಸ್ತಮಯವಾಗದೆ ಪ್ರಕಾಶಿಸುತ್ತಿರುವ ಹಾಗೆಯೇ ನಾನು ನನ್ನ ಮನೆಯನ್ನು ನೋಡುವಂತೆ ಆಗಲಿ.

೮೧. ನನ್ನಿಂದ ಆಯಾಯ ಸಮಯದಲ್ಲಿ ಮಾಡಬೇಕಾದ ವೈದಿಕ-ಕರ್ಮವು ಲೋಪವಿಲ್ಲದೆ ಆಚರಿಸಲ್ಪಟ್ಟಿದೆಯಾದರೆ ಆ ಸತ್ಯದಿಂದ ಇಂದು ಮನೆಯನ್ನು ಸೇರಿ ಸೂರ್ಯಬಿಂಬವನ್ನು ನೋಡುವೆನು.

೮೨. ಪರದ್ರವ್ಯದಲ್ಲಿಯಾಗಲಿ, ಪರಸ್ತ್ರೀಯಲ್ಲಿಯಾಗಲಿ ನನ್ನ ಬುದ್ಧಿಯು ಎಂದೂ ಅಭಿಲಾಷೆಯನ್ನು ಹೊಂದದಿರುವುದು ಸತ್ಯವಾಗಿದ್ದರೆ ಆ ಸತ್ಯಬಲದಿಂದ ಇಂದು ನನಗೆ ಸೂರ್ಯಾಸ್ತಮಯಕ್ಕೆ ಮುಂಚೆ ಮನೆಗೆ ಹೋಗುವ ಸಿದ್ಧಿಯು ಲಭಿಸಲಿ.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತೆಂಟನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನಷಷ್ಟಿತಮೋಽಧ್ಯಾಯಃ

(ವರೂಥಿನ್ಯಾ ಗನ್ಧರ್ವಸಙ್ಗಃ)

ಮಾರ್ಕಣ್ಡೇಯ ಉವಾಚ :—

ಏವಂ ತು ವದತಸ್ತಸ್ಯ ದ್ವಿಜಪುತ್ರಸ್ಯ ಪಾವಕಃ ।
ಗಾರ್ಹಪತ್ಯಃ ಶರೀರೇ ತು ಸನ್ನಿಧಾನಮಥಾಕರೋತ್ ॥೧॥

ತೇನ ಚಾಧಿಷ್ಠಿತಃ ಸೋಽಥ ಪ್ರಭಾಮಣ್ಡಲಮಧ್ಯಗಃ ।
ವ್ಯದೀಪಯತ ತಂ ದೇಶಂ ಮೂರ್ತಿಮಾನಿವ ಹವ್ಯವಾಟ್ ॥೨॥

ತಸ್ಯಾಸ್ತು ಸುತರಾಂ ತತ್ರ ತಾದೃಗ್ರೂಪೇ ದ್ವಿಜನ್ಮನಿ ।
ಅನುರಾಗೋಽಭವದ್ವಿಪ್ರಂ ಪಶ್ಯನ್ತ್ಯಾ ದೇವಯೋಷಿತಃ ॥೩॥

ಐವತ್ತೊಂಭತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಮುಂದುವರಿಸಿದನು :—

೧. ಆ ದ್ವಿಜಪುತ್ರನು ಶ್ರದ್ಧಾತಿರೇಕದಿಂದ ಈ ರೀತಿಯಾಗಿ ನುಡಿಯುತ್ತಿರಲು ತರುವಾಯ ಗಾರ್ಹಪತ್ಯವೆಂಬ ಅಗ್ನಿಯು ಪ್ರಸನ್ನನಾಗಿ ಕೂಡಲೆ ಅವನ ದೇಹದಲ್ಲಿ ತನ್ನ ಸನ್ನಿಧಿಯನ್ನು ಇಟ್ಟನು.

೨. ತರುವಾಯ ಗಾರ್ಹಪತ್ಯಾಗ್ನಿಯ ಆವೇಶದಿಂದ ಕೂಡಿದ ಆ ವಿಪ್ರನು ಪ್ರಭಾಮಂಡಲದ ಮಧ್ಯದಲ್ಲಿ ನಿಂತಂತೆ ಆಗಿ ಮೂರ್ತಿಧಾರಿಯಾಗಿ ಬಂದಿರುವ ಅಗ್ನಿದೇವನಂತೆ ಆ ಪ್ರದೇಶವನ್ನು ಬೆಳಗಿದನು.

೩. ಆಗ ಅತ್ಯುಜ್ಜ್ವಲವಾದ ರೂಪವನ್ನು ಧರಿಸಿದ ಆ ವಿಪ್ರೋತ್ತಮನಲ್ಲಿ ಅವನನ್ನು ಹಾಗೆಯೇ ನೋಡುತ್ತಿದ್ದ ದಿವ್ಯ ಅಪ್ಸರಾಂಗನೆಯಾದ ವರೂಥಿನಿಗೆ ಮೊದಲಿಗಿಂತಲೂ ಹೆಚ್ಚಾಗಿ ಅನುರಾಗವು ವೃದ್ಧಿಯಾಯಿತು.

ತತಃ ಸೋಽಧಿಷ್ಠಿತಸ್ತೇನ ಹವ್ಯವಾಹೇನ ತತ್ಕ್ಷಣಾತ್ ।
ಯಥಾ ಪೂರ್ವಂ ತಥಾ ಗನ್ತುಂ ಪ್ರವೃತ್ತೋ ದ್ವಿಜನನ್ದನಃ ॥೪॥

ಜಗಾಮ ಚ ತ್ವರಾಯುಕ್ತಸ್ತಯಾ ಸಾಸ್ರಂ ನಿರೀಕ್ಷಿತಃ ।
ಆದೃಷ್ಟಿಪಾತಾತ್ತನ್ವಙ್ಗ್ಯಾ ನಿಶ್ವಾಸೋತ್ಕಮ್ಪಿಕನ್ಧರಮ್ ॥೫॥

ತತಃ ಕ್ಷಣೇನೈವ ತದಾ ನಿಜಗೇಹಮವಾಪ್ಯ ಸಃ ।
ಯಥಾ ಪ್ರೋಕ್ತಂ ದ್ವಿಜಶ್ರೇಷ್ಠಶ್ಚಕಾರ ಸಕಲಾಃ ಕ್ರಿಯಾಃ ॥೬॥

ಅಥ ಸಾ ಚಾರುಸರ್ವಾಙ್ಗೀ ತತ್ರಾಸಕ್ತಾತ್ಮಮಾನಸಾ ।
ನಿಶ್ವಾಸಪರಮಾ ನಿನ್ಯೇ ದಿನಶೇಷಂ ತಥಾ ನಿಶಾಮ್ ॥೭॥

ನಿಶ್ವಸನ್ತ್ಯನವದ್ಯಾಙ್ಗೀ ಹಾಹೇತಿ ರುದತೀ ಮುಹುಃ ।
ಮನ್ದಭಾಗ್ಯೇತಿ ಚಾತ್ಮಾನಂ ನಿನಿನ್ದ ಮದಿರೇಕ್ಷಣಾ ॥೮॥

---

೪. ತರುವಾಯ ಹಾಗೆ ಗಾರ್ಹಪತ್ಯಾಗ್ನಿಯ ಸನ್ನಿಧಾನದಿಂದ ಕೂಡಿದ ಆ ವಿಪ್ರೋತ್ತಮನು ಆ ಕ್ಷಣದಲ್ಲಿ ಮೊದಲು ಹೇಗೋ ಹಾಗೆಯೇ ನಡೆಯಲು ಆರಂಭಿಸಿದನು.

೫. ಮತ್ತು ಕೃಶಾಂಗಿಯಾದ ವರೂಥಿನಿಯು ನಿಶ್ವಾಸದಿಂದ ತೂಗಾಡುವ ಕಂಠವಿರುವಂತೆ ತನ್ನ ದೃಷ್ಟಿಗೆ ಕಾಣುತ್ತಿರುವಷ್ಟು ದೂರದವರೆಗೆ ಕಣ್ಣೀರಿಡುತ್ತ ನೋಡಲ್ಪಟ್ಟವನಾಗಿ ಬಹು ತ್ವರೆಯಿಂದ ಅಲ್ಲಿಂದ ಹೊರಟುಹೋದನು.

೬. ಅನಂತರದಲ್ಲಿ ಆ ದ್ವಿಜೋತ್ತಮನು ನಿಮಿಷಮಾತ್ರದಲ್ಲಿ ತನ್ನ ಮನೆಯನ್ನು ಸೇರಿದವನಾಗಿ ಆಗ ಹಿಂದೆ ತಾನು ಹೇಳಿರುವಹಾಗೆ ಮಾಡಬೇಕೆಂದಿರುವ ಎಲ್ಲ ನಿತ್ಯ-ನೈಮಿತ್ತಿಕ ಕ್ರಿಯೆಗಳನ್ನು ಆಚರಿಸಿದನು.

೭. ಅನಂತರದಲ್ಲಿ ಆ ದ್ವಿಜನಲ್ಲಿ ಪ್ರೀತಿಯಿಟ್ಟ ತನ್ನ ಮಾನಸವುಳ್ಳವಳೂ ಸುಂದರವಾದ ಸರ್ವಾಂಗವುಳ್ಳವಳೂ ಆದ ವರೂಥಿನಿಯು ಹೆಚ್ಚಾಗಿ ಉಸಿರು ಬಿಡುತ್ತ ಉಳಿದಿರುವ ಹಗಲಿನ ಭಾಗವನ್ನೂ ಹಾಗು ರಾತ್ರಿಯನ್ನೂ ಕಳೆದಳು.

೮. ಮದವಿಕಾರಗಳಿಂದ ಶೋಭಿಸುವ ದೃಷ್ಟಿಯುಳ್ಳವಳೂ, ನಿರ್ದುಷ್ಟವಾದ ಅಂಗವುಳ್ಳವಳೂ ಆದ ವರೂಥಿನಿಯು ಉಸಿರುಬಿಡುತ್ತಲೂ "ಅಯ್ಯೋ" ಎಂದು ಗಟ್ಟಿಯಾಗಿ ಅಳುತ್ತಲೂ ಮತ್ತೆ ಮತ್ತೆ ನಾನೆಂತಹ ನಿರ್ಭಾಗ್ಯಳೆಂದು ತನ್ನನ್ನು ನಿಂದಿಸಿಕೊಂಡಳು.

ನ ವಿಹಾರೇ ನ ಚಾಹಾರೇ ರಮಣೀಯೇ ನ ವಾ ವನೇ ।
ನ ಕನ್ದರೇಷು ರಮ್ಯೇಷು ಸಾ ಬಬನ್ಧ ತದಾ ರತಿಮ್ ॥೯॥

ಚಕಾರ ರಮಮಾಣೇ ಚ ಚಕ್ರವಾಕಯುಗೇ ಸ್ಪೃಹಾಮ್ ।
ಮುಕ್ತಾ ತೇನ ವರಾರೋಹಾ ನಿನಿನ್ದ ನಿಜಯೌವನಮ್ ॥೧೦॥

ಕ್ವಾಗತಾಹಮಿಮಂ ಶೈಲಂ ದುಷ್ಟದೈವಬಲಾತ್ಕೃತಾ ।
ಕ್ವ ಚ ಪ್ರಾಪ್ತಃ ಸ ಮೇ ದೃಷ್ಟೇರ್ಗೋಚರಂ ತಾದೃಶೋ ನರಃ॥೧೧॥

ಯದದ್ಯ ಸ ಮಹಾಭಾಗೋ ನ ಮೇ ಸಙ್ಗಮುಪೈಷ್ಯತಿ ।
ತತ್ಕಾಮಾಗ್ನಿರವಶ್ಯಂ ಮಾಂ ಕ್ಷಪಯಿಷ್ಯತಿ ದುಸ್ಸಹಃ ॥೧೨॥

---

೯. ಹಾಗೆ ದುಃಖಭಾಗಿನಿಯಾದ ವರೂಥಿನಿಯು ವಿಹಾರದಲ್ಲಿ, ಆಹಾರ ಸೇವನೆಯಲ್ಲಿ, ರಮಣೀಯವಾದ ವನದಲ್ಲಿ ಅಥವಾ ಸುಂದರವಾದ ಗುಹೆಗಳಲ್ಲಿ ಯಾವುದರಲ್ಲಿಯೂ ಪ್ರೀತಿಯನ್ನು ಹೊಂದಲಿಲ್ಲ. ಎಲ್ಲವೂ ಅವಳಿಗೆ ಬೇಡವೆಂದೆನಿಸಿತು.

೧೦. ಹಾಗು ಪ್ರೇಮದಿಂದ ರಮಿಸುತ್ತಿದ್ದ ಚಕ್ರವಾಕಪಕ್ಷಿಗಳ ಜೊತೆಯಲ್ಲಿ ಕುತೂಹಲದಿಂದ ದೃಷ್ಟಿಯನ್ನಿಟ್ಟಳು. ಹಾಗೆ ದ್ವಿಜನಿಂದ ಬಿಡಲ್ಪಟ್ಟ ಆ ಸುಂದರಿಯು ತನ್ನ ನಿರುಪಮವಾದ ತಾರುಣ್ಯವನ್ನು ಹೀಯಾಳಿಸಿಕೊಂಡಳು.

೧೧. ಕೆಟ್ಟವಿಧಿವಿಲಾಸದ ಬಲಾತ್ಕಾರಕ್ಕೆ ಸಿಲುಕಿದ ನಾನು ಈ ಹಿಮಾಲಯಪರ್ವತದಲ್ಲಿ ಎಲ್ಲಿ ಬಂದೆನು. ಅಂತಹ ಸೌಂದರ್ಯ-ಲಾವಣ್ಯಗಳಿಂದ ಕೂಡಿದ ಆ ಮಾನವನು ನನಗೆಲ್ಲಿ ದೃಷ್ಟಿಗೋಚರನಾದನು.

೧೨. ಯಾವ ಕಾರಣದಿಂದ ಇಂದು ಆ ಮಹಾತ್ಮನು ನನ್ನ ಸಂಗಕ್ಕೆ ಇಷ್ಟಪಡಲಿಲ್ಲವೋ ಆ ಕಾರಣದಿಂದ ಸಹಿಸಲಾಗದ ಕಾಮಾಗ್ನಿಯು ನನ್ನನ್ನು ತಪ್ಪದೇ ನಾಶಮಾಡುವನು.

ರಮಣೀಯಮಭೂದ್ಯತ್ರತತ್ಪುಂಸ್ಕೋಕಿಲನಿನಾದಿತಮ್ ।
ತೇನ ಹೀನಂ ತದೈವೈತದ್ದಹತೀವಾದ್ಯ ಮಾಮಲಮ್ ॥೧೩॥

ಮಾರ್ಕಣ್ಡೇಯ ಉವಾಚ :—

ಇತ್ಥಂ ಸಾ ಮದನಾವಿಷ್ಟಾ ಜಗಾಮ ಮುನಿಸತ್ತಮಮ್ ।
ವವೃಧೇ ಚ ತದಾ ರಾಗಸ್ತಸ್ಯಾಸ್ತಸ್ಮಿನ್ ಪ್ರತಿಕ್ಷಣಮ್ ॥೧೪॥

ಕಲಿರ್ನಾಮ್ನಾ ತು ಗನ್ಧರ್ವಃ ಸಾನುರಾಗೋ ನಿರಾಕೃತಃ ।
ತಯಾ ಪೂರ್ವಮಭೂತ್ಸೋಽಥ ತದವಸ್ಥಾಂ ದದರ್ಶ ತಾಮ್॥೧೫॥

ಸ ಚಿನ್ತಯಾಮಾಸ ತದಾ ಕಿಂ ನ್ವೇಷಾ ಗಜಗಾಮಿನೀ ।
ನಿಶ್ವಾಸಪವನಮ್ಲಾನಾ ಗಿರಾವತ್ರ ವರೂಥಿನೀ ॥೧೬॥

---

೧೩. ಯಾವ ಕೋಗಿಲೆಗಳ ಗಾನಾಮೃತವು ಆ ದ್ವಿಜನ ಸಹವಾಸದಲ್ಲಿದ್ದಾಗ ಹೃದಯಂಗಮವಾಗಿದ್ದಿತೋ ಅದೇ ಕೋಗಿಲೆಯ ನಾದವು ಅವನ ವಿಯೋಗ ಸಮಯದಲ್ಲಿ ನನ್ನನ್ನು ಸಂಪೂರ್ಣವಾಗಿ ಸುಟ್ಟುಹಾಕುವುದು.

ಮಾರ್ಕಂಡೇಯ ಮುನಿಯು ಹೀಗೆಂದನು :—

೧೪. ಈ ರೀತಿಯಾಗಿ ಕಾಮಾಗ್ನಿಯಿಂದ ತಪ್ತಳಾದ ಆ ವರೂಥಿನಿಗೆ ಆ ಮುನಿಶ್ರೇಷ್ಠನ ಬಳಿಗೆ ಹೋಗಬೇಕೆಂದೆನಿಸಿತು. ಆಗ ಆಕೆಗೆ ಆ ಮುನಿಯಲ್ಲಿ ಪ್ರತಿಕ್ಷಣದಲ್ಲಿಯೂ ಅನುರಾಗವು ವೃದ್ಧಿಯಾಗುತ್ತ ಬಂತು.

೧೫. ಹಿಂದೆ ಕಲಿ ಎಂಬ ನಾಮಾಂಕನವುಳ್ಳ ಗಂಧರ್ವನು ಆಕೆಯನ್ನು ಪ್ರೀತಿಸಿ ಅವಳಿಂದ ನಿರಾಕರಿಸಲ್ಪಟ್ಟಿದ್ದನು. ಆಗ ಆ ಅವಸ್ಥೆಯಲ್ಲಿದ್ದ ವರೂಥಿನಿಯನ್ನು ಕಲಿಗಂಧರ್ವನು ನೋಡಿದನು.

೧೬. ಕಲಿಗಂಧರ್ವನು ಆಕೆಯನ್ನು ನೋಡಿ ಹೀಗೆ ಚಿಂತಿಸಿದನು. ಗಜಗಮನೆಯಾದ ವರೂಥಿನಿಯು ಈ ಹಿಮವತ್ಪರ್ವತದಲ್ಲಿ ದುಃಖನಿಶ್ವಾಸಮಾರುತದಿಂದ ಬಾಡಿಹೋಗಿರುವಳು. ಹೀಗೇಕೆ ಆಗಿರಬಹುದು!

ಮುನಿಶಾಪಕ್ಷತಾ ಕಿನ್ನು ಕೇನ ಚಿತ್ಕಿಂ ವಿಮಾನಿತಾ ।
ಬಾಷ್ಪವಾರಿಪರಿಕ್ಲಿನ್ನಮಿಯಂ ಧತ್ತೇ ಯತೋ ಮುಖಮ್ ॥೧೭॥

ತತಃ ಸ ದಧ್ಯೌ ಸುಚಿರಂ ತಮರ್ಥಂ ಕೌತುಕಾತ್ಕಲಿಃ ।
ಜ್ಞಾತವಾಂಶ್ಚ ಪ್ರಭಾವೇಣ ಸಮಾಧೇಃ ಸ ಯಥಾತಥಮ್ ॥೧೮॥

ಪುನಃ ಸ ಚಿನ್ತಯಾಮಾಸ ತದ್ವಿಜ್ಞಾಯ ಮುನೇಃ ಕಲಿಃ ।
ಮಮೋಪಪಾದಿತಂ ಸಾಧು ಭಾಗ್ಯೈರೇತತ್ಪುರಾಕೃತೈಃ ॥೧೯॥

ಮಯ್ಯೈಷಾ ಸಾನುರಾಗೇಣ ಬಹುಶಃ ಪ್ರಾರ್ಥಿತಾ ಸತೀ ।
ನಿರಾಕೃತವತೀ ಸೇಯಮದ್ಯ ಪ್ರಾಪ್ಯಾ ಭವಿಷ್ಯತಿ ॥೨೦॥

---

೧೭. ಯಾರಾದರೊಬ್ಬ ಮುನಿಯ ಶಾಪದಿಂದ ಪೀಡಿಸಲ್ಪಟ್ಟಿರಬಹುದೇ? ಅಥವಾ ಇನ್ನಾರಿಂದಲಾದರೂ ಅವಮಾನಿಸಲ್ಪಟ್ಟಿರುವಳೆ? ಇವಳು ಹೀಗೇಕೆ ಕಣ್ಣೀರಿನ ಪ್ರವಾಹದಿಂದ ಒದ್ದೆಯಾದ ಮುಖವನ್ನು ಧರಿಸಿರುವಳು.

೧೮. ತರುವಾಯ ಆ ಕಲಿಯೆಂಬ ಗಂಧರ್ವನು ಅತಿಕುತೂಹಲದಿಂದ ಆ ವಿಷಯವನ್ನು ಚಿರಕಾಲ ಏಕಾಗ್ರತೆಯಿಂದ ಧ್ಯಾನಿಸಿದನು. ಮತ್ತು ಸಮಾಧಿಯ ಪ್ರಭಾವದಿಂದ ಅವನು ನಿಜಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಡನು.

೧೯. ಮತ್ತು ಕಲಿಗಂಧರ್ವನು ಆಕೆಯನ್ನು ನಿರಾಕರಿಸಿದ ಮುನಿಯ ವೃತ್ತಾಂತವನ್ನು ತಿಳಿದು ಮತ್ತೆ ಹೀಗೆಂದು ಚಿಂತಿಸಿಕೊಂಡನು. ತನ್ನ ಪೂರ್ವಜನ್ಮಾರ್ಜಿತವಾದ ಭಾಗ್ಯದಿಂದ ಇವೆಲ್ಲವೂ ನನಗೆ ಅನುಕೂಲವಾಗಿ ಮಾಡಲ್ಪಟ್ಟಿದೆ.

೨೦. ಈಕೆಯಲ್ಲಿ ಅನುರಾಗಪೂರ್ಣನಾದ ನನ್ನಿಂದ ಅನೇಕಸಲ ಈಕೆಯು ಪ್ರಾರ್ಥಿಸಲ್ಪಟ್ಟರೂ ಕೂಡ ನನ್ನನ್ನು ನಿರಾಕರಿಸಿರುವಳು. ಈಗ ಇವಳು ನನಗೆ ವಶಳಾಗಿ ದೊರೆಯಬಹುದು.

ಮಾನುಷೇ ಸಾನುರಾಗೇಯಂ ತತ್ರ ತದ್ರೂಪಧಾರಿಣಿ ।
ರಂಸ್ಯತೇ ಮಯ್ಯಸನ್ದಿಗ್ಧಂ ಕಿಂ ಕಾಲೇನ ಕರೋಮಿ ತತ್ ॥೨೧॥

ಮಾರ್ಕಣ್ಡೇಯ ಉವಾಚ :

ಆತ್ಮಪ್ರಭಾವೇಣ ತತಸ್ತಸ್ಯ ರೂಪಂ ದ್ವಿಜನ್ಮನಃ ।
ಕೃತ್ವಾ ಚಚಾರ ಯತ್ರಾಸ್ತೇ ನಿಷಣ್ಣಾ ಸಾ ವರೂಥಿನೀ ॥೨೨॥

ಸಾ ತಂ ದೃಷ್ಟ್ವಾ ವರಾರೋಹಾ ಕಿಂಚಿದುತ್ಫುಲ್ಲಲೋಚನಾ ।
ಸಮೇತ್ಯ ಪ್ರಾಹ ತನ್ವಙ್ಗೀ ಪ್ರಸೀದೇತಿ ಪುನಃ ಪುನಃ ॥೨೩॥

ತ್ವಯಾ ತ್ಯಕ್ತಾ ನ ಸನ್ದೇಹಃ ಪರಿತ್ಯಕ್ಷ್ಯಾಮಿ ಜೀವಿತಮ್ ।
ತತ್ರಾಧರ್ಮಃ ಕಷ್ಟತರಃ ಕ್ರಿಯಾಲೋಪೋ ಭವಿಷ್ಯತಿ ॥೨೪॥

---

೨೧. ಇವಳು ಮಾನುಷನಾದ ಆ ವಿಪ್ರನಲ್ಲಿ ಅನುರಾಗವತಿಯಾಗಿರುವಳು. ಆದುದರಿಂದ ಆ ವಿಪ್ರರೂಪವನ್ನು ಧರಿಸಿದ ನನ್ನಲ್ಲಿ ಈಕೆಯು ನಿಸ್ಸಂಶಯವಾಗಿ ರಮಿಸುವಳು. ಇದಕ್ಕೆ ವಿಳಂಬವೇಕೆ? ಬೇಗ ಹಾಗೆಯೇ ಮಾಡುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೨೨. ತರುವಾಯ ಕಲಿಗಂಧರ್ವನು ತನ್ನ ಪ್ರಭಾವದಿಂದ ಆ ದ್ವಿಜೋತ್ತಮನ ರೂಪವನ್ನು ಧರಿಸಿ ಆ ವರೂಥಿನಿಯು ಕುಳಿತುಕೊಂಡಿರುವ ಪ್ರದೇಶದಲ್ಲಿ ಅವಳ ಮುಂದೆ ಸಂಚಾರಮಾಡಿದನು.

೨೩. ಸುಂದರಿಯೂ ಕೃಶಾಂಗಿಯೂ ಆದ ಆ ವರೂಥಿನಿಯು ದ್ವಿಜರೂಪಧಾರಿಯಾದ ಕಲಿಯನ್ನು ನೋಡಿ ಸ್ವಲ್ಪ ಅರಳಿದ ಕಣ್ಣುಗಳುಳ್ಳವಳಾಗಿ ಅವನ ಬಳಿಗೆ ಬಂದು ಮತ್ತೆ ಮತ್ತೆ ಅನುಗ್ರಹತೋರೆಂದು ಹೇಳಿಕೊಂಡಳು.

೨೪. ನಿನ್ನಿಂದ ವರ್ಜಿಸಲ್ಪಟ್ಟ ನಾನು ಜೀವಿತವನ್ನು ತ್ಯಜಿಸುವೆನು. ಇದರಲ್ಲಿ ಸಂದೇಹವಿಲ್ಲ. ಆಗ ನಿನಗೆ ಸಹಿಸಲಾಗದ ಪರಿಣಾಮವನ್ನು ಕೊಡುವ ಅಧರ್ಮವೂ ಕ್ರಿಯಾಲೋಪವೂ ಉಂಟಾಗುವುದು,

ಮಯಾ ಸಮೇತ್ಯ ರಮ್ಯೇಽಸ್ಮಿನ್ಮಹಾತ್ಮನ್ವನಕನ್ದರೇ ।
ಮತ್ಪರಿತ್ರಾಣದಂ ಧರ್ಮಮವಶ್ಯಂ ಪ್ರತಿಪತ್ಸ್ಯಸೇ ॥೨೫॥

ಆಯುಷಃ ಸಾವಶೇಷಂ ಮೇ ನೂನಮಸ್ತಿ ಮಹಾಮತೇ ।
ನಿವೃತ್ತಸ್ತೇನ ನೂನಂ ತ್ವಂ ಹೃದಯಾಹ್ಲಾದಕಾರಕಃ ॥೨೬॥

ಕಲಿರುವಾಚ :—

ಕಿಂ ಕರೋಮಿ ಕ್ರಿಯಾಹಾನಿರ್ಭವತ್ಯತ್ರ ಸತೋ ಮಮ ।
ತ್ವಮಪ್ಯೇವಂವಿಧಂ ವಾಕ್ಯಂ ಬ್ರವೀಷಿ ತನುಮಧ್ಯಮೇ ॥೨೭॥

ತದಹಂ ಸಙ್ಕಟಂ ಪ್ರಾಪ್ತೋ ಯದ್ಬ್ರವೀಮಿ ಕರೋಷಿ ತತ್ ।
ಯದಿ ಸ್ಯಾತ್ಸಙ್ಗಮೋ ಮೇಽದ್ಯ ಭವತ್ಯಾ ಸಹ ನಾನ್ಯಥಾ ॥೨೮॥

---

೨೫. ಎಲೈ ಮಹಾತ್ಮನೇ! ರಮಣೀಯವಾದ ಈ ಅರಣ್ಯ-ಗುಹೆಗಳಲ್ಲಿ ನನ್ನೊಡನೆ ಸೇರಿ ಸುಖವಾಗಿ ವಾಸಮಾಡುತ್ತ ನನ್ನನ್ನು ರಕ್ಷಿಸಿದ ಧರ್ಮವನ್ನು ಅವಶ್ಯವಾಗಿ ಆರ್ಜಿಸುತ್ತೀಯೆ.

೨೬. ಎಲೈ ಮಹಾಪ್ರಜ್ಞಾಶಾಲಿಯೆ! ನನಗೆ ಇನ್ನೂ ಹೆಚ್ಚು ಆಯುಷ್ಯದ ಶೇಷವಿದೆಯೆಂಬುದು ನಿಜವಾದ ಮಾತು. ಅದರಿಂದ ಹೃದಯಕ್ಕೆ ಆಹ್ಲಾದವನ್ನುಂಟುಮಾಡುವ ನೀನು ಮತ್ತೆ ಇಲ್ಲಿಗೆ ಬಂದಿರುತ್ತೀಯೆ.

ಕಲಿಯು ಹೀಗೆಂದನು :—

೨೭. ಕೃಶವಾದ ನಡುವುಳ್ಳ ಸುಂದರಿಯೇ! ನಾನೇನು ಮಾಡಲಿ? ಇಲ್ಲಿಯೇ ವಾಸಮಾಡುವುದರಿಂದ ನನಗೆ ಧರ್ಮಕ್ರಿಯಾಲೋಪವುಂಟಾಗುವುದು. ನೀನಾದರೋ ಇಂತಹ ಮಾತುಗಳನ್ನು ಆಡುತ್ತಿದ್ದೀಯೆ.

೨೮. ಆದುದರಿಂದ ನಾನಿಂದು ದೊಡ್ಡ ಸಂಕಟಕ್ಕೆ ಗುರಿಯಾಗಿದ್ದೇನೆ. ನೀನೀಗ ನಾನು ಏನು ಹೇಳಿದರೂ ಅದನ್ನು ಮಾಡುವೆಯಾದರೆ ಈಗ ನಿನ್ನೊಡನೆ ಸಂಗವನ್ನು ಇಷ್ಟಪಡುವೆನು. ಹಾಗಿಲ್ಲದಿದ್ದರೆ ನಾನು ಇಷ್ಟಪಡುವುದಿಲ್ಲ.

ವರೂಥಿನ್ಯುವಾಚ :—

ಪ್ರಸೀದ ಯದ್ಬ್ರವೀಷಿ ತ್ವಂ ತತ್ಕರೋಮಿ ನ ತೇ ಮೃಷಾ ।
ಬ್ರವೀಮ್ಯೇತದನಾಶಙ್ಕಂ ಯತ್ತತ್ಕಾರ್ಯಂ ಮಯಾಧುನಾ ॥೨೯॥

ಕಲಿರುವಾಚ : –

ನಾದ್ಯ ಸಮ್ಭೋಗಸಮಯೇ ದ್ರಷ್ಟವ್ಯೋಽಹಂ ತ್ವಯಾ ವನೇ ।
ನಿಮೀಲಿತಾಕ್ಷ್ಯಾಃ ಸಂಸರ್ಗಸ್ತವ ಸುಭ್ರು ಮಯಾ ಸಹ ॥೩೦॥

ವರೂಥಿನ್ಯುವಾಚ :—

ಏವಂ ಭವತು ಭದ್ರಂ ತೇ ಯಥೇಚ್ಛಸಿ ತಥಾಸ್ತು ತತ್ ।
ಮಯಾ ಸರ್ವಪ್ರಕಾರಂ ಹಿ ವಶೇ ಸ್ಥೇಯಂ ತವಾಧುನಾ ॥೩೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸ್ವಾರೋಚಿಷೇ ಮನ್ವನ್ತರೇ
ಏಕೋನಷಷ್ಟಿತಮೋಽಧ್ಯಾಯಃ

ವರೂಥಿನಿಯು ಇಂತೆಂದಳು :—

೨೯ ಕಾಂತನೇ! ಪ್ರಸನ್ನನಾಗು. ನೀನು ಏನು ಆಜ್ಞಾಪಿಸುವಿಯೋ ನಾನು ಅದನ್ನು ಮಾಡುವೆನು. ನಿನ್ನೆದುರು ಸುಳ್ಳು ಹೇಳಲಾರೆನು. ನಾನು ಈಗ ಮಾಡಬೇಕಾದುದನ್ನು ನಿಸ್ಸಂದೇಹವಾಗಿ ಹೇಳು.

ಕಲಿಯು ಹೇಳಿದನು :—

೩೦. ಸುಂದರವಾದ ಹುಬ್ಬುಗಳಿಂದ ಶೋಭಿತಳೇ! ರತಿಸುಖ ಭೋಗದ ಸಮಯದಲ್ಲಿ ಇಂದು ಈ ಅರಣ್ಯದಲ್ಲಿ ನೀನು ನನ್ನನ್ನು ನೋಡಬಾರದು. ಕಣ್ಣನ್ನು ಮುಚ್ಚಿಕೊಂಡಿರುವ ಹಾಗೆ ನಿನ್ನೊಡನೆ ನನಗೆ ಸಂಗಸುಖವು ದೊರೆಯಲಿ.

ವರೂಥಿನಿಯು ಇಂತೆಂದಳು :—

೩೧. ಹಾಗೇ ಆಗಲಿ. ನಿನಗೆ ಮಂಗಳವಾಗಲಿ. ನೀನು ಹೇಗೆ ಇಷ್ಟಪಡುತ್ತಲಿರುವೆಯೋ ಹಾಗೇ ಆಗಲಿ. ನಾನು ಈಗ ಎಲ್ಲ ಬಗೆಗಳಲ್ಲಿಯೂ ನಿನ್ನ ಅಧೀನಳಾಗಿ ಇರುವೆನಲ್ಲವೇ, ನಿನ್ನ ಇಷ್ಟದಂತೆ ನಾನು ನಡೆಯುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಷ್ಟಿತಮೋಽಧ್ಯಾಯಃ

(ಸ್ವರೋಚಿಕುಮಾರಸಂಭವಃ)

ಮಾರ್ಕಣ್ಡೇಯ ಉವಾಚ :—

ತತಃ ಸಹ ತಯಾ ಸೋಽಥ ರರಾಮ ಗಿರಿಸಾನುಷು ।
ಫುಲ್ಲಕಾನನಹೃದ್ಯೇಷು ಮನೋಜ್ಞೇಷು ಸರಸ್ಸು ಚ ॥೧॥

ಕನ್ದರೇಷು ಚ ರಮ್ಯೇಷು ನಿಮ್ನಗಾಪುಲಿನೇಷು ಚ ।
ಮನೋಜ್ಞೇಷು ತಥಾನ್ಯೇಷು ದೇಶೇಷು ಮುದಿತೋ ದ್ವಿಜ ॥೨॥

ಅರವತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ನುಡಿದನು :—

೧. ತರುವಾಯ ಆ ಕಲಿಗಂಧರ್ವನು ವರೂಥಿನಿಯೊಡನೆ ಪರ್ವತಗಳ ತಪ್ಪಲು, ಅರಳಿದ ಹೂಗಳಿಂದ ರಾಜಿಸುವ ವನಪಂಕ್ತಿ, ಮತ್ತು ಹೃದಯಂಗಮವಾದ ಜಲಾಶಯ—ಪ್ರದೇಶಗಳಲ್ಲಿ ವಿಹರಿಸಿದನು.

೨. ದ್ವಿಜೋತ್ತಮನಾದ ಕ್ರೌಷ್ಟುಕಿಯೇ ! ರಮಣೀಯವಾದ ಗುಹೆಗಳಲ್ಲಿಯೂ, ನದೀತೀರಗಳಲ್ಲಿರುವ ಮರಳು ದಿಣ್ಣೆಗಳಲ್ಲಿಯೂ ಮತ್ತು ಸುಂದರವಾದ ಇತರ ಅನೇಕ ಪ್ರದೇಶಗಳಲ್ಲಿಯೂ ಅವರಿಬ್ಬರು ವಿಹಾರ ಸುಖವನ್ನು ಅನುಭವಿಸಿದರು.

ವಹ್ನಿನಾಧಿಷ್ಠಿತಸ್ಯಾಸೀದ್ಯದ್ರೂಪಂ ತಸ್ಯ ತೇಜಸಾ ।
ಅಚಿನ್ತಯದ್ಭೋಗಕಾಲೇ ನಿಮೀಲಿತವಿಲೋಚನಾ ॥೩॥

ತತಃ ಕಾಲೇನ ಸಾ ಗರ್ಭಮವಾಪ ಮುನಿಸತ್ತಮ ।
ಗನ್ಧರ್ವವೀರ್ಯತೋ ರೂಪಂ ಚಿನ್ತನಾಚ್ಚ ದ್ವಿಜನ್ಮನಃ ॥೪॥

ತಾಂ ಗರ್ಭಧಾರಿಣೀಂ ಸೋಽಥ ಸಾನ್ತ್ವಯಿತ್ವಾ ವರೂಥಿನೀಮ್ ।
ವಿಪ್ರರೂಪಧರೋ ಯಾತಸ್ತಯಾ ಪ್ರೀತ್ಯಾ ವಿಸರ್ಜಿತಃ ॥೫॥

ಜಜ್ಞೇ ಸ ಬಾಲೋ ದ್ಯುತಿಮಾಞ್ಜ್ವಲನ್ನಿವ ವಿಭಾವಸುಃ ।
ಸ್ವರೋಚಿಭಿರ್ಯಥಾ ಸೂರ್ಯೋ ಭಾಸಯನ್ ಸಕಲಾ ದಿಶಃ ॥೬॥

---

೩. ವರೂಥಿನಿಯು ತನ್ನ ಪ್ರಿಯನ ಸಂಗಮದ ಸಮಯದಲ್ಲಿ ತಾನು ಪ್ರೀತಿಸಿದ ದ್ವಿಜನಲ್ಲಿ ಅಗ್ನಿಯ ಸನ್ನಿಧಿಯುಂಟಾದಾಗ ತೇಜಸ್ಸಿನಿಂದ ಜಾಜ್ವಲ್ಯಮಾನವಾದ ಯಾವ ರೂಪವಿದ್ದಿತೋ ಅದನ್ನು ಕಣ್ಣನ್ನು ಮುಚ್ಚಿಕೊಂಡು ಅಂತರಂಗದಲ್ಲಿ ಧ್ಯಾನಿಸಿದಳು.

೪. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ತರುವಾಯ ಆ ವರೂಥಿನಿಯು ಕೆಲವು ಕಾಲದ ಅನಂತರದಲ್ಲಿ ಕಲಿಗಂಧರ್ವನ ವೀರ್ಯದಿಂದಲೂ ದ್ವಿಜೋತ್ತಮನ ರೂಪದ ಚಿಂತನದಿಂದಲೂ ಗರ್ಭವನ್ನು ಧರಿಸಿದಳು.

೫. ತರುವಾಯ ವಿಪ್ರನ ರೂಪವನ್ನು ಧರಿಸಿದ್ದ ಆ ಕಲಿಗಂಧರ್ವನು ಗರ್ಭವತಿಯಾದ ವರೂಥಿನಿಯನ್ನು ಸಮಾಧಾನಗೊಳಿಸಿ ಆಕೆಯು ಪ್ರೀತಿಪೂರ್ವಕ ತನ್ನನ್ನು ಬಿಟ್ಟುಕೊಡಲಾಗಿ ಹೊರಟುಹೋದನು.

೬. ಅತಿತೇಜಸ್ವಿಯೂ ಜ್ವಲಿಸುತ್ತಿದ್ದ ಅಗ್ನಿಯಂತೊಪ್ಪುವವನೂ ಆದ ಆ ಬಾಲಕನು ಗರ್ಭದಿಂದ ಜನ್ಮವೆತ್ತಿದನು. ಮತ್ತು ಕಿರಣಗಳಿಂದ ಸೂರ್ಯನು ಸಕಲ ದಿಕ್ಕುಗಳನ್ನು ಪ್ರಕಾಶಗೊಳಿಸುವಂತೆ ತನ್ನ ತೇಜಃಪುಂಜದಿಂದ ಎಲ್ಲವನ್ನೂ ಬೆಳಗಿದನು.

ಸ್ವರೋಚಿಭಿರ್ಯತೋ ಭಾತಿ ಭಾಸ್ವಾನಿವ ಸ ಬಾಲಕಃ ।
ತತಃ ಸ್ವರೋಚಿರಿತ್ಯೇವಂ ನಾಮ್ನಾ ಖ್ಯಾತೋ ಬಭೂವ ಸಃ ॥೭॥

ವವೃಧೇ ಚ ಮಹಾಭಾಗೋ ವಯಸಾನುದಿನಂ ತಥಾ ।
ಗುಣೌಘೈಶ್ಚ ಯಥಾ ಬಾಲಃ ಕಲಾಭಿಃ ಶಶಲಾಞ್ಛನಃ ॥೮॥

ಸ ಜಗ್ರಾಹ ಧನುರ್ವೇದಂ ವೇದಾಂಶ್ಚೈವ ಯಥಾಕ್ರಮಮ್ ।
ವಿದ್ಯಾಶ್ಚೈವ ಮಹಾಭಾಗಸ್ತದಾ ಯೌವನಗೋಚರಃ ॥೯॥

ಮನ್ದರಾದ್ರೌ ಕದಾಚಿತ್ಸ ವಿಚರಂಶ್ಚಾರುಚೇಷ್ಟಿತಃ ।
ದದರ್ಶೈಕಾಂ ತದಾ ಕನ್ಯಾಂ ಗಿರಿಪ್ರಸ್ಥೇ ಭಯಾತುರಾಮ್ ॥೧೦॥

---

೭. ಆ ಬಾಲಕನು ಸೂರ್ಯದೇವನಂತೆ ತನ್ನ ಕಿರಣಗಳಿಂದ ಪ್ರಕಾಶಿಸುತ್ತಲಿದ್ದನು. ಆದುದರಿಂದ ಅವನು "ಸ್ವರೋಚಿ" ಎಂದು ಅನ್ವರ್ಥವಾದ ನಾಮಾಂಕನದಿಂದ ಖ್ಯಾತಿಯನ್ನು ಹೊಂದಿದನು.

೮. ಮಹಾಭಾಗ್ಯಶಾಲಿಯಾದ ಆ ಬಾಲಕನು ವಯಸ್ಸಿನಿಂದಲೂ ಮತ್ತು ಸದ್ಗುಣರಾಶಿಯಿಂದಲೂ ಕಲೆಗಳಿಂದ ವೃದ್ಧಿಹೊಂದುತ್ತಿರುವ ಚಂದ್ರನಂತೆ ಪ್ರತಿದಿನದಲ್ಲಿಯೂ ವೃದ್ಧಿಹೊಂದಿದನು.

೯. ಮತ್ತು ಆ ಬಾಲಕನು ಧನುರ್ವೇದವನ್ನು ಅರಿತನು. ಸಕಲ ವೇದಗಳನನ್ನು ಕ್ರಮವಾಗಿ ಅಧ್ಯಯನಮಾಡಿದನು. ಹಾಗು ಸಕಲ ವಿದ್ಯೆಗಳನ್ನು ಕಲಿತನು. ಮತ್ತು ಕ್ರಮವಾಗಿ ಮಹಾಭಾಗ್ಯವಂತನಾದ ಆ ಬಾಲಕನು ಯೌವನವನ್ನು ಹೊಂದಿದನು.

೧೦. ಹೃದಯಂಗಮವಾದ ಉದ್ಯಮಶಾಲಿಯಾದ ಆ ಯುವಕನು ಒಂದು ಸಮಯದಲ್ಲಿ ಮಂದರಗಿರಿಯಲ್ಲಿ ಸಂಚರಿಸುತ್ತ ಗಿರಿಯ ತಪ್ಪಲಿನಲ್ಲಿ ಭಯಗ್ರಸ್ತಳಾದ ಒಬ್ಬಳು ಕನ್ಯೆಯನ್ನು ನೋಡಿದನು.

ತ್ರಾಯಸ್ವೇತಿ ನಿರೀಕ್ಷ್ಯೈನಂ ಸಾ ತದಾ ವಾಕ್ಯಮಬ್ರವೀತ್ ।
ಮಾ ಭೈಷೀರಿತಿ ಸ ಪ್ರಾಹ ಭಯವಿಪ್ಲುತಲೋಚನಾಮ್ ॥೧೧॥

ಕಿಮೇತದಿತಿ ತೇನೋಕ್ತೇ ವೀರವಾಕ್ಯೇ ಮಹಾತ್ಮನಾ ।
ತತಃ ಸಾ ಕಥಯಾಮಾಸ ಶ್ವಾಸಾಕ್ಷೇಪಪ್ಲುತಾಕ್ಷರಮ್ ॥೧೨॥

ಕನ್ಯೋವಾಚ :—

ಅಹಮಿನ್ದೀವರಾಖ್ಯಸ್ಯ ಸುತಾ ವಿದ್ಯಾಧರಸ್ಯ ವೈ ।
ನಾಮ್ನಾ ಮನೋರಮಾ ಜಾತಾ ಸುತಾಯಾಂ ಮರುಧನ್ವನಃ ॥೧೩॥

ಮನ್ದಾರವಿದ್ಯಾಧರಜಾ ಸಖೀ ಮಮ ವಿಭಾವರೀ ।
ಕಲಾವತೀ ಚಾಪ್ಯಪರಾ ಸುತಾ ಪಾರಸ್ಯ ವೈ ಮುನೇಃ ॥೧೪॥

---

೧೧. ಆಗ ಆ ಕನ್ಯೆಯು ಈ ಯುವಕನನ್ನು ನೋಡಿ "ನನ್ನನ್ನು ರಕ್ಷಿಸು" ಎಂದು ಕೇಳಿಕೊಂಡಳು. ಆ ಯುವಕನು ಭಯದಿಂದ ತುಂಬಿಹೋದ ಕಣ್ಣುಗಳುಳ್ಳ ಆ ಕನ್ಯೆಗೆ "ಹೆದರಬೇಡ" ಎಂಬ ಅಭಯವಚನವನ್ನಿತ್ತನು.

೧೨. ಮತ್ತು ಮಹಾತ್ಮನಾದ ಆ ಯುವಕನು "ಇದೇನು" ಎಂದು ವೀರತನದವಾಕ್ಯವನ್ನು ಹೇಳಲಾಗಿ ಆ ಕನ್ಯೆಯು ತಡೆಯಲಾಗದ ಶ್ವಾಸೋದ್ಗಮ-ದಿಂದ ತೇಲಿಹೋದ ಅಕ್ಷರವಿರುವಹಾಗೆ ಗದ್ಗದಮಾತನ್ನು ಆಡಿದಳು.

ಕನ್ಯೆಯು ಹೀಗೆ ಹೇಳಿದಳು :—

೧೩. ನಾನು ಇಂದೀವರ ಎಂಬ ನಾಮಾಂಕನವುಳ್ಳ ವಿದ್ಯಾಧರನ ಮಗಳಾಗಿರುವೆನು. ಮರುಧನ್ವ ಎಂಬುವನ ಪುತ್ರಿಯಲ್ಲಿ ನಾನು ಜನಿಸಿದವಳು. ನಾನು ಮನೋರಮಾ ಎಂಬ ನಾಮಾಂಕನವುಳ್ಳವಳಾಗಿದ್ದೇನೆ.

೧೪. ಮಂದಾರನೆಂಬ ನಾಮಾಂಕಿತನಾದ ವಿದ್ಯಾಧರನ ಮಗಳು ವಿಭಾವರಿಯೆಂಬುವಳು ನನಗೆ ಒಬ್ಬಳು ಸಖಿಯಾಗಿರುವಳು. ಹಾಗು ಪಾರ ಎಂಬ ಮುನಿಯ ಕುಮಾರಿಯಾದ ಕಲಾವತಿ ಎಂಬುವಳು ಮತ್ತೊಬ್ಬಳು ಸಖಿಯಾಗಿರುವಳು.

ತಾಭ್ಯಾಂ ಸಹ ಮಯಾ ಯಾತಂ ಕೈಲಾಸತಟಮುತ್ತಮಮ್ ।
ತತ್ರ ದೃಷ್ಟೋ ಮುನಿಃ ಕಶ್ಚಿತ್ತಪಸಾತಿಕೃಶಾಕೃತಿಃ ॥೧೫॥

ಕ್ಷುತ್ಕ್ಷಾಮಕಣ್ಠೋ ನಿಸ್ತೇಜಾ ದೂರಪಾತಾಕ್ಷಿತಾರಕಃ ।
ಮಯಾವಹಸಿತಃ ಕ್ರುದ್ಧಃ ಸ ತದಾ ಮಾಂ ಶಶಾಪ ಹ ॥೧೬॥

ಕ್ಷಾಮಕ್ಷಾಮಸ್ವರಃ ಕಿಂಚಿತ್ಕಮ್ಪಿತಾಧರಪಲ್ಲವಃ ।
ತ್ವಯಾವಹಸಿತೋ ಯಸ್ಮಾದನಾರ್ಯೇ ದುಷ್ಟತಾಪಸಿ ॥೧೭॥

ತಸ್ಮಾತ್ತ್ವಾಮಚಿರೇಣೈವ ರಾಕ್ಷಸೋಽಭಿಭವಿಷ್ಯತಿ ।
ದತ್ತೇ ಶಾಪೇ ಮತ್ಸಖೀಭ್ಯಾಂ ಸ ತು ನಿರ್ಭರ್ತ್ಸಿತೋ ಮುನಿಃ ॥೧೮॥

---

೧೫. ಇಬ್ಬರು ಸಖಿಯರೊಂದಿಗೆ ನಾನು ಸರ್ವೋತ್ತಮವಾದ ಕೈಲಾಸಗಿರಿಯ ತಪ್ಪಲಿಗೆ ಹೋದೆನು. ಅಲ್ಲಿ ತಪಶ್ಚರ್ಯೆಯಿಂದ ಬಹಳ ಕೃಶವಾದ ಆಕಾರವುಳ್ಳ ಒಬ್ಬ ಮುನಿಯನ್ನು ನಾನು ನೋಡಿದೆನು.

೧೬. ಆ ಮುನಿಯು ಹಸಿವಿನಿಂದ ಬತ್ತಿಹೋದ ಕಂಠವುಳ್ಳವನೂ, ತೇಜೋಹೀನನೂ, ಮತ್ತು ಮೇಲಕ್ಕೆ ಎಳೆದು ಹೋದ ಕಣ್ಣುಗುಡ್ಡೆಯುಳ್ಳವನೂ ಆಗಿ ವಿಕಾರರೂಪದಿಂದ ಇದ್ದನು. ಅವನನ್ನು ನೋಡಿ ನಾನು ಹಾಸ್ಯಮಾಡಿದೆನು. ಆಗ ಮುನಿಯು ಕೋಪಗೊಂಡು ನನ್ನನ್ನು ಶಪಿಸಿದನು.

೧೭. ಎಲೈ ದುಷ್ಟಳಾದ ತಪಸ್ವಿಕನ್ಯೆಯೇ ! ನೀಚಸ್ವಭಾವವುಳ್ಳವಳೇ ! ನೀನು ನನ್ನನ್ನು ನೋಡಿ ನಕ್ಕುಹಾಸ್ಯಮಾಡಿದೆಯಲ್ಲವೆ ! ಎಂದು ಹೇಳುತ್ತ ಬಹಳ ಬತ್ತಿಹೋದ ಧ್ವನಿಯುಳ್ಳವನೂ ಸ್ವಲ್ಪ ಅಲ್ಲಾಡಿಸಿದ ಚಿಗುರಿನಂತಿದ್ದ ಕೆಳತುಟಿಯುಳ್ಳವನೂ ಆಗಿ ಶಪಿಸಿದನು.

೧೮. ನೀಚಳೆ ! ನೀನು ನನ್ನನ್ನು ಹಾಸ್ಯಮಾಡಿದ್ದರಿಂದ ಕ್ಷಿಪ್ರಕಾಲದಲ್ಲಿಯೇ ನಿನ್ನನ್ನು ಒಬ್ಬ ರಾಕ್ಷಸನು ಬಂದು ತಿರಸ್ಕರಿಸುವನು ಹೋಗೆಂದು ಮುನಿಯು ನನ್ನನ್ನು ಶಪಿಸಿದಕ್ಷಣದಲ್ಲಿ ನನ್ನ ಸಖಿಯರು ಆ ಮುನಿಯನ್ನು ಬೆದರಿಸಿದರು.

ಧಿಕ್ತೇ ಬ್ರಾಹ್ಮಣ್ಯಮಕ್ಷಾನ್ತ್ಯಾ ಹತಂ ತೇ ನಿಖಿಲಂ ತಪಃ ।
ಅಮರ್ಷಗ್ರೈರ್ಧರ್ಷಿತೋಽಸಿ ತಪಸಾ ನಾತಿಕರ್ಶಿತಃ ॥೧೯॥

ಕ್ಷಾನ್ತ್ಯಾಸ್ಪದಂ ವೈ ಬ್ರಾಹ್ಮಣ್ಯಂ ಕ್ರೋಧಸಂಯಮನಂ ತಪಃ ।
ಏತಚ್ಛ್ರುತ್ವಾ ದದೌ ಶಾಪಂ ತಯೋರಪ್ಯಮಿತದ್ಯುತಿಃ ॥೨೦॥

ಏಕಸ್ಯಾಃ ಕುಷ್ಠಮಙ್ಗೇಷು ಭಾವ್ಯನ್ಯಸ್ಯಾಸ್ತಥಾ ಕ್ಷಯಃ ।
ತಯೋಸ್ತಥೈವ ತಜ್ಜಾತಂ ಯಥೋಕ್ತಂ ತೇನ ತತ್ಕ್ಷಣಾತ್ ॥೨೧॥

ಮಮಾಪ್ಯೇವಂ ಮಹದ್ರಕ್ಷಃ ಸಮುಪೈತಿ ಪದಾನುಗಮ್ ।
ನ ಶೃಣೋಷಿ ಮಹಾನಾದಂ ತಸ್ಯಾದೂರೇಽಪಿ ಗರ್ಜತಃ ॥೨೨॥

---

೧೯. ಮುನಿಯೇ! ಇಷ್ಟೊಂದು ತಾಳ್ಮೆಯಿಲ್ಲದ ನಿನ್ನ ಬ್ರಾಹ್ಮಣ್ಯಕ್ಕೆ ಧಿಕ್ಕಾರವು. ನಿನ್ನ ಈ ಎಲ್ಲ ತಪಶ್ಚರ್ಯೆಯು ಹಾಳಾಗಿಹೋಯಿತು. ತಪಸ್ಸಿನ ಪೆಟ್ಟಿಕೆಯಿಂದ ನೀನು ಕೃಶನಾದವನಲ್ಲ. ಅಂತರಂಗದಲ್ಲಿ ಅಸಹನೆಯ ಪರಿಪಾಕದಿಂದ ಆಕ್ರಮಿಸಲ್ಪಟ್ಟಿದ್ದೀಯೆ.

೨೦. ಬ್ರಾಹ್ಮಣ್ಯವು ಕ್ಷಮೆಗೆ ತವರುಮನೆಯಾಗಿರಬೇಕಲ್ಲವೇ! ಕೋಪ-ವನ್ನು ಅಡಗಿಸುವುದು ತಪವು. ಅಪಾರ ಪ್ರಭಾವವುಳ್ಳ ಮುನಿಯು ನನ್ನ ಸಖಿ-ಯರ ಈ ವಚನವನ್ನು ಕೇಳಿ ಅವರಿಗೂ ಶಾಪಕೊಟ್ಟನು.

೨೧. ಅವರಿಬ್ಬರಲ್ಲಿ ಒಬ್ಬಳಿಗೆ ದೇಹದಲ್ಲೆಲ್ಲ ಕುಷ್ಠರೋಗವುಂಟಾಗು-ವಂತೆಯೂ ಮತ್ತೊಬ್ಬಳಿಗೆ ಕ್ಷಯರೋಗವುಂಟಾಗುವಂತೆಯೂ ಶಪಿಸಿದನು. ಆ ಮುನಿಯು ಹೇಗೆ ಶಪಿಸಿದನೋ ಹಾಗೆಯೇ ತತ್ಕ್ಷಣದಲ್ಲಿ ಅವರಿಗೆ ಆಯಾಯ ರೋಗಪ್ರಾಪ್ತಿಯಾಯಿತು.

೨೨. ಹಾಗೆಯೇ ಮಹಾಕೃತಿಯಾದ ಒಬ್ಬ ರಾಕ್ಷಸನು ಹೆಜ್ಜೆಯನ್ನು ಹಿಂಬಾಲಿಸುತ್ತ ಬಂದು ನನ್ನನ್ನು ಪೀಡಿಸುತ್ತಿರುವನು. ಇಗೋ! ಸಮೀಪದ-ಲ್ಲಿಯೇ ಗರ್ಜಿಸುತ್ತಿದ್ದ ಆ ರಾಕ್ಷಸನ ಮಹಾನಾದವು ನಿನಗೂ ಕೇಳಿಸುವುದಿಲ್ಲವೆ?

ತೃತೀಯಮದ್ಯ ದಿವಸಂ ಯನ್ಮೇ ಪೃಷ್ಠಂ ನ ಮುಞ್ಚತಿ ।
ಅಸ್ತ್ರಗ್ರಾಮಸ್ಯ ಸರ್ವಸ್ಯ ಹೃದಯಜ್ಞಾಹಮದ್ಯ ತೇ ॥೨೩॥

ತಂ ಪ್ರಯಚ್ಛಾಮಿ ಮಾಂ ರಕ್ಷ ರಕ್ಷಸೋಽಸ್ಮಾನ್ಮಹಾಮತೇ ।
ಪ್ರಾದಾತ್ಸ್ವಾಯಮ್ಭುವಸ್ಯಾದೌ ಸ್ವಯಂ ರುದ್ರಃ ಪಿನಾಕಧೃಕ್॥೨೪॥

ಸ್ವಾಯಮ್ಭುವೋ ವಸಿಷ್ಠಾಯ ಸಿದ್ಧವರ್ಯಾಯ ದತ್ತವಾನ್ ।
ತೇನಾಪಿ ದತ್ತಂ ಮನ್ಮಾತುಃ ಪಿತ್ರೇ ಚಿತ್ರಾಯುಧಾಯ ವೈ ॥೨೫॥

ಪ್ರಾದಾದೌದ್ವಾಹಿಕಂ ಸೋಽಪಿ ಮತ್ಪಿತ್ರೇ ಶ್ವಶುರಃ ಸ್ವಯಮ್।
ಮಯಾಪಿ ಶಿಕ್ಷಿತಂ ವೀರ ಸಕಾಶಾದ್ಬಾಲಯಾ ಪಿತುಃ ॥೨೬॥

---

೨೩. ಆ ರಾಕ್ಷಸನು ನನ್ನ ಬೆನ್ನನ್ನು ಬಿಡದಂತೆ ಆಗಿ ಇಂದು ಮೂರನೆಯ ದಿನವು ಬಂದಿದೆ. ನಾನಾದರೊ ಬಗೆಬಗೆಯ ಅಸ್ತ್ರವಿದ್ಯೆಯ ಎಲ್ಲ ರಹಸ್ಯವನ್ನು ತಿಳಿದವಳಾಗಿದ್ದೇನೆ. ನಾನು ಈಗ ಹೇಳುವೆನು, ಕೇಳು.

೨೪. ಮಹಾಪ್ರಜ್ಞಾಶಾಲಿಯೇ! ನನ್ನನ್ನು ರಾಕ್ಷಸನ ಕೈಯಿಂದ ರಕ್ಷಣಮಾಡು. ಆ ಅಸ್ತ್ರವಿದ್ಯಾರಹಸ್ಯವನ್ನು ನಾನು ನಿನಗೆ ಅರ್ಪಿಸುವೆನು. ಪಿನಾಕವೆಂಬ ಆಯುಧವನ್ನು ಧರಿಸಿದ ರುದ್ರದೇವನು ಸ್ವಾಯಂಭುವನಿಗೆ ಮೊದಲು ಅಸ್ತ್ರರಹಸ್ಯವನ್ನು ಉಪದೇಶಿಸಿದನು.

೨೫. ಸ್ವಾಯಂಭುವಮುನಿಯು ತಪಸ್ಸಿದ್ಧಿಯನ್ನು ಗಳಿಸಿದವರಲ್ಲಿ ಶ್ರೇಷ್ಠನಾದ ವಸಿಷ್ಠಮುನಿಗೆ ಉಪದೇಶಮಾಡಿದನು. ಆ ವಸಿಷ್ಠಮುನಿಯಿಂದ ನನ್ನ ತಾಯಿಯ ತಂದೆಯಾದ ಚಿತ್ರಾಯುಧ ಎಂಬುವನಿಗೆ ಕೊಡಲ್ಪಟ್ಟಿತು.

೨೬. ವಿವಾಹಸಮಯದಲ್ಲಿ ನನ್ನ ತಂದೆಗೆ ಮಾವನಾದ ಚಿತ್ರಾಯುಧನು ವಿವಾಹಾಂಗವಾದ ಉಪಚಾರವಸ್ತುವನ್ನಾಗಿ ಅಸ್ತ್ರವಿದ್ಯಾರಹಸ್ಯವನ್ನು ಕೊಟ್ಟನು. ವೀರನೆ! ಬಾಲಿಕೆಯಾಗಿದ್ದ ನಾನು ತಂದೆಯಿಂದ ಅಸ್ತ್ರವಿದ್ಯಾರಹಸ್ಯವನ್ನು ಕಲಿತಿರುವೆನು.

ಹೃದಯಂ ಸಕಲಾಸ್ತ್ರಾಣಾಮಶೇಷರಿಪುನಾಶನಮ್ ।
ತದಿದಂ ಗೃಹ್ಯತಾಂ ಶೀಘ್ರಮಶೇಷಾಸ್ತ್ರಪರಾಯಣಮ್ ॥೨೭॥

ತತೋ ಜಹಿ ದುರಾತ್ಮಾನಮೇನಂ ರಾಕ್ಷಸಮಾಗತಮ್ ॥೨೮॥

ಮಾರ್ಕಣ್ಡೇಯ ಉವಾಚ :—

ತಥೇತ್ಯುಕ್ತೇ ತತಸ್ತೇನ ವಾರ್ಯುಪಸ್ಪೃಶ್ಯ ತಸ್ಯ ತತ್ ।
ಅಸ್ತ್ರಾಣಾಂ ಹೃದಯಂ ಪ್ರಾದಾತ್ಸರಹಸ್ಯನಿವರ್ತನಮ್ ॥೨೯॥

ಏತಸ್ಮಿನ್ನನ್ತರೇ ರಕ್ಷಸ್ತತ್ತದಾ ಭೀಷಣಾಕೃತಿ ।
ನರ್ದಮಾನಂ ಮಹಾನಾದಮಾಜಗಾಮ ತ್ವರಾನ್ವಿತಮ್ ॥೩೦॥

---

೨೭. ಹೀಗೆ ಸಕಲ ಶತ್ರುಗಳನ್ನು ನಾಶಮಾಡಲು ಸಮರ್ಥವಾದ ಸರ್ವಾಸ್ತ್ರಗಳ ಹೃದಯವು ನನ್ನಲ್ಲಿರುವುದು. ಸರ್ವಾಸ್ತ್ರಗಳಿಗೆ ಪ್ರತಿಷ್ಠೆಯಂತಿರುವ ಅಸ್ತ್ರರಹಸ್ಯವನ್ನು ನೀನು ನನ್ನಿಂದ ಬೇಗ ಸ್ವೀಕಾರಮಾಡು.

೨೮. ಮತ್ತು ಅಸ್ತ್ರರಹಸ್ಯವನ್ನು ಅರಿತ ನೀನು ತರುವಾಯ ನನ್ನನ್ನು ಪೀಡಿಸಲು ನನ್ನ ಬಳಿಗೆ ಬಂದ ದುರಾತ್ಮನಾದ ರಾಕ್ಷಸನನ್ನು ಸಂಹಾರಮಾಡು.

ಮಾರ್ಕಂಡೇಯ ಮುನಿಯು ಹೇಳಿದನು :—

೨೯. ಆಗ ಸ್ವರೋಚಿಯು " ಹಾಗೆ ಆಗಲಿ " ಎಂದು ಒಪ್ಪಿಕೊಳ್ಳಲು ಮನೋರಮಾ ಕನ್ಯೆಯು ಜಲವನ್ನು ಆಚಮನಮಾಡಿ ಸ್ವರೋಚಿಗೆ ರಹಸ್ಯ-ಉಪಸಂಹಾರ ಮುಂತಾದ ಸಮಸ್ತ ವಿಧಾನಗಳಿಂದ ಕೂಡಿದ ಅಸ್ತ್ರರಹಸ್ಯವನ್ನು ಕೊಟ್ಟಳು.

೩೦. ಈ ಸಮಯದಲ್ಲಿ ಭಯಂಕರವಾದ ಆಕಾರದಿಂದ ಕೂಡಿರುವ ಆ ರಾಕ್ಷಸನು ಗಟ್ಟಿಯಾದ ಧ್ವನಿಯಿಂದ ಕೂಗುತ್ತ ಬಲು ವೇಗದಿಂದ ಕೂಡಿ ಆ ಸ್ಥಳಕ್ಕೆ ಬಂದನು.

ಮಯಾಭಿಭೂತಾ ಕಿಂ ತ್ರಾಣಮುಪೈತಿ ದ್ರುತಮೇಹಿ ಮೇ ।
ಭಕ್ಷಾಯ ಕಿಂ ಚಿರೇಣೇತಿ ಬ್ರುವಾಣಂ ತದ್ದದರ್ಶ ಸಃ ॥೩೧॥

ಸ್ವರೋಚಿಶ್ಚಿನ್ತಯಾಮಾಸ ದೃಷ್ಟ್ವಾ ತಂ ಸಮುಪಾಗತಮ್ ।
ಗೃಹ್ಣಾತ್ಯೇಷ ವಚಃ ಸತ್ಯಂ ತಸ್ಯಾಸ್ತ್ವಿತಿ ಮಹಾಮುನೇಃ ॥೩೨॥

ಜಗ್ರಾಹ ಸಮುಪೈತ್ಯೇನಾಂ ತ್ವರಯಾ ಸೋಽಪಿ ರಾಕ್ಷಸಃ ।
ತ್ರಾಹಿ ತ್ರಾಹೀತಿ ಕರುಣಂ ವಿಲಪನ್ತೀಂ ಸುಮಧ್ಯಮಾಮ್ ॥೩೩॥

ತತಃ ಸ್ವರೋಚಿಃ ಸಂಕ್ರುದ್ಧಶ್ಚಣ್ಡಾಸ್ತ್ರಮತಿಭೈರವಮ್ ।
ದೃಷ್ಟ್ವಾ ನಿವೇಶ್ಯ ತದ್ರಕ್ಷೋ ದದರ್ಶಾನಿಮಿಷೇಕ್ಷಣಃ ॥೩೪॥

---

೩೧. ಮತ್ತು "ನನ್ನಿಂದ ತಿರಸ್ಕರಿಸಲ್ಪಟ್ಟವಳು ಎಲ್ಲಾದರೂ ರಕ್ಷಣ-ವನ್ನು ಹೊಂದಲು ಸಾಧ್ಯವಿದೆಯೆ? ಬೇಗ ನನ್ನ ಆಹಾರಕ್ಕೆ ಬಂದು ಸಿದ್ಧಳಾಗು. ಏಕೆ ವಿಳಂಬಮಾಡುತ್ತೀಯೆ" ಹೀಗೆಂದು ಹೇಳುತ್ತಿದ್ದ ರಾಕ್ಷಸನನ್ನು ಸ್ವರೋಚಿಯು ನೋಡಿದನು.

೩೨. ಆಗ ಸ್ವರೋಚಿಯು ಹಾಗೆ ಆರ್ಭಟದಿಂದ ಬಂದಿದ್ದ ರಾಕ್ಷಸನನ್ನು ನೋಡಿ ಮನದಲ್ಲಿ ಚಿಂತಿಸಿದನು. ರಾಕ್ಷಸನು ಈಕೆಯನ್ನು ಹಿಡಿಯುವನು. ಶಪಿಸಿದ ಮಹಾಮುನಿಯ ವಚನವು ಸತ್ಯವಾಗಿದೆ.

೩೩. ಅಷ್ಟರಲ್ಲಿ ಆ ರಾಕ್ಷಸನು ಬಲುತ್ವರೆಯಿಂದ ಸಮೀಪಕ್ಕೆ ಬಂದು "ರಕ್ಷಿಸು, ರಕ್ಷಿಸು" ಎಂದು ದೀನಧ್ವನಿಯಿಂದ ಕೂಗುತ್ತಿದ್ದ ಕೃಶವಾದ ನಡುವುಳ್ಳ ಆ ಸುಂದರಿಯನ್ನು ಹಿಡಿಮಕೊಂಡನು.

೩೪. ತರುವಾಯ ಸ್ವರೋಚಿಯು ಕೋಪಾವೇಶವುಳ್ಳವನಾಗಿ ಅತಿ ಭಯಂಕರವೂ ತೀಕ್ಷ್ಣವೂ ಆದ ಚಂಡಾಸ್ತ್ರವನ್ನು ಏರಿಸಿ ರೆಪ್ಪೆಹೊಡೆಯದ ಹಾಗೆ ಚಲಿಸದಿರುವ ಕಣ್ಣುಗಳುಳ್ಳವನಾಗಿ ಆ ರಾಕ್ಷಸನನ್ನು ನೋಡಿದನು.

ತದಾಭಿಭೂತಃ ಸ ತದಾ ತಾಮುತ್ಸೃಜ್ಯ ನಿಶಾಚರಃ ।
ಪ್ರಸೀದ ಶಾಮ್ಯತಾಮಸ್ತ್ರಂ ಶ್ರೂಯತಾಂ ಚೇತ್ಯಭಾಷತ ॥೩೫॥

ಮೋಕ್ಷಿತೋಽಹಂ ತ್ವಯಾ ಶಾಪಾದತಿಘೋರಾನ್ಮಹಾದ್ಯುತೇ ।
ಪ್ರದತ್ತಾದತಿತೀವ್ರೇಣ ಬ್ರಹ್ಮಮಿತ್ರೇಣ ಧೀಮತಾ ॥೩೬॥

ಉಪಕಾರೋ ನ ಮೇ ತ್ವತ್ತೋ ಮಹಾಭಾಗಾಧಿಕೋಽಪರಃ ।
ಯೇನಾಹಂ ಸುಮಹಾಕಷ್ಟಾನ್ಮಹಾಶಾಪಾದ್ವಿಮೋಕ್ಷಿತಃ ॥೩೭॥

ಸ್ವರೋಚಿರುವಾಚ :—

ಬ್ರಹ್ಮಮಿತ್ರೇಣ ಮುನಿನಾ ಕಿಂ ನಿಮಿತ್ತಂ ಮಹಾತ್ಮನಾ ।
ಶಪ್ತಸ್ತ್ವಂ ಕೀದೃಶಶ್ಚೈವ ಶಾಪೋ ದತ್ತೋಽಭವತ್ಪುರಾ ॥೩೮॥

---

೩೫. ಆಗ ಚಂಡಾಸ್ತ್ರದಿಂದ ಗುರಿಮಾಡಿ ಪೀಡಿಸಲ್ಪಟ್ಟ ಆ ರಾಕ್ಷಸನು ಆ ಕನ್ಯೆಯನ್ನು ಬಿಟ್ಟು " ಪ್ರಸನ್ನನಾಗು, ಅಸ್ತ್ರವನ್ನು ಶಮನಮಾಡು. ಮತ್ತು ನನ್ನದೊಂದು ವಚನವನ್ನು ಕೇಳುವವನಾಗು " ಎಂದು ಹೇಳಿದನು.

೩೬. ಎಲೈ ಮಹಾತೇಜಸ್ವಿಯೇ ! ನಿನ್ನಿಂದ ನಾನು ಒಂದು ಘೋರ-ಶಾಪದಿಂದ ಬಿಡುಗಡೆಮಾಡಲ್ಪಟ್ಟು ಉಪಕಾರವನ್ನು ಹೊಂದಿರುವೆನು. ಅತಿ ಪ್ರಾಜ್ಞನೂ ಕಠಿನಸ್ವಭಾವದವನೂ ಆದ ಬ್ರಹ್ಮಮಿತ್ರನೆಂಬ ಮುನಿಯಿಂದ ನಾನು ಶಪಿಸಲ್ಪಟ್ಟಿದ್ದೆನು.

೩೭. ಎಲೈ ಮಹಾಭಾಗ್ಯಶಾಲಿಯೇ ! ನಿನ್ನಿಂದ ನನಗೆ ಆಗಿರುವ ಈ ಉಪಕಾರಕ್ಕಿಂತ ಹೆಚ್ಚಿನದು ಏನೂ ಇಲ್ಲ. ಮಹಾಕ್ಲೇಶವನ್ನು ಕೊಡುವ ಶಾಪದಿಂದ ನಾನು ನಿನ್ನಿಂದ ಉದ್ಧರಿಸಲ್ಪಟ್ಟಿದ್ದೇನೆ.

ಸ್ವರೋಚಿಯು ಹೀಗೆಂದನು :—

೩೮. ರಾಕ್ಷಸನೇ ! ಮಹಾತ್ಮನಾದ ಬ್ರಹ್ಮಮಿತ್ರ ಎಂಬ ಮುನಿಯಿಂದ ನೀನು ಯಾವ ಕಾರಣದಿಂದ ಶಪಿಸಲ್ಪಟ್ಟಿರುವೆ ? ಹಿಂದೆ ಆ ಮುನಿಯು ನಿನಗೆ ಎಂತಹ ಶಾಪವನ್ನು ಕೊಟ್ಟಿರುವನು ?

ರಾಕ್ಷಸ ಉವಾಚ :—

ಬ್ರಹ್ಮಮಿತ್ರೋಽಷ್ಟಧಾ ಭಿನ್ನಮಾಯುರ್ವೇದಮಧೀತವಾನ್ ।
ತ್ರಯೋದಶಾಧಿಕಾರಂ ಚ ಪ್ರಗೃಹ್ಯಾಥರ್ವಣೋ ದ್ವಿಜಃ ॥೩೯॥

ಅಹಂ ಚೇನ್ದೀವರಾಖ್ಯೇತಿ ಖ್ಯಾತೋಽಸ್ಯಾ ಜನಕೋಽಭವಮ್ ।
ವಿದ್ಯಾಧರಪತೇಃ ಪುತ್ರೋ ನಲನಾಭಸ್ಯ ಖಡ್ಗಿನಃ ॥೪೦॥

ಮಯಾ ಚ ಯಾಚಿತಃ ಪೂರ್ವಂ ಬ್ರಹ್ಮಮಿತ್ರೋಽಭವನ್ಮುನಿಃ ।
ಆಯುರ್ವೇದಮಶೇಷಂ ಮೇ ಭಗವನ್ದಾತುಮರ್ಹಸಿ ॥೪೧॥

ಯದಾ ತು ಬಹುಶೋ ವೀರ ಪ್ರಶ್ರಯಾವನತಸ್ಯ ಮೇ ।
ನ ಪ್ರಾದಾದ್ಯಾಚಿತೋ ವಿದ್ಯಾಮಾಯುರ್ವೇದಾತ್ಮಿಕಾಂ ಮಮ ॥೪೨॥

ರಾಕ್ಷಸನು ಇಂತೆಂದನು :—

೩೯. ಅಥರ್ವ ಎಂಬ ಮುನಿವಂಶದಲ್ಲಿ ಜನಿಸಿದ ಬ್ರಹ್ಮಮಿತ್ರನೆಂಬ ಮುನಿಯು ಎಂಟುಭಾಗವಾಗಿ ವಿಂಗಡಿಸಲ್ಪಟ್ಟ ಮತ್ತು ಹದಿಮೂರು ಪ್ರಕರಣ-ಗಳಿಂದ ಕೂಡಿದ ಸಮಗ್ರ ಆಯುರ್ವೇದವನ್ನು ಕಲಿತಿದ್ದನು.

೪೦. ನಾನು ಇಂದೀವರ ಎಂಬ ನಾಮಾಂಕನದಿಂದ ಖ್ಯಾತಿಯನ್ನು ಗಳಿಸಿದ ಈಕೆಯ ತಂದೆಯಾಗಿದ್ದೆನು. ಮತ್ತು ಖಡ್ಗಧಾರಿಯಾದ ನಲನಾಭ ಎಂಬ ನಾಮಾಂಕನವುಳ್ಳ ವಿದ್ಯಾಧರರಾಜನ ಪುತ್ರನಾಗಿದ್ದೆನು.

೪೧. ಹಿಂದೆ ನನ್ನಿಂದ ಆಯುರ್ವೇದವನ್ನು ಅರಿತಿರುವ ಬ್ರಹ್ಮಮಿತ್ರ ಮುನಿಯು "ಪೂಜ್ಯನೆ! ಸಮಗ್ರ ಆಯುರ್ವೇದ ವಿದ್ಯೆಯನ್ನು ನನಗೆ ಉಪದೇಶಿಸಿ ಉಪಕಾರಮಾಡಬೇಕು" ಎಂದು ಪ್ರಾರ್ಥಿಸಲ್ಪಟ್ಟಿದ್ದನು.

೪೨. ವೀರಕುಮಾರನೆ! ಅನೇಕಸಲ ಯಾಚಿಸಿದರೂ ವಿನಯದಿಂದ ವರ್ತಿಸಿದ ನನಗೆ ಬ್ರಹ್ಮಮಿತ್ರಮುನಿಯು ಆಯುರ್ವೇದ ಸ್ವರೂಪವಾದ ವಿದ್ಯೆಯನ್ನು ಉಪದೇಶ ಮಾಡಲಿಲ್ಲ.

ಶಿಷ್ಯೇಭ್ಯೋ ದದತಸ್ತಸ್ಯ ಮಯಾನ್ತರ್ಧಾನಗೇನ ಹಿ ।
ಆಯುರ್ವೇದಾತ್ಮಿಕಾ ವಿದ್ಯಾ ಗೃಹೀತಾಭೂತ್ತದಾನಘ ॥೪೩॥

ಗೃಹೀತಾಯಾಂ ತು ವಿದ್ಯಾಯಾಂ ಮಾಸೈರಷ್ಟಾಭಿರನ್ತರಾತ್ ।
ಮಮಾತಿಹರ್ಷಾದಭವದ್ಧಾಸೋಽತೀವ ಪುನಃ ಪುನಃ ॥೪೪॥

ಪ್ರತ್ಯಭಿಜ್ಞಾಯ ಮಾಂ ಹಾಸಾನ್ಮುನಿಃ ಕೋಪಸಮನ್ವಿತಃ ।
ವಿಕಮ್ಪಿಕನ್ಧರಃ ಪ್ರಾಹ ಮಾಮಿದಂ ಪರುಷಾಕ್ಷರಮ್ ॥೪೫॥

ರಾಕ್ಷಸೇನೇವ ಯಸ್ಮಾನ್ಮೇ ತ್ವಯಾದೃಶ್ಯೇನ ದುರ್ಮತೇ ।
ಹೃತಾ ವಿದ್ಯಾವಹಾಸಶ್ಚ ಮಾಮವಜ್ಞಾಯ ವೈ ಕೃತಃ ॥೪೬॥

---

೪೩. ಎಲೈ ನಿಷ್ಕಲಂಕನಾದ ವೀರನೇ! ಆಗ ನಾನು ಅಂತರ್ಧಾನ ವಿದ್ಯೆಯಿಂದ ಶಿಷ್ಯರಿಗೆ ಆಯುರ್ವೇದವನ್ನು ಉಪದೇಶಿಸುತ್ತಿದ್ದ ಮುನಿಯ ಬಳಿಯಲ್ಲಿ ಅದೃಶ್ಯನಾಗಿದ್ದು ಆಯುರ್ವೇದ ಸ್ವರೂಪವಾದ ವಿದ್ಯೆಯನ್ನು ಪರಿಗ್ರಹಿಸಿದೆನು.

೪೪. ಎಂಟು ಮಾಸಗಳ ಕಾಲಾವಧಿಯಲ್ಲಿ ಆಯುರ್ವೇದ ವಿದ್ಯೆಯನ್ನು ವಂಚನೆಯಿಂದ ಕಲಿಯಲು ನನಗೆ ಮತ್ತೆ ಮತ್ತೆ ಅತಿ ಹರ್ಷೋದ್ರೇಕದಿಂದ ತಡೆಯಲಾಗದ ನಗುವುಂಟಾಯಿತು.

೪೫. ಆಗ ಬ್ರಹ್ಮಮಿತ್ರಮುನಿಯು ನಗುವಿನಿಂದ ನನ್ನನ್ನು ಇಂತಹವನೆಂದು ತಿಳಿದು ಕೋಪಾವೇಶವುಳ್ಳವನಾಗಿ ತೂಗಾಡುತ್ತಿದ್ದ ಕತ್ತಿನಿಂದ ಕೂಡಿ ಕಠಿನವಾದ ಉಕ್ತಿಯಿಂದ ನನ್ನನ್ನು ನೋಡಿ ಹೀಗೆಂದು ಶಪಿಸಿದನು.

೪೬. ಎಲೈ ಅವಿವೇಕಿಯೇ! ನೀನು ರಾಕ್ಷಸನಂತೆ ಅದೃಶ್ಯನಾಗಿದ್ದು ವಂಚನೆಯಿಂದ ಆಯುರ್ವೇದ ವಿದ್ಯೆಯನ್ನು ಅಪಹರಿಸಿದ್ದೀಯೆ. ಮತ್ತು ನನ್ನನ್ನು ಅವಮಾನಪಡಿಸುವ ಹಾಗೆ ನಕ್ಕಿದ್ದೀಯೆ.

ತಸ್ಮಾತ್ತ್ವಂ ರಾಕ್ಷಸಃ ಪಾಪ ಮಚ್ಛಾಪೇನ ನಿರಾಕೃತಃ ।
ಭವಿಷ್ಯಸಿ ನ ಸನ್ದೇಹಃ ಸಪ್ತರಾತ್ರೇಣ ದಾರುಣಃ ॥೪೭॥

ಇತ್ಯುಕ್ತೇ ಪ್ರಣಿಪಾತಾದ್ಯೈರುಪಚಾರೈಃ ಪ್ರಸಾದಿತಃ ।
ಸ ಮಾಮಾಹ ಪುನರ್ವಿಪ್ರಸ್ತತ್ಕ್ಷಣಾನ್ಮೃದುಮಾನಸಃ ॥೪೮॥

ಯನ್ಮಯೋಕ್ತಮವಶ್ಯಂ ತದ್ಭಾವಿ ಗನ್ಧರ್ವ ನಾನ್ಯಥಾ ।
ಕಿಂ ತು ತ್ವಂ ರಾಕ್ಷಸೋ ಭೂತ್ವಾ ಪುನಃ ಸ್ವಂ ಪ್ರಾಪ್ಸ್ಯಸೇ ವಪುಃ॥೪೯॥

ನಷ್ಟಸ್ಮೃತಿರ್ಯದಾ ಕ್ರುದ್ಧಃ ಸ್ವಮಪತ್ಯಂ ಜಿಖಾದಿಷುಃ ।
ನಿಶಾಚರ ತ್ವಂ ಗನ್ತಾಸಿ ತದಸ್ತ್ರಾನಲತಾಪಿತಃ ॥೫೦॥

---

೪೭. ಪಾಪಿಯೇ! ಆ ಕಾರಣದಿಂದ ನನ್ನ ಶಾಪದಿಂದ ಭಂಗ-ಹೊಂದಿರುವ ನೀನು ಇನ್ನು ಏಳು ದಿವಸಗಳೊಳಗೆ ಭಯಂಕರನಾದ ರಾಕ್ಷಸ-ನಾಗುತ್ತೀಯೆ. ಈ ವಿಷಯದಲ್ಲಿ ಸಂದೇಹವಿಲ್ಲ. ಎಂದು ಶಾಪವಿತ್ತನು.

೪೮. ಹೀಗೆಂದು ಶಪಿಸಲಾಗಿ ಕೂಡಲೆ ನನ್ನಿಂದ ನಮಸ್ಕಾರ ಮುಂತಾದ ಸದ್ಭಾವಗಳ ಉಪಚಾರಗಳಿಂದ ಸಮಾಧಾನಗೊಳಿಸಲ್ಪಟ್ಟ ಆ ವಿಪ್ರನು ಮತ್ತೆ ಆ ಕ್ಷಣದಲ್ಲಿಯೇ ಮೃದುವಾದ ಮಾನಸವುಳ್ಳವನಾಗಿ ಮತ್ತೆ ನನಗೆ ಹೀಗೆಂದು ಹೇಳಿದನು.

೪೯. ಎಲೈ ಗಂಧರ್ವನೆ! ನನ್ನಿಂದ ಏನು ಹೇಳಲ್ಪಟ್ಟಿದೆಯೋ ಆ ವಚನವು ಎಂದಿಗೂ ತಪ್ಪುವುದಿಲ್ಲ. ಆದರೆ ಆ ಶಾಪವಂತೆ ನೀನು ರಾಕ್ಷಸನಾಗಿ ಜನಿಸಿ ಮತ್ತೆ ಕಾರಣಾಂತರದಿಂದ ನಿನ್ನ ರೂಪವನ್ನು ಹೊಂದುತ್ತೀಯೆ.

೫೦. ಭಾವಿನಿಶಾಚರನೆ! ಕೋಪಾವೇಶವುಳ್ಳವನೂ, ಕಳೆದುಹೋದ ಪೂರ್ವಸ್ಮರಣವುಳ್ಳವನೂ ಆದ ನೀನು ರಾಕ್ಷಸಜನ್ಮದಲ್ಲಿ ನಿನ್ನ ಮಗಳನ್ನು ತಿನ್ನಲು ಹೋಗುತ್ತೀಯೆ. ಆಗ ಅವಳು ಅರಿತಿರುವ ಚಂಡಾಸ್ತ್ರದಿಂದ ತಪಿಸಲ್ಪಡುತ್ತೀಯೆ.

ಪುನಃ ಸಂಜ್ಞಾಮವಾಪ್ಯ ಸ್ವಾಮವಾಪ್ಸ್ಯಸಿ ನಿಜಂ ವಪುಃ ।
ತಥೈವ ಸ್ವಮಧಿಷ್ಠಾನಂ ಲೋಕೇ ಗನ್ಧರ್ವಸಂಜ್ಞಿತೇ ॥೫೦॥

ಸೋಽಹಂ ತ್ವಯಾ ಮಹಾಭಾಗ ಮೋಕ್ಷಿತೋಽಸ್ಮಾನ್ಮಹಾಭಯಾತ್।
ನಿಶಾಚರತ್ವಾದ್ಯದ್ವೀರ ತೇನ ಮೇ ಪ್ರಾರ್ಥನಾಂ ಕುರು ॥೫೨॥

ಇಮಾಂ ತೇ ತನಯಾಂ ಭಾರ್ಯಾಂ ಪ್ರಯಚ್ಛಾಮಿ ಪ್ರತೀಚ್ಛ ತಾಮ್ ॥೫೩॥

ಆಯುರ್ವೇದಶ್ಚ ಸಕಲಸ್ತ್ವಷ್ಟಾಙ್ಗೋ ಯೋ ಮಯಾ ತತಃ ।
ಮುನೇಃ ಸಕಾಶಾತ್ಸಂಪ್ರಾಪ್ತಸ್ತಂ ಗೃಹ್ಣೀಷ್ವ ಮಹಾಮತೇ ॥೫೪॥

---

೫೧. ಆಗ ನೀನು ಮೊದಲಿನ ಪ್ರಜ್ಞೆಯನ್ನು ಹೊಂದಿ ನಿಜರೂಪದ ದೇಹವನ್ನು ಧರಿಸುತ್ತೀಯೆ. ಹಾಗು ಗಂಧರ್ವಲೋಕವೆಂಬ ನಾಮಾಂಕಿತವಾದ ನಿನ್ನ ಲೋಕಕ್ಕೆ ಹೋಗಿ ನಿನ್ನ ಅಧಿಕಾರವನ್ನು ಹೊಂದುತ್ತೀಯೆ, ಹೀಗೆಂದು ಹೇಳಿದನು.

೫೨. ಮಹಾಶಯನೇ ! ಹೀಗೆ ಶಾಪಕ್ಕೆ ಗುರಿಯಾದ ನಾನು ಮಹಾ ಭಯಂಕರವಾದ ರಾಕ್ಷಸರೂಪದಿಂದ ಬಿಡಿಸಲ್ಪಟ್ಟಿರುವೆನು. ವೀರನೆ ! ಹೀಗೆ ಉಪಕಾರಮಾಡಿದ ನೀನು ಪ್ರತ್ಯುಪಕಾರರೂಪವಾಗಿ ಮಾಡುವ ನನ್ನ ಪ್ರಾರ್ಥನೆ-ಯನ್ನು ನಡೆಸಬೇಕು.

೫೩. ಈ ನನ್ನ ಪುತ್ರಿಯನ್ನು ನಿನಗೆ ಪತ್ನಿಯನ್ನಾಗಿ ಅರ್ಪಿಸುತ್ತೇನೆ. ನೀನು ವಿಪತ್ತಿನಿಂದ ರಕ್ಷಿಸಲ್ಪಟ್ಟಿರುವ ಈಕೆಯನ್ನು ನೀನು ನಿನ್ನ ಪತ್ನಿಯನ್ನಾಗಿ ಸ್ವೀಕರಿಸು.

೫೪. ಮತ್ತು ಬ್ರಹ್ಮಮಿತ್ರಮುನಿಯಿಂದ ನಾನು ಅಷ್ಟಾಂಗಗಳಿಂದ ವಿಸ್ತಾರವಾದ ಸಮಗ್ರ ಆಯುರ್ವೇದವನ್ನು ಹೊಂದಿರುವೆನು. ಮಹಾಪ್ರಜ್ಞಾ-ಶಾಲಿಯೇ ! ಆ ಆಯುರ್ವೇದವನ್ನು ನೀನು ನನ್ನಿಂದ ಸ್ವೀಕಾರಮಾಡು.

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ಪ್ರದದೌ ವಿದ್ಯಾಂ ಸ ಚ ದಿವ್ಯಾಮ್ಬರೋಜ್ಜ್ವಲಃ ।
ಸ್ರಗ್ಭೂಷಣಧರೋ ದಿವ್ಯಂ ಪೌರಾಣಂ ವಪುರಾಸ್ಥಿತಃ ॥೫೫॥

ದತ್ತ್ವಾ ವಿದ್ಯಾಂ ತತಃ ಕನ್ಯಾಂ ಸ ದಾತುಮುಪಚಕ್ರಮೇ ।
ತಮಾಹ ಸಾ ತದಾ ಕನ್ಯಾ ಜನಿತಾರಂ ಸ್ವರೂಪಿಣಮ್ ॥೫೬॥

ಅನುರಾಗೋ ಮಮಾಪ್ಯತ್ರ ತಾತಾತೀವ ಮಹಾತ್ಮನಿ ।
ದರ್ಶನಾದೇವ ಸಂಜಾತೋ ವಿಶೇಷೇಣೋಪಕಾರಿಣಿ ॥೫೭॥

ಕಿಂ ತ್ವೇಷಾ ಮೇ ಸಖೀ ಸಾ ಚ ಮತ್ಕೃತೇ ದುಃಖಪೀಡಿತೇ ।
ಅತೋ ನಾಭಿಲಷೇ ಭೋಗಾನ್ ಭೋಕ್ತುಮೇತೇನ ವೈ ಸಮಮ್ ॥೫೮॥

ಮಾರ್ಕಂಡೇಯ ಮುನಿಯು ಹೇಳಿದನು :—

೫೫. ಹೀಗೆಂದು ಹೇಳಿ ಇಂದೀವರನೆಂಬ ವಿದ್ಯಾಧರನು ವಿದ್ಯೆಯನ್ನು ಉಪದೇಶಿಸಿದನು. ಮತ್ತು ತಾನು ದಿವ್ಯವಾದ ಮಾಲ್ಯಾಲಂಕಾರಗಳಿಂದ ಕೂಡಿದವನೂ, ದಿವ್ಯವಸ್ತ್ರವನ್ನು ಧರಿಸಿದವನೂ ಆಗಿ ದಿವ್ಯವಾದ ಹಿಂದಿನ ಆಕಾರವನ್ನು ಧರಿಸಿದನು.

೫೬. ತರುವಾಯ ಆ ವಿದ್ಯಾಧರನು ಆಯುರ್ವೇದ ವಿದ್ಯೆಯನ್ನು ಕೊಟ್ಟು ಹಾಗೆಯೇ ಕನ್ಯೆಯನ್ನು ದಾನಮಾಡಲು ಉಪಕ್ರಮಿಸಿದನು. ಆಗ ಆ ಕನ್ಯೆಯು ನಿಜರೂಪವನ್ನು ಹೊಂದಿದ ತನ್ನ ತಂದೆಯನ್ನು ನೋಡಿ ಹೀಗೆಂದು ಹೇಳಿದಳು.

೫೭. ಜನಕನೇ ! ಈ ಮಹಾತ್ಮನಾದ ವೀರಕುಮಾರನಲ್ಲಿ ನನಗೂ ವಿಶೇಷವಾದ ಅನುರಾಗವುಂಟಾಗಿರುವುದು. ದರ್ಶನಮಾತ್ರದಿಂದಲೆ ವಿಶೇಷ ಉಪಕಾರಿಯಾದ ಇವನನ್ನು ಪ್ರೀತಿಸುವಂತಾಗಿದೆ.

೫೮. ಆದರೆ ನನಗೋಸ್ಕರ ವಿಭಾವರೀ ಕಲಾವತೀ ಎಂಬ ಈರ್ವರು ಸಖಿಯರು ದುಃಖದಿಂದ ಪೀಡಿತರಾಗಿರುವರು. ಹೀಗಿರುವುದರಿಂದ ನಾನು ಈ ಮಹಾತ್ಮನೊಡನೆ ಭೋಗಗಳನ್ನು ಭುಂಜಿಸಲು ಇಷ್ಟಪಡುವುದಿಲ್ಲ.

ಪುರುಷೈರಪಿ ನೋ ಶಕ್ಯಾ ಕರ್ತುಮಿತ್ಥಂ ನೃಶಂಸತಾ ।
ಸ್ವಭಾವರುಚಿರೈರ್ಮಾದೃಕ್ಕಥಂ ಯೋಷಿತ್ಕರಿಷ್ಯತಿ ॥೫೯॥

ಸಾಹಂ ಯಥಾ ತೇ ದುಃಖಾರ್ತೇ ಮತ್ಕೃತೇ ಕನ್ಯಕೇ ಪಿತಃ ।
ತಥಾ ಸ್ಥಾಸ್ಯಾಮಿ ದುಃಖಾರ್ತಾ ತಚ್ಛೋಕಾನಲತಾಪಿತಾ ॥೬೦॥

ಸ್ವರೋಚಿರುವಾಚ :—

ಆಯುರ್ವೇದಪ್ರಸಾದೇನ ತೇ ಕರಿಷ್ಯೇ ಪುನರ್ನವೇ ।
ಸಖ್ಯೌ ತವ ಮಹಾಶೋಕಂ ಸಮುತ್ಸೃಜ ಸುಮಧ್ಯಮೇ ॥೬೧॥

ಮಾರ್ಕಣ್ಡೇಯ ಉವಾಚ :—

ತತಃ ಪಿತ್ರಾ ಸ್ವಯಂ ದತ್ತಾಂ ತಾಂ ಕನ್ಯಾಂ ಸ ವಿಧಾನತಃ ।
ಉಪಯೇಮೇ ಗಿರೌ ತಸ್ಮಿನ್ ಸ್ವರೋಚಿಶ್ಚಾರುಲೋಚನಾಮ್॥೬೨॥

---

೫೯. ಪುರುಷರಿಂದಲೂ ಇಂತಹ ನಿರ್ದಯಸ್ವಭಾವವನ್ನು ತೋರಿಸುವುದು ಶಕ್ಯವಲ್ಲ. ಹೀಗಿರಲು ಸ್ವಭಾವವಾಗಿ ಕನಿಕರದ ಹೃದಯವುಳ್ಳ ನನ್ನಂತಹ ನಾರಿಯು ಕ್ರೂರತನದಿಂದ ವರ್ತಿಸುವಳೆ?

೬೦. ಜನಕನೇ! ನನ್ನ ಸಖಿಯರಾದ ಆ ಇಬ್ಬರು ಕನ್ಯೆಯರು ಹೇಗೆ ದುಃಖದಿಂದ ತಪಿಸುತ್ತಿರುವರೋ ಹಾಗೆಯೇ ನಾನು ಅವರ ದುಃಖದಿಂದಲೇ ಪೀಡಿತಳಾಗಿ ಶೋಕಾಗ್ನಿಯಿಂದ ತಪಿಸುತ್ತ ಕಾಲಕಳೆಯುವೆನು.

ಸ್ವರೋಚಿಯು ಹೇಳಿದನು :—

೬೧. ಎಲೈ ಸುಂದರಿಯೇ! ಆಯುರ್ವೇದದ ಪ್ರಭಾವದಿಂದ ರೋಗ-ಗ್ರಸ್ತರಾದ ನಿನ್ನ ಸಖಿಯರನ್ನು ರೋಗಮುಕ್ತರನ್ನಾಗಿ ಮಾಡುತ್ತೇನೆ. ಆದುದರಿಂದ ನೀನು ಶೋಕವನ್ನು ತ್ಯಜಿಸು.

ಮಾರ್ಕಂಡೇಯ ಮುನಿಯು ಹೀಗೆಂದನು :—

೬೨. ತರುವಾಯ ಸ್ವರೋಚಿಯು ಜನಕನಿಂದ ಸ್ವಸಂಕಲ್ಪದಿಂದ ಕೊಡಲ್ಪಟ್ಟ, ಸುಂದರವಾದ ಕಣ್ಣುಗಳಿಂದ ಶೋಭಿಸಲ್ಪಟ್ಟ ಕನ್ಯೆಯನ್ನು ಆ ಪರ್ವತದಲ್ಲಿ ಯಥಾಶಾಸ್ತ್ರೀಯವಾಗಿ ಮದುವೆಯಾದನು.

ದತ್ತಾಂ ತಾಂ ತು ತದಾ ಕನ್ಯಾಮಭಿಸಾನ್ತ್ವ್ಯ ಚ ಭಾವಿನೀಮ್ ।
ಜಗಾಮ ದಿವ್ಯಯಾ ಗತ್ಯಾ ಗನ್ಧರ್ವಃ ಸ್ವಪುರಂ ತತಃ ॥೬೩॥

ಸ ಚಾಪಿ ಸಹಿತಸ್ತನ್ವ್ಯಾ ತದುದ್ಯಾನಂ ತದಾ ಯಯೌ ।
ಕನ್ಯಕಾಯುಗಲಂ ಯತ್ರ ತಚ್ಛಾಪ್ರೋತ್ಥಗದಾತುರಮ್ ॥೬೪॥

ತತಸ್ತಯೋಃ ಸ ತತ್ತ್ವಜ್ಞೋ ರೋಗಘ್ನೈರೌಷಧೈ ರಸೈಃ ।
ಚಕಾರ ನೀರುಜೇ ದೇಹೇ ಸ್ವರೋಚಿರಪಿ ರಾಜಿತಃ ॥೬೫॥

ತತೋऽತಿಶೋಭನೇ ಕನ್ಯೇ ವಿಮುಕ್ತೇ ವ್ಯಾಧಿತಃ ಶುಭೇ ।
ಸ್ವಕಾನ್ತ್ಯೋಜ್ಜ್ವಲಿತದಿಗ್ಭಾಗಂ ಚಕ್ರಾತೇ ತನ್ಮಹೀಧರಮ್ ॥೬೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸ್ವಾರೋಚಿಷೇ
ಮನ್ವನ್ತರೇ ಷಷ್ಟಿತಮೋऽಧ್ಯಾಯಃ

---

೬೩. ತರುವಾಯ ಗಂಧರ್ವನು ಸ್ವರೋಚಿಗೆ ದಾನಮಾಡಿರುವ, ಪ್ರಣಯಭಾವದಿಂದ ಕೂಡಿದ ತನ್ನ ಕುವರಿಯಾದ ಮನೋರಮೆಯನ್ನು ಸಮಾಧಾನಗೊಳಿಸಿ ದಿವ್ಯವಾದ ಗತಿಯಿಂದ ತನ್ನ ನಗರಕ್ಕೆ ಹೊರಟುಹೋದನು.

೬೪. ಆಗ ಸ್ವರೋಚಿಯು ತನ್ನ ಪ್ರಿಯೆಯೊಡನೆ ಮುನಿಶಾಪದ ಪರಿಣಾಮವಾಗಿ ಪ್ರಾಪ್ತವಾದ ರೋಗದಿಂದ ಪೀಡಿತರಾದ ವಿಭಾವರೀ–ಕಲಾವತೀ ಎಂಬ ಇಬ್ಬರು ಕನ್ನಿಕೆಯರು ಇದ್ದ ಉದ್ಯಾನವನಕ್ಕೆ ಬಂದನು.

೬೫. ಅನಂತರದಲ್ಲಿ ರೋಗಚಿಕಿತ್ಸೆಗಳ ತತ್ತ್ವವನ್ನು ಅರಿತ ಸ್ವರೋಚಿಯು ರೋಗವನ್ನು ಶಮನಮಾಡುವ ಔಷಧ-ರಸಗಳ ಪ್ರಯೋಗದಿಂದ ಆ ಕನ್ನಿಕೆಯರ ದೇಹಗಳನ್ನು ರೋಗಮುಕ್ತಗಳನ್ನಾಗಿ ಮಾಡಿದನು. ಮತ್ತು ಔಷಧ ಪ್ರಭಾವದಿಂದ ತಾನು ಥಳಥಳಿಸಿದನು.

೬೬. ತರುವಾಯ ಶುಭಕರರೂ, ಮಂಗಳಾಂಗಿಯರೂ ಮತ್ತು ವ್ಯಾಧಿಯಿಂದ ಮುಕ್ತರೂ ಆದ ಆ ಕನ್ಯೆಯರು ತಾವು ವಾಸಮಾಡುತ್ತಿದ್ದ ಪರ್ವತ ಪ್ರದೇಶವನ್ನು ತಮ್ಮ ದೇಹಪ್ರಭೆಯಿಂದ ಕಂಗೊಳಿಸುವುದನ್ನಾಗಿ ಮಾಡಿದರು.

ಮಾರ್ಕಂಡೇಯ ಪುರಾಣದಲ್ಲಿ ಅರವತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಷಷ್ಟಿತಮೋಽಧ್ಯಾಯಃ

(ವಿಭಾವರೀ-ಕಲಾವತೀ ಕನ್ಯಾಪರಿಣಯಃ)

ಮಾರ್ಕಣ್ಡೇಯ ಉವಾಚ :—

ಏವಂ ವಿಮುಕ್ತರೋಗಾ ತು ಕನ್ಯಕಾ ತಂ ಮುದಾನ್ವಿತಾ ।
ಸ್ವರೋಚಿಷಮುವಾಚೇದಂ ಶೃಣುಷ್ವ ವಚನಂ ಪ್ರಭೋ ॥೧॥

ಮನ್ದಾರವಿದ್ಯಾಧರಜಾ ನಾಮ್ನಾ ಖ್ಯಾತಾ ವಿಭಾವರೀ ।
ಉಪಕಾರಿನ್ ಸ್ವಮಾತ್ಮಾನಂ ಪ್ರಯಚ್ಛಾಮಿ ಪ್ರತೀಚ್ಛ ಮಾಮ್॥೨॥

ಅರವತ್ತೊಂದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಹೀಗೆ ರೋಗಮುಕ್ತರಾದ ಇಬ್ಬರಲ್ಲಿ ಒಬ್ಬಳು ಕನ್ಯೆಯು ಹರ್ಷದಿಂದ ಕೂಡಿದವಳಾಗಿ ಸ್ವರೋಚಿಯನ್ನು ಕುರಿತು ಈ ಮಾತನ್ನು ಹೇಳಿದಳು. ಪ್ರಭುವೇ! ನನ್ನ ವಚನವನ್ನು ಲಾಲಿಸು.

೨. ನಾನು ಮಂದಾರ ಎಂಬ ನಾಮಾಂಕಿತನಾದ ವಿದ್ಯಾಧರನ ಪುತ್ರಿಯೂ ವಿಭಾವರೀ ಎಂಬ ನಾಮಾಂಕನದಿಂದ ಖ್ಯಾತಿಹೊಂದಿದವಳೂ ಆಗಿದ್ದೇನೆ. ಎಲೈ ಉಪಕಾರಿಯೇ! ನಾನು ನನ್ನ ದೇಹವನ್ನು ನಿನಗೆ ಅರ್ಪಿಸುವೆನು. ನೀನು ನನ್ನನ್ನು ಸ್ವೀಕರಿಸು.

ವಿದ್ಯಾಂ ಚ ತುಭ್ಯಂ ದಾಸ್ಯಾಮಿ ಸರ್ವಭೂತರುತಾನಿ ತೇ ।
ಯಯಾಭಿವ್ಯಕ್ತಿಮೇಷ್ಯನ್ತಿ ಪ್ರಸಾದಪ್ರವಣೋ ಭವ ॥೩॥

ಮಾರ್ಕಣ್ಡೇಯ ಉವಾಚ :—

ಏವಮಸ್ತ್ವಿತಿ ತೇನೋಕ್ತೇ ಧರ್ಮಜ್ಞೇನ ಸ್ವರೋಚಿಷಾ ।
ದ್ವಿತೀಯಾ ತು ತದಾ ಕನ್ಯಾ ಇದಂ ವಚನಮಬ್ರವೀತ್ ॥೪॥

ಕುಮಾರಬ್ರಹ್ಮಚಾರ್ಯಾಸೀತ್ಪಾರೋ ನಾಮ ಪಿತಾ ಮಮ ।
ಬ್ರಹ್ಮರ್ಷಿಃ ಸುಮಹಾಭಾಗೋ ವೇದವೇದಾಙ್ಗಪಾರಗಃ ॥೫॥

ತಸ್ಯ ಪುಂಸ್ಕೋಕಿಲಾಲಾಪರಮಣೀಯೇ ಮಧೌ ಪುರಾ ।
ಆಜಗಾಮಾಪ್ಸರೋಽಭ್ಯಾಶಂ ಪ್ರಖ್ಯಾತಾ ಪುಞ್ಜಿಕಸ್ಥಲಾ ॥೬॥

---

೩. ಯಾವ ವಿದ್ಯೆಯ ಪ್ರಭಾವದಿಂದ ಸಮಸ್ತ ಪ್ರಾಣಿಗಳ ಮಾತಿನ ಅರ್ಥವು ಸ್ಪಷ್ಟವಾಗಿ ತಿಳಿಯುವುದೋ ಅಂತಹ ವಿದ್ಯೆಯನ್ನು ನಾನು ನಿನಗೆ ದಾನಮಾಡುವೆನು. ನೀನು ನನ್ನಲ್ಲಿ ಅನುಗ್ರಹ ತೋರುವವನಾಗಬೇಕು.

ಮಾರ್ಕಂಡೇಯ ಮುನಿಯು ಹೇಳಿದನು :—

೪. ವಿಭಾವರಿಯ ವಚನವನ್ನು ಕೇಳಿ ಸ್ವರೋಚಿಯು " ಹಾಗೆ ಆಗಲಿ " ಎಂದು ಹೇಳಿ ಅದನ್ನು ಸಮ್ಮತಿಸುತ್ತಿರಲು ಆಗ ಎರಡನೆಯ ಕನ್ಯೆಯು ಸ್ವರೋಚಿಯನ್ನು ಕುರಿತು ಈ ರೀತಿಯಾಗಿ ಹೇಳಿದಳು.

೫. ಪಾರ ಎಂಬ ನಾಮಾಂಕಿತನಾದ ನನ್ನ ತಂದೆಯು ಕುಮಾರ ಬ್ರಹ್ಮಚಾರಿಯಾಗಿದ್ದನು. ಅವನು ಮಹಾಮಹಿಮಶಾಲಿಯೂ ವೇದ-ವೇದಾಂಗ-ಗಳಲ್ಲಿ ಪಾರಂಗತನೂ ಮತ್ತು ಬ್ರಹ್ಮರ್ಷಿಮಹಿಮೆಯುಳ್ಳವನೂ ಆಗಿದ್ದನು.

೬. ಹಿಂದೆ ಒಂದು ಸಮಯದಲ್ಲಿ ಕೋಗಿಲೆಗಳ ಗಾನದಿಂದ ಹೃದಯೋಲ್ಲಾಸಕವಾದ ವಸಂತಮಾಸವು ಬಂದಿರಲು ಪುಂಜಿಕಸ್ಥಲಾ ಎಂಬ ಪ್ರಸಿದ್ಧಳಾದ ಅಪ್ಸರಾಂಗನೆಯೋರ್ವಳು ನನ್ನ ತಂದೆಯ ಸನ್ನಿಧಿಗೆ ಬಂದಳು.

ಕಾಮವೈಕ್ಲವ್ಯತಾಂ ನೀತಃ ಸ ತದಾ ಮುನಿಪುಙ್ಗವಃ ।
ತತ್ಸಂಯೋಗೇಽಹಮುತ್ಪನ್ನಾ ತಸ್ಯಾಮತ್ರ ಮಹಾಚಲೇ ॥೭॥

ವಿಹಾಯ ಮಾಂ ಗತಾ ಸಾ ಚ ಮಾತಾಸ್ಮಿನ್ನಿರ್ಜನೇ ವನೇ ।
ಬಾಲಾಮೇಕಾಂ ಮಹೀಪೃಷ್ಠೇ ವ್ಯಾಲಶ್ವಾಪದಸಙ್ಕುಲೇ ॥೮॥

ತತಃ ಕಲಾಭಿಃ ಸೋಮಸ್ಯ ವರ್ಧನ್ತೀಭಿರಹಃಕ್ಷಯೇ ।
ಆಪ್ಯಾಯಮಾನಾಹರಹೋ ವೃದ್ಧಿಂ ಯಾತಾಸ್ಮಿ ಸತ್ತಮ ॥೯॥

ತತಃ ಕಲಾವತೀತ್ಯೇತನ್ಮಮ ನಾಮ ಮಹಾತ್ಮನಾ ।
ಗೃಹೀತಾಯಾಃ ಕೃತಂ ಪಿತ್ರಾ ಗನ್ಧರ್ವೇಣ ಶುಭಾತ್ಮನಾ ॥೧೦॥

---

೭. ಆಗ ಮುನಿಶ್ರೇಷ್ಠನಾದ ನನ್ನ ತಂದೆಯು ಅಪ್ಸರಾಂಗನೆಯನ್ನು ಕಂಡು ಕಾಮವಿಕಾರಗಳಿಂದ ಪರತಂತ್ರತೆಯನ್ನು ಹೊಂದಿದನು. ಹೀಗಾಗಲು ಈ ಪರ್ವತದಲ್ಲಿ ನನ್ನ ತಂದೆಯ ಸಂಗದಿಂದ ಪುಂಜಿಕಸ್ಥಲೆಯಲ್ಲಿ ನಾನು ಜನಿಸಿದವಳಾಗಿದ್ದೇನೆ.

೮. ನನ್ನ ಜನನಿಯಾದ ಪುಂಜಿಕಸ್ಥಲೆಯು ಈ ನಿರ್ಜನವಾದ ವನಭೂಮಿಯಲ್ಲಿ ನನ್ನನ್ನು ತ್ಯಜಿಸಿ ಹೊರಟುಹೋದಳು. ಹೆಬ್ಬಾವು-ಹುಲಿ-ಕರಡಿಗಳಿಂದ ತುಂಬಿದ ಈ ಅರಣ್ಯದಲ್ಲಿ ಬಾಲಿಕೆಯಾದ ನಾನೊಬ್ಬಳು ಅಲೆದಾಡಿದೆನು.

೯. ಎಲೈ, ಸಾಧೂತ್ತಮನೇ! ತರುವಾಯ ಪ್ರತಿದಿನದಲ್ಲಿ ಹಗಲಿನ ಕಡೆಯಲ್ಲಿ ಚಂದ್ರನು ಉದಯಿಸಿ ಚಂದ್ರನ ಅಮೃತಕಲೆಗಳಿಂದ ಆಪ್ಯಾಯನವನ್ನು ಹೊಂದಿ ನಾನು ದಿನದಿನಕ್ಕೂ ವೃದ್ಧಿಯನ್ನು ಹೊಂದಿದೆನು.

೧೦. ಮಹಾತ್ಮನೂ, ಕಲ್ಯಾಣಕರವಾದ ಸಂಕಲ್ಪವುಳ್ಳವನೂ ಆದ ನನ್ನ ತಂದೆ ಗಂಧರ್ವನು ನನ್ನನ್ನು ಪರಿಗ್ರಹಿಸಿ ನನಗೆ ಕಲಾವತಿಯೆಂದು ನಾಮಕರಣಮಾಡಿದನು.

ನ ದತ್ತಾಹಂ ತದಾ ತೇನ ಯಾಚಿತೇನ ಮಹಾತ್ಮನಾ ।
ದೇವಾರಿಣಾ ನಿಶಾಸುಪ್ತಸ್ತತೋ ಮೇ ಘಾತಿತಃ ಪಿತಾ ॥೧೧॥

ತತೋಽಹಮತಿನಿರ್ವೇದಾದಾತ್ಮವ್ಯಾಪಾದನೋದ್ಯತಾ ।
ನಿವಾರಿತಾ ಶಮ್ಭುಪತ್ನ್ಯಾ ಸತ್ಯಾ ಸತ್ಯಪ್ರತಿಶ್ರವಾ ॥೧೨॥

ಮಾ ಶುಚಃ ಸುಭ್ರು ಭರ್ತಾ ತೇ ಮಹಾಭಾಗೋ ಭವಿಷ್ಯತಿ ।
ಸ್ವರೋಚಿರ್ನಾಮ ಪುತ್ರಶ್ಚ ಮನುಸ್ತಸ್ಯ ಭವಿಷ್ಯತಿ ॥೧೩॥

ಆಜ್ಞಾಂ ಚ ನಿಧಯಃ ಸರ್ವೇ ಕರಿಷ್ಯನ್ತಿ ತವಾದೃತಾಃ ।
ಯಥಾಭಿಲಷಿತಂ ವಿತ್ತಂ ಪ್ರದಾಸ್ಯನ್ತಿ ಚ ತೇ ಶುಭೇ ॥೧೪॥

---

೧೧. ಹೀಗಿರಲು ಯಾವನೋ ಒಬ್ಬ ರಾಕ್ಷಸನು ಬಂದು ಪ್ರಾರ್ಥಿಸಲು ಮಹಾತ್ಮನಾದ ನನ್ನ ತಂದೆಯು ಅವನಿಗೆ ನನ್ನನ್ನು ಕೊಡಲಿಲ್ಲ. ಅದೇ ಕೋಪದಿಂದ ಒಂದು ದಿನ ರಾತ್ರಿವೇಳೆಯಲ್ಲಿ ನಿದ್ರಿಸುತ್ತಿದ್ದ ಹಾಗೆ ನನ್ನ ತಂದೆಯನ್ನು ರಾಕ್ಷಸನು ವಧಿಸಿದನು.

೧೨. ಅನಂತರದಲ್ಲಿ ನಾನು ದುಃಖಪರಂಪರೆಯಿಂದ ಜೀವನದಲ್ಲಿ ವೈರಾಗ್ಯಹುಟ್ಟಿ ಆತ್ಮಹತ್ಯೆ ಮಾಡಿಕೊಳ್ಳಲು ತೊಡಗಿದವಳಾದೆ. ಆಗ ಮಹೇಶ್ವರನ ಪತ್ನಿಯೂ ಸತ್ಯಸಂಕಲ್ಪಳೂ ಆದ ಸತೀದೇವಿಯು ನನ್ನನ್ನು ಆತ್ಮಹತ್ಯೆಯಿಂದ ನಿವಾರಿಸಿದಳು.

೧೩. ಆಗ ಸತಿಯು ನನ್ನನ್ನು ಈ ರೀತಿಯಾಗಿ ಸಂತೈಸಿದಳು. ಸುಂದರಾಂಗಿಯೇ! ನೀನು ಶೋಕಪಡಬೇಡ. ಮಹಾಭಾಗ್ಯಶಾಲಿಯಾದ ಸ್ವರೋಚಿ ಎಂಬುವನು ನಿನಗೆ ಪತಿಯಾಗಿ ಲಭಿಸುವನು. ಮತ್ತು ಅವನ ಪುತ್ರನು ಮನು ಪದವನ್ನು ಹೊಂದುವನು.

೧೪. ಹಾಗು ನವ ನಿಧಿಗಳು ನಿನ್ನಲ್ಲಿ ಪ್ರೀತಿ-ಗೌರಗಳನ್ನು ಹೊಂದಿ ನಿನ್ನ ಆಜ್ಞೆಯಂತೆ ನಡೆದುಕೊಳ್ಳುವುವು. ಮಂಗಳಾಂಗಿಯೇ! ನಿಧಿಗಳು ನಿನ್ನ ಇಷ್ಟದಂತೆ ಬೇಕಾದ ಐಶ್ವರ್ಯವನ್ನು ಕೊಡುವುವು.

ಯಸ್ಯಾ ವತ್ಸೇ ಪ್ರಭಾವೇಣ ವಿದ್ಯಾಯಾಸ್ತಾಂ ಗೃಹಾಣ ಮೇ ।
ಪದ್ಮಿನೀ ನಾಮ ವಿದ್ಯೇಯಂ ಮಹಾಪದ್ಮಾಭಿಪೂಜಿತಾ ॥೧೫॥

ಇತ್ಯಾಹ ಮಾಂ ದಕ್ಷಸುತಾ ಸತೀ ಸತ್ಯಪರಾಯಣಾ ।
ಸ್ವರೋಚಿಸ್ತ್ವಂ ಧ್ರುವಂ ದೇವೀ ನಾನ್ಯಥಾ ಸಾ ವದಿಷ್ಯತಿ ॥೧೬॥

ಸಾಹಂ ಪ್ರಾಣಪ್ರದಾಯಾದ್ಯ ತಾಂ ವಿದ್ಯಾಂ ಸ್ವಂ ತಥಾ ವಪುಃ ।
ಪ್ರಯಚ್ಛಾಮಿ ಪ್ರತೀಚ್ಛ ತ್ವಂ ಪ್ರಸಾದಸುಮುಖೋ ಭವ ॥೧೭॥

ಮಾರ್ಕಣ್ಡೇಯ ಉವಾಚ :—

ಏವಮಸ್ತ್ವಿತಿ ತಾಮಾಹ ಸ ತು ಕನ್ಯಾಂ ಕಲಾವತೀಮ್ ।
ವಿಭಾವರ್ಯಾಃ ಕಲಾವತ್ಯಾಃ ಸ್ನಿಗ್ಧದೃಷ್ಟ್ಯಾನುಮೋದಿತಃ ॥೧೮॥

---

೧೫. ಪುತ್ರಿಯೇ! ಯಾವ ವಿದ್ಯೆಯ ಪ್ರಭಾವದಿಂದ ಈ ರೀತಿಯಾಗಿ ನಿಧಿಗಳ ವಶೀಕರಣವಾಗುವುದೋ ಆ ವಿದ್ಯೆಯನ್ನು ನೀನು ನನ್ನಿಂದ ಸ್ವೀಕರಿಸು. ಮಹಾಪದ್ಮ ಮುಂತಾದ ನಿಧಿಗಳಿಂದ ಪೂಜಿಸಲ್ಪಟ್ಟ ಈ ವಿದ್ಯೆಯು ಪದ್ಮಿನೀ ವಿದ್ಯೆಯೆಂದು ಪ್ರಖ್ಯಾತವಾಗಿರುವುದು.

೧೬. ದಕ್ಷಪ್ರಜಾಪತಿಯ ಪುತ್ರಿಯೂ, ಸತ್ಯಪರಾಯಣೆಯೂ ಆದ ಸತೀದೇವಿಯು ನನಗೆ ಹೀಗೆಂದು ಹೇಳಿ ಸಮಾಧಾನಮಾಡಿದಳು. ನೀನು ಅದೇ ಸ್ವರೋಚಿ ಎಂಬುವನಾಗಿದ್ದೀಯೆ. ಆ ಸತೀದೇವಿಯು ಅನೃತವನ್ನು ಹೇಳುವುದಿಲ್ಲ.

೧೭. ಆ ಕಲಾವತಿಯೆಂಬ ನಾನು ಪ್ರಾಣದಾನಮಾಡಿರುವ ನಿನಗೆ ಈಗ ಪದ್ಮಿನೀವಿದ್ಯೆಯನ್ನೂ ನನ್ನ ದೇಹವನ್ನೂ ಅರ್ಪಿಸುವೆನು. ನೀನು ಸ್ವೀಕಾರಮಾಡಿ ನನ್ನಲ್ಲಿ ಅನುಗ್ರಹದೃಷ್ಟಿಯನ್ನು ತೋರಬೇಕು.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೧೮. ಆಗ ಸ್ವರೋಚಿಯು ವಿಭಾವರಿಯ ಸ್ನೇಹ ದೃಷ್ಟಿಯಿಂದಲೂ ಕಲಾವತಿಯ ದೀನಭಾವದಿಂದ ಕೂಡಿದ ಪ್ರೇಮದೃಷ್ಟಿಯಿಂದಲೂ ಅನುಮೋದಿಸಲ್ಪಟ್ಟವನಾಗಿ ಆ ಕಲಾವತೀ ಕನ್ಯೆಯನ್ನು ನೋಡಿ " ಹಾಗೆ ಆಗಲಿ " ಎಂದು ಒಪ್ಪಿಕೊಂಡನು.

ಜಗ್ರಾಹ ಚ ತತಃ ಪಾಣೀ ಸ ತಯೋರಮರದ್ಯುತಿಃ ।
ನದತ್ಸು ದೇವತೂರ್ಯೇಷು ನೃತ್ಯನ್ತೀಷ್ವಪ್ಸರಃಸು ಚ ॥೧೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸ್ವಾರೋಚಿಷೇ ಮನ್ವನ್ತರೇ ಏಕಷಷ್ಟಿತಮೋಽಧ್ಯಾಯಃ

---

೧೯. ತರುವಾಯ ದೇವತೆಯಂತೆ ಪ್ರಭೆಯಿಂದ ರಾಜಿಸುವ ಸ್ವರೋಚಿಯು ದೇವಲೋಕದ ವಾದ್ಯಗಳು ಧ್ವನಿಗೈಯುತ್ತಿರಲು, ಅಪ್ಸರಾಂಗನೆಯರು ನರ್ತನ ಮಾಡುತ್ತಿರಲು ವಿಭಾವರೀ ಕಲಾವತೀ ಕನ್ಯೆಯರ ಪಾಣಿಗ್ರಹಣ ಮಾಡಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಿಷಷ್ಟಿತಮೋಽಧ್ಯಾಯಃ

(ಸ್ವರೋಚಿಷಃ ಕಾನ್ತಾಭಿಃ ಸಹ ವಿಹರಣಮ್)

ಮಾರ್ಕಣ್ಡೇಯ ಉವಾಚ :—

ತತಃ ಸ ತಾಭಿಃ ಸಹಿತಃ ಪತ್ನೀಭಿರಮರದ್ಯುತಿಃ ।
ರರಾಮ ತಸ್ಮಿನ್ ಶೈಲೇನ್ದ್ರೇ ರಮ್ಯಕಾನನನಿರ್ಝರೇ ॥೧॥

ಸರ್ವೋಪಭೋಗರತ್ನಾನಿ ಮಧೂನಿ ಮಧುರಾಣಿ ಚ ।
ನಿಧಯಃ ಸಮುಪಾಜಗ್ಮುಃ ಪದ್ಮಿನ್ಯಾ ವಶವರ್ತಿನಃ ॥೨॥

ಅರವತ್ತೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತು ಹೇಳಿದನು :—

೧. ತರುವಾಯ ಅಮರತೇಜಸ್ವಿನಿಂದ ಕೂಡಿದ ಆ ಸ್ವರೋಚಿಯು ಆ ಮೂರುಮಂದಿ ಪತ್ನಿಯರಿಂದ ಕೂಡಿ ರಮಣೀಯವಾದ ಅರಣ್ಯ-ಜಲಪಾತಗಳಿಂದ ಕೂಡಿದ ದೊಡ್ಡ ಗಿರಿಯಲ್ಲಿ ವಿಹರಿಸಿದನು.

೨. ಆಗ ಸರ್ವೋತ್ತಮವಾದ ಭೋಗ್ಯವಸ್ತುಗಳು, ಮಧುರವಾದ ಮಧು ರಸಗಳು ಮತ್ತು ನವನಿಧಿಗಳು—ಇವೆಲ್ಲವೂ ಪದ್ಮಿನೀ ವಿದ್ಯೆಯ ವಶವರ್ತಿಗಳಾದುದರಿಂದ ವಿದ್ಯಾಪ್ರಭಾವದಿಂದ ಬಂದೊದಗಿದುವು.

ಸ್ರಜೋ ವಸ್ತ್ರಾಣ್ಯಲಂಕಾರಾನ್ ಗನ್ಧಾಢ್ಯಮನುಲೇಪನಮ್ ।
ಆಸನಾನ್ಯತಿಶುಭ್ರಾಣಿ ಕಾಞ್ಚನಾನಿ ಯಥೇಚ್ಛಯಾ ॥೩॥

ಸೌವರ್ಣಾನಿ ಮಹಾಭಾಗ ಕರಕಾನ್ ಭಾಜನಾನಿ ಚ ।
ತಥಾ ಶಯ್ಯಾಶ್ಚ ವಿವಿಧಾ ದಿವ್ಯೈರಾಸ್ತರಣೈರ್ಯುತಾಃ ॥೪॥

ಏವಂ ಸ ತಾಭಿಃ ಸಹಿತೋ ದಿವ್ಯಗನ್ಧಾಧಿವಾಸಿತೇ ।
ರರಾಮ ಸ್ವರುಚಿರ್ಭಾಭಿರ್ಭಾಸಿತೇ ವರಪರ್ವತೇ ॥೫॥

ತಾಶ್ಚಾಪಿ ಸಹ ತೇನೇತಿ ಲೇಭಿರೇ ಮುದಮುತ್ತಮಾಮ್ ।
ರಮಮಾಣಾ ಯಥಾ ಸ್ವರ್ಗೇ ತಥಾ ತತ್ರ ಶಿಲೋಚ್ಚಯೇ ॥೬॥

ಕಲಹಂಸೀ ಜಗಾದೈಕಾಂ ಚಕ್ರವಾಕೀಂ ಜಲೇ ಸತೀಮ್ ।
ತಸ್ಯ ತಾಸಾಂ ಚ ಲಲಿತೇ ಸಮ್ಬನ್ಧೇ ಚ ಸ್ಪೃಹಾವತೀ ॥೭॥

---

೩. ಪುಷ್ಪಮಾಲಿಕೆ, ಅಮೂಲ್ಯವಾದ ವಸ್ತ್ರ, ಅಲಂಕಾರ, ಸುಗಂಧ-ದಿಂದ ಕೂಡಿದ ಅನುಲೇಪನವಸ್ತು ಮತ್ತು ಅತಿಶುಭ್ರವೂ ಸುವರ್ಣಮಯವೂ ಆದ ಆಸನ—ಮುಂತಾದ ಎಲ್ಲ ಭೋಗ್ಯವಸ್ತುಗಳು ಲಭಿಸಿದುವು.

೪. ಮಹಾಶಯನಾದ ಕ್ರೌಷ್ಟುಕಿಯೇ! ಮತ್ತು ಸುವರ್ಣಮಯ-ವಾದ ಜಲಪಾತ್ರ–ಇತರ ಭಾಂಡಗಳೂ ದಿವ್ಯವಾದ ಆಸ್ತರಣಗಳಿಂದ ಕೂಡಿದ ವಿಧವಿಧವಾದ ಶಯನಗಳೂ ಸರ್ವೋತ್ತಮವಾದ ಭೋಗವನ್ನು ಸಂಪಾದಿಸಿದುವು.

೫. ವರಾಂಗನೆಯರಿಂದ ಕೂಡಿದ ಸ್ವರೋಚಿಯು ದಿವ್ಯವಾದ ಸುಗಂಧ-ದಿಂದ ರಮಣೀಯವಾದ ಮತ್ತು ತನ್ನ ದೇಹಕಾಂತಿಯಿಂದ ಬೆಳಗುತ್ತಿದ್ದ ಆ ರಮ್ಯಪ್ರದೇಶದಲ್ಲಿ ಈ ರೀತಿಯಾಗಿ ರಮಿಸಿದನು.

೬. ಆ ಸುಂದರಿಯರು ಸ್ವರ್ಗಲೋಕದಲ್ಲಿ ಹೇಗೋ ಹಾಗೆ ಆ ಪರ್ವತ-ಶಿಖರದಲ್ಲಿ ತಮ್ಮ ಕಾಂತನಾದ ಸ್ವರೋಚಿಯ ಸಂಗಡ ರಮಿಸುತ್ತ ಅತಿಶಯವಾದ ಆನಂದವನ್ನು ಅನುಭವಿಸಿದರು.

೭. ಹೀಗಿರಲು ಸ್ವರೋಚಿ-ಮತ್ತು ಅವನ ಕಾಂತೆಯರ ಪರಸ್ಪರಾನುರಾಗ-ಪೂರ್ಣವಾದ ಉತ್ತಮ ದಾಂಪತ್ಯಸಂಬಂಧವನ್ನು ಮೆಚ್ಚುತ್ತ ಒಂದು ಕಲಹಂಸ-ಪಕ್ಷಿಯು ನೀರಿನಲ್ಲಿದ್ದ ಒಂದು ಹೆಣ್ಣು ಚಕ್ರವಾಕಪಕ್ಷಿಯನ್ನು ನೋಡಿ ಹೀಗೆಂದು ಹೇಳಿತು.

ಧನ್ಯೋಽಯ ಮತಿಪುಣ್ಯೋಽಯಂ ಯೋಽಯಂ ಯೌವನಗೋಚರಃ।
ದಯಿತಾಭಿಃ ಸಹೈತಾಭಿರ್ಭುಙ್ಕ್ತೇ ಭೋಗಾನಭೀಪ್ಸಿತಾನ್ ॥೮॥

ಸನ್ತಿ ಯೌವನಿನಃ ಶ್ಲಾಘ್ಯಾಸ್ತತ್ಪತ್ನ್ಯೋ ನಾತಿಶೋಭನಾಃ।
ಜಗತ್ಯಾಮಲ್ಪಕಾಃ ಪತ್ನ್ಯಃ ಪತಯಶ್ಚಾತಿಶೋಭನಾಃ ॥೯॥

ಅಭೀಷ್ಟಾ ಕಸ್ಯ ಚಿತ್ಕಾನ್ತಾ ಕಾನ್ತಃ ಕಸ್ಯಾಶ್ಚಿದೀಪ್ಸಿತಃ।
ಪರಸ್ಪರಾನುರಾಗಾಢ್ಯಂ ದಾಮ್ಪತ್ಯಮತಿದುರ್ಲಭಮ್ ॥೧೦॥

ಧನ್ಯೋಽಯಂ ದಯಿತಾಭೀಷ್ಟೋ ಹ್ಯೇತಾಶ್ಚಾಸ್ಯಾತಿವಲ್ಲಭಾಃ।
ಪರಸ್ಪರಾನುರಾಗೋ ಹಿ ಧನ್ಯಾನಾಮೇವ ಜಾಯತೇ ॥೧೧॥

---

೮. ಸ್ವರೋಚಿಯು ಪೂರ್ಣತಾರುಣ್ಯವಂತನಾಗಿ ಈ ಸುಂದರಿಯರಾದ ಪ್ರಿಯೆಯರೊಡಗೂಡಿ ತನ್ನ ಮನವೊಪ್ಪುವ ಭೋಗಗಳನ್ನು ಭುಂಜಿಸುತ್ತಿರುವನು. ಇವನೇ ಧನ್ಯನು! ಇವನೇ ಮಹಾಪುಣ್ಯಶಾಲಿಯು!

೯. ಲೋಕದಲ್ಲಿ ತಾರುಣ್ಯದಿಂದ ಕಂಗೊಳಿಸುವ ಶ್ಲಾಘ್ಯತರುಣರು ಇರುವರು. ಅವರ ಪತ್ನಿಯರು ಮಾತ್ರ ಸೌಂದರ್ಯವಿಲ್ಲದವರಾಗಿರುವರು. ಆದುದರಿಂದ ಜಗತ್ತಿನಲ್ಲಿ ಸುಂದರಾಕಾರದಿಂದ ಅನ್ಯೋನ್ಯವಾಗಿ ಒಪ್ಪುವ ಪತಿ-ಪತ್ನಿಯರು ಇರುವುದು ತುಂಬ ವಿರಳ.

೧೦. ಒಬ್ಬ ತರುಣನಿಗೆ ಕಾಂತೆಯಲ್ಲಿ ತುಂಬ ಪ್ರೀತಿಯಿರುವುದು. ಮತ್ತೊಬ್ಬಳು ತರುಣಿಗೆ ತನ್ನ ಕಾಂತನಲ್ಲಿ ಮಾತ್ರ ಪ್ರೀತಿಯಿರುವುದು. ಅನ್ಯೋನ್ಯ ಪ್ರೇಮದಿಂದ ಪೂರ್ಣವಾದ ದಾಂಪತ್ಯಸಂಬಂಧವು ಬಹಳ ದುರ್ಲಭ-ವಾಗಿರುವುದು.

೧೧. ದಯಿತೆಯರಿಗೆ ಪರಮಪ್ರಿಯನಾದ ಈ ಸ್ವರೋಚಿಯು ಧನ್ಯ-ನಾಗಿರುವನು. ಹಾಗು ಕಾಂತನಿಗೆ ಪ್ರೇಮಪಾತ್ರರಾದ ಈ ಅಂಗನೆಯರು ಧನ್ಯ-ರಾಗಿರುವರು. ಧನ್ಯರಾದ ಸ್ತ್ರೀಪುರುಷರಲ್ಲಿ ಮಾತ್ರವೇ ಪರಸ್ಪರ ಪ್ರೀತಿಯು ಉದಯಿಸುವುದು.

ಏತನ್ನಿಶಮ್ಯ ವಚನಂ ಕಲಹಂಸೀಸಮೀರಿತಮ್ ।
ಉವಾಚ ಚಕ್ರವಾಕೀ ತಾಂ ನಾತಿವಿಸ್ಮಿತಮಾನಸಾ ॥೧೨॥

ನಾಯಂ ಧನ್ಯೋ ಯತೋ ಲಜ್ಜಾ ನಾನ್ಯಸ್ತ್ರೀಸನ್ನಿಕರ್ಷತಃ ।
ಅನ್ಯಾಂ ಸ್ತ್ರಿಯಮಯಂ ಭುಙ್ಕ್ತೇ ನ ಸರ್ವಾಸ್ವಸ್ಯ ಮಾನಸಮ್ ॥೧೩॥

ಚಿತ್ತಾನುರಾಗ ಏಕಸ್ಮಿನ್ನಧಿಷ್ಠಾನೇ ಯತಃ ಸಖಿ ।
ತತೋಽತಿಪ್ರೀತಿಮಾನೇಷ ಭಾರ್ಯಾಸು ಭವಿತಾ ಕಥಮ್ ॥೧೪॥

ಏತಾ ನ ದಯಿತಾಃ ಪತ್ಯುರ್ನೈತಾಸಾಂ ದಯಿತಃ ಪತಿಃ ।
ವಿನೋದಮಾತ್ರಮೇವೈತಾ ಯಥಾ ಪರಿಜನೋಽಪರಃ ॥೧೫॥

---

೧೨. ಕಲಹಂಸಪಕ್ಷಿಯು ಹೇಳಿರುವ ಈ ವಚನವನ್ನು ಕೇಳಿದ ಚಕ್ರವಾಕಪಕ್ಷಿಯು ಅಷ್ಟು ಹೆಚ್ಚಾಗಿ ವಿಸ್ಮಯವಿಲ್ಲದ ಮನಸ್ಸುಳ್ಳದ್ದಾಗಿ ಕಲಹಂಸಿಯನ್ನು ನೋಡಿ ಪ್ರತ್ಯುತ್ತರವಿತ್ತಿತು.

೧೩. ಈ ಸ್ವರೋಚಿಯು ಬೇರೊಬ್ಬ ಅಂಗನೆಯ ಸನ್ನಿಧಿಯಲ್ಲಿ ಲಜ್ಜೆಯಿಲ್ಲದವನಾಗಿ ಒಬ್ಬ ಅಂಗನೆಯಲ್ಲಿ ಭೋಗವನ್ನು ಭುಂಜಿಸುವನು. ಇವನ ಮನಸ್ಸಿನಲ್ಲಿ ಎಲ್ಲರಲ್ಲಿಯೂ ಒಂದೇವಿಧದ ಪ್ರೇಮವಿಲ್ಲ. ಆದಕಾರಣ ಇವನು ಧನ್ಯನಲ್ಲ.

೧೪. ಎಲೈ, ಸಖಿಯಾದ ಕಲಹಂಸಿಯೇ! ಒಂದು ಆಲಂಬನದಲ್ಲಿ ಮಾತ್ರ ಚಿತ್ತಕ್ಕೆ ವಿಶೇಷವಾದ ಪ್ರೇಮಸಂಗವಿರುವುದರಿಂದ ಇವನು ಎಲ್ಲ ಭಾರ್ಯೆಯರಲ್ಲಿಯೂ ಹೇಗೆ ಪರಮಪ್ರೀತಿಯುಳ್ಳವನಾಗುವನು?

೧೫. ಈ ಮೂರುಮಂದಿ ಅಂಗನೆಯರು ಈ ಪ್ರಿಯನಿಗೆ ವಾಸ್ತವವಾಗಿ ಪ್ರೇಮಸಿಯರಾಗಿಲ್ಲ. ಇವನು ಅವರಿಗೆ ಪ್ರಿಯತಮನಾದ ಪತಿಯಾಗಿಲ್ಲ. ಈ ಸಂಬಂಧವು ಒಂದು ವಿನೋದರೂಪವಾದುದು. ಇತರ ಪರಿಜನರಂತೆ ಒಬ್ಬರಿಗೊಬ್ಬರಾಗಿರುವರು.

ಏತಾಸಾಂ ಚ ಯದೀಷ್ಟೋಽಯಂ ತತ್ಕಿಂ ಪ್ರಾಣಾನ್ನ ಮುಞ್ಚತಿ ।
ಆಲಿಙ್ಗತ್ಯಪರಾಂ ಕಾನ್ತಾಂ ಧ್ಯಾತೋ ವೈ ಕಾನ್ತಯಾನ್ಯಯಾ ॥೧೬॥

ವಿದ್ಯಾಪ್ರದಾನಮೂಲ್ಯೇನ ಕ್ರೀತೋ ಹ್ಯೇಷ ಸುಭೃತ್ಯವತ್ ।
ಪ್ರವರ್ತತೇ ನ ಹಿ ಪ್ರೇಮ ಸಮಂ ಬಹ್ವೀಷು ತಿಷ್ಠತಿ ॥೧೭॥

ಕಲಹಂಸಿ ಪತಿರ್ಧನ್ಯೋ ಮಮ ಧನ್ಯಾಹಮೇವ ಚ ।
ಯಸ್ಯೈಕಸ್ಯಾಂ ಚಿರಂ ಚಿತ್ತಂ ಯಸ್ಯಾಶ್ಚೈಕತ್ರ ಸಂಸ್ಥಿತಮ್ ॥೧೮॥

ಬಹುಪತ್ನೀಪತಿರ್ಲೋಕಃ ಶರಣಂ ಪುಣ್ಯಪಾಪಯೋಃ ॥೧೯॥

---

೧೬. ಈ ಸ್ವರೋಚಿಯು ಎಲ್ಲ ಪ್ರಿಯೆಯರಿಗೂ ವಾಸ್ತವವಾಗಿ ಪ್ರಿಯನಾಗಿದ್ದರೆ ಒಬ್ಬಳು ಕಾಂತೆಯಿಂದ ಧ್ಯಾನಿಸಲ್ಪಡುತ್ತ ಮತ್ತೊಬ್ಬಳು ಕಾಂತೆಯನ್ನು ಆಲಿಂಗಿಸುತ್ತ ಭೋಗವನ್ನು ಅನುಭವಿಸುವುದಕ್ಕಿಂತ ಪ್ರಾಣಗಳನ್ನು ಏಕೆ ತ್ಯಜಿಸಬಾರದು ?

೧೭. ಈ ಪ್ರಿಯೆಯರು ವಿದ್ಯಾಪ್ರದಾನವೆಂಬ ಮೂಲ್ಯದಿಂದ ಒಬ್ಬ ಭೃತ್ಯನಂತೆ ಇವನನ್ನು ಕೊಂಡುಕೊಂಡಿರುವರು. ಬಹುಮಂದಿ ರಮಣಿಯರಲ್ಲಿ ಸಂಗಹೊಂದಿದ ಪುರುಷನಿಗೆ ಎಲ್ಲರಲ್ಲಿಯೂ ಒಂದೇ ವಿಧದ ಪ್ರೇಮವಿರುವುದಿಲ್ಲ.

೧೮. ಎಲೈ, ಕಲಹಂಸಿಯೇ ! ನನ್ನ ಪತಿಯು ಧನ್ಯನಾದವನು. ಹಾಗು ನಾನು ಪರಮ ಧನ್ಯಳಾಗಿರುವೆನು. ನನ್ನ ಪತಿಗೆ ನನ್ನಲ್ಲಿ ಒಬ್ಬಳಲ್ಲಿಯೇ ಸರ್ವಕಾಲದಲ್ಲಿಯೂ ಪ್ರೇಮಸರ್ವಸ್ವವಿರುವುದು. ಹಾಗು ನನ್ನ ಪ್ರೇಮಸರ್ವಸ್ವಕ್ಕೆ ಒಬ್ಬನೇ ಆಸ್ಪದನಾಗಿರುವನು.

೧೯. ಅನೇಕ ಪತ್ನಿಯರನ್ನು ಹೊಂದಿದ ಪತಿಯು ಪುಣ್ಯ-ಪಾಪಗಳೆರಡಕ್ಕೂ ಆಧಾರವಾಗಿರುವನು. ಮತ್ತು ಪ್ರಾಚೀನ ಪುಣ್ಯ-ಪಾಪಸಮಷ್ಟಿಯ ಪರಿಣಾಮದಿಂದ ಹಾಗೆ ಬಹುಪತ್ನೀಸಂಬಂಧವನ್ನು ಹೊಂದುವನು.

ಗೃಹಾಶನಾಸನಾದ್ಯೈಶ್ಚ ಭೂಷಣೈಶ್ಚ ಸಹಾಗನ್ಯೈಃ ।
ವಿಷಮೈಃ ಕ್ರಿಯಮಾಣೋ ಹಿ ಯುಜ್ಯತೇ ಮಹದೇನಸಾ ॥೨೦॥

ಜ್ಯೇಷ್ಠಾಂ ಕನೀಯಭಾವೇನ ಕನಿಷ್ಠಾಂ ಜ್ಯೇಷ್ಠತಾಂ ನಯೇತ್ ।
ಗುರವೇ ತು ವರಂ ದತ್ತ್ವಾ ಹುತ್ವಾಗ್ನ್ಯಾಂ ಸಮಿಧಂ ಯಥಾ ॥೨೧॥

ಊಢಯಾ ಸಹ ಕರ್ತವ್ಯಾ ನಿತ್ಯನೈಮಿತ್ತಿಕೀಃ ಕ್ರಿಯಾಃ ।
ಜಗಾದಾಥಾನ್ಯಭಾವೇನ ಪಾಪಿಯಾಂಜ್ಞಾಯತೇ ನರಃ ॥೨೨॥

ಮಾರ್ಕಣ್ಡೇಯ ಉವಾಚ :—

ಸರ್ವಂ ಸತ್ತ್ವರುತಜ್ಞೋಽಸೌ ಸ್ವರೋಚಿರಪರಾಜಿತಃ ।
ನಿಶಮ್ಯ ಲಜ್ಜಿತೋ ದಧ್ಯೌ ಸತ್ಯಮೇವ ಹಿ ನಾನೃತಮ್ ॥೨೩॥

---

೨೦. ಪ್ರಿಯನು ಬಹುಜನ ಪ್ರೇಯಸಿಯರ ವಿಷಯದಲ್ಲಿ ವಾಸಗೃಹ-ಆಸನ-ಅಲಂಕಾರ-ಅನ್ನ-ವಸ್ತ್ರ ಮತ್ತು ಸಂಗಸುಖಗಳ ವಿಷಯದಲ್ಲಿ ವಿಷಮವಾಗಿ ವರ್ತಿಸುವನು. ಹಾಗೆ ವಿಷಮವರ್ತನೆಯಿಂದ ಮಹತ್ತಾದ ಪಾಪಕ್ಕೆ ಗುರಿಯಾಗುವನು.

೨೧. ಹಾಗೆ ವಿಷಮವಾಗಿ ವರ್ತಿಸುವವನು ಜ್ಯೇಷ್ಠಸ್ತ್ರೀಯನ್ನು ಸನ್ಮಾನದಲ್ಲಿ ಕನಿಷ್ಠಳಂತೆಯೂ ಕನಿಷ್ಠಸ್ತ್ರೀಯನ್ನು ಜ್ಯೇಷ್ಠಳಂತೆಯೂ ತೋರ್ಪಡಿಸುವನು. ಇದು ಪಾಪಕರವು. ಗುರುವಿಗೆ ಗುರುದಕ್ಷಿಣೆಯನ್ನು ಕೊಟ್ಟು ಸಮಿತ್ತಿನ ಹೋಮವಿಧಾನದಿಂದ ಸಮಾವರ್ತನವನ್ನು ಹೊಂದಿ ಒಬ್ಬಳು ಕನ್ಯೆಯನ್ನು ವಿವಾಹ ಮಾಡಿಕೊಳ್ಳಬೇಕು.

೨೨. ಮತ್ತು ಪಾಣಿಗ್ರಹಣವನ್ನು ಮಾಡಿಕೊಂಡಿರುವ ಸತಿಯೊಡನೆ ಎಲ್ಲ ನಿತ್ಯ-ನೈಮಿತ್ತಿಕ ಕರ್ಮಗಳನ್ನು ಆಚರಿಸಬೇಕು. ಹಾಗಿರದೆ ಬೇರೆಯೊಬ್ಬಳಲ್ಲಿ ಪ್ರೀತಿಸಂಗವನ್ನು ಹೊಂದುವುದರಿಂದ ಮಾನವನು ಪಾತಕಿಯಾಗುವನು.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೨೩. ಸರ್ವಪ್ರಾಣಿಗಳ ಮಾತನ್ನು ಅರಿತಿರುವ ಸ್ವರೋಚಿಯು ಅದೆಲ್ಲವನ್ನು ಕೇಳಿದನು. ಮತ್ತು ಜಯಶಾಲಿಯಾದ ಸ್ವರೋಚಿಯು ಮನದಲ್ಲಿ ನಾಚಿಕೆಗೊಂಡವನಾಗಿ ಇದೆಲ್ಲ ನಿಜವಾದುದು, ಸುಳ್ಳೇನೂ ಅಲ್ಲ—ಎಂದ ಧ್ಯಾನಿಸಿದನು.

ತತೋ ವರ್ಷಶತೇ ಯಾತೇ ರಮಮಾಣೋ ಮಹಾಗಿರೌ ।
ರಮಮಾಣಃ ಸಮಂ ತಾಭಿರ್ದದರ್ಶ ಪುರತೋ ಮೃಗಮ್ ॥೨೪॥

ಸುಸ್ನಿಗ್ಧಪೀನಾವಯವಂ ಮೃಗೀಯೂಥವಿಹಾರಿಣಮ್ ।
ವಾಸಿತಾಭಿಃ ಸ್ವರೂಪಾಭಿರ್ಮೃಗೀಭಿಃ ಪರಿವಾರಿತಮ್ ॥೨೫॥

ಆಕೃಷ್ಟಘ್ರಾಣಪುಟಕಾ ಜಿಘ್ರನ್ತೀಸ್ತಾಸ್ತತೋ ಮೃಗೀಃ ।
ಉವಾಚ ಸ ಮೃಗೋಽಲಂ ವೋ ಲಜ್ಜಾತ್ಯಾಗೇನ ಗಮ್ಯತಾಮ್ ॥೨೬॥

ನಾಹಂ ಸ್ವರೋಚಿಸ್ತಚ್ಛೀಲೋ ನ ಚೈವಾಹಂ ಸುಲೋಚನಾಃ ।
ನಿರ್ಲಜ್ಜಾ ಬಹವಃ ಸನ್ತಿ ತಾದೃಶಾಸ್ತತ್ರ ಗಚ್ಛತ ॥೨೭॥

---

೨೪. ತರುವಾಯ ನೂರಾರು ವರ್ಷಗಳು ಕಳೆಯುವವರೆಗೂ ಆ ಪ್ರೇಯಸಿಯರೊಂದಿಗೆ ಮಹಾಗಿರಿಯಲ್ಲಿ ರಮಿಸುತ್ತಿದ್ದನು. ಒಂದು ಸಮಯದಲ್ಲಿ ಅವರೊಡನೆ ರಮಿಸುತ್ತಿದ್ದ ಹಾಗೆಯೇ ಸ್ವರೋಚಿಯು ಮುಂದುಗಡೆಯಲ್ಲಿ ಒಂದು ಜಿಂಕೆಯನ್ನು ಕಂಡನು.

೨೫. ಆ ಜಿಂಕೆಯು ನಯವಾದ, ಮೃದುವಾದ ಮತ್ತು ದಪ್ಪವಾದ ದೇಹಕಟ್ಟಿನಿಂದ ಕೂಡಿರುವುದೂ, ಹೆಣ್ಣಾನೆಗಳಂತೆ ಮದಿಸಿದ ಹೆಣ್ಣುಜಿಂಕೆಗಳಿಂದ ಸುತ್ತಲ್ಪಟ್ಟಿರುವುದೂ ಮತ್ತು ಆ ಹೆಣ್ಣುಜಿಂಕೆಗಳ ಗುಂಪಿನಲ್ಲಿ ವಿಹಾರಸುಖವನ್ನು ಭುಂಜಿಸುತ್ತಿರುವುದೂ ಆಗಿತ್ತು.

೨೬. ತರುವಾಯ ಹೆಣ್ಣುಜಿಂಕೆಗಳು ಪ್ರೀತಿಯಿಂದ ಮೂಗಿನ ರಂಧ್ರಗಳನ್ನು ಸಂಕೋಚ ಮಾಡಿಕೊಂಡು ತನ್ನನ್ನು ಮೂಸುತ್ತ ಸಮೀಪಕ್ಕೆ ಬಂದಿರಲು ಆ ಗಂಡು ಜಿಂಕೆಯು ಹೀಗೆಂದಿತು. ಹೀಗೆ ನಾಚಿಕೆಕೆಟ್ಟು ನೀವು ನನ್ನ ಬಳಿಗೆ ಬರಬೇಡಿ, ದೂರ ಹೊರಟುಹೋಗಿ.

೨೭. ಎಲೈ ಸುಂದರ ನೇತ್ರಗಳಿಂದ ಕೂಡಿರುವ ಹರಿಣಿಯರೇ! ನಾನು ಸ್ವರೋಚಿಯಲ್ಲ. ಅಥವಾ ನಾನು ಸ್ವರೋಚಿಯ ಶೀಲದಿಂದ ಕೂಡಿದವನೂ ಅಲ್ಲ. ಅವನಂತೆ ನಾಚಿಕೆಯಿಲ್ಲದವರನೇಕರಿರುವರು. ನೀವು ಅಲ್ಲಿಗೆ ತೆರಳಿರಿ,

ಏಕಾ ತ್ವನೇಕಾನುಗತಾ ಯಥಾ ಹಾಸಾಸ್ಪದಂ ಜನೇ ।
ಅನೇಕಾಭಿಸ್ತಥೈವೈಕೋ ಭೋಗದೃಷ್ಟ್ಯಾ ನಿರೀಕ್ಷಿತಃ ॥೨೮॥

ತಸ್ಯ ಧರ್ಮಕ್ರಿಯಾಹಾನಿರಹನ್ಯಹನಿ ಜಾಯತೇ ।
ಸಕ್ತೋಽನ್ಯಭಾರ್ಯಯಾ ಚಾನ್ಯಕಾಮಾಸಕ್ತಃ ಸದೈವ ಸಃ ॥೨೯॥

ಯಸ್ತ್ವಾದೃಶೋಽನ್ಯಸ್ತಚ್ಛೀಲಃ ಪರಲೋಕಪರಾಙ್ಮುಖಃ ।
ತಂ ಕಾಮಯತ ಭದ್ರಂ ವೋ ನಾಹಂ ತುಲ್ಯಃ ಸ್ವರೋಚಿಷಾ ॥೩೦॥

ಇತಿ ಶ್ರೀಮಾರ್ಕಂಡೇಯ ಮಹಾಪುರಾಣೇ ಸ್ವಾರೋಚಿಷೇ ಮನ್ವಂತರೇ ದ್ವಿಷಷ್ಟಿತಮೋಽಧ್ಯಾಯಃ

---

೨೮. ಒಬ್ಬಳು ನಾರಿಯು ಅನೇಕಪುರುಷರಲ್ಲಿ ಬೆರೆತುಕೊಂಡಿದ್ದರೆ ಹೇಗೋ ಹಾಗೆಯೇ ಭೋಗದೃಷ್ಟಿಯಿಂದ ಅನೇಕ ಸ್ತ್ರೀಯರಲ್ಲಿ ಸಂಪರ್ಕವನ್ನು ಹೊಂದಿದ ಪುರುಷನು ಸಮಾಜದಲ್ಲಿ ಹಾಸ್ಯಕ್ಕೆ ಗುರಿಯಾಗುವನು.

೨೯. ಮತ್ತು ಬಹುಪತ್ನಿಯರನ್ನು ಹೊಂದಿದ ಪುರುಷನಿಗೆ ಪ್ರತಿದಿನ-ದಲ್ಲಿಯೂ ಧರ್ಮಾನುಷ್ಠಾನಕ್ಕೆ ಲೋಪವುಂಟಾಗುವುದು. ಅವನು ಒಬ್ಬಳಲ್ಲಿ ಸಂಗಮಾಡುತ್ತಿರುವನು. ಮತ್ತೊಬ್ಬ ಭಾರ್ಯೆಯ ವಿಷಯದಲ್ಲಿ ಯಾವಾಗಲೂ ಕಾಮವಿಕಾರಗಳನ್ನು ಹೊಂದುವನು.

೩೦. ಪರಲೋಕ ಸುಖದ ಆಶೆಯಿಲ್ಲದವನೂ, ಬಹುಪತ್ನೀಸಂಗದ ಶೀಲವುಳ್ಳವನೂ ಆದ ಅಂತಹ ಪುರುಷನೆಲ್ಲಿರುವನೋ ಅಂತಹವನನ್ನು ನೀವು ಪ್ರೀತಿಸಿರಿ, ಇಲ್ಲಿಂದ ತೆರಳಿ. ನಿಮಗೆ ಮಂಗಳವಾಗಲಿ. ನಾನು ಸ್ವರೋಚಿ-ಯಂತಹವನಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತೆರಡನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಿಷಷ್ಟಿತಮೋಽಧ್ಯಾಯಃ

(ಸ್ವರೋಚಿಷಃ ಪುತ್ರಲಾಭಃ)

ಮಾರ್ಕಣ್ಡೇಯ ಉವಾಚ :–

ಏವಂ ನಿರಸ್ಯಮಾನಾಸ್ತಾ ಹರಿಣೇನ ಮೃಗಾಙ್ಗನಾಃ ।
ಶ್ರುತ್ವಾ ಸ್ವರೋಚಿರಾತ್ಮಾನಂ ಮೇನೇ ಸ ಪತಿತಂ ಯಥಾ ॥೧॥

ತ್ಯಾಗೇ ಚಕಾರ ಚ ಮನಃ ಸ ತಾಸಾಂ ಮುನಿಸತ್ತಮ ।
ಚಕ್ರವಾಕೀಮೃಗಪ್ರೋಕ್ತೋ ಮೃಗಚರ್ಯಾಜುಗುಪ್ಸಿತಃ ॥೨॥

ಅರವತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಗಂಡುಜಿಂಕೆಯಿಂದ ತನ್ನನ್ನು ಪ್ರೀತಿಸುತ್ತ ಬಂದ ಹೆಣ್ಣುಜಿಂಕೆಗಳು ಈ ಮಾತುಗಳನ್ನು ಆಡಿ ನಿರಾಕರಿಸಲ್ಪಟ್ಟುವು. ಇದನ್ನು ಕೇಳಿದ ಸ್ವರೋಚಿಯು ತನ್ನನ್ನು ಪತಿತನಾದವನೆಂದು ತಿಳಿದುಕೊಂಡನು.

೨. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಹೆಣ್ಣು ಚಕ್ರವಾಕಪಕ್ಷಿ ಮತ್ತು ಹೆಣ್ಣುಜಿಂಕೆಗಳ ನುಡಿಯನ್ನು ಕೇಳಿ ಮೂಕಪ್ರಾಣಿಗಳ ಪ್ರೇಮಭಾವದಿಂದ ತಾನು ಜುಗುಪ್ಸೆಹೊಂದಿ ಆ ಪ್ರಿಯೆಯರನ್ನು ತ್ಯಜಿಸಲು ಸಂಕಲ್ಪಮಾಡಿದನು.

ಸಮೇತ್ಯ ತಾಭಿರ್ಭೂಯಶ್ಚ ವರ್ಧಮಾನಮನೋಭವಃ ।
ಅಕ್ಷಿಪ್ತನಿರ್ವೇದಕಥೋ ರೇಮೇ ವರ್ಷಶತಾನಿ ಷಟ್ ॥೩॥

ಕಿಂ ತು ಧರ್ಮಾವಿರೋಧೇನ ಕುರ್ವನ್ ಧರ್ಮಾಶ್ರಿತಾಃ ಕ್ರಿಯಾಃ ।
ಭುಙ್ಕ್ತೇ ಸ್ವರೋಚಿರ್ವಿಷಯಾನ್ ಸಹ ತಾಭಿರುದಾರಧೀಃ ॥೪॥

ತತಶ್ಚ ಜಜ್ಞಿರೇ ತಸ್ಯ ತ್ರಯಃ ಪುತ್ರಾಃ ಸ್ವರೋಚಿಷಃ ।
ವಿಜಯೋ ಮೇರುನನ್ದಶ್ಚ ಪ್ರಭಾವಶ್ಚ ಮಹಾಬಲಃ ॥೫॥

ಮನೋರಮಾ ಚ ವಿಜಯಂ ಪ್ರಾಸೂತೇನ್ದೀವರಾತ್ಮಜಾ ।
ವಿಭಾವರೀ ಮೇರುನನ್ದಂ ಪ್ರಭಾವಂ ಚ ಕಲಾವತೀ ॥೬॥

ಪದ್ಮಿನೀ ನಾಮ ಯಾ ವಿದ್ಯಾ ಸರ್ವಭೋಗೋಪಪಾದಿಕಾ ।
ಸ ತೇಷಾಂ ತತ್ಪ್ರಭಾವೇಣ ಪಿತಾ ಚಕ್ರೇ ಪುರತ್ರಯಮ್ ॥೭॥

---

೩. ಆದರೆ ಮತ್ತೆ ಆ ಪ್ರೇಯಸಿರೊಡಗೂಡಿ ಅತಿಶಯವಾಗಿ ವೃದ್ಧಿ-ಹೊಂದಿದ ಕಾಮಸುಖದ ಕುತೂಹಲವುಳ್ಳವನಾಗಿ ವೈರಾಗ್ಯದ ವಿಷಯವನ್ನು ದೂರಮಾಡಿ ಆರುನೂರು ವರ್ಷಗಳವರೆಗೆ ರತಿಸುಖವನ್ನು ಅನುಭವಿಸಿದನು.

೪. ಆದರೆ ಉದಾರವಾದ ಮಾನಸವುಳ್ಳ ಸ್ವರೋಚಿಯು ಎಲ್ಲ ಧರ್ಮ-ಕರ್ಮಗಳನ್ನು ಆಚರಿಸುತ್ತ ಧರ್ಮಕ್ಕೆ ಸ್ವಲ್ಪಮಾತ್ರವೂ ವಿರೋಧವಿಲ್ಲದಹಾಗೆ ಆ ಪ್ರಿಯತಮೆಯರೊಡನೆ ವಿಷಯಸುಖವನ್ನು ಭುಂಜಿಸುತ್ತಿದ್ದನು.

೫. ಕೆಲವು ಕಾಲದ ಅನಂತರದಲ್ಲಿ ಸ್ವರೋಚಿಗೆ ಮಹಾಬಲಿಷ್ಠರಾದ ವಿಜಯ, ಮೇರುನಂದ ಮತ್ತು ಪ್ರಭಾವ ಎಂಬ ನಾಮಾಂಕಿತರಾದ ಮೂರು ಮಂದಿ ಪುತ್ರರು ಆ ಭಾರ್ಯೆಯರಲ್ಲಿ ಜನಿಸಿದರು.

೬. ಅವರಲ್ಲಿ ಮನೋರಮಾ ಎಂಬಾಕೆಯು ವಿಜಯ ಕುಮಾರನನ್ನೂ ಇಂದೀವರಗಂಧರ್ವಪುತ್ರಿಯಾದ ವಿಭಾವರಿಯು ಮೇರುನಂದನನನ್ನೂ ಮತ್ತು ಕಲಾವತಿಯು ಪ್ರಭಾವಕುಮಾರನನ್ನೂ ಪ್ರಸವಿಸಿದರು.

೭. ಆಗ ಸಮಸ್ತ ಭೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವುಳ್ಳ ಪದ್ಮಿನಿ ಎಂಬ ವಿದ್ಯಾಪ್ರಭಾವದಿಂದ ತಂದೆಯಾದ ಸ್ವರೋಚಿಯು ಮೂರು ಮಂದಿ ಪುತ್ರರಿಗೋಸ್ಕರ ಮೂರು ನಗರಗಳನ್ನು ನಿರ್ಮಾಣಮಾಡಿದನು.

ಪ್ರಾಚ್ಯಾಂ ತು ವಿಜಯಂ ನಾಮ ಕಾಮರೂಪೇ ನಗೋತ್ತಮೇ ।
ವಿಜಯಾಯ ಸುತಾಯಾದೌ ಸ ದದೌ ಪುರಮುತ್ತಮಮ್ ॥೮॥

ಉದೀಚ್ಯಾಂ ಮೇರುನನ್ದಸ್ಯ ಪುರೀಂ ನನ್ದವತೀಮಿತಿ ।
ಖ್ಯಾತಾಂ ಚಕಾರ ಪ್ರೋತ್ತುಙ್ಗವಪ್ರಪ್ರಾಕಾರಮಾಲಿನೀಮ್ ॥೯॥

ಕಲಾವತೀಸುತಸ್ಯಾಪಿ ಪ್ರಭಾವಸ್ಯ ನಿವೇಶಿತಮ್ ।
ಪುರಂ ತಾಲಮಿತಿ ಖ್ಯಾತಂ ದಕ್ಷಿಣಾಪಥಮಾಶ್ರಿತಮ್ ॥೧೦॥

ಏವಂ ನಿವೇಶ್ಯ ಪುತ್ರಾನ್ ಸ ಪುರೇಷು ಪುರುಷರ್ಷಭಃ ।
ರೇಮೇ ತಾಭಿಃ ಸಮಂ ವಿಪ್ರ ಮನೋಜ್ಞಾಸ್ವದ್ರಿಭೂಮಿಷು ॥೧೧॥

---

೮. ಸ್ವರೋಚಿಯು ಪೂರ್ವದಿಗ್ಭಾಗದಲ್ಲಿ ಕಾಮರೂಪವೆಂಬ ಉತ್ತಮ-ಗಿರಿಗೆ ಸೇರಿದಂತೆ ಇರುವ ವಿಜಯ ಎಂದು ಖ್ಯಾತಿಹೊಂದಿರುವ ಉತ್ತಮನಗರ-ವನ್ನು ಮೊದಲು ವಿಜಯಕುಮಾರನಿಗೆ ಕೊಟ್ಟನು.

೯. ಉತ್ತರ ದಿಕ್ಕಿನಲ್ಲಿ ಎತ್ತರವಾದ ಕೋಟೆ-ಕೊತ್ತಲುಗಳಿಂದ ರಾಜಿ-ಸುವ, ನಂದವತಿ ಎಂಬ ನಾಮಾಂಕನದಿಂದ ಖ್ಯಾತಿಗಳಿಸಿದ ಉತ್ತಮನಗರವನ್ನು ಮೇರುನಂದ ಎಂಬ ಕುಮಾರನಿಗೆ ಕೊಟ್ಟನು.

೧೦. ಹಾಗು ದಕ್ಷಿಣದಿಕ್ಕಿನ ಪ್ರದೇಶದಲ್ಲಿರುವ ತಾಲಪುರವೆಂದು ಪ್ರಸಿದ್ಧಿಹೊಂದಿರುವ ನಗರವನ್ನು ಕಲಾವತಿಯ ಪುತ್ರನಾದ ಪ್ರಭಾವ ಎಂಬ ಕುಮಾರನಿಗೆ ಕೊಟ್ಟನು.

೧೧. ಎಲೈ ವಿಪ್ರೋತ್ತಮನಾದ ಕ್ರೌಷ್ಟುಕಿಯೆ ! ಈ ರೀತಿಯಾಗಿ ಮೂರುನಗರಗಳಲ್ಲಿ ಮೂರು ಮಂದಿ ಪುತ್ರರನ್ನು ರಾಜಪೀಠದಲ್ಲಿ ಇರಿಸಿ ಮಾನವೋತ್ತಮನಾದ ಸ್ವರೋಚಿಯು, ಪತ್ನಿಯರೊಡನೆ ರಮಣೀಯವಾದ ಪರ್ವತ ಭೂಮಿಗಳಲ್ಲಿ ವಿಹರಿಸಿದನು.

ಏಕದಾ ತು ಗತೋಽರಣ್ಯೇ ವಿಹರನ್ ಸ ಧನುರ್ಧರಃ ।
ಚಕರ್ಷ ಧನುರಾಲೋಕ್ಯ ವರಾಹಮತಿದೂರಗಮ್ ॥೧೨॥

ಅಥಾಹ ಕಾಚಿದಭ್ಯೇತ್ಯ ತಂ ತದಾ ಹರಿಣಾಙ್ಗನಾ ।
ಮಯ್ಯೇವ ಪಾತ್ಯತಾಂ ಬಾಣಃ ಪ್ರಸೀದೇತಿ ಪುನಃ ಪುನಃ ॥೧೩॥

ಕಿಮನೇನ ಹತೇನಾದ್ಯ ಮಾಮಾಶು ವಿನಿಪಾತಯ ।
ತ್ವಯಾ ನಿಪಾತಿತೋ ಬಾಣೋ ದುಃಖಾನ್ಮಾಂ ಮೋಚಯಿಷ್ಯತಿ॥೧೪॥

ಸ್ವರೋಚಿರುವಾಚ :—

ನ ತೇ ಶರೀರಂ ಸರುಜಮಸ್ಮಾಭಿರುಪಲಕ್ಷ್ಯತೇ ।
ಕಿಂ ನು ತತ್ಕಾರಣಂ ಯೇನ ತ್ವಂ ಪ್ರಾಣಾನ್ ಹಾತುಮಿಚ್ಛಸಿ ॥೧೫॥

---

೧೨. ಒಂದು ವೇಳೆಯಲ್ಲಿ ಸ್ವರೋಚಿಯು ಅರಣ್ಯಕ್ಕೆ ಹೋಗಿ ಧನುರ್ಧಾರಿಯಾಗಿ ವಿಹರಿಸುತ್ತ ಬಹಳ ದೂರದಲ್ಲಿದ್ದ ಒಂದು ಕಾಡುಹಂದಿಯನ್ನು ನೋಡಿ ಬಿಲ್ಲನ್ನು ಹೆದೆಯೇರಿಸಿದನು.

೧೩. ಅನಂತರದಲ್ಲಿ ಒಂದು ಹೆಣ್ಣುಜಿಂಕೆಯು ಸ್ವರೋಚಿಯ ಬಳಿಗೆ ಬಂದು " ನನ್ನಲ್ಲಿಯೇ ಬಾಣವನ್ನು ಬಿಡು ; ನನ್ನಲ್ಲಿ ಇಷ್ಟುಮಾತ್ರ ಅನುಗ್ರಹವನ್ನು ತೋರು " ಎಂದು ಮತ್ತೆ ಮತ್ತೆ ಕೇಳಿಕೊಂಡಿತು.

೧೪. ಮತ್ತು ಈ ವರಾಹವನ್ನು ಕೊಂದು ನಿನಗಾದರೋ ಲಭಿಸುವುದೇನಿದೆ ? ಇಂದು ನನ್ನನ್ನು ಬೇಗ ಕೆಡವು. ನನ್ನಲ್ಲಿ ನೀನು ಪ್ರಯೋಗಿಸಿದ ಬಾಣವು ನನ್ನನ್ನು ದುಃಖದಿಂದ ಬಿಡುಗಡೆ ಮಾಡುವುದು ಎಂದು ಹೇಳಿತು.

ಸ್ವರೋಚಿಯು ಹೀಗೆಂದನು :—

೧೫. ನಿನ್ನ ದೇಹವು ರೋಗ-ಪೀಡೆಗಳಿಂದ ಕೂಡಿದ್ದಾಗಿ ನಮಗೆ ಕಾಣಿಸುವುದಿಲ್ಲ. ನೀನಾದರೋ ಪ್ರಾಣಗಳನ್ನು ತ್ಯಜಿಸಲು ಇಷ್ಟಪಡುತ್ತಿದ್ದೀಯೆ. ಇದಕ್ಕೆ ಕಾರಣವೇನು ?

ಮೃಗ್ಯುವಾಚ :—

ಅನ್ಯಾಸ್ವಾಸಕ್ತಹೃದಯೋ ಯಸ್ಮಿಂಶ್ಚೇತಃ ಕೃತಾಸ್ಪದಮ್ ।
ಮಮ ತೇನ ವಿನಾ ಮೃತ್ಯುರೌಷಧಂ ಕಿಮಿಹಾಪರಮ್ ॥೧೬॥

ಸ್ವರೋಚಿರುವಾಚ :—

ಕಸ್ತ್ವಾಂ ನಾಭಿಲಷೇದ್ಭೀರು ಸಾನುರಾಗಾಸಿ ಕುತ್ರ ವಾ ।
ಯದಪ್ರಾಪ್ತ್ಯಾ ನಿಜಾನ್ ಪ್ರಾಣಾನ್ ಪರಿತ್ಯಕ್ತುಂ ವ್ಯವಸ್ಯಸಿ ॥೧೭॥

ಮೃಗ್ಯುವಾಚ :—

ತ್ವಾಮೇವೇಚ್ಛಾಮಿ ಭದ್ರಂ ತೇ ತ್ವಯಾ ಮೇಽಪಹೃತಂ ಮನಃ ।
ವೃಣೋಮ್ಯುಹಮತೋ ಮೃತ್ಯುಂ ಮಯಿ ಬಾಣೋ ನಿಪಾತ್ಯತಾಮ್
॥೧೮॥

ಹೆಣ್ಣು ಜಿಂಕೆಯು ಹೇಳಿತು :—

೧೬. ಅನೇಕ ಪ್ರಿಯೆಯರಲ್ಲಿ ಪ್ರೀತಿಯನ್ನಿಟ್ಟಿರುವ ಹೃದಯವುಳ್ಳ ನಾಥನಲ್ಲಿ ನನ್ನ ಮನಸ್ಸು ಅಭಿರುಚಿಯನ್ನು ಹೊಂದಿರುವುದು. ಇಂತಹ ನನಗೆ ಮರಣವಲ್ಲದೆ ಇನ್ನೇನು ಔಷಧವಿದೆ.

ಸ್ವರೋಚಿಯು ಹೇಳಿದನು :—

೧೭. ಭೀರುವಾದ ಮೃಗಿಯೆ ! ನಿನ್ನನ್ನು ಯಾರು ಪ್ರೀತಿಸದಿರುವನು ? ನೀನು ಯಾರಲ್ಲಿ ಅನುರಾಗವನ್ನು ಹೊಂದಿದ್ದೀಯೆ ? ನಿನ್ನ ಅನುರಾಗಕ್ಕೆ ವಿಷಯ-ನಾದ ಯಾವ ಪ್ರಿಯನ ಸಂಗದೊರೆಯದೆ ನೀನು ಈ ರೀತಿಯಾಗಿ ಪ್ರಾಣತ್ಯಾಗದ ಉದ್ಯಮವನ್ನು ಕೈಗೊಳ್ಳುತ್ತಲಿದ್ದೀಯೆ ?

ಮೃಗಿಯು ಹೇಳಿತು :—

೧೮. ನಾನು ನಿನ್ನನ್ನು ಪ್ರೀತಿಸುವೆನು. ನಿನಗೆ ಮಂಗಳವಾಗಲಿ. ನಿನ್ನಿಂದ ನನ್ನ ಮನಸ್ಸು ಅಪಹರಿಸಲ್ಪಟ್ಟಿರುವುದು. ನಿನ್ನ ಸಂಗವನ್ನು ಬಿಟ್ಟು ನಾನು ಬದುಕಲಾರೆನು. ಆದ್ದರಿಂದ ಮರಣವನ್ನು ಬಯಸುವೆನು. ನನ್ನಲ್ಲಿ ಈ ಬಾಣವನ್ನು ಬಿಡು.

ಸ್ವರೋಚಿರುವಾಚ :—

ತ್ವಂ ಮೃಗೀ ಚಞ್ಚಲಾಪಾಙ್ಗೀ ನರರೂಪಧರಾ ವಯಮ್ ।
ಕಥಂ ತ್ವಯಾ ಸಮಂ ಯೋಗೋ ಮದ್ವಿಧಸ್ಯ ಭವಿಷ್ಯತಿ ॥೧೯॥

ಮೃಗ್ಯುವಾಚ :—

ಯದಿ ಸಾಪೇಕ್ಷಿತಂ ಚಿತ್ತಂ ಮಯಿ ತೇ ಮಾಂ ಪರಿಷ್ವಜ ।
ಯದಿ ವಾ ಸಾಧು ಚಿತ್ತಂ ತೇ ಕರಿಷ್ಯಾಮಿ ಯಥೇಪ್ಸಿತಮ್ ॥೨೦॥

ಏತಾವತಾಹಂ ಭವತಾ ಭವಿಷ್ಯಾಮ್ಯತಿಮಾನಿತಾ ॥೨೧॥

ಮಾರ್ಕಣ್ಡೇಯ ಉವಾಚ :—

ಆಲಿಲಿಙ್ಗ ತತಸ್ತಾಂ ಸ ಸ್ವರೋಚಿರ್ಹರಿಣಾಙ್ಗನಾಮ್ ॥೨೨॥

ಸ್ವರೋಚಿಯು ಈ ರೀತಿಯಾಗಿ ಹೇಳಿದನು :—

೧೯. ನೀನು ಚಂಚಲವಾದ ಕಡೆಗಣ್ಣುಗಳಿಂದ ಶೋಭಿಸುವ ಜಿಂಕೆಯಾಗಿದ್ದೀಯೆ. ನಾವು ಮಾನವರೂಪದಿಂದ ಜನಿಸಿರುವವರು. ನನ್ನಂತಹ ಮಾನವರಿಗೆ ಮೃಗಾಂಗನೆಯಾದ ನಿನ್ನ ಸಂಗಡ ಸಂಗವು ಹೇಗೆ ಒಪ್ಪುವುದು?

ಮೃಗಿಯು ಹೀಗೆ ಹೇಳಿತು :—

೨೦. ನಿನ್ನ ಚಿತ್ತವು ನನ್ನಲ್ಲಿ ನನ್ನ ಪ್ರಾರ್ಥನೆಯಂತೆ ಆಶಾಂಕುರವನ್ನು ಹೊಂದಿದ್ದರೆ ನನ್ನನ್ನು ಪ್ರೇಮದಿಂದ ಆಲಿಂಗನಮಾಡು. ಹಾಗಿಲ್ಲದೆ ನನ್ನಲ್ಲಿ ಅಸಾಧುತನದ ಕ್ರೂರಚಿತ್ತವು ನಿನಗಿದ್ದರೆ ನನ್ನ ಇಷ್ಟಂತೆ ಪ್ರಾಣತ್ಯಾಗವನ್ನು ಮಾಡುವೆನು.

೨೧. ನೀನು ಪ್ರೇಮೋದ್ರೇಕದಿಂದ ಆಲಿಂಗನ ಮಾತ್ರ ಮಾಡುವುದರಿಂದ ನಾನು ಕೃತಾರ್ಥಳಾಗುವೆನು. ಹಾಗು ನಿನ್ನಿಂದ ಮೆಚ್ಚಿನ ಪ್ರೇಯಸಿಯಂತೆ ಸಂಮಾನಿಸಲ್ಪಟ್ಟಂತೆ ಆಗುವೆನು.

ಮಾರ್ಕಂಡೇಯ ಮುನಿಯು ಹೀಗೆಂದನು :—

೨೨. ಹೀಗೆಂದು ಹೆಣ್ಣು ಜಿಂಕೆಯು ಪ್ರಾಣತ್ಯಾಗ ಶಪಥದ ಮೂಲಕವಾಗಿ ಸ್ವರೋಚಿಯನ್ನು ಒತ್ತಾಯಮಾಡಲು ಸ್ವರೋಚಿಯು ಕನಿಕರವುಳ್ಳವನಾಗಿ ಆ ಹರಿಣಾಂಗನೆಯನ್ನು ಆಲಿಂಗಿಸಿದನು.

ತೇನ ಚಾಲಿಙ್ಗಿತಾ ಸದ್ಯಃ ಸಾಭೂದ್ದಿವ್ಯವಪುರ್ಧರಾ ।
ತತಃ ಸ ವಿಸ್ಮಯಾವಿಷ್ಟಃ ಕಾ ತ್ವಮಿತ್ಯಭ್ಯಭಾಷತ ॥೨೩॥

ಸಾ ಚಾಸ್ಮೈ ಕಥಯಾಮಾಸ ಪ್ರೇಮಲಜ್ಜಾಜಡಾಕ್ಷರಮ್ ।
ಅಹಮಭ್ಯರ್ಥಿತಾ ದೇವೈಃ ಕಾನನಸ್ಯಾಸ್ಯ ದೇವತಾ ॥೨೪॥

ಉತ್ಪಾದನೀಯೋ ಹಿ ಮನುಸ್ತ್ವಯಾ ಮಯಿ ಮಹಾಮತೇ ॥೨೫॥

ಪ್ರೀತಿಮತ್ಯಾಂ ಮಯಿ ಸುತಂ ಭೂಲೋಕಪರಿಪಾಲಕಮ್ ।
ತಮುತ್ಪಾದಯ ದೇವಾನಾಂ ತ್ವಾಮಹಂ ವಚನಾದ್ವದೇ ॥೨೬॥

---

೨೩. ಸ್ವರೋಚಿಯಿಂದ ಅಪ್ಪಿಕೊಳ್ಳಲ್ಪಟ್ಟ ಹರಿಣಾಂಗನೆಯು ಕೂಡಲೆ ದಿವ್ಯವಾದ ಮೂರ್ತಿಯನ್ನು ಧರಿಸಿದ ಅಂಗನೆಯಾದಳು. ಆಗ ವಿಸ್ಮಯದಿಂದ ಆವೇಶವುಳ್ಳ ಸ್ವರೋಚಿಯು ನೀನು " ಯಾರು " ಎಂದು ಪ್ರಶ್ನಿಸಿದನು.

೨೪. ಆ ಅಂಗನೆಯು ಸ್ವರೋಚಿಯಲ್ಲಿ ಪ್ರೇಮಲಜ್ಜಾಭಾವಗಳಿಂದ ಜಡವಾದ ಅಕ್ಷರಗಳಿಂದ ಕೂಡಿದ ಮಾತುಗಳನ್ನು ಆಡಿದಳು. ನಾನು ಈ ವನದಲ್ಲಿ ಅಭಿಮಾನಿನಿಯಾದ ವನದೇವತೆಯು. ನಾನು ದೇವತೆಗಳಿಂದ ಈ ರೀತಿಯಾಗಿ ಪ್ರಾರ್ಥಿಸಲ್ಪಟ್ಟೆನು.

೨೫. ನೀನು ಸ್ವರೋಚಿಯ ಸಂಗದಿಂದ ನಮ್ಮನ್ನು ರಕ್ಷಿಸುವ ಕುಮಾರನನ್ನು ಪ್ರಸವಿಸು. ಎಲೈ, ಮಹಾಪ್ರಾಜ್ಞನೆ ! ಹೀಗೆಂದು ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ನನ್ನಲ್ಲಿ ನೀನು ಉದಾರಭಾವನೆಯಿಂದ ಮನುಪದವಿಯನ್ನು ಅನುಭವಿಸುವಂತಹ ಪುತ್ರನನ್ನು ಸೃಜಿಸು.

೨೬. ನಿನ್ನಲ್ಲಿ ಅಧಿಕವಾದ ಪ್ರೀತಿಯಿಂದ ಕೂಡಿದ ನನ್ನಲ್ಲಿ ದೇವತೆಗಳಿಗೆ ರಕ್ಷಕನಾಗುವ ಮತ್ತು ಭೂಲೋಕವನ್ನು ಪರಿಪಾಲಿಸುವ ಪುತ್ರನನ್ನು ಉತ್ಪಾದನ ಮಾಡು. ದೇವತೆಗಳ ವಚನದಂತೆ ನಾನು ನಿನ್ನನ್ನು ಪ್ರಾರ್ಥಿಸಿಕೊಳ್ಳುವೆನು.

ಮಾರ್ಕಣ್ಡೇಯ ಉವಾಚ :—

ತತಃ ಸ ತಸ್ಯಾಂ ತನಯಂ ಸರ್ವಲಕ್ಷಣಲಕ್ಷಿತಮ್ ।
ತೇಜಸ್ವಿನಮಿವಾತ್ಮಾನಂ ಜನಯಾಮಾಸ ತತ್ಕ್ಷಣಾತ್ ॥೨೭॥

ಜಾತಮಾತ್ರಸ್ಯ ತಸ್ಯಾಥ ದೇವವಾದ್ಯಾನಿ ಸಸ್ವನುಃ ।
ಜಗುರ್ಗನ್ಧರ್ವಪತಯೋ ನನೃತುಶ್ಚಾಪ್ಸರೋಗಣಾಃ ॥೨೮॥

ಸಿಷಿಚುಃ ಶೀಕರೈರ್ಮೇಘಾ ಋಷಯಶ್ಚ ತಪೋಧನಾಃ ।
ದೇವಾಶ್ಚ ಪುಷ್ಪವರ್ಷಂ ಚ ಮುಮುಚುಶ್ಚ ಸಮನ್ತತಃ ॥೨೯॥

ತಸ್ಯ ತೇಜಃ ಸಮಾಲೋಕ್ಯ ನಾಮ ಚಕ್ರೇ ಪಿತಾ ಸ್ವಯಮ್ ।
ದ್ಯುತಿಮಾನಿತಿ ಯೇನಾಸ್ಯ ತೇಜಸಾ ಭಾಸಿತಾ ದಿಶಃ ॥೩೦॥

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೨೭. ತರುವಾಯ ಸ್ವರೋಚಿಯು ಆ ಅಂಗನೆಯಲ್ಲಿ ಆ ಕ್ಷಣದಲ್ಲಿಯೆ ಸಮಸ್ತ ಸಾಧುಲಕ್ಷಣಗಳಿಂದ ಕೂಡಿದವನೂ ಮತ್ತು ತನ್ನಂತೆ ಅತಿ ತೇಜಸ್ವಿಯೂ ಆದ ಕುಮಾರನನ್ನು ಹೊಂದಿದನು.

೨೮. ಹೀಗೆ ಸ್ವರೋಚಿಯ ಕುಮಾರನು ಜನಿಸಿದ ಕ್ಷಣದಲ್ಲಿ ದೇವ-ಲೋಕದ ವಾದ್ಯಗಳು ಧ್ವನಿಗೈದುವು. ಗಂಧರ್ವರಾಜರು ಗಾನಮಾಡಿದರು. ಹಾಗು ಅಪ್ಸರಸ್ತ್ರೀಯರು ಗುಂಪುಕೂಡಿ ನರ್ತನಮಾಡಿದರು.

೨೯. ಅದೇ ಸಮಯದಲ್ಲಿ ಮೇಘಗಳು ಜಲಬಿಂದುಗಳಿಂದ ನೆಲವನ್ನು ತೋಯಿಸಿದುವು. ಹಾಗು ತಪವೇ ಧನದಂತಿರುವ ಮಹಾತ್ಮರಾದ ಮುನಿಗಳು, ದೇವತೆಗಳು ಕುಮಾರನ ಉತ್ಪತ್ತಿಯಾದ ಸ್ಥಳದಲ್ಲಿ ಸುತ್ತಲೂ ಪುಷ್ಪವೃಷ್ಟಿ-ಯನ್ನು ಕರೆದರು.

೩೦. ಆ ಕುಮಾರನ ತೇಜಸ್ಸಿನಿಂದ ಸಮಸ್ತ ದಿಕ್ಕುಗಳು ಬೆಳಗಲ್ಪ-ಟ್ಟವು. ಅಂತಹ ತನ್ನ ಪುತ್ರನ ತೇಜಸ್ಸನ್ನು ನೋಡಿ ತಂದೆಯಾದ ಸ್ವರೋಚಿಯು ಮಗನಿಗೆ “ ದ್ಯುತಿಮಾನ್ ” ಎಂಬ ಅರ್ಥಗರ್ಭಿತವಾದ ಹೆಸರನ್ನು ಇಟ್ಟನು.

ಸ ಬಾಲೋ ದ್ಯುತಿಮಾನ್ನಾಮ ಮಹಾಬಲಪರಾಕ್ರಮಃ ।
ಸ್ವರೋಚಿಷಃ ಸುತೋ ಯಸ್ಮಾತ್ತಸ್ಮಾತ್ಸ್ವಾರೋಚಿಷೋಽಭವತ್ ॥೩೦॥

ಸ ಚಾಪಿ ವಿಚರನ್ರಮ್ಯೇ ಕದಾಚಿದ್ಗಿರಿನಿರ್ಝರೇ ।
ಸ್ವರೋಚಿರ್ದದೃಶೇ ಹಂಸಂ ನಿಜಪತ್ನೀಸಮನ್ವಿತಮ್ ॥೩೨॥

ಉವಾಚ ಸ ತದಾ ಹಂಸೀಂ ಸಾಭಿಲಾಷಾಂ ಪುನಃ ಪುನಃ ।
ಉಪಸಂಹ್ರಿಯತಾಮಾತ್ಮಾ ಚಿರಂ ತೇ ಕ್ರೀಡಿತಂ ಮಯಾ ॥೩೩॥

ಕಿಂ ಸರ್ವಕಾಲಂ ಭೋಗೈಸ್ತೇ ಆಸನ್ನಂ ಚರಮಂ ವಯಃ ।
ಪರಿತ್ಯಾಗಸ್ಯ ಕಾಲೋ ಮೇ ತವ ಚಾಪಿ ಜಲೇಚರಿ ॥೩೪॥

---

೩೧. ಮಹತ್ತಾದ ಬಲ-ಪರಾಕ್ರಮಗಳಿಂದ ಕೂಡಿದವನೂ ಮತ್ತು ದ್ಯುತಿಮಾನ್ ಎಂಬ ನಾಮಾಂಕಿತನೂ ಆದ ಆ ಬಾಲಕನು ಸ್ವರೋಚಿಯ ಪುತ್ರನಾಗಿ ಜನಿಸಿದುದರಿಂದ ಸ್ವಾರೋಚಿಷ ಎಂಬ ಖ್ಯಾತಿಯನ್ನು ಹೊಂದಿದನು.

೩೨. ಮುಂದೆ ಒಂದು ಸಮಯದಲ್ಲಿ ಸ್ವರೋಚಿಯು ರಮ್ಯವಾದ ಗಿರಿ-ಜಲಪ್ರಪಾತಗಳ ಪ್ರದೇಶದಲ್ಲಿ ವಿಹರಿಸುತ್ತ ತನ್ನ ಪ್ರಿಯೆಯಾದ ಹಂಸಿಯಿಂದ ಕೂಡಿದ ಒಂದು ಹಂಸವನ್ನು ಕಂಡನು.

೩೩. ಆಗ ಆ ಹಂಸವು ಮತ್ತೆ ಮತ್ತೆ ರತಿಕ್ರೀಡಾ ಭೋಗಗಳಲ್ಲಿ ಪ್ರೀತಿ-ಯಿಂದ ಅಭಿಲಾಷೆ ಪಡುತ್ತಿದ್ದ ಹಂಸಿಯನ್ನು ಕುರಿತು ಹೇಳಿತು. ನೀನು ಮನದಲ್ಲಿ ಹುಟ್ಟಿದ ಕಾಮೋಲ್ಲಾಸವನ್ನು ಅಡಗಿಸಿಕೋ. ನಾನು ನಿನ್ನೊಡನೆ ಚಿರಕಾಲ ರಮಿಸಿರುವೆನು.

೩೪. ನಿನಗೆ ಇನ್ನು ಎಲ್ಲ ಸಮಯಗಳಲ್ಲಿ ಭೋಗವನ್ನು ಭುಂಜಿಸುವ ಚಪಲವೇಕೆ? ಈಗ ಕಡೆಯ ವಯಸ್ಸು ಸಮೀಪಿಸಿಲ್ಲವೆ? ಎಲೈ, ಹಂಸಿಯೇ! ಈಗ ನನಗೆ ನಿನ್ನನ್ನು ತ್ಯಜಿಸುವ ಕಾಲವು ಸಮೀಪಿಸಿದೆ. ಹಾಗೆಯೇ ನಿನಗೂ ನನ್ನನ್ನು ತ್ಯಜಿಸುವ ಕಾಲವಿದಾಗಿದೆ.

ಹಂಸ್ಯುವಾಚ :—

ಅಕಾಲಃ ಕೋ ಹಿ ಭೋಗಾನಾಂ ಸರ್ವಂ ಭೋಗಾತ್ಮಕಂ ಜಗತ್ ।
ಯಜ್ಞಾಃ ಕ್ರಿಯನ್ತೇ ಭೋಗಾರ್ಥಂ ಬ್ರಾಹ್ಮಣೈಃ ಸಂಯತಾತ್ಮಭಿಃ ॥೩೫॥

ದೃಷ್ಟಾದೃಷ್ಟಾಂಸ್ತಥಾ ಭೋಗಾನ್ವಾಞ್ಛಮಾನಾ ವಿವೇಕಿನಃ ।
ದಾನಾನಿ ಚ ಪ್ರಯಚ್ಛನ್ತಿ ಪೂರ್ತಾನ್ಧರ್ಮಾಂಶ್ಚ ಕುರ್ವತೇ ॥೩೬॥

ಸ ತ್ವಂ ನೇಚ್ಛಸಿ ಕಿಂ ಭೋಗಾನ್ ಭೋಗಶ್ಚೇಷ್ಟಫಲಂ ನೃಣಾಮ್ ।
ವಿವೇಕಿನಾಂ ತಿರಶ್ಚಾಂ ಚ ಕಿಂ ಪುನಃ ಸಂಯತಾತ್ಮನಾಮ್ ॥೩೭॥

ಹಂಸ ಉವಾಚ :—

ಭೋಗೇಷ್ವಾಸಕ್ತಚಿತ್ತಾನಾಂ ಪರಮಾರ್ಥಾನ್ವಿತಾ ಮತಿಃ ।
ಭವಿಷ್ಯತಿ ಕದಾ ಸಙ್ಗಮುಪೇತಾನಾಂ ಚ ಬನ್ಧುಷು ॥೩೮॥

ಹಂಸಾಂಗನೆಯು ಹೀಗೆಂದಿತು :—

೩೫. ಭೋಗಗಳಿಗೆ ಕಾಲ-ಅಕಾಲಗಳ ವಿಭಾಗವೆಲ್ಲಿದೆ? ಜಗತ್ತೆಲ್ಲವೂ ಭೋಗಾಪೇಕ್ಷಿಯಾಗಿಯೇ ಇರುವುದು. ಜಿತೇಂದ್ರಿಯರಾದ ಬ್ರಾಹ್ಮಣರು ಪರಲೋಕದ ಉತ್ತಮ ಭೋಗವನ್ನು ಬಯಸಿ ಅದಕ್ಕಾಗಿ ಯಜ್ಞಗಳನ್ನು ಆಚರಿಸುವರು.

೩೬. ಮತ್ತು ಅನೇಕಮಂದಿ ವಿವೇಕಿಗಳು ದೃಷ್ಟ-ಅದೃಷ್ಟವೆಂಬ ವಿವಿಧ ಭೋಗಗಳನ್ನು ಆಶಿಸುತ್ತ ನಾನಾವಿಧವಾದ ದಾನಗಳನ್ನು ಕೊಡುವರು. ಮತ್ತು ಪವಿತ್ರವಾದ ಧರ್ಮಕಾರ್ಯಗಳನ್ನು ನಡೆಯಿಸುವರು.

೩೭. ನೀನು ಏಕೆ ಸ್ಪೃಹಣೀಯ ಭೋಗಗಳನ್ನು ಆಶಿಸುವುದಿಲ್ಲ? ವಿವೇಕಿಗಳಾದ ಮಾನವರಿಗೆ ಕೂಡ ಭೋಗವು ಬಲು ಇಷ್ಟವಾದ ಫಲವಾಗಿದೆ. ಹೀಗಿರಲು ಅಜ್ಞಾನದಿಂದ ಬದ್ಧವಾದ ಮೂಕಪ್ರಾಣಿಗಳಿಗೆ ಭೋಗಗಳ ಆಶೆಯು ಇರಲಾರದೆ?

ಹಂಸವು ಹೀಗೆ ಹೇಳಿತು :—

೩೮. ಸಂತತವಾಗಿ ಭೋಗಗಳಲ್ಲಿ ಅಂಟಿಹೋದ ಚಿತ್ತವುಳ್ಳವರೂ ಮತ್ತು ಬಂಧುಗಳಲ್ಲಿ ಅಭಿಮಾನವನ್ನು ಇಟ್ಟವರೂ ಆದ ಜಂತುಗಳಿಗೆ ಪರಮಾರ್ಥವನ್ನು ಗ್ರಹಿಸುವ ತತ್ತ್ವಜ್ಞಾನವು ಯಾವಾಗ ಉದಯಿಸುವುದು?

ಪುತ್ರಮಿತ್ರಕಲತ್ರೇಷು ಸಕ್ತಾಃ ಸೀದನ್ತಿ ಜನ್ತವಃ ।
ಸರಃಪಙ್ಕಾರ್ಣವೇ ಮಗ್ನಾ ಜೀರ್ಣಾ ವನಗಜಾ ಇವ ॥೩೯॥

ಕಿಂ ನ ಪಶ್ಯಸಿ ಮಾ ಭದ್ರೇ ಜಾತಸಙ್ಗಂ ಸ್ವರೋಚಿಷಮ್ ।
ಆಬಾಲ್ಯಾತ್ಕಾಮಸಂಸಕ್ತಂ ಮಗ್ನಂ ಸ್ನೇಹಾಮ್ಬುಕರ್ದಮೇ ॥೪೦॥

ಯೌವನೇಽತೀವ ಭಾರ್ಯಾಸು ಸಾಮ್ಪ್ರತಂ ಪುತ್ರನಪ್ತೃಷು ।
ಸ್ವರೋಚಿಷೋ ಮನೋ ಮಗ್ನಮುದ್ಧಾರಂ ಪ್ರಾಪ್ಸ್ಯತೇ ಕುತಃ ॥೪೧॥

ನಾಹಂ ಸ್ವರೋಚಿಷಸ್ತುಲ್ಯಃ ಸ್ತ್ರೀವಶ್ಯೋ ವಾ ಜಲೇಚರಿ ।
ವಿವೇಕವಾಂಶ್ಚ ಭೋಗಾನಾಂ ನಿವೃತ್ತೋಽಸ್ಮಿ ಚ ಸಾಮ್ಪ್ರತಮ್ ॥೪೨॥

---

೩೯. ಸರೋವರದ ಕೆಸರಿನಲ್ಲಿ ಹೂತುಹೋದ ಅಥವಾ ಸಮುದ್ರದಲ್ಲಿ ಮುಳುಗಿಹೋದ ಜೀರ್ಣವಾದ ಕಾಡಾನೆಗಳಂತೆ ಪುತ್ರ–ಮಿತ್ರ–ಕಳತ್ರರೂಪವಾದ ಪರಿವಾರದಲ್ಲಿ ಅಭಿಮಾನಹೊಂದಿರುವ ಜಂತುಗಳು ಉದ್ಧಾರಹೊಂದದಂತೆ ಕ್ಷಯಿಸುವುವು.

೪೦. ಮಂಗಳಮೂರ್ತಿಯೇ! ಬಾಲ್ಯಮೊದಲುಗೊಂಡು ಕಾಮಸುಖದಲ್ಲಿ ಆಸಕ್ತನೂ, ಸ್ನೇಹಮಯವಾದ ನೀರು-ಕೆಸರುಗಳಲ್ಲಿ ಹೂತುಹೋದವನೂ ಮತ್ತು ಪ್ರೇಯಸೀ ಸಂಗದಿಂದ ಜೀರ್ಣಿಸುತ್ತಿರುವವನೂ ಆದ ಸ್ವರೋಚಿಯನ್ನು ನೀನು ನೋಡಲಿಲ್ಲವೆ?

೪೧. ಸ್ವರೋಚಿಯ ಮಾನಸವು ಅವನ ಯೌವನದಶೆಯಲ್ಲಿ ಅನೇಕ ಮಂದಿ ಭಾರ್ಯೆಯರಲ್ಲಿಯೂ ಈಗ ಮಕ್ಕಳು–ಮೊಮ್ಮಕ್ಕಳಲ್ಲಿಯೂ ಅಭಿಮಾನ ಪಾಶಗಳಿಂದ ಬಿಗಿಯಲ್ಪಟ್ಟಿರುವುದು. ಹೀಗಿರಲು ಸ್ವರೋಚಿಯು ಉದ್ಧಾರವನ್ನು ಹೇಗೆ ಹೊಂದುವನು?

೪೨. ಜಲಚರಿಯಾದ ಪ್ರಿಯೆಯೇ! ನಾನು ಸ್ವರೋಚಿಯ ಶೀಲವುಳ್ಳವನಾಗಿಲ್ಲ. ಹಾಗು ಸ್ತ್ರೀಯರಿಗೆ ವಶನಾದವನೂ ಅಲ್ಲ. ಈಗ ನಾನು ವಿವೇಕವನ್ನು ಹೊಂದಿ ವಿರಸವಾದ ಭೋಗದಲ್ಲಿ ನಿವೃತ್ತಿಯನ್ನು ಹೊಂದಿರುವೆನು.

ಮಾರ್ಕಣ್ಡೇಯ ಉವಾಚ :—

ಸ್ವರೋಚಿರೇತದಾಕರ್ಣ್ಯ ಜಾತೋದ್ವೇಗಃ ಖಗೇರಿತಮ್ ।
ಆದಾಯ ಭಾರ್ಯಾಸ್ತಪಸೇ ಯಯಾವನ್ಯತ್ತಪೋವನಮ್ ॥೪೩॥

ತತ್ರ ತಪ್ತ್ವಾ ತಪೋ ಘೋರಂ ಸಹ ತಾಭಿರುದಾರಧೀಃ ।
ಜಗಾಮ ಲೋಕಾನಮಲಾನ್ನಿವೃತ್ತಾಖಿಲಕಲ್ಮಷಃ ॥೪೪॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸ್ವಾರೋಚಿಷೇ ಮನ್ವನ್ತರೇ
ತ್ರಿಷಷ್ಟಿತಮೋಽಧ್ಯಾಯಃ

ಮಾರ್ಕಂಡೇಯ ಮುನಿಯು ಇಂತೆಂದನು :—

೪೩. ಸ್ವರೋಚಿಯು ಹಂಸವು ನುಡಿದ ಈ ಮಾತುಗಳನ್ನು ಕೇಳಿ ಭೋಗಗಳಲ್ಲಿ ವಿರಸಭಾವವನ್ನು ಹೊಂದಿದವನಾಗಿ ತನ್ನ ಭಾರ್ಯೆಯರನ್ನು ಸಂಗಡ ಕರೆದುಕೊಂಡು ತಪವನ್ನು ಆಚರಿಸಲು ತಪೋವನಕ್ಕೆ ತೆರಳಿದನು.

೪೪. ತಪೋವನದಲ್ಲಿ ಉದಾರವಾದ ಮಾನಸವುಳ್ಳ ಸ್ವರೋಚಿಯು ಆ ಪತ್ನಿಯರೊಂದಿಗೆ ಕಠಿನವಾದ ತಪವನ್ನು ಆಚರಿಸಿ ಕಳೆದುಕೊಂಡ ಸಮಸ್ತ ಪಾತಕವುಳ್ಳವನಾಗಿ ನಿರ್ಮಲವಾದ ಸುಖಭೋಗಲೋಕಗಳನ್ನು ಹೊಂದಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತಮೂರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುಃಷಷ್ಟಿತಮೋಽಧ್ಯಾಯಃ

(ಸ್ವಾರೋಚಿಷೇ ದೇವ-ಮುನ್ಯಾದಯಃ)

ಮಾರ್ಕಣ್ಡೇಯ ಉವಾಚ :—

ತತಃ ಸ್ವಾರೋಚಿಷಂ ನಾಮ್ನಾ ದ್ಯುತಿಮನ್ತಂ ಪ್ರಜಾಪತಿಮ್ ।
ಮನುಂ ಚಕಾರ ಭಗವಾನ್ ತಸ್ಯ ಮನ್ವನ್ತರಂ ಶೃಣು ||೧||

ತತ್ರಾನ್ತರೇ ತು ಯೇ ದೇವಾ ಮುನಯಸ್ತತ್ಸುತಾ ಶ್ಚ ಯೇ ।
ಭೂಪಾಲಾಃ ಕ್ರೌಷ್ಟುಕೇ ಯೇ ತಾನ್ ಗದತಸ್ತ್ವಂ ನಿಶಾಮಯ ||೨||

ಅರವತ್ತನಾಲ್ಕನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತು ಹೇಳಿದನು :—

೧. ತರುವಾಯ ಪೂಜ್ಯನಾದ ಸೃಷ್ಟಿಕರ್ತನು ಸ್ವರೋಚಿಯ ಪುತ್ರನಾದ ದ್ಯುತಿಮಂತನನ್ನು ಮನ್ವಂತರವನ್ನು ಆಳುವ ಮನುಪ್ರಜಾಪತಿಯನ್ನಾಗಿ ಏರ್ಪಡಿಸಿದನು. ಆಗ ನಡೆದ ಮನ್ವಂತರವನ್ನು ಕೇಳು.

೨. ಎಲೈ, ಕ್ರೌಷ್ಟುಕಿಯೇ ! ಸ್ವಾರೋಚಿಷ ಮನ್ವಂತರದಲ್ಲಿ ಇದ್ದ ದೇವತೆಗಳು, ಮುನಿಗಳು, ಅವರ ಪುತ್ರರು ಮತ್ತು ಭೂಪಾಲಕರು—ಇವರನ್ನು ನಾನು ಹೇಳುವೆನು. ನನ್ನ ವಚನವನ್ನು ಕೇಳು.

ದೇವಾಃ ಪಾರಾವತಾಸ್ತತ್ರ ತಥೈವ ತುಷಿತಾ ದ್ವಿಜ ।
ಸ್ವಾರೋಚಿಷೇಽನ್ತರೇ ಚೇನ್ದ್ರೋ ವಿಪಶ್ಚಿದಿತಿ ವಿಶ್ರುತಃ ॥೩॥

ಊರ್ಜಸ್ತಮ್ಬಸ್ತಥಾ ಪ್ರಾಣೋ ದತ್ತೋಽಲಿರ್ಋಷಭಸ್ತಥಾ ।
ನಿಶ್ಚರಶ್ಚಾರ್ವವೀರಾಶ್ಚ ತತ್ರ ಸಪ್ತರ್ಷಯೋಽಭವನ್ ॥೪॥

ಚೈತ್ರಕಿಮ್ಪುರುಷಾದ್ಯಾಶ್ಚ ಸುತಾಸ್ತಸ್ಯ ಮಹಾತ್ಮನಃ ।
ಸಪ್ತಾಸನ್ ಸುಮಹಾವೀರ್ಯಾಃ ಪೃಥಿವೀಪರಿಪಾಲಕಾಃ ॥೫॥

ತಸ್ಯ ಮನ್ವನ್ತರಂ ಯಾವತ್ತಾವತ್ತದ್ವಂಶವಿಸ್ತರೇ ।
ಭುಕ್ತೇಯಮವನಿಃ ಸರ್ವಾ ದ್ವಿತೀಯಂ ವೈ ತದನ್ತರಮ್ ॥೬॥

---

೩. ವಿಪ್ರನಾದ ಕ್ರೌಷ್ಟುಕಿಯೇ ! ಸ್ವಾರೋಚಿಷನ ಮನ್ವಂತರದಲ್ಲಿ ಪಾರಾವತ–ತುಷಿತ ಎಂಬ ನಾಮಾಂಕನದಿಂದ ಪ್ರಸಿದ್ಧರಾದವರು ದೇವಗಣದಲ್ಲಿ ಸೇರಿದ್ದರು. ಹಾಗು ವಿಪಶ್ಚಿತ್ ಎಂಬ ಪ್ರಸಿದ್ಧಿಯುಳ್ಳವನು ಇಂದ್ರಪದವಿಯಲ್ಲಿದ್ದನು.

೪. ಮತ್ತು ಸ್ವಾರೋಚಿಷಮನ್ವಂತರದಲ್ಲಿ ಊರ್ಜಸ್ತಂಬ, ಪ್ರಾಣ, ದತ್ತ, ಅಲಿ, ಋಷಭ, ನಿಶ್ಚರ ಮತ್ತು ಅರ್ವವೀರ ಎಂಬ ನಾಮಾಂಕನವುಳ್ಳ ಮಹಾಮಹಿಮರಾದ ಮುನಿಗಳು ಸಪ್ತರ್ಷಿಪದವನ್ನು ಅಲಂಕರಿಸಿದ್ದರು.

೫. ಆ ಮಹಾತ್ಮನಾದ ಸ್ವಾರೋಚಿಷನಿಗೆ ಚೈತ್ರ—ಕಿಂಪುರುಷ ಮುಂತಾದ ಏಳುಮಂದಿ ಪುತ್ರರು ಇದ್ದರು. ಆ ಕುಮಾರರು ಮಹತ್ತಾದ ಐಶ್ವರ್ಯವುಳ್ಳವರೂ ಪೃಥಿವೀಪಾಲಕರೂ ಆಗಿದ್ದರು.

೬. ಹಾಗೆ ಸ್ವಾರೋಚಿಷನ ಮನ್ವಂತರದ ಅವಧಿಯು ಮುಗಿಯುವವರೆಗೆ ಆವನ ವಂಶಾವಳಿಯಲ್ಲಿ ಜನಿಸಿದವರಿಂದ ಸಮಸ್ತ ಭೂಮಿಯು ಭುಂಜಿಸಲ್ಪಟ್ಟಿತು. ಹಾಗೆ ನಡೆದಿರುವ ಮನ್ವಂತರವು ಸ್ವಾರೋಚಿಷವೆಂಬ ಎರಡನೆಯ ಮನ್ವಂತರವೆಂದು ಗಣಿಸಲ್ಪಟ್ಟಿದೆ.

ಸ್ವರೋಚಿಷಸ್ತು ಚರಿತಂ ಜನ್ಮ ಸ್ವಾರೋಚಿಷಸ್ಯ ಚ ।
ನಿಶಮ್ಯ ಮುಚ್ಯತೇ ಪಾಪೈಃ ಶ್ರದ್ದಧಾನೋ ಹಿ ಮಾನವಃ ॥೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸ್ವಾರೋಚಿಷ-
ಸಮಾಪ್ತಿರ್ನಾಮ ಚತುಷ್ಷಷ್ಟಿತಮೋಽಧ್ಯಾಯಃ

---

೭. ಈ ರೀತಿಯಾಗಿ ಸ್ವರೋಚಿಯ ಪಾವನವಾದ ಚರಿತ್ರೆಯನ್ನೂ ಹಾಗು ಸ್ವಾರೋಚಿಷ ಮನುಪ್ರಜಾಪತಿಯ ಜನ್ಮವನ್ನೂ ಶ್ರದ್ಧೆಯಿಂದ ಶ್ರವಣಮಾಡಿದ ಮಾನವನು ಸಮಸ್ತ ಪಾತಕಗಳಿಂದ ಮುಕ್ತನಾಗುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತನಾಲ್ಕನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಟ್ಷಷ್ಟಿತಮೋಽಧ್ಯಾಯಃ

(ನಿಧಿಸ್ವರೂಪವರ್ಣನಮ್)

ಕ್ರೌಷ್ಟುಕಿರುವಾಚ :—

ಭಗವನ್ಕಥಿತಂ ಸರ್ವಂ ವಿಸ್ತರೇಣ ತ್ವಯಾ ಮಮ ।
ಸ್ವರೋಚಿಷಸ್ತು ಚರಿತಂ ಜನ್ಮ ಸ್ವಾರೋಚಿಷಸ್ಯ ತು ॥೧॥

ಯಾ ತು ಸಾ ಪದ್ಮಿನೀ ನಾಮ ವಿದ್ಯಾ ಭೋಗೋಪಪಾದಿಕಾ ।
ತತ್ಸಂಶ್ರಯಾ ಯೇ ನಿಧಯಸ್ತಾನ್ಮೇ ವಿಸ್ತರತೋ ವದ ॥೨॥

ಅರವತ್ತೈದನೆಯ ಅಧ್ಯಾಯ

ಕ್ರೌಷ್ಟುಕಿಯು ಇಂತೆಂದನು :—

೧. ಪೂಜ್ಯನಾದ ಗುರುವೇ ! ಸ್ವರೋಚಿಯ ಪಾವನ ಚರಿತ್ರೆ ಮತ್ತು ಸ್ವಾರೋಚಿಷ ಮನುಪ್ರಜಾಪತಿಯ ಜನ್ಮ—ಇವೆಲ್ಲ ನಿನ್ನಿಂದ ನನಗೆ ವಿಸ್ತಾರವಾಗಿ ವರ್ಣಿಸಲ್ಪಟ್ಟವೆ.

೨. ಸಮಸ್ತ ಭೋಗಗಳನ್ನು ಒದಗಿಸುವ ಪದ್ಮಿನೀ ಎಂಬ ವಿದ್ಯೆಯು ಹಿಂದೆ ಸೂಚಿಸಲ್ಪಟ್ಟದೆಯಷ್ಟೆ. ಆ ಪದ್ಮಿನೀ ವಿದ್ಯೆಗೆ ವಶವಾಗಿರುವ ನಿಧಿಗಳನ್ನು ನನಗೆ ವಿಸ್ತಾರವಾಗಿ ಉಪದೇಶಿಸು.

ಅಷ್ಟೌ ಯೇ ನಿಧಯಸ್ತೇಷಾಂ ಸ್ವರೂಪಂ ದ್ರವ್ಯಸಂಸ್ಥಿತಿಃ ।
ಭವತಾಽಭಿಹಿತಂ ಸಮ್ಯಕ್ ಶ್ರೋತುಮಿಚ್ಛಾಮ್ಯಹಂ ಗುರೋ ॥೩॥

ಮಾರ್ಕಣ್ಡೇಯ ಉವಾಚ :—

ಪದ್ಮಿನೀ ನಾಮ ಯಾ ವಿದ್ಯಾ ಲಕ್ಷ್ಮೀಸ್ತಸ್ಯಾಶ್ಚ ದೇವತಾ ।
ತದಾಧಾರಾಶ್ಚ ನಿಧಯಸ್ತಾನ್ಮೇ ನಿಗದತಃ ಶೃಣು ॥೪॥

ಯತ್ರ ಪದ್ಮಮಹಾಪದ್ಮೌ ತಥಾ ಮಕರಕಚ್ಛಪೌ ।
ಮುಕುನ್ದೋ ನನ್ದಕಶ್ಚೈವ ನೀಲಃ ಶಙ್ಖೋಽಷ್ಟಮೋ ನಿಧಿಃ ॥೫॥

ಸತ್ಯಾಮೃದ್ಧೌ ಭವನ್ತ್ಯೇತೇ ಸಿದ್ಧಿಸ್ತೇಷಾಂ ಹಿ ಜಾಯತೇ ।
ಏತೇ ಹ್ಯಷ್ಟೌ ಸಮಾಖ್ಯಾತಾ ನಿಧಯಸ್ತವ ಕ್ರೌಷ್ಟುಕೇ ॥೬॥

---

೩. ಎಂಟು ನಿಧಿಗಳು, ಮತ್ತು ಅವುಗಳ ಸ್ವರೂಪ, ಅಲ್ಲಿರುವ ದ್ರವ್ಯ-ವಿಭಾಗಸ್ಥಿತಿ—ಇವುಗಳನ್ನು ವರ್ಣಿಸು. ಗುರುವೇ ! ನೀನು ಉಪದೇಶಿಸುವ ಈ ವಿಷಯಗಳನ್ನು ಚನ್ನಾಗಿ ಕೇಳಲು ಇಷ್ಟಪಡುತ್ತೇನೆ.

ಮಾರ್ಕಂಡೇಯ ಮುನಿಯು ಹೇಳಿದನು :—

೪. ಪದ್ಮಿನೀ ಎಂಬ ಯಾವ ವಿದ್ಯೆಯು ನಿನಗೆ ಹಿಂದೆ ಹೇಳಲ್ಪಟ್ಟ-ದೆಯೋ ಅದಕ್ಕೆ ಲಕ್ಷ್ಮಿಯು ಅಭಿಮಾನಿ ದೇವತೆಯು. ನಿಧಿಗಳು ಪದ್ಮಿನೀ ವಿದ್ಯೆಗೆ ಅಧೀನವಾಗಿರುವುವು. ನಿಧಿಗಳನ್ನು ವರ್ಣಿಸುವ ನನ್ನ ವಚನವನ್ನು ಕೇಳು.

೫. ಪದ್ಮಿನೀ ವಿದ್ಯೆಗೆ ಅಧೀನವಾಗುವ ನಿಧಿಗಳು ಎಂಟಾಗಿವೆ—ಅವು ಪದ್ಮ, ಮಹಾಪದ್ಮ, ಮಕರ, ಕಚ್ಛಪ, ಮುಕುಂದ, ನಂದಕ, ನೀಲ ಮತ್ತು ಶಂಖ ಎಂದು ಕ್ರಮವಾಗಿ ಎಂಟು ನಾಮಾಂಕನಗಳನ್ನು ಹೊಂದಿವೆ.

೬. ಕ್ರೌಷ್ಟುಕಿಯೇ ! ಹೀಗೆ ಎಂಟುನಿಧಿಗಳು ನನ್ನಿಂದ ನಿನಗೆ ವರ್ಣಿ-ಸಲ್ಪಟ್ಟಿವೆ. ಸಮೃದ್ಧಿಯ ಭಾಗ್ಯವು ಇದ್ದರೆ ಇವುಗಳು ಲಭಿಸುವುವು. ಮತ್ತು ಈ ನಿಧಿಗಳ ಭೋಗಸಿದ್ಧಿಯುಂಟಾಗುವುದು.

ದೇವತಾನಾಂ ಪ್ರಸಾದೇನ ಸಾಧುಸಂಸೇವನೇನ ಚ |
ಏಭಿರಾಲೋಕಿತಂ ವಿತ್ತಂ ಮಾನುಷಸ್ಯ ಸದಾ ಮುನೇ ||೭||

ಯಾದೃಕ್ ಸ್ವರೂಪಂ ಭವತಿ ತನ್ಮೇ ನಿಗದತಃ ಶೃಣು |
ಪದ್ಮೋ ನಾಮ ನಿಧಿಃ ಪೂರ್ವಂ ಸ ಯಸ್ಯ ಭವತಿ ದ್ವಿಜ ||೮||

ಸ ಯಸ್ಯ ತತ್ಸುತಾನಾಂ ಚ ತತ್ಪೌತ್ರಾಣಾಂ ಚ ನಿತ್ಯಶಃ |
ದಾಕ್ಷಿಣ್ಯಸಾರಃ ಪುರುಷಸ್ತೇನ ಚಾಧಿಷ್ಠಿತೋ ಭವೇತ್ ||೯||

ಸತ್ತ್ವಾಧಾರೋ ಮಹಾಭಾಗೋ ಯತೋಽಸೌ ಸಾತ್ತ್ವಿಕೋ ನಿಧಿಃ ||೧೦||

---

೭. ಎಲೈ ಕ್ರೌಷ್ಟುಕಿ ಮುನಿಯೇ ! ದೇವತೆಗಳ ಅನುಗ್ರಹದಿಂದಲೂ ಸಾಧುಜನರ ಸೇವಾಭಾಗ್ಯದಿಂದಲೂ ನಿಧಿಗಳ ಸಿದ್ಧಿಯು ಲಭಿಸುವುದು. ಮಾನವನ ಐಶ್ವರ್ಯವು ಈ ನಿಧಿಗಳಿಂದ ಅವಲೋಕಿಸಲ್ಪಡುವುದು.

೮. ದ್ವಿಜೋತ್ತಮನೇ! ಇವುಗಳಲ್ಲಿ ಮೊದಲನೆಯದಾದ ಪದ್ಮ ಎಂಬ ನಿಧಿಯು ಯಾವ ಮಾನವನಿಗೆ ಸಿದ್ಧಿಸುವುದೋ ಆ ಮಾನವನಲ್ಲಿ ನಿಧಿಯ ಮಹಿಮೆಯಿಂದ ಉಂಟಾಗುವ ಸ್ವರೂಪವನ್ನು ಹೇಳುವೆನು. ಅದನ್ನು ಹೇಳುವ ನನ್ನ ಮಾತನ್ನು ಕೇಳು:

೯. ಪದ್ಮನಿಧಿಯು ಯಾವ ಮಾನವನಲ್ಲಿ ಸಿದ್ಧಿಸುವುದೊ ಅವನ ಪುತ್ರ-ಪೌತ್ರಪರಂಪರೆಯಲ್ಲಿ ಅದರ ಭೋಗವು ಯಾವಾಗಲೂ ಲಭಿಸುವುದು. ಮತ್ತು ಪದ್ಮನಿಧಿಯಿಂದ ಸೇವಿಸಲ್ಪಡುವ ಮಾನವನು ದಾಕ್ಷಿಣ್ಯಗುಣದ ಸಾರವುಳ್ಳವನಾಗುವನು.

೧೦. ಪದ್ಮನಿಧಿಯು ಸತ್ತ್ವಗುಣದ ಆಧಾರದಿಂದಲೂ ಸತ್ತ್ವಗುಣ ಪೂರ್ಣತೆಯಿಂದಲೂ ಇರುವುದು. ಆದುದರಿಂದ ಮಹಾಭಾಗ್ಯಕರವಾದ ಈ ನಿಧಿಯು ಸಾತ್ತ್ವಿಕನಿಧಿಯೆಂದು ಗಣಿಸಲ್ಪಟ್ಟಿರುವುದು.

ಸುವರ್ಣರೂಪ್ಯತಾಮ್ರಾದಿಧಾತೂನಾಂ ಚ ಪರಿಗ್ರಹಮ್ ।
ಕರೋತ್ಯತಿತರಾಂ ಸೋಽಥ ತೇಷಾಂ ಚ ಕ್ರಯವಿಕ್ರಯಮ್ ॥೧೧॥

ಕರೋತಿ ಚ ತಥಾ ಯಜ್ಞಾನ್ ದಕ್ಷಿಣಾಂ ಚ ಪ್ರಯಚ್ಛತಿ ।
ಸಂಪಾದಯತಿ ಕಾಮಾಂಶ್ಚ ಸರ್ವಾನೇವ ಯಥಾಕ್ರಮಮ್ ॥೧೨॥

ಸಭಾಂ ದೇವನಿಕೇತಾಂಶ್ಚ ಸ ಕಾರಯತಿ ತನ್ಮನಾಃ ।
ಸತ್ತ್ವಾಧಾರೋ ನಿಧಿಶ್ಚಾನ್ಯೋ ಮಹಾಪದ್ಮ ಇತಿ ಶ್ರುತಃ ॥೧೩॥

ಸತ್ತ್ವಪ್ರಧಾನೋ ಭವತಿ ತೇನ ಚಾಧಿಷ್ಠಿತೋ ನರಃ ।
ಕರೋತಿ ಪದ್ಮರಾಗಾದಿರತ್ನಾನಾಂ ಚ ಪರಿಗ್ರಹಮ್ ॥೧೪॥

ಮೌಕ್ತಿಕಾನಾಂ ಪ್ರವಾಲಾನಾಂ ತೇಷಾಂ ಚ ಕ್ರಯವಿಕ್ರಯಾನ್ ।
ದದಾತಿ ಯೋಗಶೀಲೇಭ್ಯಸ್ತೇಷಾಮಾವಸಥಾಂಸ್ತಥಾ ॥೧೫॥

---

೧೧. ಸಾತ್ತ್ವಿಕವಾದ ಪದ್ಮನಿಧಿಯ ಅನುಗ್ರಹಕ್ಕೆ ಪಾತ್ರನಾದ ಮಾನವನು ಚಿನ್ನ-ಬೆಳ್ಳಿ-ತಾಮ್ರ ಮುಂತಾದ ಲೋಹಸಾಮಗ್ರಿಗಳ ಸಂಗ್ರಹವನ್ನೂ ಅತಿಶಯವಾಗಿ ಅವುಗಳ ಕ್ರಯವಿಕ್ರಯಗಳನ್ನೂ ಮಾಡುವನು.

೧೨. ಮತ್ತು ಅನೇಕ ಯಜ್ಞಸಮಾರಂಭಗಳನ್ನು ಕೈಗೊಳ್ಳುವನು. ತದಂಗವಾಗಿ ದಕ್ಷಿಣೆಯನ್ನು ಕೊಡುವನು. ಹಾಗು ಸಮಸ್ತಕಾಮಗಳನ್ನು ಕ್ರಮವಾಗಿ ಪುಣ್ಯವೈಭವದಿಂದ ಗಳಿಸುವನು.

೧೩. ಮತ್ತು ಪುಣ್ಯಕರ್ಮದಲ್ಲಿ ನಿಷ್ಠೆಯುಳ್ಳವನಾಗಿ ಅನೇಕ ಸಭಾಸ್ಥಾನಗಳನ್ನೂ ದೇವಾಲಯಗಳನ್ನೂ ನಿರ್ಮಿಸುವನು. ಮಹಾಪದ್ಮವೆಂಬ ನಾಮಾಂಕಿತವಾದ ಮತ್ತೊಂದು ನಿಧಿಯು ಸತ್ತ್ವಗುಣಾಧಾರವಾಗಿರುವುದು.

೧೪. ಅಂತಹ ಮಹಾಪದ್ಮವೆಂಬ ನಿಧಿಯಿಂದ ಸೇವಿಸಲ್ಪಡುವ ಮಾನವನು ಸತ್ತ್ವಗುಣವನ್ನು ಪ್ರಧಾನವಾಗಿ ಅವಲಂಬಿಸುವನು. ಅವನು ಪದ್ಮರಾಗ ಮುಂತಾದ ನವರತ್ನಗಳ ಪರಿಗ್ರಹವನ್ನು ವಿಶೇಷವಾಗಿ ಮಾಡುವನು.

೧೫. ಮತ್ತು ಮುತ್ತು-ರತ್ನಗಳನ್ನು ವಿಶೇಷವಾಗಿ ಸಂಗ್ರಹಿಸುವನು; ಹಾಗು ಅವುಗಳ ಕ್ರಯ-ವಿಕ್ರಯಗಳನ್ನು ಮಾಡುವನು. ಯೋಗಾಭ್ಯಾಸಶೀಲರಿಗೆ ವಿಶೇಷವಾಗಿ ಸಹಾಯಮಾಡುವನು. ಅವರಿಗೆ ವಾಸಕ್ಕೆ ಅನುಕೂಲ ಕಲ್ಪಿಸುವನು.

ಸ ಕಾರಯತಿ ತಚ್ಛೀಲಃ ಸ್ವಯಮೇವ ಚ ಜಾಯತೇ ।
ತತ್ಪ್ರಸೂತಾಸ್ತಥಾಶೀಲಾಃ ಪುತ್ರಪೌತ್ರಕ್ರಮೇಣ ಚ ॥೧೬॥

ಪೂರ್ವರ್ಧಿಮಾತ್ರಃ ಸಪ್ತಾಸೌ ಪುರುಷಾಂಶ್ಚ ನ ಮುಞ್ಚತಿ ॥೧೭॥

ತಾಮಸೋ ಮಕರೋ ನಾಮ ನಿಧಿಸ್ತೇನಾವಲೋಕಿತಃ ।
ಪುರುಷೋಽಥ ತಮಃಪ್ರಾಯಃ ಸುಶೀಲೋಽಪಿ ಹಿ ಜಾಯತೇ ॥೧೮॥

ಬಾಲಖಡ್ಗರ್ಷ್ಟಿಧನುಷಾಂ ಚರ್ಮಣಾಂ ಚ ಪರಿಗ್ರಹಮ್ ।
ದಂಶನಾನಾಂ ಚ ಕುರುತೇ ಯಾತಿ ಮೈತ್ರೀಂ ಚ ರಾಜಭಿಃ ॥೧೯॥

---

೧೬. ಅಂತಹ ಪವಿತ್ರಶೀಲವುಳ್ಳವನಾಗಿ ಯೋಗಿಗಳಿಗೆ ಮಂದಿರಗಳನ್ನು ನಿರ್ಮಿಸುವನು. ತಾನು ಯೋಗಿಗಳಂತೆ ಉತ್ತಮಶೀಲವನ್ನು ಹೊಂದಿದವನಾಗುವನು. ಪುತ್ರ-ಪೌತ್ರಕ್ರಮದಿಂದ ಅವನಿಂದ ಹುಟ್ಟುವ ಸಂತತಿಯು ಅಂತಹ ಸಾಧುಶೀಲವುಳ್ಳದ್ದಾಗುವುದು.

೧೭. ಮಹಾಪದ್ಮವೆಂಬ ನಿಧಿಯ ಅನುಗ್ರಹವು ಪದ್ಮಿನೀ ವಿದ್ಯಾಮಹಿಮೆಗೆ ಪಾತ್ರವಾದ ವ್ಯಕ್ತಿಯ ಮುಂದಿನ ಸಪ್ತ ಪುರುಷರವರೆಗೆ ಅನುವರ್ತಿಸುವುದು. ಅವನ ಪುತ್ರ-ಪೌತ್ರ ಮೊದಲಾಗಿ ಏಳುಮಂದಿಯವರೆಗೆ ಭೋಗವನ್ನು ಅನುಭವಿಸುವರು.

೧೮. ಮಕರ ಎಂಬ ನಾಮಾಂಕಿತವಾದ ನಿಧಿಯು ತಮೋಗುಣಮಯವಾಗಿರುವುದು. ಅದರಿಂದ ದೃಷ್ಟಿಸಲ್ಪಟ್ಟ ಪುರುಷನು ತಮೋಗುಣದಿಂದ ಪರಿಪೂರ್ಣನೂ ಮತ್ತು ಸುಶೀಲಶೋಭಿತನೂ ಆಗುವನು.

೧೯. ಮತ್ತು ಬಾಣ-ಖಡ್ಗ-ಖುಷ್ಟಿ-ಬಿಲ್ಲು ಮತ್ತು ಚರ್ಮಗಳ ಸಂಗ್ರಹಣಮಾಡುವನು. ಹಾಗು ಕವಚಗಳನ್ನು ಸಂಗ್ರಹಿಸುವನು. ರಾಜಾಧಿರಾಜರೊಡನೆ ಮೈತ್ರಿಯನ್ನು ಮಾಡುವನು.

ದದಾತಿ ಶೌರ್ಯವೃತ್ತೀನಾಂ ಭೂಭುಜಾಂ ಯೇ ಚ ತತ್ಪ್ರಿಯಾಃ ।
ಕ್ರಯವಿಕ್ರಯೇ ಚ ಶಸ್ತ್ರಾಣಾಂ ನಾನ್ಯತ್ರ ಪ್ರೀತಿಮೇತಿ ಚ ॥೨೦॥

ಏಕಸ್ಯೈವ ಭವತ್ಯೇಷ ನರಸ್ಯ ನ ಸುತಾನುಗಃ ।
ದ್ರವ್ಯಾರ್ಥಂ ದಸ್ಯುತೋ ನಾಶಂ ಸಙ್ಗ್ರಾಮೇ ವಾಪಿ ಸ ವ್ರಜೇತ್ ॥೨೧॥

ಕಚ್ಛಪಸ್ಥ ನಿಧಿರ್ಯೋಽಸೌ ನರಸ್ತೇನಾಭಿವೀಕ್ಷಿತಃ ।
ತಮಃಪ್ರಧಾನೋ ಭವತಿ ಯತೋಽಸೌ ತಾಮಸೋ ನಿಧಿಃ ॥೨೨॥

ವ್ಯವಹಾರಾನಶೇಷಾಂಸ್ತು ಪುಣ್ಯಜಾತ್ಯೈಃ ಕರೋತಿ ಚ ।
ಕರ್ಮಸ್ಥಾನಖಿಲಾಂಶ್ಚೈವ ನ ವಿಶ್ವಸಿತಿ ಕಸ್ಯ ಚಿತ್ ॥೨೩॥

---

೨೦. ಶೌರ್ಯವೃತ್ತಿಯಿಂದ ಜೀವಿಸುವವರು, ರಾಜರಿಗೆ ಪ್ರಿಯರು-ಮುಂತಾದವರೊಡನೆ ಸಹವಾಸಮಾಡಿ ಬಾಣ-ಖಡ್ಗ ಮುಂತಾದುವುಗಳನ್ನು ಅವರಿಗೆ ಒದಗಿಸುವನು. ಶಸ್ತ್ರಗಳ ಕ್ರಯವಿಕ್ರಯಗಳನ್ನು ಮಾಡುವನು. ಬೇರೆ ಉದ್ಯಮಗಳಲ್ಲಿ ಪ್ರೀತಿಯನ್ನು ಹೊಂದುವುದಿಲ್ಲ.

೨೧. ಈ ನಿಧಿಯು ಒಬ್ಬ ವ್ಯಕ್ತಿಯಲ್ಲಿ ಮಾತ್ರ ಇರುವುದು. ಅವನ ಪುತ್ರ-ಪೌತ್ರ ಮುಂತಾದ ವಂಶವನ್ನು ಅನುವರ್ತಿಸುವುದಿಲ್ಲ. ಮಕರನಿಧಿಯ ಭಾಗಿಯಾದವನು ದ್ರವ್ಯಲೋಭದಿಂದ ಕಳ್ಳ-ಕಾಕರಿಂದಲೋ ಸಂಗ್ರಾಮದಲ್ಲಿ ಶತ್ರುಗಳಿಂದಲೋ ಮರಣಹೊಂದುವನು.

೨೨. ಕಚ್ಛಪವೆಂಬುದು ಮತ್ತೊಂದು ಮಹಾನಿಧಿಯು. ಆ ನಿಧಿಯಿಂದ ಭಜಿಸಲ್ಪಟ್ಟ ಮಾನವನು ತಮೋಗುಣಪ್ರಧಾನನಾಗುವನು. ಆ ನಿಧಿಯು ತಮೋಗುಣ ರೂಪವಾಗಿರುವುದು.

೨೩. ಪುಣ್ಯವಂತರಾದ ಜನರೊಂದಿಗೆ ಸರ್ವವಿಧವಾದ ವ್ಯವಹಾರ-ಗಳನ್ನು ನಡೆಯಿಸುವನು. ಯಾರೊಬ್ಬರ ಅಧೀನದಲ್ಲಿರುವವನಾದರೂ ಎಲ್ಲ ಕರ್ಮಕರರನ್ನೂ ನಂಬುವುದಿಲ್ಲ.

ಸಮಸ್ತಾನಿ ಯಥಾಙ್ಗಾನಿ ಸಂಹರತ್ಯೇವ ಕಚ್ಛಪಃ ।
ತಥಾ ವಿಷ್ಟಭ್ಯ ರತ್ನಾನಿ ತಿಷ್ಠತ್ಯಾಕುಲಮಾನಸಃ ॥೨೪॥

ನ ದದಾತಿ ನ ವಾ ಭುಙ್ಕ್ತೇ ತದ್ವಿನಾಶಭಯಾಕುಲಃ ।
ನಿಧಾನಮುರ್ವ್ಯಾಂ ಕುರುತೇ ನಿಧಿಃ ಸೋಽಪ್ಯೇಕಪೂರುಷಃ ॥೨೫॥

ರಜೋಗುಣಮಯಶ್ಚಾನ್ಯೋ ಮುಕುನ್ದೋ ನಾಮ ಯೋ ನಿಧಿಃ ।
ನರೋಽವಲೋಕಿತಸ್ತೇನ ತದ್ಗುಣೋ ಭವತಿ ದ್ವಿಜ ॥೨೬॥

ವೀಣಾವೇಣುಮೃದಙ್ಗಾನಾಮಾತೋದ್ಯಸ್ಯ ಪರಿಗ್ರಹಮ್ ।
ಕರೋತಿ ಗಾಯತಾಂ ವಿತ್ತಂ ನೃತ್ಯತಾಂ ಚ ಪ್ರಯಚ್ಛತಿ ॥೨೭॥

---

೨೪. ಆಮೆಯು ತನ್ನ ಎಲ್ಲ ಅವಯವಗಳನ್ನು ಹೇಗೆ ಸಂಕೋಚ-ಪಡಿಸಿಕೊಳ್ಳಬಲ್ಲುದೋ ಹಾಗೆ ಕಚ್ಛಪನಿಧಿ ಭಾಗಿಯಾದ ಮಾನವನು ಎಲ್ಲ ರತ್ನಗಳನ್ನು ವ್ಯಾಪಿಸಿಕೊಂಡು ಲೋಭದಿಂದ ವ್ಯಾಕುಲವಾದ ಮನಸ್ಸುಳ್ಳವನಾಗಿ-ರುವನು.

೨೫. ಮತ್ತು ಕಚ್ಛಪನಿಧಿಯಭಾಗ್ಯವನ್ನು ಹೊಂದಿದವನು ಧನನಾಶದ ಭಯದಿಂದ ಕೂಡಿದವನಾಗಿ ಅಲ್ಪಮಾತ್ರವನ್ನೂ ದಾನಮಾಡುವುದಿಲ್ಲ. ಹಾಗು ತಾನು ಭುಂಜಿಸುವುದಿಲ್ಲ. ನೆಲದೊಳಗೆ ನಿಧಿಯನ್ನು ಶೇಖರಿಸುವನು. ಆದರೆ ಆ ನಿಧಿಯು ಒಂದು ವ್ಯಕ್ತಿಯಲ್ಲಿ ಮಾತ್ರ ಜೀರ್ಣವಾಗುವುದು.

೨೬. ಎಲೈ ದ್ವಿಜನಾದ ಕ್ರೌಷ್ಟುಕಿಯೇ! ಮುಕುಂದ ಎಂಬ ನಾಮಾಂಕಿತವಾದ ಮತ್ತೊಂದು ನಿಧಿಯು ರಜೋಗುಣಾಂಶದಿಂದ ಪೂರ್ಣ-ವಾದುದು. ಆ ನಿಧಿಯಿಂದ ದೃಷ್ಟಿಸಲ್ಪಟ್ಟ ಮಾನವನು ರಜೋಗುಣದ ಶೀಲವುಳ್ಳವನಾಗುವನು.

೨೭. ಅಂತಹ ಮಾನವನು ವೀಣೆ, ಕೊಳಲು, ಮೃದಂಗ ಮುಂತಾದ ಅನೇಕಬಗೆಯ ವಾದ್ಯಗಳ ಪರಿಗ್ರಹವನ್ನು ಮಾಡುವನು. ಮತ್ತು ಗಾನಮಾಡುವ, ನರ್ತನಮಾಡುವ ಕಲಾವಿದರಿಗೆ ವಿಶೇಷವಾಗಿ ಧನವನ್ನು ಕೊಡುವನು.

ಬನ್ದಿಮಾಗಧಸೂತಾನಾಂ ವಿಟಾನಾಂ ಲಾಸ್ಯಪಾಠಿನಾಮ್ ।
ದದಾತ್ಯಹರ್ನಿಶಂ ಭೋಗಾನ್ ಭುಙ್ಕ್ತೇ ತೈಶ್ಚ ಸಮಂ ದ್ವಿಜ ॥೨೮॥

ಕುಲಟಾಸು ರತಿಶ್ಚಾಸ್ಯ ಭವತ್ಯನ್ಯೈಶ್ಚ ತದ್ವಿಧೈಃ ।
ಪ್ರಯಾತಿ ಸಙ್ಗಮೇಕಂ ಚ ಯಂ ನಿಧಿರ್ಭಜತೇ ನರಮ್ ॥೨೯॥

ರಜಸ್ತಮೋಮಯಶ್ಚಾನ್ಯೋ ನನ್ದೋ ನಾಮ ಮಹಾನಿಧಿಃ ।
ಉಪೈತಿ ಸ್ತಮ್ಭಮಧಿಕಂ ನರಸ್ತೇನಾವಲೋಕಿತಃ ॥೩೦॥

ಸಮಸ್ತಧಾತುರತ್ನಾನಾಂ ಪುಣ್ಯಧಾನ್ಯಾದಿಕಸ್ಯ ಚ ।
ಪರಿಗ್ರಹಂ ಕರೋತ್ಯೇಷ ತಥೈವ ಕ್ರಯವಿಕ್ರಯಮ್ ॥೩೧॥

---

೨೮. ದ್ವಿಜೋತ್ತಮನೇ ! ಮುಕುಂದನಿಧಿಭಾಗಿಯು ವಂದಿ, ಮಾಗಧ, ಸೂತ, ವಿಟ ಮತ್ತು ನೃತ್ಯಶಿಕ್ಷಕರಿಗೆ ಹಗಲಿರುಳು ಧನವನ್ನು ಕೊಟ್ಟು ಸಹಾಯ ಮಾಡುತ್ತಿರುವನು. ಮತ್ತು ಅಂತಹ ಕಲಾವಿದರೊಡನೆ ಯಾವಾಗಲೂ ಭೋಗ-ವನ್ನು ಅನುಭವಿಸುವನು.

೨೯. ಮತ್ತು ಆ ಮಾನವನಿಗೆ ವೇಶ್ಯಾಸ್ತ್ರೀಯರಲ್ಲಿ ಪ್ರೇಮಸಂಪರ್ಕ-ವುಂಟಾಗುವುದು. ಹಾಗು ಅಂತಹ ಜನರ ಸಹವಾಸವು ದೊರೆಯುವುದು. ಹೀಗೆ ಮುಕುಂದನಿಧಿಯ ಭೋಗವು ಒಬ್ಬ ಮಾನವವ್ಯಕ್ತಿಯಲ್ಲಿಯೇ ಸಮಾಪ್ತಿ-ಹೊಂದುವುದು. ವಂಶಕ್ರಮದಿಂದ ಅನುವರ್ತಿಸುವುದಿಲ್ಲ.

೩೦. ನಂದ ಎಂದು ಕರೆಯಲ್ಪಡುವ ಮತ್ತೊಂದು ಮಹಾನಿಧಿಯು ರಜೋಗುಣ-ತಮೋಗುಣಗಳ ಅಂಶಗಳಿಂದ ಪೂರ್ಣವಾಗಿರುವುದು. ನಂದನಿಧಿ-ಯಿಂದ ಸಂದರ್ಶಿಸಲ್ಪಟ್ಟ ಮಾನವನು ಅಧಿಕವಾದ ದರ್ಪವನ್ನು ಹೊಂದುವನು.

೩೧. ಮತ್ತು ನಂದನಿಧಿಯ ದರ್ಶನಭಾಗಿಯು ಎಲ್ಲ ಬಗೆಯ ಧಾತು-ರತ್ನಗಳು, ಉತ್ತಮವಾದ ಧಾನ್ಯಾದಿಗಳು—ಇವುಗಳನ್ನು ಸಂಗ್ರಹಿಸುವನು ಹಾಗು ಇವುಗಳ ಕ್ರಯ-ವಿಕ್ರಯಗಳನ್ನು ಮಾಡುತ್ತಿರುವನು.

ಆಧಾರಃ ಸ್ವಜನಾನಾಂ ಚ ಆಗತಾಭ್ಯಾಗತಸ್ಯ ಚ ।
ಸಹತೇ ನಾಪಮಾನೋಕ್ತಿಂ ಸ್ವಲ್ಪಾಮಪಿ ಮಹಾಮುನೇ ||೩೨||

ಸ್ತೂಯಮಾನಶ್ಚ ಮಹತೀಂ ಪ್ರೀತಿಂ ಬಧ್ನಾತಿ ಯಚ್ಛತಿ ।
ಯಂ ಯಮಿಚ್ಛತಿ ವೈ ಕಾಮಂ ಮೃದುತ್ವಮುಪಯಾತಿ ಚ ||೩೩||

ಬಹ್ವ್ಯೋ ಭಾರ್ಯಾ ಭವನ್ತ್ಯಸ್ಯ ಸೂತಿಮತ್ಯೋऽತಿಶೋಭನಾಃ ।
ಭಜತೇ ಸಪ್ತ ಚ ನರಾನ್ನಿಧಿರ್ನನ್ದೋऽನುವರ್ತತೇ ||೩೪||

ಪ್ರವರ್ಧಮಾನೋऽಥ ನರಮಷ್ಟಭಾಗೇನ ಸತ್ತಮ ।
ದೀರ್ಘಾಯುಷ್ಟ್ವಂ ಚ ಸರ್ವೇಷಾಂ ಪುರುಷಾಣಾಂ ಪ್ರಯಚ್ಛತಿ ||೩೫||

---

೩೨. ಅಂತಹ ಮಾನವನು ಸ್ವಜನರಿಗೆ ಆಧಾರಪ್ರಾಯನಾಗಿರುವನು. ಅತಿಥಿ-ಅಭ್ಯಾಗತರಿಗೆ ಆಶ್ರಯವನ್ನು ನೀಡುವನು. ಎಲೈ, ಮಹಾಮುನಿಯಾದ ಕ್ರೌಷ್ಟುಕಿಯೇ! ಅವನು ಅಪಮಾನಕರವಾದ ಸಣ್ಣಮಾತನ್ನು ಕೂಡ ಸಹಿಸುವುದಿಲ್ಲ.

೩೩. ಅವನು ಬೇರೊಬ್ಬರಿಂದ ಸ್ತುತಿಸಲ್ಪಟ್ಟಹಾಗೆಲ್ಲ ಮಹತ್ತಾದ ಪ್ರೀತಿಯನ್ನು ಹೊಂದುವನು. ಮತ್ತು ಸ್ತುತಿಮಾಡಿದ ಜನರಿಗೆ ಇಷ್ಟವಾದ ವಸ್ತುಗಳನ್ನು ಕೊಡುವನು. ಹಾಗು ಬಹಳ ಮೃದುವಾದ ಮನಸ್ಸನ್ನು ಹೊಂದಿರುವನು.

೩೪. ನಂದನಿಧಿಯ ಪ್ರಸಾದಕ್ಕೆ ಭಾಗಿಯಾದವನು ಅತಿ ಸುಂದರಿಯರೂ, ಸಂತತಿಯನ್ನು ಹೊಂದುವವರೂ ಆದ ಅನೇಕ ಮಂದಿ ಭಾರ್ಯೆಯರನ್ನು ಹೊಂದುವನು. ಅಂತಹ ನಂದನಿಧಿಯು ಸುಖಭೋಗಗಳನ್ನು ನೀಡುತ್ತ ಏಳು ಮಂದಿಯ ವರೆಗೆ ಮುಂದುವರೆಯುವುದು.

೩೫. ಎಲೈ ಸಾಧೂತ್ತಮನೇ! ಆ ನಿಧಿಯು ಕ್ರಮವಾಗಿ ಎಂಟು ಭಾಗಗಳಷ್ಟು ಅಭಿವೃದ್ಧಿಹೊಂದುತ್ತಲಿದ್ದು ಸಮಸ್ತ ಪುರುಷರಿಗೆ ದೀರ್ಘವಾದ ಆಯುಷ್ಯವನ್ನು ಉಂಟುಮಾಡುವುದು,

ಬನ್ಧೂನಾಮೇವ ಭರಣಂ ಯೇ ಚ ದೂರಾದುಪಾಗತಾಃ ।
ತೇಷಾಂ ಕರೋತಿ ವೈ ನನ್ದಃ ಪರಲೋಕೇ ನ ಚಾದೃತಃ ||೩೬||

ಭವತ್ಯಸ್ಯ ನ ಚ ಸ್ನೇಹಃ ಸಹವಾಸಿಷು ಜಾಯತೇ ।
ಪೂರ್ವಮಿತ್ರೇಷು ಶೈಥಿಲ್ಯಂ ಪ್ರೀತಿಮನ್ಯೈಃ ಕರೋತಿ ಚ ||೩೭||

ತಥೈವ ಸತ್ತ್ವರಜಸೀ ಯೋ ಬಿಭರ್ತಿ ಮಹಾನಿಧಿಃ ।
ಸ ನೀಲಸಞ್ಜ್ಞಸ್ತತ್ಸಙ್ಗೀ ನರಸ್ತಚ್ಛೀಲವಾನ್ಭವೇತ್ ||೩೮||

ವಸ್ತ್ರಕಾರ್ಪಾಸಧಾನ್ಯಾದಿಫಲಪುಷ್ಪಪರಿಗ್ರಹಮ್ ।
ಮುಕ್ತಾವಿದ್ರುಮಶಙ್ಖಾನಾಂ ಶುಕ್ತ್ಯಾದೀನಾಂ ತಥಾ ಮುನೇ ||೩೯||

---

೩೬. ನಂದನಿಧಿಯ ಸಿದ್ಧಿಯನ್ನು ಹೊಂದಿದವನು ಯಾವ ಬಂಧುಗಳು ದೂರದೇಶದಿಂದ ಬಂದರೂ ಅವರ ಪೋಷಣೆಯನ್ನು ಮಾಡುವನು. ಹೀಗೆ ಸಮೀಪದಲ್ಲಿರುವವರ ಅಥವಾ ದೂರದಿಂದ ಬಂದವರ ಎಲ್ಲರ ಪೋಷಣೆಯನ್ನೂ ನಂದನಿಧಿಯು ಮಾಡುವುದು. ಆದರೆ ಪರಲೋಕದ ಸುಖಸಂಪಾದನೆಯಲ್ಲಿ ಅಷ್ಟೊಂದು ಆದರವಿರುವುದಿಲ್ಲ.

೩೭. ಈ ಮಾನವನಿಗೆ ಸಹವಾಸಿಗಳಾದ ಜನರಲ್ಲಿ ಹೆಚ್ಚು ಸ್ನೇಹವು ಸಂಭವಿಸುವುದಿಲ್ಲ. ಹಿಂದಿನಿಂದ ಮಿತ್ರರಾಗಿರುವವರಲ್ಲಿ ಮೈತ್ರಿಯು ಶಿಥಿಲವಾಗುವುದು. ಹೊಸ ಹೊಸ ಜನರಲ್ಲಿ ಪ್ರೀತಿಯನ್ನು ತೋರಿಸುವನು.

೩೮. ಹಾಗೆಯೇ ಯಾವ ನಿಧಿಯು ಸತ್ತ್ವ-ರಜೋಗುಣಗಳ ಅಂಶವನ್ನು ಧರಿಸಿರುವುದೋ ಅದು ನೀಲವೆಂಬ ಸಂಜ್ಞಾಂಕಿತವಾದ ಮಹಾನಿಧಿಯೆಂದು ಅರಿಯಬೇಕು. ಆ ನಿಧಿಯ ಭಾಗಿಯಾದ ಮಾನವನು ಅದರ ಸಂಗದಿಂದ ಸತ್ತ್ವ-ರಜೋಗುಣಗಳ ಶೀಲವನ್ನು ಹೊಂದುವನು.

೩೯. ಮುನಿಯಾದ ಕ್ರೌಷ್ಟುಕಿಯೇ! ವಸ್ತ್ರ, ಹತ್ತಿ, ಧಾನ್ಯ, ಫಲ, ಪುಷ್ಪ ಮುಂತಾದುವುಗಳ ವಿಶೇಷ ಸಂಗ್ರಹವನ್ನು ಮಾಡುವನು. ಮತ್ತು ಮುತ್ತು, ಹವಳ, ಶಂಖ, ಚಿಪ್ಪು ಮುಂತಾದುವುಗಳನ್ನು ಹೆಚ್ಚಾಗಿ ಆರ್ಜಿಸುವನು.

ಕಾಷ್ಠಾದೀನಾಂ ಕರೋತ್ಯೇಷ ಯಚ್ಚಾನ್ಯಜ್ಜಲಸಮ್ಭವಮ್ ।
ಕ್ರಯವಿಕ್ರಯಮನ್ಯೇಷಾಂ ನಾನ್ಯತ್ರ ರಮತೇ ಮನಃ ॥೪೦॥

ತಟಾಕಾನ್ಪುಷ್ಕರಿಣ್ಯೋಽಥ ತಥಾರಾಮಾನ್ಕರೋತಿ ಚ ।
ಬನ್ಧಂ ಚ ಸರಿತಾಂ ವೃಕ್ಷಾಂಸ್ತಥಾರೋಪಯತೇ ನರಃ ॥೪೧॥

ಅನುಲೇಪನಪುಷ್ಪಾದಿಭೋಗಭುಗ್ವಾಭಿಜಾಯತೇ ।
ತ್ರಿಪೌರುಷಶ್ಚಾಪಿ ನಿಧಿರ್ನೀಲೋ ನಾಮ್ನೈಷ ಜಾಯತೇ ॥೪೨॥

ರಜಸ್ತಮೋಮಯಶ್ಚಾನ್ಯಃ ಶಙ್ಖಸಞ್ಜ್ಞೋ ಹಿ ಯೋ ನಿಧಿಃ ।
ತೇನಾಪಿ ನೀಯತೇ ವಿಪ್ರ ತದ್ಗುಣಿತ್ವಂ ನಿಧೀಶ್ವರಃ ॥೪೩॥

---

೪೦. ಸೌದೆ–ಮರ ಮುಂತಾದುವುಗಳನ್ನೂ ಜಲದಲ್ಲಿ ಹುಟ್ಟುವ ಇತರ ಪದಾರ್ಥಗಳನ್ನೂ ಸಂಗ್ರಹಿಸಿ ಅವುಗಳ ಕ್ರಯ–ವಿಕ್ರಯಗಳನ್ನು ಮಾಡುವನು. ಬೇರೆ ಯಾವ ವೃತ್ತಿಯಲ್ಲಿಯೂ ಅವನಿಗೆ ಮನವು ಒಪ್ಪುವುದಿಲ್ಲ.

೪೧. ಮತ್ತು ನೀಲನಿಧಿಯಸ್ವಾಮಿಯು ಅಲ್ಲಲ್ಲಿ ಕೆರೆ, ಪುಷ್ಕರಿಣಿ, ಉದ್ಯಾನವನಗಳನ್ನು ನಿರ್ಮಾಣಮಾಡುವನು. ಮತ್ತು ಆ ಮಾನವನು ನದಿಗಳಲ್ಲಿ ಆಣೆಕಟ್ಟುಗಳನ್ನು ಕಟ್ಟಿಸುವನು. ಹಾಗು ಅಲ್ಲಲ್ಲಿ ಗಿಡ–ಮರಗಳನ್ನು ನೆಡಿಸುವನು.

೪೨. ಮತ್ತು ಅಂತಹ ಮಾನವನು ಸುಗಂಧಾನುಲೇಪನ ಪುಷ್ಪ ಮುಂತಾದುವುಗಳಿಂದ ಲಭಿಸುವ ಭೋಗವನ್ನು ಭುಂಜಿಸುವನು. ಇಂತಹ ನೀಲ ಎಂಬ ನಿಧಿಯು ತಾನು ವಶವಾಗಿರುವ ಪುರುಷನಿಂದ ಮೂರು ಮಂದಿಯವರೆಗೆ ಅನುವರ್ತಿಸುವುದು.

೪೩. ವಿಪ್ರನೇ! ಮುಂದೆ ಶಂಖ ಎಂಬ ಹೆಸರಿನ ಮತ್ತೊಂದು ನಿಧಿಯು ರಜಸ್ಸು–ತಮಸ್ಸು ಎಂಬ ಎರಡು ಗುಣಾಂಶಗಳಿಂದ ತುಂಬಿರುವುದು. ಅಂತಹ ನಿಧಿಯ ಸ್ವಾಮಿಯಾದ ಮಾನವನು ರಜೋಗುಣ–ತಮೋಗುಣಗಳ ಪರತಂತ್ರತೆ-ಯನ್ನು ಹೊಂದುವನು.

ಏಕಸ್ಯೈವ ಭವತ್ಯೇಷ ನರಂ ನಾನ್ಯಮುಪೈತಿ ಚ ।
ಯಸ್ಯ ಶಙ್ಖೋ ನಿಧಿಸ್ತಸ್ಯ ಸ್ವರೂಪಂ ಕ್ರೌಷ್ಟುಕೇ ಶೃಣು ॥೪೪॥

ಏಕ ಏವಾತ್ಮನಾ ಸೃಷ್ಟಮನ್ನಂ ಭುಙ್ಕ್ತೇ ತಥಾಪ್ಪರಮ್ ।
ಕದನ್ನಭುಕ್ಪರಿಜನೋ ನ ಚ ಶೋಭನವಸ್ತ್ರಧೃಕ್ ॥೪೫॥

ನ ದದಾತಿ ಸುಹೃದ್ಭಾರ್ಯಾಭ್ರಾತೃಪುತ್ರಸ್ನುಷಾದಿಷು ।
ಸ್ವಪೋಷಣಪರಃ ಶಙ್ಖೀ ನರೋ ಭವತಿ ಸರ್ವದಾ ॥೪೬॥

ಇತ್ಯೇತೇ ನಿಧಯಃ ಖ್ಯಾತಾ ನರಾಣಾಮರ್ಥದೇವತಾಃ ।
ಮಿಶ್ರಾವಲೋಕನಾನ್ಮಿಶ್ರಾಃ ಸ್ವಭಾವಫಲದಾಯಿನಃ ॥೪೭॥

---

೪೪. ಕ್ರೌಷ್ಟುಕಿಯೇ ! ಶಂಖನಿಧಿಯು ಒಂದು ವ್ಯಕ್ತಿಯಲ್ಲಿ ಮಾತ್ರವೇ ಇರುವುದು. ಮತ್ತೊಂದು ವ್ಯಕ್ತಿಯಲ್ಲಿ ಅನುವರ್ತಿಸುವುದಿಲ್ಲ. ಯಾವ ಮಾನವನಲ್ಲಿ ಶಂಖನಿಧಿಯು ವಶವಾಗಿರುವುದೋ ಆ ಮಾನವನ ಸ್ವರೂಪವನ್ನು ಕೇಳು.

೪೫. ಶಂಖನಿಧಿಯ ಸ್ವಾಮಿಯು ತಾನೊಬ್ಬನು ಮಾತ್ರ ತನಗೆ ಏರ್ಪಡಿಸಿದ ಅನ್ನವನ್ನು ಭುಂಜಿಸುವನು. ಹಾಗು ತಾನೊಬ್ಬನು ಮಾತ್ರ ಉತ್ತಮ ವಸ್ತ್ರವನ್ನು ಧರಿಸುವನು. ಅವನ ಪರಿಜನರು ಕದನ್ನವನ್ನು ಭುಂಜಿಸುತ್ತ ಮಲಿನವಸ್ತ್ರಗಳನ್ನು ಧರಿಸಿಕೊಂಡಿರುವರು.

೪೬. ಶಂಖ ನಿಧಿಯ ಸ್ವಾಮಿಯಾದ ಮಾನವನು ಯಾವಾಗಲೂ ಸ್ವಪೋಷಣಮಾತ್ರದಲ್ಲಿ ತತ್ಪರನಾಗಿರುವನು. ಅವನು ತನ್ನ ಮಿತ್ರ, ಭಾರ್ಯಾ, ಭ್ರಾತೃ, ಪುತ್ರ, ಸೊಸೆ ಮುಂತಾದ ಸ್ವಜನರಲ್ಲಿ ಕೂಡ ಉದಾರತೆಯಿಂದ ಭೋಗ್ಯವಸ್ತುಗಳನ್ನು ಕೊಡಲಾರನು.

೪೭. ಈ ರೀತಿಯಾಗಿ ಮಾನವರಿಗೆ ನಾನಾವಿಧವಾದ ಅರ್ಥ-ಭೋಗಗಳನ್ನು ಕೊಡುವ ನಿಧಿ ದೇವತೆಗಳು ನನ್ನಿಂದ ನಿನಗೆ ಹೇಳಲ್ಪಟ್ಟವೆ. ಈ ನಿಧಿಗಳು ಯಥಾಯೋಗ್ಯವಾಗಿ ಸೇರಿ ಮಿಶ್ರದೃಷ್ಟಿಯನ್ನು ಇಟ್ಟರೆ ಅದಕ್ಕೆ ತಕ್ಕಂತೆ ಮಿಶ್ರವಾದ ಫಲವನ್ನು ಕೊಡುವುವು.

ಯಥಾಖ್ಯಾತಸ್ವಭಾವಸ್ತು ಭವತ್ಯೇವ ವಿಲೋಕನಾತ್ ।
ಸರ್ವೇಷಾಮಾಧಿಪತ್ಯೇ ಚ ಶ್ರೀರೇಷಾಂ ದ್ವಿಜ ಪದ್ಮಿನೀ ॥೪೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ನಿಧಿವರ್ಣನಂ ನಾಮ ಪಞ್ಚಷಷ್ಟಿತಮೋಽಧ್ಯಾಯಃ

---

೪೮. ಎಲೈ ದ್ವಿಜನೇ! ನಿಧಿದೇವತೆಯ ದೃಷ್ಟಿಯಿಂದ ಮಾನವನು ಹಿಂದೆ ಹೇಳಿರುವಂತೆ ಆಯಾಯ ಸ್ವಭಾವ-ಫಲಗಳನ್ನು ಹೊಂದುವನು. ಈ ಎಲ್ಲ ನಿಧಿಗಳ ಆಧಿಪತ್ಯದಲ್ಲಿ ಲಕ್ಷ್ಮೀದೇವಿಯು ಇರುವಳು. ಆ ದೇವತೆಯು ಪದ್ಮಿನೀ ವಿದ್ಯಾಸಿದ್ಧಿಯಿಂದ ಪ್ರಸನ್ನಳಾಗುವಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತೈದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಟ್‌ಷಷ್ಟಿತಮೋಽಧ್ಯಾಯಃ

(ವಿಪ್ರಭಾರ್ಯಾಮನ್ವೇಷಯತ ಉತ್ತಮಸ್ಯ ಮುನಿದರ್ಶನಮ್)

ಕ್ರೌಷ್ಟುಕಿರುವಾಚ :—

ವಿಸ್ತರಾತ್ಕಥಿತಂ ಬ್ರಹ್ಮನ್ ಮಮ ಸ್ವಾರೋಚಿಷಂ ತ್ವಯಾ ।
ಮನ್ವನ್ತರಂ ತಥೈವಾಷ್ಟೌ ಯೇ ಪೃಷ್ಟಾ ನಿಧಯೋ ಮಯಾ ||೧||

ಸ್ವಾಯಮ್ಭುವಂ ಪೂರ್ವಮೇವ ಮನ್ವನ್ತರಮುದಾಹೃತಮ್ ।
ಮನ್ವನ್ತರಂ ತೃತೀಯಂ ಮೇ ಕಥಯೌತ್ತಮಸಞ್ಜ್ಞಿತಮ್ ||೨||

ಅರವತ್ತಾರನೆಯ ಅಧ್ಯಾಯ

ಕ್ರೌಷ್ಟುಕಿಯು ಹೇಳಿದನು :—

೧. ಬ್ರಹ್ಮರ್ಷಿಯಾದ ಮಾರ್ಕಂಡೇಯ ಮುನಿಯೇ! ನಿನ್ನಿಂದ ನನಗೆ ಸ್ವಾರೋಚಿಷವೆಂಬ ಮನ್ವಂತರವು ವಿಸ್ತಾರವಾಗಿ ವರ್ಣಿಸಲ್ಪಟ್ಟಿತು. ಹಾಗು ನನ್ನಿಂದ ಪ್ರಶ್ನಿಸಲ್ಪಟ್ಟ ಎಂಟು ನಿಧಿಗಳ ಸ್ವರೂಪ-ಸ್ವಭಾವಗಳು ವಿವರಿಸಲ್ಪಟ್ಟುವು.

೨. ಸ್ವಾಯಂಭುವವೆಂಬ ಮನ್ವಂತರವು ಹಿಂದೆಯೇ ನಿನ್ನಿಂದ ನಿರೂಪಿಸಲ್ಪಟ್ಟಿದೆ. ಈಗ ಉತ್ತಮ ಎಂಬ ರಾಜನ ನಾಮಾಂಕನದಿಂದ ಔತ್ತಮವೆಂದು ಖ್ಯಾತಿಹೊಂದಿದ ಮೂರನೆಯ ಮನ್ವಂತರವನ್ನು ನನಗೆ ಉಪದೇಶಿಸು.

ಮಾರ್ಕಣ್ಡೇಯ ಉವಾಚ :—

ಉತ್ತಾನಪಾದಪುತ್ರೋಽಭೂದುತ್ತಮೋ ನಾಮ ನಾಮತಃ ।
ಸುರುಚ್ಯಾಸ್ತನಯಃ ಖ್ಯಾತೋ ಮಹಾಬಲಪರಾಕ್ರಮಃ ॥೩॥

ಧರ್ಮಾತ್ಮಾ ಚ ಮಹಾತ್ಮಾ ಚ ಪರಾಕ್ರಮಧನೋ ನೃಪಃ ।
ಅತೀತ್ಯ ಸರ್ವಭೂತಾನಿ ಬಭೌ ಭಾನುಪರಾಕ್ರಮಃ ॥೪॥

ಸಮಃ ಶತ್ರೌ ಚ ಮಿತ್ರೇ ಚ ಪರೇ ಪುತ್ರೇ ಚ ಧರ್ಮವಿತ್ ।
ದುಷ್ಟೇ ಚ ಯಮವತ್ಸಾಧೌ ಸೋಮವಚ್ಚ ಮಹಾಮುನೇ ॥೫॥

ಬಾಭ್ರವ್ಯಾಂ ಬಹುಲಾಂ ನಾಮ ಉಪಯೇಮೇ ಸ ಧರ್ಮವಿತ್ ।
ಉತ್ತಾನಪಾದತನಯಃ ಶಚೀಮಿನ್ದ್ರ ಇವೋತ್ತಮಃ ॥೬॥

ಮಾರ್ಕಂಡೇಯ ಮುನಿಯು ಹೇಳಿದನು :—

೩. ಉತ್ತಾನಪಾದ ಎಂಬ ರಾಜನಿಗೆ ಉತ್ತಮಕುಮಾರ ಎಂಬ ಹೆಸರಿನಿಂದ ಪ್ರಸಿದ್ಧನಾದ ಪುತ್ರನು ಇದ್ದನು. ಸುರುಚಿ ಎಂಬ ಜನನಿಯಲ್ಲಿ ಹುಟ್ಟಿದ ಆ ಕುಮಾರನು ಅಧಿಕವಾದ ಬಲ-ಪರಾಕ್ರಮಗಳಿಂದ ಖ್ಯಾತಿಗಳಿಸಿದ್ದನು.

೪. ಸ್ವಭಾವವಾಗಿ ಧರ್ಮಾತ್ಮನೂ, ಮಹಿಮಶಾಲಿಯೂ ಆದ ಕುಮಾರನು ರಾಜನಾಗಿ ಸೂರ್ಯನಂತೆ ಕಂಗೊಳಿಸುವ ತೇಜಃಪ್ರಭಾವಸಂಪನ್ನನಾಗಿ ಸರ್ವಪ್ರಾಣಿಗಳನ್ನು ಹಿಮ್ಮೆಟ್ಟಿಸಿ ಮೆರೆಯುವವನಾದನು.

೫. ಎಲೈ ಮಹಾಮುನಿಯೇ! ಉತ್ತಮನೆಂಬ ಆ ರಾಜನು ಧರ್ಮವೇತ್ತನಾಗಿ ಶತ್ರು-ಮಿತ್ರರಲ್ಲಿಯೂ, ಪರಜನ-ಪುತ್ರರಲ್ಲಿಯೂ ತಾರತಮ್ಯವಿಲ್ಲದಂತೆ ಇದ್ದನು. ದುಷ್ಟರಲ್ಲಿ ಯಮನಂತೆ ಶಿಕ್ಷಕನೂ ಸಾಧುಗಳಲ್ಲಿ ಚಂದ್ರನಂತೆ ರಂಜಕನೂ ಆಗಿದ್ದನು.

೬. ಉತ್ತಾನಪಾದ ರಾಜನ ಪುತ್ರನೂ ಧರ್ಮಜ್ಞನೂ ಆದ ಉತ್ತಮ ಕುಮಾರನು ಇಂದ್ರನು ಶಚೀದೇವಿಯನ್ನು ಹೇಗೋ ಹಾಗೆ ಬಭ್ರುರಾಜನ ಪುತ್ರಿಯಾದ ಬಹುಲಾ ಎಂದು ಸುನಾಮಧೇಯಾಂಕಿತಳಾದ ಕನ್ಯೆಯನ್ನು ಪಾಣಿಗ್ರಹಣಮಾಡಿದನು.

ತಸ್ಯಾಮತೀವ ತಸ್ಯಾಸೀದ್ದ್ವಿಜವರ್ಯ ಮನಃ ಸದಾ ।
ಸ್ನೇಹವಚ್ಛಶಿನೋ ಯದ್ವದ್ರೋಹಿಣ್ಯಾಂ ನಿಹಿತಾಸ್ಪದಮ್ ॥೭॥

ಅನ್ಯಪ್ರಯೋಜನಾಸಕ್ತಿಮುಪೈತಿ ನ ಹಿ ತನ್ಮನಃ ।
ಸ್ವಪ್ನೇ ಚೈವ ತದಾಲಮ್ಬಿ ಮನೋಽಭೂತ್ತಸ್ಯ ಭೂಭೃತಃ ॥೮॥

ಸ ಚ ತಸ್ಯಾಃ ಸುಚಾರ್ವಙ್ಗ್ಯಾ ದರ್ಶನಾದೇವ ಪಾರ್ಥಿವಃ ।
ದದಾತಿ ಸ್ಪರ್ಶನಂ ಗಾತ್ರೇ ಗಾತ್ರಸ್ಪರ್ಶಶ್ಚ ತನ್ಮಯಃ ॥೯॥

ಶ್ರೋತ್ರೋದ್ವೇಗಕರಂ ವಾಕ್ಯಂ ಪ್ರಿಯಮಪ್ಯವನೀಪತೇಃ ।
ತಸ್ಯಾಪಿ ಭೂರಿಸನ್ಮಾನಂ ಮೇನೇ ಪರಿಭವಂ ತತಃ ॥೧೦॥

---

೭. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಚಂದ್ರನಿಗೆ ತನ್ನ ಪ್ರಿಯೆಯಾದ ರೋಹಿಣಿಯಲ್ಲಿದ್ದಂತೆ ಉತ್ತಮಕುಮಾರನಿಗೆ ಬಹುಲಾ ಎಂಬುವಳಲ್ಲಿ ಯಾವಾಗಲೂ ಮಾನಸವು ಅತಿಶಯವಾದ ಪ್ರೀತಿಯಿಂದ ಆಸ್ಪದವನ್ನು ಹೊಂದಿತ್ತು.

೮. ಆದುದರಿಂದ ಉತ್ತಮಕುಮಾರನ ಮನಸ್ಸು ಬೇರೆಯ ಪ್ರಯೋ-ಜನಗಳನ್ನು ಸಾಧಿಸುವ ಉದ್ಯಮಗಳಲ್ಲಿ ಗಮನವನ್ನು ಹೊಂದುತ್ತಿರಲಿಲ್ಲ. ಆ ರಾಜನಿಗೆ ಸ್ವಪ್ನದಲ್ಲಿ ಕೂಡ ಮನಸ್ಸು ಪ್ರಿಯೆಯ ವಿಷಯವಾಗಿ ಇರುತ್ತಿತ್ತು.

೯. ಸುಂದರವಾದ ಅವಯವಗಳಿಂದ ಕೂಡಿದ ಪ್ರಿಯೆಯಲ್ಲಿ ಮುಗ್ಧನಾದ ರಾಜನು ಆಕೆಯ ದರ್ಶನಮಾತ್ರದಿಂದಲೇ ಆಕೆಯ ಬಳಿಗೆ ಹೋಗಿ ಆಲಿಂಗಿಸಿ ಗಾತ್ರಸ್ಪರ್ಶಸುಖವನ್ನು ಕೊಡುತ್ತಿದ್ದನು ಮತ್ತು ಆಕೆಯ ಗಾತ್ರಸ್ಪರ್ಶಸುಖಾನು-ಭವದಲ್ಲಿ ತನ್ಮಯನಾಗುತ್ತಿದ್ದನು.

೧೦. ಆದರೆ ಆತನ ಪ್ರಿಯೆಯು ತನ್ನ ಪ್ರಾಣಪ್ರಿಯನಾದ ರಾಜನ ಪ್ರಿಯವಾದ ಮಾತನ್ನು ಕೂಡ ಕಿವಿಗೆ ಅಹಿತವನ್ನುಂಟುಮಾಡುತ್ತಿರುವ ಕ್ರೂರ-ವಚನದಂತೆ ಕೇಳುತ್ತಿದ್ದಳು. ಅವನ ಮಹತ್ತರವಾದ ಸನ್ಮಾನವನ್ನು ತಾನು ಅವಮಾನವೆಂದು ಗ್ರಹಿಸಿದಳು.

ಅವಮೇನೇ ಸ್ರಜಂ ದತ್ತಾಂ ಶುಭಾನ್ಯಾಭರಣಾನಿ ಚ ।
ಉತ್ತಸ್ಥಾವರ್ಧಪೀತೇವ ಪಿಬತೋಽಸ್ಯ ವರಾಸವಮ್ ॥೧೧॥

ಭುಞ್ಜತಾ ಚ ನರೇನ್ದ್ರೇಣ ಕ್ಷಣಮಾತ್ರಂ ಕರೇ ಧೃತಾ ।
ಬುಭುಜೇ ಸ್ವಲ್ಪಕಂ ಭಕ್ಷ್ಯಂ ದ್ವಿಜ ನಾತಿಮುದಾವತೀ ॥೧೨॥

ಏವಂ ತಸ್ಯಾನುಕೂಲಸ್ಯ ನಾನುಕೂಲಾ ಮಹಾತ್ಮನಃ ।
ಪ್ರಭೂತತರಮತ್ಯರ್ಥಂ ಚಕ್ರೇ ರಾಗಂ ಮಹೀಪತಿಃ ॥೧೩॥

ಅಥ ಪಾನಗತೋ ಭೂಪಃ ಕದಾಚಿತ್ತಾಂ ಮನಸ್ವಿನೀಮ್ ।
ಸುರಾಭೃತಂ ಪಾನಪಾತ್ರಂ ಗ್ರಾಹಯಾಮಾಸ ಸಾದರಃ ॥೧೪॥

---

೧೧. ಪ್ರಿಯನು ಕೊಟ್ಟಿರುವ ದಿವ್ಯ ಕುಸುಮಮಾಲೆಯನ್ನೂ ಮಂಗಳ-ಕರವಾದ ಆಭರಣಗಳನ್ನೂ ತಿರಸ್ಕರಿಸಿದಳು. ಪ್ರಿಯನು ಮದ್ಯವನ್ನು ಕುಡಿಯು-ತ್ತಿರುವಾಗ ಜೊತೆಯಲ್ಲಿ ಅರ್ಧಮಾತ್ರ ಮದ್ಯವನ್ನು ಕುಡಿದಿರುವ ತಾನು ಹಾಗೆಯೇ ಬಿಟ್ಟು ಮೇಲಕ್ಕೆದ್ದಳು.

೧೨. ದ್ವಿಜವರ್ಯನೇ ! ನರೇಂದ್ರನು ಆಹಾರವನ್ನು ಭುಂಜಿಸುತ್ತಿದ್ದ ಹಾಗೆ ಒಂದು ಕ್ಷಣಮಾತ್ರ ಕೈಯಿಂದ ಆಕೆಯು ಹಿಡಿಯಲ್ಪಟ್ಟರೆ ಆಗ ಏನೂ ಪ್ರೀತಿ-ಸಂತೋಷಗಳಿಲ್ಲದೆ ತಾನು ಅಲ್ಪಮಾತ್ರ ಭಕ್ಷ್ಯವನ್ನು ತಿನ್ನುತ್ತಿದ್ದಳು.

೧೩. ಹೀಗೆ ಅನುಕೂಲನಾಗಿರುವ ಆ ಮಹಾತ್ಮನಾದ ಪ್ರಿಯನ ವಿಷಯದಲ್ಲಿ ಪ್ರಿಯೆಯು ಮಾತ್ರ ಅನುಕೂಲತೆಯಿಂದ ವರ್ತಿಸಲಿಲ್ಲ. ಆದರೂ ಪ್ರಿಯನಾದ ರಾಜನು ಮಾತ್ರ ಆಕೆಯಲ್ಲಿ ಅತಿಶಯವಾದ ಅನುರಾಗವನ್ನು ಸಂತತವಾಗಿ ತೋರಿಸುತ್ತಿದ್ದನು.

೧೪. ತರುವಾಯ ಒಂದಾನೊಂದು ಸಮಯದಲ್ಲಿ ಮದ್ಯಪಾನಾಸಕ್ತಿ-ಯನ್ನು ಹೊಂದಿದ ರಾಜನು ಹೆಚ್ಚು ಆದರದಿಂದ ಕೂಡಿದವನಾಗಿ ಮಾನಿನಿಯಾದ ಪ್ರಿಯೆಗೆ ಸುರೆಯನ್ನು ತುಂಬಿ ಪಾವನವಾಗಿರುವ ಮದ್ಯಪಾತ್ರವನ್ನು ಕೈಯಲ್ಲಿ ಕೊಟ್ಟನು.

ಪಶ್ಯತಾಂ ಭೂಮಿಪಾಲಾನಾಂ ವಾರಮುಖ್ಯಾಸಮನ್ವಿತಃ ।
ಪ್ರಗೀಯಮಾನೋ ಮಧುರೈರ್ಗೇಯಗಾಯನತತ್ಪರೈಃ ॥೧೫॥

ಸಾ ತು ನೇಚ್ಛತಿ ತತ್ಪಾತ್ರಮಾದಾತುಂ ತತ್ಪರಾಙ್ಮುಖೀ ।
ಸಮಕ್ಷಮವನೀಶಾನಾಂ ತತಃ ಕ್ರುದ್ಧಃ ಸ ಪಾರ್ಥಿವಃ ॥೧೬॥

ಉವಾಚ ದ್ವಾಃಸ್ಥಮಾಹೂಯ ನಿಶ್ವಸನ್ನುರಗೋ ಯಥಾ ।
ನಿರಾಕೃತಸ್ತಯಾ ದೇವ್ಯಾ ಪ್ರಿಯಯಾ ಪತಿರಪ್ರಿಯಃ ॥೧೭॥

ದ್ವಾಃಸ್ಥೈನಾಂ ದುಷ್ಟಹೃದಯಾಮಾದಾಯ ವಿಜನೇ ವನೇ ।
ಪರಿತ್ಯಜಾಶು ನೈತತ್ತೇ ವಿಚಾರ್ಯಂ ವಚನಂ ಮಮ ॥೧೮॥

---

೧೫. ಆ ಸಮಯದಲ್ಲಿ ಇತರ ಭೂಪಾಲಕರು ನೋಡುತ್ತಿದ್ದರು. ರಾಜನ ಸುತ್ತಲೂ ಉತ್ತಮರಾದ ವೇಶ್ಯಾಸ್ತ್ರೀಯರು ನೆರೆದಿದ್ದರು, ಹಾಗು ಗಾನಯೋಗ್ಯವಾದ ಗೀತೆಗಳನ್ನು ಹಾಡುವುದರಲ್ಲಿ ತತ್ಪರರಾದ ಮಧುರಕಂಠದ ನಾಯಕರಿಂದ ರಾಜನು ಗಾನಮಾಡಲ್ಪಡುತ್ತಿದ್ದನು.

೧೬. ಆದರೆ ಆ ಸಮಯದಲ್ಲಿ ಸಮಸ್ತ ಭೂಪಾಲಕರು ಆ ದೃಶ್ಯವನ್ನು ನೋಡುತ್ತಿರುವ ಹಾಗೆ ಪ್ರಿಯೆಯು ಸುರಾಪಾತ್ರವನ್ನು ತೆಗೆದುಕೊಳ್ಳಲು ಇಷ್ಟವಿಲ್ಲದವಳಾದಳು ಮತ್ತು ಮುಖವನ್ನು ಹಿಂದಕ್ಕೆ ತಿರುಗಿಸಿದಳು. ಆ ಸನ್ನಿವೇಶದಲ್ಲಿ ರಾಜನು ಕೋಪಗೊಂಡನು.

೧೭. ಹೀಗೆ ದೇವಿಯಾದ ಪ್ರಿಯೆಯಿಂದ ನಿರಾಕರಿಸಲ್ಪಟ್ಟು ಆಕೆಗೆ ಅಪ್ರಿಯನಂತೆ ಕಂಡುಬಂದ ಪತಿಯು ಕೂಡಲೆ ಕೋಪದಿಂದ ಹಾವಿನಂತೆ ಉಸಿರನ್ನು ಬಿಡುತ್ತ ದ್ವಾರಪಾಲಕನನ್ನು ಕರೆದು ಆಜ್ಞಾಪಿಸಿದನು.

೧೮. ಎಲೈ ದ್ವಾರಪಾಲಕನೇ ! ದುಷ್ಟಹೃದಯದಿಂದ ಕೂಡಿದ ಈಕೆಯನ್ನು ಕರೆದುಕೊಂಡುಹೋಗಿ ಬೇಗ ನಿರ್ಜನವಾದ ಅರಣ್ಯದಲ್ಲಿ ಬಿಟ್ಟು ಬಾ. ಈ ನನ್ನ ವಚನವನ್ನು ನೀನು ವಿಚಾರಮಾಡಕೂಡದು. ಅದರಂತೆ ವರ್ತಿಸು.

ಮಾರ್ಕಣ್ಡೇಯ ಉವಾಚ :—

ತತೋ ನೃಪಸ್ಯ ವಚನಮವಿಚಾರ್ಯಮವೇಕ್ಷ್ಯ ಸಃ ।
ದ್ವಾಃಸ್ಥಸ್ತತ್ಯಾಜ ತಾಂ ಸುಭ್ರೂಮಾರೋಪ್ಯ ಸ್ಯನ್ದನೇ ವನೇ ॥೧೯॥

ಸಾ ಚ ತಂ ವಿಪಿನೇ ತ್ಯಾಗಂ ನೀತಾ ತೇನ ಮಹೀಭೃತಾ ।
ಅಪಶ್ಯಮಾನಾ ತಂ ಮೇನೇ ಪರಂ ಕೃತಮನುಗ್ರಹಮ್ ॥೨೦॥

ಸೋಽಪಿ ತತ್ರಾನುರಾಗಾರ್ತಿದಹ್ಯಮಾನಾತ್ಮಮಾನಸಃ ।
ಔತ್ತಾನಪಾದಿರ್ಭೂಪಾಲೋ ನಾನ್ಯಾಂ ಭಾರ್ಯಾಮವಿನ್ದತ ॥೨೧॥

ಸಸ್ಮಾರ ತಾಂ ಸುಚಾರ್ವಙ್ಗೀಮಹರ್ನಿಶಮನಿರ್ವೃತಃ ।
ಚಕಾರ ಚ ನಿಜಂ ರಾಜ್ಯಂ ಪ್ರಜಾ ಧರ್ಮೇಣ ಪಾಲಯನ್ ॥೨೨॥

ಮಾರ್ಕಂಡೇಯ ಮುನಿಯು ಇಂತೆಂದನು :—

೧೯. ತರುವಾಯ ಆ ದ್ವಾರಪಾಲಕನು ರಾಜನ ಆಜ್ಞಾವಚನವನ್ನು ವಿಚಾರಮಾಡತಕ್ಕದ್ದಲ್ಲವೆಂದು ತೀರ್ಮಾನಿಸಿ ರಥದಲ್ಲಿ ಕುಳ್ಳಿರಿಸಿ ನಿರ್ಜನವನಕ್ಕೆ ಕರೆದುಕೊಂಡುಹೋಗಿ ಆ ಸುಂದರಿಯಾದ ರಾಣಿಯನ್ನು ಅಲ್ಲಿ ಬಿಟ್ಟುಬಂದನು.

೨೦. ಉತ್ತಮರಾಜನೆಂಬ ತನ್ನ ಪ್ರಿಯನಿಂದ ವನದಲ್ಲಿ ಪರಿತ್ಯಾಗ-ವನ್ನು ಹೊಂದಿದ ಆ ಬಹುಲೆಯೆಂಬ ರಾಜ್ಞಿಯು ನಿರ್ಜನಾರಣ್ಯದಲ್ಲಿ ಪ್ರಿಯನನ್ನು ಕಾಣದಿದ್ದುದರಿಂದ ದೊಡ್ಡ ಅನುಗ್ರಹವಾದಂತೆ ತಿಳಿದುಕೊಂಡಳು.

೨೧. ಉತ್ತಾನಪಾದ ರಾಜನ ಪುತ್ರನಾದ ಆ ಉತ್ತಮ ಕುಮಾರನು ಆಕೆಯಲ್ಲಿ ಇಟ್ಟಿದ್ದ ಅನುರಾಗದಿಂದ ಉಂಟಾದ ಸಹನಾತೀತವಾದ ಪೀಡಾಗ್ನಿ-ಯಿಂದ ಬೆಂದುಹೋದ ತನ್ನ ಮಾನಸವುಳ್ಳವನಾಗಿ ಬೇರೊಬ್ಬಳು ಪತ್ನಿಯನ್ನು ಕಾಮಿಸಲಿಲ್ಲ.

೨೨. ಹಗಲು-ರಾತ್ರಿಯೆನ್ನದೆ ಯಾವಾಗಲೂ ಸ್ವಲ್ಪವೂ ಮನಸ್ಸಿನಲ್ಲಿ ಶಾಂತಿಸುಖವಿಲ್ಲದೆ ಸುಂದರಾಂಗಿಯಾದ ತನ್ನ ಪ್ರಿಯೆಯನ್ನು ಸ್ಮರಿಸಿಕೊಂಡನು. ಮತ್ತು ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತ ನಿಜರಾಜ್ಯವನ್ನು ಶಾಸನ-ಮಾಡಿದನು.

ಪ್ರಜಾಃ ಪಾಲಯತಸ್ತಸ್ಯ ಪಿತುಃ ಪುತ್ರಾನಿವೌರಸಾನ್ ।
ಆಗತ್ಯ ಬ್ರಾಹ್ಮಣಃ ಕಶ್ಚಿದಿದಮಾಹಾರ್ತಮಾನಸಃ ॥೨೩॥

ಬ್ರಾಹ್ಮಣ ಉವಾಚ :—

ಮಹಾರಾಜ ಭೃಶಾರ್ತೋಽಸ್ಮಿ ಶ್ರೂಯತಾಂ ಗದತೋ ಮಮ ।
ನೃಣಾಮಾರ್ತಿಪರಿತ್ರಾಣಮನ್ಯತೋ ನ ನರಾಧಿಪಾತ್ ॥೨೪॥

ಮಮ ಭಾರ್ಯಾ ಪ್ರಸುಪ್ತಸ್ಯ ಕೇನಾಪ್ಯಪಹೃತಾ ನಿಶಿ ।
ಗೃಹದ್ವಾರಮನುದ್ಘಾಟ್ಯ ತಾಂ ಸಮಾನೇತುಮರ್ಹಸಿ ॥೨೫॥

ರಾಜೋವಾಚ :—

ನ ವೇತ್ಸಿ ಕೇನಾಪಹೃತಾ ಕ್ವ ವಾ ನೀತಾ ತು ಸಾ ದ್ವಿಜ ।
ಯತಾಮಿ ವಿಗ್ರಹೇ ಕಸ್ಯ ಕುತೋ ವಾಪ್ಯಾನಯಾಮಿ ತಾಮ್ ॥೨೬॥

---

೨೩. ಹೀಗೆ ತನ್ನಿಂದ ಜನ್ಮವೆತ್ತಿದ ಪುತ್ರರಂತೆ ಪ್ರಜೆಗಳನ್ನು ರಾಜನು ಪಾಲಿಸುತ್ತಿರುವಾಗ ನೊಂದ ಮನಸ್ಸುಳ್ಳ ಒಬ್ಬ ಬ್ರಾಹ್ಮಣನು ಅವನ ಬಳಿಗೆ ಬಂದು ಹೀಗೆ ಹೇಳಿಕೊಂಡನು.

ಬ್ರಾಹ್ಮಣನು ಇಂತೆಂದನು :—

೨೪. ಮಹಾರಾಜನೇ ! ನಾನು ಬಲು ನೊಂದವನಾಗಿದ್ದೇನೆ. ನಾನಾಡುವ ಮಾತನ್ನು ಗಮನವಿಟ್ಟು ಲಾಲಿಸು. ಮಾನವರಿಗೆ ದುಃಖವೊದಗಿದರೆ ರಾಜನನ್ನು ಬಿಟ್ಟು ಮತ್ತಾರಿಂದಲೂ ದುಃಖದಿಂದ ರಕ್ಷಣವು ಒದಗುವುದಿಲ್ಲ.

೨೫. ನಾನು ರಾತ್ರಿವೇಳೆಯಲ್ಲಿ ನಿದ್ರೆಮಾಡುತ್ತಿದ್ದಾಗ ಯಾರೋ ಒಬ್ಬನು ಮನೆಯ ಬಾಗಿಲನ್ನು ಕೂಡ ತೆರೆಯದ ಹಾಗೆ ಬಂದು ನನ್ನ ಭಾರ್ಯೆಯನ್ನು ಅಪಹರಿಸಿಕೊಂಡು ಹೋಗಿರುವನು. ನನಗೆ ಅವಳನ್ನು ತಂದುಕೊಡಲು ನೀನು ಅರ್ಹನಾಗಿದ್ದೀಯೆ.

ರಾಜನು ಇಂತೆಂದನು :—

೨೬. ದ್ವಿಜನೇ ! ಯಾರಿಂದ ಅಪಹರಿಸಲ್ಪಟ್ಟಿರುವಳು ? ಎಲ್ಲಿಗೆ ನಿನ್ನ ಪತ್ನಿಯು ಕರೆದೊಯ್ಯಲ್ಪಟ್ಟಿರುವಳು ? ಇದು ನಿನಗೆ ತಿಳಿಯದೇ ? ನಾನು ಯಾರ ಸಂಗಡ ಕಾದಾಡಿ ಆಕೆಯನ್ನು ತರಲು ಯತ್ನಿಸಲಿ ? ನಾನು ಆಕೆಯನ್ನು ಎಲ್ಲಿಂದ ತಂದುಕೊಡಲಿ ?

ಬ್ರಾಹ್ಮಣ ಉವಾಚ :—

ತಥೈವ ಸ್ಥಗಿತೇ ದ್ವಾರಿ ಪ್ರಸುಪ್ತಸ್ಯ ಗೃಹೇ ಮಮ ।
ಹೃತಾ ಹಿ ಭಾರ್ಯಾ ಕಿಂ ಕೇನೇತ್ಯೇತದ್ವಿಜ್ಞಾಯತೇ ಭವಾನ್॥೨೭॥

ತ್ವಂ ರಕ್ಷಿತಾ ನೋ ನೃಪತೇ ಷಡ್ಭಾಗಾದಾನವೇತನಃ ।
ಧರ್ಮಸ್ಯ ತೇಽತೋ ನಿಶ್ಚಿನ್ತಾಃ ಸ್ವಪನ್ತಿ ಮನುಜಾ ನಿಶಿ ॥೨೮॥

ರಾಜೋವಾಚ :—

ನ ತೇ ದೃಷ್ಟಾ ಮಯಾ ಭಾರ್ಯಾ ಯಾದೃಗ್ರೂಪಾ ಚ ದೇಹತಃ ।
ವಯಶ್ಚೈವ ಸಮಾಖ್ಯಾಹಿ ಕಿಂಶೀಲಾ ಬ್ರಾಹ್ಮಣೀ ಚ ತೇ ॥೨೯॥

ಬ್ರಾಹ್ಮಣನು ಇಂತೆಂದನು :—

೨೭. ನಾನು ಮನೆಯೊಳಗೆ ನಿದ್ರಿಸುತ್ತಿದ್ದಾಗ ಮನೆಯ ಬಾಗಿಲು ಮೊದಲಿನಂತೆಯೇ ಮುಚ್ಚಲ್ಪಟ್ಟಿರುವಾಗಲೇ ನನ್ನ ಪತ್ನಿಯು ಯಾರಿಂದಲೋ ಅಪಹರಿಸಲ್ಪಟ್ಟಿರುವಳು. ನಾನು ಇಷ್ಟನ್ನು ಮಾತ್ರ ತಿಳಿದಿರುವೆನು. ಇದೇಕೆ? ಯಾರಿಂದ ಅಪಹರಿಸಲ್ಪಟ್ಟಳು? ಇದನ್ನೆಲ್ಲ ನೀನು ಅರಿಯಬೇಕು.

೨೮. ಎಲೈ ರಾಜನೇ! ನೀನು ನಮಗೆ ರಕ್ಷಕನಾಗಿರುವೆ. ನಿನ್ನ ಪ್ರಜಾಪಾಲನ ಧರ್ಮಕ್ಕೆ ನೀನು ಪ್ರಜೆಗಳಿಂದ ಆರನೆಯ ಒಂದು ಭಾಗವನ್ನು ವೇತನವನ್ನಾಗಿ ಹೊಂದುತ್ತೀಯೆ. ನಿನ್ನಲ್ಲಿ ರಕ್ಷಣೆಯ ಭಾರವನ್ನು ಒಪ್ಪಿಸಿದ್ದರಿಂದ ರಾತ್ರಿಯಲ್ಲಿ ಮನುಷ್ಯರು ನಿಶ್ಚಿಂತರಾಗಿ ನಿದ್ರಿಸುವರು.

ರಾಜನು ಇಂತೆಂದನು :—

೨೯. ದ್ವಿಜನೇ! ನಾನು ನಿನ್ನ ಭಾರ್ಯೆಯನ್ನು ಎಂದೂ ಕಂಡವನಲ್ಲ. ಅವಳು ದೇಹದಲ್ಲಿ ಎಂತಹ ರೂಪವನ್ನು ಹೊಂದಿರುವಳು? ಅವಳಿಗೆ ವಯಸ್ಸು ಎಷ್ಟು? ಮತ್ತು ಆ ಬ್ರಾಹ್ಮಣಿಯು ಎಂತಹ ಶೀಲದಿಂದಿರುವಳು?

ಬ್ರಾಹ್ಮಣ ಉವಾಚ :—

ಕಠೋರನೇತ್ರಾ ಸಾತ್ಯುಚ್ಚಾ ಹ್ರಸ್ವಬಾಹುಃ ಕೃಶಾನನಾ ।
ಲಮ್ಬೋದರೀ ಹ್ರಸ್ವಸ್ಫಿಕ್ಚ ತಥಾ ಹ್ರಸ್ವಸ್ತನೀ ನೃಪ ॥೩೦॥

ವಿರೂಪರೂಪಾ ಭೂಪಾಲ ನ ನಿನ್ದಾಮಿ ತಥೈವ ತಾಮ್ ।
ವಾಚಿ ಭೂಪಾತಿಪರುಷಾ ನ ಸೌಮ್ಯಾ ಸಾ ಚ ಶೀಲತಃ ॥೩೧॥

ಇತ್ಯಾಖ್ಯಾತಾ ಮಯಾ ಭಾರ್ಯಾ ಸಾ ಕರಾಲನಿರೀಕ್ಷಣಾ ।
ಮನಾಗತೀತಂ ಭೂಪಾಲ ತಸ್ಯಾಶ್ಚ ಪ್ರಥಮಂ ವಯಃ ॥೩೨॥

ತಾದೃಗ್ರೂಪಾ ಹಿ ಮೇ ಭಾರ್ಯಾ ಸತ್ಯಮೇತನ್ಮಯೋದಿತಮ್ ॥೩೩॥

ಬ್ರಾಹ್ಮಣನು ಹೇಳಿದನು :—

೩೦. ರಾಜನೇ! ನನ್ನ ಪತ್ನಿಯು ಕ್ರೂರವಾದ ದೃಷ್ಟಿಯುಳ್ಳವಳೂ, ಹೆಚ್ಚು ಎತ್ತರವುಳ್ಳವಳೂ, ಹ್ರಸ್ವವಾದ ತೋಳುಗಳುಳ್ಳವಳೂ, ಕೃಶವಾದ ಮುಖವುಳ್ಳವಳೂ, ಲಂಬಿಸುವ ಹೊಟ್ಟೆಯಿಂದ ಕೂಡಿದವಳೂ, ಹ್ರಸ್ವವಾದ ಬೆನ್ನುಮೂಳೆಯುಳ್ಳವಳೂ ಮತ್ತು ಹ್ರಸ್ವವಾದ ಸ್ತನಗಳಿಂದ ಕೂಡಿದವಳೂ ಆಗಿದ್ದಾಳೆ.

೩೧. ಎಲೈ ಭೂಪಾಲಕನೇ! ಅವಳು ವಿಕಾರವಾದ ರೂಪದಿಂದ ಕೂಡಿರುವಳು. ಅವಳ ನಿಜರೂಪವನ್ನು ಹೇಳುವೆನು. ಅವಳನ್ನು ಹಾಗೆ ನಿಂದಿಸುತ್ತಿಲ್ಲ. ಮಾತಿನಲ್ಲಿ ಅವಳು ಬಲು ಕ್ರೂರಳಾಗಿರುವಳು. ಶೀಲದಲ್ಲಿಯೂ ಅವಳು ಸೌಮ್ಯರೀತಿಯವಳಲ್ಲ.

೩೨. ವಿಶೇಷವಾಗಿ ಕಠೋರವಾದ ದೃಷ್ಟಿಯಿಂದ ನನ್ನ ಭಾರ್ಯೆಯು ಕೂಡಿರುವಳು. ಹೀಗೆ ಆಕೆಯ ರೂಪವನ್ನು ನಿನಗೆ ಹೇಳಿರುವೆನು. ಎಲೈ ಭೂಪತಿಯೇ! ಆಕೆಗೆ ಬಾಲ್ಯವಯಸ್ಸು ಈಗ ತಾನೇ ಕಳೆದಿರುವುದು.

೩೩. ನನ್ನ ಸತಿಯಲ್ಲಿದ್ದ ಲಕ್ಷಣಗಳನ್ನು ನಿನಗೆ ಹೇಳಿರುವೆನು. ನನ್ನ ಪತ್ನಿಯು ಅಂತೆಯೇ ಇರುವಳು. ನಾನು ಸರಿಯಾಗಿ ಹೇಳಿರುವೆನು. ಇದರಲ್ಲಿ ಸಂಶಯವಿಲ್ಲ.

ರಾಜೋವಾಚ :—

ಅಲಂ ತೇ ಬ್ರಾಹ್ಮಣ ತಯಾ ಭಾರ್ಯಾಮನ್ಯಾಂ ದದಾಮಿ ತೇ ।
ಸುಖಾಯ ಭಾರ್ಯಾ ಕಲ್ಯಾಣೀ ದುಃಖಹೇತುರ್ಹಿ ತಾದೃಶೀ ॥೩೪॥

ಅಲ್ಪಾ ಕುರೂಪತಾ ವಿಪ್ರ ಕಾರಣಂ ಶೀಲಮುತ್ತಮಮ್ ।
ರೂಪಶೀಲವಿಹೀನಾ ಯಾ ತ್ಯಾಜ್ಯಾ ತೇಽನ್ಯೇನ ಸಾ ಹೃತಾ ॥೩೫॥

ಬ್ರಾಹ್ಮಣ ಉವಾಚ :—

ರಕ್ಷ್ಯಾ ಭಾರ್ಯಾ ಮಹೀಪಾಲ ಇತಿ ಚ ಶ್ರುತಿರುತ್ತಮಾ ।
ಭಾರ್ಯಾಯಾಂ ರಕ್ಷ್ಯಮಾಣಾಯಾಂ ಪ್ರಜಾ ಭವತಿ ರಕ್ಷಿತಾ ॥೩೬॥

ರಾಜನು ಇಂತೆಂದನು :—

೩೪. ಬ್ರಾಹ್ಮಣನೇ! ಅಂತಹ ಭಾರ್ಯೆಯು ನಿನಗೆ ಬೇಡ. ನಾನು ನಿನಗೆ ಬೇರೊಬ್ಬಳು ಭಾರ್ಯೆಯನ್ನು ಏರ್ಪಡಿಸುವೆನು. ಕಲ್ಯಾಣವಾದ ರೂಪ-ಶೀಲಗಳಿಂದ ಕೂಡಿದವಳು ಪತಿಗೆ ಸುಖಕರಳಾಗಿರುವಳು. ನೀನು ಹೇಳಿದಂತಹ ಭಾರ್ಯೆಯು ದುಃಖಕ್ಕೆ ಕಾರಣಳಾಗಿರುವಳು.

೩೫. ವಿಪ್ರನೇ! ಕುರೂಪತೆಯು ಸಣ್ಣ ವಿಷಯವು. ಅದನ್ನು ಹೆಚ್ಚಾಗಿ ಗಣಿಸಬಾರದು. ಸಾಧುವಾದ ಶೀಲವು ಉತ್ತಮವಾಗಿರಬೇಕು. ರೂಪ-ಶೀಲಗಳೆರಡರಿಂದಲೂ ಹೀನಳಾದ ನಿನ್ನ ಭಾರ್ಯೆಯು ತ್ಯಾಜ್ಯಳಾಗಿರುವಳು. ಹೀಗಿರಲು ಅವಳು ಯಾರಿಂದಲೋ ಅಪಹರಿಸಲ್ಪಟ್ಟಳು.

ಬ್ರಾಹ್ಮಣನು ಹೇಳಿದನು :—

೩೬. ರಾಜ್ಯಪಾಲಕನಾದ ರಾಜನೇ! ಭಾರ್ಯೆಯನ್ನು ಅವಶ್ಯವಾಗಿ ರಕ್ಷಿಸಬೇಕೆಂದು ಉತ್ತಮವಾದ ಶ್ರುತಿಯು ಹೇಳುತ್ತಿರುವುದು. ಭಾರ್ಯೆಯನ್ನು ರಕ್ಷಣಮಾಡುವುದರಿಂದ ಪ್ರಜೆಯು ಸುರಕ್ಷಿತವಾಗಿರುವುದು.

ಆತ್ಮಾ ಹಿ ಜಾಯತೇ ತಸ್ಯಾಂ ಸಾ ರಕ್ಷ್ಯಾತೋ ನರೇಶ್ವರ ।
ಪ್ರಜಾಯಾಂ ರಕ್ಷ್ಯಮಾಣಾಯಾಮಾತ್ಮಾ ಭವತಿ ರಕ್ಷಿತಃ ॥೩೭॥

ತಸ್ಯಾಮರಕ್ಷ್ಯಮಾಣಾಯಾಂ ಭವಿತಾ ವರ್ಣಸಙ್ಕರಃ ।
ಸ ಪಾತಯೇನ್ಮಹೀಪಾಲ ಪೂರ್ವಾನ್ ಸ್ವರ್ಗಾದಧಃ ಪಿತೄನ್ ॥೩೮॥

ಅನುಜ್ಞಾಯ ಗುರುಂ ರಾಜನ್ ದತ್ತ್ವಾನ್ಯಾಂ ಜಾತವೇದಸೇ ।
ಸಮಿಧಂ ತು ಮಯಾ ಭಾರ್ಯಾ ವೃತೇಯಂ ಕರ್ಕಶಾ ಯತಃ॥೩೯॥

ಕಥಮೇತಾಂ ವಿಹಾಯಾನ್ಯಭಾರ್ಯಯಾ ಸಹ ಸಂಚರೇ ॥೪೦॥

---

೩೭. ಎಲೈ ನರಪತಿಯೇ! ಭಾರ್ಯೆಯಲ್ಲಿ ತನ್ನ ಆತ್ಮನು ಪುತ್ರರೂಪದಿಂದ ಜನ್ಮವೆತ್ತುವನು. ಈ ಕಾರಣದಿಂದ ಭಾರ್ಯೆಯನ್ನು ಅವಶ್ಯವಾಗಿ ರಕ್ಷಿಸಬೇಕು. ಜನಿಸುವ ಪ್ರಜೆಯನ್ನು ಚನ್ನಾಗಿ ರಕ್ಷಿಸಿದರೆ ಆತ್ಮವನ್ನು ರಕ್ಷಿಸಿದಂತಾಗುವುದು.

೩೮. ಪ್ರಜಾಪಾಲಕನಾದ ರಾಜನೇ! ಭಾರ್ಯೆಯನ್ನು ರಕ್ಷಿಸದೇ ಬಿಟ್ಟರೆ ವರ್ಣಧರ್ಮಗಳ ಸಂಕರವಾಗುವುದು. ಹಾಗೆ ಸಂಭವಿಸುವ ವರ್ಣಸಂಕರವು ಪೂರ್ವಿಕರಾದ ಪಿತೃಗಳನ್ನು ಸ್ವರ್ಗಲೋಕದಿಂದ ನರಕಕ್ಕೆ ತಳ್ಳುವುದು.

೩೯. ರಾಜನೇ ! ಗುರುಕುಲದಲ್ಲಿ ವೇದಾಭ್ಯಾಸವು ಮುಗಿದ ತರುವಾಯ ಗುರುವಿನಿಂದ ಸಮ್ಮತಿಯನ್ನು ಪಡೆದು ಸಮಾವರ್ತನದ ಅಂಗವಾಗಿ ಅಗ್ನಿಯಲ್ಲಿ ಸಮಿತ್ತನ್ನು ಹೋಮಮಾಡಿ ಕರ್ಕಶವಾದ ಶೀಲವುಳ್ಳ ಈ ಭಾರ್ಯೆಯು ನನ್ನಿಂದ ವರಿಸಲ್ಪಟ್ಟಿರುವಳು.

೪೦. ಆದಕಾರಣ ಗುರುಕುಲದಿಂದ ನಿವೃತ್ತಿಯನ್ನು ಹೊಂದಿ ಯಥಾವಿಧಿಯಾಗಿ ವರಿಸಿ ಪಾಣಿಗ್ರಹಣಮಾಡಿಕೊಂಡಿರುವ ಈ ಭಾರ್ಯೆಯನ್ನು ಬಿಟ್ಟು ನಾನು ಬೇರೊಬ್ಬಳ ಸಂಗಡ ಹೇಗೆ ಕೂಡಿರಲಿ?

ಗೃಹ್ಯಧರ್ಮೋ ಯತೋ ಬ್ರಹ್ಮ ಪ್ರಾಪ್ಯತೇ ಶಾಶ್ವತಂ ನರೈಃ ।
ಪೂರ್ವೋಢಯಾ ತು ಧರ್ಮೇಣ ಗೃಹೀ ಕುರ್ವನ್ನ ಸೀದತಿ ॥೪೧॥

ತ್ಯಕ್ತ್ವಾ ತಾಂ ಚ ಕ್ರಿಯಾಂ ಕುರ್ವನ್ನೈವ ಕರ್ಮಫಲಂ ಲಭೇತ್ ।
ಅಗ್ನಿನಾ ಸಹ ಯಾ ನೂನಂ ಸಾಜಗಾಮ ಗೃಹಂ ಶುಭಾ ॥೪೨॥

ಧರ್ಮಸ್ಯ ಗ್ರಹಣೇ ಸಾ ತು ಪೂರ್ವೋಢೈವ ಪ್ರಶಸ್ಯತೇ ।
ಶಠಾಯಾಚಾರಣಾತ್ತಸ್ಯಾ ಜಾಯತೇ ವರ್ಣಸಙ್ಕರಃ ॥೪೩॥

ಧರ್ಮಹಾನಿಶ್ಚಾನುದಿನಮಭಾರ್ಯಸ್ಯ ಭವೇನ್ಮಮ ।
ನಿತ್ಯಕ್ರಿಯಾಣಾಂ ವಿಭ್ರಂಶಾತ್ಸ ಚಾಪಿ ಪತನಾಯ ಮೇ ॥೪೪॥

---

೪೧. ಮಾನವರಿಗೆ ಯಥಾವಿಧಿಯಾಗಿ ನಡೆಯುವ ಗೃಹ್ಯಧರ್ಮವು ಬ್ರಹ್ಮಪ್ರಾಪ್ತಿಯನ್ನು ಉಂಟುಮಾಡುವುದು. ಗೃಹಸ್ಥಾಶ್ರಮಿಯಾದ ಮಾನವನು ಧರ್ಮದಿಂದ ಮೊದಲು ವಿವಾಹಮಾಡಿಕೊಂಡಿರುವ ಸತಿಯೊಡನೆ ಗೃಹ್ಯಧರ್ಮವನ್ನು ಆಚರಿಸಿಕೊಂಡಿದ್ದರೆ ಭ್ರಷ್ಟನಾಗುವುದಿಲ್ಲ.

೪೨. ಅಂತಹವಳನ್ನು ಬಿಟ್ಟು ಶಾಸ್ತ್ರೀಯ ಕರ್ಮಗಳನ್ನು ಮಾಡಿದರೆ ಆ ಸತ್ಕರ್ಮಗಳ ಫಲವನ್ನು ಗೃಹಸ್ಥನು ಹೊಂದುವುದಿಲ್ಲ. ನನ್ನ ಮಂಗಳಕರಳಾದ ಆ ಭಾರ್ಯೆಯು ಗೃಹ್ಯಾಗ್ನಿಯ ಜೊತೆಗೆ ನನ್ನ ಮನೆಗೆ ನಿಜವಾಗಿ ಬಂದವಳಾಗಿರುವಳು.

೪೩. ನಾನು ಧರ್ಮವನ್ನು ಆಚರಿಸಿದರೆ ಮೊದಲು ವಿವಾಹಿತಳಾದ ಆಕೆಯೇ ಸಹಧರ್ಮಚಾರಿಣಿಯಾಗಿರುವುದು ಪ್ರಶಸ್ತವು. ವಿರೂಪಳೆಂದು ಅವಳನ್ನು ತ್ಯಜಿಸಿದರೆ ಆಗ ವರ್ಣಸಂಕರಕ್ಕೆ ಅವಕಾಶವಾಗುವುದು.

೪೪. ಹಾಗೆ ಅಂತಹ ಭಾರ್ಯೆಯನ್ನು ಕಳೆದುಕೊಂಡ ನನಗೆ ಪ್ರತಿದಿನದ ಧರ್ಮಾನುಷ್ಠಾನಕ್ಕೆ ಭಂಗವುಂಟಾಗುವುದು. ಹಾಗೆ ನಿತ್ಯಕರ್ಮಗಳ ಲೋಪವುಂಟಾಗುವುದು ನನ್ನ ಪತನಕ್ಕೆ ಕಾರಣವು.

ತಸ್ಯಾಂ ಚ ಪೃಥಿವೀಪಾಲ ಭವಿತ್ರೀ ಮಮ ಸನ್ತತಿಃ ।
ತವ ಷಡ್ಭಾಗದಾತ್ರೀ ಸಾ ಭವಿತ್ರೀ ಧರ್ಮಹೇತುಕೀ ॥೪೫॥

ತದೇತತ್ತೇ ಮಯಾಖ್ಯಾತಾ ಪತ್ನೀ ಯಾ ಮೇ ಹೃತಾ ಪ್ರಭೋ ।
ತಾಂ ಸಮಾನಯ ರಕ್ಷಾಯಾಂ ಭವಾನಧಿಕೃತೋ ಯತಃ ॥೪೬॥

ಮಾರ್ಕಣ್ಡೇಯ ಉವಾಚ :—

ಸ ತಸ್ಯೈವಂ ವಚಃ ಶ್ರುತ್ವಾ ವಿಮೃಶ್ಯ ಚ ನರೇಶ್ವರಃ ।
ಸರ್ವೋಪಕರಣೈರ್ಯುಕ್ತಮಾರುರೋಹ ಮಹಾರಥಮ್ ॥೪೭॥

ಇತಶ್ಚೇತಶ್ಚ ತೇನಾಸೌ ಪರಿಬಭ್ರಾಮ ಮೇದಿನೀಮ್ ।
ದದರ್ಶ ಚ ಮಹಾರಣ್ಯೇ ತಾಪಸಾಶ್ರಮಮುತ್ತಮಮ್ ॥೪೮॥

---

೪೫. ರಾಜ್ಯಪರಿಪಾಲಕನಾದ ರಾಜನೇ ! ಆಕೆಯಲ್ಲಿ ನನಗೆ ಪವಿತ್ರವಾದ ಸಂತತಿಯು ಹುಟ್ಟುವುದು. ನಿನ್ನ ಪ್ರಜಾವರ್ಗಕ್ಕೆ ಸೇರುವ ನನ್ನ ಸಂತತಿಯು ಧರ್ಮಪುರುಷನೊಪ್ಪುವಂತಹ ಆರನೆಯ ಒಂದು ಭಾಗವನ್ನು ನಿನಗೆ ಒಪ್ಪಿಸುವುದು.

೪೬. ಎಲೈ ಪ್ರಭುವೇ ! ಹೀಗೆ ನನ್ನ ಪತ್ನಿಯು ಅಪಹರಿಸಲ್ಪಟ್ಟಿರುವಳು. ನಾನು ಅವೆಲ್ಲವನ್ನೂ ನಿನಗೆ ತಿಳಿಸಿರುವೆನು. ಪ್ರಜೆಗಳ ರಕ್ಷಣೆಯ ಭಾರವನ್ನು ನೀನು ಹೊತ್ತಿರುತ್ತೀಯೆ. ಅಪಹೃತಳಾದ ನನ್ನ ಪತ್ನಿಯನ್ನು ತಂದುಕೊಡು.

ಮಾರ್ಕಂಡೇಯ ಮುನಿಯು ಮುಂದೆ ಹೇಳಿದನು :—

೪೭. ಆ ರಾಜನು ಬ್ರಾಹ್ಮಣನ ಎಲ್ಲ ಮಾತುಗಳನ್ನು ಕೇಳಿ ಸಾವಧಾನವಾಗಿ ವಿಮರ್ಶಮಾಡಿ ಕೂಡಲೆ ಸಮಸ್ತ ಉಪಕರಣಗಳಿಂದ ಕೂಡಿರುವ ತನ್ನ ದೊಡ್ಡ ರಥವನ್ನು ಏರಿದನು.

೪೮. ಮತ್ತು ಆ ರಾಜನು ಒಂದೆಡೆಯಿಂದ ಮತ್ತೊಂದೆಡೆಗೆ ಹೋಗುತ್ತ ಆ ರಥದ ಮೂಲಕ ಭೂಮಿಯನ್ನು ಸುತ್ತಿದನು. ಹಾಗೆಯೇ ಒಂದು ಮಹತ್ತಾದ ಅರಣ್ಯದಲ್ಲಿ ಸರ್ವೋತ್ತಮವಾದ ತಪಸ್ವಿಯ ಆಶ್ರಮವನ್ನು ಕಂಡನು.

ಅವತೀರ್ಯ ಚ ತತ್ರಾಸೌ ಪ್ರವಿಶ್ಯ ದದೃಶೇ ಮುನಿಮ್ ।
ಕೌಶ್ಯಾಂ ವೃಷ್ಯಾಂ ಸಮಾಸೀನಂ ಜ್ವಲನ್ತಮಿವ ತೇಜಸಾ ॥೪೯॥

ಸ ದೃಷ್ಟ್ವಾ ನೃಪತಿಂ ಪ್ರಾಪ್ತಂ ಸಮುತ್ಥಾಯ ತ್ವರಾನ್ವಿತಃ ।
ಸಂಮಾನ್ಯ ಸ್ವಾಗತೇನೈವ ಶಿಷ್ಯಮಾಹಾರ್ಘ್ಯಮಾನಯ ॥೫೦॥

ತಮಾಹ ಶಿಷ್ಯಃ ಶನಕೈರ್ದಾತವ್ಯೋಽರ್ಘ್ಯೋಽಸ್ಯ ಕಿಂ ಮುನೇ ।
ತದಾಜ್ಞಾಪಯ ಸಞ್ಚಿನ್ತ್ಯ ತವಾಜ್ಞಾಂ ಹಿ ಕರೋಮ್ಯಹಮ್ ॥೫೧॥

ತತೋಽವಗತವೃತ್ತಾನ್ತೋ ಭೂಪತೇಸ್ತಸ್ಯ ಸ ದ್ವಿಜಃ ।
ಸಮ್ಭಾಷಾಸನದಾನೇನ ಚಕ್ರೇ ಸಮ್ಮಾನಮಾತ್ಮವಾನ್ ॥೫೨॥

---

೪೯. ಆ ಆಶ್ರಮದ ಬಳಿಯಲ್ಲಿ ರಾಜನು ರಥದಿಂದ ಇಳಿದು ಆಶ್ರಮದ ಒಳಗೆ ಹೋಗಿ ತೇಜೋಮಂಡಲದಿಂದ ಜ್ವಲಿಸುವಂತಿದ್ದ, ದರ್ಭಾಸನದಲ್ಲಿ ಕುಳಿತಿರುವ ಮುನಿಯನ್ನು ನೋಡಿದನು.

೫೦. ಆ ಮುನಿಯು ರಾಜನು ಬಂದಿರುವನೆಂದು ತಿಳಿದು ಕೂಡಲೆ ತ್ವರೆಯಿಂದ ಕೂಡಿದವನಾಗಿ ಮೇಲಕ್ಕೆ ಎದ್ದು ಸ್ವಾಗತ ವಚನದಿಂದ ರಾಜನನ್ನು ಸನ್ಮಾನಮಾಡಿ ಶಿಷ್ಯನನ್ನು ಕುರಿತು ರಾಜನ ಸತ್ಕಾರಕ್ಕೆ ಅರ್ಘ್ಯಸಾಮಗ್ರಿಯನ್ನು ತರುವಂತೆ ಹೇಳಿದನು.

೫೧. ಆಗ ಶಿಷ್ಯನು ಗುರುವಿಗೆ ಮೆಲ್ಲಗೆ ಹೇಳಿದನು--ಮುನಿಯೇ! ಈ ರಾಜನಿಗೆ ಯಥಾವಿಧಿಯಾದ ಅರ್ಘ್ಯಸತ್ಕಾರವನ್ನು ಕೊಡಬೇಕೆ? ಇದನ್ನು ಯೋಚಿಸಿ ಆಜ್ಞಾಪಿಸು. ನಾನು ನಿನ್ನ ಆಜ್ಞೆಯಂತೆ ನಡೆದುಕೊಳ್ಳುವೆನು.

೫೨. ತರುವಾಯ ದ್ವಿಜವರ್ಯನಾದ ಆ ಮುನಿಯು ಧ್ಯಾನದೃಷ್ಟಿಯಿಂದ ಆ ರಾಜನ ವೃತ್ತಾಂತವನ್ನು ಅರಿತವನಾಗಿ ಜಾಗರೂಕತೆಯಿಂದ ವರ್ತಿಸುತ್ತ ರಾಜನಿಗೆ ಸಂಭಾಷಣ-ಆಸನದಾನ ಮುಂತಾದ ಬಗೆಯಿಂದ ಸನ್ಮಾನವನ್ನು ಮಾಡಿದನು.

ಋಷಿರುವಾಚ :—

ಕಿಂ ನಿಮಿತ್ತಮಿಹಾಯಾತೋ ಭವಾನ್ ಕಿಂ ತೇ ಚಿಕೀರ್ಷಿತಮ್ ।
ಉತ್ತಾನಪಾದತನಯಂ ವೇದ್ಮಿ ತ್ವಾಮುತ್ತಮಂ ನೃಪ ॥೫೩॥

ರಾಜೋವಾಚ :—

ಬ್ರಾಹ್ಮಣಸ್ಯ ಗೃಹಾದ್ಭಾರ್ಯಾ ಕೇನಾಪ್ಯಪಹೃತಾ ಮುನೇ ।
ಅವಿಜ್ಞಾತಸ್ವರೂಪೇಣ ತಾಮನ್ವೇಷ್ಟುಮಿಹಾಗತಃ ॥೫೪॥

ಪೃಚ್ಛಾಮಿ ಯತ್ತ್ವೇ ತನ್ಮೇ ತ್ವಂ ಪ್ರಣತಸ್ಯಾನುಕಮ್ಪಯಾ ।
ಅಭ್ಯಾಗತಸ್ಯಾಥ ಗೃಹಂ ಭಗವನ್ವಕ್ತುಮರ್ಹಸಿ ॥೫೫॥

ಋಷಿರುವಾಚ :—

ಪೃಚ್ಛ ಮಾಮವನೀಪಾಲ ಯತ್ಪ್ರಷ್ಟವ್ಯಮಶಙ್ಕಿತಃ ।
ವಕ್ತವ್ಯಂ ಚೇತ್ತವ ಮಯಾ ಕಥಯಿಷ್ಯಾಮಿ ತತ್ತ್ವತಃ ॥೫೬॥

ಋಷಿಯು ಹೀಗೆ ಪ್ರಶ್ನೆಮಾಡಿದನು :—

೫೩. ಎಲೈ ರಾಜನೇ! ನೀನು ಉತ್ತಾನಪಾದರಾಜನ ಪುತ್ರನಾದ ಉತ್ತಮಕುಮಾರನೆಂದು ನಾನು ತಿಳಿದಿರುವೆನು. ನೀನು ಇಲ್ಲಿಗೆ ಯಾವ ಕಾರಣ-ದಿಂದ ಬಂದಿದ್ದೀಯೆ? ನಿನಗೆ ಮಾಡಬೇಕೆಂದಿರುವ ಇಷ್ಟವೇನಿದೆ?

ರಾಜನು ಇಂತೆಂದನು :—

೫೪. ಮುನಿಯೇ! ಒಬ್ಬ ಬ್ರಾಹ್ಮಣನ ಮನೆಯಿಂದ ಅವನ ಪತ್ನಿಯು ರೂಪ-ದೇಶಗಳೊಂದೂ ತಿಳಿಯದಿರುವ ಯಾರೋ ಒಬ್ಬ ದುರಾತ್ಮನಿಂದ ಅಪಹ-ರಿಸಲ್ಪಟ್ಟಿರುವಳು. ಅವಳನ್ನು ಹುಡುಕುವುದಕ್ಕೆ ನಾನು ಇಲ್ಲಿಗೆ ಬಂದಿರುವೆನು.

೫೫. ಪೂಜ್ಯನಾದ ಮುನಿಯೇ! ನಾನು ಒಂದು ವಿಷಯವನ್ನು ನಿನ್ನಲ್ಲಿ ಪ್ರಶ್ನೆಮಾಡಲಿರುವೆನು. ನಿನ್ನ ಮನೆಗೆ ಅಭ್ಯಾಗತನಾಗಿ ಬಂದ, ಮತ್ತು ವಿನಯ-ದಿಂದ ನಮಸ್ಕರಿಸಿರುವ ನನ್ನಲ್ಲಿ ದಯೆಯಿಂದ ನೀನು ಅದನ್ನು ಹೇಳಲು ಅರ್ಹ-ನಾಗಿದ್ದೀಯೆ.

ಋಷಿಯು ಹೇಳಿದನು :—

೫೬. ಎಲೈ ಭೂಪತಿಯೇ! ನೀನು ಏನು ಕೇಳಬೇಕೆಂದಿರುವೆಯೋ ಅದನ್ನು ನಿಶ್ಶಂಕನಾಗಿ ಕೇಳು. ನಾನು ನಿನಗೆ ಅದನ್ನು ಹೇಳಬೇಕೆಂದು ಕೋರು-ವುದಾದರೆ ತಾತ್ತ್ವಿಕವಾಗಿ ಎಲ್ಲವನ್ನೂ ಹೇಳುವೆನು.

ರಾಜೋವಾಚ :—

ಗೃಹಾಗತಾಯ ಯೋ ಮಹ್ಯಂ ಪ್ರಥಮೋ ದರ್ಶನೇ ಮುನೇ ।
ತ್ವಯಾ ಸಮುದ್ಯತೋ ದಾತುಂ ಕಥಂ ಸೋಽರ್ಘ್ಯೋ ನಿವರ್ತಿತಃ ॥೫೭॥

ಋಷಿರುವಾಚ :—

ತ್ವದ್ದರ್ಶನೇನ ರಭಸಾದಾಜ್ಞಪ್ತೋಽಯಂ ಮಯಾ ನೃಪ ।
ಯದಾ ತದಾಹಮೇತೇನ ಶಿಷ್ಯೇಣ ಪ್ರತಿಬೋಧಿತಃ ॥೫೮॥

ಏಷ ವೇತ್ತಿ ಜಗತ್ಯತ್ರ ಮತ್ಪ್ರಸಾದಾದನಾಗತಮ್ ।
ಯಥಾಹಂ ಸಮತೀತಂ ಚ ವರ್ತಮಾನಂ ಚ ಸರ್ವತಃ ॥೫೯॥

ಆಲೋಚ್ಯಾಜ್ಞಾಪಯೇತ್ಯುಕ್ತೇ ತತೋ ಜ್ಞಾತಂ ಮಯಾಪಿ ತತ್ ।
ತತೋ ನ ದತ್ತವಾನರ್ಘ್ಯಮಹಂ ತುಭ್ಯಂ ವಿಧಾನತಃ ॥೬೦॥

ರಾಜನು ಹೇಳಿದನು :—

೫೭. ಪೂಜ್ಯನಾದ ಮುನಿಯೇ! ನಾನು ನಿನ್ನ ಆಶ್ರಮಕ್ಕೆ ಬಂದೊಡನೆ ಮೊದಲು ನೀನು ನನ್ನನ್ನು ನೋಡಿದ ಕೂಡಲೆ ಅರ್ಘ್ಯವನ್ನು ಕೊಡಲು ಸಿದ್ಧನಾದೆ. ಆದರೆ ಅನಂತರ ಅರ್ಘ್ಯಸತ್ಕಾರವು ಏಕೆ ನಿಲ್ಲಿಸಲ್ಪಟ್ಟಿತು?

ಮುನಿಯು ಇಂತೆಂದನು :—

೫೮. ಎಲೈ ರಾಜನೇ! ಯಾವಾಗ ನಿನ್ನನ್ನು ಕಂಡೊಡನೆ ರಭಸದಿಂದ ನಾನು ಅರ್ಘ್ಯಸತ್ಕಾರವನ್ನು ಸಿದ್ಧಗೊಳಿಸಲು ಆಜ್ಞಾಪಿಸಿದೆನೋ ಆಗ ಈ ಶಿಷ್ಯನಿಂದ ನಾನು ಎಚ್ಚರಿಸಲ್ಪಟ್ಟವನಾದೆನು.

೫೯. ಈ ಶಿಷ್ಯನು ನನ್ನ ಅನುಗ್ರಹಪ್ರಭಾವದಿಂದ ನಾನು ಹೇಗೋ ಹಾಗೆ ಈ ಜಗತ್ತಿನಲ್ಲಿರುವ ಭೂತ-ಭವಿಷ್ಯ-ವರ್ತಮಾನಕಾಲದ ಸಮಸ್ತ ವಿಷಯ-ಗಳನ್ನು ಅರಿತಿರುವನು.

೬೦. ಈ ಶಿಷ್ಯನು "ಗುರುವೇ! ಆಲೋಚನಮಾಡಿ ಆಜ್ಞಾಪಿಸು" ಎನ್ನುತ್ತಲೇ ನನಗೆ ಎಲ್ಲ ವಿಷಯವು ತಿಳಿಯಿತು. ಆದುದರಿಂದ ನಾವು ನಿನಗೆ ಯಥಾವಿಧಿಯಾಗಿ ಅರ್ಘ್ಯಸತ್ಕಾರವನ್ನು ಒಪ್ಪಿಸಲಿಲ್ಲ.

ಸತ್ಯಂ ರಾಜಂಸ್ತ್ವಮರ್ಘ್ಯಾರ್ಹಃ ಕುಲೇ ಸ್ವಾಯಮ್ಭುವಸ್ಯ ಚ ।
ತಥಾಪಿ ನಾರ್ಘ್ಯಯೋಗ್ಯಂ ತ್ವಾಂ ಮನ್ಯಾಮೋ ವಯಮುತ್ತಮಮ್ ॥೩೧॥

ರಾಜೋವಾಚ :—

ಕಿಂ ಕೃತಂ ಹಿ ಮಯಾ ಬ್ರಹ್ಮನ್ ಜ್ಞಾನಾದಜ್ಞಾನತೋಽಪಿ ವಾ ।
ಯೇನ ತ್ವತ್ತೋಽರ್ಘ್ಯಮರ್ಹಾಮಿ ನಾಹಮಭ್ಯಾಗತಶ್ಚಿರಾತ್ ॥೩೨॥

ಋಷಿರುವಾಚ :—

ಕಿಂ ವಿಸ್ಮೃತಂ ತೇ ಯತ್ಪತ್ನೀ ತ್ವಯಾ ತ್ಯಕ್ತಾ ಚ ಕಾನನೇ ।
ಪರಿತ್ಯಕ್ತಸ್ತಯಾ ಸಾರ್ಧಂ ತ್ವಯಾ ಧರ್ಮೋ ನೃಪಾಖಿಲಃ ॥೩೩॥

---

೩೧. ಎಲೈ ರಾಜನೇ ! ಸ್ವಾಯಮ್ಭುವ ಮನುವಿನ ವಂಶದಲ್ಲಿ ಜನಿಸಿರುವ ನೀನು ನಿಜವಾಗಿಯೂ ಅರ್ಘ್ಯಸತ್ಕಾರಕ್ಕೆ ಅರ್ಹನಾಗಿದ್ದೀಯೆ. ಆದರೂ ನಾವು ನಿನ್ನನ್ನು ಅರ್ಘ್ಯಪೂಜೆಗೆ ಉತ್ತಮಪಾತ್ರನಲ್ಲವೆಂದು ತಿಳಿಯುತ್ತೇವೆ.

ರಾಜನು ಇಂತೆಂದನು :—

೩೨. ಎಲೈ ಬ್ರಾಹ್ಮಣವರ್ಯನೇ ! ಜ್ಞಾನ ಅಥವಾ ಅಜ್ಞಾನಗಳಿಂದ ನನ್ನಿಂದ ಏನು ತಪ್ಪು ಮಾಡಲ್ಪಟ್ಟಿರುವುದು ? ಯಾವ ಕಾರಣದಿಂದ ಚಿರಕಾಲ-ದಿಂದೀಚೆಗೆ ಅಭ್ಯಾಗತನಾದ ನಾನು ನಿನ್ನಿಂದ ಅರ್ಘ್ಯಪೂಜೆಗೆ ಅರ್ಹನಲ್ಲದವ-ನಾಗಿದ್ದೇನೆ ?

ಮುನಿಯು ಹೀಗೆಂದನು :—

೩೩. ಎಲೈ, ರಾಜನೇ ! ನಿನ್ನಿಂದ ನಿನ್ನ ಧರ್ಮಪತ್ನಿಯು ಕಾಡಿನಲ್ಲಿ ತ್ಯಜಿಸಲ್ಪಟ್ಟಿರುವಳು. ಅದು ನಿನಗೆ ಮರೆತುಹೋಯಿತೆ ? ಹಾಗೆ ಪತ್ನಿಯನ್ನು ಬಿಟ್ಟು ನಿನ್ನಿಂದ ಅವಳ ಜೊತೆಯಲ್ಲಿ ನಿನ್ನ ಸಂಪೂರ್ಣವಾದ ಸ್ವಧರ್ಮವು ತ್ಯಜಿಸಲ್ಪಟ್ಟಂತೆ ಆಗಿರುವುದು.

ಪಕ್ಷೇಣ ಕರ್ಮಣೋ ಹಾನ್ಯಾ ಪ್ರಯಾತ್ಯಸ್ಪರ್ಶತಾಂ ನರಃ ।
ಕಿಮಸ್ಯ ವಾರ್ಷಿಕೀ ಯಸ್ಯ ಹಾನಿಸ್ತೇ ನಿತ್ಯಕರ್ಮಣಃ ||೬೪||

ಪತ್ನ್ಯಾನುಕೂಲಯಾ ಭಾವ್ಯಂ ಯಥಾಶೀಲೇಽಪಿ ಭರ್ತರಿ ।
ದುಃಶೀಲಾಪಿ ತಥಾ ಭಾರ್ಯಾ ಪೋಷಣೀಯಾ ನರೇಶ್ವರ ||೬೫||

ಪ್ರತಿಕೂಲಾ ಹಿ ಸಾ ಪತ್ನೀ ತಸ್ಯ ವಿಪ್ರಸ್ಯ ಯಾ ಹೃತಾ ।
ತಥಾಪಿ ಧರ್ಮಕಾಮೋಽಸೌ ತ್ವಾಮುದ್ಯೋತಿತವಾನ್ನೃಪ ||೬೬||

ಚಲತಃ ಸ್ಥಾಪಯಸ್ಯನ್ಯಾನ್ ಸ್ವಧರ್ಮೇಷು ಮಹೀಪತೇ ।
ತ್ವಾಂ ಸ್ವಧರ್ಮಾದ್ಧಿ ಚಲಿತಂ ಕೋಽಪರಃ ಸ್ಥಾಪಯಿಷ್ಯತಿ ||೬೭||

ದ್ವಿಪೇ ಕಡಙ್ಗರೀಯೋ ವಾ ರಾಜ್ಞಿ ಚಾನ್ಯಾಯವರ್ತಿನಿ ।
ಪಾಪಕೃತ್ಸು ಚ ವಿದ್ವತ್ಸು ನಿಯನ್ತಾ ಜನ್ತುರತ್ರ ಕಃ ||೬೮||

---

೬೪. ಮಾನವನು ಒಂದು ಪಕ್ಷ (ಅರ್ಧಮಾಸ)ದಲ್ಲಿ ನಿತ್ಯಕರ್ಮವನ್ನು ತ್ಯಜಿಸುವುದರಿಂದ ಸ್ಪರ್ಶಕ್ಕೆ ಅನರ್ಹನಾಗುವನು. ಹೀಗಿರಲು ವರ್ಷಗಟ್ಟಲೆಯಾಗಿ ನಿತ್ಯಕರ್ಮಕ್ಕೆ ಹಾನಿಯುಂಟಾಗಿರುವ ನಿನಗೆ ಏನಾದೀತು ?

೬೫. ಎಲೈ ರಾಜನೇ! ಪತಿಯು ಎಂತಹ ಶೀಲವುಳ್ಳವನಾದರೂ ಕೂಡ ಅವನಲ್ಲಿ ಪತ್ನಿಯು ಅನುಕೂಲಳಾಗಿರಬೇಕು. ಹಾಗು ಭಾರ್ಯೆಯು ದುಃಶೀಲವುಳ್ಳವಳಾಗಿದ್ದರೂ ಪತಿಯಿಂದ ಪೋಷಿಸಲ್ಪಡಬೇಕು.

೬೬. ಉತ್ತಮರಾಜನೇ! ಆ ವಿಪ್ರನಿಗೆ ಪ್ರತಿಕೂಲಸ್ವಭಾವವುಳ್ಳ ಪತ್ನಿಯು ಯಾರಿಂದಲೊ ಅಪಹರಿಸಲ್ಪಟ್ಟಿರುವಳು. ಆದರೂ ಧರ್ಮಕಾಮನಾದ ವಿಪ್ರನು ಅವಳನ್ನು ಅನ್ವೇಷಣಮಾಡಲು ನಿನ್ನನ್ನು ಪ್ರಾರ್ಥಿಸಿಕೊಂಡಿರುವನು.

೬೭. ಎಲೈ ಭೂಪಾಲಕನೇ! ಸ್ವಧರ್ಮದಿಂದ ಚಲಿಸುತ್ತಿರುವ ಇತರರನ್ನು ನೀನು ಮತ್ತೆ ಸ್ವಧರ್ಮಗಳಲ್ಲಿ ಸ್ಥಾಪಿಸುತ್ತೀಯೆ, ಸ್ವಧರ್ಮದಿಂದ ಚಲಿಸುವ ನಿನ್ನನ್ನು ಮತ್ತೆ ಸ್ವಧರ್ಮಪರನನ್ನಾಗಿ ಮತ್ತಾರು ಸ್ಥಾಪಿಸುವರು ?

೬೮. ಆನೆಯು ಗದ್ದೆ-ಹೊಲಗಳಿಗೆ ನುಗ್ಗುವ ಹಾಗೆ ಹುಚ್ಚಿಗೆದ್ದರೆ, ರಾಜನು ಅನ್ಯಾಯಪ್ರವೃತ್ತನಾದರೆ, ಮತ್ತು ವಿದ್ವಾಂಸರು ಪಾಪಕರ್ಮಗಳಲ್ಲಿ ತೊಡಗಿದರೆ ಅವರನ್ನು ನಿಯಮಿಸುವವನು ಮತ್ತಾರು ?

ಮಾರ್ಕಣ್ಡೇಯ ಉವಾಚ :—

ವಿಲಕ್ಷ್ಯಃ ಸ ಮಹೀಪಾಲ ಇತ್ಯುಕ್ತಸ್ತೇನ ಧೀಮತಾ ।
ತಥೇತ್ಯುಕ್ತ್ವಾ ಚ ಪಪ್ರಚ್ಛ ಹೃತಾಂ ಪತ್ನೀಂ ದ್ವಿಜನ್ಮನಃ ॥೧೯॥

ಭಗವನ್ ಕೇನ ನೀತಾ ಸಾ ಪತ್ನೀ ವಿಪ್ರಸ್ಯ ಕುತ್ರ ವಾ ।
ಅತೀತಾನಾಗತಂ ವೇತ್ತಿ ಜಗತ್ಯವಿತಥಂ ಭವಾನ್ ॥೨೦॥

ಋಷಿರುವಾಚ :—

ತಾಂ ಜಹಾರಾದ್ರಿತನಯೋ ಬಲಾಕೋ ನಾಮ ರಾಕ್ಷಸಃ ।
ದ್ರಕ್ಷ್ಯಸೇ ಚಾದ್ಯ ತಾಂ ಭೂಪ ಉತ್ಪಲಾವತಕೇ ವನೇ ॥೨೧॥

ಮಾರ್ಕಂಡೇಯ ಮುನಿಯು ಹೇಳಿದನು :—

೧೯. ಪ್ರಾಜ್ಞನಾದ ಮುನಿಯಿಂದ ಈ ರೀತಿಯಾಗಿ ನುಡಿಯಲ್ಪಟ್ಟು ಲಜ್ಜೆಯಿಂದ ಬೇಸರಹೊಂದಿರುವ ಆ ರಾಜನು ಹಾಗಾಗಲಿ ಎಂದು ಹೇಳಿ ಅಪಹರಿಸಲ್ಪಟ್ಟ ವಿಪ್ರಪತ್ನಿಯ ವಿಷಯವಾಗಿ ಪ್ರಶ್ನೆಮಾಡಿದನು.

೨೦. ಪೂಜ್ಯನಾದ ಮುನಿಯೇ! ವಿಪ್ರನ ಆ ಪತ್ನಿಯು ಯಾರಿಂದ ಅಪಹರಿಸಲ್ಪಟ್ಟಿರುವಳು? ಅವಳೆಲ್ಲಿರುವಳು? ನೀನು ಈ ಜಗತ್ತಿನಲ್ಲಿರುವ ಭೂತ-ಭವಿಷ್ಯಗಳೆಲ್ಲವನ್ನೂ ಪರಮಾರ್ಥವಾಗಿ ಅರಿತಿದ್ದೀಯೆ.

ಋಷಿಯು ಹೇಳಿದನು :—

೨೧. ಭೂಪತಿಯೇ! ಆ ವಿಪ್ರಪತ್ನಿಯನ್ನು ಅದ್ರಿ ಎಂಬುವನ ಪುತ್ರನೂ ಬಲಾಕ ಎಂಬ ನಾಮಾಂಕನವುಳ್ಳವನೂ ಆದ ಒಬ್ಬ ರಾಕ್ಷಸನು ಅಪಹರಿಸಿರುವನು. ಇಂದು ಅವಳನ್ನು ಉತ್ಪಲಾವತಕ ಎಂಬ ವನದಲ್ಲಿ ನೀನು ಕಾಣುತ್ತೀಯೆ.

ಗಚ್ಛ ಸಂಯೋಜಯಾಶು ತ್ವಂ ಭಾರ್ಯಯಾ ಹಿ ದ್ವಿಜೋತ್ತಮಮ್।
ಮಾ ಪಾಪಾಸ್ಪದತಾಂ ಯಾತು ತ್ವಮಿವಾಸೌ ದಿನೇ ದಿನೇ ॥೭೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಔತ್ತಮೇ ಮನ್ವನ್ತರೇ ಋಷಿದರ್ಶನಂ ನಾಮ ಷಟ್‌ಷಷ್ಟಿತಮೋಽಧ್ಯಾಯಃ

---

೭೨. ನೀನು ಇಲ್ಲಿಂದ ಹೊರಡು. ಆ ದ್ವಿಜೋತ್ತಮನನ್ನು ಭಾರ್ಯೆಯೊಡನೆ ಸೇರಿರುವಂತೆ ಬೇಗ ಮಾಡು. ನಿನ್ನ ಹಾಗೆ ಆ ವಿಪ್ರನು ಪ್ರತಿದಿನದಲ್ಲಿಯೂ ಪಾಪಗಳಿಗೆ ಗುರಿಯಾಗುತ್ತಿರುವುದು ಬೇಡ.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತಾರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತಷಷ್ಟಿತಮೋಽಧ್ಯಾಯಃ

(ಬ್ರಾಹ್ಮಣಭಾರ್ಯಾನಯನಮ್)

ಮಾರ್ಕಣ್ಡೇಯ ಉವಾಚ :—

ಅಥಾರುರೋಹ ಸ್ವರಥಂ ಪ್ರಣಿಪತ್ಯ ಮಹಾಮುನಿಮ್ ।
ತೇನಾಖ್ಯಾತಂ ವನಂ ತಚ್ಚ ಪ್ರಯಯಾವುತ್ಪಲಾವತಮ್ ॥೧॥

ಯಥಾಖ್ಯಾತಸ್ವರೂಪಾಂ ಚ ಭಾರ್ಯಾಂ ಭರ್ತುರ್ದ್ವಿಜಸ್ಯ ತಾಮ್ ।
ಭಕ್ಷಯನ್ತೀಂ ದದರ್ಶಾಥ ಶ್ರೀಫಲಾನಿ ನರೇಶ್ವರಃ ॥೨॥

ಅರವತ್ತೇಳನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ತರುವಾಯ ಉತ್ತಮರಾಜನು ಆ ಮಹರ್ಷಿಯನ್ನು ವಂದಿಸಿ ತನ್ನ ರಥವನ್ನು ಏರಿ ಅಲ್ಲಿಂದ ಹೊರಟನು. ಆ ಮುನಿಯಿಂದ ನಿರ್ದೇಶಿಸಲ್ಪಟ್ಟ ಉತ್ಪಲಾವತಕವೆಂಬ ವನಕ್ಕೆ ತೆರಳಿದನು.

೨. ರಾಜನು ಆ ವನದಲ್ಲಿ ಪತಿಯಿಂದ ಹಿಂದೆ, ಹೇಳಲ್ಪಟ್ಟಿರುವಂತೆ ಸಮಗ್ರಲಕ್ಷಣ-ಸ್ವರೂಪಗಳಿಂದ ಕೂಡಿದ, ಬಿಲ್ವಫಲಗಳನ್ನು ತಿನ್ನುತ್ತಿರುವ ಆ ವಿಪ್ರನ ಭಾರ್ಯೆಯನ್ನು ಕಂಡನು.

ಪಪ್ರಚ್ಛ ಚ ಕಥಂ ಭದ್ರೇ ತ್ವಮೇತದ್ವನಮಾಗತಾ ।
ಸ್ಫುಟಂ ಬ್ರವೀಹಿ ವೈಶಾಲೇರಪಿ ಭಾರ್ಯಾ ಸುಶರ್ಮಣಃ ॥೩॥

ಬ್ರಾಹ್ಮಣ್ಯುವಾಚ :—

ಸುತಾಹಮತಿರಾತ್ರಸ್ಯ ದ್ವಿಜಸ್ಯ ವನವಾಸಿನಃ ।
ಪತ್ನೀ ವಿಶಾಲಪುತ್ರಸ್ಯ ಯಸ್ಯ ನಾಮ ತ್ವಯೋದಿತಮ್ ॥೪॥

ಸಾಹಂ ಹೃತಾ ಬಲಾಕೇನ ರಾಕ್ಷಸೇನ ದುರಾತ್ಮನಾ ।
ಪ್ರಸುಪ್ತಾ ಭವನಸ್ಯಾನ್ತರ್ಭ್ರಾತೃಮಾತೃವಿಯೋಜಿತಾ ॥೫॥

ಭಸ್ಮೀಭವತು ತದ್ರಕ್ಷೋ ಯೇನಾಸ್ಮ್ಯೇವಂ ವಿಯೋಜಿತಾ ।
ಮಾತ್ರಾ ಭ್ರಾತೃಭಿರನ್ಯೈಶ್ಚ ತಿಷ್ಠಾಮ್ಯತ್ರ ಸುದುಃಖಿತಾ ॥೬॥

---

೩. ಮತ್ತು ರಾಜನು ಇಂತು ಪ್ರಶ್ನಿಸಿದನು :—ಎಲೈ ಮಂಗಳಸ್ವರೂಪಳಾದ ನಾರಿಯೇ! ವಿಶಾಲ ಎಂಬುವನ ಪುತ್ರನಾದ ಸುಶರ್ಮ ಎಂಬ ವಿಪ್ರನ ಪತ್ನಿಯಾದ ನೀನು ಈ ವನಕ್ಕೆ ಏಕೆ ಬಂದೆ? ಇದನ್ನು ಸ್ಪಷ್ಟವಾಗಿ ಹೇಳು.

ವಿಪ್ರಪತ್ನಿಯು ಹೇಳಿದಳು :—

೪. ನಾನು ಅರಣ್ಯದಲ್ಲಿ ವಾಸಮಾಡುತ್ತಿರುವ ಅತಿರಾತ್ರ ಎಂಬ ದ್ವಿಜನ ಪುತ್ರಿಯೂ ವಿಶಾಲ ಎಂಬ ದ್ವಿಜನ ಪುತ್ರನ ಧರ್ಮಪತ್ನಿಯೂ ಆಗಿರುವೆನು. ನನ್ನ ಪತಿದೇವನ ನಾಮಧೇಯವು ನಿನ್ನಿಂದ ಹೇಳಲ್ಪಟ್ಟಿರುವುದು.

೫. ನಾನು ಜನನೀ-ಸಹೋದರರಿಂದ ವಿಯುಕ್ತಳಾಗಿ ಪತಿಗೃಹದಲ್ಲಿ ಮನೆಯೊಳಗೆ ನಿದ್ರಿಸುತ್ತಿದ್ದಹಾಗೆ ದುರಾತ್ಮನಾದ ಬಲಾಕ ಎಂಬ ರಾಕ್ಷಸನಿಂದ ಬಲಾತ್ಕಾರದಿಂದ ಅಪಹರಿಸಲ್ಪಟ್ಟಿರುವೆನು.

೬. ಹೀಗಾಗಿ ನಾನು ಜನನೀ-ಸಹೋದರ ಮತ್ತು ಇತರ ಸಮಸ್ತ ಬಂಧುವರ್ಗದಿಂದ ವಿಯುಕ್ತಳಾಗಿ ಈ ವನಪ್ರದೇಶದಲ್ಲಿ ದುಃಖಪಡುತ್ತಿರುವೆನು. ಯಾರಿಂದ ನಾನು ಹೀಗಾಗಿರುವೆನೋ ಆ ರಾಕ್ಷಸನು ಭಸ್ಮವಾಗಿ ಹೋಗಲಿ.

ಅಸ್ಮಿನ್ವನೇಽತಿಗಹನೇ ಯೇನಾನೀಯಾಹಮುಜ್ಝಿತಾ ।
ನ ವೇದ್ಮಿ ಕಾರಣಂ ಕಿಂ ತನ್ನೋಪಭುಙ್ಕ್ತೇ ನ ಖಾದತಿ ॥೭॥

ರಾಜೋವಾಚ :-

ಅಪಿ ತಜ್ಜ್ಞಾಯತೇ ರಕ್ಷಸ್ತ್ವಾಮುತ್ಸೃಜ್ಯ ಕ್ವ ವೈ ಗತಮ್ ।
ಅಹಂ ಭರ್ತ್ರಾ ತವೈವಾತ್ರ ಪ್ರೇಷಿತೋ ದ್ವಿಜನನ್ದಿನಿ ॥೮॥

ಬ್ರಾಹ್ಮಣ್ಯುವಾಚ :—

ಅಸ್ಯೈವ ಕಾನನಸ್ಯಾನ್ತಃ ಸ ತಿಷ್ಠತಿ ನಿಶಾಚರಃ ।
ಪ್ರವಿಶ್ಯ ಪಶ್ಯತು ಭವಾನ್ನ ಬಿಭೇತಿ ತತೋ ಯದಿ ॥೯॥

---

೭. ಆ ರಾಕ್ಷಸನಿಂದ ಅಪಹರಿಸಲ್ಪಟ್ಟ ನಾನು ಇಲ್ಲಿಗೆ ತಂದು ಈ ಗಹನವಾದ ಅರಣ್ಯದಲ್ಲಿ ಬಿಡಲ್ಪಟ್ಟಿರುವೆನು. ಆ ರಾಕ್ಷಸನು ಅದೇಕೆ ಮಾಡಿ-ದನೋ ಆ ಕಾರಣವನ್ನು ನಾನರಿಯೆನು. ಅವನು ನನ್ನಲ್ಲಿ ರತಿಸುಖವನ್ನು ಬಯಸುವುದಿಲ್ಲ. ನನ್ನನ್ನು ತಿನ್ನುವುದೂ ಇಲ್ಲ.

ರಾಜನು ಹೀಗೆಂದನು :—

೮. ಎಲೈ ದ್ವಿಜಪುತ್ರಿಯೇ! ಆ ರಾಕ್ಷಸನು ನಿನ್ನನ್ನು ಇಲ್ಲಿ ಬಿಟ್ಟು ಎಲ್ಲಿಗೆ ಹೋಗಿರುವನೆಂಬುದು ನಿನಗೆ ಗೊತ್ತೆ? ನಾನು ನಿನಗೋಸ್ಕರ ನಿನ್ನ ಪತಿ-ಯಿಂದ ಕಳುಹಿಸಲ್ಪಟ್ಟು ಇಲ್ಲಿಗೆ ಬಂದಿರುವೆನು.

ಬ್ರಾಹ್ಮಣಪತ್ನಿಯು ಹೇಳಿದಳು :—

೯. ಆ ರಾಕ್ಷಸನು ಇದೇ ಅರಣ್ಯದ ಮಧ್ಯದಲ್ಲಿ ವಾಸಮಾಡುತ್ತಿರು-ವನು. ಆ ರಾಕ್ಷಸನಿಗೆ ನೀನು ಭಯಪಡದಿದ್ದರೆ ಈ ಕಾಡಿನೊಳಗೆ ಹೊಕ್ಕು ಅವನನ್ನು ನೋಡು.

ಮಾರ್ಕಣ್ಡೇಯ ಉವಾಚ :—

ಪ್ರವಿವೇಶ ತತಃ ಸೋಽಥ ತಯಾ ವರ್ತ್ಮನಿ ದರ್ಶಿತೇ ।
ದದೃಶೇ ಪರಿವಾರೇಣ ಸಮವೇತಂ ಚ ರಾಕ್ಷಸಮ್ ॥೧೦॥

ದೃಷ್ಟಮಾತ್ರೇ ತತಸ್ತಸ್ಮಿಂಸ್ತ್ವರಮಾಣಃ ಸ ರಾಕ್ಷಸಃ ।
ದೂರಾದೇವ ಮಹೀಂ ಮೂರ್ಧ್ನಾ ಸ್ಪೃಶನ್ ಪಾದಾನ್ತಿಕಂ ಯಯೌ ॥೧೧॥

ರಾಕ್ಷಸ ಉವಾಚ :—

ಮಮಾತ್ರಾಗಚ್ಛತಾ ಗೇಹಂ ಪ್ರಸಾದಸ್ತೇ ಮಹಾನ್ ಕೃತಃ ।
ಪ್ರಶಾಧಿ ಕಿಂ ಕರೋಮ್ಯೇಷ ವಸಾಮಿ ವಿಷಯೇ ತವ ॥೧೨॥

ಅರ್ಘ್ಯಂ ಚೇಮಂ ಪ್ರತೀಚ್ಛ ತ್ವಂ ಸ್ಥೀಯತಾಂ ಚೇದಮಾಸನಮ್ ।
ವಯಂ ಭೃತ್ಯಾ ಭವಾನ್ ಸ್ವಾಮೀ ದೃಢಮಾಜ್ಞಾಪಯಸ್ವ ಮಾಮ್ ॥೧೩॥

ಮಾರ್ಕಂಡೇಯ ಮುನಿಯು ಹೇಳಿದನು :—

೧೦. ತರುವಾಯ ನಿರ್ಭಯನಾದ ರಾಜನು ವಿಪ್ರಪತ್ನಿಯಿಂದ ವನಮಧ್ಯಕ್ಕೆ ದಾರಿಯು ತೋರಿಸಲ್ಪಡಲಾಗಿ ಹಾಗೆಯೇ ಹೋಗಿ ಅಲ್ಲಿ ಪರಿವಾರದಿಂದ ಕೂಡಿರುವ ಆ ರಾಕ್ಷಸನನ್ನು ಕಂಡನು.

೧೧. ರಾಜನು ರಾಕ್ಷಸನ ದೃಷ್ಟಿಗೆ ಬೀಳುತ್ತಿರುವಷ್ಟರಲ್ಲಿ ಆ ರಾಕ್ಷಸನು ತ್ವರೆಪಡುತ್ತ ದೂರದಲ್ಲಿಯೆ ತಲೆಬಾಗಿಸಿ ನೆಲ ಮುಟ್ಟುವಂತೆ ನಮಸ್ಕಾರಮಾಡಿ ರಾಜನ ಚರಣಸನ್ನಿಧಿಗೆ ಬಂದನು.

ರಾಕ್ಷಸನು ಹೀಗೆಂದನು :—

೧೨. ಎಲೈ, ರಾಜನೇ ! ನನ್ನ ಮನೆಗೆ ನೀನು ಬಂದಿರುವುದರಿಂದ ನಿನ್ನಿಂದ ನನಗೆ ಮಹತ್ತಾದ ಅನುಗ್ರಹಮಾಡಲ್ಪಟ್ಟಂತೆ ಆಗಿದೆ. ನಿನ್ನ ದೇಶದಲ್ಲಿ ವಾಸಮಾಡುವ ನಾನು ನಿನ್ನ ಸೇವಕನಾಗಿರುವೆನು. ನಾನೇನು ಮಾಡಲಿ ? ನನಗೆ ಆಜ್ಞೆ ಕೊಡು.

೧೩. ನೀನು ಈ ಅರ್ಘ್ಯಪೂಜೆಯನ್ನು ಸ್ವೀಕರಿಸು. ಈ ಆಸನದಲ್ಲಿ ಕುಳಿತುಕೋ. ನಾವು ನಿನ್ನ ಭೃತ್ಯರಾಗಿರುವೆವು. ನೀನು ನಮ್ಮ ಒಡೆಯನು. ನನಗೆ ಸೇವೆಮಾಡುವಂತೆ ಆಜ್ಞೆಮಾಡು. ಸಂಶಯಪಡಬೇಡ.

ರಾಜೋವಾಚ :—

ಕೃತಮೇವ ತ್ವಯಾ ಸರ್ವಂ ಸರ್ವಾ ಮೇಽಪಚಿತಿಃ ಕೃತಾ ।
ಕಿಮರ್ಥಂ ಬ್ರಾಹ್ಮಣವಧೂಸ್ತ್ವಯಾನೀತಾ ನಿಶಾಚರ ॥೧೪॥

ನೇಯಂ ಸುರೂಪಾ ಸನ್ತ್ಯನ್ಯಾ ಭಾರ್ಯಾರ್ಥಂ ಚೇದ್ಧೃತಾ ತ್ವಯಾ।
ಭಕ್ಷ್ಯಾರ್ಥಂ ಚೇತ್ಕಥಂ ನಾತ್ತಾ ತ್ವಯೈತತ್ಕಥ್ಯತಾಂ ಮಮ ॥೧೫॥

ರಾಕ್ಷಸ ಉವಾಚ :—

ನ ವಯಂ ಮಾನುಷಾಹಾರಾ ಅನ್ಯೇ ತೇ ನೃಪ ರಾಕ್ಷಸಾಃ ।
ಸುಕೃತಸ್ಯ ಫಲಂ ಯತ್ತು ತದಶ್ನೀಮೋ ವಯಂ ನೃಪ ॥೧೬॥

ಸುಕೃತಸ್ಯ ಫಲಂ ಯತ್ತು ತತ್ತೇ ವಕ್ಷ್ಯಾಮ್ಯಹಂ ನೃಪ ।
ರಾಕ್ಷಸೀಂ ಯೋನಿಮಾಪನ್ನಃ ಕ್ರೂರಾಂ ಲೋಕಭಯಙ್ಕರೀಮ್ ॥೧೭॥

ರಾಜನು ಹೀಗೆ ಹೇಳಿದನು :—

೧೪. ಎಲೈ, ರಾಕ್ಷಸನೇ! ನನಗೆ ನೀನು ಮಾಡಬೇಕಾದುದನ್ನೆಲ್ಲ ಮಾಡಿದಂತಾಯಿತು. ನನಗೆ ನೀನು ಎಲ್ಲ ಸತ್ಕಾರವನ್ನು ಮಾಡಿರುತ್ತೀಯೆ. ಈ ವಿಪ್ರಪತ್ನಿಯನ್ನು ಏಕೆ ಅಪಹರಿಸಿ ತಂದಿದ್ದೀಯೆ?

೧೫. "ಭಾರ್ಯೆಯನ್ನಾಗಿ ಭುಂಜಿಸಲು ನೀನು ಈಕೆಯನ್ನು ಅಪಹರಿಸಿದ್ದೀಯೆ" ಎನ್ನುವುದಾದರೆ ಇವಳು ಅಂತಹ ರೂಪವತಿಯಾಗಿಲ್ಲ. ರೂಪವತಿಯರಾದ ಇತರ ಅಂಗನೆಯರು ನಿನ್ನ ಬಳಿಯಲ್ಲಿರುವರು. ಭಕ್ಷಿಸಲು ಈಕೆಯನ್ನು ತಂದಿದ್ದರೆ ಇದುವರೆಗೆ ಏಕೆ ಭಕ್ಷಿಸಲಿಲ್ಲ? ಇದನ್ನು ನನಗೆ ಹೇಳು.

ರಾಕ್ಷಸನು ಹೇಳಿದನು :—

೧೬. ಎಲೈ ರಾಜನೇ! ನಾವು ಮನುಷ್ಯರನ್ನು ತಿನ್ನುವವರಲ್ಲ. ಮನುಷ್ಯರನ್ನು ತಿನ್ನುವ ರಾಕ್ಷಸರು ಬೇರೆ ಇರುವರು. ನಾವು ನಮ್ಮ ಹಿಂದಿನ ಸುಕೃತದಿಂದ ಲಭ್ಯವಾದ ಫಲವೇನಿದೆಯೋ ಅದನ್ನು ಮಾತ್ರ ಭುಂಜಿಸುತ್ತಿರುವೆವು.

೧೭. ಎಲೈ, ರಾಜನೇ! ಲೋಕಕ್ಕೆ ಭಯಂಕರವಾದ ಮತ್ತು ಕ್ರೂರವಾದ ರಾಕ್ಷಸ ಜನ್ಮವನ್ನು ಹೊಂದಿರುವ ನನ್ನಲ್ಲಿ ಸುಕೃತಫಲವಾಗಿ ತಿನ್ನಲು ಒದಗುವುದೇನಿದೆಯೋ ಅದನ್ನು ನಿನಗೆ ಹೇಳುವೆನು.

ಸ್ವಭಾವಂ ಚ ಮನುಷ್ಯಾಣಾಂ ಯೋಷಿತಾಂ ಚ ವಿಮಾನಿತಾಃ ।
ನಾಮಿಷಂ ಚ ಸಮಶ್ನೀಮೋ ನ ವಯಂ ಜನ್ತುಖಾದಕಾಃ ॥೧೮॥

ಯದಸ್ಮಾಭಿರ್ನೃಣಾಂ ಕ್ಷಾನ್ತಿರ್ಭುಕ್ತಾ ಕ್ರುಧ್ಯನ್ತಿ ತೇ ಸದಾ ।
ಭುಕ್ತೇ ದುಷ್ಟೇ ಸ್ವಭಾವೇ ಚ ಗುಣವನ್ತೋ ಭವನ್ತಿ ಚ ॥೧೯॥

ಸನ್ತಿ ನಃ ಪ್ರಮದಾ ಭೂಪ ರೂಪೇಣಾಪ್ಸರಸಾಂ ಸಮಾಃ ।
ರಾಕ್ಷಸ್ಯಸ್ತಾಸು ತಿಷ್ಠತ್ಸು ಮಾನುಷೀಷು ರತಿಃ ಕಥಮ್ ॥೨೦॥

ರಾಜೋವಾಚ :—

ಯದ್ಯೇಷಾ ನೋಪಭೋಗಾಯ ನಾಹಾರಾಯ ನಿಶಾಚರ ।
ಗೃಹಂ ಪ್ರವಿಶ್ಯ ವಿಪ್ರಸ್ಯ ತತ್ಕಿಮೇಷಾ ಹೃತಾ ತ್ವಯಾ ॥೨೧॥

---

೧೮. ಅಲ್ಲಲ್ಲಿ ಅವಮಾನ ಹೊಂದಿದವರಾಗಿ ನಾವು ಪುರುಷರ ಮತ್ತು ಸ್ತ್ರೀಯರ ಸ್ವಭಾವವನ್ನು ತಿಂದುಹಾಕುವೆವು. ನಾವು ಮಾಂಸವನ್ನು ತಿನ್ನುವುದಿಲ್ಲ. ಹಾಗು ನಾವು ಪ್ರಾಣಿಗಳನ್ನು ತಿನ್ನುವವರಲ್ಲ.

೧೯. ನಮ್ಮಿಂದ ಮಾನವರಲ್ಲಿದ್ದ ಕ್ಷಮಾಗುಣವು ಯಾವಾಗ ಭುಂಜಿಸಲ್ಪಡುವುದೋ ಆಗ ಅವರು ಕೋಪಗೊಳ್ಳುವರು. ಹಾಗು ದುಷ್ಟಸ್ವಭಾವವು ಭುಂಜಿಸಲ್ಪಟ್ಟರೆ ಆಗ ದೋಷಸಂಪರ್ಕವಿಲ್ಲದ ಗುಣವಂತರಾಗುವರು.

೨೦. ಎಲೈ ಭೂಪತಿಯೇ ! ರೂಪ-ಲಾವಣ್ಯಗಳಲ್ಲಿ ಅಪ್ಸರಾಂಗನೆಯರಿಗೊಪ್ಪುವ ರಾಕ್ಷಸಸ್ತ್ರೀಯರು ನಮಗೆ ಭೋಗ್ಯರಾಗಿರುವರು. ಅಂತಹವರು ಇರಲು ಮಾನವಾಂಗನೆಯರಲ್ಲಿ ನಮಗೇಕೆ ಪ್ರೀತಿಯು ?

ರಾಜನಿಂತೆಂದನು :—

೨೧. ಎಲೈ ನಿಶಾಚರನೇ ! ಇವಳಲ್ಲಿ ರತಿಸುಖಭೋಗದ ಇಷ್ಟವು ಅಥವಾ ಇವಳನ್ನು ಆಹಾರವಾಗಿ ಭುಂಜಿಸುವ ಇಷ್ಟವು ನಿನಗಿಲ್ಲದಿದ್ದರೆ ವಿಪ್ರನ ಮನೆಯನ್ನು ಹೊಕ್ಕು ನೀನೇಕೆ ಇವಳನ್ನು ಅಪಹರಿಸಿ ತಂದಿರುವೆ ?

ರಾಕ್ಷಸ ಉವಾಚ :—

ಮನ್ತ್ರವಿತ್ಸ ದ್ವಿಜಶ್ರೇಷ್ಠೋ ಯಜ್ಞೇ ಯಜ್ಞೇ ಗತಸ್ಯ ಮೇ |
ರಕ್ಷೋಘ್ನಮನ್ತ್ರಪಠನಾತ್ಕರೋತ್ಯುಚ್ಚಾಟನಂ ನೃಪ ||೨೨||

ವಯಂ ಬುಭುಕ್ಷಿತಾಸ್ತಸ್ಯ ಮನ್ತ್ರೋಚ್ಚಾಟನಕರ್ಮಣಾ |
ಕ್ವ ಯಾಮಃ ಸರ್ವಯಜ್ಞೇಷು ಸ ಋತ್ವಿಗ್ಭವತಿ ದ್ವಿಜಃ ||೨೩||

ತತೋಽಸ್ಮಾಭಿರಿದಂ ತಸ್ಯ ವೈಕಲ್ಯಮುಪಪಾದಿತಮ್ |
ಪತ್ನ್ಯಾ ವಿನಾ ಪುಮಾನಿಜ್ಯಾಕರ್ಮಯೋಗ್ಯೋ ನ ಜಾಯತೇ||೨೪||

ಮಾರ್ಕಣ್ಡೇಯ ಉವಾಚ :—

ವೈಕಲ್ಯೋಚ್ಚಾರಣಾತ್ತಸ್ಯ ಬ್ರಾಹ್ಮಣಸ್ಯ ಮಹಾಮತೇಃ |
ತತಃ ಸ ರಾಜಾತಿಭೃಶಂ ವಿಷಣ್ಣಃ ಸಮಜಾಯತ ||೨೫||

ರಾಕ್ಷಸನು ಹೀಗೆ ಹೇಳಿದನು :—

೨೨. ರಾಜನೇ! ಮಂತ್ರವೇತ್ತನಾದ ಆ ದ್ವಿಜೋತ್ತಮನು ಪ್ರತಿಯೊಂದು ಯಜ್ಞಸಮಾರಂಭದಲ್ಲಿಯೂ ಅಲ್ಲಿಗೆ ಹೋಗಿದ್ದ ನನ್ನನ್ನು ರಕ್ಷೋಘ್ನ ಮಂತ್ರಗಳನ್ನು ಪಠನಮಾಡಿ ಉಚ್ಚಾಟನಮಾಡುತ್ತಿರುವನು.

೨೩. ಆ ದ್ವಿಜವರ್ಯನ ಮಂತ್ರೋಚ್ಚಾರಣೆಯ ಅನುಷ್ಠಾನದಿಂದ ಉಚ್ಚಾಟನಹೊಂದಿ ಹಸಿಗೊಂಡಿರುವ ನಾವು ಮತ್ತೆಲ್ಲಿಗೆ ಹೋಗೋಣ? ಎಲ್ಲ ಯಜ್ಞಕರ್ಮಗಳಲ್ಲಿಯೂ ಆ ದ್ವಿಜನು ಋತ್ವಿಜನಾಗಿ ಬರುವನು.

೨೪. ಆ ಕಾರಣದಿಂದ ನಾವು ಅವನ ಪತ್ನಿಯನ್ನು ಅಪಹರಿಸಿ ಈ ರೀತಿಯಾಗಿ ಅವನಲ್ಲಿ ನ್ಯೂನತೆಯನ್ನು ಉಂಟುಮಾಡಿರುವೆವು. ಪುರುಷನು ಪತ್ನಿಯ ಹೊರತಾಗಿ ಯಜ್ಞಕರ್ಮಾನುಷ್ಠಾನಕ್ಕೆ ಯೋಗ್ಯನಾಗುವುದಿಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :—

೨೫. ಹೀಗೆ ರಾಕ್ಷಸನು ಮಹಾಪ್ರಜ್ಞಾಶಾಲಿಯಾದ ಬ್ರಾಹ್ಮಣನ ವಿಷಯದಲ್ಲಿ ಪತ್ನಿಯಿಲ್ಲದ ನ್ಯೂನತೆಯನ್ನು ಹೇಳಿದನು. ಆಗ ಅದನ್ನು ಕೇಳಿದ ರಾಜನು ಅತಿಶಯವಾಗಿ ದುಃಖದಿಂದ ಕೊರಗಿದವನಾದನು.

ವೈಕಲ್ಯಮೇಷ ವಿಪ್ರಸ್ಯ ವದನ್ಮಾಮೇವ ನಿನ್ದತಿ ।
ಅನರ್ಹಮರ್ಘ್ಯಸ್ಯ ಚ ಮಾಂ ಸೋಽಪ್ಯಾಹ ಮುನಿಸತ್ತಮಃ ॥೨೬॥

ವೈಕಲ್ಯಂ ತಸ್ಯ ವಿಪ್ರಸ್ಯ ರಾಕ್ಷಸೋಽಪ್ಯಾಹ ಮೇ ಯಥಾ ।
ಅಪತ್ನೀಕತಯಾ ಸೋಽಹಂ ಸಙ್ಕಟಂ ಮಹದಾಸ್ಥಿತಃ ॥೨೭॥

ಮಾರ್ಕಣ್ಡೇಯ ಉವಾಚ :—

ಏವಂ ಚಿನ್ತಯತಸ್ತಸ್ಯ ಪುನರಪ್ಯಾಹ ರಾಕ್ಷಸಃ ।
ಪ್ರಣಾಮನಮ್ರೋ ರಾಜಾನಂ ಬದ್ಧಾಞ್ಜಲಿಪುಟೋ ಮುನೇ ॥೨೮॥

ನರೇನ್ದ್ರಾಜ್ಞಾಪ್ರದಾನೇನ ಪ್ರಸಾದಃ ಕ್ರಿಯತಾಂ ಮಮ ।
ಭೃತ್ಯಸ್ಯ ಪ್ರಣತಸ್ಯೇತ್ಥಂ ಯುಷ್ಮದ್ವಿಷಯವಾಸಿನಃ ॥೨೯॥

---

೨೬. ಈ ರಾಕ್ಷಸನು ವಿಪ್ರೋತ್ತಮನಲ್ಲಿ ಉಂಟಾದ ಪತ್ನೀವಿಯೋಗದ ನ್ಯೂನತೆಯನ್ನು ವಿವರಿಸುತ್ತ ನನ್ನನ್ನೇ ನಿಂದಿಸುತ್ತಿರುವನು. ಆಗ ಆಶ್ರಮದಲ್ಲಿ ಮುನಿಶ್ರೇಷ್ಠನು ನನ್ನನ್ನು ಅರ್ಘ್ಯಸತ್ಕಾರಕ್ಕೆ ಅನರ್ಹನೆಂದೂ ಹೇಳಿದನು.

೨೭. ಪತ್ನಿಯನ್ನು ಕಾಡಿನಲ್ಲಿ ತ್ಯಜಿಸಿದ ನನಗೆ ಪತ್ನೀವಿಯೋಗದ ನ್ಯೂನತೆಯು ಹೇಗೊ ಹಾಗೆ ಆ ವಿಪ್ರನಿಗೆ ಅದೇ ನ್ಯೂನತೆಯನ್ನು ಈ ರಾಕ್ಷಸನು ಹೇಳುತ್ತಿರುವನು. ನಾನೇನು ಮಾಡಲಿ? ದೊಡ್ಡ ಸಂಕಟಕ್ಕೆ ಗುರಿಯಾಗಿದ್ದೇನೆ.

ಮಾರ್ಕಂಡೇಯ ಮುನಿಯು ಮುಂದುವರಿಸಿದನು :—

೨೮. ಎಲೈ ಕ್ರೌಷ್ಟುಕಿಮುನಿಯೇ! ಆ ರಾಕ್ಷಸನು ಈ ಬಗೆಯಾಗಿ ಚಿಂತಿಸುತ್ತಿದ್ದ ರಾಜನನ್ನು ನೋಡಿ ಅಂಜಲಿಯನ್ನು ಕಟ್ಟಿಕೊಂಡು ರಾಜನಿಗೆ ನಮಸ್ಕಾರಮಾಡುತ್ತ ನಮ್ರತೆಯಿಂದ ಕೂಡಿದವನಾಗಿ ಮತ್ತೆ ಹೀಗೆ ಹೇಳಿದನು.

೨೯. ಎಲೈ ನರೇಂದ್ರನೇ! ನಾನು ನಿಮ್ಮ ದೇಶದಲ್ಲಿ ವಾಸಮಾಡುವವನೂ, ಹೀಗೆ ವಿನಯದಿಂದ ನಮಸ್ಕರಿಸುವವನೂ ಆದ ಭೃತ್ಯನಾಗಿರುವೆನು. ಇಂತಹ ನನಗೆ ಆಜ್ಞೆಯನ್ನಿತ್ತು ಅನುಗ್ರಹಮಾಡೋಣವಾಗಲಿ,

ರಾಜೋವಾಚ :—

ಸ್ವಭಾವಂ ವಯಮಸ್ಮಿನ್ವಸ್ತ್ವಯೋಕ್ತಂ ಯನ್ನಿಶಾಚರ ।
ತದರ್ಥಿನೋ ವಯಂ ಯೇನ ಕಾರ್ಯೇಣ ಶೃಣು ತನ್ಮಮ ॥೩೦॥

ಅಸ್ಯಾಸ್ತ್ವಯಾದ್ಯ ಬ್ರಾಹ್ಮಣ್ಯಾ ದೌಃಶೀಲ್ಯಮುಪಭುಜ್ಯತಾಮ್ ।
ಯೇನ ತ್ವಯಾತ್ತದೌಃಶೀಲ್ಯಾ ತದ್ವಿನೀತಾ ಭವೇದಿಯಮ್ ॥೩೧॥

ನೀಯತಾಂ ಯಸ್ಯ ಭಾರ್ಯೇಯಂ ತಸ್ಯ ವೇಶ್ಮ ನಿಶಾಚರ ।
ಅಸ್ಮಿನ್ಕೃತೇ ಕೃತಂ ಸರ್ವಂ ಗೃಹಮಭ್ಯಾಗತಸ್ಯ ಮೇ ॥೩೨॥

ಮಾರ್ಕಣ್ಡೇಯ ಉವಾಚ :—

ತತಃ ಸ ರಾಕ್ಷಸಸ್ತಸ್ಯಾಃ ಪ್ರವಿಶ್ಯಾನ್ತಃ ಸ್ವಮಾಯಯಾ ।
ಭಕ್ಷಯಾಮಾಸ ದೌಃಶೀಲ್ಯಂ ನಿಜಶಕ್ತ್ಯಾ ನೃಪಾಜ್ಞಯಾ ॥೩೩॥

ರಾಜನು ಇಂತೆಂದನು :—

೩೦. ಎಲೈ ನಿಶಾಚರನೇ ! ಜನರ ಸ್ವಭಾವವನ್ನು ನಾವು ತಿನ್ನಬಲ್ಲೆವೆಂದು ನಿನ್ನಿಂದ ಹೇಳಲ್ಪಟ್ಟಿರುವುದು. ಆದುದರಿಂದ ನಾವು ಯಾವ ಕಾರ್ಯಸಿದ್ಧಿಗಾಗಿ ಅರ್ಥಿಗಳಾಗಿರುವೆವೋ ನನ್ನ ಆ ಕಾರ್ಯವನ್ನು ಕೇಳು.

೩೧. ನಿನ್ನಿಂದ ಈಗ ವಿಪ್ರಪತ್ನಿಯಾದ ಈಕೆಯಲ್ಲಿರುವ ದುಃಶೀಲವು ಭುಂಜಿಸಲ್ಪಡಲಿ. ಹಾಗೆ ನಿನ್ನಿಂದ ಭುಂಜಿಸಿ ನಿವಾರಿಸಿದ ದೌಃಶೀಲ್ಯವುಳ್ಳವಳಾಗಿ ಈಕೆಯು ವಿನಯವತಿಯಾಗಿ ವರ್ತಿಸುವಳು.

೩೨. ಎಲೈ ರಾಕ್ಷಸನೇ ! ಮತ್ತು ಈಕೆಯು ಯಾವ ವಿಪ್ರನ ಭಾರ್ಯೆಯಾಗಿರುವಳೋ ಅವನ ಮನೆಗೆ ಇವಳು ಒಯ್ಯಲ್ಪಡಲಿ. ನಿನ್ನ ಗೃಹಕ್ಕೆ ಅಭ್ಯಾಗತನಾಗಿ ಬಂದು ನಿನ್ನ ಸತ್ಕಾರಕ್ಕೆ ಪಾತ್ರನಾದ ನನಗೆ ಇದೊಂದು ಕೆಲಸವಾದರೆ ಎಲ್ಲವೂ ಆದಂತೆ ಆಗುವುದು.

ಮಾರ್ಕಂಡೇಯ ಮುನಿಯು ಹೇಳಿದನು :—

೩೩. ತರುವಾಯ ಬಲಾಕರಾಕ್ಷಸನು ರಾಜನ ಆಜ್ಞೆಯಂತೆ ತನ್ನ ಮಾಯಾಬಲದಿಂದ ವಿಪ್ರಪತ್ನಿಯ ಶರೀರದೊಳಗೆ ಪ್ರವೇಶಮಾಡಿ ತನ್ನ ಶಕ್ತಿಯಿಂದ ಅವಳಲ್ಲಿದ್ದ ದುಃಶೀಲಸ್ವಭಾವಗಳನ್ನು ತಿಂದುಹಾಕಿದನು.

ದೌಃಶೀಲ್ಯೇನಾತಿರೌದ್ರೇಣ ಪತ್ನೀ ತಸ್ಯ ದ್ವಿಜನ್ಮನಃ ।
ತೇನ ಸಾ ಸಮ್ಪರಿತ್ಯಕ್ತಾ ತಮುವಾಚ ಜಗತೀಪತಿಮ್ ॥೩೪॥

ಸ್ವಕರ್ಮಫಲಪಾಕೇನ ಭರ್ತುಸ್ತಸ್ಯ ಮಹಾತ್ಮನಃ ।
ವಿಯೋಜಿತಾಹಂ ತದ್ಧೇತುರಯಮಾಸೀನ್ನಿಶಾಚರಃ ॥೩೫॥

ನಾಸ್ಯ ದೋಷೋ ನ ವಾ ತಸ್ಯ ಮಮ ಭರ್ತುರ್ಮಹಾತ್ಮನಃ ।
ಮಮೈವ ದೋಷೋ ನಾನ್ಯಸ್ಯ ಸ್ವಕೃತಂ ಹ್ಯುಪಭುಜ್ಯತೇ ॥೩೬॥

ಅನ್ಯಜನ್ಮನಿ ಕಸ್ಯಾಪಿ ವಿಪ್ರಯೋಗಃ ಕೃತೋ ಮಯಾ ।
ಸೋಽಯಂ ಮಯಾಪ್ಯುಗತಃ ಕೋ ದೋಷೋಽಸ್ಯ ಮಹಾತ್ಮನಃ ॥೩೭॥

---

೩೪. ಹೀಗೆ ರಾಕ್ಷಸನು ತಿಂದು ಅವಳಲ್ಲಿದ್ದ ಅತಿ ರೌದ್ರಾಕಾರದ ದೌಶೀಲ್ಯದಿಂದ ಬಿಡುಗಡೆಯನ್ನು ಹೊಂದಿರುವ ಆ ದ್ವಿಜೋತ್ತಮನ ಪತ್ನಿಯು ವಿನಯವತಿಯಾಗಿ ಆ ರಾಜನನ್ನು ಕುರಿತು ಹೀಗೆ ಹೇಳಿದಳು.

೩೫. ಎಲೈ ರಾಜನೇ ! ನಾನು ನನ್ನ ಜನ್ಮಾಂತರ ಕರ್ಮದ ಪರಿಣಾಮದಿಂದ ಮಹಾತ್ಮನಾದ ನನ್ನ ಪತಿದೇವನಿಂದ ವಿಯೋಗ ಹೊಂದಿಸಲ್ಪಟ್ಟೆನು. ಹೀಗೆ ಕರ್ಮದಿಂದ ಲಭಿಸಬೇಕಾಗಿದ್ದ ವಿಯೋಗದುಃಖಕ್ಕೆ ಈ ರಾಕ್ಷಸನು ನಿಮಿತ್ತನಾದನು.

೩೬. ಆದುದರಿಂದ ಈ ರಾಕ್ಷಸನಲ್ಲಿ ತಪ್ಪಿಲ್ಲ. ಹಾಗು ಮಹಾತ್ಮನಾದ ನನ್ನ ಪತಿಯಲ್ಲಿಯೂ ಏನೂ ತಪ್ಪಿಲ್ಲ. ಇದಕ್ಕೆ ನನ್ನ ಪ್ರಾಚೀನಕರ್ಮವು ಕಾರಣವಾದುದರಿಂದ ನನ್ನದೇ ತಪ್ಪು. ಬೇರೊಬ್ಬರ ಅಪರಾಧವಿಲ್ಲ. ಎಲ್ಲರೂ ತಾವು ಮಾಡಿರುವ ಕರ್ಮದ ಫಲವನ್ನು ಭುಂಜಿಸಬೇಕು.

೩೭. ಹಿಂದಿನ ಬೇರೊಂದು ಜನ್ಮದಲ್ಲಿ ನನ್ನಿಂದ ಯಾರೋ ದಂಪತಿಗಳಲ್ಲಿ ಪರಸ್ಪರ ವಿಯೋಗವುಂಟುಮಾಡಲ್ಪಟ್ಟಿತ್ತು. ಅದರ ಪರಿಣಾಮವಾಗಿ ನನಗೆ ಈ ವಿಯೋಗದುಃಖವುಂಟಾಯಿತು. ಈ ಮಹಾತ್ಮನಲ್ಲಿ ತಪ್ಪೇನಿದೆ?

ರಾಕ್ಷಸ ಉವಾಚ :--

ಪ್ರಾಪಯಾಮಿ ತವಾದೇಶಾದಿಮಾಂ ಭರ್ತೃಗೃಹಂ ಪ್ರಭೋ ।
ಯದನ್ಯತ್ಕರಣೀಯಂ ತೇ ತದಾಜ್ಞಾಪಯ ಪಾರ್ಥಿವ ॥೩೮॥

ರಾಜೋವಾಚ :—

ಅಸ್ಮಿನ್ಕೃತೇ ಕೃತಂ ಸರ್ವಂ ತ್ವಯಾ ಮೇ ರಜನೀಚರ ।
ಆಗನ್ತವ್ಯಂ ಚ ತೇ ವೀರ ಕಾರ್ಯಕಾಲೇ ಸ್ಮೃತೇನ ಮೇ ॥೩೯॥

ಮಾರ್ಕಣ್ಡೇಯ ಉವಾಚ :—

ತಥೇತ್ಯುಕ್ತ್ವಾ ತು ತದ್ರಕ್ಷಸ್ತಾಮಾದಾಯ ದ್ವಿಜಾಙ್ಗನಾಮ್ ।
ನಿನ್ಯೇ ಭರ್ತೃಗೃಹಂ ಶುದ್ಧಾಂ ದೌಃಶೀಲ್ಯಾಪಗಮಾತ್ತದಾ ॥೪೦॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ಔತ್ತಮಮನ್ವನ್ತರೇ ಬ್ರಾಹ್ಮಣಭಾರ್ಯಾನಯನಂ ನಾಮ ಸಪ್ತಷಷ್ಟಿತಮೋಽಧ್ಯಾಯಃ

ರಾಕ್ಷಸನು ಹೀಗೆಂದನು :—

೩೮. ಪ್ರಭುವಾದ ನರೇಂದ್ರನೇ! ನಿನ್ನ ಆದೇಶದಂತೆ ಇವಳನ್ನು ಇವಳ ಪತಿಯ ಮನೆಗೆ ಕಳುಹಿಸಿಕೊಡುತ್ತೇನೆ. ನಿನಗೆ ಮತ್ತಾವ ಸೇವಾ-ಕಾರ್ಯವು ನನ್ನಿಂದ ಆಗಬೇಕಾದುದು ಇರುವುದೋ ಅದನ್ನು ಆಜ್ಞಾಪಿಸು.

ರಾಜನು ಇಂತೆಂದನು :—

೩೯. ಎಲೈ, ರಾತ್ರಿಂಚರನೇ! ಇವಳನ್ನು ಪತಿಗೃಹಕ್ಕೆ ಕಳುಹಿಸಿ ಕೊಡುವ ಕಾರ್ಯವು ನಿನ್ನಿಂದ ಆದರೆ ಮತ್ತೆಲ್ಲವೂ ನನಗೆ ಮಾಡಿದಂತಾಗುವುದು. ವೀರನೇ! ಮತ್ತು ಕಾರ್ಯ ಒದಗಿ ನಾನು ನಿನ್ನನ್ನು ಸ್ಮರಿಸಿದಾಗ ನೀನು ನನ್ನ ಬಳಿಗೆ ಬರಬೇಕು.

ಮಾರ್ಕಂಡೇಯ ಮುನಿಯು ಮುಂದುವರಿಸಿದನು :—

೪೦. ಆಗ ಬಲಾಕರಾಕ್ಷಸನು ಹಾಗೆ ಆಗಲಿ ಎಂದು ಹೇಳಿ ಮೊದಲಿದ್ದ ದೌಃಶೀಲ್ಯವು ನಶಿಸಿ ಶುದ್ಧಳಾದ ಆ ವಿಪ್ರಪತ್ನಿಯನ್ನು ಜೊತೆಯಲ್ಲಿ ಕರೆದು-ಕೊಂಡು ಹೋಗಿ ಆಕೆಯ ಪತಿಗೃಹಕ್ಕೆ ತಂದು ಬಿಟ್ಟನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತೇಳನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣ

ಅಷ್ಟಷಷ್ಟಿತಮೋಽಧ್ಯಾಯಃ

(ಉತ್ತಮಸ್ಯ ಸ್ವಪತ್ನೀವೃತ್ತಾನ್ತೋಪಲಬ್ಧಿಃ)

ಮಾರ್ಕಣ್ಡೇಯ ಉವಾಚ :—

ತಾಂ ಪ್ರೇಷಯಿತ್ವಾ ರಾಜಾಪಿ ಸ್ವಭರ್ತೃಗೃಹಮುಜ್ಜ್ವಲಾಮ್ ।
ಚಿನ್ತಯಾಮಾಸ ನಿಃಶ್ವಸ್ಯ ಕಿಮತ್ರ ಸುಕೃತಂ ಭವೇತ್ ॥೧॥

ಅನರ್ಘ್ಯಾಯೋಗ್ಯತಾ ಕಷ್ಟಂ ಸ ಯಾಮಾಹ ಮಹಾಮುನಿಃ ।
ವೈಕಲ್ಯಂ ವಿಪ್ರಮುದ್ದಿಶ್ಯ ತಥಾಹಾಯಂ ನಿಶಾಚರಃ ॥೨॥

ಅರವತ್ತೆಂಟನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಇತ್ತ ರಾಜನು ಆ ವಿಪ್ರನ ಪತ್ನಿಯನ್ನು ಆಕೆಯ ಪತಿಗೃಹಕ್ಕೆ ಕಳುಹಿಸಿಕೊಟ್ಟು ಮುಂದೆ ತಾನು ದುಃಖದಿಂದ ಉಸಿರುಬಿಡುತ್ತ "ಮುಂದೇನು ಮಾಡಿದರೆ ಒಳ್ಳೆಯದಾದೀತು" ಹೀಗೆಂದು ಚಿಂತಿಸಿದನು.

೨. ಉದಾರಮಾನಸವುಳ್ಳ ಆ ಮುನಿಯು ನನ್ನ ವಿಷಯದಲ್ಲಿ ಹೇಳಿರುವ ಅರ್ಘ್ಯಸತ್ಕಾರಾನರ್ಹತೆಯು ಮನಕ್ಕೆ ಬಲು ಕ್ಲೇಶಕರವಾಗಿದೆ. ಹಾಗು ಈ ನಿಶಾಚರನು ಆ ವಿಪ್ರನ ವಿಷಯವಾಗಿ ಪತ್ನಿಯಿಲ್ಲದಿರುವುದನ್ನು ನ್ಯೂನತೆಯೆಂದು ಹೇಳುತ್ತಿರುವನು.

ಸೋऽಹಂ ಕಥಂ ಕರಿಷ್ಯಾಮಿ ತ್ಯಕ್ತ್ವಾ ಪತ್ನೀ ಮಯಾ ಹಿ ಸಾ ।
ಅಥವಾ ಜ್ಞಾನದೃಷ್ಟಿಂ ತಂ ಪೃಚ್ಛಾಮಿ ಮುನಿಸತ್ತಮಮ್ ॥೩॥

ಸಂಚಿನ್ತ್ಯೇತ್ಥಂ ಸ ಭೂಪಾಲಃ ಸಮಾರುಹ್ಯ ಚ ತಂ ರಥಮ್ ।
ಯಯೌ ಯತ್ರ ಸ ಧರ್ಮಾತ್ಮಾ ತ್ರಿಕಾಲಜ್ಞೋ ಮಹಾಮುನಿಃ ॥೪॥

ಅವರುಹ್ಯ ರಥಾತ್ಸೋऽಥ ತಂ ಸಮೇತ್ಯ ಪ್ರಣಮ್ಯ ಚ ।
ಯಥಾವೃತ್ತಂ ಸಮಾಚಖ್ಯೌ ರಾಕ್ಷಸೇನ ಸಮಾಗಮಮ್ ॥೫॥

ಬ್ರಾಹ್ಮಣ್ಯಾ ದರ್ಶನಂ ಚೈವ ದೌಃಶೀಲ್ಯಾಪಗಮಂ ತಥಾ ।
ಪ್ರೇಷಣಂ ಭರ್ತೃಗೇಹೇ ಚ ಕಾರ್ಯಮಾಗಮನೇ ಚ ಯತ್ ॥೬॥

---

೩. ಹೀಗೆ ಸಂಕಟಕ್ಕೆ ಸಿಲುಕಿದ ನಾನು ಮುಂದೇನು ಮಾಡಲಿ? ನನ್ನಿಂದ ನನ್ನ ಪತ್ನಿಯು ವನದಲ್ಲಿ ಬಿಡಲ್ಪಟ್ಟಳು. ಒಂದು ಪಕ್ಷ ಜ್ಞಾನದೃಷ್ಟಿಯಿಂದ ತ್ರಿಕಾಲವನ್ನರಿಯುವ ಆ ಮುನಿವರ್ಯನನ್ನು ಪ್ರಶ್ನಿಸಲೇ?

೪. ಆ ರಾಜನು ಹೀಗೆಂದು ಯೋಚಿಸುತ್ತ ಕೂಡಲೆ ತನ್ನ ರಥವನ್ನು ಏರಿದವನಾಗಿ ಧರ್ಮಾತ್ಮನೂ, ತ್ರಿಕಾಲಜ್ಞನೂ ಆದ ಆ ಮುನಿಯು ಯಾವ ಆಶ್ರಮದಲ್ಲಿ ವಾಸಮಾಡಿಕೊಂಡಿದ್ದನೋ ಆ ಆಶ್ರಮಭೂಮಿಗೆ ತೆರಳಿದನು.

೫. ಆ ರಾಜನು ಅಲ್ಲಿ ರಥದಿಂದ ಕೆಳಗಿಳಿದು ಮುನಿಯ ಬಳಿಗೆ ಹೋಗಿ ಅವನಿಗೆ ವಂದಿಸಿ ತಾನು ರಾಕ್ಷಸನ ಸಂಗಡ ಸೇರಿದುದು, ಮತ್ತು ಅಲ್ಲಿ ನಡೆದ ಸಂಗತಿ—ಎಲ್ಲವನ್ನೂ ನಡೆದ ಹಾಗೆ ಮುನಿಗೆ ತಿಳಿಸಿದನು.

೬. ಮತ್ತು ಬ್ರಾಹ್ಮಣಪತ್ನಿಯನ್ನು ಕಂಡಿರುವುದು, ಆಕೆಯ ದೌಃಶೀಲ್ಯವು ಕಳೆದುಹೋದುದು, ತರುವಾಯ ಆಕೆಯನ್ನು ಆಕೆಯ ಪತಿಗೃಹಕ್ಕೆ ಕಳುಹಿಸಿದುದು ಮತ್ತು ತಾನು ಮುನಿಯ ಬಳಿಗೆ ಬಂದಿರುವ ಕಾರ್ಯನಿಮಿತ್ತ—ಇವೆಲ್ಲವನ್ನೂ ಹೇಳಿದನು.

ಋಷಿರುವಾಚ :—

ಜ್ಞಾತಮೇತನ್ಮಯಾ ಪೂರ್ವಂ ಯತ್ಕೃತಂ ತೇ ನರಾಧಿಪ
ಕಾರ್ಯಮಾಗಮನೇ ಚೈವ ಮತ್ಸಮೀಪೇ ತವಾಖಿಲಮ್ ॥೭॥

ಪ್ರಷ್ಟುಂ ಮಾಮಿಹ ಕಿಂ ಕಾರ್ಯಂ ಮಯೇತ್ಯುದ್ವಿಗ್ನಮಾನಸಃ ।
ತ್ವಮಾಗತೋ ಮಹೀಪಾಲ ಶೃಣು ಕಾರ್ಯಂ ಚ ಯತ್ತ್ವಯಾ ॥೮॥

ಪತ್ನೀ ಧರ್ಮಾರ್ಥಕಾಮಾನಾಂ ಕಾರಣಂ ಪ್ರಬಲಂ ನೃಣಾಮ್ ।
ವಿಶೇಷತಶ್ಚ ಧರ್ಮಸ್ಯ ಸ ತ್ಯಕ್ತಸ್ತ್ಯಜತಾ ಹಿ ತಾಮ್ ॥೯॥

ಅಪತ್ನೀಕೋ ನರೋ ಭೂಪ ನ ಯೋಗ್ಯೋ ನಿಜಕರ್ಮಣಾಮ್ ।
ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯಃ ಶೂದ್ರೋಽಪಿ ವಾ ನೃಪ॥೧೦॥

ಋಷಿಯು ಹೇಳಿದನು:—

೭. ಎಲೈ ಮಹಾರಾಜನೇ! ಇಲ್ಲಿಂದ ಹೊರಟುಹೋಗಿ ನೀನು ಮುಂದೆ ಮಾಡಿರುವ ಕಾರ್ಯವೆಲ್ಲವೂ ನನ್ನಿಂದ ಮೊದಲು ತಿಳಿಯಲ್ಪಟ್ಟಿದೆ. ಮತ್ತು ಈಗ ನೀನು ನನ್ನ ಸಮೀಪಕ್ಕೆ ಬರಲು ಏನು ನಿಮಿತ್ತವೋ ಅದನ್ನೂ ಸಂಪೂರ್ಣವಾಗಿ ತಿಳಿದಿರುವೆನು.

೮. ಎಲೈ ಭೂಪಾಲನೇ! "ಈ ಸನ್ನಿವೇಶದಲ್ಲಿ ನಾನು ಮುಂದೇನು ಮಾಡಲಿ" ಎಂದು ನನ್ನಲ್ಲಿ ಪ್ರಶ್ನಿಸಲು ಬಲು ದುಃಖಗೊಂಡ ಮಾನಸವುಳ್ಳ ನೀನು ಇಲ್ಲಿಗೆ ಬಂದಿದ್ದೀಯೆ. ನೀನು ಮುಂದೇನು ಮಾಡಬಹುದೋ ಅದನ್ನು ಹೇಳುವೆನು, ಕೇಳು.

೯. ಪುರುಷರಿಗೆ ಧರ್ಮ, ಅರ್ಥ, ಕಾಮರೂಪವಾದ ಪುರುಷಾರ್ಥಗಳನ್ನು ಸಾಧಿಸಲು ಪತ್ನಿಯು ಪ್ರಬಲಕಾರಣಳಾಗಿರುವಳು. ಅದರಲ್ಲಿಯೂ ಧರ್ಮಾರ್ಜನೆಗೆ ವಿಶೇಷವಾಗಿ ಕಾರಣಳಾಗಿದ್ದಾಳೆ. ನೀನು ಅವಳನ್ನು ಬಿಟ್ಟಿದ್ದರಿಂದ ಧರ್ಮವನ್ನು ಬಿಟ್ಟಂತೆ ಆಗಿದೆ.

೧೦. ಎಲೈ ರಾಜ್ಯಪರಿಪಾಲಕನಾದ ದೊರೆಯೇ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಮತ್ತು ಶೂದ್ರರಲ್ಲಿ ಯಾರೇ ಆಗಲಿ ಅಪತ್ನೀಕನಾದರೆ ಆಗ ಅವನು ತನ್ನ ಕರ್ತವ್ಯವಾದ ಕರ್ಮಾನುಷ್ಠಾನಕ್ಕೆ ಅನರ್ಹನಾಗುವನು.

ತ್ಯಜತಾ ಭವತಾ ಪತ್ನೀಂ ನ ಶೋಭನಮನುಷ್ಠಿತಮ್ ।
ಅತ್ಯಾಜ್ಯೋ ಹಿ ಯಥಾ ಭರ್ತಾ ಸ್ತ್ರೀಣಾಂ ಭಾರ್ಯಾ ತಥಾ
ನೃಣಾಮ್ ॥೧೧॥

ರಾಜೋವಾಚ :—

ಭಗವನ್ ಕಿಂ ಕರೋಮ್ಯೇಷ ವಿಪಾಕೋ ಮಮ ಕರ್ಮಣಾಮ್ ।
ನಾನುಕೂಲಾನುಕೂಲಸ್ಯ ಯಸ್ಮಾತ್ತ್ಯಕ್ತಾ ತತೋ ಮಯಾ ॥೧೨॥

ಯದ್ಯತ್ಕರೋತಿ ತತ್ಕ್ಷಾನ್ತಂ ದಹ್ಯಮಾನೇನ ಚೇತಸಾ ।
ಭಗವಂಸ್ತದ್ವಿಯೋಗಾರ್ತಿವಿಭೀತೇನಾನ್ತರಾತ್ಮನಾ ॥೧೩॥

ಸಾಮ್ಪ್ರತಂ ತು ವನೇ ತ್ಯಕ್ತಾ ನ ವೇದ್ಮಿ ಕ್ವ ನು ಸಾ ಗತಾ ।
ಭಕ್ಷಿತಾ ವಾಪಿ ವಿಪಿನೇ ಸಿಂಹವ್ಯಾಘ್ರನಿಶಾಚರೈಃ ॥೧೪॥

---

೧೧. ಆದುದರಿಂದ ಪತ್ನಿಯನ್ನು ತ್ಯಜಿಸಿದ ನೀನು ಮಾಡಿದ ಕಾರ್ಯವು ಒಳ್ಳೆಯದಾಗಲಿಲ್ಲ. ಸ್ತ್ರೀಯರಿಗೆ ಪತಿಯು ಹೇಗೆ ಎಂದೂ ತ್ಯಜಿಸಲಾಗದವನೋ ಹಾಗೆ ಪುರುಷರಿಗೆ ಪತ್ನಿಯು ಎಂದೂ ತ್ಯಜಿಸಲು ಅರ್ಹಳಲ್ಲ.

ರಾಜನು ಇಂತೆಂದನು :—

೧೨. ಪೂಜ್ಯನಾದ ಮುನಿಯೇ ! ನಾನೇನು ಮಾಡಲಿ ? ನನ್ನ ಪ್ರಾಚೀನ ಪಾಪಕರ್ಮಗಳ ಪರಿಪಾಕವಿದು. ಅನುಕೂಲನಾಗಿ ವರ್ತಿಸುವ ನನ್ನಲ್ಲಿ ಆಕೆಯು ಅನುಕೂಲಚಿತ್ತದಿಂದ ವರ್ತಿಸಲಿಲ್ಲವೆಂದು ನನ್ನಿಂದ ತ್ಯಜಿಸಲ್ಪಟ್ಟಿರುವಳು.

೧೩. ಪೂಜ್ಯನಾಗಿರುವ ಮಹರ್ಷಿಯೇ ! ಆಕೆಯ ವಿಯೋಗ ಪೀಡೆ-ಯನ್ನು ಸಹಿಸಲಾರೆನೆಂದು ಭಯಪಡುವ ಅಂತರಂಗವುಳ್ಳ ನಾನು ಅವಳು ಏನೇನು ಪ್ರತಿಕೂಲವನ್ನು ಮಾಡಿದರೂ ಅದೆಲ್ಲವನ್ನೂ ನೊಂದುಕೊಂಡಿರುವ ಮನಸ್ಸಿನಿಂದ ಕ್ಷಮಿಸುತ್ತ ಬಂದೆನು.

೧೪. ಆದರೂ ಕಡೆಯಲ್ಲಿ ಆಕೆಯು ನನ್ನಿಂದ ವನದಲ್ಲಿ ತ್ಯಜಿಸಲ್ಪಟ್ಟಳು. ಅವಳು ಎಲ್ಲಿಗೆ ಹೋದಳೋ ! ಒಂದು ಪಕ್ಷ ಸಿಂಹ, ಹುಲಿ, ರಾಕ್ಷಸ ಮುಂತಾದವ-ರಿಂದ ಕಾಡಿನಲ್ಲಿ ಭಕ್ಷಿಸಲ್ಪಟ್ಟಿರಬಹುದೆ ! ನಾನು ಒಂದನ್ನೂ ಅರಿಯೆನು.

ಋಷಿರುವಾಚ :—

ನ ಭಕ್ಷಿತಾ ಸಾ ಭೂಪಾಲ ಸಿಹ್ಮವ್ಯಾಘ್ರನಿಶಾಚರೈಃ ।
ಸಾ ತ್ವವಿಪ್ಲುತಚಾರಿತ್ರಾ ಸಾಮ್ಪ್ರತಂ ತು ರಸಾತಲೇ ॥೧೫॥

ರಾಜೋವಾಚ : –

ಸಾ ನೀತಾ ಕೇನ ಪಾತಾಲಮಾಸ್ತೇ ಸಾದೂಷಿತಾ ಕಥಮ್ ।
ಅತ್ಯದ್ಭುತಮಿದಂ ಬ್ರಹ್ಮನ್ಯಥಾವದ್ವಕ್ತುಮರ್ಹಸಿ ॥೧೬॥

ಋಷಿರುವಾಚ :—

ಪಾತಾಲೇ ನಾಗರಾಜೋಽಸ್ತಿ ಪ್ರಖ್ಯಾತಶ್ಚ ಕಪೋತಕಃ ।
ತೇನ ದೃಷ್ಟ್ವಾ ತ್ವಯಾ ತ್ಯಕ್ತಾ ಭ್ರಮಮಾಣಾ ಮಹಾವನೇ ॥೧೭॥

ಮುನಿಯು ಹೇಳಿದನು :—

೧೫. ಮಹಾರಾಜನೇ ! ನಿನ್ನ ಪತ್ನಿಯು ಸಿಂಹ, ಹುಲಿ, ನಿಶಾಚರ ಮುಂತಾದವರಾರಿಂದಲೂ ಭಕ್ಷಿಸಲ್ಪಡಲಿಲ್ಲ. ಅವಳು ಸುಖವಾಗಿರುವಳು. ಅವಳೀಗ ಲೋಪವಿಲ್ಲದ ಚಾರಿತ್ರಗುಣವುಳ್ಳವಳಾಗಿ ಪಾತಾಳಲೋಕದಲ್ಲಿರುವಳು.

ರಾಜನು ಇಂತೆಂದನು :—

೧೬. ಬ್ರಹ್ಮರ್ಷಿಯೇ ! ಅವಳು ಯಾರಿಂದ ಪಾತಾಳಲೋಕಕ್ಕೆ ಒಯ್ಯಲ್ಪಟ್ಟಳು ? ಅಲ್ಲಿ ಅವಳು ಕೆಡದಿರುವ ಚಾರಿತ್ರದಿಂದಿರುವುದು ಹೇಗೆ ? ಇದೆಲ್ಲ ಪರಮಾಶ್ಚರ್ಯದ ಸಂಗತಿಯಾಗಿದೆ. ನೀನು ಇದನ್ನು ಯಥಾವತ್ತಾಗಿ ಹೇಳಲು ಅರ್ಹನಾಗಿದ್ದೀಯೆ.

ಋಷಿಯು ಹೇಳಿದನು :—

೧೭. ಪಾತಾಲಲೋಕದಲ್ಲಿ ಕಪೋತಕ ಎಂಬ ಹೆಸರಿನಿಂದ ಪ್ರಖ್ಯಾತನಾದ ಒಬ್ಬ ನಾಗೇಂದ್ರನು ಇರುವನು. ನಿನ್ನಿಂದ ತ್ಯಜಿಸಲ್ಪಟ್ಟು ಮಹಾವನದಲ್ಲಿ ಅಲ್ಲಲ್ಲಿ ಅಲೆದಾಡುತ್ತಿದ್ದ ನಿನ್ನ ಪತ್ನಿಯನ್ನು ಆ ನಾಗರಾಜನು ಕಂಡನು.

ಸಾ ರೂಪಶಾಲಿನೀ ತೇನ ಸಾನುರಾಗೇಣ ಪಾರ್ಥಿವ ।
ವೇದಿತಾರ್ಥೇನ ಪಾತಾಲಂ ನೀತಾ ಸಾ ಯುವತೀ ತದಾ ॥೧೮॥

ತತಸ್ತಸ್ಯ ಸುತಾ ಸುಭ್ರೂರ್ನನ್ದಾ ನಾಮ ಮಹೀಪತೇ ।
ಭಾರ್ಯಾ ಮನೋರಮಾ ಚಾಸ್ಯ ನಾಗರಾಜಸ್ಯ ಧೀಮತಃ ॥೧೯॥

ತಯಾ ಮಾತುಃ ಸಪತ್ನೀಯಂ ಸಾ ಭವಿತ್ರೀತಿ ಶೋಭನಾ ।
ದೃಷ್ಟ್ವಾ ಸ್ವಗೇಹಂ ಸಾ ನೀತಾ ಗುಪ್ತಾ ಚಾನ್ತಃಪುರೇ ಶುಭಾ ॥೨೦॥

ಯದಾ ತು ಯಾಚಿತಾ ನನ್ದಾ ನ ದದಾತಿ ನೃಪೋತ್ತರಮ್ ।
ಮೂಕಾ ಭವಿಷ್ಯಸೀತ್ಯಾಹ ತದಾ ತಾಂ ತನಯಾಂ ಪಿತಾ ॥೨೧॥

---

೧೮. ಸೌಂದರ್ಯದಿಂದ ರಾಜಿಸುವವಳೂ, ತಾರುಣ್ಯವತಿಯೂ ಆದ ಆಕೆಯಲ್ಲಿ ನಾಗರಾಜನು ಅನುರಾಗವುಳ್ಳವನಾದನು. ಆಗ ನಾಗರಾಜನು ತಿಳಿದ ಪೂರ್ವವೃತ್ತಾಂತವುಳ್ಳವನಾಗಿ ಅವಳನ್ನು ಪಾತಾಲಲೋಕಕ್ಕೆ ಕರೆದುಕೊಂಡು ಹೋದನು.

೧೯. ಎಲೈ, ರಾಜನೆ! ಅಲ್ಲಿ ಪ್ರಾಜ್ಞನಾದ ನಾಗರಾಜನಿಗೆ ಮನೋರಮಾ ಎಂಬ ಯಥಾರ್ಥ ನಾಮಾಂಕಿತಳಾದ ಪ್ರಿಯೆ ಮತ್ತು ನಂದಾ ಎಂಬ ನಾಮಾಂಕಿತಳಾದ ಸುಂದರಿಯಾದ ಪುತ್ರಿಯರಿದ್ದರು.

೨೦. ಆಗ ಆ ನಾಗಕನ್ಯೆಯಾದ ನಂದೆಯು ಸೌಂದರ್ಯವತಿಯಾದ ರಾಜಪತ್ನಿಯು ತನ್ನ ತಾಯಿಗೆ ಸಪತ್ನೀದುಃಖವನ್ನುಂಟುಮಾಡುವವಳಾಗಬಹು-ದೆಂದು ಕಂಡು ತನ್ನ ಮನೆಗೆ ಆಕೆಯನ್ನು ಕರೆದುಕೊಂಡು ಹೋಗಿ ಅಂತಃಪುರದಲ್ಲಿ ಚಾರಿತ್ರದಿಂದ ರಕ್ಷಿಸುತ್ತಿರುವಳು.

೨೧. ಆದರೆ ನಾಗರಾಜನು "ಆ ರಾಜಪತ್ನಿಯು ಎಲ್ಲಿರುವಳು? ಅವ-ಳನ್ನು ತೋರಿಸು." ಎಂದು ನಂದೆಯನ್ನು ಕೇಳಿದಾಗ ನಂದೆಯು ಉತ್ತರವನ್ನೆ ಕೊಡುತ್ತಿರಲಿಲ್ಲ. ಆಗ ತಂದೆಯು ಮಗಳನ್ನು ಮೂಕಳಾಗೆಂದು ಶಪಿಸಿದನು.

ಏವಂ ಶಪ್ತಾ ಸುತಾ ತೇನ ಸಾ ಚಾಸ್ತೇ ತತ್ರ ಭೂಪತೇ ।
ನೀತಾ ತೇನೋರಗೇನ್ದ್ರೇಣ ಧೃತಾ ತತ್ಸುತಯಾ ಸತೀ ॥೨೨॥

ಮಾರ್ಕಣ್ಡೇಯ ಉವಾಚ :—

ತತೋ ರಾಜಾ ಪರಂ ಹರ್ಷಮವಾಪ್ಯ ತಮಪೃಚ್ಛತ ।
ದ್ವಿಜವರ್ಯಂ ಸ್ವದೌರ್ಭಾಗ್ಯಕಾರಣೇ ದಯಿತಾಂ ಪ್ರತಿ ॥೨೩॥

ರಾಜೋವಾಚ :—

ಭಗವನ್ ಸರ್ವಲೋಕಸ್ಯ ಮಯಿ ಪ್ರೀತಿರನುತ್ತಮಾ ।
ಕಿನ್ನು ತತ್ಕಾರಣಂ ಯೇನ ಸ್ವಪತ್ನೀ ನಾತಿವತ್ಸಲಾ ॥೨೪॥

---

೨೨. ಮಹಾರಾಜನೇ! ನಾಗಕನ್ಯೆಯಾದ ನಂದೆಯು ತಂದೆಯಿಂದ ಹೀಗೆ ಶಪಿಸಲ್ಪಟ್ಟಿರುವಳು. ಹೀಗೆ ನಿನ್ನ ಪತ್ನಿಯು ಕಪೋತಕನಾಗನಿಂದ ಪಾತಾಲಕ್ಕೆ ಒಯ್ಯಲ್ಪಟ್ಟವಳಾಗಿ ಅವನ ಮಗಳಿಂದ ರಕ್ಷಿಸಲ್ಪಡುತ್ತ ಅಸ್ಖಲಿತ-ವಾದ ಪತಿವ್ರತಾ ಚರಿತವುಳ್ಳವಳಾಗಿ ಈಗ ಅಲ್ಲಿದ್ದಾಳೆ.

ಮಾರ್ಕಂಡೇಯ ಮುನಿಯು ಹೇಳಿದನು :—

೨೩. ತರುವಾಯ ಆ ರಾಜನು ಹೆಚ್ಚಾದ ಆನಂದವನ್ನು ಹೊಂದಿದನು. ಮತ್ತು ಹಾಗೆ ತ್ರಿಕಾಲಜ್ಞನಾಗಿರುವ ದ್ವಿಜೋತ್ತಮನನ್ನು ಕುರಿತು ತನಗೆ ತನ್ನ ಪ್ರಿಯೆಯ ಪ್ರೇಮಾಸ್ಪದತ್ವವಿಲ್ಲದ ದೌರ್ಭಾಗ್ಯದ ಕಾರಣದಲ್ಲಿ ಪ್ರಶ್ನಮಾಡಿದನು.

ರಾಜನು ಹೀಗೆ ಹೇಳಿದನು :—

೨೪. ಪೂಜ್ಯನಾದ ದ್ವಿಜವರ್ಯನೇ! ಸರ್ವಲೋಕಕ್ಕೆ ನನ್ನ ವಿಷಯ-ದಲ್ಲಿ ನಿರುಪಮವಾದ ಪ್ರೀತಿಯುಂಟಾಗಿರುವುದು. ನನ್ನ ಪತ್ನಿಯು ಮಾತ್ರ ನನ್ನಲ್ಲಿ ಅಷ್ಟೊಂದು ಪ್ರೀತಿಯನ್ನಿಟ್ಟಿಲ್ಲ. ಇದಕ್ಕೆ ಏನು ಕಾರಣವು?

ಮಮ ಚಾಸಾವತೀವೇಷ್ಟಾ ಪ್ರಾಣೇಭ್ಯೋಽಪಿ ಮಹಾಮುನೇ ।
ಸಾ ಚ ಮಾಂ ಪ್ರತಿ ದುಃಶೀಲಾ ಬ್ರೂಹಿ ತತ್ಕಾರಣಂ ದ್ವಿಜ ॥೨೫॥

ಋಷಿರುವಾಚ :—

ಪಾಣಿಗ್ರಹಣಕಾಲೇ ತ್ವಂ ಸೂರ್ಯಭೌಮಶನೈಶ್ಚರೈಃ ।
ಶುಕ್ರವಾಚಸ್ಪತಿಭ್ಯಾಂ ಚ ತವ ಭಾರ್ಯಾವಲೋಕಿತಾ ॥೨೬॥

ತನ್ಮುಹೂರ್ತೇಽಭವಚ್ಚಂದ್ರಸ್ತಸ್ಯಾಃ ಸೋಮಸುತಸ್ತಥಾ ।
ಪರಸ್ಪರವಿಪಕ್ಷೌ ತೌ ತತಃ ಪಾರ್ಥಿವ ತೇ ಭೃಶಮ್ ॥೨೭॥

ತದ್ಗಚ್ಛ ತ್ವಂ ಸ್ವಧರ್ಮೇಣ ಪರಿಪಾಲಯ ಮೇದಿನೀಮ್ ।
ಪತ್ನೀಸಹಾಯಃ ಸರ್ವಾಶ್ಚ ಕುರು ಧರ್ಮವತೀಃ ಕ್ರಿಯಾಃ ॥೨೮॥

---

೨೫. ಮಹಾಮುನಿಯೇ! ನನಗಾದರೋ ನನ್ನ ಪ್ರಿಯೆಯು ಪ್ರಾಣಕ್ಕಿಂತ ಅತಿಶಯವಾಗಿ ಪ್ರೇಮಾಸ್ಪದಳಾಗಿರುವಳು. ಅವಳು ನನ್ನಲ್ಲಿ ಪ್ರತಿಕೂಲವಾದ ದುಷ್ಟ ಶೀಲವುಳ್ಳವಳಾಗಿರುವಳು. ದ್ವಿಜನೇ! ಹೀಗಾಗಲು ಕಾರಣವೇನು?

ಋಷಿಯು ಹೇಳಿದನು :—

೨೬. ರಾಜನೇ! ನೀನು ಆಕೆಯ ಪಾಣಿಗ್ರಹಣಮಾಡಿದ ಸಮಯದಲ್ಲಿ ನಿನ್ನಲ್ಲಿ ಸೂರ್ಯ-ಅಂಗಾರಕ-ಶನೈಶ್ಚರಗ್ರಹಗಳ ದೃಷ್ಟಿಯಿತ್ತು. ಹಾಗು ಆಕೆಯಲ್ಲಿ ಶುಕ್ರ-ಗುರು ಗ್ರಹಗಳ ದೃಷ್ಟಿಯಿತ್ತು. ಹೀಗೆ ನೀವಿಬ್ಬರು ಆಯಾಯ ಗ್ರಹಗಳಿಂದ ನೋಡಲ್ಪಡುತ್ತಿದ್ದಿರಿ.

೨೭. ಎಲೈ ಮಹಾರಾಜನೇ! ಹಾಗೆ ಪಾಣಿಗ್ರಹಣ ಮುಹೂರ್ತದಲ್ಲಿ ಚಂದ್ರಗ್ರಹದ ದೃಷ್ಟಿಗೆ ಅವಳು ಪಾತ್ರಳಾಗಿದ್ದಳು. ಅಂತೆಯೆ ಚಂದ್ರಪುತ್ರನಾದ ಬುಧಗ್ರಹದ ದೃಷ್ಟಿಗೆ ನೀನು ಪಾತ್ರನಾಗಿದ್ದೆ. ಬುಧ-ಚಂದ್ರಗ್ರಹಗಳು ಹೆಚ್ಚಾಗಿ ಅನ್ಯೋನ್ಯ ವಿರೋಧವುಳ್ಳವರು.

೨೮. ಈ ಕಾರಣದಿಂದ ಪರಸ್ಪರಾನುಕೂಲ್ಯವಿಲ್ಲದೇ ಇದೆ. ನೀನು ರಾಜ್ಯಕ್ಕೆ ಹೋಗು. ಧರ್ಮದಿಂದ ರಾಜ್ಯವನ್ನು ಪಾಲಿಸು. ಮತ್ತು ಪತ್ನೀಸಮೇತನಾಗಿ ಎಲ್ಲ ಧರ್ಮಕರ್ಮಾನುಷ್ಠಾನಗಳನ್ನು ಮಾಡುತ್ತಿರು.

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತೇ ಪ್ರಣಿಪತ್ಯೈನಮಾರುಹ್ಯ ಸ್ಯನ್ದನಂ ತತಃ
ಉತ್ತಮಃ ಪೃಥಿವೀಪಾಲ ಆಜಗಾಮ ನಿಜಂ ಪುರಮ್ ||೨೯||

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಔತ್ತಮಮನ್ವನ್ತರೇಽಷ್ಟ-ಷಷ್ಟಿತಮೋಽಧ್ಯಾಯಃ

ಮಾರ್ಕಂಡೇಯ ಮುನಿಯು ಹೇಳಿದನು :—

೨೯. ಮುನಿಯು ಹೀಗೆ ಹೇಳಲು ತರುವಾಯ ರಾಜನಾದ ಉತ್ತಮನು ಮುನಿಗೆ ನಮಸ್ಕಾರಮಾಡಿ ತನ್ನ ರಥವನ್ನು ಏರಿಕೊಂಡು ಅಲ್ಲಿಂದ ಹೊರಟು ತನ್ನ ರಾಜಧಾನಿಗೆ ಬಂದುಸೇರಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತೆಂಟನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನಸಪ್ತತಿತಮೋಽಧ್ಯಾಯಃ

(ರಾಜಮಹಿಷ್ಯಾನಯನಮ್, ಔತ್ತಮಮನೂತ್ಪತ್ತಿಶ್ಚ)

ಮಾರ್ಕಣ್ಡೇಯ ಉವಾಚ :—

ತತಃ ಸ್ವನಗರಂ ಪ್ರಾಪ್ಯ ತಂ ದದರ್ಶ ದ್ವಿಜಂ ನೃಪಃ ।
ಸಮೇತಂ ಭಾರ್ಯಯಾ ಚೈವ ಶೀಲವತ್ಯಾ ಮುದಾನ್ವಿತಮ್ ॥೧॥

ಬ್ರಾಹ್ಮಣ ಉವಾಚ :—

ರಾಜವರ್ಯ ಕೃತಾರ್ಥೋಽಸ್ಮಿ ಯತೋ ಧರ್ಮೋ ಹಿ ರಕ್ಷಿತಃ ।
ಧರ್ಮಜ್ಞೇನೇಹ ಭವತಾ ಭಾರ್ಯಾಮಾನಯತಾ ಮಮ ॥೨॥

ಅರವತ್ತೊಂಭತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ತರುವಾಯ ರಾಜನು ತನ್ನ ರಾಜಧಾನಿಗೆ ಬಂದು ಉತ್ತಮಶೀಲದಿಂದ ಕೂಡಿದ ಸಾಧ್ವಿಯಾದ ಭಾರ್ಯೆಯಿಂದ ಕೂಡಿರುವ, ಸಂತೋಷಗೊಂಡ ಚಿತ್ತವುಳ್ಳ ಆ ವಿಪ್ರನನ್ನು ನೋಡಿದನು.

ಬ್ರಾಹ್ಮಣನು ಹೀಗೆ ಹೇಳಿದನು :—

೨. ಎಲೈ, ಶ್ಲಾಘ್ಯನಾದ ಮಹಾರಾಜನೆ! ನಿನ್ನಿಂದ ನಾನು ಕೃತಾರ್ಥನಾಗಿರುವೆನು. ಧರ್ಮವನ್ನು ಅರಿತ ನೀನು ನನ್ನ ಪತ್ನಿಯನ್ನು ತಂದುಕೊಟ್ಟು ಇಲ್ಲಿ ನನ್ನ ಧರ್ಮಾಚರಣೆಯನ್ನು ರಕ್ಷಿಸಿದ್ದೀಯೆ.

ರಾಜೋವಾಚ :—

ಕೃತಾರ್ಥಸ್ತ್ವಂ ದ್ವಿಜಶ್ರೇಷ್ಠ ನಿಜಧರ್ಮಾನುಪಾಲನಾತ್ ।
ವಯಂ ಸಙ್ಕಟಿನೋ ವಿಪ್ರ ಯೇಷಾಂ ಪತ್ನೀ ನ ವೇಶ್ಮನಿ ॥೩॥

ಬ್ರಾಹ್ಮಣ ಉವಾಚ :—

ನರೇನ್ದ್ರ ಸಾ ಹಿ ವಿಪಿನೇ ಭಕ್ಷಿತಾ ಶ್ವಾಪದೈರ್ಯದಿ ।
ಕ್ರೋಧಸ್ಯ ವಶಮಾಗಮ್ಯ ಧರ್ಮೋ ನಾವೇಕ್ಷಿತಸ್ತ್ವಯಾ ॥೪॥

ಅಲಂ ತಯಾ ಕಿಮನ್ಯಸ್ಯಾ ನ ಪಾಣಿರ್ಗೃಹ್ಯತೇ ತ್ವಯಾ ।
ಸನ್ತಿ ರಾಜ್ಞಾಂ ಗೃಹೇ ಕನ್ಯಾಃ ಶೋಭನಾ ನೃಪನನ್ದನ ॥೫॥

ರಾಜನು ಹೀಗೆಂದನು :—

೩. ಎಲೈ ದ್ವಿಜೋತ್ತಮನೇ! ನಿನ್ನ ಸ್ವಧರ್ಮವನ್ನು ರಕ್ಷಿಸಿಕೊಳ್ಳುವಂತಾದುದರಿಂದ ನೀನು ಕೃತಾರ್ಥನಾಗಿದ್ದೀಯೆ. ವಿಪ್ರನೇ! ನಮಗೆ ಮನೆಯಲ್ಲಿ ಪತ್ನಿಯು ಇಲ್ಲದಂತಾದುದರಿಂದ ನಾವು ಸಂಕಟಕ್ಕೆ ಒಳಗಾಗಿರುವೆವು.

ಬ್ರಾಹ್ಮಣನು ಹೇಳಿದನು :—

೪. ಎಲೈ, ಮಹಾರಾಜನೇ! ಅರಣ್ಯದಲ್ಲಿ ನಿನ್ನಿಂದ ತ್ಯಜಿಸಲ್ಪಟ್ಟ ನಿನ್ನ ಪತ್ನಿಯು ಒಂದು ವೇಳೆ ದುಷ್ಟಜಂತುಗಳಿಂದ ತಿನ್ನಲ್ಪಟ್ಟಿದ್ದರೆ ಕೋಪಾವೇಶಕ್ಕೆ ವಶನಾದ ನೀನು ಧರ್ಮವನ್ನು ಗಮನಿಸದೆ ಬಿಟ್ಟೆಯಲ್ಲವೆ?

೫. ಎಲೈ ರಾಜಪುತ್ರನೇ! ಹಾಗೆ ನಿನ್ನಿಂದ ತ್ಯಜಿಸಲ್ಪಟ್ಟ ಪತ್ನಿಯು ಇಲ್ಲವಾದರೆ ಬೇಡ. ನೀನು ಬೇರೊಬ್ಬಳನ್ನು ಏಕೆ ಪಾಣಿಗ್ರಹಣಮಾಡಿಕೊಳ್ಳಬಾರದು? ಅನೇಕ ಮಂದಿ ಸುಂದರಿಯರಾದ ಕನ್ಯೆಯರು ಅಲ್ಲಲ್ಲಿ ರಾಜಗೃಹಗಳಲ್ಲಿ ಇರುವರು.

ರಾಜೋವಾಚ :—

ನ ಭಕ್ಷಿತಾ ಮೇ ದಯಿತಾ ಶ್ವಾಪದೈಃ ಸಾ ಹಿ ಜೀವತಿ।
ಅವಿದೂಷಿತಚಾರಿತ್ರಾ ಕಥಮೇತತ್ಕರೋಮ್ಯಹಮ್ ॥೬॥

ಬ್ರಾಹ್ಮಣ ಉವಾಚ :—

ಯದಿ ಜೀವತಿ ತೇ ಭಾರ್ಯಾ ನ ಚೈವ ವ್ಯಭಿಚಾರಿಣೀ।
ಅಪತ್ನೀಕತ್ವತಾಜನ್ಮ ಕಿಂ ಪಾಪಂ ಕ್ರಿಯತೇ ತ್ವಯಾ ॥೭॥

ರಾಜೋವಾಚ :—

ಆನೀತಾಪಿ ಹಿ ಸಾ ವಿಪ್ರ ಪ್ರತಿಕೂಲಾ ಸದೈವ ಮೇ ।
ದುಃಖಾಯ ನ ಸುಖಾಯಾಲಂ ತಸ್ಯಾ ಮೈತ್ರೀ ನ ವೈ ಮಯಿ ॥೮॥

ರಾಜನು ಇಂತೆಂದನು :—

೬. ನನ್ನ ಪ್ರೇಯಸಿಯು ಕ್ರೂರಜಂತುಗಳಿಂದ ಭಕ್ಷಿಸಲ್ಪಡಲಿಲ್ಲ. ಅವಳು ಬದುಕಿದ್ದಾಳೆ. ಹಾಗು ಅವಳು ಕೆಡದಿರುವ ಚಾರಿತ್ರವುಳ್ಳವಳೂ ಆಗಿರುವಳು. ಹೀಗಿರಲು ನಾನು ಮುಂದೇನು ಮಾಡಲಿ ?

ಬ್ರಾಹ್ಮಣನು ಹೇಳಿದನು :—

೭. ನಿನ್ನ ಭಾರ್ಯೆಯು ಜೀವಂತಳಾಗಿರುವುದಾದರೆ ಮತ್ತು ಚಾರಿತ್ರ-ಚ್ಯುತಿಯಿಲ್ಲದಂತೆ ಇರುವಳಾದರೆ ನಿನ್ನಿಂದ ಪತ್ನಿಯನ್ನು ಬಿಟ್ಟದ್ದರಿಂದ ಸಂಭವಿಸುವ ಪಾಪವು ಏಕೆ ಆಚರಿಸಲ್ಪಡುವುದು ?

ರಾಜನು ಹೇಳಿದನು :—

೮. ವಿಪ್ರೋತ್ತಮನೇ! ನನ್ನಿಂದ ನನ್ನ ಪತ್ನಿಯು ತರಲ್ಪಟ್ಟರೂ ಕೂಡ ಅವಳು ನನ್ನಲ್ಲಿ ಯಾವಾಗಲೂ ಪ್ರತಿಕೂಲಳಾಗಿಯೇ ವರ್ತಿಸುವಳು. ಅಂತಹವಳು ನನ್ನ ಸುಖಕ್ಕೆ ಬದಲು ದುಃಖಕ್ಕೆ ಕಾರಣಳಾಗುವಳು. ಅವಳಿಗೆ ನನ್ನಲ್ಲಿ ಪ್ರೀತಿಯು ಇಲ್ಲ.

ಯಥಾ ತೇ ಬ್ರಾಹ್ಮಣೀ ವಿಪ್ರ ವಶಗಾ ತವ ಸುನ್ದರೀ ।
ತಥಾ ತ್ವಂ ಕುರು ಯತ್ನಂ ಮೇ ಯಥಾ ಸಾ ವಶಗಾಮಿನೀ ॥೯॥

ಬ್ರಾಹ್ಮಣ ಉವಾಚ :—

ತ್ವಯಿ ಸಂಪ್ರೀತಯೋಃ ತಸ್ಯಾ ವರೇಷ್ಟಿರುಪಕಾರಿಣೀ ।
ಕ್ರಿಯತೇ ಮಿತ್ರಕಾಮ್ಯೈರ್ಯಾ ಮಿತ್ರವಿನ್ದಾಂ ಕರೋಮಿ ತಾಮ್ ॥೧೦॥

ಅಪ್ರೀತಯೋಃ ಪ್ರೀತಿಕರೀ ಸಾ ಹಿ ಸಞ್ಜನನೀ ಪರಮ್ ।
ಭಾರ್ಯಾಪತ್ಯೋರ್ಮನುಷ್ಯೇನ್ದ್ರ ತಾಂ ತವೇಷ್ಟಿಂ ಕರೋಮ್ಯಹಮ್ ॥೧೧॥

ಯತ್ರ ತಿಷ್ಠತಿ ಸಾ ಸುಭ್ರೂಸ್ತವ ಭಾರ್ಯಾ ಮಹೀಪತೇ ।
ತಸ್ಮಾದಾನೀಯತಾಂ ಸಾ ತೇ ಪರಾಂ ಪ್ರೀತಿಮುಪೈಷ್ಯತಿ ॥೧೨॥

---

೯. ದ್ವಿಜೋತ್ತಮನೇ! ಸುಂದರಿಯಾದ ನಿನ್ನ ಭಾರ್ಯೆಯು ಈಗ ಹೇಗೆ ನಿನಗೆ ವಶಳಾಗಿ ಅನುಕೂಲತೆಯಿಂದ ವರ್ತಿಸುತ್ತಿರುವಳೋ ಹಾಗೆ ನನ್ನ ಪತ್ನಿಯು ನನ್ನಲ್ಲಿ ವಶಳಾಗಿರುವಂತೆ ನೀನು ಏನಾದರೂ ಯತ್ನವನ್ನು ಮಾಡು.

ಬ್ರಾಹ್ಮಣನು ಹೇಳಿದನು :—

೧೦. ನಿನ್ನ ಆ ಪತ್ನಿಯು ನಿನ್ನನ್ನು ಪ್ರೀತಿಸುವಂತೆ ಮಾಡಲು ಉತ್ತಮವಾದ ಒಂದು ಇಷ್ಟಿಯು ಉಪಕಾರಮಾಡುವುದು. ಪರಸ್ಪರವಾಗಿ ಮೈತ್ರಿಯನ್ನು ಬಯಸುವವರು ಆ ಇಷ್ಟಿಯನ್ನು ಆಚರಿಸುವರು. ಅಂತಹ ಮಿತ್ರವಿಂದಾ ಎಂಬ ಇಷ್ಟಿಯನ್ನು ನಾನು ಮಾಡುತ್ತೇನೆ.

೧೧. ಪ್ರಜಾಪಾಲಕನೇ! ಪರಸ್ಪರವಾಗಿ ಪ್ರೀತಿಯಿಲ್ಲದಂತಹ ಪತಿ-ಪತ್ನಿಯರಿಗೆ ಮಿತ್ರವಿಂದೇಷ್ಟಿಯು ಅತಿಶಯವಾದ ಪ್ರೀತಿಯನ್ನು ಉಂಟುಮಾಡು-ವುದು. ಆದುದರಿಂದ ನಿನಗೋಸ್ಕರ ನಾನು ಆ ಇಷ್ಟಿಯನ್ನು ಮಾಡುತ್ತೇನೆ.

೧೨. ಭೂಪಾಲಕನೇ! ಸುಂದರಾಂಗಿಯಾದ ನಿನ್ನ ಪತ್ನಿಯು ಎಲ್ಲಿರು-ವಳೋ ಅಲ್ಲಿಂದ ಅವಳು ಬೇಗ ತರಲ್ಪಡಲಿ. ನಾನು ಮಾಡುವ ಇಷ್ಟಿಕರ್ಮದ ಪ್ರಭಾವದಿಂದ ಅವಳು ನಿನ್ನಲ್ಲಿ ಅತಿಶಯವಾದ ಪ್ರೀತಿಯನ್ನು ಇಡುವಳು.

ತಸ್ಯಾಸ್ತವ ಹಿತಾರ್ಥಾಯ ಧರ್ಮೋ ಯತ್ರ ನ ಸೀದತಿ ॥೧೩॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತಃ ಸ ತು ಸಮ್ಭಾರಾನಶೇಷಾನವನೀಪತಿಃ ।
ಆನಿನಾಯ ಚಕಾರೇಷ್ಟಿಂ ಸ ಚ ತಾಂ ದ್ವಿಜಸತ್ತಮಃ ॥೧೪॥

ಸಪ್ತಕೃತ್ವಃ ಸ ತು ತದಾ ಚಕಾರೇಷ್ಟಿಂ ಪುನಃ ಪುನಃ ।
ತಸ್ಯ ರಾಜ್ಞೋ ದ್ವಿಜಶ್ರೇಷ್ಠೋ ಭಾರ್ಯಾಸಮ್ಪಾದನಾಯ ವೈ॥೧೫॥

ಯದಾರೋಪಿತಮೈತ್ರಾಂ ತಾಮಮನ್ಯತ ಮಹಾಮುನಿಃ ।
ಸ್ವಭರ್ತರಿ ತದಾ ವಿಪ್ರಸ್ತಮುವಾಚ ನರಾಧಿಪಮ್ ॥೧೬॥

---

೧೩. ಹಾಗೆ ನಿನ್ನ ಮತ್ತು ನಿನ್ನ ಪತ್ನಿಯ ಹಿತಕ್ಕಾಗಿ ನಾನು ಮಿತ್ರವಿಂದಾ ಎಂಬ ಇಷ್ಟಿಯನ್ನು ಮಾಡಿ ನೀವು ಪರಸ್ಪರ ಪ್ರೀತಿಯಿಂದ ಇರುವಂತೆ ಮಾಡುವೆನು. ಹಾಗೆ ಅವಳು ನಿನ್ನನ್ನು ಪ್ರೀತಿಸುವಂತಾದರೆ ನಿನ್ನ ಗೃಹಸ್ಥಧರ್ಮವು ಲೋಪವಿಲ್ಲದೇ ನಡೆಯುವುದು.

ಮಾರ್ಕಂಡೇಯ ಮುನಿಯು ಹೇಳಿದನು :—

೧೪. ಬ್ರಾಹ್ಮಣನಿಂದ ಹೀಗೆ ಹೇಳಲ್ಪಟ್ಟಿರುವ ರಾಜನು ಕೂಡಲೆ ಇಷ್ಟಿಯ ಅನುಷ್ಠಾನಕ್ಕೆ ಬೇಕಾಗಿರುವ ಸಾಮಗ್ರಿಯನ್ನು ತರಿಸಿಕೊಟ್ಟನು. ಆ ದ್ವಿಜೋತ್ತಮನು ಹಾಗೆಯೇ ಇಷ್ಟಿಯನ್ನು ಮಾಡಿದನು.

೧೫. ಆಗ ದ್ವಿಜವರ್ಯನು ಆ ರಾಜನಿಗೆ ಪತ್ನಿಯನ್ನು ಪತಿಪ್ರೇಮದಿಂದ ಕೂಡಿರುವಂತೆ ಮಾಡಲು ಮಿತ್ರವಿಂದೇಷ್ಟಿಯನ್ನು ಮತ್ತೆ ಮತ್ತೆ ಏಳು ಸಲ ಮಾಡಿದನು.

೧೬. ಮಹಾಮುನಿಯಾದ ಆ ವಿಪ್ರನು ಮತ್ತೆ ಮತ್ತೆ ಇಷ್ಟಿಯ ಅನುಷ್ಠಾನದ ಬಲದಿಂದ ರಾಜಪತ್ನಿಯು ಪತಿಯಲ್ಲಿ ಹುಟ್ಟಿದ ಪ್ರೇಮಭಾವವುಳ್ಳವ-ಳಾದಳೆಂದು ಯಾವಾಗ ಅರಿತನೋ ಆಗ ಆ ರಾಜನನ್ನು ಕುರಿತು ಹೇಳಿದನು.

ಆನೀಯತಾಂ ನರಶ್ರೇಷ್ಠ ಯಾ ತವೇಷ್ಟಾತ್ಮನೋಽನ್ತಿಕಮ್ ।
ಭುಙ್ಕ್ಷ್ವ ಭೋಗಾಂಸ್ತಯಾ ಸಾರ್ಧಂ ಯಜ ಯಜ್ಞಾಂಸ್ತಥಾದೃತಃ ॥೧೭॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತಸ್ತೇನ ವಿಪ್ರೇಣ ಭೂಪಾಲೋ ವಿಸ್ಮಿತಸ್ತದಾ ।
ಸಸ್ಮಾರ ತಂ ಮಹಾವೀರ್ಯಂ ಸತ್ಯಸನ್ಧಂ ನಿಶಾಚರಮ್ ॥೧೮॥

ಸ್ಮೃತಸ್ತೇನ ತದಾ ಸದ್ಯಃ ಸಮುಪೇತ್ಯ ನರಾಧಿಪಮ್ ।
ಕಿಂ ಕರೋಮೀತಿ ಸೋಽಪ್ಯಾಹ ಪ್ರಣಿಪತ್ಯ ಮಹಾಮುನೇ ॥೧೯॥

ತತಸ್ತೇನ ನರೇನ್ದ್ರೇಣ ವಿಸ್ತರೇಣ ನಿವೇದಿತೇ ।
ಗತ್ವಾ ಪಾತಾಲಮಾದಾಯ ರಾಜಪತ್ನೀಮುಪಾಯಯೌ ॥೨೦॥

---

೧೭. ಎಲೈ ರಾಜನೇ ! ನಿನ್ನ ಮನಸ್ಸಿನ ಮೆಚ್ಚಿನ ಪತ್ನಿಯನ್ನು ನೀನು ಈಗ ನಿನ್ನ ಬಳಿಗೆ ತರಿಸಿಕೋ. ಆಕೆಯೊಡನೆ ಉತ್ತಮವಾದ ಭೋಗವನ್ನು ಅನುಭವಿಸು. ಮತ್ತು ಶ್ರದ್ಧಾವಂತನಾಗಿ ಅನೇಕ ಯಜ್ಞಗಳನ್ನು ಮಾಡು.

ಮಾರ್ಕಂಡೇಯ ಮುನಿಯು ಹೇಳಿದನು :—

೧೮. ಆ ವಿಪ್ರನಿಂದ ಈ ರೀತಿಯಾಗಿ ನುಡಿಯಲ್ಪಟ್ಟ ರಾಜನು ಆಗ ಬಲು ವಿಸ್ಮಯಗೊಂಡವನಾಗಿ ಕೂಡಲೆ ಮಹಾವೀರ್ಯಶಾಲಿಯೂ, ಸತ್ಯವಾದ ಪ್ರತಿಜ್ಞೆಯುಳ್ಳವನೂ ಆದ ಬಲಾಕರಾಕ್ಷಸನನ್ನು ಸ್ಮರಿಸಿಕೊಂಡನು.

೧೯. ಕ್ರೌಷ್ಟುಕಿಮುನಿಯೇ ! ಆಗ ರಾಜನಿಂದ ಸ್ಮರಿಸಲ್ಪಟ್ಟ ರಾಕ್ಷಸನು ಕೂಡಲೆ ರಾಜನ ಬಳಿಗೆ ಬಂದು ಭಕ್ತಿಯಿಂದ ನಮಸ್ಕಾರಮಾಡಿ ರಾಜನನ್ನು ಕುರಿತು ಸೇವಕನಾದ ನಾನು ಏನು ಮಾಡಲಿ ಎಂದು ಪ್ರಶ್ನಿಸಿದನು ?

೨೦. ತರುವಾಯ ಆ ರಾಜನಿಂದ ಬಲಾಕರಾಕ್ಷಸನಿಗೆ ಪ್ರಕೃತಕಾರ್ಯದ ಪ್ರಸಂಗವು ವಿಸ್ತಾರವಾಗಿ ಹೇಳಲ್ಪಟ್ಟ ಮೇಲೆ ಆ ರಾಕ್ಷಸನು ಪಾತಾಲಕ್ಕೆ ಹೋಗಿ ಅಲ್ಲಿಂದ ರಾಜಪತ್ನಿಯನು ಕರೆದುಕೊಂಡು ಬಂದನು.

ಆನೀತಾ ಚಾತಿಹಾರ್ದೇನ ಸಾ ದದರ್ಶ ತದಾ ಪತಿಮ್ ।
ಉವಾಚ ಚ ಪ್ರಸೀದೇತಿ ಭೂಯೋ ಭೂಯೋ ಮುದಾನ್ವಿತಾ ॥೨೧॥

ತತಃ ಸ ರಾಜಾ ರಭಸಾತ್ಪರಿಷ್ವಜ್ಯಾಹ ಮಾನಿನೀಮ್ ।
ಪ್ರಿಯೇ ಪ್ರಸನ್ನ ಏವಾಹಂ ಭೂಯೋಽಪ್ಯೇವಂ ಬ್ರವೀಷಿ ಕಿಮ್॥೨೨॥

ಪತ್ನ್ಯುವಾಚ :—

ಯದಿ ಪ್ರಸಾದಪ್ರವಣಂ ನರೇನ್ದ್ರ ಮಯಿ ತೇ ಮನಃ ।
ತದೇತದಭಿಯಾಚೇ ತ್ವಾಂ ತತ್ಕುರುಷ್ವ ಮಮಾರ್ಹಣಮ್ ॥೨೩॥

ರಾಜೋವಾಚ :—

ನಿಃಶಙ್ಕೇ ಬ್ರೂಹಿ ಮತ್ತೋ ಯದ್ಭವತ್ಯಾ ಕಿಂಚಿದೀಪ್ಸಿತಮ್ ।
ತದಲಭ್ಯಂ ನ ತೇ ಭೀರು ತವಾಯತ್ತೋಽಸ್ಮಿ ನಾನ್ಯಥಾ ॥೨೪॥

---

೨೧. ಹಾಗೆ ತರಲ್ಪಟ್ಟಿರುವ ರಾಜಪತ್ನಿಯು ಆಗ ಹೆಚ್ಚಿನ ಪ್ರೀತಿಯಿಂದ ಪತಿಯನ್ನು ನೋಡಿದಳು. ಮತ್ತು ಆನಂದದಿಂದ ಕೂಡಿದವಳಾಗಿ "ನನ್ನಲ್ಲಿ ಅನುಗ್ರಹ ತೋರು" ಎಂದು ಹೇಳುತ್ತ ಮತ್ತೆ ಮತ್ತೆ ಪ್ರಾರ್ಥಿಸಿಕೊಂಡಳು.

೨೨. ತರುವಾಯ ಆ ರಾಜನು ಮಾನಿನಿಯಾದ ಪತ್ನಿಯನ್ನು ರಭಸದಿಂದ ಆಲಿಂಗಿಸಿಕೊಂಡು "ಪ್ರಿಯೇ! ನಾನು ನಿನ್ನಲ್ಲಿ ಯಾವಾಗಲೂ ಪ್ರಸನ್ನನಾಗಿರುವೆನು. ಹೀಗೇಕೆ ಮತ್ತೆ ಮತ್ತೆ ಹೇಳುತ್ತಿರುವೆ" ಎಂದು ಹೇಳಿದನು.

ರಾಜಪತ್ನಿಯು ಹೇಳಿದಳು :—

೨೩. ನರೇಂದ್ರನಾದ ಪತಿದೇವನೆ! ನಿನ್ನ ಮಾನಸವು ನನ್ನಲ್ಲಿ ಅನುಗ್ರಹಪೂರ್ಣವಾಗಿದ್ದರೆ ಆಗ ನಾನು ನಿನ್ನಲ್ಲಿ ಒಂದು ಇಷ್ಟವನ್ನು ಪ್ರಾರ್ಥಿಸುವೆನು. ಅದನ್ನು ನೆರವೇರಿಸಿ ನೀನು ನನ್ನಲ್ಲಿ ಗೌರವವನ್ನು ಇಡುವವನಾಗು.

ರಾಜನು ಹೇಳಿದನು :—

೨೪. ಭೀರುಸ್ವಭಾವದ ಪ್ರಿಯೆಯೇ! ನನ್ನಿಂದ ನಿನಗೆ ಆಗಬೇಕೆಂದಿರುವ ಇಷ್ಟವಾವುದೋ ಅದನ್ನು ಶಂಕೆಪಡದಂತೆ ಹೇಳು. ಆ ಇಷ್ಟವು ನಿನಗೆ ಎಂದೂ ದುರ್ಲಭವಲ್ಲ. ನಾನು ಸಂಪೂರ್ಣವಾಗಿ ನಿನಗೆ ಅಧೀನನಾಗಿರುವೆನು.

ಪತ್ನ್ಯುವಾಚ :—

ಮದರ್ಥಂ ತೇನ ನಾಗೇನ ಸುತಾ ಶಪ್ತಾ ಸಖೀ ಮಮ ।
ಮೂಕಾ ಭವಿಷ್ಯಸೀತ್ಯಾಹ ಸಾ ಚ ಮೂಕತ್ವಮಾಗತಾ ॥೨೫॥

ತಸ್ಯಾಃ ಪ್ರತಿಕ್ರಿಯಾಂ ಪ್ರೀತ್ಯಾ ಮಮ ಶಕ್ನೋಷಿ ಚೇದ್ಭವಾನ್ ।
ವಾಗ್ವಿಘಾತಪ್ರಶಾನ್ತ್ಯರ್ಥಂ ತತಃ ಕಿಂ ನ ಕೃತಂ ಮಮ ॥೨೬॥

ಮಾರ್ಕಣ್ಡೇಯ ಉವಾಚ :—

ತತಃ ಸ ರಾಜಾ ತಂ ವಿಪ್ರಮಾಹಾಸ್ಮಿನ್ನೀದೃಶೀ ಕ್ರಿಯಾ ।
ತನ್ಮೂಕತಾಪನೋದಾಯ ಸ ಚ ತಂ ಪ್ರಾಹ ಪಾರ್ಥಿವಮ್ ॥೨೭॥

ರಾಜಪತ್ನಿಯು ನುಡಿದಳು :—

೨೫. ಆ ನಾಗರಾಜನಿಂದ ತನ್ನ ಮಗಳೂ ಮತ್ತು ನನ್ನ ಸಖಿಯೂ ಆದ ನಂದೆಯು "ಮೂಗಳಾಗು" ಎಂದು ನನಗೋಸ್ಕರ ಶಪಿಸಲ್ಪಟ್ಟವಳಾದಳು. ಹಾಗೆಯೇ ಅವಳು ಮೂಕತ್ವವನ್ನು ಹೊಂದಿರುವಳು.

೨೬. ನೀನು ನನ್ನ ಮೇಲಿರುವ ಪ್ರೀತಿಯಿಂದ ನನ್ನ ಸಖಿಗೆ ಉಂಟಾದ ವಾಗಿಂದ್ರಿಯದ ಭ್ರಂಶಕ್ಕೆ ಶಾಂತಿರೂಪವಾಗಿ ಪ್ರತಿಕ್ರಿಯೆಯನ್ನು ಮಾಡಲು ಶಕ್ತನಾಗಿದ್ದರೆ ಅದೊಂದನ್ನು ಮಾಡಿದರೆ ನನಗೋಸ್ಕರ ಮಾಡದಿರುವುದು ಮತ್ತೇನಿದೆ?

ಮಾರ್ಕಂಡೇಯ ಮುನಿಯು ಹೇಳಿದನು :—

೨೭. ತರುವಾಯ ರಾಜನು ಆ ವಿಪ್ರನನ್ನು ಹೀಗೆ ಕೇಳಿದನು :— ಮೂಕತ್ವವು ನಿವಾರಣೆಯಾಗಿ ವಾಗಿಂದ್ರಿಯ ಪ್ರಾಪ್ತಿಯಾಗಲು ಯಾವ ಕರ್ಮಾನುಷ್ಠಾನವು ಸಾಧನವು? ಆ ವಿಪ್ರನು ರಾಜನಿಗೆ ಹೀಗೆಂದು ಹೇಳಿದನು.

ಬ್ರಾಹ್ಮಣ ಉವಾಚ :—

ಭೂಪ ಸಾರಸ್ವತೀಮಿಷ್ಟಿಂ ಕರೋಮಿ ವಚನಾತ್ತವ ।
ಪತ್ನೀ ತವೇಯಮಾನೃಣ್ಯಂ ಯಾತು ತದ್ವಾಕ್ಪ್ರವರ್ತನಾತ್ ॥೨೮॥

ಮಾರ್ಕಣ್ಡೇಯ ಉವಾಚ:—

ಇಷ್ಟಿಂ ಸಾರಸ್ವತೀಂ ಚಕ್ರೇ ತದರ್ಥಂ ಸ ದ್ವಿಜೋತ್ತಮಃ ।
ಸಾರಸ್ವತಾನಿ ಸೂಕ್ತಾನಿ ಜಜಾಪ ಚ ಸಮಾಹಿತಃ ॥೨೯॥

ತತಃ ಪ್ರವೃತ್ತವಾಕ್ಯಾಂ ತಾಂ ಗರ್ಗಃ ಪ್ರಾಹ ರಸಾತಲೇ ।
ಉಪಕಾರಃ ಸಖೀಭರ್ತ್ರಾ ಕೃತೋಽಯಮತಿದುಷ್ಕರಃ ॥೩೦॥

ಬ್ರಾಹ್ಮಣನು ಹೇಳಿದನು :—

೨೮. ಮಹಾರಾಜನೇ! ನಿನ್ನ ಆದೇಶದಂತೆ ಸಾರಸ್ವತೀಷ್ಟಿ ಎಂಬ ಒಂದು ಕರ್ಮವನ್ನು ಮಾಡುತ್ತೇನೆ. ಆದರಿಂದ ನಿನ್ನ ಪತ್ನಿಯ ಸಖಿಗೆ ಸ್ಫುಟವಾಗಿ ಮಾತನಾಡುವಂತಾಗಿ ನಿನ್ನ ಪತ್ನಿಯು ಸಖಿಯ ಉಪಕಾರಕ್ಕೆ ಆನೃಣ್ಯವನ್ನು ಹೊಂದಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೨೯. ಆ ದ್ವಿಜೋತ್ತಮನು ರಾಜನಿಗೋಸ್ಕರ ಸಾರಸ್ವತೀ ಎಂದು ಕರೆಯಲ್ಪಡುವ ಇಷ್ಟಿಯನ್ನು ಮಾಡಿದನು. ಮತ್ತು ಸಮಾಧಾನಚಿತ್ತವುಳ್ಳವನಾಗಿ ಸರಸ್ವತೀ ದೇವಿಯನ್ನು ಸ್ತುತಿಸುವ ಸಾರಸ್ವತ ಸೂಕ್ತದ ಮಂತ್ರಗಳನ್ನು ಜಪಿಸಿದನು.

೩೦. ತರುವಾಯ ಮಾತನಾಡತೊಡಗಿದ ನಾಗಕನ್ಯೆಯಾದ ನಂದೆಗೆ ಗರ್ಗಮುನಿಯು ಪಾತಾಳಲೋಕದಲ್ಲಿ “ ನಿನ್ನ ಸಖಿಯ ಪತಿಯು ನಿನಗೆ ಯಾರಿಂದಲೂ ಮಾಡಲಾಗದ ಉಪಕಾರ ಮಾಡಿರುವನು ” ಎಂದು ಹೇಳಿದನು.

ಇತ್ಥಂ ಜ್ಞಾನಂ ಸಮಾಸಾದ್ಯ ನನ್ದಾ ಶೀಘ್ರಗತಿಃ ಪುರಮ್ ।
ತತೋ ರಾಜ್ಞೀಂ ಪರಿಷ್ವಜ್ಯ ಸ್ವಸಖೀಮುರಗಾತ್ಮಜಾ ॥೩೧॥

ತಂ ಚ ಸಂಸ್ತೂಯ ಭೂಪಾಲಂ ಕಲ್ಯಾಣೋಕ್ತ್ಯಾ ಪುನಃ ಪುನಃ ।
ಉವಾಚ ಮಧುರಂ ನಾಗೀ ಕೃತಾಸನಪರಿಗ್ರಹಾ ॥೩೨॥

ಉಪಕಾರಃ ಕೃತೋ ವೀರ ಭವತಾ ಯೋ ಮಮಾಧುನಾ ।
ತೇನಾಸ್ಮ್ಯಾಕೃಷ್ಟಹೃದಯಾ ಯದ್ಬ್ರವೀಮಿ ಶೃಣುಷ್ವ ತತ್ ॥೩೩॥

ತವ ಪುತ್ರೋ ಮಹಾವೀರ್ಯೋ ಭವಿಷ್ಯತಿ ನರಾಧಿಪ ।
ತಸ್ಯಾಪ್ರತಿಹತಂ ಚಕ್ರಮಸ್ಯಾಂ ಭುವಿ ಭವಿಷ್ಯತಿ ॥೩೪॥

ಸರ್ವಾರ್ಥಶಾಸ್ತ್ರತತ್ತ್ವಜ್ಞೋ ಧರ್ಮಾನುಷ್ಠಾನತತ್ಪರಃ ।
ಮನ್ವನ್ತರೇಶ್ವರೋ ಧೀಮಾನ್ ಭವಿಷ್ಯತಿ ಸ ವೈ ಮನುಃ ॥೩೫॥

---

೩೧. ನಾಗರಾಜನ ಪುತ್ರಿಯಾದ ನಂದೆಯು ಹೀಗೆ ರಾಜನ ಉಪಕಾರವನ್ನು ತಿಳಿದು ಶೀಘ್ರವಾದ ಗತಿಯಿಂದ ನಗರಕ್ಕೆ ಬಂದು ಉಪಕಾರ ಮಾಡಿದ ತನ್ನ ಸಖಿಯಾದ ರಾಜಪತ್ನಿಯನ್ನು ಅಪ್ಪಿಕೊಂಡಳು.

೩೨. ತರುವಾಯ ಆಸನದಲ್ಲಿ ಕುಳಿತಿರುವ ನಾಗಕನ್ಯೆಯು ಕಲ್ಯಾಣಕರವಾದ ನುಡಿಗಳಿಂದ ಆ ರಾಜನನ್ನು ಮತ್ತೆ ಮತ್ತೆ ಸ್ತೋತ್ರಮಾಡಿ ಮಧುರವಾಗಿ ಮಾತನಾಡಿದಳು.

೩೩. ವೀರನಾದ ರಾಜನೇ! ನಿನ್ನಿಂದ ಈಗ ನನಗೆ ಯಾವ ಉಪಕಾರವು ಮಾಡಲ್ಪಟ್ಟಿರುವುದೋ ಅದರಿಂದ ನಾನು ಸೆಳೆಯಲ್ಪಟ್ಟ ಹೃದಯವುಳ್ಳವಳಾಗಿದ್ದೇನೆ. ನಾನು ಹೇಳುವ ಮಾತನ್ನು ಕೇಳು.

೩೪. ಮಹಾರಾಜನೇ ! ಮಹಾವೀರ್ಯ ಸಂಪನ್ನನಾದ ಪುತ್ರನು ನಿನಗೆ ಜನಿಸುವನು. ಅವನ ರಥಚಕ್ರವು ಸಮಗ್ರ ಭೂಮಂಡಲದಲ್ಲಿ ತಡೆಯಿಲ್ಲದಂತೆ ಸಂಚರಿಸುವುದು.

೩೫. ಮತ್ತು ನಿನ್ನ ಪುತ್ರನು ಸಮಸ್ತ ಅರ್ಥಶಾಸ್ತ್ರಗಳ ತತ್ತ್ವವನ್ನರಿತವನೂ, ಧರ್ಮಾನುಷ್ಠಾನದಲ್ಲಿ ತತ್ಪರತೆಯುಳ್ಳವನೂ, ಪ್ರಜ್ಞಾವಂತನೂ, ಮತ್ತು ಮನ್ವಂತರಕ್ಕೆ ಅಧಿಪತಿಯಾದ ಮನುವೂ ಆಗುವನು.

ಮಾರ್ಕಣ್ಡೇಯ ಉವಾಚ :—

ಇತಿ ದತ್ತ್ವಾ ವರಂ ತಸ್ಮೈ ನಾಗರಾಜಸುತಾ ತತಃ ।
ಸಖೀಂ ತಾಂ ಸಮ್ಪರಿಷ್ವಜ್ಯ ಪಾತಾಲಮಗಮನ್ಮುನೇ ॥೩೬॥

ತತ್ರ ತಸ್ಯ ತಯಾ ಸಾರ್ಧಂ ರಮತಃ ಪೃಥಿವೀಪತೇಃ ।
ಜಗಾಮ ಕಾಲಃ ಸುಮಹಾನ್ ಪ್ರಜಾಃ ಪಾಲಯತಸ್ತಥಾ ॥೩೭॥

ತತಃ ಸ ತಸ್ಯಾಂ ತನಯೋ ಜಜ್ಞೇ ರಾಜ್ಞೋ ಮಹಾತ್ಮನಃ ।
ಪೌರ್ಣಮಾಸ್ಯಾಂ ಯಥಾ ಕಾನ್ತಶ್ಚನ್ದ್ರಃ ಸಮ್ಪೂರ್ಣಮಣ್ಡಲಃ ॥೩೮॥

ತಸ್ಮಿಞ್ಜಾತೇ ಮುದಂ ಪ್ರಾಪುಃ ಪ್ರಜಾಃ ಸರ್ವಾಃ ಸಹಾಮರಾಃ ।
ದೇವದುನ್ದುಭಯೋ ನೇದುಃ ಪುಷ್ಪವೃಷ್ಟಿಃ ಪಪಾತ ಚ ॥೩೯॥

ಮಾರ್ಕಂಡೇಯ ಮುನಿಯು ಹೀಗೆಂದನು :—

೩೬. ಕ್ರೌಷ್ಟುಕಿ ಮುನಿಯೇ! ತರುವಾಯ ನಾಗರಾಜನ ಪುತ್ರಿಯಾದ ನಂದೆಯು ರಾಜನಿಗೆ ಹೀಗೆ ವರವನ್ನು ಕೊಟ್ಟು ತನ್ನ ಸಖಿಯಾದ ರಾಜಪತ್ನಿ-ಯನ್ನು ಪ್ರೀತಿಯಿಂದ ಆಲಿಂಗಿಸಿ ಪಾತಾಲಕ್ಕೆ ಹೊರಟುಹೋದಳು.

೩೭. ತರುವಾಯ ರಾಜಧಾನಿಯಲ್ಲಿ ತನ್ನ ಪ್ರಿಯತಮೆಯೊಡನೆ ರತಿ-ಸುಖವನ್ನು ಅನುಭವಿಸುತ್ತ ಹಾಗೆಯೇ ಪ್ರಜೆಗಳನ್ನು ಪಾಲಿಸುತ್ತ ರಾಜ್ಯಭಾರ-ಮಾಡುತ್ತಿದ್ದ ರಾಜನಿಗೆ ಬಹುಕಾಲವು ಕಳೆಯಿತು.

೩೮. ಅನಂತರ ಮಹಾತ್ಮನಾದ ಆ ರಾಜನಿಗೆ ಧರ್ಮಪತ್ನಿಯಲ್ಲಿ ಪೂರ್ಣಿಮಾ ತಿಥಿಯಲ್ಲಿ ಪೂರ್ಣಮಂಡಲದಿಂದ ರಾಜಿಸುವ ಚಂದ್ರನಂತೆ ಮನ-ರಂಜಕನಾದ ಪುತ್ರನು ಜನಿಸಿದನು.

೩೯. ಹೀಗೆ ರಾಜಕುಮಾರನು ಜನ್ಮವೆತ್ತಲು ಸಮಸ್ತ ಪ್ರಜೆಗಳು ಮತ್ತು ಅಮರರು ಸಂತೋಷವನ್ನು ಹೊಂದಿದರು. ದೇವಲೋಕದ ದುಂದುಭಿ ಮುಂತಾದ ವಾದ್ಯಗಳು ಧ್ವನಿಗೈದುವು. ಮತ್ತು ಆಕಾಶದಿಂದ ಪುಷ್ಪವೃಷ್ಟಿಯು ಬಿದ್ದಿತು.

ತಸ್ಯ ದೃಷ್ಟ್ವಾ ವಪುಃ ಕಾನ್ತಂ ಭವಿಷ್ಯಂ ಶೀಲಮೇವ ಚ ।
ಔತ್ತಮಶ್ಚೇತಿ ಮುನಯೋ ನಾಮ ಚಕ್ರುಃ ಸಮಾಗತಾಃ ॥೪೦॥

ಜಾತೋಽಯಮುತ್ತಮೇ ವಂಶೇ ಬಾಲಃ ಕಾಲೇ ತಥೋತ್ತಮೇ ।
ಉತ್ತಮಾವಯವಸ್ತೇನ ಔತ್ತಮೋಽಯಂ ಭವಿಷ್ಯತಿ ॥೪೧॥

ಮಾರ್ಕಣ್ಡೇಯ ಉವಾಚ :—

ಉತ್ತಮಸ್ಯ ಸುತಃ ಸೋಽಥ ನಾಮ್ನಾ ಖ್ಯಾತಸ್ತಥೌತ್ತಮಃ ।
ಮನುರಾಸೀತ್ತತ್ಪ್ರಭಾವೋ ಭಾಗುರೇ ಶ್ರೂಯತಾಂ ಮಮ ॥೪೨॥

ಉತ್ತಮಾಖ್ಯಾನಮಖಿಲಂ ಜನ್ಮ ಚೈವೌತ್ತಮಸ್ಯ ಯಃ ।
ನಿತ್ಯಂ ಶೃಣೋತಿ ವಿದ್ವೇಷಂ ಸ ಕದಾಚಿನ್ನ ಗಚ್ಛತಿ ॥೪೩॥

---

೪೦. ಆಗ ಅಲ್ಲಿ ನೆರೆದಿರುವ ಮಹರ್ಷಿಗಳು ರಾಜಕುಮಾರನ ಸುಂದರ-ವಾದ ಆಕೃತಿಯನ್ನೂ ಅವನ ಮುಂದಿನ ಶ್ಲಾಘ್ಯವಾದ ಶೀಲವನ್ನೂ ನೋಡಿ "ಔತ್ತಮ" ಎಂದು ನಾಮಕರಣಮಾಡಿದರು.

೪೧. ಈ ಕುಮಾರನು ಉತ್ತಮವಾದ ವಂಶದಲ್ಲಿ ಜನಿಸಿರುವನು. ಉತ್ತಮವಾದ ಕಾಲದಲ್ಲಿ ಜನ್ಮವೆತ್ತಿರುವನು. ಮತ್ತು ಉತ್ತಮವಾದ ಅವಯವ-ಗಳಿಂದ ಕೂಡಿದ ಆಕಾರವುಳ್ಳವನು. ಆದುದರಿಂದ ಇವನು ಔತ್ತಮನೆಂದು ಖ್ಯಾತಿಗೊಳ್ಳುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೪೨. ಎಲೈ ಭಾಗುರಿಯೇ! ತರುವಾಯ ಹಾಗೆ ಔತ್ತಮನೆಂದು ನಾಮಾಂಕನದಿಂದ ಖ್ಯಾತಿಯನ್ನು ಹೊಂದಿರುವ ಉತ್ತಮರಾಜನ ಕುಮಾರನು ಮನುಪದವನ್ನು ಹೊಂದಿದನು. ನನ್ನಿಂದ ಅವನ ಪ್ರಭಾವವನ್ನು ನೀನು ಕೇಳು.

೪೩. ಯಾವ ಮಾನವನು ಉತ್ತಮರಾಜನ ಚರಿತ್ರವನ್ನೂ ಹಾಗು ಔತ್ತಮಕುಮಾರನ ಜನ್ಮವೃತಾಂತವನ್ನೂ ಪ್ರತಿನಿತ್ಯವೂ ಶ್ರವಣಮಾಡುವನೋ ಅವನು ಯಾವಾಗಲೂ ಯಾರೊಡನೆಯೂ ದ್ವೇಷವನ್ನು ಹೊಂದುವುದಿಲ್ಲ.

ಇಷ್ಟೈರ್ದಾರೈಸ್ತಥಾ ಪುತ್ರೈರ್ಬನ್ಧುಭಿರ್ವಾ ಕದಾಚನ ।
ವಿಯೋಗೋ ನಾಸ್ಯ ಭವಿತಾ ಶೃಣ್ವತಃ ಪಠತೋಽಪಿ ವಾ ॥೪೪॥

ತಸ್ಯ ಮನ್ವನ್ತರಂ ಬ್ರಹ್ಮನ್ ವದತೋ ಮಮ ವಿಸ್ತರಾತ್ ।
ಶ್ರೂಯತಾಂ ತತ್ರ ಯಶ್ಚೇನ್ದ್ರೋ ಯೇ ಚ ದೇವಾಸ್ತಥರ್ಷಯಃ ॥೪೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಔತ್ತಮಮನ್ವನ್ತರೇ
ಏಕೋನಸಪ್ತತಿತಮೋಽಧ್ಯಾಯಃ

---

೪೪. ಹಾಗೆ ಉತ್ತಮ ಚರಿತ-ಔತ್ತಮಜನ್ಮಗಳನ್ನು ಶ್ರವಣ ಅಥವಾ ಪಠನಗಳನ್ನು ಮಾಡುತ್ತಿರುವ ಮಾನವನಿಗೆ ಪ್ರಿಯರಾದ ಪತ್ನಿ, ಪುತ್ರ ಮತ್ತು ಬಂಧುಜನರೊಡನೆ ಎಂದೂ ವಿಯೋಗವು ಸಂಭವಿಸುವುದಿಲ್ಲ.

೪೫. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ ! ಔತ್ತಮನ ಮನ್ವಂತರವನ್ನು ವಿಸ್ತಾರವಾಗಿ ವರ್ಣಿಸುತ್ತಿದ್ದ ನನ್ನಿಂದ ಆ ಮನ್ವಂತರಲ್ಲಿ ಇಂದ್ರನಾರು ? ದೇವತೆಗಳು ಯಾರು ? ಮತ್ತು ಸಪ್ತರ್ಷಿಗಳು ಯಾರು ? ಮುಂತಾದುದನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಅರವತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತತಿತಮೋಽಧ್ಯಾಯಃ

(ಔತ್ತಮಮನ್ವನ್ತರನಿರೂಪಣಮ್)

ಮಾರ್ಕಣ್ಡೇಯ ಉವಾಚ:—

ಮನ್ವನ್ತರೇ ತೃತೀಯೇಽಸ್ಮಿನ್ನೌತ್ತಮಸ್ಯ ಪ್ರಜಾಪತೇಃ ।
ದೇವಾನಿನ್ದ್ರಾನೃಷೀನ್ಭೂಪಾನ್ನಿಬೋಧ ಗದತೋ ಮಮ ॥೧॥

ಸ್ವಧಾಮಾನಸ್ತಥಾ ದೇವಾ ಯಥಾನಾಮಾನುಕಾರಿಣಃ ।
ಸತ್ಯಾಖ್ಯಶ್ಚ ದ್ವಿತೀಯೋಽನ್ಯಸ್ತ್ರಿದಶಾನಾಂ ತಥಾ ಗಣಃ ॥೨॥

ಎಪ್ಪತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಔತ್ತಮನೆಂಬ ಪ್ರಜಾಪತಿಯು ಅಧಿಪತಿಯಾಗಿದ್ದ ಮೂರನೆಯ ಮನ್ವಂತರದಲ್ಲಿರುವ ದೇವತೆ-ಇಂದ್ರ-ಸಪ್ತರ್ಷಿ ಮತ್ತು ಭೂಪಾಲಕರು—ಇವರನ್ನು ನಾನು ಹೇಳುವೆನು, ಅದನ್ನು ಕೇಳು.

೨. ತಮ್ಮ ನಾಮಧೇಯದ ಅರ್ಥವನ್ನು ಅನುಕರಿಸುವ ಸ್ವಧಾಮ ಎಂಬ ನಾಮಾಂಕಿತರಾದ ದೇವತೆಗಳು ಒಂದು ಗಣ. ಹಾಗು ಮತ್ತೆ ಕೆಲವರು ದೇವತೆಗಳಿಂದ ಕೂಡಿದ ಸತ್ಯ ಎಂಬ ನಾಮಾಂಕಿತವಾದುದು ಮತ್ತೊಂದು ದೇವಗಣವಿತ್ತು.

ತೃತೀಯೋ ತು ಗಣೇ ದೇವಾ ಶಿವಾಖ್ಯಾ ಮುನಿಸತ್ತಮ ।
ಶಿವಾಃ ಸ್ವರೂಪತಸ್ತೇ ತು ಶ್ರುತಾಃ ಪಾಪಪ್ರಣಾಶನಾಃ ॥೩॥

ಪ್ರತರ್ದನಾಖ್ಯಶ್ಚ ಗಣೋ ದೇವಾನಾಂ ಮುನಿಸತ್ತಮ ।
ಚತುರ್ಥಸ್ತತ್ರ ಕಥಿತ ಔತ್ತಮಸ್ಯಾನ್ತರೇ ಮುನೋಃ ॥೪॥

ವಶವರ್ತಿನಃ ಪಞ್ಚಮೋಽಪಿ ದೇವಾಸ್ತತ್ರ ಗಣೇ ದ್ವಿಜ ।
ಯಥಾಖ್ಯಾತಸ್ವರೂಪಾಸ್ತು ಸರ್ವ ಏವ ಮಹಾಮುನೇ ॥೫॥

ಏತೇ ದೇವಗಣಾಃ ಪಞ್ಚ ಸ್ಮೃತಾ ಯಜ್ಞಭುಜಸ್ತಥಾ ।
ಮನ್ವನ್ತರೇ ಮನುಶ್ರೇಷ್ಠೇ ಸರ್ವೇ ದ್ವಾದಶಕಾ ಗಣಾಃ ॥೬॥

---

೩. ಎಲೈ, ಮುನಿಶ್ರೇಷ್ಠನೇ! ಮೂರನೆಯ ದೇವಗಣದಲ್ಲಿ ಶಿವ ಎಂಬ ನಾಮಾಂಕಿತರಾದ ದೇವತೆಗಳು ಸೇರಿಕೊಂಡಿದ್ದರು. ಆ ದೇವತೆಗಳು ತಮ್ಮ ನಾಮಸ್ವರೂಪವನ್ನು ಶ್ರವಣ ಮಾತ್ರ ಮಾಡುವುದರಿಂದ ಪಾಪವನ್ನು ಭಂಜನಮಾಡುತ್ತಿದ್ದರು.

೪. ಮಹರ್ಷಿಶ್ರೇಷ್ಠನೇ! ಔತ್ತಮ ಪ್ರಜಾಪತಿಯ ನಾಲ್ಕನೆಯ ಮನ್ವಂತರದಲ್ಲಿ ಪ್ರತರ್ದನ ಎಂಬ ನಾಮಧೇಯವುಳ್ಳ ನಾಲ್ಕನೆಯ ದೇವಗಣವಿತ್ತೆಂದು ಪುರಾಣಜ್ಞರಿಂದ ಹೇಳಲ್ಪಟ್ಟಿದೆ.

೫. ಮುನಿಶ್ರೇಷ್ಠನೇ! ಆ ಮನ್ವಂತರದಲ್ಲಿ ವಶವರ್ತಿ ಎಂದು ಖ್ಯಾತರಾದ ದೇವತೆಗಳ ಗಣವು ಐದನೆಯದಾಗಿತ್ತು. ದ್ವಿಜೋತ್ತಮನೇ! ಎಲ್ಲ ದೇವತೆಗಳು ನಾಮಾಂಕನದಿಂದಲೇ ಪ್ರಕಾಶವಾಗುವ ಸ್ವರೂಪವುಳ್ಳವರಾಗಿದ್ದರು.

೬. ಶ್ರೇಷ್ಠನಾದ ಮನುವು ಅಧಿಪತಿಯಾಗಿದ್ದ ನಾಲ್ಕನೆಯ ಮನ್ವಂತರದಲ್ಲಿ ಈ ಐದು ದೇವಗಣಗಳಿದ್ದುವು. ಈ ಗಣಕ್ಕೆ ಸೇರಿದ ದೇವತೆಗಳು ಯಜ್ಞದ ಹವಿರ್ಭಾಗಗಳನ್ನು ಭುಂಜಿಸುವವರಾಗಿದ್ದರು. ಒಂದೊಂದು ಗಣವು ಹನ್ನೆರಡು ಮಂದಿ ದೇವತೆಗಳಿಂದ ಕೂಡಿಕೊಂಡಿತ್ತು.

ತೇಷಾಮಿನ್ದ್ರೋ ಮಹಾಭಾಗಸ್ತ್ರೈಲೋಕ್ಯಸ್ಯೇಶ್ವರೋಽಭವತ್ ।
ಶತಂ ಕ್ರತೂನಾಮಾಹೃತ್ಯ ಸುಶಾನ್ತಿರ್ನಾಮ ನಾಮತಃ ॥೭॥

ಯಸ್ಯೋಪಸರ್ಗನಾಶಾಯ ನಾಮಾಕ್ಷರವಿಭೂಷಿತಾ ।
ಅದ್ಯಾಪಿ ಮಾನವೈರ್ಗಾಥಾ ಗೀಯತೇ ತು ಮಹೀತಲೇ ॥೮॥

ಸುಶಾನ್ತಿರ್ದೇವರಾಟ್ಕಾನ್ತಃ ಸುಶಾನ್ತಿಂ ಸಮ್ಪ್ರಯಚ್ಛತಿ ।
ಸಹಿತಃ ಶಿವಸತ್ಯಾದ್ಯೈಸ್ತಥೈವ ವಶವರ್ತಿಭಿಃ ॥೯॥

ಅಜಃ ಪರಶುಚಿರ್ದಿವ್ಯೋ ಮಹಾಬಲಪರಾಕ್ರಮಃ ।
ಪುತ್ರಾಸ್ತಸ್ಯ ಮನೋರಾಸನ್ವಿಖ್ಯಾತಾಸ್ತ್ರಿದಶೋಪಮಾಃ ॥೧೦॥

---

೭. ಒಂದು ನೂರು ಯಜ್ಞಗಳನ್ನು ಮಾಡಿರುವವನೂ ಮತ್ತು ಮಹಾಭಾಗ್ಯವಂತನೂ ಆದ ಸುಶಾಂತಿ ಎಂಬ ನಾಮಾಂಕನದಿಂದ ಪ್ರಖ್ಯಾತನಾದವನು ಆ ದೇವತೆಗಳಿಗೆ ರಾಜನಾದ ಇಂದ್ರನಾಗಿ ತ್ರೈಲೋಕ್ಯದ ಈಶ್ವರನೆನಿಸಿದನು.

೮. ಮಹಾಭಾಗ್ಯನಾದ ಸುಶಾಂತಿಯೆಂಬ ಇಂದ್ರನ ನಾಮಾಕ್ಷರಗಳಿಂದ ಶೋಭಿಸಲ್ಪಡುವ ಒಂದು ಗಾಥಾಶ್ಲೋಕವು ಭೂಮಂಡಲದಲ್ಲಿ ಮಾನವರಿಂದ ಪೀಡಾಪರಿಹಾರ-ಶಾಂತಿಲಾಭಗಳಿಗೋಸ್ಕರ ಇಂದೂ ಗಾನಮಾಡಲ್ಪಡುವುದು.

೯. ಶಿವ, ಸತ್ಯ, ವಶವರ್ತಿ ಮೊದಲಾದ ಅನೇಕ ದೇವಗಣಗಳಿಂದ ಸಹಿತನಾದ ಮತ್ತು ಎಲ್ಲರ ಮನವೊಪ್ಪುವಂತಿರುವ ಸುಶಾಂತಿಯೆಂಬ ದೇವರಾಜನು ಪ್ರಸನ್ನನಾಗಿ ನಮಗೆ ಶಾಂತಿಯನ್ನು ಕೊಡುವನು. ಇದು ಆ ಗಾಥಾಶ್ಲೋಕದ ಅರ್ಥವು.

೧೦. ಔತ್ತಮಮನುಪ್ರಜಾಪತಿಗೆ ಅಜ, ಪರಶುಚಿ ಮತ್ತು ದಿವ್ಯ ಎಂಬ ನಾಮಾಂಕಿತರಾದ ಮೂರು ಮಂದಿ ಪುತ್ರರಿದ್ದರು. ಅವರು ಮಹತ್ತಾದ ಬಲ-ಪರಾಕ್ರಮಗಳಿಂದ ಭೂಷಿತರೂ ದೇವಕುಮಾರರಿಗೆ ಸಮಾನರೂ ಆಗಿ ಖ್ಯಾತಿಯನ್ನು ಪಡೆದರು.

ತತ್ಪ್ರಸೂತಿಸಮ್ಭೂತೈರ್ಭೂಮಿಃ ಪಾಲಿತಾಭೂನ್ನರೇಶ್ವರೈಃ ।
ಯಾವನ್ಮನ್ವನ್ತರಂ ತಸ್ಯ ಮನೋರುತ್ತಮತೇಜಸಃ ॥೧೧॥

ಚತುರ್ಯುಗಾನಾಂ ಸಙ್ಖ್ಯಾತಾ ಸಾಧಿಕಾ ಹ್ಯೇಕಸಪ್ತತಿಃ ।
ಕೃತತ್ರೇತಾದಿಸಂಜ್ಞಾನಿ ಯಾನ್ಯುಕ್ತಾನಿ ಪುರಾ ಮಯಾ ॥೧೨॥

ಸ್ವತೇಜಸಾ ಹಿ ತಪಸೋ ವರಿಷ್ಠಸ್ಯ ಮಹಾತ್ಮನಃ ।
ತನಯಾಶ್ಚಾನ್ತರೇ ತಸ್ಮಿನ್ ಸಪ್ತ ಸಪ್ತರ್ಷಯೋಽಭವನ್ ॥೧೩॥

ತೃತೀಯಮೇತತ್ಕಥಿತಂ ತವ ಮನ್ವನ್ತರಂ ಮಯಾ ।
ತಾಮಸಸ್ಯ ಚತುರ್ಥಂ ತು ಮನೋರನ್ತರಮುಚ್ಯತೇ ॥೧೪॥

---

೧೧. ಸರ್ವೋತ್ತಮವಾದ ತೇಜಸ್ಸಿನಿಂದ ಕೂಡಿದ ಔತ್ತಮಮನು-ಪ್ರಜಾಪತಿಯ ಮನ್ವಂತರವು ಕಳೆಯುವವರೆಗೆ ಅವನ ವಂಶದಲ್ಲಿ ಜನಿಸಿದ ಪ್ರಭುಗಳಾದ ರಾಜರಿಂದ ಭೂಮಿಯು ಪಾಲಿಸಲ್ಪಟ್ಟಿತು.

೧೨. ಹಿಂದೆ ನನ್ನಿಂದ ಕೃತ-ತ್ರೇತಾ ಮುಂತಾದ ಯುಗಗಳ ಪರಿ-ಮಾಣವು ಹೇಳಲ್ಪಟ್ಟಿರುವುದು. ಆ ಸಂದರ್ಭದಲ್ಲಿ ಕೃತ-ತ್ರೇತಾ-ದ್ವಾಪರ ಮತ್ತು ಕಲಿಯುಗಗಳ ಎಪ್ಪತ್ತೊಂದುಸಲದ ಪರ್ಯಾಯವು ಸ್ವಲ್ಪ ಅಧಿಕಭಾಗದಿಂದ ಕೂಡಿ ಮನ್ವಂತರವಾಗುವುದು.

೧೩. ಮಹಾತ್ಮನಾದ ಮತ್ತು ತಪಸ್ಸಿನಿಂದ ಮಹಿಮೆಯನ್ನು ಗಳಿಸಿದ ಆ ಮನುವಿನ ಸ್ವತೇಜೋವಿಶೇಷದಿಂದ ಆ ಮನ್ವಂತರದಲ್ಲಿ ಅವನ ಏಳು ಮಂದಿ ಪುತ್ರರು ಏಳು ಮಂದಿ ಸಪ್ತರ್ಷಿಗಳಾಗಿದ್ದರು.

೧೪. ಹೀಗೆ ನನ್ನಿಂದ ಈ ಮೂರನೆಯದಾದ ಔತ್ತಮಮನ್ವಂತರವು ಹೇಳಲ್ಪಟ್ಟಿದೆ. ಮುಂದೆ ತಾಮಸ ಎಂಬ ಮನುಪ್ರಜಾಪತಿಯ ನಾಲ್ಕನೆಯದಾದ ಮನ್ವಂತರವು ಹೇಳಲ್ಪಡುವುದು.

ಪಿಯೋನಿಜನ್ಮನೋ ಯಸ್ಯ ಯಶಸಾ ದ್ಯೋತಿತಂ ಜಗತ್ ।
ಜನ್ಮ ತಸ್ಯ ಮನೋರ್ಬ್ರಹ್ಮನ್ ಶ್ರೂಯತಾಂ ಗದತೋ ಮಮ॥೧೫॥

ಅತೀನ್ದ್ರಿಯಮಶೇಷಾಣಾಂ ಮನೂನಾಂ ಚರಿತಂ ತಥಾ ।
ತಥಾ ಜನ್ಮಾಪಿ ವಿಜ್ಞೇಯಂ ಪ್ರಭಾವಶ್ಚ ಮಹಾತ್ಮನಾಮ್ ॥೧೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಔತ್ತಮಮನ್ವನ್ತರಂ
ನಾಮ ಸಪ್ತತಿತಮೋಽಧ್ಯಾಯಃ

---

೧೫. ಮೂಕಪ್ರಾಣಿಯ ಯೋನಿಯಲ್ಲಿ ಜನ್ಮವೆತ್ತಿದ ತಾಮಸಮನುವಿನ ಕೀರ್ತಿಯಿಂದ ಜಗತ್ತು ಕಂಗೊಳಿಸಲ್ಪಟ್ಟಿದೆ. ಎಲೈ, ಕ್ರೌಷ್ಟುಕಿಯೇ! ಅಂತಹ ತಾಮಸಮನುವಿನ ಜನ್ಮವನ್ನು ವರ್ಣಿಸುವ ನನ್ನ ವಚನವನ್ನು ಕೇಳು.

೧೬. ಮಹಿಮಾವಂತರಾದ ಎಲ್ಲ ಮನುಪ್ರಜಾಪತಿಗಳ ಚರಿತ್ರವು ಇಂದ್ರಿಯಾತೀತವಾದುದು. ಅವರ ಜನ್ಮವು ವಿಚಿತ್ರವಾದುದು. ಮತ್ತು ಅವರ ಪ್ರಭಾವವು ಅಪಾರವಾದುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಸಪ್ತತಿತಮೋಽಧ್ಯಾಯಃ

(ತಾಮಸಮನ್ವನ್ತರನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ರಾಜಾಭೂದ್ಭುವಿ ವಿಖ್ಯಾತಃ ಸ್ವರಾಷ್ಟ್ರೋ ನಾಮ ವೀರ್ಯವಾನ್ ।
ಅನೇಕಯಜ್ಞಕೃತ್ಪ್ರಾಜ್ಞಃ ಸಙ್ಗ್ರಾಮೇಷ್ವಪರಾಜಿತಃ ॥೧॥

ತಸ್ಯಾಯುಃ ಸುಮಹದ್ದತ್ತಂ ಸೂರ್ಯೇಣ ಸುಮಹಾದ್ಯುತೇಃ ।
ಪುರಾ ಭಗವತಾ ವಿಪ್ರ ಮನ್ತ್ರಿಣಾರಾಧಿತೇನ ವೈ ॥೨॥

ಎಪ್ಪತ್ತೊಂದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಅನೇಕ ಯಜ್ಞಗಳನ್ನು ಮಾಡಿದವನೂ, ಪ್ರಜ್ಞಾವಂತನೂ ಮತ್ತು ಸಂಗ್ರಾಮಗಳಲ್ಲಿ ಎಂದೂ ಅಪಜಯವನ್ನು ಹೊಂದದವನೂ ಆದ ಸ್ವರಾಷ್ಟ್ರ ಎಂಬ ನಾಮಾಂಕಿತನಾದ ರಾಜನು ಭೂಮಿಯಲ್ಲಿ ಖ್ಯಾತಿಯನ್ನು ಗಳಿಸಿದವ-ನಾಗಿದ್ದನು.

೨. ಎಲೈ ವಿಪ್ರೋತ್ತಮನಾದ ಕ್ರೌಷ್ಟುಕಿಯೆ! ಸ್ವರಾಷ್ಟ್ರರಾಜನು ಹಿಂದೆ ಮಂತ್ರಜಪದಿಂದ ಪೂಜ್ಯನಾದ ಸೂರ್ಯದೇವನನ್ನು ಆರಾಧಿಸಿದ್ದರಿಂದ ಪ್ರಸನ್ನನಾದ ಸೂರ್ಯದೇವನಿಂದ ಮಹಾತೇಜಸ್ವಿಯಾದ ಆ ರಾಜನಿಗೆ ದೀರ್ಘ-ವಾದ ಆಯುಷ್ಯವು ಅನುಗ್ರಹಿಸಲ್ಪಟ್ಟಿತು.

ಪತ್ನೀನಾಂ ಚ ಶತಂ ತಸ್ಯ ಧನ್ಯಾನಾಮಭವದ್ದ್ವಿಜ ||೩||

ತಸ್ಯ ದೀರ್ಘಾಯುಷಃ ಪತ್ನ್ಯೋ ನಾತಿದೀರ್ಘಾಯುಷೋ ಮುನೇ ।
ಕಾಲೇನ ಜಗ್ಮುರ್ನಿಧನಂ ಭೃತ್ಯಮನ್ತ್ರಿಜನಾಸ್ತಥಾ ||೪||

ಸ ಭಾರ್ಯಾಭಿಸ್ತಥಾ ಮುಕ್ತೋ ಭೃತ್ಯೈಶ್ಚ ಸಹಜನ್ಮಭಿಃ ।
ಉದ್ವಿಗ್ನಚೇತಾಃ ಸಮ್ಪ್ರಾಪ ವೀರ್ಯಹಾನಿಮಹರ್ನಿಶಮ್ ||೫||

ತಂ ವೀರ್ಯಹೀನಂ ನಿಭೃತೈರ್ಭೃತ್ಯೈಸ್ತ್ಯಕ್ತಂ ಸುದುಃಖಿತಮ್ ।
ಅನನ್ತರೋ ವಿಮರ್ದಾಖ್ಯೋ ರಾಜ್ಯಾಚ್ಚ್ಯಾವಿತವಾಂಸ್ತದಾ ||೬||

---

೩. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಮತ್ತು ಮಹಾತೇಜಸ್ಸಿನಿಂದ ಶೋಭಿಸುವ ಆ ಸ್ವರಾಷ್ಟ್ರರಾಜನಿಗೆ ಸೌಂದರ್ಯ-ಸೌಶೀಲ್ಯ ಮುಂತಾದ ಗುಣಗಳಿಂದ ಧನ್ಯರಾದ ಒಂದು ನೂರು ಮಂದಿ ಪತ್ನಿಯರಿದ್ದರು.

೪. ಹೀಗೆ ಆ ರಾಜನು ದೀರ್ಘಾಯುಷ್ಮಂತನಾಗಿದ್ದನು. ಆದರೆ ಹಾಗೆ ದೀರ್ಘಾಯುಷ್ಯವಿಲ್ಲದ ಅವನ ಭೃತ್ಯ-ಮಂತ್ರಿವರ್ಗದ ಜನರು ಮತ್ತು ಅವನ ಪತ್ನಿಯರು ಕೂಡ ಕೆಲವು ಕಾಲಾನಂತರದಲ್ಲಿ ಮರಣವನ್ನು ಹೊಂದಿದರು.

೫. ಸ್ವರಾಷ್ಟ್ರರಾಜನು ಹಾಗೆ ತನ್ನ ಪತ್ನಿಯರಿಂದಲೂ ಜೊತೆಗೆ ಹುಟ್ಟಿ ಬೆಳೆದ ಭೃತ್ಯವರ್ಗದಿಂದಲೂ ವಿಯೋಗ ಹೊಂದಿ ಹಗಲು-ರಾತ್ರಿ ವೇಳೆಗಳಲ್ಲೆಲ್ಲ ಚಿಂತಾಕ್ರಾಂತವಾದ ಮಾನಸವುಳ್ಳವನಾಗಿ ತನ್ನ ವೀರ್ಯವನ್ನು ಕಳೆದುಕೊಂಡನು.

೬. ಆಗ ಅವನ ರಾಷ್ಟ್ರದ ಒತ್ತಿನ ಪರರಾಷ್ಟ್ರದಲ್ಲಿರುವ ವಿಮರ್ದ ಎಂಬ ರಾಜನು ಅಚಲಭಕ್ತಿಯಿಂದ ಕೂಡಿದ ಪರಿವಾರವರ್ಗದಿಂದ ವಿಯೋಗಹೊಂದಿ ದುಃಖಪಡುತ್ತ ಸ್ವರಾಷ್ಟ್ರರಾಜನು ವೀರ್ಯಹೀನನಾದುದನ್ನು ತಿಳಿದು ಅವನನ್ನು ರಾಜ್ಯಚ್ಯುತನನ್ನಾಗಿ ಮಾಡಿದನು.

ರಾಜ್ಯಾಚ್ಚ್ಯುತಃ ಸೋಽಪಿ ವನಂ ಗತ್ವಾ ನಿರ್ವಿಣ್ಣಮಾನಸಃ ।
ತಪಸ್ತೇಪೇ ಮಹಾಭಾಗೋ ವಿತಸ್ತಾಪುಲಿನೇ ಸ್ಥಿತಃ ॥೭॥

ಗ್ರೀಷ್ಮೇ ಪಞ್ಚತಪಾ ಭೂತ್ವಾ ವರ್ಷಾಸ್ವಭ್ರಾವಕಾಶಗಃ ।
ಜಲಶಾಯೀ ಚ ಶಿಶಿರೇ ನಿರಾಹಾರೋ ಯತವ್ರತಃ ॥೮॥

ತತಸ್ತಪಸ್ಯತಸ್ತಸ್ಯ ಪ್ರಾವೃಟ್ಕಾಲೇ ಮಹಾನ್ ಪ್ಲವಃ ।
ಬಭೂವಾನುದಿನಂ ಮೇಘೈರ್ವರ್ಷದ್ಭಿರನುಸನ್ತತಮ್ ॥೯॥

ನ ದಿಗ್ವಿಜ್ಞಾಯತೇ ಪೂರ್ವಾ ದಕ್ಷಿಣಾ ವಾ ನ ಪಶ್ಚಿಮಾ ।
ನೋತ್ತರಾ ತಮಸಾ ಸರ್ವಮನುಲಿಪ್ತಮಿವಾಭವತ್ ॥೧೦॥

ತತೋಽತಿಪೂರೇಣ ನೃಪಃ ಸ ನದ್ಯಾ ಪ್ರೇರಿತಸ್ತಟಮ್ ।
ಪ್ರಾರ್ಥಯನ್ನಪಿ ನಾವಾಪ ಹ್ರಿಯಮಾಣೋಽತಿವೇಗಿನಾ ॥೧೧॥

---

೭. ಹೀಗೆ ರಾಜ್ಯದಿಂದ ಚ್ಯುತನಾದ, ಮಹಾಭಾಗ್ಯನಿಧಿಯಾದ ಆ ರಾಜನು ವಿಷಾದಗೊಂಡ ಮಾನಸವುಳ್ಳವನಾಗಿ ವನಕ್ಕೆಹೋಗಿ ವಿತಸ್ತಾ ಎಂಬ ನದೀತೀರದ ಮರಳು ರಾಶಿಯಲ್ಲಿ ಇದ್ದು ತಪವನ್ನು ಆಚರಿಸಿದನು.

೮. ಸ್ವರಾಷ್ಟ್ರರಾಜನು ಆಹಾರವನ್ನು ತ್ಯಜಿಸಿದವನೂ, ಕಠಿನವಾದ ನಿಯಮವುಳ್ಳವನೂ ಆಗಿ ಗ್ರೀಷ್ಮಕಾಲದಲ್ಲಿ ಪಂಚಾಗ್ನಿ ಮಧ್ಯದಲ್ಲಿ ಕುಳಿತು ವರ್ಷಾಕಾಲದಲ್ಲಿ ನಿರಾವರಣವಾದ ಸ್ಥಳದಲ್ಲಿ ನಿಂತು ಹಾಗು ಹಿಮಕಾಲದಲ್ಲಿ ನೀರಿನಲ್ಲಿ ವಾಸಮಾಡಿ ತಪಮಾಡಿದನು.

೯. ಹೀಗೆ ಆ ರಾಜನು ತಪಸ್ಸನ್ನು ಮಾಡುತ್ತಿರಲು ಒಂದು ವರ್ಷಾಕಾಲದಲ್ಲಿ ಪ್ರತಿದಿನವೂ ಬಿಡವಂತೆ ಸಂತತವಾಗಿ ಮಳೆಯನ್ನು ಸುರಿಸುವ ಮೋಡಗಳಿಂದ ಆ ನದಿಯಲ್ಲಿ ಭಾರಿಯಾದ ಪ್ರವಾಹವು ಉಂಟಾಯಿತು.

೧೦. ಆಗ ಮಳೆ ಮತ್ತು ಪ್ರವಾಹಗಳಿಂದ ಎಲ್ಲೆಲ್ಲೂ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳು ಕೂಡ ಕಾಣಿಸುವಂತೆ ಇರಲಿಲ್ಲ. ಎಲ್ಲವೂ ಕತ್ತಲಿನಿಂದ ಬಳಿಯಲ್ಪಟ್ಟಂತೆ ಆಯಿತು.

೧೧. ಆ ಸಮಯದಲ್ಲಿ ಮಹಾವೇಗದಿಂದ ಹರಿಯುವ ನದಿಯ ದೊಡ್ಡ ಪ್ರವಾಹದಿಂದ ಸೆಳೆಯಲ್ಪಡುತ್ತ ತೇಲಿಹೋಗುತ್ತಿದ್ದ ರಾಜನು ದಡವನ್ನು ಹತ್ತಲು ಆಶೆಪಡುತ್ತಿದ್ದರೂ ದಡಕ್ಕೆ ಬರಲಾಗಲಿಲ್ಲ.

ಅಥ ದೂರೇ ಜಲೌಘೇನ ಹ್ರಿಯಮಾಣೋ ಮಹೀಪತಿಃ ।
ಆಸಸಾದ ಜಲೇ ರೌಹೀಂ ಸ ಪುಚ್ಛೇ ಜಗೃಹೇ ಚ ತಾಮ್ ॥೧೨॥

ತೇನ ಪ್ಲವೇನ ಸ ಯಯಾವೂಹ್ಯಮಾನೋ ಮಹೀತಲೇ ।
ಇತಶ್ಚೇತಶ್ಚಾನ್ಧಕಾರೇ ಆಸಸಾದ ತಟಂ ತತಃ ॥೧೩॥

ವಿಸ್ತಾರಿಪಙ್ಕಮತ್ಯರ್ಥಂ ದುಸ್ತರಂ ಸ ನೃಪಸ್ತರನ್ ।
ತಥೈವ ಕೃಷ್ಯಮಾಣೋಽನ್ಯದ್ರಮ್ಯಂ ವನಮವಾಪ ಸಃ ॥೧೪॥

ತತ್ರಾನ್ಧಕಾರೇ ಸಾ ರೌಹೀ ಚಕರ್ಷ ವಸುಧಾಧಿಪಮ್ ।
ಪುಚ್ಛೇ ಲಗ್ನಂ ಮಹಾಭಾಗಂ ಕೃಶಂ ಧಮನಿಸನ್ತತಮ್ ॥೧೫॥

ತಸ್ಯಾಶ್ಚ ಸ್ಪರ್ಶಸಮ್ಭೂತಾಮವಾಪ ಮುದಮುತ್ತಮಾಮ್ ।
ಸೋಽನ್ಧಕಾರೇ ಭ್ರಮನ್ ಭೂಪೋ ಮದನಾಕೃಷ್ಟಮಾನಸಃ ॥೧೬॥

---

೧೨. ಅನಂತರದಲ್ಲಿ ನೀರಿನ ಪ್ರವಾಹದಿಂದ ಬಲುದೂರ ಸೆಳೆಯಲ್ಪಟ್ಟ ರಾಜನು ಆಕಸ್ಮಿಕವಾಗಿ ನೀರಿನಲ್ಲಿ ಒಂದು ಹೆಣ್ಣುಜಿಂಕೆಯನ್ನು ಹೊಂದಿದನು. ಆಗ ತಾನು ಅದರ ಬಾಲವನ್ನು ಹಿಡಿದುಕೊಂಡನು.

೧೩. ರಾಜನು ಜಿಂಕೆಯರೂಪದ ಆ ತೆಪ್ಪದಿಂದ ತೇಲಿಸಲ್ಪಡುತ್ತ ಭೂಮಿಗೆ ಬಂದನು. ಅಲ್ಲಲ್ಲಿ ಕತ್ತಲಿನಿಂದ ಮುಚ್ಚಿಹೋಗಿದ್ದ ಒಂದು ದಡಕ್ಕೆ ಬಂದು ಸೇರಿದನು.

೧೪. ಅಗಾಧವಾದ ಕೆಸರಿನಿಂದ ಕೂಡಿರುವುದೂ, ದಾಟಬರಲು ತುಂಬ ಕ್ಲೇಶಕರವಾಗಿರುವುದೂ ಆದ ತೀರವನ್ನು ಹಾಗೆಯೆ ಜಿಂಕೆಯಿಂದ ಸೆಳೆಯಲ್ಪಡುತ್ತ ದಾಟಿಬಂದು ಮತ್ತೊಂದು ರಮಣೀಯವಾದ ವನಕ್ಕೆ ಬಂದನು.

೧೫. ಅಲ್ಲಿ ರಾತ್ರಿಯ ಗಾಢಾಂಧಕಾರದಲ್ಲಿ ಆ ಜಿಂಕೆಯು ತನ್ನ ಬಾಲವನ್ನು ಹಿಡಿದುಕೊಂಡಿರುವವನೂ, ಮಹಾಶಯನೂ, ತಪಸ್ಸಿನಿಂದ ಕೃಶನಾದವನೂ ಮತ್ತು ಎಲುಬು-ಮೂಳೆಗಳು ಮಾತ್ರ ಮಿಕ್ಕಿರುವಂತೆ ಆದವನೂ ಆದ ರಾಜನನ್ನು ಸೆಳೆದುಕೊಂಡುಹೋಯಿತು.

೧೬. ಅಂಧಕಾರದಲ್ಲಿ ವನದಲ್ಲಿ ಭ್ರಮಿಸುತ್ತಿದ್ದ ಆ ರಾಜನು ಹೆಣ್ಣು-ಜಿಂಕೆಯ ಸ್ಪರ್ಶದಿಂದ ಕಾಮವಿಕಾರಕ್ಕೆ ಎಡೆಯಾದ ಮಾನಸವುಳ್ಳವನಾಗಿ ಆಗ ಆ ಜಿಂಕೆಯ ಸ್ಪರ್ಶಸುಖವನ್ನು ಹೆಚ್ಚಾಗಿ ಅನುಭವಿಸಿದನು.

ವಿಜ್ಞಾಯ ಸಾನುರಾಗಂ ತಂ ಪೃಷ್ಠಸ್ಪರ್ಶನತತ್ಪರಮ್ ।
ನರೇನ್ದ್ರಂ ತಂ ಮೃಷಸ್ಯನ್ತಂ ಸಾ ಮೃಗೀ ತಮುವಾಚ ಹ ॥೧೭॥

ಕಿಂ ಪೃಷ್ಠಂ ವೇಪಥುಮತಾ ಕರೇಣ ಸ್ಪೃಶಸೇ ಮಮ ।
ಅನ್ಯಥೈವಾಸ್ಯ ಕಾರ್ಯಸ್ಯ ಸಞ್ಜಾತಾ ನೃಪತೇ ಗತಿಃ ॥೧೮॥

ನಾಸ್ಥಾನೇ ವಾ ಮನೋ ಯಾತಂ ನಾಗಮ್ಯಾಹಂ ತವೇಶ್ವರ ।
ಕಿನ್ತು ತ್ವತ್ಸಙ್ಗಮೇ ವಿಘ್ನಮೇಷ ಲೋಲಃ ಕರೋತಿ ಮೇ ॥೧೯॥

ಮಾರ್ಕಣ್ಡೇಯ ಉವಾಚ :—

ಇತಿ ಶ್ರುತ್ವಾ ವಚಸ್ತಸ್ಯಾ ಮೃಗ್ಯಾಶ್ಚ ಜಗತೀಪತಿಃ ।
ಜಾತಕೌತೂಹಲೋ ರೌಹೀಮಿದಂ ವಚನಮಬ್ರವೀತ್ ॥೨೦॥

---

೧೭. ಹೀಗಿರಲು ಆ ಹರಿಣಿಯು ತನ್ನ ಬೆನ್ನನ್ನು ಮತ್ತೆ ಮತ್ತೆ ಸ್ಪರ್ಶಿಸುವುದರಲ್ಲಿ ತತ್ಪರನಾದ ರಾಜನನ್ನು ಪ್ರೇಮಪೂರ್ಣನಾಗಿ ಕಾಮಿಸುತ್ತಿರುವನೆಂದು ತಿಳಿದು ಈ ರೀತಿಯಾಗಿ ಮಾತನಾಡಿತು.

೧೮. ಎಲೈ, ರಾಜನೇ ! ಹೀಗೆ ಶೃಂಗಾರಾನುಭವದಿಂದ ನಡುಗುತ್ತಿದ್ದ ಕೈಯಿಂದ ನನ್ನ ಬೆನ್ನನ್ನು ಏಕೆ ಮುಟ್ಟುತ್ತೀಯೆ? ಭವಿತವ್ಯವಾದ ಕಾರ್ಯದ ಗತಿಯು ಬೇರೊಂದು ಬಗೆಯಲ್ಲಿ ಆಗಿರುವುದು.

೧೯. ಮಹಾರಾಜನೇ ! ನಿನ್ನ ಮಾನಸವು ಅನುಚಿತವಿಷಯದಲ್ಲಿ ಪ್ರವರ್ತಿಸಲಿಲ್ಲ. ನಾನು ನಿನಗೆ ಸಂಗಕ್ಕೆ ಅನರ್ಹಳಾದ ಅಂಗನೆಯೂ ಅಲ್ಲ. ಆದರೆ ನಿನ್ನ ಸಂಗಸುಖಕ್ಕೆ ಈ ಲೋಲನು ಅಡ್ಡಿಯನ್ನು ಉಂಟುಮಾಡುತ್ತಿರುವನು.

ಮಾರ್ಕಂಡೇಯ ಮುನಿಯು ಇಂತೆಂದನು :—

೨೦. ಭೂಮಿಪಾಲಕನಾದ ರಾಜನು ಜಿಂಕೆಯ ಈ ಮಾತನ್ನು ಕೇಳಿ ಹುಟ್ಟಿದ ಕುತೂಹಲವುಳ್ಳವನಾಗಿ ಹೆಣ್ಣು ಜಿಂಕೆಯನ್ನು ಕುರಿತು ಈ ರೀತಿಯಾಗಿ ಕೇಳಿದನು.

ಕಾ ತ್ವಂ ಬ್ರೂಹಿ ಮೃಗೀ ವಾಕ್ಯಂ ಕಥಂ ಮಾನುಷವದ್ವದೇತ್ |
ಕಶ್ಚೈವ ಲೋಲೋ ಯೋ ವಿಘ್ನಂ ತ್ವತ್ಸಙ್ಗೇ ಕುರುತೇ ಮಮ ||೨೧||

ಮೃಗ್ಯುವಾಚ :—

ಅಹಂ ತೇ ದಯಿತಾ ಭೂಪ ಪ್ರಾಗಾಸಮುತ್ಪಲಾವತೀ |
ಭಾರ್ಯಾಶತಾಗ್ರಮಹಿಷೀ ದುಹಿತಾ ದೃಢಧನ್ವನಃ ||೨೨||

ರಾಜೋವಾಚ :—

ಕಿಂ ತು ಯಾವತ್ಕೃತಂ ಕರ್ಮ ಯೇನೇಮಾಂ ಯೋನಿಮಾಗತಾ |
ಪತಿವ್ರತಾಧರ್ಮಪರಾ ಸಾ ಚೇತ್ಥಂ ಕಥಮೀದೃಶೀ ||೨೩||

---

೨೧. ನೀನು ಯಾರು? ಹೆಣ್ಣು ಜಿಂಕೆಯು ಮನುಷ್ಯರಂತೆ ಮಾತನಾಡುವುದು ಹೇಗೆ? ಮತ್ತು ನನಗೆ ನಿನ್ನ ಸಂಗಸೌಖ್ಯದ ಅನುಭವದಲ್ಲಿ ವಿಘ್ನವನ್ನುಂಟುಮಾಡುವ ಲೋಲನು ಯಾರು?

ಮೃಗಾಂಗನೆಯು ಹೇಳಿತು :—

೨೨. ಭೂಪಾಲಕನೇ! ಹಿಂದಿನ ಜನ್ಮದಲ್ಲಿ ದೃಢಧನ್ವ ಎಂಬುವನ ಪುತ್ರಿಯಾದ ನಾನು ನಿನಗೆ ಪ್ರೀತಿಪಾತ್ರಳೂ ಮತ್ತು ನೂರು ಮಂದಿ ಪ್ರಿಯೆಯರಲ್ಲಿ ಅಗ್ರಮಹಿಷಿಯೂ ಆದ ಪತ್ನಿಯಾಗಿದ್ದೆನು.

ರಾಜನು ಇಂತೆಂದನು :—

೨೩. ಆದರೆ ಅಂತಹ ಕರ್ಮವು ಏನು ನಿನ್ನಿಂದ ಮಾಡಲ್ಪಟ್ಟಿತು? ಯಾವ ಕರ್ಮನಿಮಿತ್ತದಿಂದ ನೀನು ಈ ಮೃಗಯೋನಿಯನ್ನು ಹೊಂದಿರುತ್ತೀಯೆ? ಧರ್ಮಪರಳೂ ಮತ್ತು ಪತಿವ್ರತೆಯೂ ಆಗಿದ್ದ ನೀನು ಹೀಗೆ ಮೃಗಾಂಗನೆಯು ಏಕೆ ಆಗಿದ್ದೀಯೆ?

ಮೃಗ್ಯುವಾಚ :—

ಅಹಂ ಪಿತೃಗೃಹೇ ಬಾಲಾ ಸಖೀಭಿಃ ಸಹಿತಾ ವನಮ್ ।
ರನ್ತುಂ ಗತಾ ದದರ್ಶೈಕಂ ಮೃಗಂ ಮೃಗ್ಯಾ ಸಮಾಗತಮ್ ॥೨೪॥

ತತಃ ಸಮೀಪವರ್ತಿನ್ಯಾ ಮಯಾ ಸಾ ತಾಡಿತಾ ಮೃಗೀ ।
ಮಯಾ ತ್ರಸ್ತಾ ಗತಾನ್ಯತ್ರ ಕ್ರುದ್ಧಃ ಪ್ರಾಹ ತತೋ ಮೃಗಃ ॥೨೫॥

ಮೂಢೇ ಕಿಮೇವಂ ಮತ್ತಾಸಿ ಧಿಕ್ತೇ ದೌಃಶೀಲ್ಯಮೀದೃಶಮ್ ।
ಆಧಾನಕಾಲೋ ಯೇನಾಯಂ ತ್ವಯಾ ಮೇ ವಿಫಲೀಕೃತಃ ॥೨೬॥

ವಾಚಂ ಶ್ರುತ್ವಾ ತತಸ್ತಸ್ಯ ಮಾನುಷಸ್ಯೇವ ಭಾಷತಃ ।
ಭೀತಾ ತಮಬ್ರುವಂ ಕೋಽಸೀತ್ಯೇತಾಂ ಯೋನಿಮುಪಾಗತಃ ॥೨೭॥

ಮೃಗಾಂಗನೆಯು ಹೇಳಿತು :—

೨೪. ನಾನು ಹುಡುಗಿಯಾಗಿದ್ದಾಗ ತಂದೆಯ ಮನೆಯಲ್ಲಿ ಕ್ರೀಡಾ-ವಿನೋದಕ್ಕೋಸ್ಕರ ಒಂದು ಸಮಯದಲ್ಲಿ ಸಖಿಯರೊಡಗೂಡಿ ವನಕ್ಕೆ ಹೋಗಿ ಅಲ್ಲಿ ತನ್ನ ಪ್ರಿಯೆಯೊಡನೆ ಕೂಡಿದ್ದ ಒಂದು ಜಿಂಕೆಯನ್ನು ಕಂಡೆನು.

೨೫. ತರುವಾಯ ಹತ್ತಿರದಲ್ಲಿದ್ದ ನನ್ನಿಂದ ಆ ಮೃಗಾಂಗನೆಯು ಹೊಡೆಯಲ್ಪಟ್ಟಿತು. ಆಗ ನನ್ನಿಂದ ಬೆದರಿದ ಆ ಮೃಗಾಂಗನೆಯು ಬೇರೆ ಕಡೆಗೆ ಧಾವಿಸಿತು. ಅದರಿಂದ ಕೋಪಗೊಂಡ ಆ ಮೃಗವು ಹೀಗೆ ಹೇಳಿತು.

೨೬. ಮೂಢಕನ್ಯೆಯೇ ! ನೀನೇಕೆ ಹೀಗೆ ಮದಿಸಿಹೋಗಿದ್ದೀಯೆ ? ಈ ವಿಧವಾದ ನಿನ್ನ ದುರ್ನಡತೆಗೆ ಧಿಕ್ಕಾರವು. ನಿನ್ನ ಈ ನಡತೆಯಿಂದ ನನ್ನ ಪ್ರಿಯೆಯಲ್ಲಿ ನನ್ನಿಂದ ಆಗಲಿದ್ದ ಗರ್ಭಾಧಾನದ ಕಾಲವು ವ್ಯರ್ಥಗೊಳಿಸಲ್ಪಟ್ಟಿತು.

೨೭. ತರುವಾಯ ಮನುಷ್ಯವಾಣಿಯಿಂದ ಮಾತನಾಡುತ್ತಿದ್ದ ಆ ಮೃಗದ ವಚನವನ್ನು ಕೇಳಿ ನಾನು ಭಯಗೊಂಡವಳಾಗಿ "ಮೃಗಯೋನಿಯಲ್ಲಿ ಜನ್ಮವೆತ್ತಿರುವ ನೀನು ಯಾರು ?" ಎಂದು ಮೃಗವನ್ನು ಪ್ರಶ್ನಿಸಿದೆನು.

ತತಃ ಸ ಪ್ರಾಹ ಪುತ್ರೋಽಹಮೃಷೇರ್ನಿರ್ವೃತಿಚಕ್ಷುಷಃ ।
ಸುತಪಾ ನಾಮ ಮೃಗ್ಯಾಂ ತು ಸಾಭಿಲಾಷೋ ಮೃಗೋಽಭವಮ್ ॥೨೮॥

ಇಮಾಂ ಚಾನುಗತಃ ಪ್ರೇಮ್ಣಾ ವಾಞ್ಛಿತಶ್ಚಾನಯಾ ವನೇ ।
ತ್ವಯಾ ವಿಯೋಜಿತಾ ದುಷ್ಟೇ ತಸ್ಮಾಚ್ಛಾಪಂ ದದಾಮಿ ತೇ ॥೨೯॥

ಮಯಾ ಚೋಕ್ತಂ ತವಾಜ್ಞಾನಾದಪರಾಧಃ ಕೃತೋ ಮುನೇ ।
ಪ್ರಸಾದಂ ಕುರು ಶಾಪಂ ಮೇ ನ ಭವಾನ್ದಾತುಮರ್ಹತಿ ॥೩೦॥

ಇತ್ಯುಕ್ತಃ ಪ್ರಾಹ ಮಾಂ ಸೋಽಪಿ ಮುನಿರಿತ್ಥಂ ಮಹೀಪತೇ ।
ನ ಪ್ರಯಚ್ಛಾಮಿ ಶಾಪಂ ತೇ ಯದ್ಯಾತ್ಮಾನಂ ದದಾಸಿ ಮೇ ॥೩೧॥

---

೨೮. ಅನಂತರದಲ್ಲಿ ಆ ಮೃಗವು ಹೀಗೆ ಹೇಳಿತು :—ನಾನು ನಿರ್ವೃತಿ-ಚಕ್ಷು ಎಂಬ ನಾಮಾಂಕನವುಳ್ಳ ಮುನಿಯ ಪುತ್ರನು. ನಾನು ಸುತಪಾ ಎಂದು ನಾಮಾಂಕನವುಳ್ಳವನಾಗಿದ್ದೇನೆ. ಮೃಗಾಂಗನೆಯಲ್ಲಿ ಪ್ರೇಮಹುಟ್ಟಿ ನಾನು ಮೃಗರೂಪಿಯಾದೆನು.

೨೯. ವನದಲ್ಲಿ ಈ ಮೃಗಾಂಗನೆಯನ್ನು ಪ್ರೀತಿಯಿಂದ ಹಿಂಬಾಲಿಸಿ ಬಂದೆನು. ಮೃಗಾಂಗನೆಯು ನನ್ನಲ್ಲಿ ಪ್ರೀತಿಯನ್ನು ತೋರಿಸಿತು. ಎಲೈ, ದುಷ್ಟಳಾದ ಕನ್ಯೆಯೇ! ಅಷ್ಟರಲ್ಲಿ ಮೃಗಿಯು ನನ್ನ ಸಮೀಪದಿಂದ ದೂರ ಓಡಿಸಿ ವಿಯೋಜಿಸಲ್ಪಟ್ಟಿತು. ಆದುದರಿಂದ ನಾನು ನೀನಗೀಗ ಶಾಪವನ್ನು ಕೊಡುವೆನು.

೩೦. ಆಗ ನಾನು ಹೀಗೆ ಕೇಳಿಕೊಂಡೆನು, ಮುನಿಯೇ! ನಾನು ಅಜ್ಞಾನದಿಂದ ನಿನ್ನಲ್ಲಿ ಅಪರಾಧಮಾಡಿರುವೆನು. ನನ್ನಲ್ಲಿ ಅನುಗ್ರಹವಿಡು. ದಯೆಮಾಡಿ ನನ್ನನ್ನು ನೀನು ಶಪಿಸಲಾಗದು.

೩೧. ಎಲೈ, ರಾಜನೇ! ನನ್ನಿಂದ ಈ ರೀತಿಯಾಗಿ ಪ್ರಾರ್ಥಿಸಲ್ಪಟ್ಟ ಆ ಮುನಿಯು ನನಗೆ ಮತ್ತೆ ಹೀಗೆ ಹೇಳಿದನು. ನಿನ್ನ ಆತ್ಮವನ್ನು ನನಗೆ ಅರ್ಪಿಸುವುದಾದರೆ ಆಗ ನಿನ್ನನ್ನು ನಾನು ಶಪಿಸುವುದಿಲ್ಲ.

ಮಯಾ ಚೋಕ್ತಂ ಮೃಗೀ ನಾಹಂ ಮೃಗರೂಪಧರಾ ವನೇ ।
ಲಪ್ಸ್ಯಸೇಽನ್ಯಾಂ ಮೃಗೀಂ ತಾವನ್ಮಯಿ ಭಾವೋ ನಿವರ್ತ್ಯತಾಮ್
॥೩೨॥

ಇತ್ಯುಕ್ತಃ ಕೋಪರಕ್ತಾಕ್ಷಃ ಸ ಪ್ರಾಹ ಸ್ಫುರಿತಾಧರಃ ।
ನಾಹಂ ಮೃಗೀ ತ್ವಯೋಕ್ತ್ಯುಕ್ತಂ ಮೃಗೀ ಮೂಢೇ ಭವಿಷ್ಯಸಿ ॥೩೩॥

ತತೋ ಭೃಶಂ ಪ್ರವ್ಯಥಿತಾ ಪ್ರಣಮ್ಯ ಮುನಿಮಬ್ರುವಮ್ ।
ಸ್ವರೂಪಸ್ಥಮತಿಕ್ರುದ್ಧಂ ಪ್ರಸೀದೇತಿ ಪುನಃ ಪುನಃ ॥೩೪॥

ಬಾಲಾನಭಿಜ್ಞಾ ವಾಕ್ಯಾನಾಂ ತತಃ ಪ್ರೋಕ್ತಮಿದಂ ಮಯಾ ।
ಪಿತರ್ಯಸತಿ ನಾರೀಭಿರ್ವ್ರಿಯತೇ ಹಿ ಪತಿಃ ಸ್ವಯಮ್ ॥೩೫॥

---

೩೨. ಆಗ ನಾನು ಮತ್ತೆ ಹೀಗೆಂದೆನು :—ಕಾಡಿನಲ್ಲಿ ಮೃಗರೂಪವನ್ನು ಧರಿಸಿ ಅಲೆದಾಡುವ ಮೃಗಾಂಗನೆಯು ನಾನಲ್ಲ; ಅಂತಹ ಮತ್ತೊಂದು ಮೃಗಾಂಗನೆಯನ್ನು ನೀನು ಹೊಂದುವೆ. ನನ್ನ ವಿಷಯದಲ್ಲಿ ಪ್ರೀತಿಭಾವವನ್ನು ಬಿಡು.

೩೩. ಹೀಗೆ ನನ್ನಿಂದ ಹೇಳ್ಪಟ್ಟಿರುವ, ಮೃಗರೂಪದಲ್ಲಿರುವ ಸುತಪಾ ಎಂಬುವನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನೂ ಮತ್ತು ಸ್ಫುರಿಸುತ್ತಿದ್ದ ಅಧರವುಳ್ಳವನೂ ಆಗಿ ಹೇಳಿದನು. ಮೂಢಳೇ ! ನಾನು ಮೃಗಾಂಗನೆಯಲ್ಲವೆಂದು ನೀನು ಹೇಳಿದೆಯಲ್ಲವೆ ! ನೀನು ಮೃಗಿಯಾಗುತ್ತೀಯೆ.

೩೪. ಹಾಗೆ ಶಪಿಸಿದ ಕ್ಷಣದಲ್ಲಿ ನಾನು ಅತಿಯಾಗಿ ವ್ಯಥೆಗೊಂಡವಳಾಗಿ ಅಷ್ಟರಲ್ಲಿ ನಿಜರೂಪವನ್ನು ಧರಿಸಿದವನೂ ಮತ್ತು ಬಹಳ ಕೋಪಗೊಂಡವನೂ ಆದ ಮುನಿಯನ್ನು ನಮಸ್ಕಾರಮಾಡಿ ಅನುಗ್ರಹಮಾಡೆಂದು ಮತ್ತೆ ಮತ್ತೆ ಬೇಡಿಕೊಂಡೆನು.

೩೫. ನಾನು ಮಾತನಾಡಲು ತಿಳಿಯದಿರುವ ಬಾಲಿಕೆಯಾಗಿರುವೆನು. ಆದ್ದರಿಂದ ನಾನು ಹೀಗೆ ಅಸಭ್ಯವಾಗಿ ಹೇಳಿದೆನು. ತಂದೆಯಿಲ್ಲದ ಕನ್ನಿಕೆಯರು ಪತಿಯನ್ನು ತಾವೇ ವರಿಸುವುದುಂಟು.

ಸತಿ ತಾತೇ ಕಥಂ ಚಾಹಂ ವೃಣೋಮಿ ಮುನಿಸತ್ತಮ ।
ಸಾಪರಾಧಾಥವಾ ಪಾದೌ ಪ್ರಸೀದೈಷಾ ನಮಾಮ್ಯಹಮ್ ॥೩೬॥

ಪ್ರಸೀದೇತಿ ಪ್ರಸೀದೇತಿ ಪ್ರಣತಾಯಾಂ ಮಹಾಮತೇ ।
ಇತ್ಥಂ ಲಾಲಪ್ಯಮಾನಾಯಾಃ ಸ ಪ್ರಾಹ ಮುನಿಪುಙ್ಗವಃ ॥೩೭॥

ನ ಭವತ್ಯನ್ಯಥಾ ಪ್ರೋಕ್ತಂ ಮಮ ವಾಕ್ಯಂ ಕದಾಚನ ।
ಮೃಗೀ ಭವಿಷ್ಯಸಿ ಮೃತೇ ವನೇಽಸ್ಮಿನ್ನೇವ ಜನ್ಮನಿ ॥೩೮॥

ಮೃಗತ್ವೇ ಚ ಮಹಾಬಾಹುಸ್ತವ ಗರ್ಭಮುಪೈಷ್ಯತಿ ।
ಲೋಲೋ ನಾಮ ಮುನೇಃ ಪುತ್ರಃ ಸಿದ್ಧವೀರ್ಯಸ್ಯ ಭಾವಿನಿ ॥೩೯॥

---

೩೬. ಎಲೈ ಮುನಿಶ್ರೇಷ್ಠನೇ! ತಂದೆಯು ಇರುವಾಗ ನಾನು ಸ್ವತಂತ್ರಳಾಗಿ ಪತಿಯನ್ನು ಹೇಗೆ ವರಿಸಲಿ? ಅಥವಾ ನಾನು ಅಪರಾಧಮಾಡಿ-ದವಳಾಗಿದ್ದೇನೆ. ಇಗೋ! ನಿನ್ನ ಪಾದಗಳಿಗೆ ವಂದಿಸುವೆನು. ನನ್ನಲ್ಲಿ ಅನುಗ್ರಹತೋರು.

೩೭. ಮಹಾಪ್ರಜ್ಞಾವಂತನೇ! " ಪ್ರಸನ್ನನಾಗು, ಪ್ರಸನ್ನನಾಗು " ಹೀಗೆಂದು ಗೋಳಾಡುತ್ತ ಮುನಿಯ ಪಾದಕ್ಕೆ ಮತ್ತೆ ಮತ್ತೆ ನಾನು ನಮಸ್ಕರಿಸು-ತ್ತಿರಲು ಮುನಿಶ್ರೇಷ್ಠನಾದ ಸುತಪನು ಹೀಗೆಂದನು.

೩೮. ನಾನು ಆಡಿದ ಮಾತು ಎಂದಿಗೂ ಬೇರೆ ವಿಧವಾಗಿ ನಡೆಯ-ಲಾರದು. ನೀನು ಮರಣಹೊಂದಿದ ಬಳಿಕ ಮತ್ತೊಂದು ಜನ್ಮದಲ್ಲಿ ಇದೇ ವನದಲ್ಲಿ ಮೃಗಾಂಗನೆಯಾಗಿ ಹುಟ್ಟುತ್ತೀಯೆ.

೩೯. ಭಾವಾವೇಶವುಳ್ಳವಳೇ! ಹಾಗೆ ಮೃಗಜನ್ಮವೆತ್ತಿರುವಾಗ ಸಿದ್ಧಿ-ಹೊಂದಿದ ವೀರ್ಯವುಳ್ಳವನೆಂಬ ಅರ್ಥದಿಂದ ಗರ್ಭಿತವಾದ ಸಿದ್ಧವೀರ್ಯ ಎಂಬ ನಾಮಾಂಕನದಿಂದ ಕೂಡಿದ ಮುನಿಯ ಲೋಲನೆಂಬ ಮಹಾಬಾಹು ಬಲಶಾಲಿಯಾದ ಪುತ್ರನು ನಿನ್ನ ಗರ್ಭವನ್ನು ಪ್ರವೇಶಿಸುವನು.

ಜಾತಿಸ್ಮರಾ ಭವಿತ್ರೀ ತ್ವಂ ತಸ್ಮಿನ್ಗರ್ಭಮುಪಾಗತೇ ।
ಸ್ಮೃತಿಂ ಪ್ರಾಪ್ಯ ತಥಾ ವಾಚಂ ಮಾನುಷೀಮೀರಯಿಷ್ಯಸಿ ॥೪೦॥

ತಸ್ಮಿನ್ ಜಾತೇ ಮೃಗತ್ವಾತ್ತ್ವಂ ವಿಮುಕ್ತಾ ಪತಿನಾರ್ಚಿತಾ ।
ಲೋಕಾನವಾಪ್ಸ್ಯಸಿ ಪ್ರಾಪ್ಯಾ ಯೇ ನ ದುಷ್ಕೃತಕರ್ಮಭಿಃ ॥೪೧॥

ಸೋಽಪಿ ಲೋಲೋ ಮಹಾವೀರ್ಯಃ ಪಿತೃಶತ್ರೂನ್ನಿಪಾತ್ಯ ವೈ ।
ಜಿತ್ವಾ ವಸುನ್ಧರಾಂ ಕೃತ್ಸ್ನಾಂ ಭವಿಷ್ಯತಿ ತತೋ ಮನುಃ ॥೪೨॥

ಏವಂ ಶಾಪಮಹಂ ಲಬ್ಧ್ವಾ ಮೃತಾ ತಿರ್ಯಕ್ತ್ವಮಾಗತಾ ।
ತ್ವತ್ಸಂಸ್ಪರ್ಶಾಚ್ಚ ಗರ್ಭೋಽಸೌ ಸಮುದ್ಭೂತೋ ಜಠರೇ ಮಮ ॥೪೩॥

ಅತೋ ಬ್ರವೀಮಿ ನಾಸ್ಥಾನೇ ತವ ಯಾತಂ ಮನೋ ಮಯಿ ।
ನ ಚಾಪ್ಯಗಮ್ಯಾ ಗರ್ಭಸ್ಥೋ ಲೋಲೋ ವಿಘ್ನಂ ಕರೋತ್ಯಸೌ ॥೪೪॥

---

೪೦. ಲೋಲನೆಂಬ ಮುನಿಪುತ್ರನು ನಿನ್ನ ಗರ್ಭಕ್ಕೆ ಬರಲಾಗಿ ನೀನು ಜನ್ಮಾಂತರ ಸ್ಮರಣವುಳ್ಳವಳಾಗುತ್ತೀಯೆ, ಹಾಗು ಜನ್ಮಾಂತರ ಸ್ಮರಣವನ್ನು ಹೊಂದಿ ಮನುಷ್ಯರಂತೆ ಮಾತನ್ನು ಆಡುತ್ತೀಯೆ.

೪೧. ಲೋಲಕುಮಾರನು ಜನ್ಮವೆತ್ತಿದ ಕೂಡಲೆ ನೀನು ಮೃಗರೂಪದಿಂದ ಬಿಡುಗಡೆಯನ್ನು ಹೊಂದುತ್ತೀಯೆ. ಮತ್ತು ಪತಿಯಿಂದ ಗೌರವಿಸಲ್ಪಟ್ಟವಳಾಗಿ ಪಾಪಿ ಜನರಿಗೆ ದುರ್ಲಭವಾದ ಉತ್ತಮ ಲೋಕಗಳನ್ನು ಹೊಂದುತ್ತೀಯೆ.

೪೨. ಅನಂತರವಲ್ಲಿ ನಿನ್ನಲ್ಲಿ ಜನ್ಮವೆತ್ತಿದ ಮಹಾವೀರ್ಯಸಂಪನ್ನನಾದ ಲೋಲಕುಮಾರನು ಪಿತೃವಿನ ಶತ್ರುಗಳನ್ನು ವಧಿಸಿ ಸಂಪೂರ್ಣ ಭೂಮಂಡಲವನ್ನು ಗೆದ್ದು ತರುವಾಯ ಮನು ಪ್ರಜಾಪತಿಯಾಗುವನು.

೪೩. ಹೀಗೆ ನಾನು ಮುನಿಶಾಪಕ್ಕೆ ಭಾಗಿಯಾಗಿ ಮರಣಾನಂತರದಲ್ಲಿ ಮೂಕಪ್ರಾಣಿಯ ರೂಪವನ್ನು ಹೊಂದಿದೆನು. ನಿನ್ನ ಸ್ಪರ್ಶರೂಪವಾದ ಸಂಗದಿಂದ ನನ್ನ ಉದರದಲ್ಲಿ ಗರ್ಭವು ಉತ್ಪತ್ತಿಯಾಗಿದೆ.

೪೪. ಆದುದರಿಂದ ನಿನ್ನ ಮಾನಸವು ನನ್ನಲ್ಲಿ ಅನುಚಿತವಾಗಿ ಪ್ರವರ್ತಿಸಲಿಲ್ಲ; ನಾನು ನಿನ್ನ ಸಂಗಕ್ಕೆ ಅನರ್ಹಳಲ್ಲ; ಆದರೆ ಗರ್ಭದಲ್ಲಿದ್ದ ಲೋಲ ಶಿಶುವು ಸಂಗಕ್ಕೆ ವಿಘ್ನವನ್ನುಂಟು ಮಾಡುವುದು ಎಂದು ಹೇಳಿರುವೆನು.

ಮಾರ್ಕಣ್ಡೇಯ ಉವಾಚ :—

ಏವಮುಕ್ತಸ್ತತಃ ಸೋಽಪಿ ರಾಜಾ ಪ್ರಾಪ್ಯ ಪರಾಂ ಮುದಮ್ ।
ಪುತ್ರೋ ಮಮಾರೀನ್ ಜಿತ್ವೇತಿ ಪೃಥಿವ್ಯಾಂ ಭವಿತಾ ಮನುಃ ॥೪೫॥

ತತಸ್ತಂ ಸುಷುವೇ ಪುತ್ರಂ ಸಾ ಮೃಗೀ ಲಕ್ಷಣಾನ್ವಿತಮ್ ।
ತಸ್ಮಿನ್ ಜಾತೇ ಚ ಭೂತಾನಿ ಸರ್ವಾಣಿ ಪ್ರಯಯುರ್ಮುದಮ್ ॥೪೬॥

ವಿಶೇಷತಶ್ಚ ರಾಜಾಸೌ ಪುತ್ರೇ ಜಾತೇ ಮಹಾವನೇ ।
ಸಾ ವಿಮುಕ್ತಾ ಮೃಗೀ ಶಾಪಾತ್ಪ್ರಾಪ ಲೋಕಾನನುತ್ತಮಾನ್ ॥೪೭॥

ತತಸ್ತಸ್ಯರ್ಷಯಃ ಸರ್ವೇ ಸಮೇತ್ಯ ಮುನಿಸತ್ತಮ ।
ಅವೇಕ್ಷ್ಯ ಭಾವಿನೀಮೃದ್ಧಿಂ ನಾಮ ಚಕ್ರುರ್ಮಹಾತ್ಮನಃ ॥೪೮॥

ಮಾರ್ಕಂಡೇಯ ಮುನಿಯು ಹೇಳಿದನು :—

೪೫. ಆಗ ರಾಜನು ತನ್ನ ಪುತ್ರನು ಶತ್ರುಗಳನ್ನು ವಧಿಸಿ ಭೂಮಿಯನ್ನು ಗೆದ್ದು ಮನು ಪದವನ್ನು ಹೊಂದುವನೆಂದು ಹೇಳಲ್ಪಡಲಾಗಿ ಅತಿಶಯವಾದ ಸಂತೋಷವನ್ನು ಹೊಂದಿದನು.

೪೬. ಅನಂತರದಲ್ಲಿ ಆ ಮೃಗಾಂಗನೆಯು ಶುಭಲಕ್ಷಣಗಳಿಂದ ಕೂಡಿವ ಲೋಲ ಕುಮಾರನೆಂಬ ಪುತ್ರನನ್ನು ಪ್ರಸವಿಸಿದಳು. ಲೋಲ ಕುಮಾರನು ಜನ್ಮವೆತ್ತಲಾಗಿ ಸಮಸ್ತ ಭೂತಗಳು ಹೆಚ್ಚಾದ ಆನಂದವನ್ನು ಅನುಭವಿಸಿದುವು.

೪೭. ಆ ದೊಡ್ಡಗೊಂಡಾರಣ್ಯದಲ್ಲಿ ಪುತ್ರನು ಜನಿಸಲು ರಾಜನು ವಿಶೇಷವಾಗಿ ಸಂತೋಷಪಟ್ಟನು. ಕೂಡಲೆ ಆ ಮೃಗಾಂಗನೆಯು ಶಾಪದಿಂದ ವಿಮೋಚನವನ್ನು ಹೊಂದಿ ಸರ್ವೋತ್ತಮವಾದ ಪುಣ್ಯಲೋಕಗಳನ್ನು ಹೊಂದಿದಳು.

೪೮. ಎಲೈ ಮುನಿಶ್ರೇಷ್ಠನೇ! ತರುವಾಯ ಆ ಮಗುವಿನ ಬಳಿಗೆ ಸಮಸ್ತ ಮಹರ್ಷಿಗಳು ಬಂದು ಸೇರಿ ಜ್ಞಾನದೃಷ್ಟಿಯಿಂದ ಆ ಮಹಾತ್ಮನ ಭವಿಷ್ಯವಾದ ಕಲ್ಯಾಣ ಸಮೃದ್ಧಿಯನ್ನು ಕಂಡು ನಾಮಕರಣವನ್ನು ಮಾಡಿದರು.

ತಾಮಸೀಂ ಭಜಮಾನಾಯಾಂ ಯೋನಿಂ ಮಾತರ್ಯಜಾಯತ ।
ತಮಸಾ ಚಾವೃತೇ ಲೋಕೇ ತಾಮಸೋಽಯಂ ಭವಿಷ್ಯತಿ ॥೪೯॥

ತತಃ ಸ ತಾಮಸಸ್ತೇನ ಪಿತ್ರಾ ಸಂವರ್ಧಿತೋ ವನೇ ।
ಜಾತಬುದ್ಧಿರುವಾಚೇದಂ ಪಿತರಂ ಮುನಿಸತ್ತಮ ॥೫೦॥

ಕಸ್ತ್ವಂ ತಾತ ಕಥಂ ವಾಹಂ ಪುತ್ರೋ ಮಾತಾ ಚ ಕಾ ಮಮ ।
ಕಿಮರ್ಥಮಾಗತಶ್ಚ ತ್ವಮೇತತ್ಸತ್ಯಂ ಬ್ರವೀಹಿ ಮೇ ॥೫೧॥

ಮಾರ್ಕಣ್ಡೇಯ ಉವಾಚ :–

ತತಃ ಪಿತಾ ಯಥಾವೃತ್ತಂ ಸ್ವರಾಜ್ಯಚ್ಯವನಾದಿಕಮ್ ।
ತಸ್ಯಾಚಷ್ಟೇ ಮಹಾಬಾಹುಃ ಪುತ್ರಸ್ಯ ಜಗತೀಪತಿಃ ॥೫೨॥

---

೪೯. ಈ ಕುಮಾರನು ತಮೋಗುಣಮಯವಾದ ಯೋನಿಯನ್ನು ಪಡೆದಿರುವ ಜನನಿಯಲ್ಲಿ ಜನ್ಮವೆತ್ತಿರುವನು. ಮತ್ತು ಲೋಕವು ಎಲ್ಲ ತಮಸ್ಸಿನಿಂದ ಆವರಿಸಲ್ಪಟ್ಟಿರುವ ಸಮಯದಲ್ಲಿ ಹುಟ್ಟಿರುವನು. ಆದುದರಿಂದ ತಾಮಸ ಎಂಬ ನಾಮಾಂಕಿತನಾಗುವನು.

೫೦. ಮುನಿವರೇಣ್ಯನಾದ ಕ್ರೌಷ್ಟುಕಿಯೇ ! ಅನಂತರದಲ್ಲಿ ತಂದೆಯಾದ ಸುರಾಷ್ಟ್ರನಿಂದ ಆ ಕಾಡಿನಲ್ಲಿ ಪೋಷಿಸಲ್ಪಟ್ಟ ಆ ಕುಮಾರನು ಕ್ರಮವಾಗಿ ವಿವೇಕವು ಉದಯಿಸಿದ ಮೇಲೆ ತಂದೆಯನ್ನು ನೋಡಿ ಹೇಳಿದನು.

೫೧. ಜನಕನೇ ! ನೀನು ಯಾರು ? ನಾನು ನಿನಗೆ ಪುತ್ರನಾಗಿ ಜನಿಸಿದುದು ಹೇಗೆ ? ನನಗೆ ತಾಯಿ ಯಾರು ? ನೀನು ಹೀಗೆ ಇಲ್ಲಿಗೆ ಏಕೆ ಬಂದಿರುವೆ ? ಇದನ್ನು ತಿಳಿಯಲು ಇಚ್ಛಿಪಡುವ ನನಗೆ ನೀನು ನಿಜಸ್ಥಿತಿಯನ್ನು ಹೇಳು.

ಮಾರ್ಕಂಡೇಯ ಮುನಿಯು ಇಂತೆಂದನು :—

೫೨. ತರುವಾಯ ಮಹಾಬಾಹುಬಲದಿಂದ ಶೋಭಿಸುವವನೂ, ರಾಜ್ಯವನ್ನು ಶಾಸನಮಾಡುವ ರಾಜನೂ ಆಗಿದ್ದ ತಂದೆಯು ಆ ಮಗನಿಗೆ ಹಿಂದೆ ನಡೆದ ತನ್ನ ರಾಜ್ಯಭ್ರಂಶ ಮುಂತಾದುದನ್ನು ಹೇಳಿದನು.

ಶ್ರುತ್ವಾ ತತ್ಸಕಲಂ ಸೋऽಪಿ ಸಮಾರಾಧ್ಯ ಚ ಭಾಸ್ಕರಮ್ ।
ಅವಾಪ ದಿವ್ಯಾನ್ಯಸ್ತ್ರಾಣಿ ಸಸಂಹಾರಾಣ್ಯಶೇಷತಃ ॥೫೩॥

ಕೃತಾಸ್ತ್ರಸ್ತಾನರೀನ್ ಜಿತ್ವಾ ಪಿತುರಾನೀಯ ಚಾನ್ತಿಕಮ್ ।
ಅನುಜ್ಞಾತಾನ್ಮುಮೋಚಾಥ ಸ ಚ ಸ್ವಂ ಧರ್ಮಮಾಸ್ಥಿತಃ ॥೫೪॥

ಪಿತಾಪಿ ತಸ್ಯ ಸ್ವಾಂಲ್ಲೋಕಾಂಸ್ತಪೋಯಜ್ಞಸಮಾರ್ಜಿತಾನ್ ।
ವಿಸೃಷ್ಟದೇಹಃ ಸಮ್ಪ್ರಾಪ್ತೋ ದೃಷ್ಟ್ವಾ ಪುತ್ರಮುಖಂ ಸುಖಮ್ ॥೫೫॥

ಜಿತ್ವಾ ಸಮಸ್ತಾಂ ಪೃಥಿವೀಂ ತಾಮಸಾಖ್ಯಃ ಸ ಪಾರ್ಥಿವಃ ।
ತಾಮಸಾಖ್ಯೋ ಮನುರಭೂತ್ತಸ್ಯ ಮನ್ವನ್ತರಂ ಶೃಣು ॥೫೬॥

---

೫೩. ಆ ಕುಮಾರನು ಎಲ್ಲ ಸಂಗತಿಯನ್ನು ಕೇಳಿ ಸೂರ್ಯದೇವನನ್ನು ಆರಾಧನೆಯಿಂದ ಮೆಚ್ಚಿಸಿ ಅವನಿಂದ ಸಮಸ್ತ ದಿವ್ಯಾಸ್ತ್ರಗಳನ್ನು ಅವುಗಳ ಪ್ರಯೋಗ-ಉಪಸಂಹಾರ ರಹಸ್ಯ ಸಮೇತವಾಗಿ ಪರಿಗ್ರಹಿಸಿದನು.

೫೪. ಹೀಗೆ ಅಸ್ತ್ರಪಾರಂಗತನಾದ ತಾಮಸಕುಮಾರನು ರಾಜ್ಯವನ್ನು ಕಿತ್ತುಕೊಂಡಿರುವ ಶತ್ರುಗಳನ್ನು ಜಯಿಸಿ ತಂದೆಯ ಬಳಿಗೆ ತಂದು ತರುವಾಯ ಅವರನ್ನು ಬಿಡಬೇಕೆಂಬ ತಂದೆಯ ಅನುಮತಿಯಂತೆ ದಯೆಯಿಂದ ಬಿಟ್ಟು ತಾನು ತನ್ನ ರಾಜಧರ್ಮವನ್ನು ಅವಲಂಬಿಸಿದನು.

೫೫. ಅನಂತರದಲ್ಲಿ ಅವನ ತಂದೆಯು ಪುತ್ರನ ಮುಖಭಾಗ್ಯದಿಂದ ಲಭಿಸಿದ ಸುಖವನ್ನು ನೋಡಿ ದೇಹವನ್ನು ತ್ಯಜಿಸಿದ ಮೇಲೆ ತಾನು ಮಾಡಿರುವ ತಪಸ್ಸು-ಯಜ್ಞಗಳಿಂದ ಲಭ್ಯವಾಗುವ ಉತ್ತಮ ಲೋಕಗಳಿಗೆ ಏರಿದನು.

೫೬. ತಾಮಸ ಎಂಬ ನಾಮಾಖ್ಯಾನವುಳ್ಳ ಆ ರಾಜನು ಸಮಸ್ತ ಭೂಮಿಯನ್ನು ಗೆದ್ದು ತಾಮಸ ಎಂಬ ನಾಮಧೇಯವನ್ನು ಹೊಂದಿದ ಮನು ಪ್ರಜಾಪತಿಯಾದನು. ಮುಂದೆ ತಾಮಸ ಮನುವಿನ ಮನ್ವಂತರವನ್ನು ಕೇಳು.

ಯೇ ದೇವಾಸ್ತತ್ಪತಿರ್ಯಶ್ಚ ದೇವೇನ್ದ್ರೋ ಯೇ ತಥರ್ಷಯಃ ।
ಯೇ ಪುತ್ರಾಶ್ಚ ಮನೋಸ್ತಸ್ಯ ಪೃಥಿವೀಪರಿಪಾಲಕಾಃ ॥೫೭॥

ಸತ್ಯಾಸ್ತಥಾನ್ಯೇ ಸುಧಿಯಃ ಸುರೂಪಾ ಹರಯಸ್ತಥಾ ।
ಏತೇ ದೇವಗಣಾಸ್ತತ್ರ ಸಪ್ತವಿಂಶತಿಕಾ ಮುನೇ ॥೫೮॥

ಮಹಾಬಲೋ ಮಹಾವೀರ್ಯಃ ಶತಯಜ್ಞೋಪಲಕ್ಷಿತಃ ।
ಶಿಖಿರಿನ್ದ್ರಸ್ತಥಾ ತೇಷಾಂ ದೇವಾನಾಮಭವದ್ವಿಭುಃ ॥೫೯॥

ಜ್ಯೋತಿರ್ಧರ್ಮಾ ಪೃಥುಃ ಕಾವ್ಯಶ್ಚೈತ್ರೋಽಗ್ನಿರ್ವಲಕಸ್ತಥಾ ।
ಪೀವರಶ್ಚ ತಥಾ ಬ್ರಹ್ಮನ್ ಸಪ್ತ ಸಪ್ತರ್ಷಯೋಽಭವನ್ ॥೬೦॥

ನರಃ ಕ್ಷಾನ್ತಿಃ ಶಾನ್ತದಾನ್ತಜಾನುಜಙ್ಘಾದಯಸ್ತಥಾ ।
ಪುತ್ರಾಸ್ತು ತಾಮಸಸ್ಯಾಸನ್ ರಾಜಾನಃ ಸುಮಹಾಬಲಾಃ ॥೬೧॥

---

೫೭. ಆ ಮನ್ವಂತರದಲ್ಲಿ ದೇವತೆಗಳು ಯಾರಿದ್ದರು? ದೇವರಾಜನಾದ ಇಂದ್ರನು ಯಾರಾಗಿದ್ದನು? ಸಪ್ತಋಷಿಗಳು ಯಾರು? ಮತ್ತು ಆ ಮನುವಿನ ಯಾವ ಪುತ್ರರು ಪೃಥಿವೀಪಾಲಕರಾಗಿದ್ದರು? ಈ ವಿಷಯವನ್ನು ಹೇಳುವೆನು.

೫೮. ಕ್ರೌಷ್ಟುಕಿ ಮುನಿಯೇ! ಸತ್ಯ, ಸುಧಿ, ಸುರೂಪ ಮತ್ತು ಹರಿ ಎಂಬ ನಾಮಾಂಕನವುಳ್ಳ ದೇವತೆಗಳ ಗಣಗಳು ತಾಮಸ ಮನ್ವಂತರದಲ್ಲಿದ್ದವು. ಮತ್ತು ಆ ಗಣದ ದೇವತೆಗಳು ಇಪ್ಪತ್ತೇಳು ಸಂಖ್ಯೆಯುಳ್ಳವರಾಗಿದ್ದರು.

೫೯. ಹಾಗು ಮಹತ್ತಾದ ಬಲದಿಂದ ಕೂಡಿದವನೂ, ಅತಿಶಯವಾದ ವೀರ್ಯವುಳ್ಳವನೂ ಮತ್ತು ಒಂದು ನೂರು ಯಜ್ಞಗಳನ್ನು ಮಾಡಿದವನೂ ಆದ ಶಿಖಿ ಎಂದು ಪ್ರಖ್ಯಾತನಾದ ಇಂದ್ರನು ಆ ದೇವತೆಗಳಿಗೆ ರಾಜನಾಗಿದ್ದನು.

೬೦. ಮತ್ತು ಆ ತಾಮಸಮನ್ವಂತರದಲ್ಲಿ ಸಪ್ತಋಷಿಪದದಲ್ಲಿ ಜ್ಯೋತಿರ್ಧರ್ಮ, ಪೃಥು, ಕಾವ್ಯ, ಚೈತ್ರ, ಅಗ್ನಿ, ವಲಕ ಮತ್ತು ಪೀವರ ಎಂಬ ನಾಮಾಂಕಿತರಾದ ಏಳು ಮಂದಿಯಿದ್ದರು.

೬೧. ತಾಮಸಮನುವಿಗೆ ನರ, ಕ್ಷಾಂತಿ, ಶಾಂತ, ದಾಂತ ಮತ್ತು ಜಾನುಜಂಘ ಮುಂತಾದ ಅನೇಕ ಮಂದಿ ಪುತ್ರರಿದ್ದರು. ಮಹಾಬಲಿಷ್ಠರಾದ ಆ ಪುತ್ರರು ಪೃಥಿವೀಪಾಲಕರಾದ ರಾಜರಾಗಿದ್ದರು.

ಇತ್ಯೇತತ್ತಾಮಸಂ ವಿಪ್ರ ಮನ್ವನ್ತರಮುದಾಹೃತಮ್ ।
ಯಃ ಪಠೇಚ್ಛೃಣುಯಾದ್ವಾಪಿ ತಮಸಾ ಸ ನ ಬಾಧ್ಯತೇ ॥೭೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ತಾಮಸಮನ್ವನ್ತರೇ
ಏಕಸಪ್ತತಿತಮೋಽಧ್ಯಾಯಃ

---

೭೨. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ಈ ಬಗೆಯಾಗಿ ನನ್ನಿಂದ ನಿನಗೆ ತಾಮಸಮನುವಿನ ಮನ್ವಂತರವು ವರ್ಣಿಸಲ್ಪಟ್ಟಿರುವುದು. ಯಾವ ಮಾನವನು ತಾಮಸಮನ್ವಂತರ ಚರಿತ್ರೆಯನ್ನು ಪಠನ ಅಥವಾ ಶ್ರವಣ ಮಾಡುವನೋ ಅವನು ತಮೋಗುಣದಿಂದ ಬಾಧಿಸಲ್ಪಡುವುದಿಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಿಸಪ್ತತಿತಮೋಽಧ್ಯಾಯಃ

(ರೈವತಮನ್ವನ್ತರನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಪಞ್ಚಮೋಽಪಿ ಮನುರ್ಬ್ರಹ್ಮನ್ ರೈವತೋ ನಾಮ ವಿಶ್ರುತಃ ।
ತಸ್ಯೋತ್ಪತ್ತಿಂ ವಿಸ್ತರಶಃ ಶೃಣುಷ್ವ ಕಥಯಾಮಿ ತೇ ॥೧॥

ಋಷಿರಾಸೀನ್ಮಹಾಭಾಗ ಋತವಾಗಿತಿ ವಿಶ್ರುತಃ ।
ತಸ್ಯಾಪುತ್ರಸ್ಯ ಪುತ್ರೋಽಭೂದ್ರೇವತ್ಯನ್ತೇ ಮಹಾತ್ಮನಃ ॥೨॥

ಎಪ್ಪತ್ತೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಬ್ರಹ್ಮರ್ಷಿಯೆ! ಐದನೆಯ ಮನು ಪ್ರಜಾಪತಿಯು ರೈವತ ಎಂಬ ನಾಮಾಂಕನದಿಂದ ಪ್ರಸಿದ್ಧನಾಗಿದ್ದನು. ಆ ಮನುವಿನ ಉತ್ಪತ್ತಿಯನ್ನು ವಿಸ್ತಾರವಾಗಿ ಕೇಳು. ನಾನು ಅದನ್ನು ನಿನಗೆ ಹೇಳುವೆನು.

೨. ಮಹಾಭಾಗ್ಯವಂತನಾದ ಕ್ರೌಷ್ಟುಕಿಯೇ! ಹಿಂದೆ ಋತವಾಕ್ ಎಂದು ಖ್ಯಾತಿಗಳಿಸಿದ ಒಬ್ಬ ಮುನಿಯಿದ್ದನು. ಕೆಲವು ಕಾಲ ಅಪುತ್ರನಾಗಿದ್ದ ಆ ಮಹಾತ್ಮನಾದ ಮುನಿಗೆ ರೇವತೀನಕ್ಷತ್ರದ ಕಡೆಯ ಭಾಗದಲ್ಲಿ ಪುತ್ರನು ಜನಿಸಿದನು.

ಸ ತಸ್ಯ ವಿಧಿವಚ್ಚಕ್ರೇ ಜಾತಕರ್ಮಾದಿಕಾಃ ಕ್ರಿಯಾಃ ।
ತಥೋಪನಯನಾದೀಂಶ್ಚ ಸ ಚಾಶೀಲೋಽಭವನ್ಮುನೇ ॥೩॥

ಯತಃ ಪ್ರಭೃತಿ ಜಾತೋಽಸೌ ತತಃ ಪ್ರಭೃತಿ ಸೋಽಪ್ಯೃಷಿಃ ।
ದೀರ್ಘರೋಗಪರಾಮರ್ಶಮವಾಪ ಮುನಿಪುಙ್ಗವಃ ॥೪॥

ಮಾತಾ ತಸ್ಯ ಪರಾಮಾರ್ತಿಂ ಕುಷ್ಠರೋಗಾದಿಪೀಡಿತಾ ।
ಜಗಾಮ ಸ ಪಿತಾ ಚಾಸ್ಯ ಚಿನ್ತಯಾಮಾಸ ದುಃಖಿತಃ ॥೫॥

ಕಿಮೇತದಿತಿ ಸೋಽಪ್ಯಸ್ಯ ಪುತ್ರೋಽಪ್ಯತ್ಯನ್ತದುರ್ಮತಿಃ ।
ಜಗ್ರಾಹ ಭಾರ್ಯಾಮನ್ಯಸ್ಯ ಮುನಿಪುತ್ರಸ್ಯ ಸಮ್ಮುಖೀಮ್ ॥೬॥

---

೩. ಮುನಿಶ್ರೇಷ್ಠನೇ! ಋತವಾಕ್ ಎಂಬ ಮುನಿಯು ತನ್ನ ಪುತ್ರನಿಗೆ ಜಾತಕರ್ಮ ಮುಂತಾದುವುಗಳನ್ನೂ ಮತ್ತು ಉಪನಯನ ಮುಂತಾದ ಸಂಸ್ಕಾರಗಳನ್ನೂ ಯಥಾವಿಧಿಯಾಗಿ ಮಾಡಿದನು. ಆದರೆ ಪುತ್ರನು ಸಾಧುಶೀಲವಿಲ್ಲದವನಾಗಿದ್ದನು.

೪. ಯಾವ ಸಮಯದಲ್ಲಿ ಈ ಪುತ್ರನು ಜನಿಸಿದನೋ ಅಲ್ಲಿಂದ ಮೊದಲಾಗಿ ಮುನಿವರ್ಗದಲ್ಲಿ ಶ್ರೇಷ್ಠನಾದ ಅವನ ತಂದೆ ಋತವಾಕ್ ಮಹರ್ಷಿಯು ದೀರ್ಘವಾದ ವ್ಯಾಧಿಯ ಪೀಡೆಗೆ ಗುರಿಯಾದನು.

೫. ಮತ್ತು ಅವನ ತಾಯಿಯು ಕುಷ್ಠರೋಗ ಮುಂತಾದ ಮಹಾವ್ಯಾಧಿಯಿಂದ ಪೀಡಿತಳಾಗಿ ತುಂಬ ವ್ಯಥೆಯನ್ನು ಹೊಂದಿದಳು. ಆಗ ತಂದೆಯು ಬಹಳ ದುಃಖಗೊಂಡವನಾಗಿ ಚಿಂತಿಸತೊಡಗಿದನು.

೬. ತಂದೆಯು "ಇದೇನು? ಹೀಗೇಕಾಯಿತು?" ಎಂದು ಚಿಂತಿಸಿದನು. ಅತ್ಯಂತ ಅವಿವೇಕಿಯಾದ ಅವನ ಪುತ್ರನು ಬೇರೊಬ್ಬ ಮುನಿಪುತ್ರನಲ್ಲಿ ಅನುರಕ್ತಳಾಗಿದ್ದ ಪತ್ನಿಯನ್ನು ಪರಿಗ್ರಹಿಸಿದನು.

ತತೋ ವಿಷಣ್ಣಮನಸಾ ಋತವಾಗಿದಮುಕ್ತವಾನ್ ।
ಅಪುತ್ರತಾ ಮನುಷ್ಯಾಣಾಂ ಶ್ರೇಯಸೇ ನ ಕುಪುತ್ರತಾ ॥೭॥

ಕುಪುತ್ರೋ ಹೃದಯಾಯಾಸಂ ಸರ್ವದಾ ಕುರುತೇ ಪಿತುಃ ।
ಮಾತುಶ್ಚ ಸ್ವರ್ಗಸಂಸ್ಥಾಂಶ್ಚ ಸ್ವಪಿತ್ನನ್ಪಾತಯತ್ಯಧಃ ॥೮॥

ಸುಹೃದಾಂ ನೋಪಕಾರಾಯ ಪಿತೃಣಾಂ ಚ ನ ತೃಪ್ತಯೇ ।
ಪಿತ್ರೋರ್ದುಃಖಾಯ ಧಿಗ್ಜನ್ಮ ತಸ್ಯ ದುಷ್ಕೃತಕರ್ಮಣಃ ॥೯॥

ಧನ್ಯಾಸ್ತೇ ತನಯಾ ಯೇಷಾಂ ಸರ್ವಲೋಕಾಭಿಸಮ್ಮತಾಃ ।
ಪರೋಪಕಾರಿಣಃ ಶಾನ್ತಾಃ ಸಾಧುಕರ್ಮಣ್ಯನುವ್ರತಾಃ ॥೧೦॥

---

೭. ತರುವಾಯ ಋತವಾಕ್ ಮುನಿಯು ಬೇಸರಗೊಂಡ ಮನಸ್ಸಿನಿಂದ ಈ ಮಾತನ್ನು ಹೇಳಿದನು. ಮಾನವರಿಗೆ ಪುತ್ರರಿಲ್ಲದ ದಶೆಯು ಎಷ್ಟೋ ಒಳ್ಳೆಯದು. ದುಷ್ಟಪುತ್ರಪ್ರಾಪ್ತಿಯು ಶ್ರೇಯಸ್ಕರವಲ್ಲ.

೮. ಕುಪುತ್ರನಾಗಿ ಜನಿಸಿದವನು ಯಾವಾಗಲೂ ತಂದೆಯ ಹೃದಯಕ್ಕೆ ಆಯಾಸವನ್ನು ಉಂಟುಮಾಡುವನು. ಹಾಗು ತಾಯಿಯ ಹೃದಯವನ್ನು ನೋಯಿಸುವನು. ಮತ್ತು ಸ್ವರ್ಗದಲ್ಲಿದ್ದ ಪಿತೃಗಳನ್ನು ಅಧೋಗತಿಗೆ ಇಳಿಸುವನು.

೯. ಪಾಪಕರ್ಮದ ಶೀಲವುಳ್ಳ ದುಷ್ಪುತ್ರನ ಜನ್ಮವು ಮಿತ್ರರಿಗೆ ಉಪಕಾರಮಾಡುವುದಲ್ಲ. ಪಿತೃಗಳಿಗೆ ತೃಪ್ತಿಕರವಲ್ಲ. ಮತ್ತು ತಂದೆ-ತಾಯಿಗಳಿಗೆ ವಿಶೇಷವಾಗಿ ದುಃಖವನ್ನು ಕೊಡುವುದು. ಇಂತಹ ಕುಪುತ್ರ ಜನ್ಮಕ್ಕೆ ಧಿಕ್ಕಾರವು.

೧೦. ಯಾವ ಭಾಗ್ಯವಂತರಿಗೆ ಸಮಸ್ತ ಜನರಿಗೆ ಮೆಚ್ಚಿಗೆಯಾದವರೂ, ಪರೋಪಕಾರಿಗಳೂ ಶಾಂತಸ್ವಭಾವದವರೂ ಮತ್ತು ಸಾಧುಕರ್ಮದಲ್ಲಿ ಆಸಕ್ತರೂ ಆದ ಪುತ್ರರು ಜನಿಸುವರೋ ಅವರೇ ಧನ್ಯರು.

ಅನಿರ್ವೃತಂ ತಥಾ ಮನ್ದಂ ಪರಲೋಕಪರಾಙ್ಮುಖಮ್ ।
ನರಕಾಯ ನ ಸದ್ಗತ್ಯೈ ಕುಪುತ್ರಾಲಮ್ಬಿ ಜನ್ಮ ನಃ ॥೧೧॥

ಕರೋತಿ ಸುಹೃದಾಂ ದೈನ್ಯಮಹಿತಾನಾಂ ತಥಾ ಮುದಮ್ ।
ಅಕಾಲೇ ಚ ಜರಾಂ ಪಿತ್ರೋಃ ಕುಸುತಃ ಕುರುತೇ ಧ್ರುವಮ್ ॥೧೨॥

ಮಾರ್ಕಣ್ಡೇಯ ಉವಾಚ :—

ಏವಂ ಸೋಽತ್ಯನ್ತದುಷ್ಟಸ್ಯ ಪುತ್ರಸ್ಯ ಚರಿತೈರ್ಮುನಿಃ ।
ದಹ್ಯಮಾನಮನೋವೃತ್ತಿರ್ವೃತ್ತಂ ಗರ್ಗಮಪೃಚ್ಛತ ॥೧೩॥

ಋತವಾಗುವಾಚ : —

ಸುವ್ರತೇನ ಪುರಾ ವೇದಾ ಗೃಹೀತಾ ವಿಧಿವನ್ಮಯಾ ।
ಸಮಾಪ್ಯ ವೇದಾನ್ವಿಧಿವತ್ಕೃತೋ ದಾರಪರಿಗ್ರಹಃ ॥೧೪॥

---

೧೧. ಇಂತಹ ಕುಪುತ್ರನನ್ನು ಆಲಂಬಿಸಿರುವ ನಮ್ಮ ಜನ್ಮವು ಸುಖಭೋಗವಿಲ್ಲದಿರುವುದೂ, ಅಧಮವೂ ಮತ್ತು ಪರಲೋಕಕ್ಕೆ ಬಲು ದೂರವೂ ಆಗಿದೆ. ಇದು ನರಕವನ್ನು ಕೊಡುವುದೇ ಹೊರತು ನಮಗೆ ಸದ್ಗತಿಯನ್ನು ಕೊಡುವುದಲ್ಲ.

೧೨. ಕುಪುತ್ರನು ನಿಜವಾಗಿ ಮಿತ್ರವರ್ಗಕ್ಕೆ ಮನಸ್ಸಿನಲ್ಲಿ ದೈನ್ಯವನ್ನು ಉಂಟುಮಾಡುವನು. ಶತ್ರುಗಳಿಗೆ ಪರಮಸಂತೋಷವನ್ನು ಕೊಡುವನು. ಹಾಗು ಮಾತಾಪಿತೃಗಳಿಗೆ ಅಕಾಲದಲ್ಲಿ ಮುಪ್ಪನ್ನು ಉಂಟುಮಾಡುವನು.

ಮಾರ್ಕಂಡೇಯ ಮುನಿಯು ಹೀಗೆಂದನು :—

೧೩. ಬಲು ದುಷ್ಟನಾದ ಪುತ್ರನ ನಡತೆಗಳಿಂದ ಹೀಗೆ ಸಂಕಟಪಡುತ್ತಿದ್ದ ಮನೋವೃತ್ತಿಯುಳ್ಳ ತಂದೆಯು ಹೀಗೆ ಆಡಿಕೊಳ್ಳುತ್ತಿರುವಷ್ಟರಲ್ಲಿ ಅಲ್ಲಿಗೆ ಬಂದ ಗರ್ಗಮುನಿಯನ್ನು ಪ್ರಶ್ನಿಸಿದನು.

ಋತವಾಕ್ ಮುನಿಯು ಹೇಳಿದನು :—

೧೪. ಗರ್ಗಮುನಿಯೇ ! ಹಿಂದೆ ಅಧ್ಯಯನನಿಯಮಗಳನ್ನು ಪಾಲಿಸುತ್ತ ಯಥಾವಿಧಿಯಾಗಿ ನನ್ನಿಂದ ವೇದಗಳು ಅಧ್ಯಯನಮಾಡಲ್ಪಟ್ಟವೆ. ಹಾಗು ವೇದಾಧ್ಯಯನವನ್ನು ಮುಗಿಸಿ ಯಥಾಶಾಸ್ತ್ರೀಯವಾಗಿ ಪತ್ನೀಪಾಣಿಗ್ರಹಣವು ಮಾಡಲ್ಪಟ್ಟಿರುವುದು.

ಸದಾರೇಣ ಕ್ರಿಯಾಃ ಕಾರ್ಯಾಃ ಶ್ರೌತಾಃ ಸ್ಮಾರ್ತಾ ವಷಟ್ಕ್ರಿಯಾಃ ।
ನ ಮೇ ನ್ಯೂನಾಃ ಕೃತಾಃ ಕಾಶ್ಚಿದ್ಯಾವದದ್ಯ ಮಹಾಮುನೇ ॥೧೫॥

ಗರ್ಭಾಧಾನವಿಧಾನೇನ ನ ಕಾಮಮನುರುಧ್ಯತಾ ।
ಪುತ್ರಾರ್ಥಂ ಜನಿತಶ್ಚಾಯಂ ಪುನ್ನಾಮ್ನೋ ಬಿಭ್ಯತಾ ಮುನೇ ॥೧೬॥

ಸೋಽಯಂ ಕಿಮಾತ್ಮದೋಷೇಣ ಮಮ ದೋಷೇಣ ವಾ ಮುನೇ ।
ಅಸ್ಮದ್ದುಃಖಾವಹೋ ಜಾತೋ ದೌಃಶೀಲ್ಯಾದ್ಬಂಧುಶೋಕದಃ ॥೧೭॥

ಗರ್ಗ ಉವಾಚ :—

ರೇವತ್ಯನ್ತೇ ಮುನಿಶ್ರೇಷ್ಠ ಜಾತೋಽಯಂ ತನಯಸ್ತವ ।
ತೇನ ದುಃಖಾಯ ತೇ ದುಷ್ಟೇ ಕಾಲೇ ಯಸ್ಮಾದಜಾಯತ ॥೧೮॥

---

೧೫. ಗರ್ಗಮಹಾಮುನಿಯೇ ! ಸಹಧರ್ಮಚಾರಿಣಿಯಿಂದ ಕೂಡಿ ಮಾಡಬೇಕಾದ ಶ್ರೌತಸ್ಮಾರ್ತಗಳಾದ ಯಜ್ಞ-ಹೋಮ ಮುಂತಾದ ಕರ್ಮಾನುಷ್ಠಾನಗಳನ್ನು ನಾನು ಮಾಡಿರುವೆನು. ಇದುವರೆಗೆ ನನಗೆ ಯಾವ ಕರ್ಮಗಳೂ ನ್ಯೂನವಾಗಲಿಲ್ಲ.

೧೬. ಗರ್ಗಮಹರ್ಷಿಯೇ ! ಕಾಮಸುಖವನ್ನು ಆಶಿಸದಿರುವ ಮತ್ತು ಪುತ್ ಎಂಬ ನರಕದಿಂದ ಭಯಪಡುವ ನಾನು ಗರ್ಭಾಧಾನ ಪ್ರಯೋಗದ ವಿಧಾನವನ್ನು ಅನುಸರಿಸಿ ಪುತ್ರಸಂತತಿಯ ಉದ್ದೇಶದಿಂದ ಈ ಪುತ್ರನನ್ನು ಹೊಂದಿರುವೆನು.

೧೭. ಪೂಜ್ಯನಾದ ಮಹರ್ಷಿಯೇ ! ಆದರೆ ಈ ಪುತ್ರನು ಕೆಟ್ಟ ನಡತೆಗಳಿಂದ ಬಂಧುಗಳಿಗೆ ಶೋಕವನ್ನು ಉಂಟುಮಾಡುವವನೂ ಮತ್ತು ತಾಯಿ-ತಂದೆಗಳಿಗೆ ವಿಶೇಷದುಃಖಕಾರಿಯೂ ಆಗಿ ಜನಿಸಿರುವನು. ಇದು ಇವನ ಆತ್ಮದೋಷದಿಂದ ಆಗಿದೆಯೇ ? ನನ್ನ ದೋಷದಿಂದ ಆಗಿದೆಯೇ ?

ಗರ್ಗಮುನಿಯು ಹೇಳಿದನು :—

೧೮. ಮುನಿಶ್ರೇಷ್ಠನೇ ! ನಿನ್ನ ಈ ಪುತ್ರನು ರೇವತೀನಕ್ಷತ್ರದ ಕಡೆಯ ಭಾಗದಲ್ಲಿ ಜನಿಸಿರುವನು. ಯಾವ ಕಾರಣದಿಂದ ದುಷ್ಟಕಾಲದಲ್ಲಿ ಇವನ ಜನನವಾಗಿದೆಯೊ ಆ ಕಾರಣದಿಂದ ಇವನು ನಿನಗೆ ದುಃಖವನ್ನು ಕೊಡುತ್ತಿರುವನು.

ನ ತೇಽಪಚಾರೋ ನೈವಾಸ್ಯ ಮಾತುರ್ನಾಯಂ ಕುಲಸ್ಯ ತೇ ।
ತಸ್ಯ ದೌಃಶೀಲ್ಯಹೇತುಸ್ತ್ವಂ ರೇವತ್ಯನ್ತಮುಪಾಗತಮ್ ॥೧೯॥

ಋತವಾಗುವಾಚ :—

ಯಸ್ಮಾನ್ಮಮೈಕಪುತ್ರಸ್ಯ ರೇವತ್ಯನ್ತಸಮುದ್ಭವಮ್ ।
ದೌಃಶೀಲ್ಯಮೇತತ್ತಸ್ಮಾತ್ಸ್ಪತತಾಮಾಶು ರೇವತೀ ॥೨೦॥

ಮಾರ್ಕಣ್ಡೇಯ ಉವಾಚ :—

ತೇನೈವಂ ವ್ಯಾಹೃತೇ ಶಾಪೇ ರೇವತ್ಯೃಕ್ಷಂ ಪಪಾತ ಹ ।
ಪಶ್ಯತಃ ಸರ್ವಲೋಕಸ್ಯ ವಿಸ್ಮಯಾವಿಷ್ಟಚೇತಸಃ ॥೨೧॥

ರೇವತ್ಯೃಕ್ಷಂ ಚ ಪತಿತಂ ಕುಮುದಾದ್ರೌ ಸಮನ್ತತಃ ।
ಭಾಸಯಾಮಾಸ ಸಹಸಾ ವನಕನ್ದರನಿರ್ಝರಾನ್ ॥೨೨॥

---

೧೯. ಇವನ ದುಷ್ಟತೆಗೆ ನಿನ್ನ ಅಪಚಾರವು ಕಾರಣವಲ್ಲ; ಇವನ ಆತ್ಮದೋಷವು ಕಾರಣವಲ್ಲ; ಅಥವಾ ತಾಯಿಯ ಅಪರಾಧವೂ ಕುಲದ ಕಲಂಕವೂ ಏನೂ ಇಲ್ಲ. ಇವನ ದುಃಶೀಲತೆಗೆ ಜನ್ಮಕಾಲದಲ್ಲಿದ್ದ ರೇವತೀ ನಕ್ಷತ್ರದ ಅಂತವು ಕಾರಣವಾಗಿದೆ.

ಋತವಾಕ್ ಮುನಿಯು ಹೇಳಿದನು :—

೨೦. ಯಾವ ಕಾರಣದಿಂದ ನನ್ನ ಏಕಮಾತ್ರ ಪುತ್ರನಲ್ಲಿ ಇಂತಹ ದುರ್ವರ್ತನೆಯು ಉಂಟಾಗುವುದಕ್ಕೆ ರೇವತೀ ನಕ್ಷತ್ರದ ಅಂತವು ಕಾರಣವಾಯಿತೊ ಆದ್ದರಿಂದ ರೇವತೀ ನಕ್ಷತ್ರವು ಬೇಗ ಕೆಳಕ್ಕೆ ಬಿದ್ದುಹೋಗಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೨೧. ಋತವಾಕ್ ಮುನಿಯು ಹೀಗೆ ಶಾಪವಚನವನ್ನು ಹೇಳುತ್ತಿರಲು ಸಮಸ್ತ ಲೋಕವು ವಿಸ್ಮಯಗೊಂಡ ಮಾನಸವುಳ್ಳದ್ದಾಗಿ ನೋಡುತ್ತಿರುವ ಹಾಗೆ ಆಕಾಶದಿಂದ ರೇವತೀ ನಕ್ಷತ್ರವು ಕೆಳಗೆ ಬಿತ್ತು.

೨೨. ಕುಮುದಾದ್ರಿ ಎಂಬ ಪರ್ವತದಲ್ಲಿ ಬಿದ್ದ ರೇವತೀ ನಕ್ಷತ್ರವು ಕೂಡಲೆ ಅಲ್ಲಿ ಸುತ್ತಲೂ ಇದ್ದ ಕಾಡು, ಗುಹೆ, ನದೀಪ್ರಪಾತ ಮುಂತಾದುವುಗಳನ್ನು ತನ್ನ ಜ್ಯೋತಿಯಿಂದ ಬೆಳಗಿತು.

ಕುಮುದಾದ್ರಿಶ್ಚ ತತ್ಪಾತಾತ್ ಖ್ಯಾತೋ ರೈವತಕೋಽಭವತ್ ।
ಅತೀವ ರಮ್ಯಃ ಸರ್ವಸ್ಯಾಂ ಪೃಥಿವ್ಯಾಂ ಪೃಥಿವೀಧರಃ ॥೨೩॥

ತಸ್ಯರ್ಕ್ಷಸ್ಯ ತು ಯಾ ಕಾನ್ತಿರ್ಜಾತಾ ಪಙ್ಕಜಿನೀಸರಃ ।
ತತೋ ಜಜ್ಞೇ ತದಾ ಕನ್ಯಾ ರೂಪೇಣಾತೀವ ಶೋಭನಾ ॥೨೪॥

ರೇವತೀಕಾನ್ತಿಸಮ್ಭೂತಾಂ ತಾಂ ದೃಷ್ಟ್ವಾ ಪ್ರಮುಚೋ ಮುನಿಃ ।
ತಸ್ಯಾ ನಾಮ ಚಕಾರೇತ್ಥಂ ರೇವತೀ ನಾಮ ಭಾಗುರೇ ॥೨೫॥

ಪೋಷಯಾಮಾಸ ಚೈವೈತಾಂ ಸ್ವಾಶ್ರಮಾಭ್ಯಾಸಸಮ್ಭವಾಮ್ ।
ಪ್ರಮುಚಃ ಸ ಮಹಾಭಾಗಸ್ತಸ್ಮಿನ್ನೇವ ಮಹಾಚಲೇ ॥೨೬॥

ತಾಂ ತು ಯೌವನಿನೀಂ ದೃಷ್ಟ್ವಾ ಕನ್ಯಕಾಂ ರೂಪಶಾಲಿನೀಮ್ ।
ಸ ಮುನಿಶ್ಚಿನ್ತಯಾಮಾಸ ಕೋಽಸ್ಯಾ ಭರ್ತಾ ಭವೇದಿತಿ ॥೨೭॥

---

೨೩. ಕುಮುದಾದ್ರಿಯು ತನ್ನಲ್ಲಿ ರೇವತೀ ನಕ್ಷತ್ರವು ಬಿದ್ದಿರುವ ನಿಮಿತ್ತದಿಂದ ರೈವತಕವೆಂದು ಖ್ಯಾತಿಯನ್ನು ಹೊಂದಿತು. ಮತ್ತು ಭೂಮಂಡಲದಲ್ಲಿ ಎಲ್ಲ ಬಹಳ ರಮಣೀಯವಾದ ಪರ್ವತವಾಯಿತು.

೨೪. ಹಾಗೆ ಬಿದ್ದಿರುವ ರೇವತೀ ನಕ್ಷತ್ರದ ಕಾಂತಿಯು ಅನೇಕ ತಾವರೆ ಹೂ-ಬಳ್ಳಿಗಳಿಂದ ಕೂಡಿದ ಸರೋವರದಂತೆ ಪ್ರಸರಿಸಿತು. ಅದರಿಂದ ಸೌಂದರ್ಯದಿಂದ ಬಹಳ ಶೋಭಿಸುವ ಒಬ್ಬಳು ಕನ್ಯೆಯು ಜನಿಸಿದಳು.

೨೫. ಎಲೈ, ಭಾಗುರಿ ಮುನಿಯೇ! ತರುವಾಯ ಪ್ರಮುಚ ಎಂಬ ಮುನಿಯು ರೇವತಿಯ ಕಾಂತಿಯಿಂದ ಜನಿಸಿದ ಕನ್ಯೆಯನ್ನು ನೋಡಿ ಇದೇ ನಿಮಿತ್ತದಿಂದ ಆ ಕನ್ಯೆಗೆ ರೇವತಿ ಎಂದು ನಾಮಕರಣ ಮಾಡಿದನು.

೨೬. ಅನಂತರದಲ್ಲಿ ಮಹಾಮಹಿಮನಾದ ಪ್ರಮುಚ ಮುನಿಯು ಅದೇ ಮಹಾಗಿರಿಯಲ್ಲಿ ತನ್ನ ಆಶ್ರಮದ ಸಮೀಪದಲ್ಲಿ ಜನ್ಮವೆತ್ತಿದ ಆ ರೇವತೀ ಕನ್ಯೆಯನ್ನು ಪೋಷಣಮಾಡಿದನು.

೨೭. ಕಾಲಕ್ರಮದಿಂದ ಸೌಂದರ್ಯವತಿಯಾದ ಕನ್ಯೆಯು ತಾರುಣ್ಯವತಿಯಾದುದನ್ನು ನೋಡಿ ಆಕೆಯನ್ನು ಪೋಷಿಸಿದ ಪ್ರಮುಚ ಮುನಿಯು ಈಕೆಗೆ ಯಾರು ಪತಿಯಾಗುವನೋ ಎಂದು ಯೋಚಿಸಲಾರಂಭಿಸಿದನು.

ಏವಂ ಚಿನ್ತಯತಸ್ತಸ್ಯ ಯಯೌ ಕಾಲೋ ಮಹಾನ್ಮುನೇ ।
ನ ಚಾಸಸಾದ ಸದೃಶಂ ವರಂ ತಸ್ಯಾ ಮಹಾಮುನಿಃ ॥೨೮॥

ತತಸ್ತಸ್ಯಾ ವರಂ ಪ್ರಷ್ಟುಮಗ್ನಿಂ ಸ ಪ್ರಮುಚೋ ಮುನಿಃ ।
ವಿವೇಶ ವಹ್ನಿಶಾಲಾಂ ವೈ ಪೃಷ್ಟಸ್ತಂ ಪ್ರಾಹ ಹವ್ಯಭುಕ್ ॥೨೯॥

ಮಹಾಬಲೋ ಮಹಾವೀರ್ಯಃ ಪ್ರಿಯವಾಗ್ಧರ್ಮವತ್ಸಲಃ ।
ದುರ್ಗಮೋ ನಾಮ ಭವಿತಾ ಭರ್ತಾ ಹ್ಯಸ್ಯಾ ಮಹೀಪತಿಃ ॥೩೦॥

ಮಾರ್ಕಣ್ಡೇಯ ಉವಾಚ :—

ಅನನ್ತರಂ ಚ ಮೃಗಯಾಪ್ರಸಙ್ಗೇನಾಗತೋ ಮುನೇ ।
ತಸ್ಯಾಶ್ರಮಪದಂ ಧೀಮಾನ್ದುರ್ಗಮಃ ಸ ನರಾಧಿಪಃ ॥೩೧॥

---

೨೮. ಕ್ರೌಷ್ಟುಕಿ ಮುನಿಯೇ ! ಪ್ರಮುಚ ಮುನಿಯು ಹೀಗೆ ಚಿಂತಿಸುತ್ತ ದೀರ್ಘಕಾಲವು ಕಳೆದುಹೋಯಿತು. ಆದರೆ ಮಹಾಮುನಿಯು ಕನ್ಯೆಯಾದ ರೇವತಿಗೆ ಅನುರೂಪನಾದ ವರನನ್ನು ಹೊಂದಲಿಲ್ಲ.

೨೯. ಕಡೆಯಲ್ಲಿ ಮುನಿಯು ಆ ಕನ್ಯೆಗೆ ಅನುರೂಪ ವರನು ಯಾರೆಂದು ಅಗ್ನಿಯನ್ನಾದರೂ ಕೇಳೋಣವೆಂದು ಒಂದು ಸಮಯ ಅಗ್ನಿಶಾಲೆಗೆ ಹೋದನು. ಅಲ್ಲಿ ಅಗ್ನಿದೇವನನ್ನು ಕೇಳಲು ಅಗ್ನಿದೇವನು ಮುನಿಗೆ ಪ್ರತ್ಯುತ್ತರವನ್ನು ಹೇಳಿದನು.

೩೦. ಮಹತ್ತಾದ ಬಲದಿಂದ ಕೂಡಿವವನೂ, ವೀರ್ಯಸಂಪನ್ನನೂ, ಪ್ರಿಯವಾದ ಮಾತನಾಡುವವನೂ, ಧರ್ಮಪ್ರೇಮಿಯೂ ಮತ್ತು ದುರ್ಗಮ ಎಂಬ ನಾಮಾಂಕಿತನೂ ಆದ ರಾಜನು ಈಕೆಗೆ ಪತಿಯಾಗುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೩೧. ಮಹರ್ಷಿಯೇ ! ಅನಂತರದಲ್ಲಿ ಪ್ರತಿಭಾವಂತನಾದ ಆ ದುರ್ಗಮನೆಂಬ ರಾಜನು ಬೇಟೆಯಾಡುವ ಪ್ರಸಂಗದಿಂದ ಪ್ರಮುಚ ಮುನಿಯ ಆಶ್ರಮದ ಬಳಿಗೆ ಬಂದನು.

ಪ್ರಿಯವ್ರತಾನ್ವಯಭವೋ ಮಹಾಬಲಪರಾಕ್ರಮಃ ।
ಪುತ್ರೋ ವಿಕ್ರಮಶೀಲಸ್ಯ ಕಾಲಿನ್ದೀಜಠರೋದ್ಭವಃ ॥೩೨॥

ಸ ಪ್ರವಿಶ್ಯಾಶ್ರಮಪದಂ ತಾಂ ತನ್ವೀಂ ಜಗತೀಪತಿಃ ।
ಅಪಶ್ಯಮಾನಸ್ತಮೃಷಿಂ ಪ್ರಿಯೇತ್ಯಾಮನ್ತ್ರ್ಯ ಪೃಷ್ಟವಾನ್ ॥೩೩॥

ರಾಜೋವಾಚ :—

ಕ್ವ ಗತೋ ಭಗವಾನಸ್ಮಾದಾಶ್ರಮಾನ್ಮುನಿಪುಙ್ಗವಃ ।
ತಂ ಪ್ರಣೇತುಮಿಹೇಚ್ಛಾಮಿ ತತ್ತ್ವಂ ಪ್ರಬ್ರೂಹಿ ಶೋಭನೇ ॥೩೪॥

ಮಾರ್ಕಣ್ಡೇಯ ಉವಾಚ :—

ಅಗ್ನಿಶಾಲಾಂ ಗತೋ ವಿಪ್ರಸ್ತಚ್ಛ್ರುತ್ವಾ ತಸ್ಯ ಭಾಷಿತಮ್ ।
ಪ್ರಿಯೇತ್ಯಾಮನ್ತ್ರಣಂ ಚೈವ ನಿಶ್ಚಕ್ರಾಮ ತ್ವರಾನ್ವಿತಃ ॥೩೫॥

---

೩೨. ಮಹತ್ತಾದ ಬಲ–ಪರಾಕ್ರಮಗಳಿಂದ ಶೋಭಿಸುವ ಆ ದುರ್ಗಮ ರಾಜನು ಪ್ರಿಯವ್ರತ ರಾಜನ ವಂಶದಲ್ಲಿ ಜನಿಸಿದವನಾಗಿದ್ದನು. ಮತ್ತು ವಿಕ್ರಮ ಶೀಲನೆಂಬುವನ ಪುತ್ರನೂ ಕಾಲಿಂದೀ ಎಂಬ ಜನನಿಯ ಉದರದಲ್ಲಿ ಹುಟ್ಟಿ-ದವನೂ ಆಗಿದ್ದನು.

೩೩. ಜಗತೀಪಾಲಕನಾದ ಆ ಧೊರೆಯು ಆಶ್ರಮಪ್ರದೇಶವನ್ನು ಹೊಕ್ಕು ನೋಡಲು ಅಲ್ಲಿ ಮುನಿಯನ್ನು ಕಾಣದೆ ತನ್ವಿಯಾದ ರೇವತಿಯನ್ನು “ ಪ್ರಿಯೆ ” ಎಂದು ಸಂಬೋಧಿಸಿ ಪ್ರಶ್ನಿಸಿದನು.

ರಾಜನು ಹೇಳಿದನು :—

೩೪. ಷಡ್ಗುಣೈಶ್ವರ್ಯ ಸಂಪನ್ನನಾದ ಮುನಿಶ್ರೇಷ್ಠನು ಈ ಆಶ್ರಮ-ವನ್ನು ಬಿಟ್ಟು ಎಲ್ಲಿಗೆ ಹೋಗಿರುವನು ? ಅವನನ್ನು ಈಗ ಇಲ್ಲಿಗೆ ಕರೆತರಲು ಆಶಿಸುತ್ತಿದ್ದೇನೆ. ಮಂಗಳಾಂಗಿಯೇ ! ನಿಜಸ್ಥಿತಿಯನ್ನು ಹೇಳು.

ಮಾರ್ಕಂಡೇಯ ಮುನಿಯು ಹೇಳಿದನು :—

೩೫. ಆಗ ಅಗ್ನಿಶಾಲೆಯಲ್ಲಿದ್ದ ಮುನಿಯು ದುರ್ಗಮರಾಜನ ಮಾತನ್ನೂ ಮತ್ತು ಪ್ರಿಯೆ ಎಂಬ ಸಂಬೋಧನವನ್ನೂ ಕೇಳಿ ಬಲು ತ್ವರೆಯಿಂದ ಅಗ್ನಿಶಾಲೆ-ಯಿಂದ ಹೊರಟುಬಂದನು.

ಸ ದದರ್ಶ ಮಹಾತ್ಮಾನಂ ರಾಜಾನಂ ದುರ್ಗಮಂ ಮುನಿಃ ।
ನರೇನ್ದ್ರಚಿಹ್ನಸಹಿತಂ ಪ್ರಶ್ರಯಾವನತಂ ಪುರಃ ॥೩೬॥

ತಸ್ಮಿನ್ ದೃಷ್ಟೇ ತತಃ ಶಿಷ್ಯಮುವಾಚ ಸ ತು ಗೌತಮಮ್ ।
ಗೌತಮಾನೀಯತಾಂ ಶೀಘ್ರಮರ್ಘೋಽಸ್ಯ ಜಗತೀಪತೇಃ ॥೩೭॥

ಏಕಸ್ತಾವದಯಂ ಭೂಪಶ್ಚಿರಕಾಲಾದುಪಾಗತಃ ।
ಜಾಮಾತಾ ಚ ವಿಶೇಷೇಣ ಯೋಗ್ಯೋಽರ್ಘಸ್ಯ ಮತೋ ಮಮ ॥೩೮॥

ಮಾರ್ಕಣ್ಡೇಯ ಉವಾಚ :—

ತತಃ ಸ ಚಿನ್ತಯಾಮಾಸ ರಾಜಾ ಜಾಮಾತೃಕಾರಣಮ್ ।
ನೀವೇದ ಚ ನ ತನ್ಮೌನೀ ಜಗೃಹೇಽರ್ಘಂ ಚ ತನ್ನೃಪಃ ॥೩೯॥

---

೩೬. ಅಷ್ಟರಲ್ಲಿ ಮುನಿಯು ಮಹಾತ್ಮನಾದ, ನಿಖಿಲ ರಾಜಲಕ್ಷಣಗಳಿಂದ ರಾಜಿಸುವ ಮತ್ತು ಮುಂದುಗಡೆ ತನ್ನಲ್ಲಿ ವಿನಯದಿಂದ ನಮಸ್ಕರಿಸಿರುವ ದುರ್ಗಮಭೂಪಾಲಕನನ್ನು ನೋಡಿದನು.

೩೭. ದುರ್ಗಮರಾಜನನ್ನು ನೋಡಿದ ಕೂಡಲೆ ಪ್ರಮುಚಮುನಿಯು ಗೌತಮನೆಂಬ ತನ್ನ ಶಿಷ್ಯನನ್ನು ಕರೆದು “ಗೌತಮನೇ! ಅತಿಥಿಯಾಗಿ ಬಂದ ಈ ರಾಜನಿಗೆ ಅರ್ಘ್ಯಸತ್ಕಾರ ಸಾಮಗ್ರಿಯನ್ನು ಬೇಗ ತಂದಿಡು” ಎಂದು ಹೇಳಿದನು.

೩೮. ಈ ಒಬ್ಬ ರಾಜನು ಚಿರಕಾಲವಾದಮೇಲೆ ಇಲ್ಲಿಗೆ ಬಂದಿರುವನು. ಹಾಗು ವಿಶೇಷವಾಗಿ ನನಗೆ ಅಳಿಯನೂ ಆಗಿರುವನು. ಆದುದರಿಂದ ಇವನು ಅರ್ಘ್ಯಸತ್ಕಾರಕ್ಕೆ ಅರ್ಹನೆಂದು ನನ್ನ ಭಾವನೆಯು.

ಮಾರ್ಕಂಡೇಯ ಮುನಿಯು ಹೇಳಿದನು :—

೩೯. ತರುವಾಯ ಪ್ರಮುಚಮುನಿಯು ಜಾಮಾತೃಭಾವವನ್ನು ಏರ್ಪಡಿಸುವ ಸಲುವಾಗಿ ಚಿಂತಿಸಿದನು. ಮೌನದಿಂದ ಇದ್ದ ರಾಜನು ಅದನ್ನು ತಿಳಿಯಲಿಲ್ಲ. ಮುನಿಯು ಒಪ್ಪಿಸಿದ ಅರ್ಘ್ಯಪೂಜೆಯನ್ನು ಸ್ವೀಕರಿಸಿದನು.

ತಮಾಸನಗತಂ ವಿಪ್ರೋ ಗೃಹೀತಾರ್ಘಂ ಮಹಾಮುನಿಃ ।
ಸ್ವಾಗತಂ ಪ್ರಾಹ ರಾಜೇನ್ದ್ರಮಪಿ ತೇ ಕುಶಲಂ ಗೃಹೇ ॥೪೦॥

ಕೋಶೇ ಬಲೇಽಥ ಮಿತ್ರೇಷು ಭೃತ್ಯಾಮಾತ್ಯೇ ನರೇಶ್ವರ ।
ತಥಾತ್ಮನಿ ಮಹಾಬಾಹೋ ಯತ್ರ ತ್ಸರ್ವಂ ಪ್ರತಿಷ್ಠಿತಮ್ ॥೪೧॥

ಪತ್ನೀ ಚ ತೇ ಕುಶಲಿನೀ ಯತ ಏವಾನುತಿಷ್ಠತಿ ।
ಪೃಚ್ಛಾಮ್ಯಸ್ಯಾಸ್ತತೋ ನಾಹಂ ಕುಶಲಿನ್ಯೋಽಪರಾಸ್ತವ ॥೪೨॥

ರಾಜೋವಾಚ :—

ತ್ವತ್ಪ್ರಸಾದಾದಕುಶಲಂ ನ ಕ್ವಚಿನ್ಮಮ ಸುವ್ರತ ।
ಜಾತಕೌತೂಹಲಶ್ಚಾಸ್ಮಿ ಮಮ ಭಾರ್ಯಾತ್ರ ಕಾ ಮುನೇ ॥೪೩॥

---

೪೦. ಬ್ರಹ್ಮರ್ಷಿಯಾದ ಪ್ರಮುಚಮುನಿಯು ರಾಜನಿಗೆ ಅರ್ಘ್ಯವನ್ನು ಒಪ್ಪಿಸಿದ ಬಳಿಕ ಗೌರವಿಸಲ್ಪಟ್ಟ ರಾಜನು ಆಸನದಲ್ಲಿ ಕುಳಿತಿರುವಾಗ ಆ ರಾಜೇಂದ್ರನನ್ನು ಕುರಿತು ಸ್ವಾಗತಪ್ರಶ್ನೆಯನ್ನು ಮಾಡಿದನು. ರಾಜೇನ್ದ್ರನೇ ! ನಿನ್ನ ಮನೆಯಲ್ಲಿ ಕ್ಷೇಮವೇ ?

೪೧. ಎಲೈ, ನರಪತಿಯೇ ! ನಿನ್ನ ಭಂಡಾರ, ಸೈನ್ಯ, ಮಿತ್ರ, ಭೃತ್ಯ ಮತ್ತು ಅಮಾತ್ಯ ಎಂಬೀ ಪರಿವಾರದಲ್ಲಿ ಕುಶಲವೇ ? ಹಾಗು ಈ ರಾಜ್ಯಾಂಗಗಳು ಯಾವ ನಿನ್ನ ಆತ್ಮಕ್ಕೆ ಅಧೀನವಾಗಿ ವ್ಯವಸ್ಥೆಯಿಂದಿರುವುವೊ ಆ ನಿನ್ನ ಆತ್ಮಕ್ಕೆ ಕುಶಲವೇ ?

೪೨. ನಿನ್ನ ಪತ್ನಿಯು ಕ್ಷೇಮವತಿಯಾಗಿರುವಳು. ಅವಳು ನನ್ನೆದುರಿಗೆ ಸ್ವಕರ್ತವ್ಯವನ್ನು ನಡೆಯಿಸುತ್ತಿರುವಳು. ಆದುದರಿಂದ ಅವಳ ವಿಷಯದಲ್ಲಿ ಕುಶಲವನ್ನು ನಾನೀಗ ಕೇಳುವುದಿಲ್ಲ. ನಿನ್ನ ಇತರ ಅಂಗನೆಯರು ಕುಶಲವಾಗಿರುವರೇ ?

ರಾಜನು ಹೀಗೆಂದನು :—

೪೩. ಎಲೈ ತಪಸ್ವಿಯೇ ! ನಿನ್ನ ಅನುಗ್ರಹದ ಪ್ರಭಾವದಿಂದ ಯಾವ ಅಂಗದಲ್ಲಿಯೂ ನನಗೆ ಅಕುಶಲವು ಇಲ್ಲ. ಮಹಾಮುನಿಯೇ ! ಇಲ್ಲಿ ನನ್ನ ಪತ್ನಿಯು ಯಾರಿರುವಳು ? ಆ ವಿಷಯವನ್ನು ತಿಳಿಯಲು ಕುತೂಹಲವುಳ್ಳವನಾಗಿದ್ದೇನೆ.

ಋಷಿರುವಾಚ :—

ರೇವತೀ ಸುಮಹಾಭಾಗ ತ್ರೈಲೋಕ್ಯಸ್ಯಾಪಿ ಸುನ್ದರೀ ।
ತವ ಭಾರ್ಯಾ ವರಾರೋಹಾ ತಾಂ ತ್ವಂ ರಾಜನ್ನ ವೇತ್ಸಿ ಕಿಮ್ ॥೪೪॥

ರಾಜೋವಾಚ :—

ಸುಭದ್ರಾಂ ಶಾನ್ತತನಯಾಂ ಕಾವೇರೀತನಯಾಂ ವಿಭಾಮ್ ।
ಸುರಾಷ್ಟ್ರಜಾಂ ಸುಜಾತಾಂ ಚ ಕದಮ್ಬಾಂ ಚ ವರೂಥಜಾಮ್ ॥೪೫॥

ವಿಪಾಠಾಂ ನನ್ದಿನೀಂ ಚೈವ ವೇದ್ಮಿ ಭಾರ್ಯಾಂ ಗೃಹೇ ದ್ವಿಜ ।
ತಿಷ್ಠನ್ತಿ ಮೇ ನ ಭಗವನ್ ರೇವತೀಂ ವೇದ್ಮಿ ಕಾ ನ್ವಿಯಮ್ ॥೪೬॥

ಋಷಿಯು ಹೇಳಿದನು :—

೪೪. ಮಹತ್ತಾದ ಮಾಹಾತ್ಮ್ಯದಿಂದ ಕೂಡಿದ, ಮೂರುಲೋಕಗಳಲ್ಲಿ ಉತ್ತಮ ಸುಂದರಿಯಾದ ಮತ್ತು ಮಂಗಳಕರವಾದ ಮೂರ್ತಿಯುಳ್ಳ ರೇವತಿಯು ನಿನ್ನ ಪತ್ನಿಯು. ರಾಜನೇ ! ನೀನು ಅವಳನ್ನು ಅರಿಯಲಿಲ್ಲವೇ ?

ರಾಜನು ಹೇಳಿದನು :—

೪೫. ಮಹಾಮುನಿಯೇ ! ನಾನು ಅರಿತಿರುವ ಪ್ರಿಯೆಯರನ್ನು ಹೇಳುವೆನು. ಶಾಂತನ ಪುತ್ರಿಯಾದ ಸುಭದ್ರೆ, ಕಾವೇರಿಯ ಮಗಳಾದ ವಿಭೆ, ಸುರಾಷ್ಟ್ರನ ಕನ್ಯೆಯಾದ ಸುಜಾತೆ ಮತ್ತು ವರೂಥನ ತನಯೆಯಾದ ಕದಂಬೆ— ಇವರನ್ನು ನಾನು ಅರಿತಿರುವೆನು.

೪೬. ಮತ್ತು ವಿಪಾಠಾ, ನಂದಿನೀ—ಎಂಬ ಪತ್ನೀಜನರು ನನ್ನ ಮನೆಯಲ್ಲಿ ಇರುವರು. ಇಷ್ಟು ಮಂದಿ ಪತ್ನಿಯರನ್ನು ನಾನು ತಿಳಿಯುವೆನು. ಪೂಜ್ಯನೇ ! ರೇವತಿಯನ್ನು ನಾನು ಅರಿಯಲಿಲ್ಲ. ರೇವತಿಯೆಂಬುವಳು ಯಾರು ?

ಋಷಿರುವಾಚ :—

ಪ್ರಿಯೇತಿ ಸಾಂಪ್ರತಂ ಯೇಯಂ ತ್ವಯೋಕ್ತಾ ವರವರ್ಣಿನೀ ।
ಕಿಂ ವಿಸ್ಮೃತಂ ತೇ ಭೂಪಾಲ ಶ್ಲಾಘ್ಯೇಯಂ ಗೃಹಿಣೀ ತವ ॥೪೭॥

ರಾಜೋವಾಚ :—

ಸತ್ಯಮುಕ್ತಂ ಮಯಾ ಕಿಂ ತು ಭಾವೋ ದುಷ್ಟೋ ನ ಮೇ ಮುನೇ ।
ನಾತ್ರ ಕೋಪಂ ಭವಾನ್ಕರ್ತುಮರ್ಹಸ್ಯಸ್ಮಾಸು ಯಾಚಿತಃ ॥೪೮॥

ಋಷಿರುವಾಚ :—

ಯತ್ತ್ವಂ ಬ್ರವೀಷಿ ಭೂಪಾಲ ನ ಭಾವಸ್ತವ ದೂಷಿತಃ ।
ವ್ಯಾಜಹಾರ ಭವಾನೇತದ್ವಹ್ನಿನಾ ನೃಪ ಚೋದಿತಃ ॥೪೯॥

ಮುನಿಯು ಹೇಳಿದನು :—

೪೭. ಮರ್ಗಮಭೂಪಾಲಕನೇ ! ಯಾವ ಸುಂದರಾಂಗಿಯನ್ನು "ಪ್ರಿಯೇ !" ಎಂದು ನೀನು ಈಗ ತಾನೆ ಸಂಬೋಧಿಸಿದೆಯೊ, ಅದನ್ನೀಗಲೇ ಮರೆತಿರುವೆಯಾ ? ಅವಳು ನಿನಗೆ ಶ್ಲಾಘ್ಯಳಾದ ಸತಿಯಾಗಿರುವಳು.

ರಾಜನು ನುಡಿದನು :—

೪೮. ಮಹಾಮುನಿಯೇ ! ನಾನು ಹಾಗೆ ಸಂಬೋಧಿಸಿರುವುದು ನಿಜ. ಆದರೆ ಹಾಗೆ ದುಷ್ಟಭಾವವು ನನಗಿಲ್ಲ. ಈ ಕಾರಣದಿಂದ ನೀನು ಕೋಪ-ಮಾಡಲಾಗದು. ಹಾಗೆ ಕೋಪಮಾಡದಂತೆ ನಾನು ನಿನ್ನನ್ನು ಪ್ರಾರ್ಥಿಸುವೆನು.

ಋಷಿಯು ಮತ್ತೆ ಹೇಳಿದನು :—

೪೯. ಭೂಪಾಲಕನೇ ! ನೀನು ಹೇಳುವ ವಚನವು ಸತ್ಯವಾದುದು. ನಿನ್ನ ಭಾವವು ದುಷ್ಟವಾಗಿಲ್ಲ. ಅದನ್ನು ನೀನು ಹೇಳಿರುವೆ. ಎಲೈ ರಾಜನೇ ! ಅಗ್ನಿದೇವನಿಂದ ಪ್ರಚೋದಿಸಲ್ಪಟ್ಟು ನೀನು "ಪ್ರಿಯೆ" ಎಂದು ಈ ಕನ್ಯೆಯನ್ನು ಸಂಬೋಧನಮಾಡಿ ಮಾತನಾಡಿರುತ್ತೀಯೆ.

ಮಯಾ ಪೃಷ್ಟೋ ಹುತವಹಃ ಕೋಽಸ್ಯಾ ಭರ್ತೇತಿ ಪಾರ್ಥಿವ ।
ಭವಿತಾ ತೇನ ಚಾಪ್ಯುಕ್ತೋ ಭವಾನೇವಾದ್ಯ ವೈ ವರಃ ॥೫೦॥

ತದ್ಗೃಹ್ಯತಾಂ ಮಯಾ ದತ್ತಾ ತುಭ್ಯಂ ಕನ್ಯಾ ನರಾಧಿಪ ।
ಪ್ರಿಯೇತ್ಯಾಮನ್ತ್ರಿತಾ ಚೇಯಂ ವಿಚಾರಂ ಕುರುಷೇ ಕಥಮ್ ॥೫೧॥

ಮಾರ್ಕಣ್ಡೇಯ ಉವಾಚ :—

ತತೋಽಸಾವಭವನ್ಮೌನೀ ತೇನೋಕ್ತಃ ಪೃಥಿವೀಪತಿಃ ।
ಋಷಿಸ್ತಥೋದ್ಯತಃ ಕರ್ತುಂ ತಸ್ಯಾ ವೈವಾಹಿಕಂ ವಿಧಿಮ್ ॥೫೨॥

ತಮುದ್ಯತಂ ಸಾ ಪಿತರಂ ವಿವಾಹಾಯ ಮಹಾಮುನೇ ।
ಉವಾಚ ಕನ್ಯಾ ಯತ್ಕಿಂಚಿತ್ಪ್ರಶ್ರಯಾವನತಾನನಾ ॥೫೩॥

---

೫೦. ಪಾರ್ಥಿವನಾದ ದುರ್ಗಮನೇ ! ಈ ರೇವತಿಗೆ ಪತಿಯು ಯಾರು ? ಎಂದು ನಾನು ಅಗ್ನಿದೇವನನ್ನು ಪ್ರಶ್ನಿಸಿದೆನು. ಅಗ್ನಿದೇವನು " ನೀನೇ ಇಂದು ಪತಿಯಾಗಿ ಘಟಿಸುವೆ " ಎಂದು ಹೇಳಿ ಅನುಗ್ರಹಿಸಿದನು.

೫೧. ಮಹಾರಾಜನೇ ! ಆ ಕಾರಣದಿಂದ ನನ್ನಿಂದ ಕೊಡಲ್ಪಡುವ ಈ ರೇವತೀಕನ್ಯೆಯು ನಿನ್ನಿಂದ ಸ್ವೀಕರಿಸಲ್ಪಡಲಿ. ನಿನ್ನಿಂದ ಈಕೆಯು " ಪ್ರಿಯೆ " ಎಂದು ಸಂಬೋಧಿಸಲ್ಪಟ್ಟಿರುವಳು. ಈಗ ಏಕೆ ವಿಚಾರಮಾಡುತ್ತಿರುವೆ ?

ಮಾರ್ಕಂಡೇಯ ಮುನಿಯು ಹೇಳಿದನು :—

೫೨. ತರುವಾಯ ಪ್ರಮುಚ ಮುನಿಯಿಂದ ಈ ರೀತಿಯಾಗಿ ಹೇಳಲ್ಪಟ್ಟಿರುವ ದುರ್ಗಮ ರಾಜನು ಪ್ರತ್ಯುತ್ತರವನ್ನು ಹೇಳದಂತೆ ಮೌನಿಯಾದನು. ಇತ್ತ ಮುನಿಯು ರೇವತೀಕನ್ಯೆಗೆ ವಿವಾಹವಿಧಿಯನ್ನು ನೆರವೇರಿಸಲು ಸಿದ್ಧನಾದನು.

೫೩. ಕ್ರೌಷ್ಟುಕಿ ಮಹಾ ಮುನಿಯೇ ! ತನ್ನ ವಿವಾಹವಿಧಾನಕ್ಕೆ ಸಿದ್ಧನಾದ ತಂದೆಯನ್ನು ನೋಡಿ ಕನ್ಯೆಯಾದ ರೇವತಿಯು ವಿನಯದಿಂದ ಬಾಗಿಸಿದ ಮುಖವುಳ್ಳವಳಾಗಿ ಕೆಲವು ಮಾತುಗಳನ್ನು ಆಡಿದಳು.

ಯದಿ ಮೇ ಪ್ರೀತಿಮಾಂಸ್ತಾತ ಪ್ರಸಾದಂ ಕರ್ತುಮರ್ಹಸಿ।
ರೇವತ್ಯೃಕ್ಷೇ ವಿವಾಹಂ ಮೇ ತತ್ಕರೋತು ಪ್ರಸಾದಿತಃ ॥೩೪॥

ಋಷಿರುವಾಚ :—

ರೇವತ್ಯೃಕ್ಷಂ ನ ವೈ ಭದ್ರೇ ಚನ್ದ್ರಯೋಗಿ ವ್ಯವಸ್ಥಿತಮ್।
ಅನ್ಯಾನಿ ಸನ್ತಿ ಋಕ್ಷಾಣಿ ಸುಭ್ರು ವೈವಾಹಿಕಾನಿ ತೇ ॥೩೫॥

ಕನ್ಯೋವಾಚ :—

ತಾತ ತೇನ ವಿನಾ ಕಾಲೋ ವಿಫಲಃ ಪ್ರತಿಭಾತಿ ಮೇ।
ವಿವಾಹೋ ವಿಫಲೇ ಕಾಲೇ ಮದ್ವಿಧಾಯಾಃ ಕಥಂ ಭವೇತ್ ॥೩೬॥

ಋಷಿರುವಾಚ :—

ಋತವಾಗಿತಿ ವಿಖ್ಯಾತಸ್ತಪಸ್ವೀ ರೇವತೀಂ ಪ್ರತಿ।
ಚಕಾರ ಕೋಪಂ ಕ್ರುದ್ಧೇನ ತೇನರ್ಕ್ಷಂ ವಿನಿಪಾತಿತಮ್ ॥೩೭॥

---

೩೪. ತಂದೆಯೇ! ನೀನು ನನ್ನಲ್ಲಿ ಪ್ರೀತಿಯುಳ್ಳವನಾಗಿದ್ದರೆ ನನ್ನಲ್ಲಿ ನೀನು ಅನುಗ್ರಹ ತೋರುವವನಾಗು. ಹಾಗು ಅನುಗ್ರಹ ಪೂರ್ಣನಾದ ನೀನು ನನಗೆ ರೇವತೀ ನಕ್ಷತ್ರದಲ್ಲಿ ವಿವಾಹವಿಧಾನವನ್ನು ಆಚರಿಸು.

ಋಷಿಯು ಹೀಗೆಂದನು :—

೩೫. ಮಂಗಳಾಂಗಿಯೇ! ರೇವತೀ ನಕ್ಷತ್ರವು ಮೊದಲಿನಂತೆ ಸುವ್ಯವಸ್ಥಿತನಾಗಿ ಈಗ ಚಂದ್ರನ ಸಂಬಂಧವನ್ನು ಹೊಂದಿರುವುದಿಲ್ಲ. ಸುಂದರಿಯಾದ ಪುತ್ರಿಯೇ! ವಿವಾಹಕ್ಕೆ ಪ್ರಶಸ್ತವಾದ ಇತರ ನಕ್ಷತ್ರಗಳು ಇವೆ.

ಕನ್ಯೆಯು ಹೇಳಿದಳು :—

೩೬. ಪಿತನೇ! ರೇವತೀ ನಕ್ಷತ್ರವಿರುವ ಕಾಲವನ್ನು ಬಿಟ್ಟು ಮಿಕ್ಕ ಕಾಲವು ನನಗೆ ವ್ಯರ್ಥವೆಂದು ತೋರುವುದು. ಹಾಗೆ ವ್ಯರ್ಥವೆನಿಸಿದ ಕಾಲದಲ್ಲಿ ನನ್ನಂತಹ ಕನ್ಯೆಯ ವಿವಾಹವು ಸಾರ್ಥಕವಾಗುವುದೆಂತು?

ಋಷಿಯು ಹೇಳಿದನು :—

೩೭. ಹಿಂದೆ ಋತವಾಕ್ ಎಂದು ಖ್ಯಾತಿಗೊಂಡಿರುವ ಒಬ್ಬ ತಪಸ್ವಿ ಮುನಿಯು ರೇವತೀ ನಕ್ಷತ್ರದಲ್ಲಿ ಕೋಪಮಾಡಿದನು. ಹಾಗೆ ಕೋಪಗೊಂಡ ಮುನಿಯಿಂದ ಶಾಪಪಿತ್ತು ರೇವತೀನಕ್ಷತ್ರವು ಕೆಳಗೆ ಕೆಡವಲ್ಪಟ್ಟಿತು.

ಮಯಾ ಚಾಸ್ಯೈ ಪ್ರತಿಜ್ಞಾತಾ ಭಾರ್ಯೇತಿ ಮದಿರೇಕ್ಷಣಾ ।
ನ ಚೇಚ್ಛಸಿ ವಿವಾಹಂ ತ್ವಂ ಸಙ್ಕಟಂ ನಃ ಸಮಾಗತಮ್ ॥೫೮॥

ಕನ್ಯೋವಾಚ :—

ಋತವಾಕ್ಸ ಮುನಿಸ್ತಾತ ಕಿಮೇವಂ ತಪ್ತವಾಂಸ್ತಪಃ ।
ನ ತ್ವಯಾ ಮಮ ತಾತೇನ ಬ್ರಹ್ಮಬನ್ಧೋಃ ಸುತಾಸ್ಮಿ ಕಿಮ್ ॥೫೯॥

ಋಷಿರುವಾಚ :—

ಬ್ರಹ್ಮಬನ್ಧೋಃ ಸುತಾ ನ ತ್ವಂ ಬಾಲೇ ನೈವ ತಪಸ್ವಿನಃ ।
ಸುತಾ ತ್ವಂ ಮಮ ಯೋ ದೇವಾನ್ ಕರ್ತುಮನ್ಯಾನ್ ಸಮುತ್ಸಹೇ ॥೬೦॥

---

೫೮. ತಾರುಣ್ಯದಶೆಯಿಂದ ಮದಿಸಿದಂತಿರುವ ಕಣ್ಣುಗಳುಳ್ಳ ನಿನ್ನನ್ನು ಈ ರಾಜನ ಭಾರ್ಯೆಯೆಂದು ಅವನಿಗೆ ಪ್ರತಿಜ್ಞೆಮಾಡಿರುವೆನು. ನೀನು ವಿವಾಹವನ್ನು ಒಪ್ಪಿಕೊಳ್ಳುವುದಿಲ್ಲ. ಹೀಗೆ ನಮಗೆ ದೊಡ್ಡ ಕಷ್ಟವು ಪ್ರಾಪ್ತ-ವಾಯಿತೆ!

ಕನ್ಯೆಯು ಹೇಳಿದಳು :—

೫೯. ಋತವಾಕ್ ಎಂದು ಪ್ರಸಿದ್ಧಿಹೊಂದಿರುವ ಈ ಮುನಿಯು ಮಾತ್ರ ಅಂತಹ ಕಠಿನತಪವನ್ನು ಮಾಡಿರುವನೇ? ನನ್ನ ತಂದೆಯಾದ ನೀನು ಹಾಗೆ ತಪವನ್ನು ಮಾಡಿದವನಲ್ಲವೇ? ನಾನು ದುರ್ಬ್ರಾಹ್ಮಣನ ಪುತ್ರಿಯಾಗಿರುವೆನೆ?

ಪ್ರಮುಚಮುನಿಯು ನುಡಿದನು :—

೬೦. ಬಾಲಿಕೆಯೇ! ನೀನು ತಪವಿಲ್ಲದ ದುರ್ಬ್ರಾಹ್ಮಣನ ಪುತ್ರಿಯಲ್ಲ. ತಪಸ್ವಿಯಾದ ನನ್ನ ಮಗಳಾಗಿರುತ್ತೀಯೆ. ನಾನು ತಪೋಬಲದಿಂದ ಹೊಸ ದೇವತೆಗಳನ್ನು ಸೃಷ್ಟಿಮಾಡಬಲ್ಲೆನು.

ಕನ್ಯೋವಾಚ :—

ತಪಸ್ವೀ ಯದಿ ಮೇ ತಾತಸ್ತತ್ಕಿಮೃಕ್ಷಮಿದಂ ದಿವಿ ।
ಸಮಾರೋಪ್ಯ ವಿವಾಹೋ ಮೇ ತದೃಕ್ಷೇ ಕ್ರಿಯತೇ ನ ತು ॥೬೦॥

ಋಷಿರುವಾಚ :—

ಏವಂ ಭವತು ಭದ್ರಂ ತೇ ಭದ್ರೇ ಪ್ರೀತಿಮತೀ ಭವ ।
ಆರೋಪಯಾಮ್ಯಸ್ಮದ್ಮಾರ್ಗೇ ರೇವತ್ಯೃಕ್ಷಂ ಕೃತೇ ತವ ॥೬೧॥

ಮಾರ್ಕಣ್ಡೇಯ ಉವಾಚ :—

ತತಸ್ತಪಃಪ್ರಭಾವೇಣ ರೇವತ್ಯೃಕ್ಷಂ ಮಹಾಮುನಿಃ ।
ಯಥಾಪೂರ್ವಂ ತಥಾ ಚಕ್ರೇ ಸೋಮಯೋಗಿ ದ್ವಿಜೋತ್ತಮ॥೬೩॥
ವಿವಾಹಂ ಚೈವ ದುಹಿತುರ್ವಿಧಿವನ್ಮನ್ತ್ರಯೋಗಿನಮ್ ।
ನಿಷ್ಪಾದ್ಯ ಪ್ರೀತಿಮಾನ್ ಭೂಯೋ ಜಾಮಾತರಮಥಾಬ್ರವೀತ್॥೬೪॥

ಕನ್ಯೆಯು ಹೀಗೆಂದಳು :—

೬೦. ತಂದೆಯೇ! ನೀನು ಮಹಾತಪಸ್ವಿಯಾಗಿದ್ದರೆ ಈ ರೇವತೀ-ನಕ್ಷತ್ರವನ್ನು ತಪಶ್ಶಕ್ತಿಯಿಂದ ಗಗನದಲ್ಲಿ ಇರಿಸಿ ಆ ನಕ್ಷತ್ರದಲ್ಲಿ ನನ್ನ ವಿವಾಹವನ್ನು ಏಕೆ ಮಾಡಲಾಗದು?

ಋಷಿಯು ಹೀಗೆಂದನು :—

೬೧. ಮಂಗಳಾಂಗಿಯೇ! ಹಾಗೆ ಆಗಲಿ. ನಿನಗೆ ಮಂಗಳವಾಗಲಿ. ನೀನು ಮನಸ್ಸಿಗೆ ಪ್ರೀತಿಯುಳ್ಳವಳಾಗು. ರೇವತೀನಕ್ಷತ್ರವನ್ನು ನಿನಗೋಸ್ಕರ ಚಂದ್ರನೊಡನೆ ಇರುವಂತೆ ಆಕಾಶಕ್ಕೆ ಏರಿಸುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೬೩. ಎಲೈ ದ್ವಿಜೋತ್ತಮನೇ! ತರುವಾಯ ಮಹಾಮುನಿಯಾದ ಪ್ರಮುಚನು ತನ್ನ ತಪಸ್ಸಿನ ಪ್ರಭಾವದಿಂದ ರೇವತೀನಕ್ಷತ್ರವು ಮೊದಲಿನಂತೆ ಚಂದ್ರನೊಡನೆ ಸಂಪರ್ಕವನ್ನು ಹೊಂದಿಕೊಂಡಿರುವಂತೆ ಮಾಡಿದನು.

೬೪. ಅನಂತರದಲ್ಲಿ ಮುನಿಯು ಯಥಾವಿಧಿಯಾಗಿ ಮಂತ್ರಪಠನ ಪೂರ್ವಕವಾಗಿ ಕನ್ಯೆಯ ವಿವಾಹಕರ್ಮವನ್ನು ನೆರವೇರಿಸಿ ಬಹಳ ಸಂತೋಷಪಟ್ಟು ಮತ್ತೆ ಅಳಿಯನನ್ನು ನೋಡಿ ಹೇಳಿದನು.

ಋಷಿರುವಾಚ :—

ಔದ್ವಾಹಿಕಂ ತೇ ಭೂಪಾಲ ಕಥ್ಯತಾಂ ಕಿಂ ದದಾಮ್ಯಹಮ್ ।
ದುರ್ಲಭ್ಯಮಪಿ ದಾಸ್ಯಾಮಿ ಮಮಾಪ್ರತಿಹತಂ ತಪಃ ॥೬೫॥

ರಾಜೋವಾಚ :—

ಮನೋಃ ಸ್ವಾಯಮ್ಭುವಸ್ಯಾಹಮುತ್ಪನ್ನಃ ಸನ್ತತೌ ಮುನೇ ।
ಮನ್ವನ್ತರಾಧಿಪಂ ಪುತ್ರಂ ತ್ವತ್ಪ್ರಸಾದಾದ್ವೃಣೋಮ್ಯಹಮ್ ॥೬೬॥

ಋಷಿರುವಾಚ :—

ಭವಿಷ್ಯತ್ಯೇಷ ತೇ ಕಾಮೋ ಮನುಸ್ತ್ವತ್ತನಯೋ ಮಹೀಮ್ ।
ಸಕಲಾಂ ಭೋಕ್ಷ್ಯತೇ ಭೂಪ ಧರ್ಮವಿಚ್ಚ ಭವಿಷ್ಯತಿ ॥೬೭॥

ಋಷಿಯು ಇಂತು ಹೇಳಿದನು :—

೬೫. ಎಲೈ ದುರ್ಗಮಭೂಪಾಲಕನೇ ! ನಾನು ನಿನಗೆ ವಿವಾಹಾಂಗವಾಗಿ ಕೊಡಬೇಕೆಂದಿರುವ ಉಡುಗರೆಯನ್ನು ಏನು ಕೊಡಲಿ? ಅದನ್ನು ಹೇಳು. ನನ್ನ ತಪಸ್ಸು ಯಾವುದನ್ನೂ ಸಾಧಿಸಬಲ್ಲುದು. ದುರ್ಲಭವಾದುವನ್ನು ನಾನು ಕೊಡಬಲ್ಲೆನು.

ರಾಜನು ಹೇಳಿದನು :—

೬೬. ಮಹಾಮುನಿಯೇ ! ನಾನು ಸ್ವಾಯಂಭುವನೆಂಬ ಮನುಪ್ರಜಾಪತಿಯ ಸಂತತಿಯಲ್ಲಿ ಜನಿಸಿದವನಾಗಿದ್ದೇನೆ. ನಾನೀಗ ನಿನ್ನ ಅನುಗ್ರಹದಿಂದ ಮನ್ವಂತರಕ್ಕೆ ಅಧಿಪತಿಯಾಗುವಂತಹ ಪುತ್ರನನ್ನು ಹೊಂದುವಂತೆ ಪ್ರಾರ್ಥಿಸಿಕೊಳ್ಳುತ್ತೇನೆ.

ಋಷಿಯು ಪ್ರತ್ಯುತ್ತರವಿತ್ತನು :—

೬೭. ಎಲೈ ಭೂಪತಿಯೇ ! ಈ ನಿನ್ನ ಮನೋರಥವು ಸಿದ್ಧಿಸುವುದು. ನಿನ್ನಲ್ಲಿ ಜನಿಸುವ ಪುತ್ರನು ಮನುಪ್ರಜಾಪತಿಯಾಗಿ ಅಖಂಡ ಭೂಮಿಯನ್ನು ಪಾಲಿಸುವನು. ಮತ್ತು ನಿನ್ನ ಕುಮಾರನು ಧರ್ಮವೇತ್ತನಾಗುವನು.

ಮಾರ್ಕಣ್ಡೇಯ ಉವಾಚ :—

ತಾಮಾದಾಯ ತತೋ ಭೂಪಃ ಸ್ವಮೇವ ನಗರಂ ಯಯೌ ।
ತಸ್ಮಾದಜಾಯತ ಸುತೋ ರೇವತ್ಯಾಂ ರೈವತೋ ಮನುಃ ॥೩೮॥

ಸಮೇತಃ ಸಕಲೈರ್ಧರ್ಮೈರ್ಮಾನವೈರಪರಾಜಿತಃ ।
ವಿಜ್ಞಾತಾಖಿಲಶಾಸ್ತ್ರಾರ್ಥೋ ವೇದವಿದ್ಯಾರ್ಥಶಾಸ್ತ್ರವಿತ್ ॥೩೯॥

ತಸ್ಯ ಮನ್ವನ್ತರೇ ದೇವಾನ್ಮುನಿದೇವೇನ್ದ್ರಪಾರ್ಥಿವಾನ್ ।
ಕಥ್ಯಮಾನಾನ್ಮಯಾ ಬ್ರಹ್ಮನ್ನಿಬೋಧ ಸುಸಮಾಹಿತಃ ॥೪೦॥

ಸುಮೇಧಸಸ್ತತ್ರ ದೇವಾಸ್ತಥಾ ಭೂತನಯಾ ದ್ವಿಜ ।
ವೈಕುಣ್ಠಾಶ್ಚಾಮಿತಾಭಾಶ್ಚ ಚತುರ್ದಶ ಚತುರ್ದಶ ॥೪೧॥

ಮಾರ್ಕಂಡೇಯ ಮುನಿಯು ಹೇಳಿದನು :—

೩೮. ತರುವಾಯ ದುರ್ಗಮರಾಜನು ತನ್ನ ಪತ್ನಿಯಾದ ರೇವತಿಯನ್ನು ಕರೆದುಕೊಂಡು ತನ್ನ ನಗರಕ್ಕೆ ತೆರಳಿದನು. ಮುಂದೆ ಆ ರೇವತಿಯಲ್ಲಿ ರೈವತ ಎಂಬ ಮನುವು ಆ ರಾಜನ ಪುತ್ರನಾಗಿ ಜನಿಸಿದನು.

೩೯. ರೈವತಮನುವು ಸಮಸ್ತವಾದ ಮಾನವಧರ್ಮಗಳಿಂದ ಕೂಡಿದವನೂ, ಜಯಶಾಲಿಯೂ, ಸಕಲ ಶಾಸ್ತ್ರಾರ್ಥಗಳನ್ನು ತಿಳಿದವನೂ ಮತ್ತು ವೇದವಿದ್ಯೆ-ಅರ್ಥಶಾಸ್ತ್ರಗಳ ತತ್ತ್ವವನ್ನು ತಿಳಿದವನೂ ಆಗಿದ್ದನು.

೪೦. ಎಲೈ ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ರೈವತಮನುವಿನ ಮನ್ವಂತರದಲ್ಲಿ ದೇವತೆ, ಮುನಿ, ದೇವೇಂದ್ರ ಮತ್ತು ಪಾರ್ಥಿವರು ಯಾರಿದ್ದರು? ಎಂಬುದನ್ನು ನಾನು ಹೇಳುವೆನು. ನನ್ನಿಂದ ಹೇಳಲ್ಪಡುವ ದೇವತೆ ಮುಂತಾದವರನ್ನು ನೀನು ಗಮನವಿಟ್ಟು ಕೇಳು.

೪೧. ರೈವತಮನ್ವಂತರದಲ್ಲಿ ಸುಮೇಧ, ಭೂತನಯ, ವೈಕುಂಠ ಮತ್ತು ಅಮಿತಾಭ ಎಂಬ ನಾಮಾಂಕಿತವಾದ ನಾಲ್ಕು ದೇವಗಣಗಳಿದ್ದುವು. ವಿಪ್ರೋತ್ತಮನೇ! ಒಂದೊಂದು ದೇವಗಣದಲ್ಲಿ ಹದಿನಾಲ್ಕು ಮಂದಿ ದೇವತೆಗಳಿದ್ದರು.

ತೇಷಾಂ ದೇವಗಣಾನಾಂ ತು ಚತುರ್ಣಾಮಪಿ ಚೇಶ್ವರಃ ।
ನಾಮ್ನಾ ವಿಭುರಭೂದಿನ್ದ್ರಃ ಶತಯಜ್ಞೋಪಲಕ್ಷಣಃ ॥೭೨॥

ಹಿರಣ್ಯಲೋಮಾ ವೇದಶ್ರೀರೂರ್ಧ್ವಬಾಹುಸ್ತಥಾಪರಃ ।
ವೇದಬಾಹುಃ ಸುಧಾಮಾ ಚ ಪರ್ಜನ್ಯಶ್ಚ ಮಹಾಮುನಿಃ ॥೭೩॥

ವಸಿಷ್ಠಶ್ಚ ಮಹಾಭಾಗೋ ವೇದವೇದಾಙ್ಗಪಾರಗಃ ।
ಏತೇ ಸಪ್ತರ್ಷಯಶ್ಚಾಸನ್ರೈವತಸ್ಯಾನ್ತರೇ ಮನೋಃ ॥೭೪॥

ಬಲಬನ್ಧುರ್ಮಹಾವೀರ್ಯಃ ಸುಯಷ್ಟವ್ಯಸ್ತಥಾಪರಃ ।
ಸತ್ಯಕಾದ್ಯಾಸ್ತಥೈವಾಸನ್ರೈವತಸ್ಯ ಮನೋಃ ಸುತಾಃ ॥೭೫॥

ರೈವತಾನ್ತಾಸ್ತು ಮನವಃ ಕಥಿತಾ ಯೇ ಮಯಾ ತವ ।
ಸ್ವಾಯಮ್ಭುವಾಶ್ರಯಾ ಹ್ಯೇತೇ ಸ್ವಾರೋಚಿಷಮೃತೇ ಮನುಮ್ ॥೭೬॥

---

೭೨. ಈ ನಾಲ್ಕು ದೇವಗಣಗಳಿಗೂ ಈಶ್ವರನಾಗಿ ಶತಯಜ್ಞಗಳನ್ನು ಮಾಡಿರುವವನೂ, ವಿಭು ಎಂಬ ನಾಮಾಂಕಿತನೂ ಆದ ಸುಕೃತಿಯು ಇಂದ್ರ-ಪದದಲ್ಲಿ ಇದ್ದನು.

೭೩. ಮತ್ತು ರೈವತಮನ್ವಂತರದಲ್ಲಿರುವ ಸಪ್ತರ್ಷಿಗಳಲ್ಲಿ ಆರು ಮಂದಿಯು ಕ್ರಮವಾಗಿ ಹಿರಣ್ಯಲೋಮಾ, ವೇದಶ್ರೀ, ಊರ್ಧ್ವಬಾಹು, ವೇದಬಾಹು, ಸುಧಾಮ ಮತ್ತು ಪರ್ಜನ್ಯ ಎಂಬ ನಾಮಾಂಕಿತರಾಗಿದ್ದರು.

೭೪. ವೇದ–ವೇದಾಂಗಗಳಲ್ಲಿ ಪಾರಂಗತನೂ, ಮಹಾಪುಹಿಮೆ–ಯುಳ್ಳವನೂ ಆದ ವಸಿಷ್ಠಮುನಿಯು ಏಳನೆಯವನಾಗಿದ್ದನು. ಹೀಗೆ ಈ ಏಳುಮಂದಿಯು ರೈವತಮನ್ವಂತರದಲ್ಲಿ ಸಪ್ತರ್ಷಿಗಳಾಗಿದ್ದರು.

೭೫. ಹಾಗು ಬಲಬಂಧು, ಸುಯಷ್ಟವ್ಯ, ಸತ್ಯಕ ಮುಂತಾದವರು ಕೆಲವು ಮಂದಿ ಮಹಾವೀರ್ಯಸಂಪನ್ನರಾದ ವ್ಯಕ್ತಿಗಳು ರೈವತಮನು ಪ್ರಜಾ-ಪತಿಯ ಪುತ್ರರಾಗಿ ಜನಿಸಿ ಆ ಮನ್ವಂತರದಲ್ಲಿ ಪೃಥಿವಿಯನ್ನು ಪಾಲಿಸಿದರು.

೭೬. ಈ ರೀತಿಯಾಗಿ ನನ್ನಿಂದ ನಿನಗೆ ರೈವತಮನುವಿನವರೆಗಿನ ಮನುಪ್ರಜಾಪತಿಗಳ ಪರಂಪರೆಯು ಹೇಳಲ್ಪಟ್ಟಿದೆ. ಇವರಲ್ಲಿ ಸ್ವಾರೋಚಿಷ ಮನುವನ್ನು ಬಿಟ್ಟು ಮಿಕ್ಕವರು ಸ್ವಾಯಂಭುವವಂಶವನ್ನು ಆಶ್ರಯಿಸಿ ಜನಿಸಿದವ-ರಾಗಿರುವರು.

ಯ ಏಷಾಂ ಶೃಣುಯಾನ್ನಿತ್ಯಂ ಪಠೇದಾಖ್ಯಾನಮುತ್ತಮಮ್ ।
ವಿಮುಕ್ತಃ ಸರ್ವಪಾಪೇಭ್ಯೋ ಲೋಕಂ ಪ್ರಾಪ್ನೋತ್ಯಭೀಪ್ಸಿತಮ್ ॥೭೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ರೈವತಮನ್ವನ್ತರೇ ದ್ವಿಸಪ್ತತಿತಮೋಽಧ್ಯಾಯಃ

---

೭೭. ಯಾವ ಮಾನವನು ಪ್ರತಿದಿನ ಈ ಮನುಗಳ ಉತ್ತಮವಾದ ಆಖ್ಯಾನವನ್ನು ಶ್ರವಣಮಾಡುವನೋ ಅವನು ಸಮಸ್ತ ಪಾತಕಗಳಿಂದ ಬಿಡುಗಡೆಹೊಂದಿದವನಾಗಿ ಇಷ್ಟವಾದ ಪುಣ್ಯಲೋಕವನ್ನು ಹೊಂದುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಿಸಪ್ತತಿತಮೋಽಧ್ಯಾಯಃ

(ಚಾಕ್ಷುಷಮನ್ವನ್ತರನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಇತ್ಯೇತತ್ಕಥಿತಂ ತುಭ್ಯಂ ಪಞ್ಚ ಮನ್ವನ್ತರಂ ಮಯಾ ।
ಚಾಕ್ಷುಷಸ್ಯ ಮನೋಃ ಷಷ್ಠಂ ಶ್ರೂಯತಾಮಿದಮನ್ತರಮ್ ||೧||

ಅನ್ಯಜನ್ಮನಿ ಜಾತೋಽಸೌ ಚಕ್ಷುಷಃ ಪರಮೇಷ್ಠಿನಃ ।
ಚಾಕ್ಷುಷತ್ವಮತಸ್ತಸ್ಯ ಜನ್ಮನ್ಯಸ್ಮಿನ್ನಪಿ ದ್ವಿಜ ||೨||

ಅನಮಿತ್ರಸ್ಯ ರಾಜರ್ಷೇರ್ಭದ್ರಾ ಭಾರ್ಯಾ ಮಹಾತ್ಮನಃ ।
ಜಜ್ಞೇ ಸುತಂ ಸುವಿದ್ವಾಂಸಂ ಶುಚಿಂ ಜಾತಿಸ್ಮರಂ ವಿಭುಮ್ ||೩||

ಎಪ್ಪತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಈ ಬಗೆಯಾಗಿ ನನ್ನಿಂದ ನಿನಗೆ ಐದು ಮನ್ವಂತರಗಳು ಹೇಳಲ್ಪಟ್ಟಿರುವುವು. ಮುಂದೆ ಚಾಕ್ಷುಷಮನುವಿನ ಆರನೆಯದಾದ ಮನ್ವಂತರವನ್ನು ಕೇಳು.

೨. ದ್ವಿಜೋತ್ತಮನೇ! ಚಾಕ್ಷುಷ ಎಂಬ ಮನುವು ಬೇರೊಂದು ಜನ್ಮದಲ್ಲಿ ಸೃಷ್ಟಿಕರ್ತನಾದ ಬ್ರಹ್ಮದೇವನ ಚಕ್ಷು(ಕಣ್ಣು) ವಿನಿಂದ ಜನಿಸಿದ್ದನು. ಅದೇ ನಿಮಿತ್ತದಿಂದ ಈ ಜನ್ಮದಲ್ಲಿಯೂ ಅವನು ಚಾಕ್ಷುಷಮನುವೆಂದು ಕರೆಯಲ್ಪಟ್ಟನು.

೩. ಮಹಾತ್ಮನಾದ ಮತ್ತು ಅನಮಿತ್ರ ಎಂದು ಪ್ರಖ್ಯಾತನಾದ ರಾಜರ್ಷಿಯೊಬ್ಬನ ಸೌಭಾಗ್ಯವತಿಯಾದ ಭಾರ್ಯೆಯು ಪಂಡಿತನೂ, ಶುದ್ಧನೂ, ಜನ್ಮಾಂತರ ಸ್ಮರಣವುಳ್ಳವನೂ ಮತ್ತು ವಿಭುವೂ ಆದ ಪುತ್ರನನ್ನು ಪ್ರಸವಿಸಿದಳು.

ಜಾತಂ ಮಾತಾ ನಿಜೋತ್ಸಙ್ಗೇ ಸ್ಥಿತಮುಲ್ಲಾಪ್ಯ ತಂ ಪುನಃ ।
ಪರಿಷ್ವಜತಿ ಹಾರ್ದೇನ ಪುನರುಲ್ಲಾಪಯತ್ಯಥ ॥೪॥

ಜಾತಿಸ್ಮರಃ ಸ ಜಾತೋ ವೈ ಮಾತುರುತ್ಸಙ್ಗಮಾಸ್ಥಿತಃ ।
ಜಹಾಸ ತಂ ತದಾ ಮಾತಾ ಸಂಕ್ರುದ್ಧಾ ವಾಕ್ಯಮಬ್ರವೀತ್ ॥೫॥

ಭೀತಾಸ್ಮಿ ಕಿಮಿದಂ ವತ್ಸ ಹಾಸೋ ಯದ್ವದನೇ ತವ ।
ಅಕಾಲಬೋಧಃ ಸಞ್ಜಾತಃ ಕಚ್ಚಿತ್ಪಶ್ಯಸಿ ಶೋಭನಮ್ ॥೬॥

ತನ್ಮಾತುರ್ವಚನಂ ಶ್ರುತ್ವಾ ಪ್ರಹಸ್ಯೇದಮಥಾಬ್ರವೀತ್ ॥೭॥

ಪುತ್ರ ಉವಾಚ :—

ಮಾಮತ್ತುಮಿಚ್ಛತಿ ಪುರೋ ಮಾರ್ಜಾರೀ ಕಿಂ ನ ಪಶ್ಯಸಿ ।
ಅನ್ತರ್ಧಾನಗತಾ ಚೇಯಂ ದ್ವಿತೀಯಾ ಜಾತಹಾರಿಣೀ ॥೮॥

---

೪. ಜನನಿಯು ಜನಿಸಿದ ಶಿಶುವನ್ನು ತನ್ನ ತೊಡೆಯಲ್ಲಿ ಇರಿಸಿಕೊಂಡು ಪ್ರೀತಿಯಿಂದ ಅದನ್ನು ಮಾತನಾಡಿಸುತ್ತ ಮುದ್ದಾಡಿ ಅಪ್ಪಿಕೊಳ್ಳುತ್ತಿದ್ದಳು. ಹಾಗು ಮತ್ತೆ ಮತ್ತೆ ಮಾತನಾಡಿಸುತ್ತಿದ್ದಳು.

೫. ತಾಯಿಯ ತೊಡೆಯನ್ನು ಆಶ್ರಯಿಸಿದ್ದ, ಜನ್ಮಾಂತರ ಸ್ಮರಣ ಮಹಿಮೆಯುಳ್ಳ ಮಗುವು ಜನನಿಯ ಪ್ರೇಮೋಲ್ಲಾಪವನ್ನು ನೋಡಿ ನಕ್ಕಿತು. ಆಗ ತಾಯಿಯು ಕೋಪಗೊಂಡವಳಾಗಿ ಈ ಮಾತನ್ನು ಆಡಿದಳು.

೬. ಪುತ್ರನೇ ! ನಾನು ಬಲು ಭಯಗೊಂಡಿರುವೆನು. ನಿನ್ನ ಮುಖದಲ್ಲಿ ನಗುವು ಕಂಡಿದೆ. ನಿನ್ನ ಮನಸ್ಸಿನಲ್ಲಿ ಈಗಾಗಲೇ ಅಕಾಲದಲ್ಲಿ ಯಾವುದೋ ಬೋಧವುಂಟಾಗಿರಬೇಕು. ಒಳ್ಳೆಯದನ್ನು ಕಂಡಿರುವೆಯಾ ?

೭. ಹೀಗೆ ಪುತ್ರನ ಆಕಸ್ಮಿಕ ನಗುವಿನಿಂದ ಭಯಪಟ್ಟು ತಾಯಿಯು ಹೇಳಲು ಪುತ್ರನು ತಾಯಿಯ ವಚನವನ್ನು ಕೇಳಿ ನಕ್ಕು ಪ್ರತ್ಯುತ್ತರವನ್ನು ಹೇಳಿದನು.

ಪುತ್ರನು ಇಂತೆಂದನು :—

೮. ತಾಯಿಯೇ ! ಮುಂದುಗಡೆಯಲ್ಲಿದ್ದ ಬೆಕ್ಕು ನನ್ನನ್ನು ತಿನ್ನಲು ಹವಣಿಸುತ್ತಿದೆ. ನಿನಗೆ ಕಾಣುವುದಿಲ್ಲವೇ ? ಮತ್ತು ಇತ್ತ ಅಂತರ್ಧಾನಶಕ್ತಿಯಿಂದ ಅದೃಶ್ಯಳಾದ ಜಾತಹಾರಿಣೀ ಎಂಬ ದುರ್ದೇವತೆಯು ನನ್ನನ್ನು ಅಪಹರಿಸಲು ಕಾದಿರುವಳು.

ಪುತ್ರಪ್ರೀತ್ಯಾ ಚ ಭವತೀ ಸಹಾರ್ದ್ರಾ ಮಾಮವೇಕ್ಷತೀ ।
ಉಲ್ಲಾಪ್ಯೋಲ್ಲಾಪ್ಯ ಬಹುಶಃ ಪರಿಷ್ವಜತಿ ಮಾಂ ಯತಃ ॥೯॥

ಉದ್ಭೂತಪುಲಕಾ ಸ್ನೇಹಸಮ್ಭವಾಸ್ರಾವಿಲೇಕ್ಷಣಾ ।
ತತೋ ಮಮಾಗತೋ ಹಾಸಃ ಶೃಣು ಚಾಪ್ಯತ್ರ ಕಾರಣಮ್ ॥೧೦॥

ಸ್ವಾರ್ಥೇ ಪ್ರಸಕ್ತಾ ಮಾರ್ಜಾರೀ ಪ್ರಸಕ್ತಂ ಮಾಮವೇಕ್ಷತೇ ।
ತಥಾನ್ತರ್ಧಾನಗಾ ಚೈವ ದ್ವಿತೀಯಾ ಜಾತಹಾರಿಣೀ ॥೧೧॥

ಸ್ವಾರ್ಥಾಯ ಸ್ನಿಗ್ಧಹೃದಯೇ ಯಥೈವೈತೇ ಮಮೋಪರಿ ।
ಪ್ರವೃತ್ತೇ ಸ್ವಾರ್ಥಮಾಸ್ಥಾಯ ತಥೈವ ಪ್ರತಿಭಾಸಿ ಮೇ ॥೧೨॥

---

೯. ಹೀಗಿರಲು ಪುತ್ರಪ್ರೀತಿಯುಳ್ಳವಳಾದ ನೀನು ಅತಿಶಯವಾದ ಪ್ರೇಮೋದ್ರೇಕದಿಂದ ನನ್ನನ್ನು ನೋಡುತ್ತ ಮತ್ತೆ ಮತ್ತೆ ಮಾತನಾಡಿ ಮುದ್ದಾಡಿಸುತ್ತ ಅಪ್ಪಿಕೊಳ್ಳುತ್ತಿದ್ದೀಯೆ, ಇದೇಕೆ ?

೧೦. ಮತ್ತು ಕಾಣಿಸುವ ರೋಮಾಂಚವುಳ್ಳವಳೂ, ಆನಂದದಿಂ-ದುಂಟಾದ ಬಾಷ್ಪಗಳಿಂದ ತುಂಬಿಹೋದ ಕಣ್ಣುಗಳುಳ್ಳವಳೂ ಆದ ನೀನು ಹೀಗೇಕೆ ಮಾಡುತ್ತೀಯೆ ? ಎಂದು ನನಗೆ ನಗು ಬಂತು. ಇದರ ಕಾರಣವನ್ನು ಕೇಳು.

೧೧. ನನ್ನನ್ನು ತಿಂದುಹಾಕುವ ಸ್ವಾರ್ಥಸಾಧನೆಯಲ್ಲಿದ್ದ ಬೆಕ್ಕು ನನ್ನ ಪ್ರಮಾವಸ್ಥಿತಿಯನ್ನು ಕಾಯುತ್ತಿದೆ. ಹಾಗು ಹುಟ್ಟಿದ ಶಿಶುವನ್ನು ಅಪಹರಿಸುವ ಪಿಶಾಚಿಯು ಅದಕ್ಕೋಸ್ಕರ ಅದೃಶ್ಯವಾಗಿ ಇತ್ತ ಕಾದಿರುವುದು.

೧೨. ಹೀಗೆ ಒಂದು ಕಡೆ ಬೆಕ್ಕು, ಮತ್ತೊಂದು ಕಡೆಯಲ್ಲಿ ಪಿಶಾಚಿಯು ಇವೆರಡು ಸ್ವಾರ್ಥಕ್ಕೋಸ್ಕರ ನನ್ನಲ್ಲಿ ಹೇಗೆ ಸ್ನೇಹವುಳ್ಳ ಹೃದಯವನ್ನು ಹೊಂದಿವೆಯೊ ಹಾಗೆಯೇ ನೀನು ಕೂಡ ಸ್ವಾರ್ಥಕ್ಕೋಸ್ಕರ ಪ್ರವೃತ್ತಳಾದವ-ಳಂತೆ ನನಗೆ ಕಾಣುತ್ತೀಯೆ.

ಕಿಂ ತು ಮದುಪಭೋಗಾಯ ಮಾರ್ಜಾರೀ ಜಾತಹಾರಿಣೀ ।
ತ್ವಂ ತು ಕ್ರಮೇಣೋಪಭೋಗ್ಯಂ ಮತ್ತಃ ಫಲಮಭೀಪ್ಸಸಿ ॥೧೩॥

ನ ಮಾಂ ಜಾನಾಸಿ ಕೋಽಪ್ಯೇಷ ನ ಚೈವೋಪಕೃತಂ ಮಯಾ ।
ಸಙ್ಗತಂ ನಾತಿಕಾಲೀನಂ ಪಞ್ಚಸಪ್ತದಿನಾತ್ಮಕಮ್ ॥೧೪॥

ತಥಾಪಿ ಸ್ನಿಹ್ಯಸೇ ಸಾಸ್ರಂ ಪರಿಷ್ವಜಸಿ ಚಾಪ್ಯತಿ ।
ತಾತೇತಿ ವತ್ಸ ಭದ್ರೇತಿ ನಿರ್ವ್ಯಲೀಕಂ ಬ್ರವೀಷಿ ಮಾಮ್ ॥೧೫॥

ಮಾತೋವಾಚ :—

ನ ತ್ವಾಹಮುಪಕಾರಾರ್ಥಂ ವತ್ಸ ಪ್ರೀತ್ಯಾ ಪರಿಷ್ವಜೇ ।
ನ ಚೇದೇತದ್ಭವತ್ಪ್ರೀತ್ಯೈ ಪರಿತ್ಯಕ್ತಾಸ್ಮ್ಯಹಂ ತ್ವಯಾ ॥೧೬॥

---

೧೩. ಆದರೆ ಜಾತಹಾರಿಣೀ ಪಿಶಾಚಿಯು ಮತ್ತು ಬೆಕ್ಕು—ಎರಡೂ ಒಂದೇಸಲ ನನ್ನನ್ನು ಭುಂಜಿಸಿ ಪೂರೈಸುವ ಇಷ್ಟದಿಂದ ಇವೆ. ನೀನು ಮಾತ್ರ ಕ್ರಮವಾಗಿ ನನ್ನಿಂದ ಆಗುವ ಭೋಗ್ಯಫಲವನ್ನು ನಿರೀಕ್ಷಿಸುತ್ತಿದ್ದೀಯೆ.

೧೪. ನನ್ನ ವಿಷಯದಲ್ಲಿ ಇಂತಹ ವಿವೇಕವನ್ನು ನೀನು ಹೊಂದಿಲ್ಲ. ಇವನು ಯಾರೊ ಹುಟ್ಟಿರುವನು. ಇವನಿಂದ ಏನೂ ಉಪಕಾರವಾಗಿಲ್ಲ. ಮತ್ತು ಈ ಸಹವಾಸವು ಐದಾರು ಅಥವಾ ಏಳು ದಿವಸಗಳವರೆಗಿನದು ಮಾತ್ರವೇ ಹೊರತು ದೀರ್ಘಕಾಲವಿರುವುದಿಲ್ಲ.

೧೫. ಆದರೂ ಸ್ನೇಹವನ್ನು ತೋರಿಸುತ್ತೀಯೆ. ಆನಂದ ಬಾಷ್ಪವನ್ನು ಸುರಿಸುತ್ತ ಅತಿಯಾಗಿ ಅಪ್ಪಿಕೊಳ್ಳುತ್ತೀಯೆ. ತಾತ, ವತ್ಸ, ಭದ್ರ ಎಂದು ನನ್ನನ್ನು ಅಸಂಬದ್ಧವಾಗಿ ಸಂಬೋಧಿಸಿ ಮಾತನಾಡಿಸುತ್ತೀಯೆ.

ಜನನಿಯು ಕೇಳಿದಳು :—

೧೬. ವತ್ಸನೇ! ನಾನು ನಿನ್ನನ್ನು ಉಪಕಾರಕ್ಕೋಸ್ಕರ ಆಲಿಂಗಿಸಿಕೊಳ್ಳುವುದಿಲ್ಲ. ಪ್ರೀತಿಯಿಂದ ಆಲಿಂಗಿಸಿಕೊಳ್ಳುತ್ತಿರುವೆನು. ಇದು ನಿನಗೆ ಪ್ರೀತಿಕರವಲ್ಲದಿದ್ದರೆ ನಾನು ನಿನ್ನಿಂದ ತ್ಯಜಿಸಲ್ಪಟ್ಟಿರುವೆನು.

ಸ್ವಾರ್ಥೋ ಮಯಾ ಪರಿತ್ಯಕ್ತೋ ಯಸ್ತ್ವತ್ತೋ ಮೇ ಭವಿಷ್ಯತಿ |
ಇತ್ಯುಕ್ತ್ವಾ ಸಾ ತಮುತ್ಸೃಜ್ಯ ನಿಷ್ಕ್ರಾನ್ತಾ ಸೂತಿಕಾಗೃಹಾತ್ ||೧೭||

ಜಡಾಙ್ಗಬಾಹ್ಯಕರಣಂ ಶುದ್ಧಾನ್ತಃಕರಣಾತ್ಮಕಮ್ |
ಜಹಾರ ತಂ ಪರಿತ್ಯಕ್ತಂ ಸಾ ತದಾ ಜಾತಹಾರಿಣೀ ||೧೮||

ಸಾ ಹಿತ್ವಾ ತಂ ತದಾ ಬಾಲಂ ವಿಕ್ರಾನ್ತಸ್ಯ ಮಹೀಭೃತಃ |
ಪ್ರಸೂತಪತ್ನೀಶಯನೇ ನ್ಯಸ್ಯ ತಸ್ಯಾದದೇ ಸುತಮ್ ||೧೯||

ತಮಪ್ಯನ್ಯಗೃಹೇ ನೀತ್ವಾ ಗೃಹೀತ್ವಾ ತಸ್ಯ ಚಾತ್ಮಜಮ್ |
ತೃತೀಯಂ ಭಕ್ಷಯಾಮಾಸ ಸಾ ಕ್ರಮಾಜ್ಜಾತಹಾರಿಣೀ ||೨೦||

ಹೃತ್ವಾ ಹೃತ್ವಾ ತೃತೀಯಂ ತು ಭಕ್ಷಯತ್ಯತಿನಿರ್ಘೃಣಾ |
ಕರೋತ್ಯನುದಿನಂ ಸಾ ತು ಪರಿವರ್ತಂ ತಥಾನ್ಯಯೋಃ ||೨೧||

---

೧೭. ನಿನ್ನಿಂದ ನನಗೆ ಯಾವ ಸ್ವಾರ್ಥವಾಗಬಹುದೋ ನಾನು ಅದನ್ನು ಈಗ ಬಿಟ್ಟಿದ್ದೇನೆ—ಹೀಗೆಂದು ಹೇಳಿ ಮಗುವನ್ನು ಅಲ್ಲಿಯೇ ಬಿಟ್ಟು ಜನನಿಯು ಸೂತಿಕಾಗೃಹದಿಂದ ಹೊರಟುಹೋದಳು.

೧೮. ಆಗ ಶಿಶುವನ್ನು ಅಪಹರಿಸುವ ಜಾತಹಾರಿಣೀ ಪಿಶಾಚಿಯು ಜಡವಾಗಿದ್ದ ದೇಹ ಮತ್ತು ಬಾಹ್ಯೇಂದ್ರಿಯಗಳಿಂದ ಕೂಡಿದ ಹಾಗು ಶುದ್ಧವಾದ ಅಂತಃಕರಣವುಳ್ಳ ಮಗುವನ್ನು ತಾಯಿಯು ಬಿಟ್ಟುಹೋದ ನಂತರ ಅಪಹರಿಸಿತು.

೧೯. ಪಿಶಾಚಿಯು ಆ ಮಗುವನ್ನು ಎತ್ತಿಕೊಂಡುಹೋಗಿ ಆಗಲೇ ಪ್ರಸವಿಸಿದ ವಿಕ್ರಾಂತ ಎಂಬ ರಾಜನ ಪತ್ನಿಯ ಶಯನದಲ್ಲಿ ಇಟ್ಟು ಆಕೆಯ ಮಗುವನ್ನು ಎತ್ತಿಕೊಂಡಿತು.

೨೦. ಜಾತಹಾರಿಣಿಯು ವಿಕ್ರಾಂತರಾಜನ ಮಗುವನ್ನು ಹಾಗೆ ಮತ್ತೊಂದು ಮನೆಗೆ ಎತ್ತಿಕೊಂಡುಹೋಗಿ ಅಲ್ಲಿ ಬಿಟ್ಟು ಅಲ್ಲಿದ್ದ ಮಗುವನ್ನು ತೆಗೆದುಕೊಂಡು ಆ ಮೂರನೆಯ ಮಗುವನ್ನು ಕ್ರಮವಾಗಿ ತಿಂದುಹಾಕಿತು.

೨೧. ನಿರ್ಘೃಣವಾದ ಹೃದಯವುಳ್ಳ ಜಾತಹಾರಿಣಿಯು ಪ್ರತಿದಿನವೂ ಹೀಗೆಯೇ ಎರಡು ಶಿಶುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಪರಿವರ್ತನೆಯನ್ನುಮಾಡಿ ಮೂರನೆಯ ಶಿಶುವನ್ನು ತಿಂದುಹಾಕುವುದು.

ವಿಕ್ರಾನ್ತೋಽಪಿ ತತಸ್ತಸ್ಯ ಸುತಸ್ಯೈವ ಮಹೀಪತಿಃ ।
ಕಾರಯಾಮಾಸ ಸಂಸ್ಕಾರಾನ್ರಾಜನ್ಯಸ್ಯ ಭವನ್ತಿ ಯೇ ॥೨೨॥

ಆನನ್ದೇತಿ ಚ ನಾಮಾಸ್ಯ ಪಿತಾ ಚಕ್ರೇ ವಿಧಾನತಃ ।
ಮುದಾ ಪರಮಯಾ ಯುಕ್ತೋ ವಿಕ್ರಾನ್ತಃ ಸ ನರಾಧಿಪಃ ॥೨೩॥

ಕೃತೋಪನಯನಂ ತಂ ತು ಗುರುರಾಹ ಕುಮಾರಕಮ್ ।
ಜನನ್ಯಾಃ ಸ್ತನ್ಯಮುಪಸ್ಥಾನಂ ಕ್ರಿಯತಾಂ ಚಾಭಿವಾದನಮ್ ॥೨೪॥

ಸ ಗುರೋಸ್ತದ್ವಚಃ ಶ್ರುತ್ವಾ ವಿಹಸ್ಯೈವಮಥಾಬ್ರವೀತ್ । ॥೨೫॥

ಆನನ್ದ ಉವಾಚ :—

ವನ್ದ್ಯಾ ಮೇ ಕತಮಾ ಮಾತಾ ಜನನೀ ಪಾಲನೀ ತು ಕಿಮ್ ॥೨೬॥

---

೨೨. ತರುವಾಯ ವಿಕ್ರಾಂತಮಹಾರಾಜನು ತನ್ನ ಪುತ್ರನಾಗಿಯೇ ತೋರಿಬಂದ ಆ ಮಗುವಿಗೆ ಕ್ಷತ್ರಿಯ ಕುಮಾರನಿಗೆ ಯೋಗ್ಯವಾದ ರೀತಿಯಲ್ಲಿ ಜಾತಕರ್ಮ ಮುಂತಾದ ಸಂಸ್ಕಾರಗಳನ್ನು ಮಾಡಿಸಿದನು.

೨೩. ವಿಕ್ರಾಂತನೆಂಬ ರಾಜನು ಪುತ್ರೋತ್ಸವದ ಪರಮಾನಂದದಿಂದ ಕೂಡಿದವನಾಗಿ ತಂದೆಯು ಮಾಡಬೇಕಾದ ನಾಮಕರಣವಿಧಾನದಂತೆ ಈ ಪುತ್ರನಿಗೆ ಆನಂದ ಎಂದು ಹೆಸರಿಟ್ಟನು.

೨೪. ಪುತ್ರನಿಗೆ ಉಪನಯನವಾದ ಬಳಿಕ ಗುರುವು ಕುಮಾರನಿಗೆ ಹೀಗೆ ಆದೇಶಮಾಡಿದನು. ಮೊದಲು ಜನನಿಯ ಬಳಿಗೆ ಹೋಗಿ ಗೌರವವನ್ನು ತೋರಿಸಿ ಅಭಿವಾದನ ಮಾಡಬೇಕು ಎಂದು ಗುರುವು ಹೇಳಿದನು.

೨೫. ಆನಂದನು ಗುರುವಿನ ಆಜ್ಞೆಯನ್ನು ಕೇಳಿದನು. ಆದರೆ ತಾನು ಎಲ್ಲಿಯೋ ಸೇರಿರುವುದನ್ನು ತಿಳಿಯದ ಗುರುವಿನ ಆದೇಶಕ್ಕೆ ನಕ್ಕು ಮತ್ತೆ ಗುರುವನ್ನು ಕುರಿತು ಹೇಳಿದನು.

ಆನಂದಕುಮಾರನು ಹೇಳಿದನು :—

೨೬. ತಾಯಿಗೆ ವಂದನಮಾಡಬೇಕೆಂದು ಆಜ್ಞೆಯಿತ್ತಿರುವೆ. ನಾನು ನನ್ನನ್ನು ಪ್ರಸವಿಸಿದ ಜನನಿಗೆ ವಂದಿಸಬೇಕೆ ? ಅಥವಾ ನನ್ನನ್ನು ಸಲಹಿದ ತಾಯಿಗೆ ವಂದನಮಾಡಬೇಕೆ ? ಎಂದು ಪ್ರಶ್ನಿಸಿದನು.

ಗುರುರುವಾಚ :—

ನನ್ವಿಯಂ ತೇ ಮಹಾಭಾಗ ಜನಿತ್ರೀ ಜಾರುಜಾತ್ಮಜಾ ।
ವಿಕ್ರಾನ್ತಸ್ಯಾಗ್ರಮಹಿಷೀ ಹೈಮಿನೀ ನಾಮ ನಾಮತಃ ॥೨೭॥

ಆನನ್ದ ಉವಾಚ :—

ಇಯಂ ಜನಿತ್ರೀ ಚೈತ್ರಸ್ಯ ವಿಶಾಲಗ್ರಾಮವಾಸಿನಃ ।
ವಿಪ್ರಾಗ್ರ್ಯಬೋಧಪುತ್ರಸ್ಯ ಯೋಽಸ್ಯಾಂ ಜಾತೋಽನ್ಯತೋ ಗತಃ ॥೨೮॥

ಗುರುರುವಾಚ :—

ಕುತಸ್ತ್ವಂ ಕಥಯಾನನ್ದ ಚೈತ್ರಃ ಕೋ ವಾ ತ್ವಯೋಚ್ಯತೇ ।
ಸಙ್ಕಟಂ ಮಹದಾಭಾತಿ ಕ್ವ ಜಾತೋಽತ್ರ ಬ್ರವೀಷಿ ಕಿಮ್ ॥೨೯॥

ಗುರುವು ಹೇಳಿದನು :—

೨೭. ಮಹಾಭಾಗ್ಯವಂತನೇ! ಇದೇಕೆ ಹೀಗೆನ್ನುತ್ತೀಯೆ? ಗರ್ಭ-ಕೋಶದಿಂದ ಪುತ್ರನನ್ನು ಪ್ರಸವಿಸಿದ ಈಕೆಯು ನಿನ್ನ ಜನನಿಯು; ವಿಕ್ರಾಂತ-ಮಹಾರಾಜನ ಪಟ್ಟದರಸಿಯು. ಇವಳು ಹೈಮಿನೀ ಎಂದು ನಾಮಾಂಕಿತ-ಳಾಗಿರುವಳು.

ಆನಂದನು ಹೇಳಿದನು :—

೨೮. ಈ ಹೈಮಿನಿಯು ವಿಶಾಲಗ್ರಾಮದಲ್ಲಿ ವಾಸಮಾಡುತ್ತಿರುವ ಬ್ರಾಹ್ಮಣೋತ್ತಮನಾದ ಬೋಧ ಎಂಬುವನ ಪುತ್ರನಾದ ಚೈತ್ರಕುಮಾರನ ಜನನಿಯು. ಆ ಚೈತ್ರಕುಮಾರನು ಇವಳಲ್ಲಿ ಜನ್ಮವೆತ್ತಿ ಬೇರೊಂದುಕಡೆಯಲ್ಲಿ ಸೇರಿರುವನು.

ಗುರುವು ಹೇಳಿದನು :—

೨೯. ಆನಂದನೇ! ನೀನೆಲ್ಲಿಯವನು? ನೀನು ಹೇಳುತ್ತಿರುವ ಆ ಚೈತ್ರನು ಯಾರು? ಆನಂದ! ಇವನ್ನು ಹೇಳು. ದೊಡ್ಡ ಕಷ್ಟವು ಬಂದಂತೆ ತೋರುವುದು. ನೀನು ಎಲ್ಲಿ ಜನಿಸಿದೆ? ಇದೇನು ಹೇಳುತ್ತಿರುವೆ?

ಆನನ್ದ ಉವಾಚ :—

ಜಾತೋಽಹಮನಮಿತ್ರಸ್ಯ ಕ್ಷತ್ರಿಯಸ್ಯ ಗೃಹೇ ದ್ವಿಜ ।
ತತ್ಪತ್ನ್ಯಾಂ ಗಿರಿಭದ್ರಾಯಾಮಪಾದದೇ ಜಾತಹಾರಿಣೀ ॥೩೦॥

ತಯಾತ್ರ ಮುಕ್ತೋ ಹೈಮಿನ್ಯಾ ಗೃಹೀತ್ವಾ ಚ ಸುತಂ ಚ ಸಾ ।
ಬೋಧಸ್ಯ ದ್ವಿಜಮುಖ್ಯಸ್ಯ ಗೃಹೇ ನೀತವತೀ ಪುನಃ ॥೩೧॥

ಭಕ್ಷಯಾಮಾಸ ಚ ಸುತಂ ತಸ್ಯ ಬೋಧದ್ವಿಜನ್ಮನಃ ।
ಸ ತತ್ರ ದ್ವಿಜಸಂಸ್ಕಾರೈಃ ಸಂಸ್ಕೃತೋ ಹೈಮಿನೀಸುತಃ ॥೩೨॥

ಅಹಮತ್ರ ಮಹಾಭಾಗ ಸಂಸ್ಕೃತಾ ಗುರುಣಾ ತ್ವಯಾ ।
ಮಯಾ ತವ ವಚಃ ಕಾರ್ಯಮುಪೈಮಿ ಕತಮಾಂ ಗುರೋ ॥೩೩॥

ಆನಂದಕುಮಾರನು ಹೇಳಿದನು :—

೩೦. ದ್ವಿಜೋತ್ತಮನೇ ! ನಾನು ಅನಮಿತ್ರನೆಂದು ಪ್ರಸಿದ್ಧನಾದ ಕ್ಷತ್ರಿಯನ ಮನೆಯಲ್ಲಿ ಅವನ ಪತ್ನಿಯಾದ ಗಿರಿಭದ್ರಾ ಎಂಬುವಳಲ್ಲಿ ಹುಟ್ಟಿದೆನು. ಜಾತಹಾರಿಣಿಯು ನನ್ನನ್ನು ಅಲ್ಲಿಂದ ಅಪಹರಿಸಿತು.

೩೧. ಜಾತಹಾರಿಣಿಯು ನನ್ನನ್ನು ತಂದು ಇಲ್ಲಿ ಬಿಟ್ಟಿತು. ಮತ್ತು ಹೈಮಿನೀರಾಣಿಯಲ್ಲಿ ಜನಿಸಿದ ಮಗುವನ್ನು ಎತ್ತಿಕೊಂಡುಹೋಗಿ ದ್ವಿಜೋತ್ತಮ-ನಾದ ಬೋಧ ಎಂಬುವನ ಮನೆಯಲ್ಲಿ ಹಾಕಿರುವುದು.

೩೨. ಆ ಬೋಧ ಎಂಬುವನ ಪುತ್ರನನ್ನು ಜಾತಹಾರಿಣಿಯು ತಿಂದು-ಹಾಕಿದಳು. ಹೀಗಾಗಿ ಹೈಮಿನಿಯಲ್ಲಿ ಜನಿಸಿದ ಕುಮಾರನು ದ್ವಿಜನ ಮನೆಯಲ್ಲಿ ಬ್ರಾಹ್ಮಣನಿಗೆ ಉಚಿತವಾದ ಸಂಸ್ಕಾರಗಳಿಂದ ಸಂಸ್ಕೃತನಾಗಿರುವನು.

೩೩. ಮಹಾಭಾಗನಾದ ಗುರುವೇ ! ನಾನು ಇಲ್ಲಿ ಗುರುವಾದ ನಿನ್ನಿಂದ ಉಪನಯನಾದಿ ಸಂಸ್ಕಾರವನ್ನು ಹೊಂದಿ ಸಂಸ್ಕೃತರಾಗಿರುವೆನು. ನಾನು ನಿನ್ನ ಆದೇಶದಂತೆ ನಡೆದುಕೊಳ್ಳಬೇಕು. ಯಾವ ತಾಯಿಯ ಬಳಿಗೆ ವಂದನೆಗೆ ಹೋಗಲಿ ?

ಗುರುರುವಾಚ :—

ಅತೀವ ಗಹನಂ ವತ್ಸ ಸಙ್ಕಟಂ ಮಹದಾಗತಮ್ ।
ನ ವೇದ್ಮಿ ಕಿಂಚಿನ್ಮೋಹೇನ ಭ್ರಮನ್ತೀವ ಹಿ ಬುದ್ಧಯಃ ॥೩೪॥

ಆನನ್ದ ಉವಾಚ : –

ಮೋಹಸ್ಯಾವಸರಃ ಕೋಽತ್ರ ಜಗತ್ಯೇವಂ ವ್ಯವಸ್ಥಿತೇ ।
ಕಃ ಕಸ್ಯ ಪುತ್ರೋ ವಿಪ್ರರ್ಷೇ-ಕೋ ವಾ ಕಸ್ಯ ನ ಬಾನ್ಧವಃ ॥೩೫॥

ಆರಭ್ಯ ಜನ್ಮನೋ ನೄಣಾಂ ಸಮ್ಬನ್ಧಿತ್ವಮುಪೈತಿ ಯಃ ।
ಅನ್ಯಸಮ್ಬನ್ಧಿನೋ ವಿಪ್ರ ಮೃತ್ಯುನಾ ಸನ್ನಿವರ್ತಿತಾಃ ॥೩೬॥

ಅತ್ರಾಪಿ ಜಾತಸ್ಯ ಸತಃ ಸಮ್ಬನ್ಧೋ ಯೋ ಹಿ ಬಾನ್ಧವೈಃ ।
ಸೋಽಪ್ಯಸ್ತಮನ್ತೇ ದೇಹಸ್ಯ ಪ್ರಯಾತ್ಯೇಷೋಽಖಿಲಕ್ರಮಃ ॥೩೭॥

ಗುರುವು ಹೇಳಿದನು :—

೩೪. ಕುಮಾರನೇ! ನೀನು ಹೇಳಿದುದು ಬಹಳ ಗಹನವಾಗಿದೆ. ಮಹತ್ತಾದ ಸಂಕಟವು ಒದಗಿದೆ. ನಾನೇನೂ ತಿಳಿಯದ ಹಾಗಾಗಿದೆ. ಮೋಹದಿಂದ ನನ್ನ ಬುದ್ಧಿಯು ಭ್ರಮಿಸುತ್ತಿದೆ.

ಆನಂದಕುಮಾರನು ಹೇಳಿದನು :—

೩೫. ಎಲೈ ವಿಪ್ರರ್ಷಿಯಾದ ಗುರುವೇ? ಪ್ರಪಂಚವೇ ಹೀಗಿರುವಾಗ ಈ ವಿಷಯದಲ್ಲಿ ನಿನಗೆ ಮೋಹವುಂಟಾಗಲು ಕಾರಣವೇನಿದೆ? ಯಾರು ಯಾರಿಗೆ ಪುತ್ರನಹುದು? ಯಾರಿಗೆ ಅಲ್ಲ? ಯಾರು ಯಾರಿಗೆ ಬಂಧುವಹುದು? ಯಾರಿಗೆ ಬಂಧುವಲ್ಲ?

೩೬. ಒಂದು ವ್ಯಕ್ತಿಯು ಒಂದು ಕಡೆಯಲ್ಲಿ ಜನ್ಮವೆತ್ತಿ ೬ ಮಾನವರ ಸಂಬಂಧವನ್ನು ಹೊಂದಿದರೆ ಆಗ ಅದೇ ವ್ಯಕ್ತಿಯಲ್ಲಿ ಹಿಂದೆ ಸಂಬಂಧವನ್ನು ಹೊಂದಿದವರು ಅವನ ಮರಣದಿಂದ ಸಂಬಂಧಿತ್ವದಿಂದ ನಿವೃತ್ತಿಹೊಂದುವರು.

೩೭. ಮತ್ತೊಂದು ಕುಲದಲ್ಲಿ ಹುಟ್ಟಿದ ವ್ಯಕ್ತಿಗೆ ಅಲ್ಲಿನ ಬಾಂಧವರ ಕೂಡ ಯಾವ ಸಂಬಂಧವುಂಟಾಗುವುದೋ ಅದು ಆ ವ್ಯಕ್ತಿಯು ಮೃತ್ಯು-ಹೊಂದಿದಾಗ ಆ ದೇಹದ ಅವಸಾನದಲ್ಲಿ ಲಯಹೊಂದುವುದು. ಇದು ಎಲ್ಲೆಲ್ಲಿಯೂ ಇರುವ ಕ್ರಮವು.

ಅತೋ ಬ್ರವೀಮಿ ಸಂಸಾರೇ ವಸತಃ ಕೋ ನ ಬಾನ್ಧವಃ ।
ಕೋ ವಾಪಿ ಸತತಂ ಬನ್ಧುಃ ಕಿಂ ವೋ ವಿಭ್ರಾಮ್ಯತೇ ಮತಿಃ ॥೩೮॥

ಪಿತೃದ್ವಯಂ ಮಯಾ ಪ್ರಾಪ್ತಮಸ್ಮಿನ್ನೇವ ಹಿ ಜನ್ಮನಿ ।
ಮಾತೃದ್ವಯಂ ಚ ಕಿಂ ಚಿತ್ರಂ ಯದನ್ಯದ್ದೇಹಸಮ್ಭವೇ ॥೩೯॥

ಸೋಽಹಂ ತಪಃ ಕರಿಷ್ಯಾಮಿ ತ್ವಯಾ ಯೋ ಹ್ಯಸ್ಯ ಭೂಪತೇಃ ।
ವಿಶಾಲಗ್ರಾಮತಃ ಪುತ್ರಶ್ಚೈತ್ರ ಆನೀಯತಾಮಿಹ ॥೪೦॥

ಮಾರ್ಕಣ್ಡೇಯ ಉವಾಚ :—

ತತಃ ಸ ವಿಸ್ಮಿತೋ ರಾಜಾ ಸಭಾರ್ಯಃ ಸಹ ಬನ್ಧುಭಿಃ ।
ತಸ್ಮಾನ್ನಿವರ್ತ್ಯ ಮಮತಾಮನುಮೇನೇ ವನಾಯ ತಮ್ ॥೪೧॥

---

೩೮. ಆದ್ದರಿಂದ ನಾನು ಹೀಗೆ ಹೇಳುತ್ತಿರುವೆನು. ಸಂಸಾರದಲ್ಲಿರುವವರಲ್ಲಿ ಯಾರಿಗೆ ಯಾರು ಬಂಧುವಲ್ಲ? ಯಾರಿಗೆ ಯಾರು ತ್ರಿಕಾಲದಲ್ಲಿಯೂ ಬಂಧುವಾಗಿರುವನು? ಹೀಗಿರಲು ನಿಮ್ಮ ಬುದ್ಧಿಯು ಹೀಗೇಕೆ ಭ್ರಮಿಸಬೇಕು?

೩೯. ನನಗೆ ಇದೊಂದೇ ಜನ್ಮದಲ್ಲಿ ಇಬ್ಬರು ತಂದೆಯರು ಇರುವರು. ಹಾಗೆ ಇಬ್ಬರು ತಾಯಿಯರನ್ನು ನಾನು ಹೊಂದಿರುವೆನು. ಬೇರೆ ಬೇರೆ ದೇಹಗಳನ್ನು ಹೊಂದುವಾಗ ಅನೇಕ ತಂದೆ–ಅನೇಕ ತಾಯಿಯರನ್ನು ಹೊಂದುವುದೇನು ಆಶ್ಚರ್ಯ?

೪೦. ಅಂತಹ ನಾನು ಈಗ ತಪಸ್ಸನ್ನು ಮಾಡುವೆನು. ಈ ವಿಕ್ರಾಂತರಾಜನ ಪುತ್ರನಾಗಿ ಜನಿಸಿ ಚೈತ್ರನೆಂಬ ದ್ವಿಜಕುಮಾರನೆನಿಸಿರುವ ಕುಮಾರನನ್ನು ನೀನು ವಿಶಾಲಗ್ರಾಮದಿಂದ ಇಲ್ಲಿಗೆ ಕರೆತರಿಸು.

ಮಾರ್ಕಂಡೇಯ ಮುನಿಯು ಹೇಳಿದನು :—

೪೧. ತರುವಾಯ ಇದನ್ನು ಕೇಳಿ ವಿಸ್ಮಯಗೊಂಡ ವಿಕ್ರಾಂತಮಹಾರಾಜನು ಭಾರ್ಯಾ-ಬಂಧುಗಳ ಸಮೇತನಾಗಿ ಆ ಕುಮಾರನಲ್ಲಿದ್ದ ಮಮತೆಯನ್ನು ಬಿಟ್ಟು ಅವನಿಗೆ ತಪೋವನಕ್ಕೆ ಹೋಗಲು ಅನುಮತಿಯನ್ನು ಇತ್ತನು.

ಚೈತ್ರಮಾನೀಯ ತನಯಂ ರಾಜ್ಯಯೋಗ್ಯಂ ಚಕಾರ ಸಃ ।
ಸಮ್ಮಾನ್ಯ ಬ್ರಾಹ್ಮಣಂ ಯೇನ ಪುತ್ರಬುದ್ಧ್ಯಾ ಸ ಪಾಲಿತಃ ॥೪೨॥

ಸೋಽಪ್ಯಾನನ್ದಸ್ತಪಸ್ತೇಪೇ ಬಾಲ ಏವ ಮಹಾವನೇ ।
ಕರ್ಮಣಾಂ ಕ್ಷಪಣಾರ್ಥಾಯ ವಿಮುಕ್ತೇಃ ಪರಿಪನ್ಥಿನಾಮ್ ॥೪೩॥

ತಪಸ್ಯನ್ತಂ ತತಸ್ತಂ ಚ ಪ್ರಾಹ ದೇವಃ ಪ್ರಜಾಪತಿಃ ।
ಕಿಮರ್ಥಂ ತಪ್ಯಸೇ ವತ್ಸ ತಪಸ್ತೀವ್ರಂ ವದಸ್ವ ತತ್ ॥೪೪॥

ಆನನ್ದ ಉವಾಚ :—

ಆತ್ಮನಃ ಶುದ್ಧಿಕಾಮೋಽಹಂ ಕರೋಮಿ ಭಗವಂಸ್ತಪಃ ।
ಬನ್ಧಾಯ ಮಮ ಕರ್ಮಾಣಿ ಯಾನಿ ತತ್ಕ್ಷಪಣೋನ್ಮುಖಃ ॥೪೫॥

---

೪೨. ಬೋಧನೆಂಬ ಯಾವ ವಿಪ್ರನು ತನ್ನ ಪುತ್ರನೆಂದು ತಿಳಿದು ಚೈತ್ರಕುಮಾರನನ್ನು ಪಾಲಿಸಿದ್ದನೋ ಆ ವಿಪ್ರನಿಗೆ ಸಮಾಧಾನಮಾಡಿ ವಿಕ್ರಾಂತ ರಾಜನು ಆ ಚೈತ್ರನನ್ನು ಅಲ್ಲಿಂದ ಕರೆಯಿಸಿ ರಾಜ್ಯಾರ್ಹನಾದ ತನ್ನ ಕುಮಾರನನ್ನಾಗಿ ಮಾಡಿಕೊಂಡನು.

೪೩. ಆ ಆನಂದ ಕುಮಾರನು ಬಾಲಕನಿದ್ದಾಗಲೇ ಮಹತ್ತಾದ ತಪೋವನಕ್ಕೆ ಹೋಗಿ ಮುಕ್ತಿ ಪ್ರಾಪ್ತಿಗೆ ಅಡ್ಡಿಯನ್ನುಂಟುಮಾಡುವ ಕರ್ಮ ಬಂಧವನ್ನು ಕಳೆದುಕೊಳ್ಳುವುದಕ್ಕೋಸ್ಕರ ತಪಸ್ಸನ್ನು ಮಾಡಿದನು.

೪೪. ತರುವಾಯ ಬ್ರಹ್ಮದೇವನು ತಪಶ್ಚರ್ಯೆಯಲ್ಲಿ ತೊಡಗಿದ ಆ ಆದಂದಕುಮಾರನ ಬಳಿಗೆ ಬಂದು "ವತ್ಸನೆ! ನೀನು ಏಕೆ ತೀವ್ರವಾದ ತಪಸ್ಸನ್ನು ಮಾಡುತ್ತಿದ್ದೀಯೆ? ಅದನ್ನು ಹೇಳು" ಎಂದು ಕೇಳಿದನು.

ಆನಂದನು ಹೇಳಿದನು :—

೪೫. ಪೂಜ್ಯನಾದ ಬ್ರಹ್ಮದೇವನೇ! ನನಗೆ ಬಂಧಕವಾದ ಯಾವ ಕರ್ಮಜಾಲವಿದೆಯೋ ಅದನ್ನು ಕಳೆದುಕೊಳ್ಳುವುದಕ್ಕಾಗಿ ಮತ್ತು ಚಿತ್ತಶುದ್ಧಿಯನ್ನು ಹೊಂದುವುದಕ್ಕಾಗಿ ತಪಸ್ಸನ್ನು ಮಾಡುತ್ತಿರುವೆನು.

ಬ್ರಹ್ಮೋವಾಚ :—

ಕ್ಷೀಣಾಧಿಕಾರೋ ಭವತಿ ಮುಕ್ತಿಯೋಗ್ಯೋ ನ ಕರ್ಮವಾನ್ ।
ಸತ್ತ್ವಾಧಿಕಾರವಾನ್ಮುಕ್ತಿಮವಾಪ್ಸ್ಯತಿ ತತೋ ಭವಾನ್ ॥೪೬॥

ಭವತಾ ಮನುನಾ ಭಾವ್ಯಂ ಷಷ್ಠೇನ ವ್ರಜ ತತ್ಕುರು ।
ಅಲಂ ತೇ ತಪಸಾ ತಸ್ಮಿನ್ಕೃತೇ ಮುಕ್ತಿಮವಾಪ್ಸ್ಯಸಿ ॥೪೭॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತೋ ಬ್ರಹ್ಮಣಾ ಸೋಽಪಿ ತಥೇತ್ಯುಕ್ತ್ವಾ ಮಹಾಮತಿಃ ।
ತತ್ಕರ್ಮಾಭಿಮುಖೋ ಯಸ್ತು ತಪಸೋ ವಿರರಾಮ ಹ ॥೪೮॥

ಬ್ರಹ್ಮದೇವನು ಹೇಳಿದನು :—

೪೬. ಕರ್ಮಾಧೀನವಾಗಿ ಗಳಿಸಿರುವ ಅಧಿಕಾರವನ್ನು ಭೋಗದಿಂದ ಕಳೆದುಕೊಂಡವನು ಮುಕ್ತಿಯನ್ನು ಹೊಂದುವನು. ಆ ಕರ್ಮಶೇಷವಿದ್ದವನು ಮುಕ್ತನಾಗುವುದಿಲ್ಲ. ಆದುದರಿಂದ ನೀನು ಸಾತ್ತ್ವಿಕವಾದ ಅಧಿಕಾರವನ್ನು ಅನುಭವಿಸಿ ಕಡೆಯಲ್ಲಿ ಮುಕ್ತಿಯನ್ನು ಹೊಂದುತ್ತೀಯೆ.

೪೭. ನೀನು ಆರನೆಯ ಮನುಪ್ರಜಾಪತಿಯಾಗಬೇಕು. ಆದ್ದರಿಂದ ಇಲ್ಲಿಂದ ಹೊರಟುಹೋಗು. ಆ ಮನುಪದವನ್ನು ನೆರವೇರಿಸು. ನೀನು ಈಗ ತಪಮಾಡಿರುವುದು ಸಾಕು. ಮನ್ವಂತರಾಧಿಪತ್ಯವನ್ನು ನಡೆಸಿದರೆ ಅದರಿಂದ ಮುಕ್ತಿಯನ್ನು ಹೊಂದುತ್ತೀಯೆ.

ಮಾರ್ಕಂಡೇಯ ಮುನಿಯು ಹೇಳಿದನು :—

೪೮. ಬ್ರಹ್ಮದೇವನಿಂದ ಈ ರೀತಿಯಾಗಿ ನಿರ್ದೇಶಿಸಲ್ಪಟ್ಟ ಮಹಾ-ಪ್ರಜ್ಞಾಶಾಲಿಯಾದ ಆ ಬಾಲಕನು ಹಾಗೆ ಆಗಲೆಂದು ಒಪ್ಪಿಕೊಂಡು ಆ ಕರ್ಮವನ್ನು ನೆರವೇರಿಸುವ ಆಸಕ್ತಿಯನ್ನು ಹೊಂದಿ ತಪಶ್ಚರ್ಯೆಯನ್ನು ನಿಲ್ಲಿಸಿದನು.

ಚಾಕ್ಷುಷೇತ್ಯಾಹ ತಂ ಬ್ರಹ್ಮಾ ತಪಸೋ ವಿನಿವರ್ತಯನ್ ।
ಪೂರ್ವಂ ನಾಮ್ನಾ ಬಭೂವಾಥ ಪ್ರಖ್ಯಾತಶ್ಚಾಕ್ಷುಷೋ ಮನುಃ॥೪೯॥

ಉಪಯೇಮೇ ವಿದರ್ಭಾಂ ಸ ಸುತಾಮುಗ್ರಸ್ಯ ಭೂಭೃತಃ ।
ತಸ್ಯಾಂ ಚೋತ್ಪಾದಯಾಮಾಸ ಪುತ್ರಾನ್ ಪ್ರಖ್ಯಾತವಿಕ್ರಮಾನ್ ॥೫೦॥

ತಸ್ಯ ಮನ್ವನ್ತರೇಶಸ್ಯ ಯೇಽನ್ತರೇ ತ್ರಿದಶಾ ದ್ವಿಜ ।
ಯೇ ಚರ್ಷಯಸ್ತಥೈವೇನ್ದ್ರೋ ಯೇ ಸುತಾಶ್ಚಾಸ್ಯ ತಾಞ್ಛೃಣು ॥೫೧॥

ಆಪ್ಯಾ ನಾಮ ಸುರಾಸ್ತತ್ರ ತೇಷಾಮೇಕೋಽಷ್ಟಕೋ ಗಣಃ ।
ಪ್ರಖ್ಯಾತಕರ್ಮಣಾಂ ವಿಪ್ರ ಯಜ್ಞೇ ಹವ್ಯಭುಜಾಮಯಮ್ ॥೫೨॥

---

೪೯. ಬ್ರಹ್ಮದೇವನು ಹಿಂದೆ ಹೀಗೆ ತಪಸ್ಸನ್ನು ಬಿಡಿಸುವ ಸಮಯದಲ್ಲಿ "ಚಾಕ್ಷುಷನೇ!" ಎಂದು ಕರೆದು ಆದೇಶಮಾಡಿದನು. ಆದ್ದರಿಂದ ಮುಂದೆ ಕೂಡ ಆ ಕುಮಾರನು "ಚಾಕ್ಷುಷಮನು" ಎಂಬ ಹೆಸರಿನಿಂದ ಪ್ರಖ್ಯಾತಿಹೊಂದಿದನು.

೫೦. ಚಾಕ್ಷುಷಮನುವು ಉಗ್ರಭೂಪಾಲಕನ ಪುತ್ರಿಯಾದ ವಿದರ್ಭಾ ಎಂಬಾಕೆಯನ್ನು ಮದುವೆಯಾದನು. ಮತ್ತು ಆ ಪತ್ನಿಯಲ್ಲಿ ಎಲ್ಲೆಲ್ಲೂ ಖ್ಯಾತಿಹೊಂದಿದ ವಿಕ್ರಮಶಾಲಿಗಳಾದ ಪುತ್ರರನ್ನು ಹೊಂದಿದನು.

೫೧. ಕ್ರೌಷ್ಟುಕಿಮುನಿಯೇ! ಚಾಕ್ಷುಷನೆಂಬ ಮನ್ವಂತರಾಧಿಪತಿಯ ಮನ್ವಂತರದಲ್ಲಿ ದೇವತೆಗಳು ಯಾರು? ಇಂದ್ರನು ಯಾರು? ಸಪ್ತರ್ಷಿಗಳು ಯಾರು? ಮತ್ತು ಆ ಮನುವಿನ ಪುತ್ರರು ಯಾರು? ಎಂಬುದನ್ನು ಹೇಳುವೆನು, ಕೇಳು.

೫೨. ಆ ಮನ್ವಂತರದಲ್ಲಿರುವ ದೇವತೆಗಳಲ್ಲಿ ಆಪ್ಯ ಎಂದು ಕರೆಯಲ್ಪಡುವ ಎಂಟು ಮಂದಿ ದೇವತೆಗಳ ಗಣವು ಒಂದಾಗಿತ್ತು. ವಿಪ್ರನೇ! ಪ್ರಖ್ಯಾತವಾದ ಸುಕೃತಕರ್ಮವುಳ್ಳವರೂ ಮತ್ತು ಯಜ್ಞದಲ್ಲಿ ಹವಿಸ್ಸನ್ನು ಭುಂಜಿಸುವವರೂ ಆದ ದೇವತೆಗಳು ಈ ಗುಂಪಿನ ಸೇರಿದವರಾಗಿದ್ದರು.

ಪ್ರಖ್ಯಾತಬಲವೀರ್ಯಾಣಾಂ ಪ್ರಭಾಮಣ್ಡಲದುರ್ದೃಶಾಮ್ ।
ದ್ವಿತೀಯಶ್ಚ ಪ್ರಸೂತಾಖ್ಯೋ ದೇವಾನಾಮಷ್ಟಕೋ ಗಣಃ ॥೫೩॥

ತಥೈವಾಷ್ಟಕ ಏವಾನ್ಯೋ ಭವ್ಯಾಖ್ಯೋ ದೇವತಾಗಣಃ ।
ಚತುರ್ಥಶ್ಚ ಗಣಸ್ತತ್ರ ಯೂಥಗಾಖ್ಯಸ್ತಥಾಷ್ಟಕಃ ॥೫೪॥

ಲೇಖಸಞ್ಜ್ಞಾಸ್ತಥೈವಾನ್ಯೇ ತತ್ರ ಮನ್ವನ್ತರೇ ದ್ವಿಜ ।
ಪಞ್ಚಮೋ ಚ ಗಣೇ ದೇವಾಸ್ತತ್ಸಞ್ಜ್ಞಾ ಹ್ಯಮೃತಾಶಿನಃ ॥೫೫॥

ಶತಂ ಕ್ರತೂನಾಮಾಹೃತ್ಯ ಯಸ್ತೇಷಾಮಧಿಪೋಽಭವತ್ ।
ಮನೋಜವಸ್ತಥೈವೇನ್ದ್ರಃ ಸಖ್ಯಾತೋ ಯಜ್ಞಭಾಗಭುಕ್ ॥೫೬॥

ಸುಮೇಧಾ ವಿರಜಾಶ್ಚೈವ ಹವಿಷ್ಮಾನುನ್ನತೋ ಮಧುಃ ।
ಅತಿನಾಮಾ ಸಹಿಷ್ಣುಶ್ಚ ಸಪ್ತಾಸನ್ನಿತಿ ಚರ್ಷಯಃ ॥೫೭॥

---

೫೩. ಹಾಗು ಖ್ಯಾತಿಗೊಂಡಿರುವ ಬಲ-ವೀರ್ಯಗಳಿಂದ ಕೂಡಿದವರೂ ಪ್ರಭಾಮಂಡಲದ ನಡುವೆ ನೋಡಲು ಅಶಕ್ಯರಾಗಿರುವವರೂ ಆದ ಎಂಟು ಮಂದಿ ದೇವತೆಗಳ ಮತ್ತೊಂದು ಗಣವು ಪ್ರಸೂತ ಎಂದು ಕರೆಯಲ್ಪಡುತ್ತಿತ್ತು.

೫೪. ಹಾಗೆಯೆ ಮತ್ತೆಂಟು ಮಂದಿ ದೇವತೆಗಳಿಂದ ಕೂಡಿದ ಇನ್ನೊಂದು ದೇವತಾಗಣವು ಭವ್ಯ ಎಂದು ನಾಮಾಂಕನವನ್ನು ಹೊಂದಿತ್ತು. ಯೂಥಗ ಎಂಬ ನಾಮಾಂಕನವುಳ್ಳ ಇನ್ನೆಂಟು ಮಂದಿ ದೇವತೆಗಳ ಗಣವು ನಾಲ್ಕನೆಯ-ದಾಗಿತ್ತು.

೫೫. ದ್ವಿಜನಾದ ಕ್ರೌಷ್ಟುಕಿಯೇ! ಚಾಕ್ಷುಷಮನ್ವಂತರದಲ್ಲಿ ಲೇಖ ಎಂಬ ಹೆಸರಿನ ಮತ್ತೆಂಟು ಮಂದಿ ದೇವತೆಗಳವು ಐದನೆಯ ದೇವಗಣವಾಗಿತ್ತು. ಈ ಗಣದ ದೇವತೆಗಳು ಅಮೃತವನ್ನು ಪಾನಮಾಡುವವರಾಗಿದ್ದರು.

೫೬. ಒಂದು ನೂರು ಯಜ್ಞಗಳನ್ನು ಮಾಡಿ ಆ ದೇವತೆಗಳಿಗೆ ಅಧಿಪತಿ-ಯಾಗಿ ಬಂದವನು ಯಜ್ಞಕರ್ಮಗಳ ಹವಿರ್ಭಾಗವನ್ನು ತಿನ್ನುವ ಮನೋಜವ ನಾಮಾಂಕನವುಳ್ಳ ಇಂದ್ರನೇ ಮ ಹೇಳಲ್ಪಟ್ಟಿರುವನು.

೫೭. ಮತ್ತು ಚಾಕ್ಷುಷಮನ್ವಂತರದಲ್ಲಿ ಸುಮೇಧ, ವಿರಜ, ಹವಿಷ್ಮಾನ್ ಉನ್ನತ, ಮಧು, ಅತಿನಾಮ ಮತ್ತು ಸಹಿಷ್ಣು ಎಂಬ ನಾಮಾಂಕಿತರಾದವರು ಸಪ್ತರ್ಷಿಪದವನ್ನು ಅಲಂಕರಿಸಿದ್ದರು.

ಉರೂಪುರುಶತದ್ಯುಮ್ನಪ್ರಮುಖಾಃ ಸುಮಹಾಬಲಾಃ ।
ಚಾಕ್ಷುಷಸ್ಯ ಮನೋಃ ಪುತ್ರಾಃ ಪೃಥಿವೀಪತಯೋಽಭವನ್ ||೫೮||

ಏತತ್ತೇ ಕಥಿತಂ ಷಷ್ಠಂ ಮಯಾ ಮನ್ವನ್ತರಂ ದ್ವಿಜ ।
ಚಾಕ್ಷುಷಸ್ಯ ತಥಾ ಜನ್ಮ ಚರಿತಂ ಚ ಮಹಾತ್ಮನಃ ||೫೯||

ಸಾಮ್ಪ್ರತಂ ವರ್ತತೇ ಯೋಽಯಂ ನಾಮ್ನಾ ವೈವಸ್ವತೋ ಮನುಃ ।
ಸಪ್ತಮೋ ಯೋಽನ್ತರೇ ತಸ್ಯ ದೇವಾದ್ಯಾಸ್ತಾಞ್ಛೃಣುಷ್ವ ಮೇ||೬೦||

ಯ ಇದಂ ಕೀರ್ತಯೇದ್ಧೀಮಾಂಶ್ಚಾಕ್ಷುಷಸ್ಯಾನ್ತರಂ ಭುವಿ ।
ಶೃಣುತೇ ಚ ಲಭೇತ್ಪುತ್ರಾನಾರೋಗ್ಯಸುಖಸಮ್ಪದಮ್ ||೬೧||

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಷಷ್ಠಮನ್ವನ್ತರಂ ನಾಮ ತ್ರಿಸಪ್ತತಿತಮೋಽಧ್ಯಾಯಃ

---

೫೮. ಹಾಗು ಉರು, ಪುರು, ಶತದ್ಯುಮ್ನ ಮುಂತಾದ ಮಹಾಬಲ-ಪರಾಕ್ರಮಗಳಿಂದ ಕೂಡಿದ ಗಣ್ಯರು ಚಾಕ್ಷುಷಮನುವಿನ ಪುತ್ರರಾಗಿ ಜನಿಸಿ ಪೃಥಿವಿಯನ್ನು ಆಳುವ ಪ್ರಭುಗಳಾದರು.

೫೯- ದ್ವಿಜನಾದ ಕ್ರೌಷ್ಟುಕಿಯೇ! ಹೀಗೆ ನಿನಗೆ ಆರನೆಯದಾದ ಚಾಕ್ಷುಷಮನುವಿನ ಮನ್ವಂತರವು ನನ್ನಿಂದ ಹೇಳಲ್ಪಟ್ಟಿತು. ಮತ್ತು ಆ ಮಹಾತ್ಮನ ಜನ್ಮ-ಚರಿತ್ರಗಳು ವರ್ಣಿಸಲ್ಪಟ್ಟವೆ.

೬೦. ಈಗ ವೈವಸ್ವತಮನುವೆಂದು ಪ್ರಸಿದ್ಧನಾದ ಏಳನೆಯ ಮನುವು ಇರುವನು. ಅವನ ಮನ್ವಂತರದಲ್ಲಿರುವ ದೇವ-ಋಷಿ ಮುಂತಾದವರನ್ನು ನನ್ನಿಂದ ಕೇಳು.

೬೧- ಭೂಮಿಯಲ್ಲಿ ಪ್ರಾಜ್ಞನಾದ ಯಾವ ಮಾನವನು ಚಾಕ್ಷುಷ-ಮನ್ವಂತರ ಚರಿತ್ರವನ್ನು ಕೀರ್ತನಮಾಡುವನೋ ಅವನು ಪುತ್ರಸಂಪತ್ತಿಯನ್ನು ಹೊಂದುತ್ತಾನೆ. ಮತ್ತು ಉತ್ತಮವಾದ ಆರೋಗ್ಯಭಾಗ್ಯವನ್ನು ಪಡೆಯುತ್ತಾನೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತಮೂರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುಸ್ಸಪ್ತತಿತಮೋऽಧ್ಯಾಯಃ

(ವೈವಸ್ವತಮನ್ವಂತರೇ ವೈವಸ್ವತಮನೂತ್ಪತ್ತಿಃ)

ಮಾರ್ಕಣ್ಡೇಯ ಉವಾಚ :—

ಮಾರ್ತಣ್ಡಸ್ಯ ರವೇರ್ಭಾರ್ಯಾ ತನಯಾ ವಿಶ್ವಕರ್ಮಣಃ ।
ಸಞ್ಜ್ಞಾ ನಾಮ ಮಹಾಭಾಗ ತಸ್ಯಾಂ ಭಾನುರಜೀಜನತ್ ||೧||

ಮನುಂ ಪ್ರಖ್ಯಾತಯಶಸಮನೇಕಜ್ಞಾನಪಾರಗಮ್ ।
ವಿವಸ್ವತಃ ಸುತೋ ಯಸ್ಮಾತ್ ತಸ್ಮಾದ್ವೈವಸ್ವತಸ್ತು ಸಃ ||೨||

ಎಪ್ಪತ್ತನಾಲ್ಕನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ವಿಶ್ವಕರ್ಮನ ಪುತ್ರಿಯಾದ ಸಂಜ್ಞಾ ಎಂಬ ನಾಮಾಂಕಿತಳಾದ ಅಂಗನೆಯು ಮಾರ್ತಂಡ ಎಂದು ಕರೆಯಲ್ಪಡುವ ಸೂರ್ಯನ ಪತ್ನಿಯಾಗಿದ್ದಳು. ಮಹಾಭಾಗನಾದ ಕ್ರೌಷ್ಟುಕಿಯೇ! ಅವಳಲ್ಲಿ ಸೂರ್ಯನು ಮನುವನ್ನು ಪುತ್ರನನ್ನಾಗಿ ಹೊಂದಿದನು.

೨. ಸೂರ್ಯಪುತ್ರನಾಗಿ ಜನಿಸಿದ ಮನುವು ಪ್ರಖ್ಯಾತವಾದ ಕೀರ್ತಿಯುಳ್ಳವನೂ ಅನೇಕ ಜ್ಞಾನಪಾರಂಗತನೂ ಆಗಿದ್ದನು. ಅವನು ವಿವಸ್ವಾನ್ ಎಂದು ಕರೆಯಲ್ಪಡುವ ಸೂರ್ಯನ ಪುತ್ರನಾದುದರಿಂದ ವೈವಸ್ವತ ಎಂದು ನಾಮಾಂಕನವನ್ನು ಪಡೆದನು.

ಸಞ್ಜ್ಞಾ ಚ ರವಿಣಾ ದೃಷ್ಟ್ವಾ ನಿಮೀಲಯತಿ ಲೋಚನೇ ।
ಯತಸ್ತತಃ ಸರೋಷೋಽರ್ಕಃ ಸಞ್ಜ್ಞಾಂ ನಿಷ್ಠುರಮಬ್ರವೀತ್ ॥೩॥

ಮಯಿ ದೃಷ್ಟೇ ಸದಾ ಯಸ್ಮಾತ್ಕುರುಷೇ ನೇತ್ರಸಂಯಮಮ್ ।
ತಸ್ಮಾಜ್ಜನಿಷ್ಯಸೇ ಮೂಢೇ ಪ್ರಜಾಸಂಯಮನಂ ಯಮಮ್ ॥೪॥

ಮಾರ್ಕಣ್ಡೇಯ ಉವಾಚ :—

ತತಃ ಸಾ ಚಪಲಾಂ ದೃಷ್ಟಿಂ ದೇವೀ ಚಕ್ರೇ ಭಯಾಕುಲಾ ।
ವಿಲೋಲಿತದೃಶಂ ದೃಷ್ಟ್ವಾ ಪುನರಾಹ ಚ ತಾಂ ರವಿಃ ॥೫॥

ಯಸ್ಮಾದ್ವಿಲೋಲಿತಾ ದೃಷ್ಟಿರ್ಮಯಿ ದೃಷ್ಟೇ ತ್ವಯಾಧುನಾ ।
ತಸ್ಮಾದ್ವಿಲೋಲಾಂ ತನಯಾಂ ನದೀಂ ತ್ವಂ ಪ್ರಸವಿಷ್ಯಸಿ ॥೬॥

---

೩. ಒಂದು ಸಮಯದಲ್ಲಿ ಸೂರ್ಯನು ತನ್ನ ಸತಿಯಾದ ಸಂಜ್ಞೆಯನ್ನು ನೋಡುತ್ತಿರುವಾಗ ಆಕೆಯು ಕಣ್ಣನ್ನು ಮುಚ್ಚಿಕೊಳ್ಳುತ್ತಿದ್ದುದನ್ನು ಕಂಡನು. ಆ ಕಾರಣದಿಂದ ಕೋಪಗೊಂಡಿರುವ ಸೂರ್ಯನು ಸಂಜ್ಞಾದೇವಿಯನ್ನು ಕುರಿತು ನಿಷ್ಠುರವಾಗಿ ಹೇಳಿದನು.

೪. ಮೂಢಳೇ! ನನ್ನನ್ನು ನೋಡಿದಾಗ ಎಲ್ಲ ನೀನು ಯಾವ ಕಾರಣದಿಂದ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತೀಯೋ ಆ ಕಾರಣದಿಂದ ಪ್ರಜೆಗಳನ್ನು ಮೃತ್ಯುವಿನಿಂದ ಮುಚ್ಚಿಹಾಕುವ ಯಮನನ್ನು ಪುತ್ರನನ್ನಾಗಿ ಹೊಂದುತ್ತೀಯೆ.

ಮಾರ್ಕಂಡೇಯ ಮುನಿಯು ಹೇಳಿದನು :—

೫. ತರುವಾಯ ಸಂಜ್ಞಾದೇವಿಯು ಪತಿಯಲ್ಲಿ ಭಯಪಟ್ಟವಳಾಗಿ ಚಂಚಲದೃಷ್ಟಿಯನ್ನು ಇಡುವವಳಾದಳು. ಆಗಲೂ ಚಂಚಲದೃಷ್ಟಿಯನ್ನಿಡುತ್ತಿರುವ ಸಂಜ್ಞೆಯನ್ನು ಕುರಿತು ಮತ್ತೆ ಸೂರ್ಯನು ಇಂತೆಂದನು.

೬. ಯಾವ ಕಾರಣದಿಂದ ನನ್ನನ್ನು ಕಂಡಾಗ ನೀನೀಗ ದೃಷ್ಟಿಯನ್ನು ಚಂಚಲವನ್ನಾಗಿ ಮಾಡಿದೆಯೋ ಆ ಕಾರಣದಿಂದ ನೀನು ಚಂಚಲಸ್ವಭಾವದ ನದಿಯನ್ನು ಪುತ್ರಿಯನ್ನಾಗಿ ಪ್ರಸವಿಸುತ್ತೀಯೆ.

ಮಾರ್ಕಣ್ಡೇಯ ಉವಾಚ :—

ತತಸ್ತಸ್ಯಾಂ ತು ಸಞ್ಜಜ್ಞೇ ಭರ್ತೃಶಾಪೇನ ತೇನ ವೈ ।
ಯಮಶ್ಚ ಯಮುನಾ ಚೇಯಂ ಪ್ರಖ್ಯಾತಾ ಸುಮಹಾನದೀ ॥೭॥

ಸಾಪಿ ಸಞ್ಜ್ಞಾ ರವೇಸ್ತೇಜಃ ಸೇಹೇ ದುಃಖೇನ ಭಾಮಿನೀ ।
ಅಸಹನ್ತೀ ಚ ಸಾ ತೇಜಶ್ಚಿನ್ತಯಾಮಾಸ ವೈ ತದಾ ॥೮॥

ಕಿಂ ಕರೋಮಿ ಕ್ವ ಗಚ್ಛಾಮಿ ಕ್ವ ಗತಾಯಾಶ್ಚ ನಿರ್ವೃತಿಃ ।
ಭವೇನ್ಮಮ ಕಥಂ ಭರ್ತಾ ಕೋಪಮರ್ಕಶ್ಚ ನೈಷ್ಯತಿ ॥೯॥

ಇತಿ ಸಞ್ಚಿನ್ತ್ಯ ಬಹುಧಾ ಪ್ರಜಾಪತಿಸುತಾ ತದಾ ।
ಬಹುಮೇನೇ ಮಹಾಭಾಗಾ ಪಿತೃಸಂಶ್ರಯಮೇವ ಸಾ ॥೧೦॥

ಮಾರ್ಕಂಡೇಯ ಮುನಿಯು ಇಂತೆಂದನು :—

೭. ಅನಂತರದಲ್ಲಿ ಹೀಗೆ ಸಂಜ್ಞಾದೇವಿಗೆ ಉಂಟಾದ ಪತಿಯ ಶಾಪ-ನಿಮಿತ್ತದಿಂದ ಅವಳಲ್ಲಿ ಯಮನೂ ಮತ್ತು ಪ್ರಖ್ಯಾತಿಹೊಂದಿದ ಮಹಾನದಿ-ಯಾದ ಯಮುನೆಯೂ ಜನಿಸಿದರು.

೮. ಮಾನಿನಿಯಾದ ಆ ಸಂಜ್ಞಾದೇವಿಯು ಪತಿಯಾದ ಸೂರ್ಯನ ತೇಜಸ್ಸನ್ನು ಬಹಳ ಕಷ್ಟದಿಂದ ಸಹಿಸಬೇಕಾಯಿತು. ಆದರೂ ಅವಳು ಆ ತೇಜಃಪುಂಜವನ್ನು ನೋಡಿ ಸಹಿಸಲಾರದೆ ಆಗ ಮುಂದೇನು ಮಾಡುವುದೆಂದು ಚಿಂತಿಸಿದಳು.

೯. ನಾನೇನು ಮಾಡಲಿ? ಎಲ್ಲಿಗೆ ಹೋಗಲಿ? ಎಲ್ಲಿಗೆ ಹೋದರೆ ನನಗೆ ಸುಖವಾದೀತು? ಮತ್ತು ಪತಿಯಾದ ಸೂರ್ಯದೇವನು ನನ್ನಲ್ಲಿ ಕೋಪ ಮಾಡದಂತಾಗುವುದು ಹೇಗೆ? ಎಂದು ನಾನಾಬಗೆಯಾಗಿ ಚಿಂತಿಸಿದಳು.

೧೦. ವಿಶ್ವಕರ್ಮಪ್ರಜಾಪತಿಯ ಪುತ್ರಿಯಾದ ಸಂಜ್ಞಾದೇವಿಯು ಹೀಗೆ ನಾನಾಬಗೆಯಾಗಿ ಚಿಂತಿಸಿ ಆಗ ಕಡೆಯಲ್ಲಿ ಮಹಾಭಾಗ್ಯಶಾಲಿನಿಯಾದ ಆಕೆಯು ತಂದೆಯ ಬಳಿಗೆ ಹೋಗುವುದನ್ನು ಉತ್ತಮವೆಂದು ನಿರ್ಣಯಿಸಿದಳು.

ತತಃ ಪಿತೃಗೃಹಂ ಗನ್ತುಂ ಕೃತಬುದ್ಧಿರ್ಯಶಸ್ವಿನೀ ।
ಛಾಯಾಮಯೀಮಾತ್ಮತನುಂ ನಿರ್ಮಮೇ ದಯಿತಾಂ ರವೇಃ ॥೧೧॥

ತಾಂ ಚೋವಾಚ ತ್ವಯಾ ವೇಶ್ಮನ್ಯಸ್ಮಿನ್ ಭಾನೋರ್ಯಥಾ ಮಯಾ।
ತಥಾ ಸಮ್ಯಗಪತ್ಯೇಷು ವರ್ತಿತವ್ಯಂ ಯಥಾ ರವೌ ॥೧೨॥

ಪೃಷ್ಟಯಾಪಿ ನ ವಾಚ್ಯಂ ತೇ ತಥೈತದ್ಗಮನಂ ಮಮ ।
ಸೈವಾಸ್ಮಿ ನಾಮ ಸಙ್ಜ್ಞೇತಿ ವಾಚ್ಯಮೇತತ್ಸದಾ ವಚಃ ॥೧೩॥

ಛಾಯಾಸಂಜ್ಞೋವಾಚ :—

ಆ ಕೇಶಗ್ರಹಣಾದ್ದೇವಿ ಆ ಶಾಪಾಚ್ಚ ವಚಸ್ತವ ।
ಕರಿಷ್ಯೇ ಕಥಯಿಷ್ಯಾಮಿ ವೃತ್ತಂ ತು ಶಾಪಕರ್ಷಣಾತ್ ॥೧೪॥

---

೧೧. ತರುವಾಯ ತಂದೆಯ ಮನೆಗೆ ಹೋಗಲು ನಿರ್ಣಯವನ್ನು ಮಾಡಿರುವವಳೂ ಕೀರ್ತಿಶಾಲಿನಿಯೂ ಆದ ಸಂಜ್ಞೆಯು ಸೂರ್ಯನ ಪ್ರಿಯೆ-ಯನ್ನಾಗಿ ಇರಿಸಲು ತನ್ನ ದೇಹದ ಛಾಯಾಮಯವಾದ ಮೂರ್ತಿಯನ್ನು ನಿರ್ಮಿಸಿದಳು.

೧೨. ಮತ್ತು ಛಾಯೆಗೆ ಈ ರೀತಿಯಾಗಿ ಹೇಳಿದಳು—ನೀನು ಈ ಮನೆಯಲ್ಲಿ ಪತಿಯಾದ ಸೂರ್ಯನ ವಿಷಯದಲ್ಲಿ ನಾನಿದ್ದಂತೆ ಇರಬೇಕು. ಮತ್ತು ಸೂರ್ಯನಲ್ಲಿ ಪ್ರೀತಿಯನ್ನು ತೋರಿಸುತ್ತಿರುವಂತೆ ಮಕ್ಕಳಲ್ಲಿ ಚನ್ನಾಗಿ ಪ್ರೀತಿ-ಯನ್ನಿಟ್ಟಿರಬೇಕು.

೧೩. ಮತ್ತು ಸೂರ್ಯನಿಂದ ನೀನು ಪ್ರಶ್ನಿಸಲ್ಪಟ್ಟರೂ ನಾನು ಹೊರಟು ಹೋದುದನ್ನು ಅವನಲ್ಲಿ ಹೇಳಬಾರದು. ಯಾವಾಗಲೂ ನಾನು ಅದೇ ಸಂಜ್ಞೆಯಾಗಿರುವೆನಲ್ಲ ಎಂಬ ಮಾತನ್ನು ಆಡುತ್ತಿರಬೇಕು. ಎಂದು ಹೇಳಿದಳು.

ಛಾಯಾ ಸಂಜ್ಞೆಯು ಹೇಳಿದಳು :—

೧೪. ದೇವಿಯೇ! ಮುಡಿಹಿಡಿಯುವ ಪ್ರಸಂಗ ಅಥವಾ ಶಾಪ ಪ್ರಸಂಗಗಳು ಬರುವವರೆಗೂ ನೀನು ಹೇಳಿದಂತೆ ನಿಜವನ್ನು ಮರೆಮಾಚಿ ಮಾತ-ನಾಡುತ್ತೇನೆ. ಆದರೆ ಮುಡಿಹಿಡಿದೆಳೆಯುವ ಅಥವಾ ಶಾಪಪ್ರಸಂಗಗಳಲ್ಲಿ ನಿಜ-ವನ್ನು ಹೇಳುವೆನು.

ಇತ್ಯುಕ್ತ್ವಾ ಸಾ ತದಾ ದೇವೀ ಜಗಾಮ ಭವನಂ ಪಿತುಃ ।
ದದರ್ಶ ತತ್ರ ತ್ವಷ್ಟಾರಂ ತಪಸಾ ಧೂತಕಲ್ಮಷಮ್ ॥೧೫॥

ಬಹುಮಾನಾಚ್ಚ ತೇನಾಪಿ ಪೂಜಿತಾ ವಿಶ್ವಕರ್ಮಣಾ ।
ತಸ್ಥೌ ಪಿತೃಗೃಹೇ ಸಾ ತು ಕಂಚಿತ್ಕಾಲಮನಿನ್ದಿತಾ ॥೧೬॥

ತತಸ್ತಾಂ ಪ್ರಾಹ ಚಾರ್ವಙ್ಗೀಂ ಪಿತಾ ನಾತಿಚಿರೋಷಿತಾಮ್ ।
ಸ್ತುತ್ವಾ ಚ ತನಯಾಂ ಪ್ರೇಮಬಹುಮಾನಪುರಸ್ಸರಮ್ ॥೧೭॥

ತ್ವಾಂ ತು ಮೇ ಪಶ್ಯತೋ ವತ್ಸೇ ದಿನಾನಿ ಸುಬಹೂನ್ಯಪಿ ।
ಮುಹೂರ್ತಾರ್ಧಸಮಾನಿ ಸ್ಯುಃ ಕಿನ್ತು ಧರ್ಮೋ ವಿಲುಪ್ಯತೇ ॥೧೮॥

---

೧೫. ಛಾಯಾ ಸಂಜ್ಞೆಯಿಂದ ಹೀಗೆ ಹೇಳಲ್ಪಟ್ಟಿರುವ ಸಂಜ್ಞಾದೇವಿಯು ತಂದೆಯ ಮನೆಗೆ ಹೊರಟು ಹೋದಳು. ಅಲ್ಲಿ ತಪೋಬಲದಿಂದ ದೂರ ತೊಲಗಿಸಿದ ಸಮಸ್ತ ಕಲಂಕವುಳ್ಳ ತಷ್ಟೃ ಪ್ರಜಾಪತಿಯನ್ನು ಕಂಡಳು.

೧೬. ನಿಂದಾಸ್ಪದಳಲ್ಲದ ಆ ಸಂಜ್ಞಾದೇವಿಯು ತಂದೆಯಾದ ವಿಶ್ವಕರ್ಮನಿಂದ ಸತ್ಕರಿಸಲ್ಪಟ್ಟವಳಾಗಿ ತಂದೆಯ ಮನೆಯಲ್ಲಿ ಕೆಲವು ಕಾಲ ವಾಸಮಾಡಿಕೊಂಡಿದ್ದಳು.

೧೭. ತರುವಾಯ ತಂದೆಯಾದ ವಿಶ್ವಕರ್ಮನು ತನ್ನ ಮನೆಯಲ್ಲಿ ದೀರ್ಘಕಾಲ ವಾಸಮಾಡಿರುವವಳೂ, ಸುಂದರವಾದ ಅವಯವವುಳ್ಳವಳೂ ಮತ್ತು ಮಗಳೂ ಆದ ಸಂಜ್ಞೆಯನ್ನು ಕುರಿತು ಪ್ರೇಮ—ಬಹುಮಾನಪೂರ್ವಕವಾಗಿ ಗೌರವಿಸುತ್ತ ಮಾತನಾಡಿದನು.

೧೮. ಮಗಳೇ! ಇಲ್ಲಿ ನಿನ್ನನ್ನು ವಾತ್ಸಲ್ಯದಿಂದ ನೋಡುತ್ತಲಿದ್ದ ನನಗೆ ಅನೇಕದಿನಗಳು ಕಳೆದರೂ ಅರ್ಧಮುಹೂರ್ತಕಾಲವು ಮಾತ್ರ ಕಳೆದಂತೆ ಭಾಸವಾಗುವುದು. ಆದ್ದರಿಂದ ಇನ್ನೂ ನೀನು ಇಲ್ಲಿರುವುದು ನನಗೆ ಇಷ್ಟವು. ಆದರೆ ಧರ್ಮವು ಲೋಪವಾಗುವುದು.

ಬಾನ್ಧವೇಷು ಚಿರಂ ವಾಸೋ ನಾರೀಣಾಂ ನ ಯಶಸ್ಕರಃ ।
ಮನೋರಥೋ ಬಾನ್ಧವಾನಾಂ ನಾರ್ಯಾ ಭರ್ತೃಗೃಹೇ ಸ್ಥಿತಿಃ॥೧೯॥

ಸಾ ತ್ವಂ ತ್ರೈಲೋಕ್ಯನಾಥೇನ ಭರ್ತ್ರಾ ಸೂರ್ಯೇಣ ಸಙ್ಗತಾ ।
ಪಿತೃಗೇಹೇ ಚಿರಂ ಕಾಲಂ ವಸ್ತುಂ ನಾರ್ಹಸಿ ಪುತ್ರಿಕೇ ॥೨೦॥

ಸಾ ತ್ವಂ ಭರ್ತೃಗೃಹಂ ಗಚ್ಛ ತುಷ್ಟೋಽಹಂ ಪೂಜಿತಾಸಿ ಮೇ ।
ಪುನರಾಗಮನಂ ಕಾರ್ಯಂ ದರ್ಶನಾಯ ಶುಭೇ ಮಮ ॥೨೧॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತಾ ಸಾ ತದಾ ಪಿತ್ರಾ ತಥೇತ್ಯುಕ್ತ್ವಾ ಚ ಸಾ ಮುನೇ ।
ಸಂಪೂಜಯಿತ್ವಾ ಪಿತರಂ ಜಗಾಮಾಥೋತ್ತರಾನ್ ಕುರೂನ್ ॥೨೨॥

---

೧೯. ನಾರಿಯರಿಗೆ ಇತರ ಬಾಂಧವಜನರ ಮನೆಯಲ್ಲಿ ದೀರ್ಘಕಾಲ ವಾಸಮಾಡುವುದು ಶ್ರೇಷ್ಠವೆನಿಸುವುದಿಲ್ಲ. ಬಾಂಧವರಿಗೆ ನಾರಿಯು ಪತಿಗೃಹದಲ್ಲಿ ಇರಬೇಕೆಂಬುದು ಇಷ್ಟವಾಗಿರುವುದು.

೨೦. ಪುತ್ರಿಯೇ ! ನೀನು ತ್ರಿಲೋಕಗಳಿಗೆ ಅಧಿಪತಿಯಾದ ಸೂರ್ಯದೇವನೆಂಬ ಪತಿಯೊಡನೆ ಭಾರ್ಯೆಯಾಗಿ ಸೇರಿದ್ದೀಯೆ. ಇಂತಹ ನಿನಗೆ ತಂದೆಯ ಮನೆಯಲ್ಲಿ ಹೆಚ್ಚು ಕಾಲದ ವರೆಗೆ ವಾಸಮಾಡುತ್ತಿರುವುದು ಯೋಗ್ಯವಲ್ಲ.

೨೧. ಆದ್ದರಿಂದ ಮಹಾಭಾಗ್ಯಶಾಲಿನಿಯಾದ ನೀನು ಪತಿಗೃಹಕ್ಕೆ ಹೋಗು. ವಾತ್ಸಲ್ಯದಿಂದ ನಾನು ನಿನ್ನನ್ನು ಸತ್ಕರಿಸಿರುವೆನು. ಮಂಗಳಕರಳೇ ! ಮತ್ತೊಮ್ಮೆ ನನ್ನನ್ನು ನೋಡಲು ನೀನು ಇಲ್ಲಿಗೆ ಬರಬೇಕು.

ಮಾರ್ಕಂಡೇಯ ಮುನಿಯು ಹೇಳಿದನು :—

೨೨. ಆಗ ತಂದೆಯಿಂದ ಹೀಗೆ ಬೋಧಿಸಲ್ಪಟ್ಟ ಮಗಳಾದ ಸಂಜ್ಞಾದೇವಿಯು ಹಾಗಾಗಲಿ ಎಂದು ತಂದೆಗೆ ಹೇಳಿ ತಂದೆಯನ್ನು ಭಕ್ತಿಯಿಂದ ಗೌರವಿಸಿ ಅಲ್ಲಿಂದ ಉತ್ತರಕುರು ಪ್ರದೇಶಕ್ಕೆ ಹೋದಳು.

ಸೂರ್ಯತಾಪಮನಿಚ್ಛನ್ತೀ ತೇಜಸಸ್ತಸ್ಯ ಬಿಭ್ಯತೀ ।
ತಪಶ್ಚಚಾರ ತತ್ರಾಪಿ ವಡವಾರೂಪಧಾರಿಣೀ ॥೨೩॥

ಸಞ್ಜ್ಞೇಯಮಿತಿ ಮನ್ವಾನೋ ದ್ವಿತೀಯಾಯಾಮಹಸ್ಪತಿಃ ।
ಜನಯಾಮಾಸ ತನಯೌ ಕನ್ಯಾಂ ಚೈಕಾಂ ಮನೋರಮಾಮ್॥೨೪॥

ಛಾಯಾಸಞ್ಜ್ಞಾ ತ್ವಪತ್ಯೇಷು ಯಥಾ ಸ್ವೇಷ್ವತಿವತ್ಸಲಾ ।
ತಥಾ ನ ಸಞ್ಜ್ಞಾಕನ್ಯಾಯಾಂ ಪುತ್ರಯೋಶ್ಚಾನ್ವವರ್ತತ ॥೨೫॥

ಲಾಲನಾದ್ಯುಪಭೋಗೇಷು ವಿಶ್ಲೇಷಮನುವಾಸರಮ್ ।
ಮನುಸ್ತತ್ಕ್ಷಾನ್ತವಾನಸ್ಯಾ ಯಮಸ್ತಸ್ಯಾ ನ ಚಕ್ಷಮೇ ॥೨೬॥

---

೨೩. ಸಂಜ್ಞಾದೇವಿಯು ಸೂರ್ಯನಲ್ಲಿರುವ ತಾಪವನ್ನು ಸಹಿಸದವಳಾದಳು. ಮತ್ತು ಅವನ ತೇಜಃಪುಂಜವನ್ನು ನೋಡಲು ಭಯಪಡುತ್ತಿದ್ದಳು. ಆದ್ದರಿಂದ ಪತಿಗೃಹಕ್ಕೆ ಹೋಗದೆ ಉತ್ತರ ಕುರುಕ್ಷೇತ್ರದಲ್ಲಿ ಕುದುರೆಯ ರೂಪವನ್ನು ಧರಿಸಿ ತಪಸ್ಸನ್ನು ಮಾಡಿದಳು.

೨೪. ಇತ್ತ ದಿನಾಧಿಪತಿಯಾದ ಸೂರ್ಯನು ಛಾಯಾಸಂಜ್ಞೆಯನ್ನು ನಿಜವಾದ ಸಂಜ್ಞೆಯೆಂದು ಅರಿತು ಅವಳ ಸಂಗಡ ಪ್ರೀತಿಯಿಂದಿದ್ದು ಇಬ್ಬರು ಪುತ್ರರನ್ನೂ ಒಬ್ಬಳು ಸುಂದರಿಯಾದ ಕನ್ಯೆಯನ್ನೂ ಅವಳಲ್ಲಿ ಹೊಂದಿದನು.

೨೫. ಛಾಯಾಸಂಜ್ಞೆಯು ತನ್ನ ಮಕ್ಕಳಲ್ಲಿ ಹೇಗೆ ಹೆಚ್ಚು ವಾತ್ಸಲ್ಯವುಳ್ಳವಳಾಗಿದ್ದಳೋ ಹಾಗೆ ಸಂಜ್ಞಾದೇವಿಯ ಮಕ್ಕಳಾದ ವೈವಸ್ವತ, ಯಮ ಮತ್ತು ಯಮುನೆಯರಲ್ಲಿ ವಿಶೇಷ ವಾತ್ಸಲ್ಯದಿಂದ ವರ್ತಿಸಲಿಲ್ಲ.

೨೬. ಸಂಜ್ಞಾದೇವಿಯ ಮಕ್ಕಳಲ್ಲಿ ಆಡಿಸುವುದು, ವಿನೋದಪಡಿಸುವುದು ಮುಂತಾದ ಪುತ್ರಭೋಗಗಳ ವಿಷಯದಲ್ಲಿ ಪ್ರತಿದಿನವೂ ವಿಳಂಬ ಮಾಡುತ್ತಿದ್ದಳು. ಇವಳ ವರ್ತನೆಯನ್ನು ಮನುವು ಸಹಿಸಿಕೊಂಡನು. ಆದರೆ ಯಮನು ಇವಳ ನಡತೆಯನ್ನು ಸಹಿಸಲಿಲ್ಲ.

ತಾಡನಾಯ ಚ ವೈ ಕೋಪಾತ್ಪಾದಸ್ತೇನ ಸಮುದ್ಯತಃ ।
ತಸ್ಯಾಃ ಪುನಃ ಕ್ಷಾನ್ತಿಮತಾ ನ ತು ದೇಹೇ ನಿಪಾತಿತಃ ॥೨೭॥

ತತಃ ಶಶಾಪ ತಂ ಕೋಪಾಚ್ಛಾಯಾಸಂಜ್ಞಾ ಯಮಂ ದ್ವಿಜ ।
ಕಿಂಚಿತ್ಪ್ರಸ್ಫುರಮಾಣೌಷ್ಠೀ ವಿಚಲತ್ಪಾಣಿಪಲ್ಲವಾ ॥೨೮॥

ಪಿತುಃ ಪತ್ನೀಮಮರ್ಯಾದಂ ಯನ್ಮಾಂ ತರ್ಜಯಸೇ ಪದಾ ।
ಭುವಿ ತಸ್ಮಾದಯಂ ಪಾದಸ್ತವಾದ್ಯೈವ ಪತಿಷ್ಯತಿ ॥೨೯॥

ಮಾರ್ಕಣ್ಡೇಯ ಉವಾಚ :—

ಇತ್ಯಾಕರ್ಣ್ಯ ಯಮಃ ಶಾಪಂ ಮಾತ್ರಾ ದತ್ತಂ ಭಯಾತುರಃ ।
ಅಭ್ಯೇತ್ಯ ಪಿತರಂ ಪ್ರಾಹ ಪ್ರಣಿಪಾತಪುರಃಸರಮ್ ॥೩೦॥

---

೨೭. ಯಮನಿಂದ ಆಕೆಯನ್ನು ಒದೆಯಲು ಕೋಪದಿಂದ ಕಾಲು ಎತ್ತಲ್ಪಟ್ಟಿತು. ಆದರೆ ಅಷ್ಟರಲ್ಲಿ ವಿವೇಕದಿಂದ ಸಮಾಧಾನವನ್ನು ಹೊಂದಿ ಎತ್ತಿದ ಕಾಲನ್ನು ಆಕೆಯ ದೇಹಕ್ಕೆ ತಗುಲಿಸಲಿಲ್ಲ.

೨೮. ಕ್ರೌಷ್ಟುಕಿಮುನಿಯೇ ! ಛಾಯಾಸಂಜ್ಞೆಯು ಯಮನ ಆ ಕೃತ್ಯದಿಂದ ಕೋಪಗೊಂಡು ಸ್ವಲ್ಪ ಚಲಿಸುತ್ತಿದ್ದ ತುಟಿಯುಳ್ಳವಳೂ ಹಾಗೆ ಬೀಸುತ್ತಿರುವ ಚಿಗುರಿನಂತೆ ಕೋಮಲವಾದ ಕೈಗಳಿಂದ ಕೂಡಿದವಳೂ ಆಗಿ ಯಮನಿಗೆ ಶಾಪವಿತ್ತಳು.

೨೯. ತಂದೆಯಲ್ಲಿ ಭಕ್ತಿಯಿಂದ ವರ್ತಿಸುವ ಪತ್ನಿಯಾದ ನನ್ನನ್ನು ಮರ್ಯಾದೆಯನ್ನುಲ್ಲಂಘಿಸಿ ಕಾಲೆತ್ತಿ ಬೆದರಿಸುತ್ತಿರುವೆಯಲ್ಲವೆ ! ಈ ಕಾರಣದಿಂದ ಇಂದೇ ಈ ನಿನ್ನ ಪಾದವು ನೆಲಕ್ಕೆ ಬೀಳುವುದು ಹೀಗೆಂದು ಶಪಿಸಿದಳು.

ಮಾರ್ಕಂಡೇಯ ಮುನಿಯು ಹೇಳಿದನು :—

೩೦. ಯಮನು ತಾಯಿಯು ಕೋಪದಿಂದ ಹೀಗೆ ಶಾಪವಿತ್ತುದನ್ನು ಕೇಳಿ ಭಯದಿಂದ ನಡುಗುತ್ತ ತಂದೆಯ ಬಳಿಗೆ ಬಂದು ಭಕ್ತಿಯಿಂದ ತಂದೆಗೆ ಪ್ರಣಾಮಮಾಡುತ್ತ ಹೇಳಿದನು.

ಯಮ ಉವಾಚ :—

ತಾತೈತನ್ಮಹದಾಶ್ಚರ್ಯಂ ನ ದೃಷ್ಟಮಿತಿ ಕೇನ ಚಿತ್ ।
ಮಾತಾ ವಾತ್ಸಲ್ಯಮುತ್ಸೃಜ್ಯ ಶಾಪಂ ಪುತ್ರೇ ಪ್ರಯಚ್ಛತಿ ॥೩೧॥

ಯಥಾ ಮನುರ್ಮಮಾಚಷ್ಟೇ ನೇಯಂ ಮಾತಾ ತಥಾ ಮಮ ।
ವಿಗುಣೇಷ್ವಪಿ ಪುತ್ರೇಷು ನ ಮಾತಾ ವಿಗುಣಾ ಭವೇತ್ ॥೩೨॥

ಮಾರ್ಕಣ್ಡೇಯ ಉವಾಚ :—

ಯಮಸ್ಯೈತದ್ವಚಃ ಶ್ರುತ್ವಾ ಭಗವಾಂಸ್ತಿಮಿರಾಪಹಃ ।
ಛಾಯಾಸಞ್ಜ್ಞಾಂ ಸಮಾಹೂಯ ಪಪ್ರಚ್ಛ ಕ್ವ ಗತೇತಿ ಸಾ ॥೩೩॥

ಸಾ ಚಾಹ ತನಯಾ ತ್ವಷ್ಟುರಹಂ ಸಞ್ಜ್ಞಾ ವಿಭಾವಸೋ ।
ಪತ್ನೀ ತವ ತ್ವಯಾಪತ್ಯಾನ್ಯೇತಾನಿ ಜನಿತಾನಿ ಮೇ ॥೩೪॥

ಯಮನು ಹೇಳಿದನು :—

೩೧. ಪಿತನೇ! ಇದೊಂದು ಮಹತ್ತಾದ ಆಶ್ಚರ್ಯಕರವಾದ ಸಂಗತಿಯು. ಇದನ್ನು ಯಾರೂ ಎಲ್ಲಿಯೂ ನೋಡಿಲ್ಲ. ತಾಯಿಯು ವಾತ್ಸಲ್ಯವನ್ನು ಬಿಟ್ಟು ಪುತ್ರನಿಗೆ ಶಾಪವನ್ನು ಕೊಡುವುದು ಅದ್ಭುತವು.

೩೨. ಇವಳು ನನ್ನ ತಾಯಿಯಲ್ಲವೆಂದು ನನಗೆ ಮನುವು ಆಗಾಗ ಹೇಳುತ್ತಿರುವನು. ನನಗೂ ಹಾಗೆಯೇ ತೋರುವುದು. ಪುತ್ರರು ನಿರ್ಗುಣರಾದರೂ ಅವರ ವಿಷಯದಲ್ಲಿ ಜನನಿಯು ಮಕ್ಕಳನ್ನು ತೊರೆಯುವಂತೆ ನಿರ್ಗುಣಳಾಗುವುದಿಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :—

೩೩. ಅಂಧಕಾರವನ್ನು ಧ್ವಂಸಮಾಡುವ ಪೂಜ್ಯನಾದ ಸೂರ್ಯದೇವನು ಯಮನು ಆಡಿದ ಈ ವಚನವನ್ನು ಕೇಳಿ ಛಾಯಾಸಂಜ್ಞೆಯನ್ನು ಕರೆದು "ಪ್ರಿಯೆಯಾದ ಸಂಜ್ಞೆಯು ಎಲ್ಲಿಗೆ ಹೋದಳು" ಎಂದು ಪ್ರಶ್ನಿಸಿದನು.

೩೪. ಆಗ ಛಾಯಾಸಂಜ್ಞೆಯು ಪ್ರತ್ಯುತ್ತರವಿತ್ತಳು—ಪತಿಯಾದ ಸೂರ್ಯದೇವನೇ! ತ್ವಷ್ಟೃಪ್ರಜಾಪತಿಯ ಪುತ್ರಿಯಾದ ಸಂಜ್ಞೆಯು ನಾನೇ ಅಲ್ಲವೇ! ನಾನೇ ನಿನ್ನ ಪತ್ನಿಯು! ನಿನ್ನಿಂದ ನನ್ನಲ್ಲಿ ಈ ಪುತ್ರರು ಜನಿಸಿರುವರು.

ಇತ್ಥಂ ವಿವಸ್ವತಃ ಸಾ ತು ಬಹುಶಃ ಪೃಚ್ಛತೋ ಯದಾ ।
ನಾಚಚಕ್ಷೇ ತತಃ ಕ್ರುದ್ಧೋ ಭಾಸ್ವಾಂಸ್ತಾಂ ಶಪ್ತುಮುದ್ಯತಃ ॥೩೫॥

ತತಃ ಸಾ ಕಥಯಾಮಾಸ ಯಥಾವೃತ್ತಂ ವಿವಸ್ವತಃ ।
ವಿದಿತಾರ್ಥಶ್ಚ ಭಗವಾಞ್ಜಗಾಮ ತ್ವಷ್ಟುರಾಲಯಮ್ ॥೩೬॥

ತತಃ ಸ ಪೂಜಯಾಮಾಸ ತದಾ ತ್ರೈಲೋಕ್ಯಪೂಜಿತಮ್ ।
ಭಾಸ್ವನ್ತಂ ಪರಯಾ ಭಕ್ತ್ಯಾ ನಿಜಗೇಹಮುಪಾಗತಮ್ ॥೩೭॥

ಸಞ್ಜ್ಞಾಂ ಪೃಷ್ಟಸ್ತದಾ ತಸ್ಮೈ ಕಥಯಾಮಾಸ ವಿಶ್ವಕೃತ್ ।
ಆಗತ್ಯೈವೇಹ ಮೇ ವೇಶ್ಮ ಭವತಃ ಪ್ರೇಷಿತೇತಿ ವೈ ॥೩೮॥

---

೩೫. ಹೀಗೆ ಸೂರ್ಯದೇವನು ಅನೇಕ ಸಲ ಪ್ರಶ್ನಿಸಿದರೂ ಯಾವಾಗ ಛಾಯಾಸಂಜ್ಞೆಯು ನಿಜಸ್ಥಿತಿಯನ್ನು ಹೇಳಲಿಲ್ಲವೋ ಆಗ ಸೂರ್ಯನು ಕೋಪಗೊಂಡು ಅವಳಿಗೆ ಶಾಪವನ್ನು ಕೊಡಲು ಸಿದ್ಧನಾದನು.

೩೬. ತರುವಾಯ ಸಂಜ್ಞಾದೇವಿಯು ಸೂರ್ಯದೇವನಿಗೆ ಶಾಪಭಯದಿಂದ ಎಲ್ಲ ವಿಷಯವನ್ನು ಹೇಳಿದಳು. ಆಮೇಲೆ ಸಂಪೂರ್ಣ ಸಂಗತಿಯನ್ನು ಅರಿತ ಭಗವಂತನಾದ ಸೂರ್ಯದೇವನು ಕೂಡಲೆ ತ್ವಷ್ಟೃಪ್ರಜಾಪತಿಯ ಮನೆಗೆ ಹೋದನು.

೩೭. ಆಗ ತ್ವಷ್ಟೃಪ್ರಜಾಪತಿಯು ತನ್ನ ಮನೆಗೆ ಬಂದಿರುವ, ಮೂರು ಲೋಕಗಳಿಗೆ ಪೂಜ್ಯನಾದ ಸೂರ್ಯನನ್ನು ಅತಿಶಯವಾದ ಭಕ್ತಿಯಿಂದ ಸತ್ಕಾರ ಮಾಡಿದನು.

೩೮. ಆಗ ಸೂರ್ಯದೇವನು ಸಂಜ್ಞಾದೇವಿಯ ವಿಷಯವನ್ನು ಪ್ರಸ್ತಾಪಿಸಲಾಗಿ ತ್ವಷ್ಟೃಪ್ರಜಾಪತಿಯು ನಿನ್ನಿಂದ ಕಳುಹಿಸಲ್ಪಟ್ಟಿರುವೆನೆಂದು ಹೇಳಿ ಸಂಜ್ಞೆಯು ನನ್ನ ಮನೆಗೆ ಬಂದಿದ್ದಳು. ಇಲ್ಲಿಂದ ಮತ್ತೆ ನಿನ್ನ ಬಳಿಗೆ ಕಳುಹಿಸಲ್ಪಟ್ಟಿರುವಳೆಂದು ಸೂರ್ಯನಿಗೆ ಹೇಳಿದನು.

ದಿವಾಕರಃ ಸಮಾಧಿಸ್ಥೋ ವಡವಾರೂಪಧಾರಿಣೀಮ್ ।
ತಪಶ್ಚರನ್ತೀಂ ದದೃಶೇ ಉತ್ತರೇಷು ಕುರುಷ್ವಥ ॥೩೯॥

ಸೌಮ್ಯಮೂರ್ತಿಃ ಶುಭಾಕಾರೋ ಮಮ ಭರ್ತಾ ಭವೇದಿತಿ ।
ಅಭಿಸನ್ಧಿಶ್ಚ ಬುಬುಧೇ ತಪಸೋಽಸ್ಯಾ ದಿವಾಕರಃ ॥೪೦॥

ಶಾತನಂ ತೇಜಸೋ ಮೇಽದ್ಯ ಕ್ರಿಯತಾಮಿತಿ ಭಾಸ್ಕರಃ ।
ತಂ ಚಾಹ ವಿಶ್ವಕರ್ಮಾಣಂ ಸಞ್ಜ್ಞಾಯಾಃ ಪಿತರಂ ದ್ವಿಜ ॥೪೧॥

ಸಂವತ್ಸರಭ್ರಮೇಸ್ತಸ್ಯ ವಿಶ್ವಕರ್ಮಾ ರವೇಸ್ತತಃ ।
ತೇಜಸಃ ಶಾತನಂ ಚಕ್ರೇ ಸ್ತೂಯಮಾನಶ್ಚ ದೈವತೈಃ ॥೪೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ವೈವಸ್ವತಮನ್ವನ್ತರೇ
ಚತುಃಸಪ್ತತಿತಮೋಽಧ್ಯಾಯಃ

---

೩೯. ಆಗ ಸೂರ್ಯದೇವನು ಧ್ಯಾನದೃಷ್ಟಿಯನ್ನು ಅವಲಂಬಿಸಿದವನಾಗಿ ಉತ್ತರ ಕುರುಪ್ರದೇಶದಲ್ಲಿ ಸಂಜ್ಞಾದೇವಿಯು ಕುದುರೆಯ ರೂಪವನ್ನು ತೆಗೆದುಕೊಂಡು ತಪಸ್ಸುಮಾಡುತ್ತಿರುವಂತೆ ಕಂಡನು.

೪೦. ಮತ್ತು ತನ್ನ ಪತಿಯು ಸೌಮ್ಯವಾದ ಮೂರ್ತಿಯುಳ್ಳವನೂ, ಕಲ್ಯಾಣಮಯವಾದ ಆಕಾರವುಳ್ಳವನೂ ಆಗಲೆಂದು ತಪವನ್ನು ಕೈಗೊಂಡಿರುವ ಸಂಜ್ಞೆಯಲ್ಲಿದ್ದ ಉದ್ದೇಶವನ್ನೂ ಸೂರ್ಯನು ಧ್ಯಾನದೃಷ್ಟಿಯಿಂದ ಅರಿತನು.

೪೧. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಸೂರ್ಯನು ಸಂಜ್ಞಾದೇವಿಯ ತಂದೆಯಾದ ವಿಶ್ವಕರ್ಮನನ್ನು ಕುರಿತು ತನ್ನ ಬಿಂಬವನ್ನು ಸಾಣೆಹಿಡಿದು ತೇಜಸ್ಸನ್ನು ಕ್ಷಯಗೊಳಿಸೆಂದು ಕೇಳಿಕೊಂಡನು.

೪೨. ತರುವಾಯ ವಿಶ್ವಕರ್ಮಬ್ರಹ್ಮನು ಬಿಂಬವನ್ನು ಒಂದು ವರ್ಷಕಾಲ ತನ್ನ ಚಕ್ರದಲ್ಲಿಟ್ಟು ತಿರುಗಿಸಿ ದೇವತೆಗಳಿಂದ ಸ್ತುತಿಸಲ್ಪಡುತ್ತ ಸೂರ್ಯನ ತೇಜಃಪುಂಜವನ್ನು ಕ್ಷಯಗೊಳಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಂಚಸಪ್ತತಿತಮೋಽಧ್ಯಾಯಃ

(ಸೂರ್ಯಸ್ತೋತ್ರ- ಅಶ್ವಿನೀಕುಮಾರೋತ್ಪತ್ತ್ಯಾದಿಕಮ್)

ಮಾರ್ಕಣ್ಡೇಯ ಉವಾಚ :—

ತತಸ್ತಂ ತುಷ್ಟುವುರ್ದೇವಾಸ್ತಥಾ ದೇವರ್ಷಯೋ ರವಿಮ್ ।
ವಾಗ್ಭಿರೀಡ್ಯಮಶೇಷಸ್ಯ ತ್ರೈಲೋಕ್ಯಸ್ಯ ಸಮಾಗತಾಃ ॥೧॥

ದೇವಾ ಊಚುಃ :—

ನಮಸ್ತೇ ಋಕ್ಸ್ವರೂಪಾಯ ಸಾಮರೂಪಾಯ ತೇ ನಮಃ ।
ಯಜುಃಸ್ವರೂಪರೂಪಾಯ ಸಾಮ್ನಾಂ ಧಾಮವತೇ ನಮಃ ॥೨॥

ಎಪ್ಪತ್ತೈದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಅನಂತರದಲ್ಲಿ ಅಲ್ಲಿಗೆ ಬಂದು ಸೇರಿದ ದೇವತೆ-ದೇವರ್ಷಿ ಮುಂತಾದವರು ಸಮಸ್ತ ತ್ರೈಲೋಕ್ಯಕ್ಕೆ ಪೂಜ್ಯನಾಗಿರುವ ಸೂರ್ಯಪರಮಾತ್ಮನನ್ನು ಸ್ತುತಿವಚನಗಳನ್ನು ಹೇಳಿ ಕೊಂಡಾಡಿದರು.

ದೇವತೆಗಳು ಹೀಗೆ ಸ್ತುತಿಮಾಡಿದರು :—

೨. ಋಙ್ಮಂತ್ರಸ್ವರೂಪಿಯಾದ ನಿನಗೆ ನಮಸ್ಕಾರವು. ಸಾಮಗಾನರೂಪಿಯಾದ ನಿನಗೆ ನಮಸ್ಕಾರವು. ಯಜುರ್ವೇದಸ್ವರೂಪವನ್ನು ಹೊಂದಿದ ರೂಪವಂತನಾದ ನಿನಗೆ ನಮಸ್ಕಾರವು. ಮತ್ತು ಸಾಮವೇದ ಮಂತ್ರಗಳ ಆಶ್ರಯನಾದ ನಿನಗೆ ನಮಸ್ಕಾರವು.

ಜ್ಞಾನೈಕಧಾಮಭೂತಾಯ ನಿರ್ಧೂತತಮಸೇ ನಮಃ ।
ಶುದ್ಧಜ್ಯೋತಿಃಸ್ವರೂಪಾಯ ವಿಶುದ್ಧಾಯಾಮಲಾತ್ಮನೇ ॥೩॥

ಚಕ್ರಿಣೇ ಶಙ್ಖಿನೇ ಧಾಮ್ನೇ ಶಾರ್ಙ್ಗಿಣೇ ಪದ್ಮಿನೇ ನಮಃ ।
ವರಿಷ್ಠಾಯ ವರೇಣ್ಯಾಯ ಪರಸ್ಮೈ ಪರಮಾತ್ಮನೇ ॥೪॥

ನಮೋಽಖಿಲಜಗದ್ವ್ಯಾಪಿಸ್ವರೂಪಾಯಾತ್ಮಮೂರ್ತಯೇ ।
ಸರ್ವಕಾರಣಭೂತಾಯ ನಿಷ್ಠಾಯೈ ಜ್ಞಾನಚೇತಸಾಮ್ ॥೫॥

ನಮಃ ಸೂರ್ಯಸ್ವರೂಪಾಯ ಪ್ರಕಾಶಾತ್ಮಸ್ವರೂಪಿಣೇ ।
ಭಾಸ್ಕರಾಯ ನಮಸ್ತುಭ್ಯಂ ತಥಾ ದಿನಕೃತೇ ನಮಃ ॥೬॥

---

೩. ಜ್ಞಾನಕ್ಕೆ ಏಕಮಾತ್ರ ಆಧಾರಸ್ವರೂಪನೂ, ದೂರಮಾಡಿದ ಅಂಧಕಾರವುಳ್ಳವನೂ, ನಿಷ್ಕಲಂಕವಾದ ಜ್ಯೋತಿಯ ರೂಪವುಳ್ಳವನೂ, ವಿಶುದ್ಧಸ್ವರೂಪನೂ ಮತ್ತು ನಿರ್ಮಲವಾದ ಆತ್ಮವುಳ್ಳವನೂ ಆದ ನಿನಗೆ ವಂದನೆಯು.

೪. ಮತ್ತು ಶಂಖ, ಚಕ್ರ, ಶಾರ್ಙ್ಗ ಮತ್ತು ಪದ್ಮವೆಂಬ ಉಪಕರಣಗಳನ್ನು ಚತುರ್ಭುಜಗಳಲ್ಲಿ ಧರಿಸಿರುವ ನಾರಾಯಣಸ್ವರೂಪಿಯೂ, ತೇಜಃಪುಂಜಕ್ಕೆ ಆಸ್ಪದನೂ, ಸರ್ವೋತ್ತಮನೂ, ಸರ್ವರಿಂದ ಪ್ರಾರ್ಥನೀಯನೂ, ಕಾರಣಸ್ವರೂಪನೂ ಮತ್ತು ಪರಮಾತ್ಮನೂ ಆದ ನಿನಗೆ ನಮಸ್ಕಾರವು.

೫. ಅಖಿಲ ಜಗತ್ತನ್ನು ವ್ಯಾಪಿಸಿದ ಸ್ವರೂಪವುಳ್ಳವನೂ, ಸರ್ವ ಪ್ರಾಣಿಗಳಿಗೆ ಆತ್ಮಮೂರ್ತಿಯೂ, ಸರ್ವ ವಸ್ತುಗಳಿಗೆ ಕಾರಣಸ್ವರೂಪನೂ ಮತ್ತು ಜ್ಞಾನಮಾರ್ಗತತ್ಪರವಾದ ಅಂತಃಕರಣವುಳ್ಳವರಿಗೆ ನಿಷ್ಠಾರೂಪಿಯೂ ಆದ ನಿನಗೆ ವಂದನೆಯು.

೬. ಸೂರ್ಯದೇವನ ಸ್ವರೂಪಿಯಾದ ಪರಮಾತ್ಮನಿಗೆ ನಮಸ್ಕಾರವು. ಪ್ರಕಾಶಮಯವಾದ ಆತ್ಮರೂಪಿಗೆ ನಮಸ್ಕಾರವು. ಲೋಕದಲ್ಲಿ ಬೆಳಕನ್ನು ಕೊಡುವವನಿಗೆ ನಮಸ್ಕಾರವು. ಮತ್ತು ಹಗಲಿನ ನಿರ್ಮಾಣಕ್ಕೆ ಕಾರಣನಾದವನಿಗೆ ನಮಸ್ಕಾರವು.

ಶರ್ವರೀಹೇತವೇ ಚೈವ ಸನ್ಧ್ಯಾಜ್ಯೋತ್ಸ್ನಾಕೃತೇ ನಮಃ ||೭||

ತ್ವಂ ಸರ್ವಮೇತದ್ಭಗವನ್ ಜಗದುದ್ಭ್ರಮತಾ ತ್ವಯಾ ।
ಭ್ರಮತ್ಯಾವಿದ್ಧಮಖಿಲಂ ಬ್ರಹ್ಮಾಣ್ಡಂ ಸಚರಾಚರಮ್ ||೮||

ತ್ವದಂಶುಭಿರಿದಂ ಸ್ಪೃಷ್ಟಂ ಸರ್ವಂ ಸಂಜಾಯತೇ ಶುಚಿ ।
ಕ್ರಿಯತೇ ತ್ವತ್ಕರೈಃ ಸ್ಪರ್ಶಾಜ್ಜಲಾದೀನಾಂ ಪವಿತ್ರತಾ ||೯||

ಹೋಮದಾನಾದಿಕೋ ಧರ್ಮೋ ನೋಪಕಾರಾಯ ಜಾಯತೇ ।
ತಾವದ್ಯಾವನ್ನ ಸಂಯೋಗಿ ಜಗದೇತತ್ತ್ವದಂಶುಭಿಃ ||೧೦||

ಋಚಸ್ತೇ ಸಕಲಾ ಹ್ಯೇತಾ ಯಜೂಂಷ್ಯೇತಾನಿ ಚಾನ್ಯತಃ ।
ಸಕಲಾನಿ ಚ ಸಾಮಾನಿ ನಿಪತನ್ತಿ ತ್ವದಙ್ಗತಃ ||೧೧||

---

೭. ಅಸ್ತಮಯಹೊಂದಿ ರಾತ್ರಿಯ ಪ್ರಸರಣಿಗೆ ಕಾರಣನೂ, ಸಂಧ್ಯಾ-ಸಮಯದ ಆವಿರ್ಭಾವಕ್ಕೆ ಕಾರಣನೂ ಮತ್ತು ಬೆಳದಿಂಗಳಿನ ಪ್ರಕಾಶಕ್ಕೆ ಕಾರಣನೂ ಆದ ನಿನಗೆ ವಂದನೆಯು.

೮. ಪೂಜ್ಯನಾದ ಸೂರ್ಯದೇವನೇ! ನೀನು ಸರ್ವಾತ್ಮಕನಾಗಿದ್ದೀಯೆ. ನೀನು ಸುತ್ತುತ್ತಿರುವ ಹಾಗೆ ನಿನ್ನಿಂದ ವ್ಯಾಪಿಸಲ್ಪಟ್ಟ ಚರ-ಅಚರ ಪ್ರಾಣಿವರ್ಗ-ದಿಂದ ತುಂಬಿದ ಸಕಲ ಬ್ರಹ್ಮಾಂಡವು ಭ್ರಮಿಸುತ್ತಿರುವುದು.

೯. ನಿನ್ನ ಕಿರಣಗಳ ಸ್ಪರ್ಶವನ್ನು ಹೊಂದಿದ ಸಮಸ್ತ ವಸ್ತುಪ್ರಪಂಚವು ಶುಚಿಯಾಗುವುದು. ಮತ್ತು ನಿನ್ನ ಕಿರಣಗಳ ಸ್ಪರ್ಶದಿಂದ ಜಲ ಮುಂತಾದ ತತ್ತ್ವಗಳಿಗೆ ಪವಿತ್ರತೆಯು ಉಂಟಾಗುವುದು.

೧೦. ಎದುವರೆಗೆ ನೀನು ಉದಯಿಸಿ ನಿನ್ನ ಕಿರಣಗಳಿಂದ ಜಗತ್ತು ಸ್ಪರ್ಶಹೊಂದುವುದಿಲ್ಲವೊ ಅದುವರೆಗೆ ದಾನ–ಹೋಮ ಮುಂತಾದ ಧರ್ಮದ ಆಚರಣೆಯು ತನ್ನ ಫಲವನ್ನು ಕೊಟ್ಟು ಉಪಕಾರಮಾಡುವುದಿಲ್ಲ.

೧೧. ಸಮಸ್ತ ಋಙ್ಮಂತ್ರಗಳು, ಎಲ್ಲ ಯಜುರ್ವೇದವಾಕ್ಯಗಳು ಮತ್ತು ಸಕಲ ಸಾಮಮಂತ್ರಗಳು ನಿನ್ನ ಮೂರ್ತಿಯಲ್ಲಿ ಆಯಾಯ ಭಾಗಗಳಿಂದ ಆವಿರ್ಭವಿಸುವುವು.

ಋಙ್ಮಯಸ್ತ್ವಂ ಜಗನ್ನಾಥ ತ್ವಮೇವ ಚ ಯಜುರ್ಮಯಃ ।
ಯತಃ ಸಾಮಮಯಶ್ಚೈವ ತತೋ ನಾಥ ತ್ರಯೀಮಯಃ ॥೧೨॥

ತ್ವಮೇವ ಬ್ರಹ್ಮಣೋ ರೂಪಂ ಪರಂ ಚಾಪರಮೇವ ಚ ।
ಮೂರ್ತಾಮೂರ್ತಸ್ತಥಾ ಸೂಕ್ಷ್ಮಃ ಸ್ಥೂಲರೂಪಸ್ತಥಾ ಸ್ಥಿತಃ ॥೧೩॥

ನಿಮೇಷಕಾಷ್ಠಾದಿಮಯಃ ಕಾಲರೂಪಃ ಕ್ಷಯಾತ್ಮಕಃ ।
ಪ್ರಸೀದ ಸ್ವೇಚ್ಛಯಾ ರೂಪಂ ಸ್ವತೇಜಃಶಮನಂ ಕುರು ॥೧೪॥

ಇದಂ ಸ್ತೋತ್ರವರಂ ರಮ್ಯಂ ಶ್ರೋತವ್ಯಂ ಶ್ರದ್ಧಯಾ ನರೈಃ ।
ಶಿಷ್ಯೋ ಭೂತ್ವಾ ಸಮಾಧಿಸ್ಥೋ ದತ್ವಾ ದೇಯಂ ಗುರೋರಪಿ ॥೧೫॥

---

೧೨. ಜಗನ್ನಾಥನಾದ ಸೂರ್ಯದೇವನೇ! ನೀನು ಋಙ್ಮಂತ್ರ-ಸ್ವರೂಪನಾಗಿದ್ದೀಯೆ. ಯಜುರ್ವೇದಸ್ವರೂಪನಾಗಿದ್ದೀಯೆ. ಮತ್ತು ನೀನೇ ಸಾಮವೇದಸ್ವರೂಪನಾಗಿದ್ದೀಯೆ. ಆದುದರಿಂದ ನೀನು ವೇದತ್ರಯಸ್ವರೂಪ ನಾಗಿರುವೆ.

೧೩. ಪರ ಮತ್ತು ಅಪರ ಎಂಬ ಬ್ರಹ್ಮವಸ್ತುವಿನ ಎರಡು ರೂಪಗಳು ನೀನೇ ಆಗಿದ್ದೀಯೆ. ಜಗತ್ತಿನಲ್ಲಿರುವ ಮೂರ್ತ-ಅಮೂರ್ತ ಅಥವಾ ಸ್ಥೂಲ-ಸೂಕ್ಷ್ಮ ಎಂಬೀ ಬಗೆಯ ವಸ್ತುಗಳು ನೀನೇ ಆಗಿದ್ದೀಯೆ.

೧೪. ಕಾಷ್ಠಾ-ನಿಮೇಷ ಮುಂತಾದ ಕಾಲವಿಭಾಗರೂಪನಾದ ನೀನು ಜಗತ್ತನ್ನು ಪರಿವರ್ತಿಸಿ ಕ್ಷಯಗೊಳಿಸುವವನಾಗಿದ್ದೀಯೆ. ನೀನು ಪ್ರಸನ್ನನಾಗು. ನಿನ್ನ ಸ್ವಸಂಕಲ್ಪದಿಂದ ನಿನ್ನ ತೇಜಸ್ಸನ್ನು ಶಮನಮಾಡು.

೧೫. ಗುರುಸನ್ನಿಧಿಯಲ್ಲಿ ವೇದಾಧ್ಯಯನಮಾಡಿ ಗುರುವಿಗೆ ಗುರು-ದಕ್ಷಿಣೆಯನ್ನು ಕೊಟ್ಟು ಕೃತಾರ್ಥನಾದ ಮಾನವನು ಏಕಾಗ್ರಚಿತ್ತದಿಂದ ಧ್ಯಾನಿಸಬೇಕು ಮತ್ತು ರಮ್ಯವಾದ ಈ ಸ್ತೋತ್ರವನ್ನು ಮಾನವರು ಶ್ರದ್ಧೆಯಿಂದ ಕೇಳಬೇಕು.

ಮಾರ್ಕಣ್ಡೇಯ ಉವಾಚ :—

ಏವಂ ಸಂಸ್ತೂಯಮಾನಸ್ತು ದೇವೈರ್ದೇವರ್ಷಿಭಿಸ್ತಥಾ ।
ಮುಮೋಚ ಸ್ವಂ ತದಾ ತೇಜಸ್ತೇಜಸಾಂ ರಾಶಿರವ್ಯಯಃ ॥೧೬॥

ಯತ್ತಸ್ಯ ಋಙ್ಮಯಂ ತೇಜೋ ಭವಿತಾ ತೇನ ಮೇದಿನೀ ।
ಯಜುರ್ಮಯೇನಾಪಿ ದಿವಂ ಸ್ವರ್ಗಃ ಸಾಮಮಯಂ ರವೇಃ ॥೧೭॥

ಶಾತಿತಾಸ್ತೇಜಸೋ ಭಾಗಾ ಯೇ ತ್ವಷ್ಟ್ರಾ ದಶ ಪಞ್ಚ ಚ ।
ತ್ವಷ್ಟ್ರೈವ ತೇನ ಶರ್ವಸ್ಯ ಕೃತಂ ಶೂಲಂ ಮಹಾತ್ಮನಾ ॥೧೮॥

ಚಕ್ರಂ ವಿಷ್ಣೋರ್ವಸೂನಾಂ ಚ ಶಙ್ಕವೋಽಥ ಸುದಾರುಣಾಃ ।
ಪಾವಕಸ್ಯ ತಥಾ ಶಕ್ತಿಃ ಶಿಬಿಕಾ ಧನದಸ್ಯ ಚ ॥೧೯॥

ಮಾರ್ಕಂಡೇಯ ಮುನಿಯು ಹೇಳಿದನು :—

೧೬. ದೇವತೆಗಳು ಮತ್ತು ದೇವರ್ಷಿಗಳಿಂದ ಹೀಗೆ ಸ್ತುತಿಸಲ್ಪಡುತ್ತಿದ್ದವನೂ, ನಾಶವಿಲ್ಲದವನೂ ಮತ್ತು ತೇಜಸ್ಸುಗಳ ರಾಶಿಯೂ ಆದ ಸೂರ್ಯನು ಆಗ ತನ್ನ ತೇಜಸ್ಸನ್ನು ಕಳೆದುಕೊಂಡು ಶಾಂತನಾದನು.

೧೭. ಆ ಸೂರ್ಯದೇವನಲ್ಲಿದ್ದ ಋಙ್ಮಂತ್ರಮಯವಾದ ತೇಜಸ್ಸಿನಿಂದ ಮರ್ತ್ಯಲೋಕವುಂಟಾಗುವುದು. ಯಜುರ್ಮಯವಾದ ತೇಜಸ್ಸಿನಿಂದ ದ್ಯುಲೋಕವು ಜನಿಸುವುದು. ಹಾಗು ಸಾಮಮಯವಾದ ತೇಜಸ್ಸಿನಿಂದ ಸ್ವರ್ಗಲೋಕವು ಸಂಭವಿಸುವುದು.

೧೮. ತ್ವಷ್ಟೃಪ್ರಜಾಪತಿಯಿಂದ ಸೂರ್ಯಬಿಂಬದಿಂದ ಯಾವ ಹದಿನೈದು ಭಾಗಗಳು ತೆಗೆಯಲ್ಪಟ್ಟುವೋ ಆ ಭಾಗಗಳಿಂದ ಮಹಾತ್ಮನಾದ ತ್ವಷ್ಟೃ ಬ್ರಹ್ಮನೇ ಈಶ್ವರನ ಶೂಲವನ್ನು ನಿರ್ಮಾಣಮಾಡಿದನು.

೧೯. ಮತ್ತು ವಿಷ್ಣುವಿನ ಚಕ್ರಾಯುಧವನ್ನೂ, ವಸುದೇವತೆಗಳ ಭಯಂಕರವಾದ ಶಂಕು ಆಯುಧವನ್ನೂ, ಅಗ್ನಿದೇವನ ಶಕ್ತಿ ಆಯುಧವನ್ನೂ ಮತ್ತು ಕುಬೇರನ ಶಿಬಿಕಾ (ಪಲ್ಲಕ್ಕಿ) ಯಾನವನ್ನೂ ನಿರ್ಮಿಸಿದನು.

ಅನ್ಯೇಷಾಮಸುರಾರೀಣಾಮಸ್ತ್ರಾಣ್ಯುಗ್ರಾಣಿ ಯಾನಿ ವೈ ।
ಯಕ್ಷವಿದ್ಯಾಧರಾಣಾಂ ಚ ತಾನಿ ಚಕ್ರೇ ಸ ವಿಶ್ವಕೃತ್ ॥೨೦॥

ಏತತ್ತ ಷೋಡಶಂ ಭಾಗಂ ಬಿಭರ್ತಿ ಭಗವಾನ್ವಿಭುಃ ।
ತತ್ತೇಜಃ ಪಞ್ಚದಶಧಾ ಶಾತಿತಂ ವಿಶ್ವಕರ್ಮಣಾ ॥೨೧॥

ತತೋಽಶ್ವರೂಪಧೃಗ್ಭಾನುರುತ್ತರಾನಗಮತ್ಕುರೂನ್ ।
ದದೃಶೇ ತತ್ರ ಸಞ್ಜ್ಞಾಂ ಚ ವಡವಾರೂಪಧಾರಿಣೀಮ್ ॥೨೨॥

ಸಾ ಚ ದೃಷ್ಟ್ವಾ ತಮಾಯಾನ್ತಂ ಪರಪುಂಸೋ ವಿಶಙ್ಕಯಾ ।
ಜಗಾಮ ಸಂಮುಖಂ ತಸ್ಯ ಪೃಷ್ಠರಕ್ಷಣತತ್ಪರಾ ॥೨೩॥

---

೨೦. ಹಾಗು ಇತರ ದೇವತೆಗಳಲ್ಲಿ, ಮತ್ತು ಯಕ್ಷ-ವಿದ್ಯಾಧರರಲ್ಲಿ ಇರುವ ಉಗ್ರವಾದ ಎಲ್ಲ ಅಸ್ತ್ರಗಳನ್ನು ವಿಶ್ವಕರ್ಮನು ಸೂರ್ಯನ ತೇಜಸ್ಸಿನ ಅಂಶಗಳಿಂದ ನಿರ್ಮಿಸಿದನು.

೨೧. ತರುವಾಯ ಪೂಜ್ಯನೂ, ಸರ್ವಲೋಕಕಾರಣನೂ ಆದ ಸೂರ್ಯನು ಹದಿನಾರನೆಯ ಒಂದು ಭಾಗದಷ್ಟು ಮಾತ್ರ ತೇಜಸ್ಸನ್ನು ಧರಿಸಿರುವನು. ವಿಶ್ವಕರ್ಮನಿಂದ ಸೂರ್ಯನ ಮಿಕ್ಕ ಹದಿನೈದು ಭಾಗ ತೇಜಸ್ಸಿನ ಅಂಶಗಳು ಕಡಿಮೆ ಮಾಡಲ್ಪಟ್ಟುವು.

೨೨. ಅನಂತರದಲ್ಲಿ ಸೂರ್ಯನು ಕುದುರೆಯ ರೂಪವನ್ನು ಧರಿಸಿಕೊಂಡು ಉತ್ತರ ಕುರುಪ್ರದೇಶಕ್ಕೆ ಹೋದನು. ಮತ್ತು ಅಲ್ಲಿ ಹೆಣ್ಣು ಕುದುರೆಯ ರೂಪದಿಂದಿರುವ ಸಂಜ್ಞಾದೇವಿಯನ್ನು ಕಂಡನು.

೨೩. ಆಗ ಸಂಜ್ಞಾದೇವಿಯು ತನ್ನ ಬಳಿಗೆ ಬರುತ್ತಿದ್ದ ಕುದುರೆಯನ್ನು ನೋಡಿ ಪರಪುರುಷನು ಬರುತ್ತಿರುವನೆಂಬ ಶಂಕೆಯಿಂದ ಪೃಷ್ಠಭಾಗವನ್ನು ರಕ್ಷಿಸುತ್ತ ಗಂಡುಕುದುರೆಗೆ ಸಂಮುಖವಾಗಿ ತಾನು ಹೋಯಿತು.

ತತಶ್ಚ ನಾಸಿಕಾಯೋಗಂ ತಯೋಸ್ತತ್ರ ಸಮೇತಯೋಃ ।
ನಾಸತ್ಯದಸ್ರೌ ತನಯಾವಶ್ವೀವಕ್ತ್ರವಿನಿರ್ಗತೌ ॥೨೪॥

ರೇತಸೋಽನ್ತೇ ಚ ರೇವನ್ತಃ ಖಡ್ಗೀ ಚರ್ಮೀ ತನುತ್ರಧೃಕ್ ।
ಅಶ್ವಾರೂಢಃ ಸಮುದ್ಭೂತೋ ಬಾಣತೂಣಸಮನ್ವಿತಃ ॥೨೫॥

ತತಃ ಸ್ವರೂಪಮತುಲಂ ದರ್ಶಯಾಮಾಸ ಭಾನುಮಾನ್ ।
ತಸ್ಯೈಷಾ ಚ ಸಮಾಲೋಕ್ಯ ಸ್ವರೂಪಂ ಮುದಮಾದದೇ ॥೨೬॥

ಸ್ವರೂಪಧಾರಿಣೀಂ ಚೇಮಾಮಾನಿನಾಯ ನಿಜಾಶ್ರಮಮ್ ।
ಸಞ್ಜ್ಞಾಂ ಭಾರ್ಯಾಂ ಪ್ರೀತಿಮತೀಂ ಭಾಸ್ಕರೋ ವಾರಿತಸ್ಕರಃ ॥೨೭॥

---

೨೪. ತರುವಾಯ ಅಲ್ಲಿ ಎರಡು ಕುದುರೆಗಳು ಮೂಗಿನ ಭಾಗದಲ್ಲಿ ಅನ್ಯೋನ್ಯ ಸಂಗವನ್ನು ಹೊಂದಲಾಗಿ ಹೆಣ್ಣು ಕುದುರೆಯ ಮುಖದಿಂದ ನಾಸತ್ಯ-ದಸ್ರ ಎಂದು ಕರೆಯಲ್ಪಡುವ ಇಬ್ಬರು ಕುಮಾರರು ಜನಿಸಿದರು.

೨೫. ಮತ್ತು ರೇತೋವಿಸರ್ಗದ ಕಡೆಯಲ್ಲಿ ಖಡ್ಗ-ಚರ್ಮ-ಕವಚಗಳನ್ನು ಧರಿಸಿದವನೂ, ಕುದುರೆಯನ್ನು ಏರಿದವನೂ, ಬಾಣ-ಬತ್ತಳಿಕೆಗಳಿಂದ ಕೂಡಿದವನೂ ಮತ್ತು ರೇವಂತನೆಂಬ ನಾಮಾಂಕಿತನೂ ಆದ ಕುಮಾರನು ಜನಿಸಿದನು.

೨೬. ತರುವಾಯ ಸೂರ್ಯದೇವನು ನಿರುಪಮವಾದ ತನ್ನ ನಿಜರೂಪವನ್ನು ಸಂಜ್ಞೆಗೆ ತೋರಿಸಿದನು. ಸಂಜ್ಞಾದೇವಿಯು ಸೂರ್ಯನ ಆಗಿನ ಆ ರೂಪವನ್ನು ನೋಡಿ ಸಂತೋಷವನ್ನು ಅನುಭವಿಸಿದಳು.

೨೭. ಆಮೇಲೆ ಬಿಸಿಲಿನಿಂದ ನೀರನ್ನು ಬತ್ತಿಸುವ ಶಕ್ತಿಯನ್ನು ಹೊಂದಿದವನೂ, ಲೋಕವನ್ನು ಬೆಳಗುವವನೂ ಆದ ಸೂರ್ಯನು ಪ್ರೀತಿಯುಳ್ಳವಳಾಗಿ ನಿಜರೂಪವನ್ನು ಧರಿಸಿದ ಸಂಜ್ಞಾದೇವಿಯನ್ನು ತನ್ನ ಆಶ್ರಮಕ್ಕೆ ಕರೆತಂದನು.

ತತಃ ಪೂರ್ವಸುತೋ ಯೋಽಸ್ಯಾಃ ಸೋಽಭೂದ್ವೈವಸ್ವತೋ ಮನುಃ ।
ದ್ವಿತೀಯಶ್ಚ ಯಮಃ ಶಾಪಾದ್ಧರ್ಮದೃಷ್ಟಿರಭೂತ್ಸುತಃ ॥೨೮॥

ಕೃಮಯೋ ಮಾಂಸಮಾದಾಯ ಪಾದತೋಽಸ್ಯ ಮಹೀತಲೇ ।
ಪತಿಷ್ಯನ್ತೀತಿ ಶಾಪಾನ್ತಂ ತಸ್ಯ ಚಕ್ರೇ ಪಿತಾ ಸ್ವಯಮ್ ॥೨೯॥

ಧರ್ಮದೃಷ್ಟಿರ್ಯತಶ್ಚಾಸೌ ಸಮೋ ಮಿತ್ರೇ ತಥಾಹಿತೇ ।
ತತೋ ನಿಯೋಗಂ ತಂ ಯಾಮ್ಯೇ ಚಕಾರ ತಿಮಿರಾಪಹಃ ॥೩೦॥

ಯಮುನಾ ಚ ನದೀ ಜಜ್ಞೇ ಕಲಿನ್ದಾನ್ತರವಾಹಿನೀ ।
ಅಶ್ವಿನೌ ದೇವಭಿಷಜೌ ಕೃತೌ ಪಿತ್ರಾ ಮಹಾತ್ಮನಾ ॥೩೧॥

---

೨೮. ಅನಂತರ ಈ ಸಂಜ್ಞಾದೇವಿಯಲ್ಲಿ ಜನಿಸಿದ ಮೊದಲನೆಯ ಪುತ್ರನು ವೈವಸ್ವತಮನುವಾದನು. ದ್ವಿತೀಯ ಪುತ್ರನಾದ ಯಮನು ಶಾಪಕ್ಕೆ ಭಾಗಿಯಾದುದರಿಂದ ಧರ್ಮ ಮಾತ್ರ ದೃಷ್ಟಿಯುಳ್ಳವನಾದನು.

೨೯. ಆಗ ತಂದೆಯು ತನ್ನ ಪುತ್ರನಿಗೆ ಬಂದೊದಗಿದ ಶಾಪಕ್ಕೆ ಇವನ ಪಾದದಿಂದ ಮಾಂಸವನ್ನು ತೆಗೆದುಕೊಂಡು ಕ್ರಿಮಿಗಳು ನೆಲಕ್ಕೆ ಬೀಳುವುವು" ಎಂದು ಅನುಗ್ರಹಿಸಿ ಪರಿಹಾರವನ್ನು ಮಾಡಿದನು.

೩೦. ಯಾವ ಕಾರಣದಿಂದ ಧರ್ಮದಲ್ಲಿ ದೃಷ್ಟಿಯುಳ್ಳ ಯಮಕುಮಾರನು ಶತ್ರು-ಮಿತ್ರರಲ್ಲಿ ಸಮದೃಷ್ಟಿಯಿಂದ ವರ್ತಿಸಿದನೊ ಆ ಕಾರಣದಿಂದ ಅಂಧಕಾರಶತ್ರುವಾದ ಸೂರ್ಯನು ಅವನನ್ನು ಯಮಪದದಲ್ಲಿ ಇರುವಂತೆ ನಿಯೋಗ ಕೊಟ್ಟನು.

೩೧. ಯಮುನೆಯು ಕಲಿಂದಗಿರಿಯ ನಡುವೆ ಪ್ರವಹಿಸುವ ಮಹಾನದಿಯಾಗಿ ಉದ್ಭವಿಸಿತು. ಅಶ್ವಿನೀಕುಮಾರರಿಬ್ಬರು ಮಹಾತ್ಮನಾದ ತಂದೆಯಿಂದ ದೇವಲೋಕದ ವೈದ್ಯರಾಗಿ ನಿಯಮಿಸಲ್ಪಟ್ಟರು.

ಗುಹ್ಯಕಾಧಿಪತಿತ್ವೇ ಚ ರೇವನ್ತೋಽಪಿ ನಿಯೋಜಿತಃ ।
ಛಾಯಾಸಞ್ಜ್ಞಾಸುತಾನಾಂ ಚ ನಿಯೋಗಃ ಶ್ರೂಯತಾಂ ಮಮ ॥೩೨॥

ಪೂರ್ವಜಸ್ಯ ಮನೋಸ್ತುಲ್ಯಶ್ಛಾಯಾಸಞ್ಜ್ಞಾಸುತೋಽಗ್ರಜಃ ।
ತತಃ ಸಾವರ್ಣಿಕೀಂ ಸಞ್ಜ್ಞಾಮವಾಪ ತನಯೋ ರವೇಃ ॥೩೩॥

ಭವಿಷ್ಯತಿ ಮನುಃ ಸೋಽಪಿ ಬಲಿರಿನ್ದ್ರೋ ಯದಾ ತದಾ ।
ಶನೈಶ್ಚರೋ ಗ್ರಹಾಣಾಂ ಚ ಮಧ್ಯೇ ಪಿತ್ರಾ ನಿಯೋಜಿತಃ ॥೩೪॥

ತಯೋಸ್ತೃತೀಯಾ ಕನ್ಯಾ ತು ತಪತೀ ನಾಮ ಸಾ ಕುರುಮ್ ।
ನೃಪಾತ್ಸಂವರಣಾತ್ಪುತ್ರಮವಾಪ ಮನುಜೇಶ್ವರಮ್ ॥೩೫॥

---

೩೨. ರೇವಂತಕುಮಾರನು ಗುಹ್ಯಕವೆಂಬ ದೇವಯೋನಿಜರಿಗೆ ಅಧಿಪತಿಯಾಗಿ ಇರಿಸಲ್ಪಟ್ಟನು. ಇನ್ನು ಮುಂದೆ ಛಾಯಾಸಂಜ್ಞೆಯಲ್ಲಿ ಜನಿಸಿದ ಪುತ್ರರಲ್ಲಿ ಮಾಡಿದ ನಿಯೋಗವನ್ನು ಕೇಳು.

೩೩. ಸಂಜ್ಞಾದೇವಿಯಲ್ಲಿ ಪ್ರಥಮ ಪುತ್ರನಾಗಿ ಜನಿಸಿದ ವೈವಸ್ವತ-ಮನುವಿಗೆ ತುಲ್ಯನಾಗಿದ್ದ, ಛಾಯಾಸಂಜ್ಞೆಯಲ್ಲಿ ಸೂರ್ಯಭಗವಂತನಿಂದ ಜನಿಸಿದ ಜ್ಯೇಷ್ಠಪುತ್ರನು ಸಾವರ್ಣಿ ಎಂಬ ಸಂಜ್ಞೆಯನ್ನು ಹೊಂದಿದನು.

೩೪. ಯಾವಾಗ ಬಲಿಚಕ್ರವರ್ತಿಯು ಇಂದ್ರಪದವಿಗೆ ಬರುವನೋ ಆಗ ಸಾವರ್ಣಿಯು ಮನುಪದವನ್ನು ಹೊಂದುವನು. ಎರಡನೆಯ ಪುತ್ರನಾದ ಶನೈಶ್ಚರನು ತಂದೆಯಿಂದ ನವಗ್ರಹ ದೇವತೆಗಳ ಮಧ್ಯದಲ್ಲಿ ಇರಿಸಲ್ಪಟ್ಟನು.

೩೫. ಹೀಗೆ ಇಬ್ಬರು ಸಹೋದರರ ತರುವಾಯ ಹುಟ್ಟಿದ ಮೂರನೆಯ ಕನ್ಯೆಯಾದ ತಪತೀ ಎಂಬುವಳು ಪತಿಯಾದ ಸಂವರಣ ರಾಜನಿಂದ ಕುರು ಎಂಬ ನಾಮಾಂಕಿತನಾದ ರಾಜನನ್ನು ಪುತ್ರನನ್ನಾಗಿ ಹೊಂದಿದಳು.

ತಸ್ಯ ವೈವಸ್ವತಸ್ಯಾಹಂ ಮನೋಃ ಸಪ್ತಮಮನ್ತರಮ್ ।
ಕಥಯಾಮಿ ಸುತಾನ್ ಭೂಪಾನೃಷೀನ್ ದೇವಾನ್ ಸುರಾಧಿಪಮ್ ॥೩೬॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ವೈವಸ್ವತಮನ್ವನ್ತರೇ ವೈವಸ್ವತೋತ್ಪತ್ತಿರ್ನಾಮ ಷಟ್ಸಪ್ತತಿತಮೋಽಧ್ಯಾಯಃ

---

೩೬. ನಾನು ಈಗ ಆ ವೈವಸ್ವತಮನುವು ಆಳಿದ ಏಳನೆಯ ಮನ್ವಂತರವನ್ನು ನಿನಗೆ ಹೇಳುವೆನು. ಮತ್ತು ಆ ಮನ್ವಂತರದಲ್ಲಿದ್ದ ದೇವತೆ, ಋಷಿ, ದೇವೇಂದ್ರ ಮತ್ತು ಮನುವಿನ ಪುತ್ರರು ಮುಂತಾದವರನ್ನು ಹೇಳುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತೈದನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಷಟ್ಸಪ್ತತಿತಮೋಽಧ್ಯಾಯಃ

(ವೈವಸ್ವತಮನ್ವನ್ತರೇ ದೇವಷ್ಯಾಽದಿನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಆದಿತ್ಯಾ ವಸವೋ ರುದ್ರಾಃ ಸಾಧ್ಯಾ ವಿಶ್ವೇ ಮರುದ್ಗಣಾಃ ।
ಭೃಗವೋಽಙ್ಗಿರಸಶ್ಚಾಷ್ಟೌ ಯತ್ರ ದೇವಗಣಾಃ ಸ್ಮೃತಾಃ ॥೧॥

ಆದಿತ್ಯಾ ವಸವೋ ರುದ್ರಾ ವಿಜ್ಞೇಯಾಃ ಕಶ್ಯಪಾತ್ಮಜಾಃ ।
ಸಾಧ್ಯಾಶ್ಚ ಮರುತೋ ವಿಶ್ವೇ ಧರ್ಮಪುತ್ರಗಣಾಸ್ತ್ರಯಃ ॥೨॥

ಎಪ್ಪತ್ತಾರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧ ವೈವಸ್ವತಮನ್ವಂತರದಲ್ಲಿ ಎಂಟು ದೇವಗಣಗಳಿದ್ದುವೆಂದು ಪ್ರಾಜ್ಞರಿಂದ ಹೇಳಲ್ಪಟ್ಟಿದೆ. ಆ ಗಣಗಳು ಕ್ರಮವಾಗಿ ಆದಿತ್ಯ, ವಸು, ಸಾಧ್ಯ, ರುದ್ರ, ವಿಶ್ವೇದೇವ, ಮರುತ್, ಭೃಗು ಮತ್ತು ಅಂಗಿರ ಎಂದು ನಾಮಾಂಕಿತ-ಗಳಾಗಿದ್ದುವು.

೨. ಈ ದೇವಗಣಗಳಲ್ಲಿ ಮೊದಲನೆಯ ಆದಿತ್ಯ, ವಸು ಮತ್ತು ರುದ್ರ ಎಂಬ ಮೂರು ದೇವಗಣಗಳು ಕಶ್ಯಪಮುನಿಯ ಪುತ್ರರೆಂದು ಅರಿಯಬೇಕು. ಹಾಗು ಸಾಧ್ಯ, ಮರುತ್ ಮತ್ತು ವಿಶ್ವೇದೇವ ಎಂಬ ಮೂರು ದೇವಗಣಗಳು ಧರ್ಮಪ್ರಜಾಪತಿಯ ಪುತ್ರರು.

ಭೃಗೋಸ್ತು ಭೃಗವೋ ದೇವಾಃ ಪುತ್ರಾ ಹ್ಯಙ್ಗಿರಸಃ ಸುತಾಃ ।
ಏಷ ಸರ್ಗಶ್ಚ ಮಾರೀಚೋ ವಿಜ್ಞೇಯಃ ಸಾಮ್ಪ್ರತಾಧಿಪಃ ॥೩॥

ಊರ್ಜಸ್ವೀ ನಾಮ ಚೈವೇನ್ದ್ರೋ ಮಹಾತ್ಮಾ ಯಜ್ಞಭಾಗಭುಕ್ ॥೪॥

ಅತೀತಾನಾಗತಾ ಯೇ ಚ ವರ್ತನ್ತೇ ಸಾಮ್ಪ್ರತಂ ಚ ಯೇ ।
ಸರ್ವೇ ತೇ ತ್ರಿದಶೇನ್ದ್ರಾಸ್ತು ವಿಜ್ಞೇಯಾಸ್ತುಲ್ಯಲಕ್ಷಣಾಃ ॥೫॥

ಸಹಸ್ರಾಕ್ಷಾಃ ಕುಲಿಶಿನಃ ಸರ್ವೇ ಚೈವ ಪುರನ್ದರಾಃ ।
ಮಘವನ್ತೋ ವೃಷಾಃ ಸರ್ವೇ ಶೃಙ್ಗಿಣೋ ಗಜಗಾಮಿನಃ ॥೬॥

---

೩. ಭೃಗುಗಣವಲ್ಲಿದ್ದ ದೇವತೆಗಳು ಭೃಗುಮುನಿಯ ಪುತ್ರರೆಂದೂ ಅಂಗಿರಗಣವಲ್ಲಿದ್ದ ದೇವತೆಗಳು ಅಂಗಿರೋ ಮುನಿಯ ಪುತ್ರರೆಂದೂ ಪ್ರಸಿದ್ಧರಾಗಿರುವರು. ಈ ಮನ್ವಂತರಾಧಿಪರಾದ ದೇವತೆಗಳ ಸೃಷ್ಟಿವರ್ಗವು ಮರೀಚಿಪ್ರಜಾಪತಿಯಿಂದ ಮುಂದುವರೆದಿದೆಯೆಂದು ಅರಿಯಬೇಕು.

೪. ಮತ್ತು ವೈವಸ್ವತಮನ್ವಂತರದಲ್ಲಿ ಊರ್ಜಸ್ವೀ ಎಂಬ ನಾಮಾಂಕಿತನಾದ ಇಂದ್ರನಿರುವನು. ಅವನು ಮಹಾತ್ಮನೂ ಮತ್ತು ಯಜ್ಞದಲ್ಲಿ ಕೊಡುವ ಹವಿರ್ಭಾಗವನ್ನು ಭುಂಜಿಸುವವನೂ ಆಗಿದ್ದಾನೆ.

೫. ಹೀಗೆ ಕಳೆದಿರುವ ಮನ್ವಂತರಗಳು, ಮುಂದೆ ಬರುವ ಮನ್ವಂತರಗಳು ಹಾಗು ಈಗ ನಡೆಯುವ ಮನ್ವಂತರ ಇವುಗಳಲ್ಲಿರುವ ಎಲ್ಲ ಇಂದ್ರರು ದೇವರಾಜರೂ, ತುಲ್ಯವಾದ ಲಕ್ಷಣವುಳ್ಳವರೂ ಆಗಿರುವರೆಂದು ತಿಳಿಯಬೇಕು.

೬. ಎಲ್ಲ ಇಂದ್ರವ್ಯಕ್ತಿಗಳು ಸಹಸ್ರ ಕಣ್ಣುಗಳುಳ್ಳವರೂ, ವಜ್ರಾಯುಧಧಾರಿಗಳೂ, ಶತ್ರುಪುರಗಳನ್ನು ಮರ್ದಿಸಿದವರೂ, ಐಶ್ವರ್ಯವುಳ್ಳವರೂ, ವೃಷ್ಟಿಯನ್ನು ಅನುಗ್ರಹಿಸುವವರೂ, ಪ್ರಧಾನತೆಯುಳ್ಳವರೂ ಮತ್ತು ಐರಾವತ ಗಜವನ್ನು ಏರುವವರೂ ಆಗಿರುವರು.

ತೇ ಶತಕ್ರತವಃ ಸರ್ವೇ ಭೂತಾಭಿಭವತೇಜಸಃ ।
ಧರ್ಮಾದ್ಯೈಃ ಕಾರಣೈಃ ಶುದ್ಧೈರಾಧಿಪತ್ಯಗುಣಾನ್ವಿತಾಃ ॥೭॥

ಭೂತಭವ್ಯಭವನ್ನಾಥಾಃ ಶೃಣು ಚೈತತ್ತ್ರಯಂ ದ್ವಿಜ ॥೮॥

ಭೂರ್ಲೋಕೋಽಯಂ ಸ್ಮೃತಾ ಭೂಮಿರನ್ತರಿಕ್ಷಂ ದಿವಃ ಸ್ಮೃತಮ್।
ದಿವ್ಯಾಖ್ಯಶ್ಚ ತಥಾ ಸ್ವರ್ಗಸ್ತ್ರೈಲೋಕ್ಯಮಿತಿ ಗದ್ಯತೇ ॥೯॥

ಅತ್ರಿಶ್ಚೈವ ವಸಿಷ್ಠಶ್ಚ ಕಶ್ಯಪಶ್ಚ ಮಹಾನೃಷಿಃ ।
ಗೌತಮಶ್ಚ ಭರದ್ವಾಜೋ ವಿಶ್ವಾಮಿತ್ರೋಽಥ ಕೌಶಿಕಃ ॥೧೦॥

---

೭. ಎಲ್ಲ ಇಂದ್ರರು ಒಂದು ನೂರು ಯಜ್ಞಗಳನ್ನು ಮಾಡಿದವರೂ, ಇತರ ಸಮಸ್ತ ಭೂತವರ್ಗಕ್ಕಿಂತ ಹೆಚ್ಚಿನ ತೇಜಸ್ಸುಳ್ಳವರೂ ಮತ್ತು ಧರ್ಮ, ಜ್ಞಾನ ಮುಂತಾದ ಶುದ್ಧವಾದ ಕಾರಣಗಳುಳ್ಳವರೂ ಆದ್ದರಿಂದ ಆಧಿಪತ್ಯವನ್ನು ಹೊಂದಿರುವರು.

೮. ಕ್ರೌಷ್ಟುಕಿಮುನಿಯೇ ! ಎಲ್ಲ ಇಂದ್ರರು ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯವೆಂಬ ಶುದ್ಧಕಾರಣಗಳಿಂದ ಆಧಿಪತ್ಯವನ್ನು ಹೊಂದಿ ಭೂತ-ಭವಿಷ್ಯ-ವರ್ತಮಾನ ಪ್ರಪಂಚಕ್ಕೆ ಪ್ರಭುಗಳಾಗಿರುವರು. ಅವರ ಪ್ರಭುತ್ವದಲ್ಲಿರುವ ಮೂರು ಲೋಕಗಳನ್ನು ಕೇಳು.

೯. ಭೂಮಿಯು ಭೂಲೋಕವೆಂದು ಹೇಳಲ್ಪಟ್ಟಿರುವುದು. ಅಂತರಿಕ್ಷವು ದ್ಯುಲೋಕವೆಂದು ಕರೆಯಲ್ಪಡುವುದು. ಹಾಗು ಸ್ವರ್ಗವು ದಿವ್ಯಲೋಕವೆಂದು ಎಣಿಸಲ್ಪಡುವುದು. ಇವು ಮೂರು ಲೋಕಗಳು ತ್ರೈಲೋಕ್ಯವೆಂದು ವರ್ಣಿಸಲ್ಪಡುವುವು.

೧೦. ಇನ್ನು ಈ ಮನ್ವಂತರದಲ್ಲಿರುವ ಸಪ್ತರ್ಷಿಗಳನ್ನು ಕೇಳು. ಅತ್ರಿ, ವಸಿಷ್ಠ, ಕಶ್ಯಪ, ಗೌತಮ, ಭರದ್ವಾಜ ಮತ್ತು ಕುಶಿಕರಾಜನ ವಂಶದಲ್ಲಿ ಜನಿಸಿದ ವಿಶ್ವಾಮಿತ್ರ ಎಂಬ ಮಹರ್ಷಿಗಳು ಸಪ್ತರ್ಷಿಗಳಲ್ಲಿ ಸೇರಿದ ಆರು ಮಂದಿಯಾಗಿರುವರು.

ತಥೈವ ಪುತ್ರೋ ಭಗವಾನೃಚೀಕಸ್ಯ ಮಹಾತ್ಮನಃ।
ಜಮದಗ್ನಿಸ್ತು ಸಪ್ತೈತೇ ಮುನಯೋಽತ್ರ ತಥಾನ್ತರೇ ॥೧೧॥

ಇಕ್ಷ್ವಾಕುರ್ನಾಭಗಶ್ಚೈವ ಧೃಷ್ಟಃ ಶರ್ಯಾತಿರೇವ ಚ।
ನರಿಷ್ಯನ್ತಶ್ಚ ವಿಖ್ಯಾತೋ ನಾಭಾಗೋ ದಿಷ್ಟ ಏವ ಚ ॥೧೨॥

ಕರೂಷಶ್ಚ ಪೃಷಧ್ರಶ್ಚ ವಸುಮಾಂಲ್ಲೋಕವಿಶ್ರುತಃ।
ಮನೋರ್ವೈವಸ್ವತಸ್ಯೈತೇ ನವ ಪುತ್ರಾಃ ಪ್ರಕೀರ್ತಿತಾಃ ॥೧೩॥

ವೈವಸ್ವತಮಿದಂ ಬ್ರಹ್ಮನ್ ಕಥಿತಂ ತೇ ಮಯಾನ್ತರಮ್ ॥೧೪॥

---

೧೧. ಹಾಗು ಮಹಾತ್ಮನಾದ ಋಚೀಕಮುನಿಯ ಪುತ್ರನೂ ಮತ್ತು ಉತ್ಪತ್ತಿ-ನಿಧನಗಳನ್ನು ಅರಿತ ಮಹಾತ್ಮನೂ ಆದ ಜಮದಗ್ನಿಯು ಏಳನೆಯ ಮಹರ್ಷಿಯು. ಹೀಗೆ ವೈವಸ್ವತಮನ್ವಂತರದಲ್ಲಿ ಅತ್ರಿ ಮುಂತಾದವರು ಸಪ್ತರ್ಷಿಗಳಾಗಿರುವರು.

೧೨. ವೈವಸ್ವತಮನುವಿನ ಪುತ್ರರಲ್ಲಿ ಇಕ್ಷ್ವಾಕು, ನಾಭಗ, ಧೃಷ್ಟ, ಶರ್ಯಾತಿ, ನರಿಷ್ಯಂತ ಮತ್ತು ನಾಭಾಗ ಎಂಬುವರು ಕೆಲವರು ವಿಖ್ಯಾತರಾದ ಪುತ್ರರಾಗಿದ್ದರು.

೧೩. ಲೋಕದಲ್ಲಿ ಖ್ಯಾತಿಹೊಂದಿರುವ ಕರೂಷ, ಪೃಷಧ್ರ ಮತ್ತು ವಸುಮಾನ್ ಎಂಬುವರು ಮತ್ತೆ ಮೂರು ಮಂದಿ ಪುತ್ರರು ಇರುವರು. ಹೀಗೆ ವೈವಸ್ವತಮನುವಿಗೆ ಒಟ್ಟು ಒಂಭತ್ತುಮಂದಿ ಪುತ್ರರೆಂದು ಕೀರ್ತಿಸಲ್ಪಟ್ಟಿರುವರು.

೧೪. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ ! ಹೀಗೆ ನಿನಗೆ ದೇವ-ಋಷಿ-ರಾಜಪುತ್ರ ಮುಂತಾದ ಎಲ್ಲ ವಿಷಯಗಳ ಸಹಿತವಾಗಿ ವೈವಸ್ವತಮನ್ವಂತರವು ನನ್ನಿಂದ ಹೇಳಲ್ಪಟ್ಟಿದೆ.

ಅಸ್ಮಿನ್ ಶ್ರುತೇ ನರಃ ಸದ್ಯಃ ಪಠಿತೇ ಚೈವ ಸತ್ತಮ ।
ಮುಚ್ಯತೇ ಪಾತಕೈಃ ಸರ್ವೈಃ ಪುಣ್ಯಂ ಚ ಮಹದಶ್ನುತೇ ॥೧೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ವೈವಸ್ವತಮನ್ವನ್ತರೇ ಷಟ್ಸಪ್ತತಿತಮೋಽಧ್ಯಾಯಃ

---

೧೫. ಎಲೈ ಸಾಧೂತ್ತಮನೇ ! ಈ ವೈವಸ್ವತಮನ್ವಂತರದ ಚರಿತ್ರೆಯನ್ನು ಶ್ರವಣ ಅಥವಾ ಪಠನ ಮಾಡಿದ ಮಾನವನು ಸಮಸ್ತ ಪಾಪರಾಶಿಯಿಂದ ಮುಕ್ತನಾಗುವನು. ಮತ್ತು ಮಹತ್ತಾದ ಪುಣ್ಯರಾಶಿಯನ್ನು ಸಂಪಾದಿಸುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತಸಪ್ತತಿತಮೋಽಧ್ಯಾಯಃ

(ಸಾವರ್ಣಿಕಮನ್ವನ್ತರೇ ದೇವಗಣಾದಿನಿರೂಪಣಮ್)

ಕ್ರೌಷ್ಟುಕಿರುವಾಚ :—

ಸ್ವಾಯಮ್ಭುವಾದ್ಯಾಃ ಕಥಿತಾಃ ಸಪ್ತೈತೇ ಮನವೋ ಮಮ ।
ತದನ್ತರೇಷು ಯೇ ದೇವಾ ರಾಜಾನೋ ಮುನಯಸ್ತಥಾ ॥೧॥

ಅಸ್ಮಿನ್ಕಲ್ಪೇ ಸಪ್ತ ಯೇಽನ್ಯೇ ಭವಿಷ್ಯನ್ತಿ ಮಹಾಮುನೇ ।
ಮನವಸ್ತಾನ್ ಸಮಾಚಕ್ಷ್ವ ತಥಾ ದೇವಾದಯಶ್ಚ ಯೇ ॥೨॥

ಎಪ್ಪತ್ತೇಳನೆಯ ಅಧ್ಯಾಯ

ಕ್ರೌಷ್ಟುಕಿಮುನಿಯು ಹೇಳಿದನು :—

೧. ನಿನ್ನಿಂದ ನನಗೆ ಸ್ವಾಯಂಭುವಮನ್ವಂತರವು ಆದಿಯಾಗಿ ಏಳು ಮನ್ವಂತರಗಳಲ್ಲಿ ಇದ್ದ ಮನು-ದೇವ-ರಾಜ ಮತ್ತು ಸಪ್ತರ್ಷಿ ಮುಂತಾದ ವಿಷಯಗಳು ಕ್ರಮವಾಗಿ ಹೇಳಲ್ಪಟ್ಟವೆ.

೨. ಮಾರ್ಕಂಡೇಯ ಮಹಾಮುನಿಯೇ! ಈ ಕಲ್ಪದಲ್ಲಿ ಇನ್ನು ಮುಂದೆ ಯಾವ ಮನುಗಳು ಮನುಪದವನ್ನು ಹೊಂದುವರೋ ಅವರನ್ನೂ, ಆಯಾಯ ಮನ್ವಂತರಗಳಲ್ಲಿರುವ ದೇವ-ಋಷಿ ಮುಂತಾದವರನ್ನೂ ಹೇಳಬೇಕು.

ಮಾರ್ಕಣ್ಡೇಯ ಉವಾಚ :—

ಕಥಿತಸ್ತವ ಸಾವರ್ಣಿಶ್ಛಾಯಾಸಞ್ಜ್ಞಾಸುತಶ್ಚ ಯಃ ।
ಪೂರ್ವಜಸ್ಯ ಮನೋಸ್ತುಲ್ಯಃ ಸ ಮನುರ್ಭವಿತಾಷ್ಟಮಃ ॥೩॥

ರಾಮೋ ವ್ಯಾಸೋ ಗಾಲವಶ್ಚ ದೀಪ್ತಿಮಾನ್ ಕೃಪ ಏವ ಚ ।
ಋಷ್ಯಶೃಙ್ಗಸ್ತಥಾ ದ್ರೋಣಸ್ತತ್ರ ಸಪ್ತರ್ಷಯೋಽಭವನ್ ॥೪॥

ಸುತಪಾಶ್ಚಾಮಿತಾಭಾಶ್ಚ ಮುಖ್ಯಾಶ್ಚೈವ ತ್ರಿಧಾ ಸುರಾಃ ।
ವಿಂಶಕಃ ಕಥಿತಾಶ್ಚೈಷಾಂ ತ್ರಯಾಣಾಂ ತ್ರಿಗುಣೋ ಗಣಃ ॥೫॥

ತಪಸ್ತಪಶ್ಚ ಶಕ್ರಶ್ಚ ದ್ಯುತಿರ್ಜ್ಯೋತಿಃ ಪ್ರಭಾಕರಃ ।
ಪ್ರಭಾಸೋ ದಯಿತೋ ಧರ್ಮಸ್ತೇಜೋರಶ್ಮಿಶ್ಚ ವಕ್ರತುಃ ॥೬॥

ಮಾರ್ಕಂಡೇಯ ಮುನಿಯು ಹೇಳಿದನು :—

೩. ಸೂರ್ಯದೇವನ ಪತ್ನಿಯಾದ ಛಾಯಾಸಂಜ್ಞೆಯಲ್ಲಿ ಜನಿಸಿದ ಸಾವರ್ಣಿ ಎಂಬುವನು ಅಗ್ರಜನಾದ ವೈವಸ್ವತಮನುವಿಗೆ ತುಲ್ಯನೆಂದೂ ಅವನು ಎಂಟನೆಯ ಮನುವಾಗುವನೆಂದೂ ಹಿಂದೆ ನನ್ನಿಂದ ಹೇಳಲ್ಪಟ್ಟಿದೆ.

೪. ಆ ಸಾವರ್ಣಿಕಮನ್ವಂತರದಲ್ಲಿ ರಾಮ, ವ್ಯಾಸ, ಗಾಲವ, ದೀಪ್ತಿಮಾನ್, ಕೃಪ, ಋಷ್ಯಶೃಂಗ ಮತ್ತು ದ್ರೋಣಮುನಿ ಎಂಬ ನಾಮಾಂಕಿತ-ರಾದ ಮಹಾಮುನಿಗಳು ಸಪ್ತರ್ಷಿಪದವಿಯನ್ನು ಅನುಭವಿಸುವರು.

೫. ಸಾವರ್ಣಿಮನ್ವಂತರದಲ್ಲಿ ಸುತಪಾ, ಅಮಿತಾಭ ಮತ್ತು ಮುಖ್ಯ ಎಂದು ಪ್ರಸಿದ್ಧವಾದ ಮೂರು ದೇವಗಣಗಳು ಇರುವುವು. ಈ ಮೂರು ದೇವಗಣಗಳಲ್ಲಿಯೂ ಪ್ರತ್ಯೇಕವಾಗಿ ಇಪ್ಪತ್ತುಮಂದಿ ದೇವತೆಗಳು ಸೇರಿರುವರು.

೬. ಇವುಗಳಲ್ಲಿ ಮೊದಲನೆಯದಾದ ಸುತಪ ಎಂಬ ದೇವಗಣದಲ್ಲಿ ತಪಸ್ತಪ, ಶಕ್ರ, ದ್ಯುತಿ, ಜ್ಯೋತಿ, ಪ್ರಭಾಕರ, ಪ್ರಭಾಸ, ದಯಿತ, ಧರ್ಮ, ತೇಜೋರಶ್ಮಿ ಮತ್ತು ವಕ್ರತು ಮುಂತಾದ ನಾಮಾಂಕಿತರಾದ ಅನೇಕ ದೇವತೆಗಳು ಇರುವರು.

ಇತ್ಯಾದಿಕಸ್ತು ಸುತಪಾ ದೇವಾನಾಂ ವಿಂಶಕೋ ಗಣಃ ॥೭॥

ಪ್ರಭುರ್ವಿಭುರ್ವಿಭಾಸಾದ್ಯಸ್ತಥಾನ್ಯೋ ವಿಂಶಕೋ ಗಣಃ ।
ಸುರಾಣಾಮಮಿತಾನಾಂ ತು ತೃತೀಯಮಪಿ ಮೇ ಶೃಣು ॥೮॥

ದಮೋ ದಾನ್ತ ಋತಃ ಸೋಮೋ ವಿನ್ತಾದ್ಯಾಶ್ಚೈವ ವಿಂಶತಿಃ ।
ಮುಖ್ಯಾ ಹ್ಯೇತೇ ಸಮಾಖ್ಯಾತಾ ದೇವಾ ಮನ್ವನ್ತರಾಧಿಪಾಃ ॥೯॥

ಮಾರೀಚಸ್ಯೈವ ತೇ ಪುತ್ರಾಃ ಕಾಶ್ಯಪಸ್ಯ ಪ್ರಜಾಪತೇಃ ।
ಭವಿಷ್ಯಾಶ್ಚ ಭವಿಷ್ಯನ್ತಿ ಸಾವರ್ಣಸ್ಯಾನ್ತರೇ ಮನೋಃ ॥೧೦॥

ತೇಷಾಮಿನ್ದ್ರೋ ಭವಿಷ್ಯಸ್ತು ಬಲಿರ್ವೈರೋಚನಿರ್ಮುನೇ ।
ಪಾತಾಲ ಆಸ್ತೇ ಯೋಽದ್ಯಾಪಿ ದೈತ್ಯಃ ಸಮಯಬನ್ಧನಃ ॥೧೧॥

---

೭. ಹೀಗೆ ತಪಸ್ತಪ ಮುಂತಾದ ಇಪ್ಪತ್ತು ಮಂದಿ ದೇವತೆಗಳು ಸೇರಿರುವ ಗಣವು ಮೊದಲನೆಯದಾದ ಸುತಪಾ ಎಂಬ ದೇವಗಣವೆಂದು ತಿಳಿಯಬೇಕು.

೮. ಎರಡನೆಯ ದೇವಗಣವು ಅಮಿತಾಭ ಎಂದು ಕರೆಯಲ್ಪಡುವುದು. ಅವರಲ್ಲಿ ಪ್ರಭು, ವಿಭು, ವಿಭಾಸ ಮುಂತಾದವರು ಇಪ್ಪತ್ತು ಮಂದಿ ದೇವತೆಗಳು ಇರುವರು. ಇನ್ನು ಮುಂದೆ ಮೂರನೆಯ ದೇವಗಣವನ್ನು ಕೇಳು.

೯. ದಮ, ದಾಂತ, ಋತ, ಸೋಮ ಮತ್ತು ವಿಂತ ಮುಂತಾದ ಇಪ್ಪತ್ತು ಮಂದಿ ದೇವತಾವ್ಯಕ್ತಿಗಳಿಂದ ಕೂಡಿದ ದೇವಗಣವು ಮುಖ್ಯವೆಂದು ಗಣಿಸಲ್ಪಟ್ಟಿದೆ. ಹೀಗೆ ಆಯಾಯ ಗಣದಲ್ಲಿರುವ ದೇವತೆಗಳು ಮನ್ವಂತರವನ್ನು ನಡೆಯಿಸುವರು.

೧೦. ಮುಂದೆ ಬರುವ ಸಾವರ್ಣಿಮನ್ವಂತರದಲ್ಲಿ ಭವಿಷ್ಯರಾದ ಈ ದೇವತೆಗಳು ಮರೀಚಮುನಿ ಪುತ್ರನಾದ ಕಾಶ್ಯಪಪ್ರಜಾಪತಿಯ ಪುತ್ರ ಸಂತತಿಯಲ್ಲಿ ಜನಿಸುವರು.

೧೧. ಕ್ರೌಷ್ಟುಕಿಮುನಿಯೇ! ವಿರೋಚನ ಅಸುರನ ಪುತ್ರನಾದ ಬಲಿಚಕ್ರವರ್ತಿಯು ಆ ದೇವತೆಗಳಿಗೆ ರಾಜನಾದ ಇಂದ್ರನಾಗುವನು. ಅವನು ಈಗ ತನ್ನ ಪ್ರತಿಜ್ಞಾವಚನವನ್ನು ಪಾಲಿಸುತ್ತ ಈಗಲೂ ಪಾತಾಲಲೋಕದಲ್ಲಿ ಇರುವನು.

ವಿರಜಾಶ್ಚಾರ್ವವೀರಶ್ಚ ನಿರ್ಮೋಹಃ ಸತ್ಯವಾಕ್ಕೃತಿಃ ।
ವಿಷ್ಣ್ವಾದ್ಯಾಶ್ಚೈವ ತನಯಾಃ ಸಾವರ್ಣಸ್ಯ ಮನೋರ್ನೃಪಾಃ ॥೧೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸಾವರ್ಣಿಕೇ ಮನ್ವನ್ತರೇ ಸಪ್ತಸಪ್ತತಿತಮೋಽಧ್ಯಾಯಃ

---

೧೨. ವಿರಜ, ಅರ್ವವೀರ, ನಿರ್ಮೋಹ, ಸತ್ಯವಾಕ್, ಕೃತಿ ಮತ್ತು ವಿಷ್ಣು ಮುಂತಾದವರು ಸಾವರ್ಣಿಮನುವಿನ ಪುತ್ರರಾಗಿ ಜನಿಸಿ ಸಾವರ್ಣಿ-ಮನ್ವಂತರದಲ್ಲಿ ಪೃಥಿವೀಪರಿಪಾಲಕರಾಗಿರುವರು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತೇಳನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಸಪ್ತತಿತಮೋಽಧ್ಯಾಯಃ

(ಮಧು-ಕೈಟಭವಧಃ)

ಮಾರ್ಕಣ್ಡೇಯ ಉವಾಚ :—

ಸಾವರ್ಣಿಃ ಸೂರ್ಯತನಯೋ ಯೋ ಮನುಃ ಕಥ್ಯತೇಽಷ್ಟಮಃ ।
ನಿಶಾಮಯ ತದುತ್ಪತ್ತಿಂ ವಿಸ್ತರಾದ್ಗದತೋ ಮಮ ॥೧॥

ಮಹಾಮಾಯಾನುಭಾವೇನ ಯಥಾ ಮನ್ವನ್ತರಾಧಿಪಃ ।
ಸ ಬಭೂವ ಮಹಾಭಾಗಸ್ಸಾವರ್ಣಿಸ್ತನಯೋ ರವೇಃ ॥೨॥

ಎಪ್ಪತ್ತೆಂಟನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಸೂರ್ಯದೇವನ ಪುತ್ರನಾದ ಸಾವರ್ಣಿ ಎಂಬುವನು ಎಂಟನೆಯ ಮನುವೆಂದು ಹೇಳಲ್ಪಟ್ಟಿರುವನು. ಆ ಸಾವರ್ಣಿಮನುವಿನ ಉತ್ಪತ್ತಿಚರಿತ್ರೆಯನ್ನು ವಿಸ್ತಾರವಾಗಿ ಹೇಳುವ ನನ್ನ ವಚನವನ್ನು ಕೇಳು.

೨. ಮಹಾಭಾಗ್ಯವಂತನೂ, ಸೂರ್ಯದೇವನ ಪುತ್ರನೂ ಆದ ಆ ಸಾವರ್ಣಿಮನುವು ಜಗದಂಬೆಯಾದ ಮಹಾಮಾಯೆಯ ಪ್ರಭಾವದಿಂದ ಹೇಗೆ ಮನ್ವಂತರಾಧಿಪ ಪದವಿಗೆ ಬಂದನೋ ಅದನ್ನು ವಿವರಿಸುವೆನು.

ಸ್ವಾರೋಚಿಷೇಽನ್ತರೇ ಪೂರ್ವಂ ಚೈತ್ರವಂಶಸಮುದ್ಭವಃ ।
ಸುರಥೋ ನಾಮ ರಾಜಾಭೂತ್ಸಮಸ್ತೇ ಕ್ಷಿತಿಮಣ್ಡಲೇ ॥೩॥

ತಸ್ಯ ಪಾಲಯತಃ ಸಮ್ಯಕ್ ಪ್ರಜಾಃ ಪುತ್ರಾನಿವೌರಸಾನ್ ।
ಬಭೂವುಃ ಶತ್ರವೋ ಭೂಪಾಃ ಕೋಲಾವಿಧ್ವಂಸಿನಸ್ತದಾ ॥೪॥

ತಸ್ಯ ತೈರಭವದ್ಯುದ್ಧಮತಿಪ್ರಬಲದಣ್ಡಿನಃ ।
ನ್ಯೂನೈರಪಿ ಸ ತೈರ್ಯುದ್ಧೇ ಕೋಲಾವಿಧ್ವಂಸಿಭಿರ್ಜಿತಃ ॥೫॥

ತತಃ ಸ್ವಪುರಮಾಯಾತೋ ನಿಜದೇಶಾಧಿಪೋಽಭವತ್ ।
ಆಕ್ರಾನ್ತಃ ಸ ಮಹಾಭಾಗಸ್ತೈಸ್ತದಾ ಪ್ರಬಲಾರಿಭಿಃ ॥೬॥

---

೩. ಪೂರ್ವಕಾಲದಲ್ಲಿ ಸ್ವಾರೋಚಿಷವೆಂಬ ಮನ್ವಂತರದಲ್ಲಿ ಚೈತ್ರನೆಂಬ ಒಬ್ಬ ರಾಜನ ವಂಶದಲ್ಲಿ ಜನಿಸಿದ ಸುರಥ ಎಂಬ ನಾಮಾಂಕಿತನಾದ ರಾಜನು ಸಮಸ್ತ ಭೂಮಂಡಲಕ್ಕೆ ಅಧಿಪತಿಯಾಗಿದ್ದನು.

೪. ಆ ಸುರಥಮಹಾರಾಜನು ತನ್ನ ಔರಸಪುತ್ರರಂತೆ ಪ್ರಜೆಗಳನ್ನು ಪಾಲಿಸುತ್ತಿರಲು ಆಗ ಬ್ರಾಹ್ಮಣಾದಿ ವರ್ಣವಿಧ್ವಂಸಕರಾದ ರಾಕ್ಷಸಯೋನಿಯ ಕೆಲವರು ರಾಜರು ಸುರಥರಾಜನ ಶತ್ರುಗಳಾಗಿ ಬಂದರು.

೫. ಹೆಚ್ಚು ಸೈನ್ಯಬಲದಿಂದ ಕೂಡಿದ ಸುರಥರಾಜನಿಗೆ ಶತ್ರುರಾಜರ ಸಂಗಡ ಯುದ್ಧವು ನಡೆಯಿತು. ಆಗ ಶಕ್ತಿ-ಸಾಮರ್ಥ್ಯಗಳಲ್ಲಿ ತನಗಿಂತಲೂ ಕಡಿಮೆಯಾಗಿದ್ದರೂ ನೀಚಸ್ವಭಾವದ ಶತ್ರುಗಳಿಂದ ಸುರಥರಾಜನು ಸೋತುಹೋದನು.

೬. ತರುವಾಯ ಆ ಪ್ರಬಲರಾದ ಶತ್ರುಗಳಿಂದ ಆಕ್ರಮಿಸಲ್ಪಟ್ಟವನಾದರೂ ಮುಂದೆ ಮಹಿಮೆಯನ್ನು ಹೊಂದುವ ಮಹಾಭಾಗ್ಯಶಾಲಿಯಾದ ಸುರಥನು ತನ್ನ ನಗರಕ್ಕೆ ಬಂದು ತನ್ನ ದೇಶವನ್ನು ಮಾತ್ರ ಆಳಿಕೊಂಡು ರಾಜನಾಗಿದ್ದನು.

ಅಮಾತ್ಯೈರ್ಬಲಿಭಿರ್ದುಷ್ಟೈರ್ದುರ್ಬಲಸ್ಯ ದುರಾತ್ಮಭಿಃ ।
ಕೋಶೋ ಬಲಂ ಚಾಪಹೃತಂ ತತ್ರಾಪಿ ಸ್ವಪುರೇ ತತಃ ॥೭॥

ತತೋ ಮೃಗಯಾವ್ಯಾಜೇನ ಹೃತಸ್ವಾಮ್ಯಃ ಸ ಭೂಪತಿಃ ।
ಏಕಾಕೀ ಹಯಮಾರುಹ್ಯ ಜಗಾಮ ಗಹನಂ ವನಮ್ ॥೮॥

ಸ ತತ್ರಾಶ್ರಮಮದ್ರಾಕ್ಷೀದ್ದ್ವಿಜ ವರ್ಯಸ್ಯ ಸುಮೇಧಸಃ ।
ಪ್ರಶಾನ್ತಶ್ವಾಪದಾಕೀರ್ಣಂ ಮುನಿಶಿಷ್ಯೋಪಶೋಭಿತಮ್ ॥೯॥

ತಸ್ಥೌ ಕಂಚಿತ್ಸ ಕಾಲಂ ಚ ಮುನಿನಾ ತೇನ ಸತ್ಕೃತಃ ।
ಇತಶ್ಚೇತಶ್ಚ ವಿಚರಂಸ್ತಸ್ಮಿನ್ಮುನಿವರಾಶ್ರಮೇ ॥೧೦॥

---

೭. ತನ್ನ ಪುರದಲ್ಲಿಯೂ ನೀಚಸ್ವಭಾವವುಳ್ಳವರೂ, ತಮ್ಮ ಮರ್ಯಾದೆಯನ್ನು ಉಲ್ಲಂಘಿಸುವವರೂ ಮತ್ತು ಬಲಿಷ್ಠರೂ ಆದ ಮಂತ್ರಿಗಳಿಂದ ಶತ್ರುಗಳಿಗೆ ಸೋತು ದುರ್ಬಲನಂತಾದ ಸುರಥರಾಜನ ಭಂಡಾರ, ಸೈನ್ಯಸಂಪತ್ತುಗಳು ಅಪಹರಿಸಲ್ಪಟ್ಟುವು.

೮. ತರುವಾಯ ಎಲ್ಲೆಡೆಗಳಲ್ಲಿಯೂ ಪ್ರಭುತ್ವವನ್ನು ಕಳೆದುಕೊಂಡಿರುವ ಆ ಸುರಥನು ಬೇಟೆಯಾಡುವ ನೆಪದಿಂದ ಏಕಾಕಿಯಾಗಿ ಕುದುರೆಯನ್ನೇರಿ ಸಾಮಾನ್ಯವಾಗಿ ಪ್ರವೇಶಮಾಡಲಾಗದ ಗಹನವನಕ್ಕೆ ಹೋದನು.

೯. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಸುಸಂಸ್ಕೃತನಾದ ಸುರಥರಾಜನು ಆ ವನದಲ್ಲಿ ಸ್ವಾಭಾವಿಕವೈರವನ್ನು ಬಿಟ್ಟು ಶಾಂತವಾದ ಮೃಗಗಳಿಂದ ಕೂಡಿರುವುದೂ ಮತ್ತು ಅನೇಕ ಮುನಿಕುಮಾರರಿಂದ ಶೋಭಿಸಲ್ಪಟ್ಟಿರುವುದೂ ಆದ ಸುಮೇಧ ಎಂಬ ಋಷಿಯ ಆಶ್ರಮವನ್ನು ಕಂಡನು.

೧೦. ಅಲ್ಲಿ ಆ ಸುಮೇಧ ಮುನಿಯಿಂದ ರಾಜಗೌರವದಿಂದ ಸತ್ಕರಿಸಲ್ಪಟ್ಟ ಸುರಥರಾಜನು ಕುತೂಹಲದಿಂದ ಅತ್ತಿತ್ತ ತಿರುಗಾಡುತ್ತ ಮುನಿವರ್ಯನ ಆಶ್ರಮದ ಬಳಿಯಲ್ಲಿ ಕೆಲವುಕಾಲ ವಾಸಮಾಡಿದನು.

ಸೋಽಚಿನ್ತಯತ್ತದಾ ತತ್ರ ಮಮತ್ವಾಕೃಷ್ಟಮಾನಸಃ ||೧೧||

ಮತ್ಪೂರ್ವೈಃ ಪಾಲಿತಂ ಪೂರ್ವಂ ಮಯಾ ಹೀನಂ ಪುರಂ ಹಿ ತತ್ ।
ಮದ್ಭೃತ್ಯೈಸ್ತೈರಸದ್ವೃತ್ತೈರ್ಧರ್ಮತಃ ಪಾಲ್ಯತೇ ನ ವಾ ||೧೨||

ನ ಜಾನೇ ಸ ಪ್ರಧಾನೋ ಮೇ ಶೂರೋ ಹಸ್ತೀ ಸದಾಮದಃ ।
ಮಮ ವೈರಿವಶಂ ಯಾತಃ ಕಾನ್ಭೋಗಾನುಪಲಪ್ಸ್ಯತೇ ||೧೩||

ಯೇ ಮಮಾನುಗತಾ ನಿತ್ಯಂ ಪ್ರಸಾದಧನಭೋಜನೈಃ ।
ಅನುವೃತ್ತಿಂ ಧ್ರುವಂ ತೇಽದ್ಯ ಕುರ್ವನ್ತ್ಯನ್ಯಮಹೀಭೃತಾಮ್ ||೧೪||

ಅಸಮ್ಯಗ್ವ್ಯಯಶೀಲೈಸ್ತೈಃ ಕುರ್ವದ್ಭಿಃ ಸತತಂ ವ್ಯಯಮ್ ।
ಸಞ್ಚಿತಃ ಸೋಽತಿದುಃಖೇನ ಕ್ಷಯಂ ಕೋಶೋ ಗಮಿಷ್ಯತಿ ||೧೫||

---

೧೧. ಆ ಮುನಿಯ ಆಶ್ರಮದ ಬಳಿಯಲ್ಲಿ ವಾಸಮಾಡುತ್ತಿದ್ದ ರಾಜನು ಆಗ ಕಳೆದುಕೊಂಡಿರುವ ರಾಜ್ಯದ ಪರಿವಾರದಲ್ಲಿ ಮಮತ್ವ-ಸಂಸ್ಕಾರದಿಂದ ಸೆಳೆಯಲ್ಪಟ್ಟ ಮಾನಸವುಳ್ಳವನಾಗಿ ದುಃಖದಿಂದ ಚಿಂತಿಸತೊಡಗಿದನು.

೧೨. ನನ್ನ ಪೂರ್ವೀಕರಾದ ರಾಜರಿಂದ ಕ್ರಮವಾಗಿ ಪಾಲಿಸಲ್ಪಟ್ಟಿರುವ ರಾಜ್ಯವು ನನ್ನಿಂದ ಕಳೆದುಕೊಳ್ಳಲ್ಪಟ್ಟಿತು. ಹಾಗೆ ಬಿಟ್ಟು ಬಂದ ನನ್ನ ಪುರವು ದುಷ್ಟವಾದ ವರ್ತನೆಯುಳ್ಳ ನನ್ನ ಭೃತ್ಯ ಪರಿವಾರದಿಂದ ಧರ್ಮದಿಂದ ಪಾಲಿಸ-ಲ್ಪಡುತ್ತಿದೆಯೊ ; ಇಲ್ಲವೋ !

೧೩. ಪ್ರಧಾನವಾಗಿ ಪೋಷಿಸಲ್ಪಟ್ಟಿರುವುದೂ, ಬಲಾಢ್ಯವೂ ಮತ್ತು ಯಾವಾಗಲೂ ಮದಿಸಿರುವುದೂ ಆದ ನನ್ನ ಪಟ್ಟದಾನೆಯು ಇಂದು ನನ್ನ ಶತ್ರುಗಳಿಗೆ ಅಧೀನವಾಗಿ ಏನು ಸುಖ-ಉಪಚಾರಗಳನ್ನು ಹೊಂದುತ್ತಿದೆಯೊ !

೧೪. ಧನ-ಭೋಜನ ಮುಂತಾದ ಉಪಚಾರಗಳಿಂದ ನನ್ನ ಅನುಗ್ರಹ-ವನ್ನು ಹೊಂದಿ ನನ್ನಲ್ಲಿ ಅಭಿಮಾನದಿಂದ ವರ್ತಿಸುವ ಸೇವಕರು ಇಂದು ಬೇರೊಬ್ಬ ರಾಜರ ಸೇವಾ ಅನುವೃತ್ತಿಯನ್ನು ನಿಜವಾಗಿ ಮಾಡುತ್ತಿರುವರಲ್ಲವೆ?

೧೫. ನೀತಿಯಿಲ್ಲದ ಹಾಗೆ ದುಂದುವೆಚ್ಚಮಾಡುವ ಶೀಲವುಳ್ಳ ಇಂದಿನ ಪ್ರಭುಗಳಿಂದ ಸಂತತವಾಗಿ ವ್ಯಯಮಾಡುತ್ತ ನಾನು ಬಹು ದುಃಖದಿಂದ ಕೂಡಿಹಾಕಿರುವ ಭಂಡಾರವು ಎಲ್ಲ ನಾಶವಾಗಿ ಹೋಗುವುದು !

ಏತಚ್ಚಾನ್ಯಚ್ಚ ಸತತಂ ಚಿನ್ತಯಾಮಾಸ ಪಾರ್ಥಿವಃ ।
ತತ್ರ ವಿಪ್ರಾಶ್ರಮಾಭ್ಯಾಶೇ ವೈಶ್ಯಮೇಕಂ ದದರ್ಶ ಸಃ ॥೧೬॥

ಸ ಪೃಷ್ಟಸ್ತೇನ ಕಸ್ತ್ವಂ ಭೋ ಹೇತುಶ್ಚಾಗಮನೇಽತ್ರ ಕಃ ।
ಸಶೋಕ ಇವ ಕಸ್ಮಾತ್ತ್ವಂ ದುರ್ಮನಾ ಇವ ಲಕ್ಷ್ಯಸೇ ॥೧೭॥

ಇತ್ಯಾಕರ್ಣ್ಯ ವಚಸ್ತಸ್ಯ ಭೂಪತೇಃ ಪ್ರಣಯೋದಿತಮ್ ।
ಪ್ರತ್ಯುವಾಚ ಸ ತಂ ವೈಶ್ಯಃ ಪ್ರಶ್ರಯಾವನತೋ ನೃಪಮ್ ॥೧೮॥

ವೈಶ್ಯ ಉವಾಚ :—

ಸಮಾಧಿರ್ನಾಮ ವೈಶ್ಯೋಽಹಮುತ್ಪನ್ನೋ ಧನಿನಾಂ ಕುಲೇ ।
ಪುತ್ರದಾರೈರ್ನಿರಸ್ತಶ್ಚ ಧನಲೋಭಾದಸಾಧುಭಿಃ ॥೧೯॥

---

೧೬. ಸುರಥರಾಜನು ಈ ಬಗೆಯಿಂದಲೂ ಇನ್ನೂ ಹಲವಾರು ಬಗೆಯಿಂದಲೂ ಸಂತತವಾಗಿ ಚಿಂತಿಸಿದನು. ಆ ಸಮಯದಲ್ಲಿ ರಾಜನು ಅದೇ ಮುನಿಯ ಆಶ್ರಮದ ಬಳಿಯಲ್ಲಿ ಒಬ್ಬ ವೈಶ್ಯನನ್ನು ನೋಡಿದನು.

೧೭. ಆಗ ರಾಜನಿಂದ ಆ ವೈಶ್ಯನು ಈ ರೀತಿಯಾಗಿ ಪ್ರಶ್ನಿಸಲ್ಪಟ್ಟನು. ಅಯ್ಯಾ! ನೀನು ಯಾರು? ನೀನು ಇಲ್ಲಿಗೆ ಬರಲು ಏನು ಕಾರಣವು? ನೀನು ದುಃಖವುಳ್ಳವನಂತೆಯೂ ವ್ಯಾಕುಲವಾದ ಅಂತಃಕರಣವುಳ್ಳವನಂತೆಯೂ ಕಾಣುತ್ತಿದ್ದೀಯೆ, ಇದೇಕೆ?

೧೮. ಆಗ ಆ ವೈಶ್ಯನು ಪ್ರಣಯಪೂರ್ವಕವಾಗಿ ರಾಜನು ಆಡಿರುವ ಈ ಮಾತನ್ನು ಕೇಳಿ ವಿನಯದಿಂದ ಬಗ್ಗಿದವನಾಗಿ ಆ ರಾಜನನ್ನು ಕುರಿತು ಪ್ರತ್ಯುತ್ತರವನ್ನು ಹೇಳಿದನು.

ವೈಶ್ಯನು ಹೀಗೆಂದನು :—

೧೯. ನಾನು ಸಮಾಧಿ ಎಂಬ ನಾಮಾಂಕಿತನಾದ ವೈಶ್ಯನು. ನಾನು ದೊಡ್ಡ ಶ್ರೀಮಂತರ ಮನೆಯಲ್ಲಿ ಜನಿಸಿರುವೆನು. ಧನದ ಆಶೆಯಿಂದ ದುಷ್ಟರಾಗಿ ವರ್ತಿಸುವ ನನ್ನ ಪತ್ನೀಪುತ್ರರಿಂದ ಹೊರಗೆ ತಳ್ಳಲ್ಪಟ್ಟಿರುವೆನು.

ವಿಹೀನಃ ಸ್ವಜನೈರ್ದಾರೈಃ ಪುತ್ರೈರಾದಾಯಿ ಮೇ ಧನಮ್ ।
ವನಮಭ್ಯಾಗತೋ ದುಃಖೀ ನಿರಸ್ತಶ್ಚಾಪ್ತಬನ್ಧುಭಿಃ ॥೨೦॥

ಸೋಽಹಂ ನ ವೇದ್ಮಿ ಪುತ್ರಾಣಾಂ ಕುಶಲಾಕುಶಲಾತ್ಮಿಕಾಮ್ ।
ಪ್ರವೃತ್ತಿಂ ಸ್ವಜನಾನಾಂ ಚ ದಾರಾಣಾಂ ಚಾತ್ರ ಸಂಸ್ಥಿತಃ ॥೨೧॥

ಕಿಂ ನು ತೇಷಾಂ ಗೃಹೇ ಕ್ಷೇಮಮಕ್ಷೇಮಂ ಕಿಂ ನು ಸಾಮ್ಪ್ರತಮ್ ।
ಕಥಂ ತೇ ಕಿಂ ನು ಸದ್ವೃತ್ತಾ ದುರ್ವೃತ್ತಾಃ ಕಿಂ ನು ಮೇ ಸುತಾಃ॥೨೨॥

ರಾಜೋವಾಚ :—

ಯೈರ್ನಿರಸ್ತೋ ಭವಾಂಲ್ಲುಬ್ಧೈಃ ಪುತ್ರದಾರಾದಿಭಿರ್ಧನೈಃ ।
ತೇಷು ಕಿಂ ಭವತಃ ಸ್ನೇಹಮನುಬಧ್ನಾತಿ ಮಾನಸಮ್ ॥೨೩॥

---

೨೦. ಹಾಗೆ ನಾನು ಪತ್ನೀ-ಪುತ್ರ ಮುಂತಾದ ಸ್ವಜನರಿಂದ ಹಣವನ್ನು ಕಿತ್ತುಕೊಂಡು ಹೊರದೂಡಲ್ಪಟ್ಟವನೂ ಮತ್ತು ಆಪ್ತ ಬಂಧುಗಳಿಂದಲೂ ತ್ಯಜಿಸಲ್ಪಟ್ಟವನೂ ಆಗಿ ದುಃಖಪಡುತ್ತ ವನಕ್ಕೆ ಬಂದಿರುವೆನು.

೨೧. ಹಾಗೆ ಅನಾಥನಾಗಿ ಕಾಡಿಗೆ ಸೇರಿರುವ ನಾನು ಪುತ್ರ-ಪತ್ನೀ ಮತ್ತು ಸ್ವಜನರ ವಿಷಯದಲ್ಲಿ ಶುಭ-ಅಶುಭ ರೂಪವಾದ ಯೋಗಕ್ಷೇಮ ಸಮಾಚಾರವನ್ನು ತಿಳಿಯದೇ ಇರುವೆನು.

೨೨. ನನ್ನ ಸ್ವಜನರ ಮನೆಯಲ್ಲಿ ಈಗ ಎಲ್ಲ ಕ್ಷೇಮವಾಗಿರಬಹುದೆ? ಅಥವಾ ಈಗ ಏನಾದರೂ ಕ್ಷೇಮವಿಲ್ಲದಿದೆಯೆ? ನನ್ನ ಆ ಪುತ್ರರು ಈಗಲಾದರೂ ಒಳ್ಳೆಯ ನಡತೆಯುಳ್ಳವರಾಗಿರುವರೇ? ಅಥವಾ ಈಗಲೂ ಕೆಟ್ಟ ನಡತೆಯಲ್ಲಿಯೇ ಇರುವರೆ? ನನಗೆ ಇದೊಂದೂ ತಿಳಿಯದಾಗಿದೆ.

ರಾಜನು ಇಂತೆಂದನು :—

೨೩. ಐಶ್ವರ್ಯದಲ್ಲಿ ಲೋಭಿಗಳಾದ ಯಾವ ಹೆಂಡತಿ-ಮಕ್ಕಳು ಮೊದಲಾದ ಬಂಧುಜನರಿಂದ ನೀನು ಮನೆಯಿಂದ ಹೊರಗೆ ತಳ್ಳಲ್ಪಟ್ಟಿರುವೆಯೋ ಅಂತಹವರಲ್ಲಿ ನಿನ್ನ ಮನಸ್ಸು ಹಾಗೆಯೇ ಪ್ರೇಮವನ್ನು ಮುಂದುವರೆಸುತ್ತಿದೆಯಲ್ಲ. ಇದೇಕೆ?

ವೈಶ್ಯ ಉವಾಚ :—

ಏವಮೇತದ್ಯಥಾ ಪ್ರಾಹ ಭವಾನಸ್ಮದ್ಗತಂ ವಚಃ ।
ಕಿಂ ಕರೋಮಿ ನ ಬಧ್ನಾತಿ ಮಮ ನಿಷ್ಠುರತಾಂ ಮನಃ ॥೨೪॥

ಯೈಃ ಸನ್ತ್ಯಜ್ಯ ಪಿತೃಸ್ನೇಹಂ ಧನಲುಬ್ಧೈರ್ನಿರಾಕೃತಃ ।
ಪತಿಸ್ವಜನಹಾರ್ದಂ ಚ ಹಾರ್ದಿ ತೇಷ್ವೇವ ಮೇ ಮನಃ ॥೨೫॥

ಕಿಮೇತನ್ನಾಭಿಜಾನಾಮಿ ಜಾನನ್ನಪಿ ಮಹಾಮತೇ ।
ಯತ್ಪ್ರೇಮಪ್ರವಣಂ ಚಿತ್ತಂ ವಿಗುಣೇಷ್ವಪಿ ಬನ್ಧುಷು ॥೨೬॥

ತೇಷಾಂ ಕೃತೇ ಮೇ ನಿಶ್ವಾಸೋ ದೌರ್ಮನಸ್ಯಂ ಚ ಜಾಯತೇ ।
ಕರೋಮಿ ಕಿಂ ಯನ್ನ ಮನಸ್ತೇಷ್ವಪ್ರೀತಿಷು ನಿಷ್ಠುರಮ್ ॥೨೭॥

ವೈಶ್ಯನು ಹೇಳಿದನು :—

೨೪. “ ದ್ರೋಹವೆಣಿಸುತ್ತಿರುವ ಬಂಧುಗಳನ್ನು ನೀನು ಪ್ರೀತಿಸುತ್ತಿದ್ದೀಯೆ ” ಎಂದು ನೀನು ನನ್ನ ವಿಷಯದಲ್ಲಿ ಆಡಿದ ಮಾತು ನಿಜವಾಗಿದೆ. ಆದರೆ ನಾನೇನು ಮಾಡಲಿ? ನನ್ನ ಮನಸ್ಸು ಸ್ವಜನರಲ್ಲಿ ಕಠಿನತೆಯನ್ನು ಹೊಂದಿರಲಾರದು.

೨೫. ಯಾವ ಮಕ್ಕಳಿಂದ ಧನದಲ್ಲಿ ಲೋಭಿಗಳಾಗಿ ಅದರ ಪ್ರಭಾವದಿಂದ ಪಿತೃಭಕ್ತಿಯನ್ನು ದೂರಮಾಡಿ, ಹಾಗು ಯಾವ ಹೆಂಡತಿಯಿಂದ ಪತಿಸ್ವಜನ ಎಂಬೀ ಬಗೆಯಿಂದಲಾದರೂ ಇರಬೇಕಾದ ಸ್ನೇಹವನ್ನು ದೂರಮಾಡಿ ಓಡಿಸಲ್ಪಟ್ಟೆನೊ ಅದೇ ಪತ್ನೀ-ಪುತ್ರರಲ್ಲಿ ನನ್ನ ಮನಸ್ಸು ಪ್ರೇಮವುಳ್ಳದ್ದಾಗಿದೆ.

೨೬. ಎಲೈ ಪ್ರಜ್ಞಾಶಾಲಿಯಾದ ರಾಜನೇ ! ಪ್ರೀತಿ-ದಯೆ ಮುಂತಾದ ಗುಣಗಳಿಲ್ಲದ ಕಠಿನಚಿತ್ತರಾದ ಬಂಧುಗಳಲ್ಲಿ ಕೂಡ ನನ್ನ ಮನಸ್ಸು ಪ್ರೇಮಪೂರ್ಣವಾಗಿದೆ. ಅವರ ನಿರ್ಗುಣತೆಯನ್ನು ತಿಳಿದಿದ್ದರೂ ಇದೇಕೆ ಆಗುವುದೊ ಅದನ್ನು ನಾನು ತಿಳಿಯಲಾರೆನು.

೨೭. ಅಂತಹ ಪತ್ನಿ-ಪುತ್ರರಿಗೋಸ್ಕರ ಚಿಂತೆಯಿಂದ ನನಗೆ ನಿಟ್ಟುಸಿರು ಮತ್ತು ಮನದಲ್ಲಿ ಆತಂಕಗಳು ಉಂಟಾಗುತ್ತಿವೆ. ಪ್ರೀತಿಯಿಲ್ಲದ ಬಂಧು ಜನರಲ್ಲಿ ನನ್ನ ಮನಸ್ಸು ಏಕೋ ಕಠಿನವಾಗುವುದಿಲ್ಲ. ಇದಕ್ಕೆ ನಾನು ಏನು ಮಾಡಲಿ ?

ಮಾರ್ಕಣ್ಡೇಯ ಉವಾಚ :—

ತತಸ್ತೌ ಸಹಿತೌ ವಿಪ್ರ ತಂ ಮುನಿಂ ಸಮುಪಸ್ಥಿತೌ ।
ಸಮಾಧಿರ್ನಾಮ ವೈಶ್ಯೋಽಸೌ ಸ ಚ ಪಾರ್ಥಿವಸತ್ತಮಃ ॥೨೮॥

ಕೃತ್ವಾ ತು ತೌ ಯಥಾನ್ಯಾಯಂ ಯಥಾರ್ಹಂ ತೇನ ಸಂವಿದಮ್ ।
ಉಪವಿಷ್ಟೌ ಕಥಾಃ ಕಾಶ್ಚಿಚ್ಚಕ್ರತುರ್ವೈಶ್ಯಪಾರ್ಥಿವೌ ॥೨೯॥

ರಾಜೋವಾಚ :—

ಭಗವಂಸ್ತ್ವಾಮಹಂ ಪ್ರಷ್ಟುಮಿಚ್ಛಾಮ್ಯೇಕಂ ವದಸ್ವ ತತ್ ।
ದುಃಖಾಯ ಯನ್ಮೇ ಮನಸಃ ಸ್ವಚಿತ್ತಾಯತ್ತತಾಂ ವಿನಾ ॥೩೦॥

ಮಾರ್ಕಂಡೇಯ ಮುನಿಯು ಹೇಳಿದನು :—

೨೮. ಕ್ರೌಷ್ಟುಕಿ ಮುನಿಯೇ! ತರುವಾಯ ಸಮಾಧಿ ಎಂಬ ನಾಮಾಂಕಿತನಾದ ವೈಶ್ಯನೂ ಮತ್ತು ಸುರಥನೆಂಬ ರಾಜೋತ್ತಮನೂ ಇಬ್ಬರೂ ಸೇರಿ ಸುಮೇಧ ಮುನಿಯ ಬಳಿಗೆ ಹೋದರು.

೨೯. ಅಲ್ಲಿ ವೈಶ್ಯ ಮತ್ತು ಪಾರ್ಥಿವರಿಬ್ಬರು ಸಂಪ್ರದಾಯ-ಆಚಾರಗಳಿಗೆ ಒಪ್ಪುವಂತೆಯೂ ತಮ್ಮ ಅರ್ಹತೆಗೆ ಅನುರೂಪವಾಗಿರುವಂತೆಯೂ ಮುನಿಯ ಬಳಿಯಲ್ಲಿ ಸಂಭಾಷಣೆ ಮುಂತಾದ ವ್ಯವಹಾರವನ್ನು ನಡೆಸಿ ಅಲ್ಲಿ ಕುಳಿತುಕೊಂಡು ಪ್ರಾಸಂಗಿಕವಾಗಿ ಕೆಲವು ಮಾತುಕಥೆಗಳನ್ನು ಆಡಿದರು.

ರಾಜನು ಇಂತೆಂದನು :—

೩೦. ಸರ್ವೈಶ್ವರ್ಯಸಂಪನ್ನನಾದ ಮುನಿಯೇ! ಯಾವುದೋಂದು ವಿಷಯವು ನನ್ನ ಮನಸ್ಸಿನಲ್ಲಿ ಸ್ಥಿರತೆಯನ್ನು ಉಂಟುಮಾಡದೆ ಮನಸ್ಸಿಗೆ ದುಃಖವನ್ನು ಕೊಡುತ್ತಿದೆಯೋ ಅಂತಹ ಒಂದು ರಹಸ್ಯ ವಿಷಯವನ್ನು ನಿನ್ನಲ್ಲಿ ಕೇಳಲು ಬಯಸುತ್ತೇನೆ. ಅದನ್ನು ದಯೆಯಿಟ್ಟು ಹೇಳಬೇಕು.

ಮಮತ್ವಂ ಗತರಾಜ್ಯಸ್ಯ ರಾಜ್ಯಾಙ್ಗೇಷ್ವಖಿಲೇಷ್ವಪಿ ।
ಜಾನತೋಽಪಿ ಯಥಾಜ್ಞಸ್ಯ ಕಿಮೇತನ್ಮುನಿಸತ್ತಮ ||೩೧||

ಅಯಂ ಚ ನಿಕೃತಃ ಪುತ್ರೈರ್ದಾರೈರ್ಭೃತ್ಯೈಸ್ತಥೋಜ್ಝಿತಃ ।
ಸ್ವಜನೇನ ಚ ಸನ್ತ್ಯಕ್ತಸ್ತೇಷು ಹಾರ್ದೀ ತಥಾಪ್ಯತಿ ||೩೨||

ಏವಮೇಷ ತಥಾಹಂ ಚ ದ್ವಾವಪ್ಯತ್ಯನ್ತದುಃಖಿತೌ ।
ದೃಷ್ಟದೋಷೇಽಪಿ ವಿಷಯೇ ಮಮತ್ವಾಕೃಷ್ಟಮಾನಸೌ ||೩೩||

ತತ್ಕಿಮೇತನ್ಮಹಾಭಾಗ ಯನ್ಮೋಹೋ ಜ್ಞಾನಿನೋರಪಿ ।
ಮಮಾಸ್ಯ ಚ ಭವತ್ಯೇಷಾ ವಿವೇಕಾನ್ಧಸ್ಯ ಮೂಢತಾ ||೩೪||

---

೩೧. ಮುನಿಶ್ರೇಷ್ಠನಾದ ಸುಮೇಧಋಷಿಯೇ! ಪ್ರಪಂಚದ ಸ್ಥಿತಿ-ಗತಿಗಳನ್ನು ಅರಿತವನಾಗಿದ್ದರೂ ರಾಜ್ಯಭ್ರಷ್ಟನಾದ ನನಗೆ ಅಜ್ಞಾನಿಯಾದ ಮನುಷ್ಯನಂತೆ ಅಖಿಲ ರಾಜ್ಯಾಂಗಗಳಲ್ಲಿ ಮೊದಲಿನಂತೆ ಮಮತ್ವಭಾವನೆಯು ಅಂಟಿಕೊಂಡಿರುವುದು. ಇದು ಏಕೆ?

೩೨. ಈ ವೈಶ್ಯನು ಮಕ್ಕಳಿಂದ ಅವಮಾನಗೊಳಿಸಲ್ಪಟ್ಟಿರುವನು. ಪತ್ನೀ–ಸೇವಕರಿಂದ ನಿರಾಕರಿಸಲ್ಪಟ್ಟಿರುವನು. ಹಾಗು ಸ್ವಜನರಿಂದ ಕೂಡ ತ್ಯಜಿಸಲ್ಪಟ್ಟಿದ್ದಾನೆ. ಆದರೂ ಆ ಪತ್ನೀ-ಪುತ್ರ-ಭೃತ್ಯ-ಸ್ವಜನರಲ್ಲಿ ವಿಶೇಷವಾಗಿ ಪ್ರೀತಿಯುಳ್ಳವನಾಗಿದ್ದಾನೆ.

೩೩. ಹೀಗೆ ಈ ವೈಶ್ಯನು ಮತ್ತು ಇವನಂತೆಯೇ ನಾನು ಇಬ್ಬರೂ ಕೂಡ ಅತಿಯಾಗಿ ದುಃಖಕ್ಕೆ ಸಿಲುಕಿದ್ದೇವೆ. ದೋಷವನ್ನು ಕಂಡಿರುವ ಪತ್ನಿ–ಪುತ್ರ ಮುಂತಾದ ಪರಿವಾರದಲ್ಲಿ ಮಮತ್ವದಿಂದ ಸೆಳೆಯಲ್ಪಟ್ಟ ಮನಸ್ಸುಳ್ಳವ–ರಾಗಿದ್ದೇವೆ.

೩೪. ಮಹತ್ತಾದ ಭಾಗ್ಯದನಿಧಿಯೇ! ಜ್ಞಾನವಂತರಿಗೆ ಕೂಡ ಹೀಗೆ ಮೋಹದ ಆವರಣವುಂಟಾಗಿರುವುದು. ಇದೇಕೆ? ಮಮತೆಯನ್ನು ಇಡಬಹುದೆ? ಇಡಬಾರದೆ? ಎಂಬ ವಿವೇಕವನ್ನು ಕಳೆದುಕೊಂಡ ನಮ್ಮಿಬ್ಬರಿಗೂ ಈರೀತಿ ಮೂಢತನವು ಪ್ರಾಪ್ತವಾಗಿದೆ.

ಋಷಿರುವಾಚ :—

ಜ್ಞಾನಮಸ್ತಿ ಸಮಸ್ತಸ್ಯ ಜನ್ತೋರ್ವಿಷಯಗೋಚರೇ ।
ವಿಷಯಾಶ್ಚ ಮಹಾಭಾಗ ಯಾನ್ತಿ ಚೈವಂ ಪೃಥಕ್ ಪೃಥಕ್ ॥೩೫॥

ದಿವಾನ್ಧಾಃ ಪ್ರಾಣಿನಃ ಕೇಚಿದ್ರಾತ್ರಾವನ್ಧಾಸ್ತಥಾಪರೇ ।
ಕೇಚಿದ್ದಿವಾ ತಥಾ ರಾತ್ರೌ ಪ್ರಾಣಿನಸ್ತುಲ್ಯದೃಷ್ಟಯಃ ॥೩೬॥

ಜ್ಞಾನಿನೋ ಮನುಜಾಃ ಸತ್ಯಂ ಕಿನ್ತು ತೇ ನ ಹಿ ಕೇವಲಮ್ ।
ಯತೋ ಹಿ ಜ್ಞಾನಿನಃ ಸರ್ವೇ ಪಶುಪಕ್ಷಿಮೃಗಾದಯಃ ॥೩೭॥

ಜ್ಞಾನಂ ನ ತನ್ಮನುಷ್ಯಾಣಾಂ ಯತ್ತೇಷಾಂ ಮೃಗಪಕ್ಷಿಣಾಮ್ ।
ಮನುಷ್ಯಾಣಾಂ ಚ ಯತ್ತೇಷಾಂ ತುಲ್ಯಮನ್ಯತ್ತಥೋಭಯೋಃ॥೩೮॥

ಸುಮೇಧಮುನಿಯು ಹೇಳಿದನು :—

೩೫. ಭಾಗ್ಯಸಂಪನ್ನನಾದ ರಾಜನೇ! ಎಲ್ಲ ಜಂತುಗಳಿಗೂ ತಮಗೆ ಭೋಗ್ಯವಾದ ವಿಷಯಗಳಲ್ಲಿ ಜ್ಞಾನವಿದ್ದೇ ಇದೆ. ಅಂತಹ ಭೋಗ್ಯವಿಷಯಗಳು ಜಂತುವಿನ ಜನ್ಮಾಂತರಸಂಸ್ಕಾರದಿಂದ ನಾನಾಬಗೆಯಾಗಿ ಗೋಚರವಾಗುತ್ತವೆ.

೩೬. ಹಾಗೆ ವಿಷಯಜ್ಞಾನವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಕೆಲವು ಪ್ರಾಣಿಗಳು ಹಗಲಿನಲ್ಲಿ ವಿಷಯಗಳನ್ನು ತಿಳಿಯಲಾರದೆ ಕುರುಡಾಗಿರುತ್ತವೆ. ಮತ್ತೆ ಕೆಲವು ರಾತ್ರಿಯಲ್ಲಿ ಕುರುಡಾಗಿರುತ್ತವೆ. ಕೆಲವು ಪ್ರಾಣಿಗಳು ಮಾತ್ರ ಹಗಲು-ರಾತ್ರಿಗಳಲ್ಲಿ ಸಮಾನವಾದ ಜ್ಞಾನವುಳ್ಳವುಗಳಾಗಿರುತ್ತವೆ.

೩೭. ಮಾನವರು ಜ್ಞಾನಸಂಪನ್ನರೆಂಬುದು ನಿಜ. ಆದರೆ ಮಾನವರು ಮಾತ್ರ ಜ್ಞಾನವಂತರೆನ್ನಲಾಗುವುದಿಲ್ಲ. ಪಶು–ಪಕ್ಷಿ–ಮೃಗ ಮುಂತಾದ ಎಲ್ಲ ಜಂತುಗಳು ಜ್ಞಾನಸಂಪನ್ನವಾಗಿವೆ.

೩೮. ಆ ಪಶು-ಪಕ್ಷಿಗಳಿಗೆ ತಮ್ಮ ಜಾತಿಗೆ ತಕ್ಕಂತೆ ದೊರೆಯುವ ಭೋಗ್ಯವಿಷಯಗಳಲ್ಲಿ ಯಾವ ಜ್ಞಾನವಿದೆಯೋ ಹಾಗೆಯೆ ಮಾನವರಿಗೆ ಭೋಗ್ಯವಿಷಯಗಳಲ್ಲಿ ಯಾವ ಜ್ಞಾನವಿದೆಯೋ ಅದು ಪ್ರಾಣಿ-ಮನುಷ್ಯರಿಗೆ ತುಲ್ಯವಾಗಿದೆ. ಮಾನವರಲ್ಲಿ ಮಾತ್ರ ಇರುವ ಶಾಸ್ತ್ರ ಅಭ್ಯಾಸದಿಂದ ಉಂಟಾಗುವ ವಿವೇಕಜ್ಞಾನವು ಪಶುಪಕ್ಷಿಗಳಲ್ಲಿ ಇರುವುದಿಲ್ಲ.

ಜ್ಞಾನೇಽಪಿ ಸತಿ ಪಶ್ಯೈತಾನ್ಪತಙ್ಗಾಞ್ಛಾವಚಞ್ಚುಷು ।
ಕಣಮೋಕ್ಷಾದೃತಾನ್ಮೋಹಾತ್ಪೀಡ್ಯಮಾನಾನಪಿ ಕ್ಷುಧಾ ॥೩೯॥

ಮಾನುಷಾ ಮನುಷವ್ಯಾಘ್ರ ಸಾಭಿಲಾಷಾಃ ಸುತಾನ್ಪ್ರತಿ ।
ಲೋಭಾತ್ಪ್ರತ್ಯುಪಕಾರಾಯ ನನ್ವೇತಾನ್ಕಿಂ ನ ಪಶ್ಯಸಿ ॥೪೦॥

ತಥಾಪಿ ಮಮತಾವರ್ತೇ ಮೋಹಗರ್ತೇ ನಿಪಾತಿತಾಃ ।
ಮಹಾಮಾಯಾಪ್ರಭಾವೇಣ ಸಂಸಾರಸ್ಥಿತಿಕಾರಿಣಾ ॥೪೧॥

ತನ್ನಾತ್ರ ವಿಸ್ಮಯಃ ಕಾರ್ಯೋ ಯೋಗನಿದ್ರಾ ಜಗತ್ಪತೇಃ ।
ಮಹಾಮಾಯಾ ಹರೇಶ್ಚೈಷಾ ತಯಾ ಸಂಮೋಹ್ಯತೇ ಜಗತ್ ॥೪೨॥

---

೩೯. ಈ ಪಕ್ಷಿಗಳು ತಾವು ತಂದಿರುವ ಧಾನ್ಯಕಣಗಳನ್ನು ತಿಂದು ಹಸಿವನ್ನು ಅಡಗಿಸಿಕೊಳ್ಳಬಹುದೆಂದು ತಿಳಿದಿದ್ದರೂ ತಾವು ಹಸಿವಿನ ಪೀಡೆಯನ್ನು ಅನುಭವಿಸುತ್ತ ಮಮತೆಯಿಂದ ಮರಿಗಳ ಕೊಕ್ಕಿನಲ್ಲಿ ಕಣಗಳನ್ನು ಹಾಕಲು ಆದರದಿಂದ ಕೂಡಿವೆ. ಅದನ್ನು ನೋಡು.

೪೦. ಎಲೈ ಮಾನವೋತ್ತಮನೇ! ಪ್ರತ್ಯುಪಕಾರವನ್ನು ಮಾಡುವರೆಂಬ ಲೋಭದಿಂದ ಮಕ್ಕಳಲ್ಲಿ ಮಾನವರು ಅಭಿಲಾಷೆಯುಳ್ಳವರಾಗುತ್ತಾರೆ. ಮರಿಗಳಲ್ಲಿ ಪ್ರೀತಿಯಿಡುತ್ತಿರುವ ಈ ಪಕ್ಷಿಗಳನ್ನು ನೀನು ನೋಡುತ್ತ ಇಲ್ಲವೆ ?

೪೧. ಮಾನವರು ಪಶು-ಪಕ್ಷಿಗಳಿಗಿಂತಲೂ ವಿಶೇಷವಾದ ಶಾಸ್ತ್ರೀಯ ವಿವೇಕದಿಂದ ಕೂಡಿದವರಾದರೂ ಸಂಸಾರ ಪ್ರವಾಹವನ್ನು ನಡೆಯಿಸುತ್ತಿರುವ ಮಹಾಮಾಯೆಯ ಪ್ರಭಾವದಿಂದ ಮಮತೆಯೆಂಬ ಸುಳಿಯಿಂದ ಕೂಡಿದ ಮೋಹವೆಂಬ ಹಳ್ಳದಲ್ಲಿ ಹಾಕಲ್ಪಟ್ಟಿರುವರು.

೪೨. ಆದುದರಿಂದ ಈ ವಿಷಯದಲ್ಲಿ ವಿಸ್ಮಯಪಡಬೇಕಾದುದಿಲ್ಲ. ಜಗತ್ತನ್ನು ಪಾಲಿಸುವ ವಿಷ್ಣುಪರಮಾತ್ಮನ ಯೋಗನಿದ್ರೆಯಿದು. ಮತ್ತು ಶ್ರೀಮನ್ನಾರಾಯಣನ ಮಹಾಮಾಯೆಯಿದು. ಆದುದರಿಂದ ಎಲ್ಲ ಜಗತ್ತು ಮೋಹಗೊಳಿಸಲ್ಪಟ್ಟಿದೆ.

ಜ್ಞಾನಿನಾಮಪಿ ಚೇತಾಂಸಿ ದೇವೀ ಭಗವತೀ ಹಿ ಸಾ ।
ಬಲಾದಾಕೃಷ್ಯ ಮೋಹಾಯ ಮಹಾಮಾಯಾ ಪ್ರಯಚ್ಛತಿ ॥೪೩॥

ತಯಾ ವಿಸೃಜ್ಯತೇ ವಿಶ್ವಂ ಜಗದೇತಚ್ಚರಾಚರಮ್ ।
ಸೈಷಾ ಪ್ರಸನ್ನಾ ವರದಾ ನೃಣಾಂ ಭವತಿ ಮುಕ್ತಯೇ ॥೪೪॥

ಸಾ ವಿದ್ಯಾ ಪರಮಾ ಮುಕ್ತೇರ್ಹೇತುಭೂತಾ ಸನಾತನೀ ।
ಸಂಸಾರಬನ್ಧಹೇತುಶ್ಚ ಸೈವ ಸರ್ವೇಶ್ವರೇಶ್ವರೀ ॥೪೫॥

ರಾಜೋವಾಚ :—

ಭಗವನ್ ಕಾ ಹಿ ಸಾ ದೇವೀ ಮಹಾಮಾಯೇತಿ ಯಾಂ ಭವಾನ್ ।
ಬ್ರವೀತಿ ಕಥಮುತ್ಪನ್ನಾ ಕರ್ಮ ಚಾಸ್ಯಾಶ್ಚ ಕಿಂ ದ್ವಿಜ ॥೪೬॥

---

೪೩. ಸರ್ವೈಶ್ವರ್ಯದಿಂದ ಕೂಡಿದ, ಅನಾದಿಯಾದ ಮತ್ತು ಪ್ರಭಾವದಿಂದ ಕೂಡಿದ ಮಹಾಮಾಯೆಯು ಜ್ಞಾನವಂತರ ಮನಸ್ಸನ್ನು ಕೂಡ ಬಲಾತ್ಕಾರದಿಂದ ಸೆಳೆದು ವಿವೇಕ ಭ್ರಷ್ಟವನ್ನಾಗಿ ಮಾಡಿ ಮೋಹಾವಸ್ಥೆಗೆ ತಂದುಬಿಡುವುದು.

೪೪. ಚರ–ಅಚರ ಪ್ರಾಣಿವರ್ಗದಿಂದ ಕೂಡಿದ ಈ ಪ್ರಪಂಚವು ಮಹಾಮಾಯೆಯಿಂದ ಸೃಷ್ಟಿಮಾಡಲ್ಪಡುವುದು. ಜಗತ್ತಿಗೆ ಕಾರಣಳಾದ ಮಹಾಮಾಯೆಯು ವರವನ್ನು ನೀಡಲು ಅನುಗ್ರಹಮಾಡಿದರೆ ಮಾನವರಿಗೆ ಮುಕ್ತಿಯನ್ನು ಕೊಡುವಳು.

೪೫. ಆ ಮಹಾಮಾಯೆಯು ಪರಮಾರ್ಥವಲ್ಲದ ತನ್ನ ಪ್ರವರ್ತಕತ್ವರೂಪದಿಂದ ಮುಕ್ತಿಪಥವನ್ನು ಬಿಟ್ಟು ಧರ್ಮ-ಅರ್ಥ ಕಾಮವೆಂಬ ತ್ರಿವರ್ಗಕ್ಕೆ ಕಾರಣವಾಗುವಳು. ಹಾಗು ಅನಾದಿಯಾದ ಮಹಾಮಾಯೆಯು ಸಂಸಾರ ಬಂಧಕ್ಕೆ ಕಾರಣಳೂ ಮತ್ತು ಸರ್ವೇಶ್ವರರಿಗೆ ಈಶ್ವರಿಯೂ ಆಗಿರುವಳು.

ರಾಜನು ಇಂತೆಂದನು :—

೪೬. ಸರ್ವೈಶ್ವರ್ಯಸಂಪನ್ನನಾದ ಸುಮೇಧಮುನಿಯೇ! ನೀನು ಮಹಾಮಾಯೆಯೆಂಬ ಹೆಸರಿನಿಂದ ಯಾವ ಪರಮಶಕ್ತಿಯನ್ನು ಕರೆಯುವೆಯೋ ಆ ಪರಾಶಕ್ತಿದೇವಿಯು ಯಾರು? ಅವಳು ಎಲ್ಲಿ ಹುಟ್ಟಿದಳು? ಅವಳ ವ್ಯಾಪಾರವೇನು?

ಯತ್ಪ್ರಭಾವಾ ಚ ಸಾ ದೇವೀ ಯತ್ಸ್ವರೂಪಾ ಯದುದ್ಭವಾ ।
ತತ್ಸರ್ವಂ ಶ್ರೋತುಮಿಚ್ಛಾಮಿ ತ್ವತ್ತೋ ಬ್ರಹ್ಮವಿದಾಂ ವರ ॥೪೭॥

ಋಷಿರುವಾಚ :—

ನಿತ್ಯೈವ ಸಾ ಜಗನ್ಮೂರ್ತಿಸ್ತಯಾ ಸರ್ವಮಿದಂ ತತಮ್ ।
ತಥಾಪಿ ತತ್ಸಮುತ್ಪತ್ತಿರ್ಬಹುಧಾ ಶ್ರೂಯತಾಂ ಮಮ ॥೪೮॥

ದೇವಾನಾಂ ಕಾರ್ಯಸಿದ್ಧ್ಯರ್ಥಮಾವಿರ್ಭವತಿ ಸಾ ಯದಾ ।
ಉತ್ಪನ್ನೇತಿ ತದಾ ಲೋಕೇ ಸಾ ನಿತ್ಯಾಪ್ಯಭಿಧೀಯತೇ ॥೪೯॥

ಯೋಗನಿದ್ರಾಂ ಯದಾ ವಿಷ್ಣುರ್ಜಗತ್ಯೇಕಾರ್ಣವೀಕೃತೇ ।
ಆಸ್ತೀರ್ಯ ಶೇಷಮಭಜತ್ಕಲ್ಪಾನ್ತೇ ಭಗವಾನ್ಪ್ರಭುಃ ॥೫೦॥

---

೪೭. ಬ್ರಹ್ಮವೇತ್ತರಲ್ಲಿ ಗಣ್ಯನಾದ ಮುನಿಯೇ ! ಆ ಮಹಾಮಾಯಾ-ದೇವಿಯು ಯಾವ ಪ್ರಭಾವದಿಂದ ಕೂಡಿರುವಳು ? ಯಾವ ಸ್ವರೂಪವುಳ್ಳವಳು ? ಮತ್ತು ಯಾವುದರಿಂದ ಜನಿಸಿದವಳು ? ಇದೆಲ್ಲವನ್ನೂ ನಿನ್ನಿಂದ ನಾನು ಶ್ರವಣಮಾಡಲು ಕುತೂಹಲಿಯಾಗಿರುವೆನು.

ಸುಮೇಧಋಷಿಯು ನುಡಿದನು :—

೪೮. ವಿಶ್ವರೂಪಿಣಿಯಾದ ಮಹಾಮಾಯೆಯು ನಿತ್ಯಳಾಗಿರುವಳು. ಅವಳಿಂದ ಈ ಸಮಸ್ತ ವಿಶ್ವವು ಆವರಿಸಲ್ಪಟ್ಟಿರುವುದು. ಹಾಗೆ ನಿತ್ಯಳಾಗಿದ್ದ ಆದಿಶಕ್ತಿಯ ಬಗೆಬಗೆಯ ಉತ್ಪತ್ತಿಯನ್ನು ನನ್ನಿಂದ ಕೇಳು.

೪೯. ಆದಿಶಕ್ತಿಯು ದೇವತೆಗಳ ಸಹಾಯಕಾರ್ಯವನ್ನು ಸಾಧಿಸುವುದ-ಕ್ಕೋಸ್ಕರ ಯಾವ ಯಾವ ಸಮಯಗಳಲ್ಲಿ ಆವಿರ್ಭಾವವನ್ನು ಹೊಂದುವಳೊ, ಆಗ ನಿತ್ಯಳಾಗಿದ್ದ ಪರಾಶಕ್ತಿಯನ್ನು ಉತ್ಪನ್ನಳೆಂದು ಲೋಕದಲ್ಲಿ ಹೇಳಿ-ಕೊಳ್ಳುವರು.

೫೦. ಅಖಂಡೈಶ್ವರ್ಯಸಂಪನ್ನನೂ, ವಿಶ್ವನಿಯಾಮಕನೂ ಆದ ಶ್ರೀಮನ್ನಾರಾಯಣನು ಕಲ್ಪದ ಅವಸಾನದಲ್ಲಿ ಪ್ರಪಂಚವೆಲ್ಲ ಎಲ್ಲೆಲ್ಲೂ ಜಲರಾಶಿಮಯವಾಗಿರಲು ಆದಿಶೇಷವೆಂಬ ತನ್ನ ಶಯನವನ್ನು ಹಾಸಿಕೊಂಡು ಯೋಗನಿದ್ರೆಯನ್ನು ಹೊಂದಿದನು.

ತದಾ ದ್ವಾವಸುರೌ ಘೋರೌ ವಿಖ್ಯಾತೌ ಮಧುಕೈಟಭೌ ।
ವಿಷ್ಣುಕರ್ಣಮಲೋದ್ಭೂತೌ ಹನ್ತುಂ ಬ್ರಹ್ಮಾಣಮುದ್ಯತೌ ॥೫೧॥

ಸ ನಾಭಿಕಮಲೇ ವಿಷ್ಣೋಃ ಸ್ಥಿತೋ ಬ್ರಹ್ಮಾ ಪ್ರಜಾಪತಿಃ ।
ದೃಷ್ಟ್ವಾ ತಾವಸುರೌ ಚೋಗ್ರೌ ಪ್ರಸುಪ್ತಂ ಚ ಜನಾರ್ದನಮ್ ॥೫೨॥

ತುಷ್ಟಾವ ಯೋಗನಿದ್ರಾಂ ತಾಮೇಕಾಗ್ರಹೃದಯಃ ಸ್ಥಿತಃ ।
ಪ್ರಬೋಧನಾರ್ಥಾಯ ಹರೇರ್ಹರಿನೇತ್ರಕೃತಾಲಯಾಮ್ ॥೫೩॥

ಬ್ರಹ್ಮೋವಾಚ :—

ವಿಶ್ವೇಶ್ವರೀಂ ಜಗದ್ಧಾತ್ರೀಂ ಸ್ಥಿತಿಸಂಹಾರಕಾರಿಣೀಮ್ ।
ಸ್ತೌಮಿ ನಿದ್ರಾಂ ಭಗವತೀಂ ವಿಷ್ಣೋರತುಲತೇಜಸಃ ॥೫೪॥

---

೫೧. ಆ ಸಮಯದಲ್ಲಿ ಮಧು-ಕೈಟಭ ಎಂದು ನಾಮಾಂಕನದಿಂದ ಖ್ಯಾತಿಹೊಂದಿರುವ ಘೋರಾಕಾರದ ಇಬ್ಬರು ಅಸುರರು ವಿಷ್ಣುವಿನ ಕಿವಿಗಳ ಮಲದಿಂದ ಜನಿಸಿದರು. ಅವರು ಬ್ರಹ್ಮದೇವನನ್ನು ವಧಿಸಲು ಯತ್ನಿಸಿದರು.

೫೨. ಆಗ ವಿಷ್ಣುಪರಮಾತ್ಮನ ನಾಭಿಕಮಲದಲ್ಲಿರುವ ಪ್ರಜಾಪಾಲಕನಾದ ಬ್ರಹ್ಮದೇವನು ಉಗ್ರರೂಪದ ಇಬ್ಬರು ಅಸುರರು ತನ್ನನ್ನು ಸಂಹರಿಸಲು ಬರುತ್ತಿರುವುದನ್ನೂ, ವಿಷ್ಣುಪರಮಾತ್ಮನು ಯೋಗನಿದ್ರೆಯಿಂದ ಆಕ್ರಾಂತನಾದುದನ್ನೂ ಕಂಡನು.

೫೩. ಆಗ ವಿಷ್ಣುಪರಮಾತ್ಮನನ್ನು ಎಚ್ಚರಗೊಳಿಸುವುದಕ್ಕೋಸ್ಕರ ವಿಷ್ಣುವಿನ ಕಣ್ಣುಗಳಲ್ಲಿ ಬಂದು ವಾಸಹೊಂದಿರುವ ಯೋಗನಿದ್ರೆಯನ್ನು ಏಕಾಗ್ರತೆಯನ್ನು ಹೊಂದಿದ ಚಿತ್ತವುಳ್ಳವನಾಗಿ ಸ್ತೋತ್ರಮಾಡಿದನು.

ಬ್ರಹ್ಮದೇವನು ಹೀಗೆ ಸ್ತುತಿಮಾಡಿದನು :—

೫೪. ವಿಶ್ವಕ್ಕೆ ಈಶ್ವರಿಯೂ, ವಿಶ್ವದ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣಳೂ, ವಿಶ್ವಾಧಾರಳೂ, ನಿರುಪಮವಾದ ತೇಜಸ್ಸಿನಿಂದ ಕೂಡಿದ ವಿಷ್ಣುಪರಮಾತ್ಮನ ಅಂಶರೂಪಳೂ ಆದ ಭಗವತಿಯಾದ ಯೋಗನಿದ್ರೆಯನ್ನು ಸ್ತುತಿಸುವೆನು.

ತ್ವಂ ಸ್ವಾಹಾ ತ್ವಂ ಸ್ವಧಾ ತ್ವಂ ಹಿ ವಷಟ್ಕಾರಃ ಸ್ವರಾತ್ಮಿಕಾ ।
ಸುಧಾ ತ್ವಮಕ್ಷರೇ ನಿತ್ಯೇ ತ್ರಿಧಾಮಾತ್ರಾತ್ಮಿಕಾ ಸ್ಥಿತಾ ॥೫೫॥

ಅರ್ಧಮಾತ್ರಾ ಸ್ಥಿತಾ ನಿತ್ಯಾ ಯಾನುಚ್ಚಾರ್ಯಾ ವಿಶೇಷತಃ ।
ತ್ವಮೇವ ಸನ್ಧ್ಯಾ ಸಾವಿತ್ರೀ ತ್ವಂ ದೇವಿ ಜನನೀ ಪರಾ ॥೫೬॥

ತ್ವಯೈತದ್ಧಾರ್ಯತೇ ವಿಶ್ವಂ ತ್ವಯೈತತ್ಸೃಜ್ಯತೇ ಜಗತ್ ।
ತ್ವಯೈತತ್ಪಾಲ್ಯತೇ ದೇವಿ ತ್ವಮತ್ಸ್ಯನ್ತೇ ಚ ಸರ್ವದಾ ॥೫೭॥

ವಿಸೃಷ್ಟೌ ಸೃಷ್ಟಿರೂಪಾ ತ್ವಂ ಸ್ಥಿತಿರೂಪಾ ಚ ಪಾಲನೇ ।
ತಥಾ ಸಂಹೃತಿರೂಪಾನ್ತೇ ಜಗತೋಽಸ್ಯ ಜಗನ್ಮಯೇ ॥೫೮॥

---

೫೫. ಶಾಶ್ವತಸ್ವರೂಪಳೇ! ಸ್ಥಿರರೂಪಳೇ! ನೀನು ದೇವತೆಗಳಿಗೆ ಹವಿಸ್ಸನ್ನು ಒಪ್ಪಿಸುವ ಸ್ವಾಹಾಮಂತ್ರಸ್ವರೂಪಳು. ನೀನು ಪಿತೃಗಳಿಗೆ ಕವ್ಯವನ್ನು ಒಪ್ಪಿಸುವ ಸ್ವಧಾಸ್ವರೂಪಳು. ನೀನು ವಷಟ್‌ಮಂತ್ರಸ್ವರೂಪಳು. ನೀನು ಸ್ವರ್ಗಲೋಕಸ್ವರೂಪಳು. ನೀನು ಅಮೃತವನ್ನು ಪಾನಮಾಡುವ ದೇವಿಯು. ಮತ್ತು ಉದಾತ್ತ-ಅನುದಾತ್ತ-ಸ್ವರಿತವೆಂಬ ಮೂರು ಬಗೆಯಿಂದ ಮಾತ್ರಾಸ್ವರೂಪದ ವರ್ಣಮಾಲೆಯಾಗಿದ್ದೀಯೆ.

೫೬. ಮತ್ತು ನೀನು ವ್ಯಂಜನವರ್ಣದ ರೂಪದಿಂದ ಅರ್ಧಮಾತ್ರಾ-ಸ್ವರೂಪಿಣಿಯು. ನೀನು ನಿತ್ಯಳು. ನೀನು ವಾಙ್ಮನಸಗಳಿಗೆ ವೇದ್ಯಳಲ್ಲವ್ವರಿಂದ ಉಚ್ಚಾರಣಮಾಡಲು ಶಕ್ಯವಲ್ಲದವಳು. ನೀನು ಸಂಧ್ಯಾದೇವಿಯು. ನೀನು ಸಾವಿತ್ರೀಮಂತ್ರರೂಪಳು. ಮತ್ತು ದೇವಿಯೇ! ನೀನು ಸರ್ವೋತ್ತಮಳಾದ ವೇದಮಾತೆಯಾಗಿದ್ದೀಯೆ.

೫೭. ಮಹಾಮಾಯಾದೇವಿಯೇ! ಈ ವಿಶ್ವವು ನಿನ್ನಿಂದ ಧರಿಸಲ್ಪ-ಟ್ಟಿರುವುದು. ಈ ಜಗತ್ತು ನಿನ್ನಿಂದ ಸೃಜಿಸಲ್ಪಡುವುದು. ಈ ಪ್ರಪಂಚವು ನಿನ್ನಿಂದ ಪಾಲಿಸಲ್ಪಡುವುದು. ಮತ್ತು ನೀನು ಯಾವಾಗಲೂ ಪ್ರಲಯದಲ್ಲಿ ಇವನ್ನು ಸಂಹರಿಸುತ್ತೀಯೆ.

೫೮. ವಿಶ್ವರೂಪಿಣಿಯಾದ ಮಹಾದೇವಿಯೇ! ಈ ಜಗತ್ತಿನ ಸೃಷ್ಟಿ-ಸಮಯದಲ್ಲಿ ಸೃಷ್ಟಿಶಕ್ತಿಸ್ವರೂಪಿಣಿಯೂ, ಪಾಲನ ಸಮಯದಲ್ಲಿ ಪಾಲನಶಕ್ತಿ-ಸ್ವರೂಪಿಣಿಯೂ ಮತ್ತು ಹಾಗೆಯೇ ಸಂಹಾರ ಸಮಯದಲ್ಲಿ ಸಂಹಾರಶಕ್ತಿ-ಸ್ವರೂಪಳೂ ಆಗಿರುತ್ತೀಯೆ.

ಮಹಾವಿದ್ಯಾ ಮಹಾಮಾಯಾ ಮಹಾಮೇಧಾ ಮಹಾಸ್ಮೃತಿಃ ।
ಮಹಾಮೋಹಾ ಭಗವತೀ ಮಹಾದೇವೀ ಮಹೇಶ್ವರೀ ॥೫೯॥

ಪ್ರಕೃತಿಸ್ತ್ವಂ ಚ ಸರ್ವಸ್ಯ ಗುಣತ್ರಯವಿಭಾವಿನೀ ।
ಕಾಲರಾತ್ರಿರ್ಮಹಾರಾತ್ರಿರ್ಮೋಹರಾತ್ರಿಶ್ಚ ದಾರುಣಾ ॥೬೦॥

ತ್ವಂ ಶ್ರೀಸ್ತ್ವಮೀಶ್ವರೀ ತ್ವಂ ಹ್ರೀಸ್ತ್ವಂ ಬುದ್ಧಿರ್ಬೋಧಲಕ್ಷಣಾ ।
ಲಜ್ಜಾ ಪುಷ್ಟಿಸ್ತಥಾ ತುಷ್ಟಿಸ್ತ್ವಂ ಶಾಂತಿಃ ಕ್ಷಾಂತಿರೇವ ಚ ॥೬೧॥

---

೫೯. ಯೋಗನಿದ್ರಾದೇವಿಯೇ! ನೀನು ಮುಕ್ತಿಯನ್ನು ಕೊಡುವ ಮಹಾವಿದ್ಯೆಯು. ನೀನು ವಿವೇಕವನ್ನು ಆವರಿಸುವ ಮಹಾಮಾಯೆಯು. ನೀನು ಮನಸ್ಸಿನಲ್ಲುಂಟಾಗುವ ಧಾರಣಾಶಕ್ತಿಯು. ನೀನು ಪ್ರಾಣಿಗಳ ಸ್ಮರಣಶಕ್ತಿಯು. ನೀನು ಭ್ರಾಂತಿಯನ್ನು ಕೊಡುವ ಮೋಹಸ್ವರೂಪಳು. ನೀನು ಅಖಂಡೈಶ್ವರ್ಯಸಂಪನ್ನಳು. ನೀನು ಮಹಾದೇವನ ಪತ್ನಿಯು. ಮತ್ತು ನೀನು ಸರ್ವೇಶ್ವರಿಯು ಆಗಿದ್ದೀಯೆ.

೬೦. ನೀನು ಹುಟ್ಟುವ ಸಮಸ್ತ ವಸ್ತುಗಳಿಗೆ ಮೂಲಕಾರಣಳು. ನೀನು ಸತ್ತ್ವ-ರಜಸ್ಸು-ತಮಸ್ಸು ಈ ಗುಣಗಳಿಗೆ ಸುಖ-ದುಃಖ-ಮೋಹ ಸ್ವಭಾವಗಳನ್ನು ಕೊಟ್ಟವಳು. ನೀನು ಜಗತ್ತಿನ ಸಂಹಾರಕಳಾದ ಕಾಲರಾತ್ರಿಯು. ನೀನು ಬ್ರಹ್ಮನನ್ನು ವಿಶ್ರಾಂತಿಗೊಳಿಸುವ ಮಹಾರಾತ್ರಿಯು ಮತ್ತು ಭಯಂಕರವಾದ ಮಮತಾಮಯವಾದ ಮೋಹರಾತ್ರಿಯೂ ಆಗಿದ್ದೀಯೆ.

೬೧. ನೀನು ಸಂಪತ್ತಿಯ ಸ್ವರೂಪಳು. ನೀನು ಮಹೇಶ್ವರನ ಪತ್ನಿಯು. ನೀನು ಹ್ರೀಂಕಾರದ ಅವಯವವಾದ ಪ್ರಾಣವಾಚಕವಾದ ಹ್ರೀಕಾರಸ್ವರೂಪಳು. ನೀನು ಚೈತನ್ಯಸ್ವರೂಪಳು. ನೀನು ಪ್ರಮಾಣಗಳಿಂದುಂಟಾಗುವ ಬುದ್ಧಿವೃತ್ತಿಯು. ನೀನು ನಾಚಿಕೆಯ ಸ್ವರೂಪಳು. ನೀನು ಪುಷ್ಟಿಯು, ನೀನು ಪ್ರೀತಿಯು, ನೀನು ವಿಷಯವ್ಯಾಸಂಗದ ವಿಶ್ರಾಂತಿಯು ಮತ್ತು ನೀನೇ ಸಹನೆಯ ಸ್ವರೂಪಳೂ ಆಗಿದ್ದೀಯೆ.

ಖಡ್ಗಿನೀ ಶೂಲಿನೀ ಘೋರಾ ಗದಿನೀ ಚಕ್ರಿಣೀ ತಥಾ ।
ಶಙ್ಖಿನೀ ಚಕ್ರಿಣೀ ಬಾಣಾ ಭುಶುಣ್ಡೀ ಪರಿಘಾಯುಧಾ ॥೬೨॥

ಸೌಮ್ಯಾ ಸೌಮ್ಯತರಾಶೇಷಸೌಮ್ಯೇಭ್ಯಸ್ತ್ವತಿಸುನ್ದರೀ ।
ಪರಾ ಪರಾಣಾಂ ಪರಮಾ ತ್ವಮೇವ ಪರಮೇಶ್ವರೀ ॥೬೩॥

ಯಚ್ಚ ಕಿಂಚಿತ್ಕ್ವಚಿದ್ವಸ್ತು ಸದಸದ್ವಾಖಿಲಾತ್ಮಿಕೇ ।
ತಸ್ಯ ಸರ್ವಸ್ಯ ಯಾ ಶಕ್ತಿಃ ಸಾ ತ್ವಂ ಕಿಂ ಸ್ತೂಯಸೇ ಮಯಾ ॥೬೪॥

ಯಯಾ ತ್ವಯಾ ಜಗತ್ಸ್ರಷ್ಟಾ ಜಗತ್ಪಾತ್ಯತ್ತಿ ಯೋ ಜಗತ್ ।
ಸೋಽಪಿ ನಿದ್ರಾವಶಂ ನೀತಃ ಕಸ್ತ್ವಾಂ ಸ್ತೋತುಮಿಹೇಶ್ವರಃ ॥೬೫॥

---

೬೨. ದೇವಿಯೇ! ನೀನು ಖಡ್ಗ, ಶೂಲ, ಗದೆ, ಚಕ್ರ, ಶಂಖ, ಬಾಣ, ಬಿಲ್ಲು ಮತ್ತು ಪರಿಘವೆಂಬ ಬಗೆಬಗೆಯ ಆಯುಧಗಳನ್ನು ಧರಿಸಿದ ಮೂರ್ತಿಯುಳ್ಳವಳು. ಆದುದರಿಂದ ಘೋರಳಾದ ನೀನು ಭುಶುಂಡಿ ಎಂದು ಕರೆಯಲ್ಪಡುತ್ತೀಯೆ.

೬೩. ನೀನು ಅನುಗ್ರಹತೋರಲು ಯೋಗ್ಯರಾದ ವ್ಯಕ್ತಿಗಳಲ್ಲಿ ಸೌಮ್ಯಳು. ನೀನು ಲೋಕದಲ್ಲಿರುವ ಎಲ್ಲ ಸೌಮ್ಯವಸ್ತುಗಳಿಗಿಂತಲೂ ಹೆಚ್ಚಿನ ಸೌಮ್ಯಸ್ವರೂಪಳು. ನೀನು ಅತ್ಯಂತ ಸೌಂದರ್ಯವುಳ್ಳವಳು. ನೀನು ಸರ್ವೋತ್ತಮಳು. ನೀನು ಉತ್ತಮ ವಸ್ತುಗಳನ್ನೆಲ್ಲ ಮೀರಿಸಿರುವ ಉತ್ತಮ-ವಸ್ತುವು. ಮತ್ತು ನೀನೇ ಸರ್ವಸ್ವತಂತ್ರಳಾದ ಪರಮೇಶ್ವರಿಯಾಗಿರುತ್ತೀಯೆ.

೬೪. ವಿಶ್ವರೂಪಿಣಿಯಾದ ಜಗನ್ಮಾತೆಯೇ! ವಿಶ್ವದಲ್ಲಿ ಸತ್ ಅಥವಾ ಅಸತ್ ಎನಿಸಿಕೊಳ್ಳುವ ಯಾವ ವಸ್ತುವಿದ್ದರೂ ಆ ಎಲ್ಲ ವಸ್ತುಗಳಲ್ಲಿರುವ ಅಸಾಧಾರಣವಾದ ಶಕ್ತಿಯು ನೀನಾಗಿದ್ದೀಯೆ. ಹೀಗೆ ಸರ್ವಶಕ್ತಿಸ್ವರೂಪಳಾದ ನಿನ್ನನ್ನು ನಾನು ಏನೆಂದು ಸ್ತುತಿಸಲಿ?

೬೫. ಜಗತ್ತನ್ನು ಸೃಷ್ಟಿಸುವವನೂ, ಜಗತ್ತನ್ನು ಪಾಲಿಸುವವನೂ ಮತ್ತು ಜಗತ್ತನ್ನು ಸಂಹರಿಸುವವನೂ ಆದ ವಿಷ್ಣುಪರಮಾತ್ಮನು ಯಾವ ನಿನ್ನಿಂದ ನಿದ್ರಾಧೀನನಾಗಿ ಮಾಡಲ್ಪಟ್ಟಿರುವನೋ ಅಂತಹ ಪ್ರಭಾವವತಿಯಾದ ನಿನ್ನನ್ನು ಸ್ತುತಿಮಾಡಲು ಶಕ್ತನು ಯಾರು ಇರುವನು?

ವಿಷ್ಣುಃ ಶರೀರಗ್ರಹಣಮಹಮೀಶಾನ ಏವ ಚ ।
ಕಾರಿತಾಸ್ತೇ ಯತೋಽತಸ್ತ್ವಾಂ ಕಃ ಸ್ತೋತುಂ ಶಕ್ತಿಮಾನ್ಭವೇತ್ ॥೬೬॥

ಸಾ ತ್ವಮಿತ್ಥಂಪ್ರಭಾವೈಃ ಸ್ವೈರುದಾರೈರ್ದೇವಿ ಸಂಸ್ತುತಾ ।
ಮೋಹಯೈತೌ ದುರಾಧರ್ಷಾವಸುರೌ ಮಧುಕೈಟಭೌ ॥೬೭॥

ಪ್ರಬೋಧಂ ಚ ಜಗತ್ಸ್ವಾಮೀ ನೀಯತಾಮಚ್ಯುತೋ ಲಘು ।
ಬೋಧಶ್ಚ ಕ್ರಿಯತಾಮಸ್ಯ ಹನ್ತುಮೇತೌ ಮಹಾಸುರೌ ॥೬೮॥

ಋಷಿರುವಾಚ :—

ಏವಂ ಸ್ತುತಾ ತದಾ ದೇವೀ ತಾಮಸೀ ತತ್ರ ವೇಧಸಾ ।
ವಿಷ್ಣೋಃ ಪ್ರಬೋಧನಾರ್ಥಾಯ ನಿಹನ್ತುಂ ಮಧುಕೈಟಭೌ ॥೬೯॥

---

೬೬. ಯಾವ ಕಾರಣ ಸೃಷ್ಟಿ-ಸ್ಥಿತಿ-ಸಂಹಾರಕಾರಣರೆಂದು ಪ್ರಸಿದ್ಧರಾಗಿರುವ ಬ್ರಹ್ಮ-ವಿಷ್ಣು-ಶಿವರೆಂಬ ತ್ರಿಮೂರ್ತಿಗಳಾದ ನಾವು ನಿನ್ನಿಂದ ದೇಹವನ್ನು ಗ್ರಹಿಸುವಂತೆ ಮಾಡಲ್ಪಟ್ಟಿರುವೆವೊ ಆ ಕಾರಣದಿಂದ ನಿನ್ನನ್ನು ಸ್ತೋತ್ರಮಾಡುವ ಶಕ್ತಿಯುಳ್ಳವನು ಯಾರಿರುವನು ?

೬೭. ಯೋಗನಿದ್ರಾದೇವಿಯೇ! ಸರ್ವೇಶ್ವರಿಯಾದ ನೀನು ನಿನ್ನ ಉದಾರವಾದ ಪ್ರಭಾವ ವಿಶೇಷಗಳಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟಿದ್ದೀಯೆ. ಇತರರಿಂದ ಜಯಿಸಲು ಸಾಧ್ಯವಿಲ್ಲದ ಈ ಮಧು-ಕೈಟಭ ಅಸುರರನ್ನು ಮೋಹಗೊಳಿಸು.

೬೮. ಮತ್ತು ಜಗತ್ತಿಗೆ ಸ್ವಾಮಿಯಾದ ವಿಷ್ಣುಪರಮಾತ್ಮನಿಗೆ ಬೇಗ ಪ್ರಬೋಧವನ್ನು ಉಂಟುಮಾಡು. ಹಾಗು ವಿಷ್ಣುವಿಗೆ ಈ ಮಧು-ಕೈಟಭ ಅಸುರರನ್ನು ನಾಶಮಾಡುವ ಬೋಧವು ಉದಯಿಸುವಂತೆ ಮಾಡು.

ಸುಮೇಧ ಋಷಿಯು ಹೀಗೆಂದನು :—

೬೯. ಆಗ ತಮೋಗುಣದ ಪ್ರಾಧಾನ್ಯದಿಂದ ಕೂಡಿರುವ ಯೋಗನಿದ್ರಾದೇವಿಯು ಮಧು-ಕೈಟಭ ದಾನವರ ಸಂಹಾರಮಾಡಲು ವಿಷ್ಣುಪರಮಾತ್ಮನನ್ನು ಎಚ್ಚರಗೊಳಿಸುವುದಕ್ಕೋಸ್ಕರ ಬ್ರಹ್ಮದೇವನಿಂದ ಈ ರೀತಿಯಾಗಿ ಸ್ತುತಿಮಾಡಲ್ಪಟ್ಟಳು.

ನೇತ್ರಾಸ್ಯನಾಸಿಕಾಬಾಹುಹೃದಯೇಭ್ಯಸ್ತಥೋರಸಃ ।
ನಿರ್ಗಮ್ಯ ದರ್ಶನೇ ತಸ್ಥೌ ಬ್ರಹ್ಮಣೋಽವ್ಯಕ್ತಜನ್ಮನಃ ॥೭೦॥

ಉತ್ತಸ್ಥೌ ಚ ಜಗನ್ನಾಥಸ್ತಯಾ ಮುಕ್ತೋ ಜನಾರ್ದನಃ ।
ಏಕಾರ್ಣವೇಽಹಿಶಯನಾತ್ತತಃ ಸ ದದೃಶೇ ಚ ತೌ ॥೭೧॥

ಮಧುಕೈಟಭೌ ದುರಾತ್ಮಾನಾವತಿವೀರ್ಯಪರಾಕ್ರಮೌ ।
ಕ್ರೋಧರಕ್ತೇಕ್ಷಣೌ ಹನ್ತುಂ ಬ್ರಹ್ಮಾಣಂ ಜನಿತೋದ್ಯಮೌ ॥೭೨॥

ಸಮುತ್ಥಾಯ ತತಸ್ತಾಭ್ಯಾಂ ಯುಯುಧೇ ಭಗವಾನ್ಹರಿಃ ।
ಪಞ್ಚವರ್ಷಸಹಸ್ರಾಣಿ ಬಾಹುಪ್ರಹರಣೋ ವಿಭುಃ ॥೭೩॥

---

೭೦. ಹೀಗೆ ಸ್ತುತಿಸಲ್ಪಟ್ಟ ಯೋಗನಿದ್ರೆಯು ವಿಷ್ಣುಪರಮಾತ್ಮನ ಕಣ್ಣು-ಮುಖ-ಮೂಗು-ತೋಳು-ಹೃದಯ ಮತ್ತು ಎದೆಯ ಭಾಗಗಳಿಂದ ಹೊರಕ್ಕೆ ಹೊರಟು ಬಂದು ಅವ್ಯಕ್ತತತ್ವದಿಂದ ಜನಿಸಿರುವ ಬ್ರಹ್ಮದೇವನ ಕಣ್ಣಿನ ಎದುರಿಗೆ ಕಾಣಿಸಿಕೊಂಡಳು.

೭೧. ಜಗತ್ತಿಗೆ ನಾಥನಾದ ಮತ್ತು ದುಷ್ಟಜನರನ್ನು ಮರ್ದಿಸುವ ಮಹಾವಿಷ್ಣುವು ಯೋಗನಿದ್ರೆಯಿಂದ ಬಿಡಲ್ಪಟ್ಟವನಾಗಿ ಏಕಾರ್ಣವದಂತಾದ ಸಮುದ್ರದಲ್ಲಿರುವ ಶೇಷಶಯನದಿಂದ ಎದ್ದು ಮಧು-ಕೈಟಭ ಅಸುರರನ್ನು ಕಂಡನು.

೭೨. ಸ್ವಾಮಿಯು ನೋಡುತ್ತಿರುವಾಗ ನೀಚಾತ್ಮರೂ, ಅತಿಯಾದ ವೀರ್ಯ-ಪರಾಕ್ರಮಗಳಿಂದ ಕೂಡಿದವರೂ ಆದ ಮಧು-ಕೈಟಭರು ಕೋಪ-ದಿಂದ ಕೆಂಪಾದ ಕಣ್ಣುಗಳುಳ್ಳವರಾಗಿ ಬ್ರಹ್ಮನನ್ನು ಕೊಲ್ಲಲು ಉದ್ಯಮಮಾಡು-ವವರಾಗಿದ್ದರು.

೭೩. ಸಮಸ್ತ ಐಶ್ವರ್ಯ ಸಂಪನ್ನನೂ, ಸರ್ವಶಕ್ತನೂ ಆದ ಮಹಾ-ವಿಷ್ಣುವು ಎದ್ದು ಬಂದು ಬಾಹುಗಳನ್ನು ಆಯುಧವನ್ನಾಗಿ ಉಪಯೋಗಿಸುತ್ತ ಐದು ಸಹಸ್ರ ವರ್ಷಗಳವರೆಗೆ ಮಧು-ಕೈಟಭರೊಂದಿಗೆ ಯುದ್ಧಮಾಡಿದನು.

ತಾವಪ್ಯತಿಬಲೋನ್ಮತ್ತೌ ಮಹಾಮಾಯಾವಿಮೋಹಿತೌ ।
ಉಕ್ತವನ್ತೌ ವರೋಽಸ್ಮತ್ತೋ ವ್ರಿಯತಾಮಿತಿ ಕೇಶವಮ್ ||೭೪||

ಶ್ರೀ ಭಗವಾನುವಾಚ :—

ಭವೇತಾಮದ್ಯ ಮೇ ತುಷ್ಟೌ ಮಮ ವಧ್ಯಾವುಭಾವಪಿ ।
ಕಿಮನ್ಯೇನ ವರೇಣಾತ್ರ ಏತಾವದ್ಧಿ ವೃತಂ ಮಯಾ ||೭೫||

ಋಷಿರುವಾಚ :—

ವಞ್ಚಿತಾಭ್ಯಾಮಿತಿ ತದಾ ಸರ್ವಮಾಪೋಮಯಂ ಜಗತ್ ।
ವಿಲೋಕ್ಯ ತಾಭ್ಯಾಂ ಗದಿತೋ ಭಗವಾನ್ಕಮಲೇಕ್ಷಣಃ ||೭೬||

---

೭೪. ಹೆಚ್ಚಾದ ಬಲದಿಂದ ಕೊಬ್ಬಿ ಅಹಂಕಾರಗೊಂಡ ಮಧು-ಕೈಟಭರು ಮಹಾಮಾಯೆಯಿಂದ ಮೋಹಗೊಳಿಸಲ್ಪಟ್ಟವರಾಗಿ ವಿಷ್ಣುವನ್ನು ಕುರಿತು "ಸುಪ್ರಸನ್ನರಾದ ನಮ್ಮಲ್ಲಿ ಏನು ಬೇಕಾದರೂ ವರವನ್ನು ಕೇಳಿಕೊ" ಎಂದು ಹೇಳಿದರು.

ವಿಷ್ಣುಪರಮಾತ್ಮನು ಇಂತೆಂದನು :—

೭೫. ನೀವು ಈಗ ನನ್ನಲ್ಲಿ ಸಂತುಷ್ಟರಾಗಿ ವರಕೊಡಲು ಅನುಗ್ರಹಿಸುವುದಾದರೆ ನೀವಿಬ್ಬರೂ ನನಗೆ ವಧಾರ್ಹರಾಗಿರಿ. ಬ್ರಹ್ಮದೇವನನ್ನು ಕೊಲ್ಲಲು ಬಂದು ಐದುಸಹಸ್ರವರ್ಷಗಳವರೆಗೆ ನನ್ನೊಡನೆ ಯುದ್ಧಮಾಡಿರುವ ನಿಮ್ಮ ವಿಷಯದಲ್ಲಿ ಬೇರೆ ವರವು ಏಕೆ ಬೇಕಾಗಿದೆ? ಇದೊಂದು ವರವು ಮಾತ್ರ ನನ್ನಿಂದ ಕೇಳಲ್ಪಟ್ಟಿದೆ.

ಋಷಿಯು ಹೇಳಿದನು :—

೭೬. ಹೀಗೆ ಮಹಾಮಾಯೆಯ ವಕ್ರದೃಷ್ಟಿಯಿಂದ ವಂಚಿಸಲ್ಪಟ್ಟ ಮಧು ಕೈಟಭ ಅಸುರರಿಂದ ಆಗ ಪ್ರಪಂಚವೆಲ್ಲವೂ ಜಲಪೂರ್ಣವಾದುದನ್ನು ನೋಡಿ ಸರ್ವೈಶ್ವರ್ಯಸಂಪೂರ್ಣನಾದ ವಿಷ್ಣುವು ಈ ರೀತಿಯಾಗಿ ಹೇಳಲ್ಪಟ್ಟನು.

ಪ್ರೀತೌ ಸ್ವಸ್ತವ ಯುದ್ಧೇನ ಶ್ಲಾಘ್ಯಸ್ತ್ವಂ ಮೃತ್ಯುರಾವಯೋಃ ।
ಆವಾಂ ಜಹಿ ನ ಯತ್ರೋರ್ವೀ ಸಲಿಲೇನ ಪರಿಪ್ಲುತಾ ॥೭೭॥

ಋಷಿರುವಾಚ :—

ತಥೇತ್ಯುಕ್ತ್ವಾ ಭಗವತಾ ಶಙ್ಖಚಕ್ರಗದಾಭೃತಾ ।
ಕೃತ್ವಾ ಚಕ್ರೇಣ ವೈ ಛಿನ್ನೇ ಜಘನೇ ಶಿರಸೀ ತಯೋಃ ॥೭೮॥

ಏವಮೇಷಾ ಸಮುತ್ಪನ್ನಾ ಬ್ರಹ್ಮಣಾ ಸಂಸ್ತುತಾ ಸ್ವಯಮ್ ।
ಪ್ರಭಾವಮಸ್ಯಾ ದೇವ್ಯಾಸ್ತು ಭೂಯಃ ಶೃಣು ವದಾಮಿ ತೇ ॥೭೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸೂರ್ಯಸಾವರ್ಣಿಕೇ
ಮನ್ವನ್ತರೇ ಶ್ರೀದೇವೀಮಾಹಾತ್ಮ್ಯೇ ಮಧುಕೈಟಭವಧೋ
ನಾಮಾಷ್ಟಸಪ್ತತಿತಮೋಽಧ್ಯಾಯಃ

---

೭೭. ನಿನ್ನ ಯುದ್ಧ ನಿಪುಣತೆಯಿಂದ ನಾವು ಪ್ರೀತಿಹೊಂದಿರುವೆವು. ನೀನು ನಮ್ಮನ್ನು ವಧಿಸುವ ಶ್ಲಾಘ್ಯನಾದ ಮೃತ್ಯುವಾಗು. ಯಾವ ಪ್ರದೇಶದಲ್ಲಿ ಭೂಮಿಯು ನೀರಿನ ಆವರಣವಿಲ್ಲದೆ ಇದೆಯೋ ಅಲ್ಲಿ ನಮ್ಮನ್ನು ವಧಿಸು.

ಸುಮೇಧ ಋಷಿಯು ಹೇಳಿದನು :—

೭೮. ಶಂಖ-ಚಕ್ರ-ಗದೆಗಳನ್ನು ಧರಿಸಿರುವ ವಿಷ್ಣು ಪರಮಾತ್ಮನು "ಹಾಗೇ ಆಗಲಿ. ನೀರಿಲ್ಲದ ಭೂಪ್ರದೇಶದಲ್ಲಿ ನಿಮ್ಮನ್ನು ಕೊಲ್ಲುವೆನು" ಎಂದು ಹೇಳಿ ಆ ಅಸುರರ ಶಿರಗಳನ್ನು ತನ್ನ ಜಘನಭಾಗದಲ್ಲಿಟ್ಟುಕೊಂಡು ಚಕ್ರಾಯುಧದಿಂದ ಕತ್ತರಿಸಿದನು.

೭೯. ಹೀಗೆ ಈ ಮಹಾಮಾಯೆಯು ಬ್ರಹ್ಮದೇವನಿಂದ ಸಾಕ್ಷಾತ್ತಾಗಿ ಸ್ತುತಿಸಲ್ಪಟ್ಟವಳಾಗಿ ಆವಿರ್ಭಾವವನ್ನು ಹೊಂದಿದಳು. ಮತ್ತೆ ಈ ದೇವಿಯ ಪ್ರಭಾವವನ್ನು ನಾನು ವರ್ಣಿಸುತ್ತೇನೆ. ಅದನ್ನು ನೀನು ಕೇಳು.

ಮಾರ್ಕಂಡೇಯ ಮಹಾಪುರಾಣವಲ್ಲಿ ಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯ್ಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನಾಶೀತಿತಮೋಽಧ್ಯಾಯಃ

(ದೇವತೇಜೋಭಾಗ್ಯೈರ್ದೇವ್ಯಾವಿರ್ಭಾವಃ)

ಋಷಿರುವಾಚ :—

ದೇವಾಸುರಮಭೂದ್ಯುದ್ಧಂ ಪೂರ್ಣಮಬ್ದಶತಂ ಪುರಾ ।
ಮಹಿಷೇಽಸುರಾಣಾಮಧಿಪೇ ದೇವಾನಾಂ ಚ ಪುರನ್ದರೇ ॥೧॥

ತತ್ರಾಸುರೈರ್ಮಹಾವೀರ್ಯೈರ್ದೇವಸೈನ್ಯಂ ಪರಾಜಿತಮ್ ।
ಜಿತ್ವಾ ಚ ಸಕಲಾನ್ದೇವಾನಿನ್ದ್ರೋಽಭೂನ್ಮಹಿಷಾಸುರಃ ॥೨॥

ಎಪ್ಪತ್ತೊಂಭತ್ತನೆಯ ಅಧ್ಯಾಯ

ಸುಮೇಧ ಋಷಿಯು ಹೇಳಿದನು :—

೧. ಹಿಂದೆ ಒಂದು ಕಲ್ಪದಲ್ಲಿ ಅಸುರರಿಗೆ ಮಹಿಷಾಸುರನು ಪ್ರಭುವಾಗಿರಲು, ಹಾಗು ದೇವತೆಗಳಿಗೆ ಇಂದ್ರನು ರಾಜನಾಗಿರಲು ದೇವ-ದಾನವರ ಯುದ್ಧವು ಸಂಪೂರ್ಣವಾಗಿ ಒಂದು ನೂರು ವರ್ಷಗಳ ವರೆಗೆ ನಡೆಯಿತು.

೨. ಆ ಯುದ್ಧದಲ್ಲಿ ಮಹತ್ತಾದ ವೀರ್ಯದಿಂದ ಸಂಪನ್ನರಾದ ಅಸುರರಿಂದ ದೇವತೆಗಳ ಸೈನ್ಯವು ಅಪಜಯವನ್ನು ಹೊಂದಿತು. ಹಾಗೆ ಸಕಲ ದೇವತೆಗಳನ್ನು ಗೆದ್ದು ಅಸುರರ ಪ್ರಭುವಾದ ಮಹಿಷಾಸುರನು ಇಂದ್ರಪದವಿಯನ್ನು ಏರಿದನು.

ತತಃ ಪರಾಜಿತಾ ದೇವಾಃ ಪದ್ಮಯೋನಿಂ ಪ್ರಜಾಪತಿಮ್ ।
ಪುರಸ್ಕೃತ್ಯ ಗತಾಸ್ತತ್ರ ಯತ್ರೇಶಗರುಡಧ್ವಜೌ ॥೩॥

ಯಥಾವೃತ್ತಂ ತಯೋಸ್ತದ್ವನ್ಮಹಿಷಾಸುರಚೇಷ್ಟಿತಮ್ ।
ತ್ರಿದಶಾಃ ಕಥಯಾಮಾಸುರ್ದೇವಾಭಿಭವವಿಸ್ತರಮ್ ॥೪॥

ಸೂರ್ಯೇನ್ದ್ರಾಗ್ನ್ಯನಿಲೇನ್ದೂನಾಂ ಯಮಸ್ಯ ವರುಣಸ್ಯ ಚ ।
ಅನ್ಯೇಷಾಂ ಚಾಧಿಕಾರಾನ್ ಸ ಸ್ವಯಮೇವಾಧಿತಿಷ್ಠತಿ ॥೫॥

ಸ್ವರ್ಗಾನ್ನಿರಾಕೃತಾಃ ಸರ್ವೇ ತೇನ ದೇವಗಣಾ ಭುವಿ ।
ವಿಚರನ್ತಿ ಯಥಾ ಮರ್ತ್ಯಾ ಮಹಿಷೇಣ ದುರಾತ್ಮನಾ ॥೬॥

---

೩. ತರುವಾಯ ಅಸುರರಿಂದ ಪರಾಜಯವನ್ನು ಹೊಂದಿದ ದೇವತೆಗಳು ವಿಷ್ಣುವಿನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮದೇವನನ್ನು ನಾಯಕನನ್ನಾಗಿ ಇರಿಸಿಕೊಂಡು ಮಹಾವಿಷ್ಣು ಮತ್ತು ಈಶ್ವರರು ಇದ್ದ ಸ್ಥಳಕ್ಕೆ ಹೋದರು.

೪. ಅಲ್ಲಿ ದೇವತೆಗಳು ಹರಿಹರರ ಮುಂದೆ ಹಿಂದೆ ನಡೆದಂತೆ ಮಹಿಷಾಸುರನ ಉದ್ಧತತನದ ಚೇಷ್ಟೆಯನ್ನೂ ಮತ್ತು ದೇವತೆಗಳಿಗೆ ಅವನಿಂದ ಆದ ಅಪಜಯವನ್ನೂ ವಿಸ್ತಾರವಾಗಿ ಹೇಳಿಕೊಂಡರು.

೫. ಆ ಅಸುರಾಧಿಪತಿಯಾದ ಮಹಿಷಾಸುರನು ಸೂರ್ಯ-ಇಂದ್ರ-ಅಗ್ನಿ-ವಾಯು-ಚಂದ್ರ-ಯಮ-ವರುಣ ಮತ್ತು ಮಿಕ್ಕ ದೇವತೆಗಳ ಅಧಿಕಾರಗಳನ್ನು ತಾನೇ ನಡೆಸುತ್ತಿರುವನು. ಆಯಾಯ ದೇವತೆಗಳನ್ನು ಸ್ವಪದದಿಂದ ಚ್ಯುತಿಗೊಳಿಸಿರುವನು.

೬. ನೀಚತನದ ಮಾನಸವುಳ್ಳವನಾಗಿ ಉದ್ಧತನಾಗಿ ಮೆರೆಯುವ ಮಹಿಷಾಸುರನಿಂದ ಸ್ವರ್ಗಭೋಗದಿಂದ ನಿರಾಕರಿಸಲ್ಪಟ್ಟ ಎಲ್ಲ ದೇವತೆಗಳ ಗುಂಪುಗಳು ಮರ್ತ್ಯಜಾತಿಯವರಂತೆ ಭೂಮಿಯಲ್ಲಿ ಸಂಚರಿಸುತ್ತಿರುವರು.

ಏತದ್ವಃ ಕಥಿತಂ ಸರ್ವಮಮರಾರಿವಿಚೇಷ್ಟಿತಮ್ ।
ಶರಣಂ ವಃ ಪ್ರಪನ್ನಾಃ ಸ್ಮೋ ವಧಸ್ತಸ್ಯ ವಿಚಿನ್ತ್ಯತಾಮ್ ॥೭॥

ಋಷಿರುವಾಚ :—

ಇತ್ಥಂ ನಿಶಮ್ಯ ದೇವಾನಾಂ ವಚಾಂಸಿ ಮಧುಸೂದನಃ ।
ಚಕಾರ ಕೋಪಂ ಶಮ್ಭುಶ್ಚ ಭ್ರುಕುಟೀಕುಟಿಲಾನನೌ ॥೮॥

ತತೋಽತಿಕೋಪಪೂರ್ಣಸ್ಯ ಚಕ್ರಿಣೋ ವದನಾತ್ತತಃ ।
ನಿಶ್ಚಕ್ರಾಮ ಮಹತ್ತೇಜೋ ಬ್ರಹ್ಮಣಃ ಶಙ್ಕರಸ್ಯ ಚ ॥೯॥

ಅನ್ಯೇಷಾಂ ಚೈವ ದೇವಾನಾಂ ಶಕ್ರಾದೀನಾಂ ಶರೀರತಃ ।
ನಿರ್ಗತಂ ಸುಮಹತ್ತೇಜಸ್ತಚ್ಚೈಕ್ಯಂ ಸಮಗಚ್ಛತ ॥೧೦॥

---

೭. ನಿಮಗೆ ದೇವಶತ್ರುವಾದ ಮಹಿಷಾಸುರನ ಸಂಪೂರ್ಣ ದುಷ್ಕೃತ್ಯವು ಈರೀತಿಯಾಗಿ ನಮ್ಮಿಂದ ಹೇಳಲ್ಪಟ್ಟಿರುವುದು. ನಾವು ನಿಮ್ಮಲ್ಲಿ ಶರಣಾಗತರಾಗಿರುವೆವು. ಮಹಿಷಾಸುರನನ್ನು ವಧಿಸುವ ಉಪಾಯವು ಚಿಂತಿಸಲ್ಪಡಲಿ.

ಸುಮೇಧ ಋಷಿಯು ನುಡಿದನು :—

೮. ಹೀಗೆ ದೇವತೆಗಳು ಆಡಿದ ವಚನಗಳನ್ನು ಕೇಳಿ ವಿಷ್ಣು-ಈಶ್ವರರು ಇಬ್ಬರು ಹುಬ್ಬನ್ನು ಗಂಟಿಕ್ಕಿ ಭಯಂಕರವಾದ ಮುಖವುಳ್ಳವರಾಗಿ ಕೋಪ ತಾಳಿದರು.

೯. ಅನಂತರದಲ್ಲಿ ಮಿತಿಯನ್ನು ಮೀರಿ ಉದ್ರೇಕಗೊಂಡ ಕೋಪದಿಂದ ಪೂರ್ಣರಾದ ಮಹಾವಿಷ್ಣು-ಬ್ರಹ್ಮ-ಶಂಕರರ ಮುಖಗಳಿಂದ ಮಹತ್ತಾದ ತೇಜಃ-ಪುಂಜವು ಹೊರಕ್ಕೆ ಹೊರಟು ಬಂದಿತು.

೧೦. ಹಾಗು ಇಂದ್ರನೇ ಮುಂತಾದ ಇತರ ದೇವತೆಗಳಿಂದ ಆಯಾಯ ವ್ಯಕ್ತಿಗಳ ಅಸಾಧಾರಣವಾದ ತೇಜಸ್ಸುಗಳು ಒಟ್ಟುಗೂಡಿ ಒಂದು ತೇಜಃಪುಂಜ-ವಾಯಿತು.

ಅತೀವ ತೇಜಸಃ ಕೂಟಂ ಜ್ವಲನ್ತಮಿವ ಪರ್ವತಮ್ ।
ದದೃಶುಸ್ತೇ ಸುರಾಸ್ತತ್ರ ಜ್ವಾಲಾವ್ಯಾಪ್ತದಿಗನ್ತರಮ್ ||೧೧||

ಅತುಲಂ ತತ್ರ ತತ್ತೇಜಃ ಸರ್ವದೇವಶರೀರಜಮ್ ।
ಏಕಸ್ಥಂ ತದಭೂನ್ನಾರೀವ್ಯಾಪ್ತಲೋಕತ್ರಯಂ ತ್ವಿಷಾ ||೧೨||

ಯದಭೂಚ್ಛಾಮ್ಭವಂ ತೇಜಸ್ತೇನಾಜಾಯತ ತನ್ಮುಖಮ್ ।
ಯಾಮ್ಯೇನ ಚಾಭವನ್ಕೇಶಾ ಬಾಹವೋ ವಿಷ್ಣುತೇಜಸಾ ||೧೩||

ಸೌಮ್ಯೇನ ಸ್ತನಯೋರ್ಯುಗ್ಮಂ ಮಧ್ಯಮೈನ್ದ್ರೇಣ ಚಾಭವತ್ ।
ವಾರುಣೇನ ಚ ಜಙ್ಘೋರೂ ನಿತಮ್ಬಸ್ತೇಜಸಾ ಭುವಃ ||೧೪||

---

೧೧. ಆಗ ಅಲ್ಲಿ ಜ್ವಾಲೆಗಳ ಶ್ರೇಣಿಯಿಂದ ದಿಗಂತರಗಳನ್ನು ವ್ಯಾಪಿಸಿರುವುದೂ ಜ್ವಲಿಸುತ್ತಿದ್ದ ಪರ್ವತದಂತೆ ಇರುವುದೂ ಆದ ಭಾರಿಯಾದ ಆ ತೇಜಃಪುಂಜವನ್ನು ಆ ದೇವತೆಗಳು ಎಲ್ಲರೂ ನೋಡಿದರು.

೧೨. ಆ ದೇವ ಸಮಾಜದಲ್ಲಿ ಬ್ರಹ್ಮಾದಿಗಳ ಮುಖದಿಂದ ಹುಟ್ಟಿರುವುದೂ ಇತರ ದೇವಶರೀರಗಳಿಂದ ಹುಟ್ಟಿರುವುದೂ ಮತ್ತು ಕಾಂತಿಯಿಂದ ಲೋಕತ್ರಯವನ್ನು ವ್ಯಾಪಿಸಿರುವುದೂ ಆದ ಆ ತೇಜಃಪುಂಜವು ನಾರಿಯ ಆಕಾರವನ್ನು ಹೊಂದಿತು.

೧೩. ಆ ಪುಂಜದಲ್ಲಿದ್ದ ಶಂಭುವಿನ ತೇಜಸ್ಸಿನಿಂದ ನಾರಿಯ ಮುಖವಾಯಿತು. ಯಮನ ತೇಜಸ್ಸಿನಿಂದ ಕೂದಲುಗಳು ಆದುವು. ಮತ್ತು ವಿಷ್ಣುತೇಜಸ್ಸಿನಿಂದ ಬಾಹುಗಳಾದುವು.

೧೪. ಮತ್ತು ಸೋಮದೇವತೆಯ ತೇಜಸ್ಸಿನಿಂದ ನಾರಿಯ ಸ್ತನಯುಗ್ಮವಾಯಿತು. ಇಂದ್ರನ ತೇಜಸ್ಸಿನಿಂದ ನಡುವಾಯಿತು. ವರುಣದೇವನ ತೇಜಸ್ಸಿನಿಂದ ಮೊಣಕಾಲು-ತೊಡೆಗಳಾದುವು. ಮತ್ತು ಭೂದೇವಿಯ ತೇಜಸ್ಸಿನಿಂದ ಕಟಿಭಾಗವಾಯಿತು.

ಬ್ರಹ್ಮಣಸ್ತೇಜಸಾ ಪಾದೌ ತದಙ್ಗುಲ್ಯೋಽರ್ಕತೇಜಸಾ ।
ವಸೂನಾಂ ಚ ಕರಾಙ್ಗುಲ್ಯಃ ಕೌಬೇರೇಣ ಚ ನಾಸಿಕಾ ॥೧೫॥

ತಸ್ಯಾಸ್ತು ದನ್ತಾಃ ಸಮ್ಭೂತಾಃ ಪ್ರಾಜಾಪತ್ಯೇನ ತೇಜಸಾ ।
ನಯನತ್ರಿತಯಂ ಜಜ್ಞೇ ತಥಾ ಪಾವಕತೇಜಸಾ ॥೧೬॥

ಭ್ರುವೌ ಚ ಸನ್ಧ್ಯಯೋಸ್ತೇಜಃ ಶ್ರವಣಾವನಿಲಸ್ಯ ಚ ।
ಅನ್ಯೇಷಾಂ ಚೈವ ದೇವಾನಾಂ ಸಮ್ಭವಸ್ತೇಜಸಾಂ ಶಿವಾ ॥೧೭॥

ತತಃ ಸಮಸ್ತದೇವಾನಾಂ ತೇಜೋರಾಶಿಸಮುದ್ಭವಾಮ್ ।
ತಾಂ ವಿಲೋಕ್ಯ ಮುದಂ ಪ್ರಾಪುರಮರಾ ಮಹಿಷಾರ್ದಿತಾಃ ॥೧೮॥

---

೧೫. ಹಾಗು ಬ್ರಹ್ಮದೇವನ ತೇಜಸ್ಸಿನಿಂದ ನಾರಿಯ ಪಾದಗಳೂ, ಸೂರ್ಯನ ತೇಜಸ್ಸಿನಿಂದ ಅವಳ ಪಾದಾಂಗುಲಿಗಳೂ, ವಸುದೇವತೆಗಳ ತೇಜಸ್ಸಿನಿಂದ ಕೈಬೆರಳುಗಳೂ ಮತ್ತು ಕುಬೇರ ದೇವತೆಯ ತೇಜಸ್ಸಿನಿಂದ ನಾಸಿಕೇಂದ್ರಿಯವೂ ಪರಿಣಮಿಸಿದುವು.

೧೬. ಪ್ರಜಾಪತಿದೇವತೆಯ ತೇಜಸ್ಸಿನಿಂದ ನಾರಿಯ ದಂತಗಳು ಉಂಟಾದುವು. ಮತ್ತು ಅಗ್ನಿದೇವತೆಯ ತೇಜಸ್ಸಿನಿಂದ ಮೂರು ಕಣ್ಣುಗಳು ಜನಿಸಿದುವು.

೧೭. ಮತ್ತು ಎರಡು ಸಂಧ್ಯಾಕಾಲಗಳ ಅಭಿಮಾನಿನಿಯರಾದ ದೇವತೆಗಳ ತೇಜಸ್ಸಿನಿಂದ ಎರಡು ಹುಬ್ಬುಗಳು ಉಂಟಾದುವು. ಹಾಗು ಇತರ ದೇವತೆಗಳ ತೇಜೋರಾಶಿಯ ಪರಿಣಾಮವು ಸರ್ವಮಂಗಳೆಯಾದ ದೇವಿಯಾದಳು.

೧೮. ತರುವಾಯ ಸಮಸ್ತ ದೇವತೆಗಳ ತೇಜಸ್ಸಿನ ರಾಶಿಯಿಂದ ಜನಿಸಿದ ಆ ದೇವಿಯನ್ನು ನೋಡಿ ಮಹಿಷಾಸುರನಿಂದ ಪೀಡಿಸಲ್ಪಟ್ಟಿರುವ ದೇವತೆಗಳು ಸಂತೋಷಪಟ್ಟರು.

ತತೋ ದೇವಾ ದದುಸ್ತಸ್ಯೈ ಸ್ವಾನಿ ಸ್ವಾನ್ಯಾಯುಧಾನಿ ಚ ।
ಊಚುರ್ಜಯ ಜಯೇತ್ಯುಚ್ಚೈರ್ಜಯಂತೀಂ ತೇ ಜಯೈಷಿಣಃ॥೧೯॥

ಶೂಲಂ ಶೂಲಾದ್ವಿನಿಷ್ಕೃಷ್ಯ ದದೌ ತಸ್ಯೈ ಪಿನಾಕಭೃತ್ ।
ಚಕ್ರಂ ಚ ದತ್ತವಾನ್ ಕೃಷ್ಣಃ ಸಮುತ್ಪಾಟ್ಯ ಸ್ವಚಕ್ರತಃ ॥೨೦॥

ಶಙ್ಖಂ ಚ ವರುಣಃ ಶಕ್ತಿಂ ದದೌ ತಸ್ಯೈ ಹುತಾಶನಃ ।
ಮಾರುತೋ ದತ್ತವಾಂಶ್ಚಾಪಂ ಬಾಣಪೂರ್ಣೇ ತಥೇಷುಧೀ ॥೨೧॥

ವಜ್ರಮಿನ್ದ್ರಃ ಸಮುತ್ಪಾಟ್ಯ ಕುಲಿಶಾದಮರಾಧಿಪಃ ।
ದದೌ ತಸ್ಯೈ ಸಹಸ್ರಾಕ್ಷೋ ಘಣ್ಟಾಮೈರಾವತಾದ್ಗಜಾತ್ ॥೨೨॥

---

೧೯. ಅನಂತರದಲ್ಲಿ ಜಯಾರ್ಥಿಗಳಾದ ದೇವತೆಗಳು ಜಯಶಾಲಿನಿಯಾದ ದೇವಿಯನ್ನು ಕುರಿತು ಜಯ ಜಯ ಎಂದು ಜಯಘೋಷಮಾಡಿದರು. ತರುವಾಯ ದೇವತೆಗಳು ತಮ್ಮ ತಮ್ಮ ಆಯುಧಗಳನ್ನು ಆ ದೇವಿಗೆ ಕೊಟ್ಟರು.

೨೦. ಪಿನಾಕವೆಂಬ ಬಿಲ್ಲನ್ನು ಧರಿಸಿರುವ ಈಶ್ವರನು ತನ್ನ ಶೂಲದ ದೇವತಾಮೂರ್ತಿಯಿಂದ ಒಂದು ಶೂಲವನ್ನು ಸೆಳೆದು ದೇವಿಗೆ ಕೊಟ್ಟನು. ಹಾಗು ವಿಷ್ಣುವು ತನ್ನ ಚಕ್ರದಿಂದ ಒಂದು ಚಕ್ರಾಯುಧವನ್ನು ಸೆಳೆದು ಅರ್ಪಿಸಿದನು.

೨೧. ಹಾಗು ವರುಣನು ಶಂಖವನ್ನು ಕೊಟ್ಟನು. ಅಗ್ನಿದೇವನು ಶಕ್ತಿ ಆಯುಧವನ್ನು ಕೊಟ್ಟನು. ಮತ್ತು ವಾಯುದೇವನು ಬಿಲ್ಲನ್ನೂ ಬಾಣ-ಗಳಿಂದ ತುಂಬಿರುವ ಬತ್ತಳಿಕೆಗಳನ್ನೂ ಕೊಟ್ಟನು.

೨೨. ದೇವತೆಗಳಿಗೆ ಅಧಿಪತಿಯೂ, ಸಹಸ್ರನೇತ್ರಗಳಿಂದ ಶೋಭಿತನೂ ಆದ ದೇವೇಂದ್ರನು ವಜ್ರಾಯುಧದಿಂದ ಬೇರೊಂದು ವಜ್ರಾಯುಧವನ್ನು ಸೆಳೆದು ಕೊಟ್ಟನು. ಮತ್ತು ಐರಾವತ ಆನೆಯಿಂದ ಘಂಟೆಯನ್ನು ತೆಗೆದುಕೊಟ್ಟನು.

ಕಾಲದಣ್ಡಾದ್ಯಮೋ ದಣ್ಡಂ ಪಾಶಂ ಚಾಮ್ಬುಪತಿರ್ದದೌ ।
ಪ್ರಜಾಪತಿಶ್ಚಾಕ್ಷಮಾಲಾಂ ದದೌ ಬ್ರಹ್ಮಾ ಕಮಣ್ಡಲುಮ್ ॥೨೩॥

ಸಮಸ್ತರೋಮಕೂಪೇಷು ನಿಜರಶ್ಮೀನ್ ದಿವಾಕರಃ ।
ಕಾಲಶ್ಚ ದತ್ತವಾನ್ಖಡ್ಗಂ ತಸ್ಯೈ ಚರ್ಮ ಚ ನಿರ್ಮಲಮ್ ॥೨೪॥

ಕ್ಷೀರೋದಶ್ಚಾಮಲಂ ಹಾರಮಜರೇ ಚ ತಥಾಮ್ಬರೇ ॥೨೫॥

ಚೂಡಾಮಣಿಂ ತಥಾ ದಿವ್ಯಂ ಕುಣ್ಡಲೇ ಕಟಕಾನಿ ಚ ।
ಅರ್ಧಚನ್ದ್ರಂ ತಥಾ ಶುಭ್ರಂ ಕೇಯೂರಾನ್ ಸರ್ವಬಾಹುಷು॥೨೬॥

ನೂಪುರೌ ವಿಮಲೌ ತದ್ವದ್ಗ್ರೈವೇಯಕಮನುತ್ತಮಮ್ ।
ಅಙ್ಗುಲೀಯಕರತ್ನಾನಿ ಸಮಸ್ತಾಸ್ವಙ್ಗುಲೀಷು ಚ ॥೨೭॥

---

೨೩. ಯಮನು ತನ್ನ ಕಾಲದಂಡದಿಂದ ದಂಡವನ್ನೂ, ಜಲಾಧಿದೇವತೆಯಾದ ವರುಣನು ಪಾಶಾಯುಧವನ್ನೂ ದೇವಿಗೆ ಕೊಟ್ಟರು. ಮತ್ತು ಪ್ರಜಾಪತಿದೇವತೆಯು ಅಕ್ಷಮಾಲೆಯನ್ನೂ, ಬ್ರಹ್ಮದೇವನು ಕಮಂಡಲುವನ್ನೂ ಕೊಟ್ಟರು.

೨೪. ಮತ್ತು ದಿನಾಧಿಪತಿಯಾದ ಸೂರ್ಯನು ದೇವಿಯ ಸಮಸ್ತ ರೋಮಕೂಪಗಳಲ್ಲಿ ತನ್ನ ರಶ್ಮಿಗಳನ್ನು ಅರ್ಪಿಸಿದನು. ಕಾಲದೇವತೆಯು ದೇವಿಗೆ ನಿರ್ಮಲವಾದ ಖಡ್ಗ, ಚರ್ಮಗಳನ್ನು ಕೊಟ್ಟಳು.

೨೫. ಕ್ಷೀರಸಮುದ್ರಾಭಿಮಾನಿಯಾದ ದೇವತೆಯು ದೇವತೆಗಳ ತೇಜಃಪುಂಜರೂಪಳಾದ ದೇವಿಗೆ ನಿರ್ಮಲವಾದ ಹಾರವನ್ನೂ ಮತ್ತು ಜೀರ್ಣವಲ್ಲದ ಹೊಸ ಬಟ್ಟೆಗಳನ್ನೂ ಕೊಟ್ಟಳು.

೨೬. ವಿಶ್ವಕರ್ಮನು ದೇವಿಗೆ ದಿವ್ಯವಾದ ಚೂಡಾಮಣಿ, ಕಟಕ, ಕುಂಡಲ ಮತ್ತು ಅರ್ಧಚಂದ್ರ ಇವುಗಳನ್ನು ಕೊಟ್ಟನು ಮತ್ತು ಎಲ್ಲ ಬಾಹುಗಳಲ್ಲಿಯೂ ಧರಿಸುವಂತಹ ಭುಜಕೀರ್ತಿಗಳನ್ನು ಕೊಟ್ಟನು.

೨೭. ಮತ್ತು ವಿಶ್ವಕರ್ಮನು ದೇವಿಗೆ ನಿರ್ಮಲವಾದ ಕಾಲುಗೆಜ್ಜೆಗಳನ್ನೂ ಸರ್ವೋತ್ತಮವಾದ ಕಂಠಾಭರಣವನ್ನೂ ಮತ್ತು ಎಲ್ಲ ಬೆರಳುಗಳಲ್ಲಿಯೂ ಧರಿಸುವಂತೆ ರತ್ನಾಂಗುಲೀಯಕಗಳನ್ನೂ ಅರ್ಪಿಸಿದನು.

ವಿಶ್ವಕರ್ಮಾ ದದೌ ತಸ್ಯೈ ಪರಶುಂ ಚಾತಿನಿರ್ಮಲಮ್ ।
ಅಸ್ತ್ರಾಣ್ಯನೇಕರೂಪಾಣಿ ತಥಾಭೇದ್ಯಂ ಚ ದಂಶನಮ್ ॥೨೮॥

ಅಮ್ಲಾನಪಙ್ಕಜಾಂ ಮಾಲಾಂ ಶಿರಸ್ಯುರಸಿ ಚಾಪರಾಮ್ ।
ಅದದಾಜ್ಜಲಧಿಸ್ತಸ್ಯೈ ಪಙ್ಕಜಂ ಚಾತಿಶೋಭನಮ್ ॥೨೯॥

ಹಿಮವಾನ್ ವಾಹನಂ ಸಿಹ್ಮಂ ರತ್ನಾನಿ ವಿವಿಧಾನಿ ಚ ।
ದದಾವಶೂನ್ಯಂ ಸುರಯಾ ಪಾನಪಾತ್ರಂ ಧನಾಧಿಪಃ ॥೩೦॥

ಶೇಷಶ್ಚ ಸರ್ವನಾಗೇಶೋ ಮಹಾಮಣಿವಿಭೂಷಿತಮ್ ।
ನಾಗಹಾರಂ ದದೌ ತಸ್ಯೈ ಧತ್ತೇ ಯಃ ಪೃಥಿವೀಮಿಮಾಮ್ ॥೩೧॥

---

೨೮. ಮತ್ತು ವಿಶ್ವಕರ್ಮಪ್ರಜಾಪತಿಯು ಆ ದೇವಿಗೆ ಥಳಥಳಿಸುವಂತಹ ನಿರ್ಮಲವಾದ ಕುಠಾರಾಯುಧವನ್ನು ಕೊಟ್ಟನು. ಹಾಗೆಯೇ ಅಭೇದ್ಯವಾದ ಕಂಚುಕವನ್ನೂ ಮತ್ತು ನಾನಾವಿಧವಾದ ಅಸ್ತ್ರಗಳನ್ನೂ ಕೊಟ್ಟನು.

೨೯. ಸಮುದ್ರಾಭಿಮಾನಿದೇವತೆಯು ಆದಿಶಕ್ತಿದೇವಿಗೆ ಶಿರಸ್ಸು ಮತ್ತು ಹೃದಯಗಳಿಗೆ ಭೂಷಣವಾಗುವ, ಬಾಡದಿರುವ ಸುಂದರ ಕಮಲಗಳಿಂದ ಕೂಡಿದ ಪುಷ್ಪಮಾಲೆಯನ್ನು ಅರ್ಪಿಸಿದಳು. ಮತ್ತು ಬಹಳ ಸುಂದರವಾದ ಒಂದು ಲೀಲಾಕಮಲವನ್ನು ಅರ್ಪಿಸಿದಳು.

೩೦. ಹಿಮವಂತನು ಸಿಂಹರೂಪವಾದ ವಾಹನವನ್ನೂ ವಿವಿಧವಾದ ರತ್ನಗಳನ್ನೂ ಕೊಟ್ಟನು. ಧನಾಧಿಪತಿಯಾದ ಕುಬೇರನು ಸುರೆಯಿಂದ ಪೂರ್ಣವಾದ ಪಾನಪಾತ್ರವನ್ನು ದೇವಿಗೆ ಕೊಟ್ಟನು.

೩೧. ಸಕಲ ಭೂಮಂಡಲವನ್ನು ಯಾವ ಆದಿಶೇಷನು ಹೊತ್ತುಕೊಂಡಿರುವನೋ ಆ ನಾಗಾಧಿಪತಿಯಾದ ಆದಿಶೇಷನು ಮಹಾರತ್ನಗಳಿಂದ ಅಲಂಕರಿಸಲ್ಪಟ್ಟ ನಾಗಹಾರವನ್ನು ದೇವಿಗೆ ಅರ್ಪಿಸಿದನು.

ಅನ್ಯೈರಪಿ ಸುರೈರ್ದೇವೀ ಭೂಷಣೈರಾಯುಧೈಸ್ತಥಾ ।
ಸಮ್ಮಾನಿತಾ ನನಾದೋಚ್ಚೈಃ ಸಾಟ್ಟಹಾಸಂ ಮುಹುರ್ಮುಹುಃ॥೩೨॥

ತಸ್ಯಾ ನಾದೇನ ಘೋರೇಣ ಕೃತ್ಸ್ನಮಾಪೂರಿತಂ ನಭಃ ।
ಅಮಾಯತಾತಿಮಹತಾ ಪ್ರತಿಶಬ್ದೋ ಮಹಾನಭೂತ್ ॥೩೩॥

ಚುಕ್ಷುಭುಃ ಸಕಲಾ ಲೋಕಾಃ ಸಮುದ್ರಾಶ್ಚ ಚಕಮ್ಪಿರೇ ।
ಚಚಾಲ ವಸುಧಾ ಚೇಲುಃ ಸಕಲಾಶ್ಚ ಮಹೀರುಹಾಃ ॥೩೪॥

ಜಯೇತಿ ದೇವಾಶ್ಚ ಮುದಾ ತಾಮೂಚುಃ ಸಿಹ್ಮವಾಹಿನೀಮ್ ।
ತುಷ್ಟುವುರ್ಮುನಯಶ್ಚೈನಾಂ ಭಕ್ತಿನಮ್ರಾತ್ಮಮೂರ್ತಯಃ ॥೩೫॥

೩೨- ಹೀಗೆ ಇತರ ದೇವತೆಗಳಿಂದಲೂ ಆಯುಧ-ಭೂಷಣಗಳನ್ನು ಒಪ್ಪಿಸಿ ಗೌರವಿಸಲ್ಪಟ್ಟ ಮಹಾದೇವಿಯು ಅಟ್ಟಹಾಸಮಾಡುತ್ತ ಮತ್ತೆ ಮತ್ತೆ ಗಟ್ಟಿಯಾಗಿ ಗರ್ಜಿಸಿದಳು.

೩೩. ಆ ದೇವಿಯ ಗಟ್ಟಿಯಾದ ಘೋರಗರ್ಜನೆಯು ಸಂಪೂರ್ಣವಾಗಿ ಆಕಾಶವನ್ನು ತುಂಬಿಸಿತು. ಆಕಾಶದಲ್ಲಿ ಹಿಡಿಯಲಾರದ ಆ ಗರ್ಜನೆಯ ಧ್ವನಿಯಿಂದ ದೊಡ್ಡ ಪ್ರತಿಧ್ವನಿಯುಂಟಾಯಿತು.

೩೪. ಸಮಸ್ತ ಲೋಕಗಳು ಕ್ಷೋಭಗೊಂಡುವು. ಸಮುದ್ರಗಳು ಚಲಿಸಿ ಉಕ್ಕಿಬಂದುವು. ಭೂಮಿಯು ಚಲಿಸಿತು. ಮತ್ತು ಸಕಲ ಪರ್ವತಗಳು ಧ್ವನಿಯಿಂದ ಅಲ್ಲಾಡಿಹೋದುವು.

೩೫. ಆಗ ದೇವತೆಗಳು ಸಿಂಹವನ್ನು ಏರಿರುವ ಆ ದೇವಿಯನ್ನು ನೋಡಿ "ಜಯವನ್ನು ಗಳಿಸು" ಎಂದು ಸಂತೋಷದಿಂದ ಹೇಳಿ ಜಯ-ಘೋಷಣೆಯ ಗೌರವವನ್ನು ತೋರಿಸಿದರು. ಮುನಿಜನರು ಭಕ್ತಿಯಿಂದ ಬಗ್ಗಿದ ದೇಹವುಳ್ಳವರಾಗಿ ದೇವಿಯನ್ನು ಸ್ತುತಿಮಾಡಿದರು.

ದೃಷ್ಟ್ವಾ ಸಮಸ್ತಂ ಸಂಕ್ಷುಬ್ಧಂ ತ್ರೈಲೋಕ್ಯಮಮರಾರಯಃ ।
ಸನ್ನದ್ಧಾಖಿಲಸೈನ್ಯಾಸ್ತೇ ಸಮುತ್ತಸ್ಥುರುದಾಯುಧಾಃ ||೩೬||

ಆಃ ಕಿಮೇತದಿತಿ ಕ್ರೋಧಾದಾಭಾಷ್ಯ ಮಹಿಷಾಸುರಃ ।
ಅಭ್ಯಧಾವತ ತಂ ಶಬ್ದಮಶೇಷೈರಸುರೈರ್ವೃತಃ ||೩೭||

ಸ ದದರ್ಶ ತತೋ ದೇವೀಂ ವ್ಯಾಪ್ತಲೋಕತ್ರಯಾಂ ತ್ವಿಷಾ ।
ಪಾದಾಕ್ರಾನ್ತ್ಯಾ ನತಭುವಂ ಕಿರೀಟೋಲ್ಲಿಖಿತಾಮ್ಬರಾಮ್ ||೩೮||

ಕ್ಷೋಭಿತಾಶೇಷಪಾತಾಲಾಂ ಧನುರ್ಜ್ಯಾನಿಸ್ವನೇನ ತಾಮ್ ।
ದಿಶೋ ಭುಜಸಹಸ್ರೇಣ ಸಮನ್ತಾದ್ವ್ಯಾಪ್ಯ ಸಂಸ್ಥಿತಾಮ್ ||೩೯||

---

೩೬. ಮೂರು ಲೋಕಗಳೆಲ್ಲವೂ ಕ್ಷೋಭೆಗೊಂಡಿರುವುದನ್ನು ಕಂಡು ದೇವತೆಗಳ ಶತ್ರುಗಳಾದ ರಾಕ್ಷಸರು ಸನ್ನಾಹಗೊಳಿಸಿದ ಸಕಲ ಚತುರಂಗ ಸೈನ್ಯವುಳ್ಳವರಾಗಿ ಯುದ್ಧರಭಸದಿಂದ ಆಯುಧಗಳನ್ನು ಮೇಲಕ್ಕೆ ಎತ್ತುತ್ತ ಮೇಲಕ್ಕೆದ್ದರು.

೩೭. ಮಹಿಷಾಸುರನು “ ಓಹೋ ! ಇದೇನು ” ಎಂದು ಕೋಪಾವೇಶದಿಂದ ಗರ್ಜಿಸುತ್ತ ತನ್ನ ಸಮಸ್ತ ಸೈನ್ಯದಿಂದ ಕೂಡಿದವನಾಗಿ ಶಬ್ದವು ಕೇಳಿಸಿಬಂದ ಕಡೆಗೆ ಓಡಿಬಂದನು.

೩೮. ಮಹಿಷಾಸುರನು ಅಲ್ಲಿ ಪಾದಗಳನ್ನು ಇಡುವ ಆಘಾತದಿಂದ ತಗ್ಗಿಹೋದ ನೆಲವುಳ್ಳವಳೂ, ಕಿರೀಟದ ಅಗ್ರಭಾಗದಿಂದ ಗೀರಿದಂತಿರುವ ಆಕಾಶವುಳ್ಳವಳೂ ಮತ್ತು ತನ್ನ ಪ್ರಭೆಯಿಂದ ಮೂರು ಲೋಕಗಳನ್ನು ವ್ಯಾಪಿಸಿದವಳೂ ಆದ ದೇವಿಯನ್ನು ಕಂಡನು.

೩೯. ಮತ್ತು ಆ ದೇವಿಯು ಹೆದೆಯೇರಿಸಿದ ಬಿಲ್ಲಿನ ಹುರಿಯನ್ನೆಳೆದು ಮಾಡಿದ ಟಂಕಾರಶಬ್ದದಿಂದ ಕ್ಷೋಭಗೊಳಿಸಿದ ಸಕಲ ಪಾತಾಳಲೋಕವುಳ್ಳವಳೂ ಮತ್ತು ಸಹಸ್ರಭುಜಗಳಿಂದ ಸುತ್ತಲೂ ದಿಙ್ಮಂಡಲವನ್ನು ಆವರಿಸಿ ನಿಂತವಳೂ ಆಗಿದ್ದಳು.

ತತಃ ಪ್ರವವೃತೇ ಯುದ್ಧಂ ತಯಾ ದೇವ್ಯಾ ಸುರದ್ವಿಷಾಮ್ ।
ಶಸ್ತ್ರಾಸ್ತ್ರೈರ್ಬಹುಧಾ ಮುಕ್ತೈರಾದೀಪಿತದಿಗನ್ತರಮ್ ॥೪೦॥

ಮಹಿಷಾಸುರಸೇನಾನೀಶ್ಚಿಕ್ಷುರಾಖ್ಯೋ ಮಹಾಸುರಃ ।
ಯುಯುಧೇ ಚಾಮರಶ್ಚಾನ್ಯೈಶ್ಚತುರಙ್ಗಬಲಾನ್ವಿತಃ ॥೪೧॥

ರಥಾನಾಮಯುತೈಃ ಷಡ್ಭಿರುದಗ್ರಾಖ್ಯೋ ಮಹಾಸುರಃ ।
ಅಯುಧ್ಯತಾಯುತಾನಾಂ ಚ ಸಹಸ್ರೇಣ ಮಹಾಹನುಃ ॥೪೨॥

ಪಞ್ಚಾಶದ್ಭಿಶ್ಚ ನಿಯುತೈರಸಿಲೋಮಾ ಮಹಾಸುರಃ ।
ಅಯುತಾನಾಂ ಶತೈಃ ಷಡ್ಭಿರ್ಬಾಷ್ಕಲೋ ಯುಯುಧೇ ರಣೇ॥೪೩॥

---

೪೦. ತರುವಾಯ ದೇವಶತ್ರುಗಳಾದ ಅಸುರರಿಗೆ ದೇವಿಯೊಡನೆ ನಾನಾವಿಧವಾಗಿ ಪ್ರಯೋಗಿಸಿದ ಶಸ್ತ್ರ-ಅಸ್ತ್ರಗಳ ತೇಜೋಜ್ವಾಲೆಯಿಂದ ಬೆಳಗಿದ ದಿಕ್ಕು-ಮೂಲೆಗಳಿರುವಂತೆ ಯುದ್ಧವು ಜರುಗಿತು.

೪೧. ಮಹಿಷಾಸುರನ ಸೇನಾನಾಯಕನಾದ ಚಿಕ್ಷುರ ಎಂಬ ನಾಮಾಂಕಿತನಾದ ಅಸುರನೂ ಮತ್ತೊಬ್ಬ ಚಾಮರ ಎಂಬ ನಾಮಾಂಕಿತನಾದ ಅಸುರನೂ ಆನೆ-ಕುದುರೆ-ರಥ-ಪದಾತಿಸೈನ್ಯದೊಡನೆ ಹೋಗಿ ಯುದ್ಧ-ಮಾಡಿದರು.

೪೨. ಉದಗ್ರ ಎಂಬ ಹೆಸರುಳ್ಳ ಒಬ್ಬ ಮಹಾಅಸುರನು ಅರವತ್ತು ಸಹಸ್ರ ರಥಸೈನ್ಯದೊಡನೆ ಬಂದು ಯುದ್ಧಮಾಡಿದನು. ಹಾಗು ಮಹಾಹನು ಎಂಬ ಅಸುರನು ಸಹಸ್ರ ಅಯುತ ಸಂಖ್ಯೆಯ ರಥಸೈನ್ಯದೊಡನೆ ಬಂದು ಯುದ್ಧಮಾಡಿದನು.

೪೩. ಕತ್ತಿಯಂತೆ ರೋಮಗಳುಳ್ಳವನೆಂಬ ಅನ್ವರ್ಥನಾಮಾಂಕಿತನಾದ ಅಸಿಲೋಮರಾಕ್ಷಸನು ಐವತ್ತು ನಿಯುತ(ಐದುಕೋಟಿ) ಸಂಖ್ಯೆಯ ರಥಸಾಧನ-ದಿಂದಲೂ ಬಾಷ್ಕಲವೆಂಬ ನಾಮಾಂಕಿತನಾದ ಅಸುರನು ಆರುನೂರು ಅಯುತ (ಅರವತ್ತುಲಕ್ಷ) ರಥಸಾಧನದಿಂದಲೂ ಕೂಡಿ ಯುದ್ಧರಂಗದಲ್ಲಿ ದೇವಿಯ ಸಂಗಡ ಯುದ್ಧಮಾಡಿದರು.

ಗಜವಾಜಿಸಹಸ್ರೌಘೈರನೇಕೈರುಗ್ರದರ್ಶನಃ ।
ವೃತೋ ರಥಾನಾಂ ಕೋಟ್ಯಾ ಚ ಯುದ್ಧೇ ತಸ್ಮಿನ್ನಯುಧ್ಯತ ॥೪೪॥

ಬಿಡಾಲಾಖ್ಯೋ ಮಹಾದೈತ್ಯಃ ಪಞ್ಚಾಶದ್ಭಿರಥಾಯುತೈಃ ।
ಯುಯುಧೇ ಸಂಯುಗೇ ತತ್ರ ರಥಾನಾಂ ಪರಿವಾರಿತಃ ॥೪೫॥

ವೃತಃ ಕಾಲೋ ರಥಾನಾಂ ಚ ರಣೇ ಪಞ್ಚಾಶತಾಯುತೈಃ ।
ಯುಯುಧೇ ಸಂಯುಗೇ ತತ್ರ ತಾವದ್ಭಿಃ ಪರಿವಾರಿತಃ ॥೪೬॥

ಅನ್ಯೇ ಚ ತತ್ರಾಯುತಶೋ ರಥನಾಗಹಯೈರ್ವೃತಾಃ ।
ಯುಯುಧುಃ ಸಂಯುಗೇ ದೇವ್ಯಾ ಸಹ ತತ್ರ ಮಹಾಸುರಾಃ ॥೪೭॥

---

೪೪. ಹಾಗು ಉಗ್ರದರ್ಶನ ಎಂಬ ಹೆಸರುಳ್ಳ ಮಹಾದೈತ್ಯನು ಅನೇಕ ಸಹಸ್ರ ಸಂಖ್ಯೆಯ ಆನೆ-ಕುದುರೆಗಳ ಸೈನ್ಯಸಮೂಹದಿಂದಲೂ ಒಂದು ಕೋಟಿ ರಥಸೈನ್ಯದಿಂದಲೂ ಸಮೇತನಾಗಿ ಆ ಯುದ್ಧ ಸಮಯದಲ್ಲಿ ಯುದ್ಧಮಾಡಿದನು.

೪೫. ಮತ್ತು ಬಿಡಾಲ ಎಂಬ ಹೆಸರುಳ್ಳ ಮಹಾದೈತ್ಯನು ಐವತ್ತು ಅಯುತ (ಐದುಲಕ್ಷ) ಸಂಖ್ಯೆಯ ರಥಸೈನ್ಯಪರಿವಾರವುಳ್ಳವನಾಗಿ ಆ ಯುದ್ಧದಲ್ಲಿ ಯುದ್ಧಮಾಡಿದನು.

೪೬. ಕಾಲ ಎಂದು ಕರೆಯಲ್ಪಡುವ ಬೇರೊಬ್ಬ ಅಸುರನು ಆ ಯುದ್ಧದಲ್ಲಿ ಐದುನೂರು ಅಯುತ (ಐದುಲಕ್ಷ) ಸಂಖ್ಯೆಯ ರಥಪರಿವಾರ ಸಮೇತನಾಗಿ ಯುದ್ಧಮಾಡಿದನು. ಮತ್ತು ಅವನು ಅದೇ ಸಂಖ್ಯೆಯ ಆನೆ-ಕುದುರೆ-ಕಾಲಾಳು ಸೈನ್ಯಸಮೇತನೂ ಆಗಿ ಯುದ್ಧಮಾಡಿದನು.

೪೭. ಮತ್ತೆ ಕೆಲವು ಮಂದಿ ಮಹಾ ಅಸುರರು ಹತ್ತು ಹತ್ತು ಸಹಸ್ರ ಸಂಖ್ಯೆಯ ರಥ-ಗಜ-ಅಶ್ವಸೈನ್ಯದಿಂದ ಕೂಡಿದವರಾಗಿ ಆ ಯುದ್ಧದಲ್ಲಿ ದೇವಿಯೊಡನೆ ಯುದ್ಧಮಾಡಿದರು.

ಕೋಟಿಕೋಟಿಸಹಸ್ರೈಸ್ತು ರಥಾನಾಂ ದನ್ತಿನಾಂ ತಥಾ ।
ಹಯಾನಾಂ ಚ ವೃತೋ ಯುದ್ಧೇ ತತ್ರಾಭೂನ್ಮಹಿಷಾಸುರಃ ॥೪೮॥

ತೋಮರೈರ್ಭಿನ್ದಿಪಾಲೈಶ್ಚ ಶಕ್ತಿಭಿರ್ಮುಸಲೈಸ್ತಥಾ ।
ಯುಯುಧುಃ ಸಂಯುಗೇ ದೇವ್ಯಾ ಖಡ್ಗೈಃ ಪರಶುಪಟ್ಟಿಶೈಃ ॥೪೯॥

ಕೇಚಿಚ್ಚ ಚಿಕ್ಷಿಪುಃ ಶಕ್ತೀಃ ಕೇಚಿತ್ಪಾಶಾಂಸ್ತಥಾಪರೇ ।
ದೇವೀಂ ಖಡ್ಗಪ್ರಹಾರೈಸ್ತು ತೇ ತಾಂ ಹನ್ತುಂ ಪ್ರಚಕ್ರಮುಃ ॥೫೦॥

ಸಾಪಿ ದೇವೀ ತತಸ್ತಾನಿ ಶಸ್ತ್ರಾಣ್ಯಸ್ತ್ರಾಣಿ ಚಣ್ಡಿಕಾ ।
ಲೀಲಯೈವ ಪ್ರಚಿಚ್ಛೇದ ನಿಜಶಸ್ತ್ರಾಸ್ತ್ರವರ್ಷಿಣೀ ॥೫೧॥

ಅನಾಯಸ್ತಾನನಾ ದೇವೀ ಸ್ತೂಯಮಾನಾ ಸುರರ್ಷಿಭಿಃ ।
ಮುಮೋಚಾಸುರದೇಹೇಷು ಶಸ್ತ್ರಾಣ್ಯಸ್ತ್ರಾಣಿ ಚೇಶ್ವರೀ ॥೫೨॥

---

೪೮. ಆಗ ಮಹಿಷಾಸುರನು ಸಹಸ್ರಾರು ಕೋಟಿ ಕೋಟಿ ಸಂಖ್ಯೆಯಷ್ಟು ರಥ-ಗಜ-ಅಶ್ವ ಸೈನ್ಯದೊಡಗೂಡಿದವನೂ ಹಾಗು ಅನೇಕ ಪದಾತಿಸೈನ್ಯದಿಂದ ಕೂಡಿದವನೂ ಆಗಿ ಅಲ್ಲಿ ಯುದ್ಧಮಾಡಿದನು.

೪೯. ಆ ಯುದ್ಧದಲ್ಲಿ ರಾಕ್ಷಸರು ತೋಮರ-ಭಿಂಡಿಪಾಲ-ಶಕ್ತಿ-ಮುಸಲ-ಖಡ್ಗ-ಪರಶು ಮತ್ತು ಪಟ್ಟಿಶವೆಂದು ಕರೆಯುವ ಬಗೆಬಗೆಯ ಆಯುಧಗಳನ್ನು ಪ್ರಯೋಗಿಸಿ ದೇವಿಯೊಡನೆ ಯುದ್ಧಮಾಡಿದರು.

೫೦. ಆ ಪ್ರಸಂಗದಲ್ಲಿ ಕೆಲವರು ಶಕ್ತಿ ಆಯುಧಗಳನ್ನು ಎಸೆದರು. ಕೆಲವರು ಪಾಶಾಯುಧವನ್ನು ಬಿಟ್ಟರು. ಮತ್ತೆ ಕೆಲವರು ಖಡ್ಗಪ್ರಹಾರಗಳಿಂದ ಆ ದೇವಿಯನ್ನು ಕೊಲ್ಲಬೇಕೆಂದು ಯುದ್ಧವನ್ನು ಪ್ರಾರಂಭಿಸಿದರು.

೫೧. ತರುವಾಯ ಆ ಚಂಡಿಕಾದೇವಿಯು ತನ್ನ ಶಸ್ತ್ರಾಸ್ತ್ರಗಳನ್ನು ರಾಕ್ಷಸರ ಮೇಲೆ ಪ್ರಯೋಗಿಸುತ್ತ ಅವರಿಂದ ಬಂದ ಶಸ್ತ್ರಾಸ್ತ್ರಗಳನ್ನು ಅನಾಯಾಸವಾಗಿ ಕತ್ತರಿಸಿದಳು.

೫೨. ಸರ್ವೇಶ್ವರಿಯಾದ ಚಂಡಿಕಾದೇವಿಯು ಸ್ವಲ್ಪವೂ ಆಯಾಸವಿಲ್ಲದ ಮುಖವುಳ್ಳವಳಾಗಿ ದೇವತೆಗಳು ಮತ್ತು ಋಷಿಗಳಿಂದ ಸ್ತುತಿಸಲ್ಪಡುತ್ತ ರಾಕ್ಷಸ ದೇಹಗಳಲ್ಲಿ ಶಸ್ತ್ರಾಸ್ತ್ರಗಳನ್ನು ಸುರಿಸಿದಳು.

ಸೋಽಪಿ ಕ್ರುದ್ಧೋ ಧುತಸಟೋ ದೇವ್ಯಾ ವಾಹನಕೇಸರೀ ।
ಚಚಾರಾಸುರಸೈನ್ಯೇಷು ವನೇಷ್ವಿವ ಹುತಾಶನಃ ॥೩೩॥

ನಿಶ್ವಾಸಾನ್ಮುಮುಚೇ ಯಾಂಶ್ಚ ಯುಧ್ಯಮಾನಾ ರಣೇಽಮ್ಬಿಕಾ ।
ತ ಏವ ಸದ್ಯಃ ಸಮ್ಭೂತಾ ಗಣಾಃ ಶತಸಹಸ್ರಶಃ ॥೩೪॥

ಯುಯುಧುಸ್ತೇ ಪರಶುಭಿರ್ಭಿನ್ದಿಪಾಲಾಸಿಪಟ್ಟಿಶೈಃ ।
ನಾಶಯನ್ತೋಽಸುರಗಣಾನ್ ದೇವೀಶಕ್ತ್ಯುಪಬೃಹ್ಮಿತಾಃ ॥೩೫॥

ಅವಾದಯನ್ತ ಪಟಹಾನ್ ಗಣಾಃ ಶಙ್ಖಾಂಸ್ತಥಾಪರೇ ।
ಮೃದಙ್ಗಾಂಶ್ಚ ತಥೈವಾನ್ಯೇ ತಸ್ಮಿನ್ಯುದ್ಧಮಹೋತ್ಸವೇ ॥೩೬॥

ತತೋ ದೇವೀ ತ್ರಿಶೂಲೇನ ಗದಯಾ ಶರವೃಷ್ಟಿಭಿಃ ।
ಖಡ್ಗಾದಿಭಿಶ್ಚ ಶತಶೋ ನಿಜಘಾನ ಮಹಾಸುರಾನ್ ॥೩೭॥

---

೩೩. ಅಷ್ಟರಲ್ಲಿ ದೇವಿಯ ವಾಹನವಾಗಿದ್ದ ಸಿಂಹವು ಕೋಪಗೊಂಡು ತನ್ನ ಜಡೆಗಳನ್ನು ಕೊಡವಿಕೊಂಡು ಕಾಡುಗಳಲ್ಲಿ ಬೆಂಕಿಯು ಆವರಿಸುವಂತೆ ಅಸುರ ಸೈನ್ಯವನ್ನು ಆವರಿಸಿ ಸಂಚರಿಸಿತು.

೩೪. ರಣರಂಗದಲ್ಲಿ ಯುದ್ಧಮಾಡುತ್ತಿದ್ದ ಚಂಡಿಕಾದೇವಿಯು ಯಾವ ನಿಟ್ಟುಸಿರುಗಳನ್ನು ಬಿಟ್ಟಳೋ ಆ ಉಸಿರುಗಳು ಕೂಡಲೆ ಶತ-ಸಹಸ್ರ ಮುಂತಾದ ಅಧಿಕಸಂಖ್ಯೆಯಲ್ಲಿ ತನ್ನ ಪರಿವಾರಗಣಗಳಾದುವು.

೩೫. ತತ್‌ಕ್ಷಣದಲ್ಲಿ ದೇವಿಯ ಶಕ್ತಿಯಿಂದ ಬಲಗೊಂಡ ಗಣಗಳು ಪರಶು-ಭಿಂಡಿಪಾಲ-ಅಸಿ-ಪಟ್ಟಿಶವೆಂಬ ಆಯುಧಗಳನ್ನು ಹಿಡಿದು ಅಸುರಗಣಗಳನ್ನು ನಾಶಮಾಡುತ್ತ ಯುದ್ಧಮಾಡಿದರು.

೩೬. ಯುದ್ಧಮಾಡುವ ವೀರರಿಗೆ ಉತ್ಸವವಂತಿರುವ ಆ ಯುದ್ಧದಲ್ಲಿ ಕೆಲವರು ದೇವಿಯ ಗಣಗಳು ನಗಾರಿಗಳನ್ನೂ, ಮತ್ತೆ ಕೆಲವರು ಶಂಖಗಳನ್ನೂ ಇನ್ನು ಕೆಲವರು ಮೃದಂಗವಾದ್ಯಗಳನ್ನೂ ಧ್ವನಿಗೈದರು.

೩೭. ತರುವಾಯ ಚಂಡಿಕಾಂಬಿಕೆಯು ತ್ರಿಶೂಲ, ಗದೆ ಮತ್ತು ಬಾಣಗಳ ಸುರಿಮಳೆಗಳಿಂದಲೂ ಮತ್ತು ಖಡ್ಗ ಮುಂತಾದ ಆಯುಧಗಳ ಪ್ರಯೋಗದಿಂದಲೂ ಅನೇಕಮಂದಿ ರಾಕ್ಷಸರನ್ನು ವಧಿಸಿದಳು.

ಪಾತಯಾಮಾಸ ಚೈವಾನ್ಯಾನ್ ಘಣ್ಟಾಸ್ವನವಿಮೋಹಿತಾನ್ ।
ಅಸುರಾನ್ಭುವಿ ಪಾಶೇನ ಬದ್ಧ್ವಾ ಚಾನ್ಯಾನಕರ್ಷಯತ್ ॥೫೮॥

ಕೇಚಿದ್ದ್ವಿಧಾಕೃತಾಸ್ತೀಕ್ಷ್ಣೈಃ ಖಡ್ಗಪಾತೈಸ್ತಥಾ ಪರೇ ।
ವಿಪೋಥಿತಾ ನಿಪಾತೇನ ಗದಯಾ ಭುವಿ ಶೇರತೇ ॥೫೯॥

ವೇಮುಶ್ಚ ಕೇಚಿದ್ರುಧಿರಂ ಮುಸಲೇನ ಭೃಶಂ ಹತಾಃ ।
ಕೇಚಿನ್ನಿಪತಿತಾ ಭೂಮೌ ಭಿನ್ನಾಃ ಶೂಲೇನ ವಕ್ಷಸಿ ॥೬೦॥

ನಿರನ್ತರಶರೌಘೇಣ ಕೃತ್ತಾಃ ಕೇಚಿದ್ರಣಾಜಿರೇ ।
ಶೈಲಾನುಕಾರಿಣಃ ಪ್ರಾಣಾನ್ಮುಮುಚುಸ್ತ್ರಿದಶಾರ್ದನಾಃ ॥೬೧॥

---

೫೮. ಮತ್ತು ದೇವಿಯು ಕೆಲವರು ಮಹಾಸುರರನ್ನು ಘಂಟೆಯ ಧ್ವನಿಯಿಂದ ಮೂರ್ಛೆಗೊಳ್ಳುವಂತೆ ಮಾಡಿ ಕೆಡವಿದಳು. ಇನ್ನು ಕೆಲವರನ್ನು ಪಾಶದಿಂದ ಕಟ್ಟಿ ಭೂಮಿಯಲ್ಲಿ ಎಳೆದಾಡಿದಳು.

೫೯ ಕೆಲವು ಮಂದಿ ರಾಕ್ಷಸರು ದೇವಿಯ ತೀಕ್ಷ್ಣವಾದ ಖಡ್ಗ ಪ್ರಹಾರಗಳಿಂದ ಎರಡು ತುಂಡುಮಾಡಲ್ಪಟ್ಟವರಾಗಿ ಬಿದ್ದರು. ಮತ್ತೆ ಕೆಲವರು ಗದಾಪ್ರಹಾರದಿಂದ ಹಿಂಸಿಸಲ್ಪಟ್ಟವರಾಗಿ ಸತ್ತು ನೆಲದಲ್ಲಿ ಬಿದ್ದರು.

೬೦. ಕೆಲವರು ರಾಕ್ಷಸರು ದೇವಿಯಿಂದ ಮುಸಲಾಯುಧದಿಂದ ಮತ್ತೆ ಮತ್ತೆ ಬಡಿಯಲ್ಪಟ್ಟವರಾಗಿ ರಕ್ತವನ್ನು ವಮನ ಮಾಡಿಕೊಂಡರು. ಮತ್ತೆ ಕೆಲವರು ಶೂಲಾಯುಧದಿಂದ ಎದೆಯಲ್ಲಿ ಚುಚ್ಚಲ್ಪಟ್ಟವರಾಗಿ ನೆಲದ ಮೇಲೆ ಬಿದ್ದರು.

೬೧. ರಣರಂಗದಲ್ಲಿ ದೇವಿಯ ಬಿಡುವಿಲ್ಲದೆ ಅಖಂಡವಾಗಿ ಪ್ರಯೋಗಿಸಿದ ಬಾಣಗಳ ರಾಶಿಯಿಂದ ತುಂಡುಮಾಡಲ್ಪಟ್ಟ, ಆಕಾರದಲ್ಲಿ ಬೆಟ್ಟಗಳನ್ನು ಅಣಕಿಸುವ ದೊಡ್ಡ ರಾಕ್ಷಸರು ಪ್ರಾಣಗಳನ್ನು ತ್ಯಜಿಸಿದರು.

ಕೇಷಾಂ ಚಿದ್ಬಾಹವಶ್ಛಿನ್ನಾಶ್ಛಿನ್ನಗ್ರೀವಾಸ್ತಥಾಪರೇ ।
ಶಿರಾಂಸಿ ಪೇತುರನ್ಯೇಷಾಮನ್ಯೇ ಮಧ್ಯೇ ವಿದಾರಿತಾಃ ॥೬೨॥

ವಿಚ್ಛಿನ್ನಜಙ್ಘಾಸ್ತ್ವಪರೇ ಪೇತುರುರ್ವ್ಯಾಂ ಮಹಾಸುರಾಃ ।
ಏಕಬಾಹ್ವಕ್ಷಿಚರಣಾಃ ಕೇಚಿದ್ದೇವ್ಯಾ ದ್ವಿಧಾಕೃತಾಃ ॥೬೩॥

ಛಿನ್ನೇಽಪಿ ಚಾನ್ಯೇ ಶಿರಸಿ ಪತಿತಾಃ ಪುನರುತ್ಥಿತಾಃ ।
ಕಬನ್ಧಾ ಯುಯುಧುರ್ದೇವ್ಯಾ ಗೃಹೀತಪರಮಾಯುಧಾಃ ॥೬೪॥

ನನೃತುಶ್ಚಾಪರೇ ತತ್ರ ಯುದ್ಧೇ ತೂರ್ಯಲಯಾಶ್ರಿತಾಃ ।
ಕಬನ್ಧಾಶ್ಛಿನ್ನಶಿರಸಃ ಖಡ್ಗಶಕ್ತ್ಯೃಷ್ಟಿಪಾಣಯಃ ॥೬೫॥

---

೬೨. ಈ ಪ್ರಸಂಗದಲ್ಲಿ ಕೆಲವು ರಾಕ್ಷಸರಿಗೆ ತೋಳು ಕತ್ತರಿಸಲ್ಪಟ್ಟುವು. ಮತ್ತೆ ಕೆಲವರು ಕತ್ತರಿಸಲ್ಪಟ್ಟ ಕತ್ತು ಉಳ್ಳವರಾದರು. ಇನ್ನು ಕೆಲವರ ತಲೆಗಳು ಕೆಳಗೆ ಉರುಳಿದುವು. ಮತ್ತೆ ಕೆಲವರು ನಡುವಿನಲ್ಲಿ ತುಂಡು ಹೊಡೆಯಲ್ಪಟ್ಟರು.

೬೩. ಹಾಗು ಕೆಲವರು ಅಸುರರು ಕತ್ತರಿಸಿಹೋದ ಮೊಣಕಾಲುಗಳುಳ್ಳವರಾಗಿ ನೆಲದಮೇಲೆ ಬಿದ್ದರು. ಇನ್ನು ಕೆಲವರು ಒಂದು ತೋಳು, ಕಣ್ಣು, ಕಾಲು ಉಳಿದವರಾಗಿ ಕೆಳಗೆ ಬಿದ್ದರು. ಮತ್ತೆ ಕೆಲವರು ದೇವಿಯಿಂದ ಎರಡು ತುಂಡಾಗಿ ಕತ್ತರಿಸಲ್ಪಟ್ಟರು.

೬೪. ದೇವಿಯಿಂದ ಕತ್ತರಿಸಲ್ಪಟ್ಟ ತಲೆಯು ಕೆಳಗೆ ಉರುಳಿ ನೆಲಕ್ಕೆ ಬಿದ್ದು ಮತ್ತೆ ಮೇಲೆ ಎದ್ದ ಕೆಲವು ಕಬಂಧಗಳು ತೆಗೆದುಕೊಂಡ ಉತ್ತಮವಾದ ಆಯುಧವುಳ್ಳವರಾಗಿ ದೇವಿಯೊಡನೆ ಯುದ್ಧಮಾಡಿದುವು.

೬೫. ಮತ್ತೆ ಕೆಲವರು ದೇವಿಯಿಂದ ಕತ್ತರಿಸಲ್ಪಟ್ಟ ತಲೆಯುಳ್ಳ ಕಬಂಧಗಳಾಗಿ ಖಡ್ಗ-ಶಕ್ತಿ-ಋಷ್ಟಿ ಆಯುಧಗಳನ್ನು ಕೈಯಲ್ಲಿ ಧರಿಸಿ ಆ ಯುದ್ಧರಂಗದಲ್ಲಿ ವೀಣಾ-ವೇಣು-ಮೃದಂಗ ಮುಂತಾದ ವಾದ್ಯಗಳ ಲಯವನ್ನು ಆಶ್ರಯಿಸಿ ವೀರ ರಸಾವೇಶದಿಂದ ಕುಣಿದಾಡಿದುವು.

ತಿಷ್ಠ ತಿಷ್ಠೇತಿ ಭಾಷನ್ತೋ ದೇವೀಮನ್ಯೇ ಮಹಾಸುರಾಃ ।
ರುಧಿರೌಘವಿಲಿಪ್ತಾಙ್ಗಾಃ ಸಙ್ಗ್ರಾಮೇ ಲೋಮಹರ್ಷಣೇ ॥೬೬॥

ಪಾತಿತೈ ರಥನಾಗಾಶ್ವೈರಸುರೈಶ್ಚ ವಸುನ್ಧರಾ ।
ಅಗಮ್ಯಾ ಸಾಽಭವತ್ತತ್ರ ಯತ್ರಾಭೂತ್ಸ ಮಹಾರಣಃ ॥೬೭॥

ಶೋಣಿತೌಘಾ ಮಹಾನದ್ಯಃ ಸದ್ಯಸ್ತತ್ರ ವಿಸುಸ್ರುವುಃ ।
ಮಧ್ಯೇ ಚಾಸುರಸೈನ್ಯಸ್ಯ ವಾರಣಾಸುರವಾಜಿನಾಮ್ ॥೬೮॥

ಕ್ಷಣೇನ ತನ್ಮಹಾಸೈನ್ಯಮಸುರಾಣಾಂ ತಥಾಮ್ಬಿಕಾ ।
ನಿನ್ಯೇ ಕ್ಷಯಂ ಯಥಾ ವಹ್ನಿಸ್ತೃಣದಾರುಮಹಾಚಯಮ್ ॥೬೯॥

ಸ ಚ ಸಿಂಹೋ ಮಹಾನಾದಮುತ್ಸೃಜನ್ಧುತಕೇಸರಃ ।
ಶರೀರೇಭ್ಯೋಽಮರಾರೀಣಾಮಸೂನಿವ ವಿಚಿನ್ವತಿ ॥೭೦॥

---

೬೬. ವೀರಯೋಧರಾದ ಕೆಲವು ಮಂದಿ ರಾಕ್ಷಸರು ರಕ್ತಪ್ರವಾಹದಿಂದ ಬಳಿದ ದೇಹವುಳ್ಳವರಾಗಿ ರೋಮಾಂಚಕರವಾದ ಯುದ್ಧದಲ್ಲಿ ದೇವಿಯನ್ನು ನೋಡಿ “ ನಿಲ್ಲು, ಯುದ್ಧಮಾಡು ” ಎಂದು ಎದುರಿಸಿ ಹೋರಾಡಿದರು.

೬೭. ಹೀಗಿರಲು ಮಹಾ ಸಂಗ್ರಾಮವು ನಡೆದಿರುವ ಸ್ಥಳದಲ್ಲಿ ಕೆಳಕ್ಕೆ ಕೆಡುಹಿರುವ ಆನೆ-ಕುದುರೆ ಮತ್ತು ಅಸುರರ ರಾಶಿಗಳಿಂದ ಆ ಯುದ್ಧಭೂಮಿಯು ವೀರರಿಗೆ ಮುಂದೆ ನಡೆಯಲಾಗದ ಹಾಗಾಯಿತು.

೬೮. ಮತ್ತು ರಕ್ತದ ಪ್ರವಾಹಗಳಿಂದ ಕೂಡಿದ ಮಹಾನದಿಗಳು ರಾಕ್ಷಸಸೈನ್ಯದ ಆನೆ-ಕುದುರೆ-ರಾಕ್ಷಸ ಶ್ರೇಣಿಯ ಮಧ್ಯದಲ್ಲಿ ಯುದ್ಧವು ಪ್ರಾರಂಭವಾದ ಸ್ವಲ್ಪಹೊತ್ತಿನಲ್ಲಿ ಹುಟ್ಟಿ ಹರಿದುವು.

೬೯. ಹಾಗೆ ಆ ಚಂಡಿಕಾದೇವಿಯು ಅಸುರರ ಅಗಾಧವಾದ ಸೈನ್ಯವನ್ನು ಬೆಂಕಿಯು ಹುಲ್ಲು-ಸೌದೆಗಳ ದೊಡ್ಡ ರಾಶಿಯನ್ನು ಸುಟ್ಟು ನಾಶಗೊಳಿಸುವಂತೆ ಕ್ಷಣಮಾತ್ರದಲ್ಲಿ ನಾಶಮಾಡಿದಳು.

೭೦. ದೇವಿಯ ವಾಹನವಾದ ಸಿಂಹವು ಕತ್ತು-ಶಿರಗಳ ಸುತ್ತಲೂ ಇದ್ದ ಕೇಸರಗಳನ್ನು ಕೊಡವುತ್ತ ಭಾರಿಯಾಗಿ ಗರ್ಜನಮಾಡಿ ರಾಕ್ಷಸರ ದೇಹಗಳಿಂದ ಪ್ರಾಣವಾಯುಗಳನ್ನು ಹುಡುಕುವುದೋ ಎನ್ನುವಹಾಗೆ ಸಂಹರಿಸುತ್ತಿತ್ತು.

ದೇವ್ಯಾ ಗಣೈಶ್ಚ ತೈಸ್ತತ್ರ ಕೃತಂ ಯುದ್ಧಂ ಮಹಾಸುರೈಃ ।
ಯಥೈನಾಂ ತುಷ್ಟುವುರ್ದೇವಾಃ ಪುಷ್ಪವೃಷ್ಟಿಮುಚೋ ದಿವಿ ॥೭೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸಾವರ್ಣಿಕೇ ಮನ್ವನ್ತರೇ ದೇವೀಮಾಹಾತ್ಮ್ಯೇ ಏಕೋನಾಶೀತಿತಮೋಽಧ್ಯಾಯಃ

---

೭೧. ದೇವಿಯ ನಿಶ್ವಾಸಗಳಿಂದ ಹುಟ್ಟಿದ ಗಣಗಳು ಮದಿಸಿದ ಅಸುರರ ಸಂಗಡ ಅದ್ಭುತವಾಗಿ ಯುದ್ಧಮಾಡಿದರು. ದೇವತೆಗಳು ಆ ಮಹಾ ಸಂಗ್ರಾಮವನ್ನು ನೋಡಿ ಆಕಾಶದಿಂದ ಪುಷ್ಪವೃಷ್ಟಿಯನ್ನು ಸುರಿಸುತ್ತ ಪ್ರೀತಿಯಿಂದ ದೇವಿಯನ್ನು ಸ್ತುತಿಸಿದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಶೀತಿತಮೋಽಧ್ಯಾಯಃ

(ಮಹಿಷಾಸುರವಧಃ)

ಋುಷಿರುವಾಚ :—

ನಿಹನ್ಯಮಾನಂ ತತ್ಸೈನ್ಯಮವಲೋಕ್ಯ ಮಹಾಸುರಃ ।
ಸೇನಾನೀಶ್ಚಿಕ್ಷುರಃ ಕೋಪಾದ್ಯಯೌ ಯೋದ್ಧುಮಥಾಮ್ಬಿಕಾಮ್ ||೧||

ಸ ದೇವೀಂ ಶರವರ್ಷೇಣ ವವರ್ಷ ಸಮರೇಽಸುರಃ ।
ಯಥಾ ಮೇರುಗಿರೇಃ ಶೃಙ್ಗಂ ತೋಯವರ್ಷೇಣ ತೋಯದಃ ||೨||

ಎಂಭತ್ತನೆಯ ಅಧ್ಯಾಯ

ಸುಮೇಧ ಋುಷಿಯು ಹೇಳಿದನು :—

೧. ಆಗ ಮಹಿಷಾಸುರನ ಸೇನಾಪತಿಯಾದ ಚಿಕ್ಷುರನೆಂಬ ಮಹಾಸುರನು ತನ್ನ ಸೈನ್ಯವು ವಧಿಸಲ್ಪಡುತ್ತಿದ್ದುದನ್ನು ಕಂಡು ಕೋಪದಿಂದ ತಾನು ದೇವಿಯೊಡನೆ ಯುದ್ಧಮಾಡಲು ಬಂದನು.

೨. ಆ ಚಿಕ್ಷುರಾಸುರನು ನೀರುತುಂಬಿದ ಮೋಡವು ಧಾರಾಕಾರದ ಮಳೆಯಿಂದ ಮೇರುಗಿರಿಯ ಶಿಖರವನ್ನು ಮುಚ್ಚಿಹಾಕುವ ಹಾಗೆ ಸಮರಾಂಗಣದಲ್ಲಿ ಬಾಣಗಳ ಸುರಿಮಳೆಯಿಂದ ದೇವಿಯನ್ನು ಮುಚ್ಚಿಹಾಕಲು ಯತ್ನಿಸಿದನು.

ತಸ್ಯ ಚ್ಛಿತ್ವಾ ತತೋ ದೇವೀ ಲೀಲಯೈವ ಶರೋತ್ಕರಾನ್ ।
ಜಘಾನ ತುರಗಾನ್ಬಾಣೈರ್ಯನ್ತಾರಂ ಚೈವ ವಾಜಿನಾಮ್ ॥೩॥

ಚಿಚ್ಛೇದ ಚ ಧನುಃ ಸದ್ಯೋ ಧ್ವಜಂ ಚಾತಿಸಮುಚ್ಛ್ರಿತಮ್ ।
ವಿವ್ಯಾಧ ಚೈನಂ ಗಾತ್ರೇಷು ಛಿನ್ನಧನ್ವಾನಮಾಶುಗೈಃ ॥೪॥

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಅಭ್ಯಧಾವತ ತಾಂ ದೇವೀಂ ಖಡ್ಗಚರ್ಮಧರೋಽಸುರಃ ॥೫॥

ಸಿಹ್ಮಮಾಹತ್ಯ ಖಡ್ಗೇನ ತೀಕ್ಷ್ಣಧಾರೇಣ ಮೂರ್ಧನಿ ।
ಆಜಘಾನ ಭುಜೇ ಸವ್ಯೇ ದೇವೀಮಪ್ಯತಿವೇಗವಾನ್ ॥೬॥

---

೩. ತರುವಾಯ ದೇವಿಯು ಚಿಕ್ಷುರಾಸುರನು ಬಿಟ್ಟ ಬಾಣರಾಶಿಯನ್ನು ಅನಾಯಾಸವಾಗಿ ಕತ್ತರಿಸಿಹಾಕಿ ಪ್ರತಿಬಾಣಗಳಿಂದ ಅವನ ಕುದುರೆಗಳನ್ನೂ, ಕುದುರೆ ರಥಗಳನ್ನು ನಡೆಸುವ ಸಾರಥಿಯನ್ನೂ ಸಂಹರಿಸಿದಳು.

೪. ಮತ್ತು ಮೇಲೆ ಮೇಲೆ ಬಾಣಗಳನ್ನು ಪ್ರಯೋಗಿಸುತ್ತ ದೇವಿಯು ಕ್ಷಣಮಾತ್ರದಲ್ಲಿ ಬಿಲ್ಲನ್ನೂ, ಅತ್ಯುನ್ನತವಾದ ಧ್ವಜವನ್ನೂ ಕತ್ತರಿಸಿದಳು. ಮತ್ತು ಕತ್ತರಿಸಲ್ಪಟ್ಟ ಬಿಲ್ಲನ್ನು ತ್ಯಜಿಸಿದ ಆ ಅಸುರನನ್ನು ಗಾತ್ರದಲ್ಲಿ ಬಾಣಗಳಿಂದ ಪ್ರಹರಿಸಿದಳು.

೫. ಹೀಗೆ ದೇವಿಯಿಂದ ಛಿನ್ನವಾದ ರಥವುಳ್ಳವನೂ, ಸಂಹರಿಸಲ್ಪಟ್ಟ ಸಾರಥಿಯುಳ್ಳವನೂ, ವಧಿಸಲ್ಪಟ್ಟ ಕುದುರೆಗಳುಳ್ಳವನೂ ಮತ್ತು ಕತ್ತರಿಸಲ್ಪಟ್ಟ ಬಿಲ್ಲುಳ್ಳವನೂ ಆದ ಅಸುರನು ಖಡ್ಗ-ಚರ್ಮಗಳನ್ನು ಧರಿಸಿ ಆ ದೇವಿಯನ್ನು ಎದುರಿಸಿ ಬಂದನು.

೬. ಅತಿಯಾದ ವೇಗದಿಂದ ಕೂಡಿದ ಸೇನಾನಿಯಾದ ಚಿಕ್ಷುರನು ತೀಕ್ಷ್ಣವಾದ ಮೊನೆಯುಳ್ಳ ಖಡ್ಗದಿಂದ ದೇವಿಯ ವಾಹನವಾದ ಸಿಂಹಕ್ಕೆ ತಲೆಯ ಮೇಲೆ ಹೊಡೆದು ಹಾಗು ದೇವಿಗೂ ಎಡಭುಜದಲ್ಲಿ ಪ್ರಹರಿಸಿದನು.

ತಸ್ಯಾಃ ಖಡ್ಗೋ ಭುಜಂ ಪ್ರಾಪ್ಯ ಪಫಾಲ ನೃಪನನ್ದನ ।
ತತೋ ಜಗ್ರಾಹ ಶೂಲಂ ಸ ಕೋಪಾದರುಣಲೋಚನಃ ॥೭॥

ಚಿಕ್ಷೇಪ ಚ ತತಸ್ತತ್ತು ಭದ್ರಕಾಲ್ಯಾಂ ಮಹಾಸುರಃ ।
ಜಾಜ್ವಲ್ಯಮಾನಂ ತೇಜೋಭೀ ರವಿಬಿಮ್ಬಮಿವಾಮ್ಬರಾತ್ ॥೮॥

ದೃಷ್ಟ್ವಾ ತದಾಪತಚ್ಛೂಲಂ ದೇವೀ ಶೂಲಮಮುಞ್ಚತ ।
ತೇನ ತಚ್ಛತಧಾ ನೀತಂ ಶೂಲಂ ಸ ಚ ಮಹಾಸುರಃ ॥೯॥

ಹತೇ ತಸ್ಮಿನ್ಮಹಾವೀರ್ಯೇ ಮಹಿಷಸ್ಯ ಚಮೂಪತೌ ।
ಆಜಗಾಮ ಗಜಾರೂಢಶ್ಚಾಮರಸ್ತ್ರಿದಶಾರ್ದನಃ ॥೧೦॥

---

೭. ರಾಜಪುತ್ರನಾದ ಸುರಥನೇ! ರಾಕ್ಷಸನ ಆ ಖಡ್ಗವು ದೇವಿಯ ಭುಜಕ್ಕೆ ತಗುಲಿ ಪುಡಿಯಾಗಿ ಹೋಯಿತು. ತರುವಾಯ ಕೋಪವೇರಿ ಕೆಂಪಾದ ಕಣ್ಣುಗಳುಳ್ಳ ಚಿಕ್ಷುರಾಸುರನು ಶೂಲವನ್ನು ತೆಗೆದುಕೊಂಡನು.

೮. ಮಹಾಸುರನಾದ ಚಿಕ್ಷುರನು ಆಕಾಶವನ್ನು ವ್ಯಾಪಿಸಿ ಜ್ವಲಿಸುವ ಸೂರ್ಯನ ಬಿಂಬದಂತೆ ತನ್ನ ತೇಜಸ್ಸುಗಳಿಂದ ಜ್ವಲಿಸುತ್ತಿದ್ದ ಆ ಶೂಲವನ್ನು ಮಂಗಳಮೂರ್ತಿಯಾದ ಚಂಡಿಕಾದೇವಿಯಲ್ಲಿ ಪ್ರಯೋಗಿಸಿದನು.

೯. ಚಂಡಿಕಾದೇವಿಯು ಅಸುರನು ಬಿಟ್ಟಿರುವ, ತನ್ನ ಬಳಿಗೆ ಬರುತ್ತಿದ್ದ ಶೂಲಾಯುಧವನ್ನು ಕಂಡು ತಾನು ಪ್ರತಿಯಾಗಿ ಶೂಲವನ್ನು ಪ್ರಯೋಗಿಸಿದಳು. ಪ್ರತಿಶೂಲದಿಂದ ರಾಕ್ಷಸನ ಶೂಲವೂ ಆ ಮಹಾಸುರನೂ ನೂರಾರು ತುಂಡುಗಳಾಗಿ ಬೀಳುವಂತಾಯಿತು.

೧೦. ಮಹಿಷಾಸುರನ ಸೇನಾನಿಯಾದ, ಮಹಾವೀರ್ಯಸಂಪನ್ನನಾದ ಚಿಕ್ಷುರಾಸುರನು ವಧಿಸಲ್ಪಡಲಾಗಿ ಚಾಮರನೆಂಬ ದೇವಕಂಟಕನಾದ ರಾಕ್ಷಸನು ಆನೆಯಮೇಲೆ ಕುಳಿತುಕೊಂಡವನಾಗಿ ಯುದ್ಧಕ್ಕೆ ಬಂದನು.

ಸೋಽಪಿ ಶಕ್ತಿಂ ಮುಮೋಚಾಥ ದೇವ್ಯಾಸ್ತಾಮಮ್ಬಿಕಾ ದ್ರುತಮ್ ।
ಹುಙ್ಕಾರಾಭಿಹತಾಂ ಭೂಮೌ ಪಾತಯಾಮಾಸ ನಿಷ್ಪ್ರಭಾಮ್॥೧೧

ಭಗ್ನಾಂ ಶಕ್ತಿಂ ನಿಪತಿತಾಂ ದೃಷ್ಟ್ವಾ ಕ್ರೋಧಸಮನ್ವಿತಃ ।
ಚಿಕ್ಷೇಪ ಚಾಮರಃ ಶೂಲಂ ಬಾಣೈಸ್ತದಪಿ ಸಾಚ್ಛಿನತ್ ॥೧೨॥

ತತಃ ಸಿಂಹಃ ಸಮುತ್ಪತ್ಯ ಗಜಕುಮ್ಭಾನ್ತರೇ ಸ್ಥಿತಃ ।
ಬಾಹುಯುದ್ಧೇನ ಯುಯುಧೇ ತೇನೋಚ್ಚೈಸ್ತ್ರಿದಶಾರಿಣಾ ॥೧೩॥

ಯುಧ್ಯಮಾನೌ ತತಸ್ತೌ ತು ತಸ್ಮಾನ್ನಾಗಾನ್ಮಹೀಂ ಗತೌ ।
ಯುಯುಧಾತೇಽತಿ ಸಂರಬ್ಧೌ ಪ್ರಹಾರೈರತಿದಾರುಣೈಃ ॥೧೪॥

ತತೋ ವೇಗಾತ್ಖಮುತ್ಪತ್ಯ ನಿಪತ್ಯ ಚ ಮೃಗಾರಿಣಾ ।
ಕರಪ್ರಹಾರೇಣ ಚ ಶಿರಶ್ಚಾಮರಸ್ಯ ಪೃಥಕ್ಕೃತಮ್ ॥೧೫॥

---

೧೧. ಚಾಮರಾಸುರನು ದೇವಿಯಮೇಲೆ ಶಕ್ತಿ ಆಯುಧವನ್ನು ಬಿಟ್ಟನು. ಅನಂತರದಲ್ಲಿ ಚಂಡಿಕಾದೇವಿಯು ಆ ಶಕ್ತಿ ಅಯುಧವನ್ನು ಹುಂಕಾರದಿಂದ ಅಡಗಿಸಿ ಅದರ ಪ್ರಭೆಯು ಕುಂದಿಹೋಗುವಂತೆ ಮಾಡಿ ನೆಲದಲ್ಲಿ ಕೆಡವಿದಳು.

೧೨. ತನ್ನ ಶಕ್ತ್ಯಾಯುಧವು ಭಂಗಹೊಂದಿ ಕೆಳಗೆ ಬಿದ್ದುದನ್ನು ಕಂಡು ಕೋಪಾವೇಶಗೊಂಡ ಚಾಮರಾಸುರನು ದೇವಿಯ ಮೇಲೆ ಶೂಲವನ್ನೆಸೆದನು. ದೇವಿಯು ಆ ಶೂಲವನ್ನೂ ಕತ್ತರಿಸಿದಳು.

೧೩. ತರುವಾಯ ದೇವಿಯ ವಾಹನವಾದ ಸಿಂಹವು ಎರಗಿ ಆನೆಯ ಕುಂಭಸ್ಥಳದ ನಡುವೆ ನಿಂತುಕೊಂಡು ದೇವಶತ್ರುವಾದ ಚಾಮರಾಸುರನೊಡನೆ ಕಠಿನವಾಗಿ ಬಾಹುಯುದ್ಧವನ್ನು ಮಾಡಿತು.

೧೪. ಹೀಗೆ ಬಾಹುಯುದ್ಧ ಮಾಡುತ್ತಿದ್ದ ಸಿಂಹವೂ ಚಾಮರಾಸುರನೂ ಆನೆಯಿಂದ ಕೆಳಗಿಳಿದು ಭೂಮಿಗೆ ಬಂದರು ಮತ್ತು ಭೂಮಿಯಲ್ಲಿ ಬಲು ಸ್ಪರ್ಧೆ-ಯಿಂದ ಭಯಂಕರವಾದ ಪ್ರಹಾರಗಳನ್ನು ಕೊಡುತ್ತ ಯುದ್ಧ ಮಾಡಿದರು.

೧೫. ತರುವಾಯ ದೇವಿಯ ಸಿಂಹವು ಆಕಾಶಕ್ಕೆ ನೆಗೆದು ಮತ್ತೆ ರಾಕ್ಷಸನ ಮೇಲೆ ಎರಗಿಬಿದ್ದು ಕೈಯ ಹೊಡೆತದಿಂದ ಚಾಮರಾಸುರನ ತಲೆಯನ್ನು ಮುರಿದು ಬೇರೆ ಮಾಡಿತು.

ಉದಗ್ರಶ್ಚ ರಣೇ ದೇವ್ಯಾ ಶಿಲಾವೃಕ್ಷಾದಿಭಿರ್ಹತಃ ।
ದನ್ತಮುಷ್ಟಿತಲೈಶ್ಚೈವ ಕರಾಲಶ್ಚ ನಿಪಾತಿತಃ ॥೧೬॥

ದೇವೀ ಕ್ರುದ್ಧಾ ಗದಾಪಾತೈಶ್ಚೂರ್ಣಯಾಮಾಸ ಚೋದ್ಧತಮ್ ।
ಬಾಷ್ಕಲಂ ಭಿನ್ದಿಪಾಲೇನ ಬಾಣೈಸ್ತಾಮ್ರಂ ತಥಾನ್ಧಕಮ್ ॥೧೭॥

ಉಗ್ರಾಸ್ಯಮುಗ್ರವೀರ್ಯಂ ಚ ತಥೈವ ಚ ಮಹಾಹನುಮ್ ।
ತ್ರಿನೇತ್ರಾ ಚ ತ್ರಿಶೂಲೇನ ಜಘಾನ ಪರಮೇಶ್ವರೀ ॥೧೮॥

ದುರ್ಧರಂ ದುರ್ಮುಖಂ ಚೋಭೌ ಶರೈರ್ನಿನ್ಯೇ ಯಮಕ್ಷಯಮ್ ॥೧೯॥

---

೧೬. ಹಾಗು ಉದಗ್ರನೆಂಬ ಅಸುರನು ದೇವಿಯಿಂದ ರಣರಂಗದಲ್ಲಿ ಕಲ್ಲು-ಮರಗಳಿಂದ ಹತನಾದನು. ಹಾಗು ಸಿಂಹ-ಗಣಪರಿವಾರದಿಂದ ಕೂಡಿದ ದೇವಿಯಿಂದ ದಂತ-ಮುಷ್ಟಿ-ತಲಶಬ್ದ ಮುಂತಾದ ಉಪಕರಣಗಳಿಂದ ಕರಾಲನೆಂಬ ರಾಕ್ಷಸನು ಕೆಡುಹಲ್ಪಟ್ಟನು.

೧೭. ಆಗ ಕೋಪಾವೇಶದಿಂದ ಕೂಡಿದ ದೇವಿಯು ಉದ್ಧತನೆಂಬ ಮದಿಸಿದ ಅಸುರನನ್ನು ಗದಾಪ್ರಹಾರಗಳಿಂದ ಪುಡಿಮಾಡಿದಳು. ಭಿಂಡಪಾಲವೆಂಬ ಆಯುಧದಿಂದ ಬಾಷ್ಕಲನೆಂಬ ಅಸುರನನ್ನು ಕೊಂದಳು. ಮತ್ತು ತಾಮ್ರ-ಅಂಧಕ ಎಂಬ ಇಬ್ಬರು ಅಸುರರನ್ನು ಬಾಣಗಳಿಂದ ವಧಿಸಿದಳು.

೧೮. ಮತ್ತು ಮೂರು ಕಣ್ಣುಗಳಿಂದ ಶೋಭಿಸುವ ಸರ್ವೇಶ್ವರಿಯಾದ ದೇವಿಯು ತ್ರಿಶೂಲಾಯುಧದಿಂದ ಉಗ್ರಾಸ್ಯ, ಉಗ್ರವೀರ್ಯ ಮತ್ತು ಮಹಾಹನು ಎಂಬ ಹೆಸರಿಗೆ ತಕ್ಕಂತೆ ಬಲಿಷ್ಠರಾದ ಮೂರು ಮಂದಿ ಅಸುರರನ್ನು ಕೊಂದಳು.

೧೯. ಹಾಗು ದೇವಿಯು ಕತ್ತಿಯಿಂದ ಬಿಡಾಲನೆಂಬ ಅಸುರನ ಮುಂಡದಿಂದ ರುಂಡವನ್ನು ಬೇರೆಮಾಡಿದಳು. ಮತ್ತು ದುರ್ಧರ-ದುರ್ಮುಖ ಎಂಬ ಇಬ್ಬರು ರಾಕ್ಷಸರನ್ನು ದೇವಿಯು ಬಾಣಗಳಿಂದ ಮೃತ್ಯುಲೋಕಕ್ಕೆ ಕಳುಹಿಸಿದಳು.

ಕಾಲಂ ಚ ಕಾಲದಣ್ಡೇನ ಕಾಲರಾತ್ರಿರಪಾತಯತ್ ।
ಉಗ್ರದರ್ಶನಮತ್ಯುಗ್ರೈಃ ಖಡ್ಗಪಾತೈರತಾಡಯತ್ ॥೨೦॥

ಅಸಿನೈವಾಸಿಲೋಮಾನಮಚ್ಛಿನತ್ಸಾ ರಣೋತ್ಸವೇ ।
ಗಣೈಃ ಸಿಹ್ಮೇನ ದೇವ್ಯಾ ಚ ಜಯಕ್ಷ್ವೇಡಾಕೃತೋತ್ಸವೈಃ ॥೨೧॥

ಏವಂ ಸಂಕ್ಷೀಯಮಾಣೇ ತು ಸ್ವಸೈನ್ಯೇ ಮಹಿಷಾಸುರಃ ।
ಮಾಹಿಷೇಣ ಸ್ವರೂಪೇಣ ತ್ರಾಸಯಾಮಾಸ ತಾನ್ಗಣಾನ್ ॥೨೨॥

ಕಾಂಶ್ಚಿತ್ತುಣ್ಡಪ್ರಹಾರೇಣ ಕ್ಷುರಕ್ಷೇಪೈಸ್ತಥಾಪರಾನ್ ।
ಲಾಙ್ಗೂಲತಾಡಿತಾಂಶ್ಚಾನ್ಯಾಞ್ಛೃಙ್ಗಾಭ್ಯಾಂ ಚ ವಿದಾರಿತಾನ್॥೨೩॥

---

೨೦. ಮತ್ತು ಕಾಲರಾತ್ರಿಯ ಸ್ವರೂಪಿಣಿಯಾದ ದೇವಿಯು ಕಾಲ ಎಂಬ ಅಸುರನನ್ನು ಕಾಲದಂಡವನ್ನು ಪ್ರಯೋಗಿಸಿ ವಧಿಸಿದಳು. ಹಾಗು ಉಗ್ರದರ್ಶನ ಎಂಬ ಅಸುರನನ್ನು ಬಲು ಭಯಂಕರವಾದ ಖಡ್ಗಪ್ರಹಾರಗಳಿಂದ ವಧಿಸಿದಳು.

೨೧. ಮತ್ತು ಶಕ್ತಿಗಣ-ಸಿಂಹ ಇವುಗಳ ಜಯಘೋಷ ಸಿಂಹನಾದ-ಗಳಿಂದ ಪೂರ್ಣವಾದ ರಣರಂಗದಲ್ಲಿ ಯುದ್ಧಮಹೋತ್ಸವವು ನಡೆಯುತ್ತಿರಲು ದೇವಿಯು ಕತ್ತಿಯಿಂದ ಅಸಿಲೋಮ ಎಂಬ ರಾಕ್ಷಸನನ್ನು ಕತ್ತರಿಸಿ ಬಿಸುಟಳು.

೨೨. ಈ ವಿಧವಾಗಿ ತನ್ನ ಸೈನ್ಯಸಂಪತ್ತು ಕ್ಷಯಿಸುತ್ತಿರಲು ಮಹಿಷಾ-ಸುರನು ತನ್ನ ಮಹಿಷರೂಪವನ್ನು ತೆಗೆದುಕೊಂಡು ಬಂದು ದೇವಿಯ ಪರಿವಾರ-ದಲ್ಲಿದ್ದ ಶಕ್ತಿಗಣಗಳನ್ನು ಬೆದರಿಸಿದನು.

೨೩. ಶಕ್ತಿಗಣಗಳ ತಂಡಕ್ಕೆ ನುಗ್ಗಿದ ಮಹಿಷಾಸುರನು ಕೆಲವು ಗಣಗಳನ್ನು ಮೂತಿಯ ತಿವಿತದಿಂದಲೂ, ಕೆಲವು ಗಣಗಳನ್ನು ಕಾಲುಗೊರಸುಗಳ ಏಟಿನಿಂದಲೂ, ಮತ್ತೆ ಕೆಲವು ಗಣಗಳನ್ನು ಬಾಲದ ಪ್ರಹಾರದಿಂದಲೂ ಮತ್ತು ಇನ್ನು ಕೆಲವು ಗಣಗಳನ್ನು ಕೊಂಬುಗಳನ್ನು ನಾಟುವುದರಿಂದಲೂ ವ್ಯಥೆಪಡಿ-ಸಿದನು.

ವೇಗೇನ ಕಾಂಶ್ಚಿದಪರಾನ್ನಾದೇನ ಭ್ರಮಣೇನ ಚ |
ನಿಶ್ವಾಸಪವನೇನಾನ್ಯಾನ್ಪಾತಯಾಮಾಸ ಭೂತಲೇ ||೨೪||

ನಿಪಾತ್ಯ ಪ್ರಮಥಾನೀಕಮಭ್ಯಧಾವತ ಸೋಽಸುರಃ |
ಸಿಹ್ಮಂ ಹನ್ತುಂ ಮಹಾದೇವ್ಯಾಃ ಕೋಪಂ ಚಕ್ರೇ ತತೋಽಮ್ಬಿಕಾ ||೨೫||

ಸೋಽಪಿ ಕೋಪಾನ್ಮಹಾವೀರ್ಯಃ ಖುರಕ್ಷುಣ್ಣಮಹೀತಲಃ |
ಶೃಙ್ಗಾಭ್ಯಾಂ ಪರ್ವತಾನುಚ್ಚೈಶ್ಚಿಕ್ಷೇಪ ಚ ನನಾದ ಚ ||೨೬||

ವೇಗಭ್ರಮಣವಿಕ್ಷುಣ್ಣಾ ಮಹೀ ತಸ್ಯ ವ್ಯಶೀರ್ಯತ |
ಲಾಙ್ಗೂಲೇನಾಹತಶ್ಚಾಬ್ಧಿಃ ಪ್ಲಾವಯಾಮಾಸ ಸರ್ವತಃ ||೨೭||

---

೨೪. ಹಾಗು ಮಹಿಷಾಸುರನು ಗಣಗಳಲ್ಲಿ ಕೆಲವರನ್ನು ವೇಗದಿಂದಲೂ ಕೆಲವರನ್ನು ಗರ್ಜನೆಯಿಂದಲೂ ಮತ್ತೆ ಕೆಲವರನ್ನು ಎತ್ತಿ ಸುತ್ತಿಸುವುದರಿಂದಲೂ ಮತ್ತು ಇನ್ನು ಕೆಲವರನ್ನು ಉಸಿರಿನ ಗಾಳಿಯ ವೇಗದಿಂದಲೂ ನೆಲಕ್ಕೆ ಉರುಳಿಸಿದನು.

೨೫. ಈ ವಿಧವಾಗಿ ಆ ಮಹಿಷಾಸುರನು ಪ್ರಮಥಗಣಗಳ ಸೈನ್ಯವನ್ನು ನೆಲದಲ್ಲಿ ಮಲಗಿಸಿ ಮಹಾದೇವಿಯ ವಾಹನವಾದ ಸಿಂಹವನ್ನು ಕೊಲ್ಲಲು ಓಡಿಬಂದನು. ಆಗ ಚಂಡಿಕಾದೇವಿಯು ಅಸುರನ ಮೇಲೆ ಕೋಪತಾಳಿದಳು.

೨೬. ಮಹತ್ತಾದ ವೀರ್ಯವುಳ್ಳ ಮಹಿಷಾಸುರನು ಕೂಡ ಕೋಪಾವೇಶದಿಂದ ಗೊರಸುಗಳಿಂದ ಗೀರಿ ಪುಡಿಮಾಡಿದ ನೆಲವುಳ್ಳವನಾಗಿ ತನ್ನ ಕೊಂಬುಗಳಿಂದ ಪರ್ವತಗಳನ್ನು ಎತ್ತಿ ಎಸೆದನು. ಮತ್ತು ಗರ್ಜಿಸಿದನು.

೨೭. ಮಹಿಷಾಸುರನ ವೇಗದಿಂದ ಪ್ರಚಂಡವಾದ ಸುತ್ತುವಿಕೆಯಿಂದ ಪುಡಿಯಾದ ಭೂಮಿಯು ತಾನೇ ಶಿಥಿಲವಾಗುತ್ತಿತ್ತು. ಮತ್ತು ಬಾಲದಿಂದ ಅಪ್ಪಳಿಸಲ್ಪಟ್ಟ ಸಮುದ್ರವು ನೀರುಕ್ಕಿ ಬಂದು ಎಲ್ಲೆಡೆಯಲ್ಲಿಯೂ ತೋಯಿಸುತ್ತಿತ್ತು.

ಧುತಶೃಙ್ಗವಿಭಿನ್ನಾಶ್ಚ ಖಣ್ಡಂ ಖಣ್ಡಂ ಯಯುರ್ಘನಾಃ ।
ಶ್ವಾಸಾನಿಲಾಸ್ತಾಃ ಶತಶೋ ನಿಪೇತುರ್ನಭಸೋಽಚಲಾಃ ॥೨೮॥

ಇತಿ ಕ್ರೋಧಸಮಾಧ್ಮಾತಮಾಪತನ್ತಂ ಮಹಾಸುರಮ್ ।
ದೃಷ್ಟ್ವಾ ಸಾ ಚಣ್ಡಿಕಾ ಕೋಪಂ ತದ್ವಧಾಯ ತದಾಕರೋತ್ ॥೨೯॥

ಸಾ ಕ್ಷಿಪ್ತ್ವಾ ತಸ್ಯ ವೈ ಪಾಶಂ ತಂ ಬಬನ್ಧ ಮಹಾಸುರಮ್ ।
ತತ್ಯಾಜ ಮಾಹಿಷಂ ರೂಪಂ ಸೋಽಪಿ ಬದ್ಧೋ ಮಹಾಮೃಧೇ ॥೩೦॥

ತತಃ ಸಿಹ್ಮೋಽಭವತ್ಸದ್ಯೋ ಯಾವತ್ತಸ್ಯಾಮ್ಬಿಕಾ ಶಿರಃ ।
ಛಿನತ್ತಿ ತಾವತ್ಪುರುಷಃ ಖಡ್ಗಪಾಣಿರದೃಶ್ಯತ ॥೩೧॥

---

೨೮. ಮತ್ತು ಆಗಾಗ ಕೊಡವಿದ ಕೊಂಬುಗಳಿಂದ ಭೇದಿಸಲ್ಪಟ್ಟ ಮೋಡಗಳು ತುಂಡು ತುಂಡಾಗಿ ಚಲಿಸಿದುವು. ಮತ್ತು ಶ್ವಾಸವಾಯುವಿನಿಂದ ಮೇಲಕ್ಕೆ ಎತ್ತಲ್ಪಟ್ಟ ಬೆಟ್ಟಗಳು ನೂರಾರು ಆಕಾಶದಿಂದ ಕೆಳಗೆ ಬಿದ್ದುವು.

೨೯. ಈ ಬಗೆಯಿಂದ ಕೋಪಾವೇಶದಿಂದ ಊದಿಕೊಂಡು ತನ್ನೆದುರು ಬರುತ್ತಲಿದ್ದ ಆ ಮಹಿಷಾಸುರನನ್ನು ನೋಡಿ ಆಗ ಚಂಡಿಕಾದೇವಿಯು ಆ ಅಸುರನನ್ನು ವಧಿಸಲು ಉಗ್ರವಾದ ಕೋಪವನ್ನು ತಾಳಿದಳು.

೩೦. ಆಗ ಚಂಡಿಕಾಂಬಿಕೆಯು ಅಸುರನ ಮೇಲೆ ಪಾಶವನ್ನು ಬೀಸಿ ಆ ಮಹಾಸುರನನ್ನು ಬಂಧಿಸಿದಳು. ಆಗ ಯುದ್ಧರಂಗದಲ್ಲಿ ಪಾಶದಿಂದ ಬಂಧಿಸಲ್ಪಟ್ಟ ಅಸುರನು ಕೂಡಲೆ ಮಹಿಷರೂಪವನ್ನು ಬಿಟ್ಟನು.

೩೧. ತರುವಾಯ ಮಹಿಷರೂಪವನ್ನು ಬಿಟ್ಟ ಅಸುರನು ಕ್ಷಣಮಾತ್ರದಲ್ಲಿ ಸಿಂಹವಾದನು. ಆಗ ಚಂಡಿಕೆಯು ಆ ಸಿಂಹದ ಶಿರವನ್ನು ಛೇದಿಸುವಷ್ಟರಲ್ಲಿ ಮತ್ತೆ ಅಸುರನು ಸಿಂಹರೂಪವನ್ನು ಬಿಟ್ಟು ಖಡ್ಗವನ್ನು ಕೈಯಲ್ಲಿ ಧರಿಸಿದ ಪುರುಷನಾಗಿ ಕಾಣಿಸಿದನು.

ತತ ಏವಾಶು ಪುರುಷಂ ದೇವೀ ಚಿಚ್ಛೇದ ಸಾಯಕೈಃ ।
ತಂ ಖಡ್ಗಚರ್ಮಣಾ ಸಾರ್ಧಂ ತತಃ ಸೋಽಭೂನ್ಮಹಾಗಜಃ ॥೩೨॥

ಕರೇಣ ಚ ಮಹಾಸಿಂಹಂ ಚಕರ್ಷ ಚ ಜಗರ್ಜ ಚ ।
ಕರ್ಷತಸ್ತು ಕರಂ ದೇವೀ ಖಡ್ಗೇನ ನಿರಕೃನ್ತತ ॥೩೩॥

ತತೋ ಮಹಾಸುರೋ ಭೂಯೋ ಮಾಹಿಷಂ ವಪುರಾಶ್ರಿತಃ ।
ತಥೈವ ಕ್ಷೋಭಯಾಮಾಸ ತ್ರೈಲೋಕ್ಯಂ ಸಚರಾಚರಮ್ ॥೩೪॥

ತತಃ ಕ್ರುದ್ಧಾ ಜಗನ್ಮಾತಾ ಚಣ್ಡಿಕಾ ಪಾನಮುತ್ತಮಮ್ ।
ಪಪೌ ಪುನಃ ಪುನಶ್ಚೈವ ಜಹಾಸಾರುಣಲೋಚನಾ ॥೩೫॥

ನನರ್ದ ಚಾಸುರಃ ಸೋಽಪಿ ಬಲವೀರ್ಯಮದೋದ್ಧತಃ ।
ವಿಷಾಣಾಭ್ಯಾಂ ಚ ಚಿಕ್ಷೇಪ ಚಣ್ಡಿಕಾಂ ಪ್ರತಿ ಭೂಧರಾನ್ ॥೩೬॥

---

೩೨. ಕೂಡಲೆ ದೇವಿಯು ಖಡ್ಗವನ್ನು ಧರಿಸಿದ ಪುರುಷನನ್ನು ಅವನು ಧರಿಸಿದ ಖಡ್ಗ-ಚರ್ಮಗಳ ಜೊತೆಯಲ್ಲಿ ಬಾಣಗಳಿಂದ ಕತ್ತರಿಸಿದಳು. ಆಗ ಆ ಪುರುಷರೂಪವನ್ನು ಬಿಟ್ಟು ಅಸುರನು ದೊಡ್ಡ ಆನೆಯಾದನು.

೩೩. ಮತ್ತು ಗಜರೂಪಿಯಾದ ಅಸುರನು ತನ್ನ ಸೊಂಡಲಿನಿಂದ ಸಿಂಹವನ್ನು ಸೆಳೆದು ಗರ್ಜನಮಾಡಿದನು. ಆಗ ದೇವಿಯು ಸಿಂಹವನ್ನು ಸೆಳೆಯುತ್ತಿದ್ದ ಆನೆಯ ಸೊಂಡಿಲನ್ನು ಖಡ್ಗದಿಂದ ಕತ್ತರಿಸಿದಳು.

೩೪. ತರುವಾಯ ಮಹಾಸುರನು ಮತ್ತೆ ಮಹಿಷರೂಪವನ್ನು ಧರಿಸಿದವನಾಗಿ ಮೊದಲಿನಂತೆ ಚರ-ಅಚರ ಪ್ರಾಣಿಗಳಿಂದ ತುಂಬಿದ ಮೂರು ಲೋಕಗಳನ್ನು ಕ್ಷೋಭಗೊಳಿಸಿದನು.

೩೫. ಅನಂತರ ಜಗನ್ಮಾತೆಯಾದ ಚಂಡಿಕಾದೇವಿಯು ಕೋಪಗೊಂಡವಳೂ, ಕೆಂಪಾದ ಕಣ್ಣುಗಳುಳ್ಳವಳೂ ಆಗಿ ಮತ್ತೆ ಮತ್ತೆ ಮಧುಪಾನವನ್ನು ಮಾಡಿದಳು. ಹಾಗೆ ವೀರಪಾನವನ್ನು ಮಾಡುತ್ತ ನಕ್ಕಳು.

೩೬. ಶಕ್ತಿ-ವಿಕ್ರಮಗಳಿಂದ ಮದವೇರಿ ಕೊಬ್ಬಿರುವ ಮಹಿಷಾಸುರನು ಗರ್ಜನಮಾಡಿದನು. ಮತ್ತು ಪರ್ವತಗಳನ್ನು ಕೊಂಬುಗಳಿಂದ ಎತ್ತಿ ಮಹಾದೇವಿಯ ಮೇಲೆ ಎಸೆದನು.

ಸಾ ಚ ತಾನ್ಪ್ರಹಿತಾಂಸ್ತೇನ ಚೂರ್ಣಯನ್ತೀ ಶರೋತ್ಕರೈಃ ।
ಉವಾಚ ತಂ ಮದೋದ್ಧೂತಮುಖರಾಗಾಕುಲಾಕ್ಷರಮ್ ॥೩೭॥

ದೇವ್ಯುವಾಚ :—

ಗರ್ಜ ಗರ್ಜ ಕ್ಷಣಂ ಮೂಢ ಮಧು ಯಾವತ್ಪಿಬಾಮ್ಯಹಮ್ ।
ಮಯಾ ತ್ವಯಿ ಹತೇಽತ್ರೈವ ಗರ್ಜಿಷ್ಯನ್ತ್ಯಾಶು ದೇವತಾಃ ॥೩೮॥

ಋಷಿರುವಾಚ :—

ಏವಮುಕ್ತ್ವಾ ಸಮುತ್ಪತ್ಯ ಸಾರೂಢಾ ತಂ ಮಹಾಸುರಮ್ ।
ಪಾದೇನಾಕ್ರಮ್ಯ ಕಣ್ಠೇ ಚ ಶೂಲೇನೈನಮತಾಡಯತ್ ॥೩೯॥

ತತಃ ಸೋಽಪಿ ಪದಾಕ್ರಾನ್ತಸ್ತಯಾ ನಿಜಮುಖಾತ್ತತಃ ।
ಅರ್ಧನಿಷ್ಕ್ರಾನ್ತ ಏವಾಸೀದ್ದೇವ್ಯಾ ವೀರ್ಯೇಣ ಸಂವೃತಃ ॥೪೦॥

---

೩೭. ಆಗ ಚಂಡಿಕಾದೇವಿಯು ಮಹಿಷಾಸುರನಿಂದ ಎಸೆಯಲ್ಪಟ್ಟ ಪರ್ವತಗಳನ್ನು ತನ್ನ ಬಾಣವೃಷ್ಟಿಯಿಂದ ಪುಡಿಮಾಡುತ್ತ ಮಧುಪಾನದ ಮದದಿಂದ ಏರಿದ ಮುಖದ ಕೆಂಪುಬಣ್ಣವುಳ್ಳವಳಾಗಿ ಮದವಿಕಾರದಿಂದ ತೊದಲಿನ ಮಾತಿನಿಂದ ಮಾತನಾಡಿದಳು.

ದೇವಿಯು ಹೀಗೆಂದಳು :—

೩೮. ಎಲೈ ಮೂಢನಾದ ಅಸುರನೇ! ಒಂದು ಕ್ಷಣಕಾಲ ಮಾತ್ರ ಗರ್ಜನಮಾಡು, ಇಗೋ! ನಾನು ಇಷ್ಟರಲ್ಲಿ ಮಧುಪಾನವನ್ನು ಪೂರೈಸಿ ಬರುವೆನು. ಈಗಲೇ ನನ್ನಿಂದ ನೀನು ಹತನಾಗಿ ಬೀಳಲು ದೇವತೆಗಳು ಬೇಗ ಆನಂದದಿಂದ ಗರ್ಜಿಸುವರು.

ಋಷಿಯು ಹೀಗೆಂದನು :—

೩೯. ದೇವಿಯು ಹೀಗೆಂದು ಹೇಳಿ ಕೂಡಲೆ ಮೇಲಕ್ಕೆ ಎದ್ದು ಆ ಅಸುರನ ಮೇಲೆ ಬಿದ್ದು ತನ್ನ ಪಾದದಿಂದ ಅವನ ಕಂಠವನ್ನು ಬಿಗಿಯಾಗಿ ತುಳಿದು ನಿಂತು ಶೂಲಾಯುಧದಿಂದ ಅಸುರನನ್ನು ಚುಚ್ಚಿದಳು.

೪೦. ತರುವಾಯ ದೇವಿಯಿಂದ ಕಾಲಿನಿಂದ ತುಳಿದು ಆಕ್ರಮಿಸಲ್ಪಟ್ಟಿರುವ ಅಸುರನು ತನ್ನ ಮುಖದಿಂದ ಹೊರಕ್ಕೆ ಅರ್ಧಮಾತ್ರ ಹೊರಟುಬಂದವನಾದರೂ ದೇವಿಯ ವೀರ್ಯದಿಂದ ಅಲ್ಲಿಯೆ ಸ್ತಬ್ಧನಾದನು.

ಅರ್ಧನಿಷ್ಕ್ರಾನ್ತ ಏವಾಸೌ ಯುಧ್ಯಮಾನೋ ಮಹಾಸುರಃ ।
ತಯಾ ಮಹಾಸಿನಾ ದೇವ್ಯಾ ಶಿರಶ್ಛಿತ್ತ್ವಾ ನಿಪಾತಿತಃ ॥೪೧॥

ಏವಂ ಸ ಮಹಿಷೋ ನಾಮ ಸಸೈನ್ಯಃ ಸಸುಹೃದ್ಗಣಃ ।
ತ್ರೈಲೋಕ್ಯಂ ಮೋಹಯಿತ್ವಾ ತು ತಯಾ ದೇವ್ಯಾ ವಿನಾಶಿತಃ ॥೪೨॥

ತ್ರೈಲೋಕ್ಯಸ್ಥೈಸ್ತದಾ ಭೂತೈರ್ಮಹಿಷೇ ವಿನಿಪಾತಿತೇ ।
ಜಯೇತ್ಯುಕ್ತಂ ತತಃ ಸರ್ವೈಃ ಸದೇವಾಸುರಮಾನವೈಃ ॥೪೩॥

ತತೋ ಹಾಹಾಕೃತಂ ಸರ್ವಂ ದೈತ್ಯಸೈನ್ಯಂ ನನಾಶ ಯತ್ ।
ಪ್ರಹರ್ಷಂ ಚ ಪರಂ ಜಗ್ಮುಃ ಸಕಲಾ ದೇವತಾಗಣಾಃ ॥೪೪॥

---

೪೧. ಹಾಗೆ ಮಹಿಷಾಕಾರದಿಂದ ಹೊರಗೆ ಅರ್ಧಮಾತ್ರ ಹೊರಟು ಅಲ್ಲಿಯೇ ಯುದ್ಧಮಾಡುತ್ತಲಿರುವ ಆ ಮಹಾಸುರನು ದೇವಿಯಿಂದ ದೊಡ್ಡ ಕತ್ತಿಯಿಂದ ಕತ್ತರಿಸಲ್ಪಟ್ಟು ಕೆಳಗೆ ಬೀಳಿಸಲ್ಪಟ್ಟನು.

೪೨. ಈ ರೀತಿಯಾಗಿ ಆ ಮಹಿಷನೆಂಬ ಅಸುರನು ಸೈನ್ಯ-ಮಿತ್ರ-ಪರಿವಾರ ಸಮೇತನಾಗಿ ಮದದಿಂದ ತ್ರೈಲೋಕ್ಯವನ್ನು ಮೋಹಗೊಳಿಸಿ ಕಡೆಯಲ್ಲಿ ಮಹಾದೇವಿಯಿಂದ ವಧಿಸಲ್ಪಟ್ಟನು.

೪೩. ಹೀಗೆ ಮಹಾಭಯಂಕರನಾದ ಮಹಿಷಾಸುರನು ದೇವಿಯಿಂದ ವಧಿಸಲ್ಪಡಲು ದೇವ-ಅಸುರ-ಮಾನವರು ಆದಿಯಾಗಿ ಮೂರುಲೋಕಗಳಲ್ಲಿರುವ ಸಮಸ್ತ ಭೂತಗಳು ದೇವಿಯ ವಿಷಯದಲ್ಲಿ ಜಯಘೋಷಣೆಯನ್ನು ಮಾಡಿದರು.

೪೪. ತರುವಾಯ ದೈತ್ಯರ ಸೈನ್ಯವು ದೇವಿಯ ಪ್ರತಾಪದಿಂದ ಹಾಹಾಕಾರ ಮಾಡುತ್ತ ನಾಶವಾದುದರಿಂದ ಸಮಸ್ತ ದೇವತೆಗಳ ಗುಂಪುಗಳು ಅತಿಶಯವಾದ ಆನಂದವನ್ನು ಹೊಂದಿದುವು.

ತುಷ್ಟುವುಸ್ತಾಂ ಸುರಾ ದೇವೀಂ ಸಹ ದಿವ್ಯೈರ್ಮಹರ್ಷಿಭಿಃ ।
ಜಗುರ್ಗನ್ಧರ್ವಪತಯೋ ನನೃತುಶ್ಚಾಪ್ಸರೋಗಣಾಃ ॥೪೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ ಮಹಿಷಾಸುರವಧೋ ನಾಮಾಶೀತಿತಮೋಽಧ್ಯಾಯಃ

---

೪೫. ಆನಂದದಲ್ಲಿದ್ದ ದೇವತೆಗಳು ದೇವಲೋಕದ ಮಹರ್ಷಿಗಳೊಡನೆ ದುಷ್ಟನನ್ನು ನಿಗ್ರಹಿಸಿದ ದೇವಿಯನ್ನು ಸ್ತೋತ್ರಮಾಡಿದರು. ಗಂಧರ್ವರಾಜರು ಗಾನಮಾಡಿದರು. ಮತ್ತು ಅಪ್ಸರಾಂಗನೆಯರು ನರ್ತನಮಾಡಿದರು.

ಮಾರ್ಕಂಡೇಯ ಮಹಾಪುರಾಣವಲ್ಲಿ ಎಂಭತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಾಶೀತಿತಮೋಽಧ್ಯಾಯಃ

ಋಷಿರುವಾಚ :—

ತತಃ ಸುರಗಣಾಃ ಸರ್ವೇ ದೇವ್ಯಾ ಇನ್ದ್ರಪುರೋಗಮಾಃ ।
ಸ್ತುತಿಮಾರೇಭಿರೇ ಕರ್ತುಂ ನಿಹತೇ ಮಹಿಷಾಸುರೇ ॥೧॥

ಶಕ್ರಾದಯಃ ಸುರಗಣಾ ನಿಹತೇಽತಿವೀರ್ಯೇ
ತಸ್ಮಿನ್ ದುರಾತ್ಮನಿ ಸುರಾರಿಬಲೇ ಚ ದೇವ್ಯಾ ।
ತಾಂ ತುಷ್ಟುವುಃ ಪ್ರಣತಿನಮ್ರಶಿರೋಧರಾಂಸಾ ।
ವಾಗ್ಭಿಃ ಪ್ರಹರ್ಷಪುಲಕೋದ್ಗಮಚಾರುದೇಹಾಃ ॥೨॥

ಎಂಭತ್ತೊಂದನೆಯ ಅಧ್ಯಾಯ

ಸುಮೇಧ ಋಷಿಯು ಹೇಳಿದನು :—

೧. ತ್ರಿಲೋಕಕಂಟಕನಾದ ಮಹಿಷಾಸುರನ ವಧೆಯಾದ ಮೇಲೆ ಇಂದ್ರನು ಮೊದಲಾಗಿ ಸಮಸ್ತ ದೇವತೆಗಳು ಚಂಡಿಕಾದೇವಿಯನ್ನು ಸ್ತೋತ್ರಮಾಡಲು ಉಪಕ್ರಮಿಸಿದರು.

೨. ಅತಿಯಾದ ವೀರ್ಯವುಳ್ಳವನೂ ನೀಚಾತ್ಮನೂ ಆದ ಮಹಿಷಾಸುರನೂ ಮತ್ತು ರಾಕ್ಷಸರ ಸೈನ್ಯವೂ ಚಂಡಿಕಾಂಬಿಕೆಯಿಂದ ಸಂಹರಿಸಲ್ಪಟ್ಟಿರಲು ಇಂದ್ರನು ಮೊದಲಾದ ಸಮಸ್ತ ದೇವಗಣಗಳು ಪ್ರಣಾಮಮಾಡಿ ಬಗ್ಗಿರುವ ಕತ್ತು ಮತ್ತು ಹೆಗಲುಗಳುಳ್ಳವರೂ, ಹರ್ಷದಿಂದ ಉಂಟಾದ ರೋಮಾಂಚದಿಂದ ಸುಂದರ ದೇಹವುಳ್ಳವರೂ ಆಗಿ ಸ್ತುತಿವಚನಗಳಿಂದ ದೇವಿಯನ್ನು ಸ್ತುತಿಮಾಡಿದರು.

ದೇವಾ ಊಚುಃ :—

ದೇವ್ಯಾ ಯಯಾ ಜಗದಿದಂ ತತಮಾತ್ಮಶಕ್ತ್ಯಾ
ನಿಶ್ಶೇಷದೇವಗಣಶಕ್ತಿಸಮೂಹಮೂರ್ತ್ಯಾ ।
ತಾಮಮ್ಬಿಕಾಮಖಿಲದೇವಮಹರ್ಷಿಪೂಜ್ಯಾಂ
ಭಕ್ತ್ಯಾ ನತಾಃ ಸ್ಮ ವಿದಧಾತು ಶುಭಾನಿ ಸಾ ನಃ ॥೩॥

ಯಸ್ಯಾಃ ಪ್ರಭಾವಮತುಲಂ ಭಗವಾನನನ್ತೋ
ಬ್ರಹ್ಮಾ ಹರಶ್ಚ ನ ಹಿ ವಕ್ತುಮಲಂ ಬಲಂ ಚ ।
ಸಾ ಚಣ್ಡಿಕಾಖಿಲಜಗತ್ಪರಿಪಾಲನಾಯ
ನಾಶಾಯ ಚಾಶುಭಭಯಸ್ಯ ಮತಿಂ ಕರೋತು ॥೪॥

ಯಾ ಶ್ರೀಃ ಸ್ವಯಂ ಸುಕೃತಿನಾಂ ಭವನೇಷ್ವಲಕ್ಷ್ಮೀಃ
ಪಾಪಾತ್ಮನಾಂ ಕೃತಧಿಯಾಂ ಹೃದಯೇಷು ಬುದ್ಧಿಃ ।

ದೇವತೆಗಳು ಹೀಗೆ ಸ್ತುತಿಸಿದರು :—

೩. ಸಮಸ್ತ ದೇವತೆಗಳ ಗುಂಪಿನ ಶಕ್ತಿಗಳ ಸಮೂಹದ ಸಮಷ್ಟಿ-ಮೂರ್ತಿಯಾದ ಯಾವ ದೇವಿಯಿಂದ ಆತ್ಮಶಕ್ತಿಯಿಂದ ಎಲ್ಲ ವಿಶ್ವವು ವ್ಯಾಪಿಸಲ್ಪಟ್ಟಿರುವುದೊ, ಸಕಲ ದೇವತೆ-ಮಹರ್ಷಿಗಳಿಂದ ಪೂಜ್ಯಳಾದ ಆ ಅಂಬಿಕೆಯನ್ನು ಭಕ್ತಿಯಿಂದ ನಮಸ್ಕಾರಮಾಡುವೆವು. ಆ ಅಂಬಿಕೆಯು ನಮಗೆ ಕಲ್ಯಾಣವನ್ನು ಕೊಡಲಿ.

೪. ಯಾವ ಚಂಡಿಕಾದೇವಿಯ ನಿರುಪಮವಾದ ಪ್ರಭಾವ-ವಿಕ್ರಮಗಳನ್ನು ಅಖಂಡೈಶ್ವರ್ಯಗಳಿಂದ ಕೂಡಿದ ಬ್ರಹ್ಮ-ವಿಷ್ಣು-ಶಂಕರರೆಂಬ ತ್ರಿಮೂರ್ತಿಗಳು ವರ್ಣಿಸಲು ಅಶಕ್ತರಾಗಿರುವರೊ ಅಂತಹ ಚಂಡಿಕೆಯು ಸಮಸ್ತ ಜಗತ್ತನ್ನು ಪಾಲಿಸುವುದಕ್ಕೂ ಮತ್ತು ಆಶುಭದ ಭಯವನ್ನು ನೀಗಿಸುವುದಕ್ಕೂ ಸಂಕಲ್ಪವನ್ನು ಮಾಡಲಿ.

೫. ದೇವಿಯೇ ! ನೀನು ಪುಣ್ಯವಂತರ ಮನೆಯಲ್ಲಿ ಲಕ್ಷ್ಮೀರೂಪಳಾಗಿದ್ದೀಯೆ. ಪಾಪಶೀಲರ ಮನೆಯಲ್ಲಿ ಅಲಕ್ಷ್ಮಿಯಾಗಿದ್ದೀಯೆ, ಪ್ರಜ್ಞಾವಂತರ ಹೃದಯಗಳಲ್ಲಿ ಬುದ್ಧಿರೂಪದಿಂದಿದ್ದೀಯೆ, ಸಾಧುಗಳಲ್ಲಿ ಶ್ರದ್ಧಾರೂಪಳಾ-

ಶ್ರದ್ಧಾ ಸತಾಂ ಕುಲಜನಪ್ರಭವಸ್ಯ ಲಜ್ಜಾ
ತಾಂ ತ್ವಾ ನತಾಃ ಸ್ಮ ಪರಿಪಾಲಯ ದೇವಿ ವಿಶ್ವಮ್ ॥೫॥

ಕಿಂ ವರ್ಣಯಾಮ ತವ ರೂಪಮಚಿನ್ತ್ಯಮೇತ-
ತ್ಕಿಞ್ಚಾತಿವೀರ್ಯಮಸುರಕ್ಷಯಕಾರಿ ಭೂರಿ ।
ಕಿಂ ಚಾಹವೇಷು ಚರಿತಾನಿ ತವಾದ್ಭುತಾನಿ
ಸರ್ವೇಷು ದೇವ್ಯಸುರದೇವಗಣಾದಿಕೇಷು ॥೬॥

ಹೇತುಃ ಸಮಸ್ತಜಗತಾಂ ತ್ರಿಗುಣಾಪಿ ದೇವ್ಯೈ-
ರ್ನ ಜ್ಞಾಯಸೇ ಹರಿಹರಾದಿಭಿರಪ್ಯಪಾರಾ ।
ಸರ್ವಾಶ್ರಯಾಖಿಲಮಿದಂ ಜಗದಂಶಭೂತ-
ಮವ್ಯಾಕೃತಾ ಹಿ ಪರಮಾ ಪ್ರಕೃತಿಸ್ತ್ವಮಾದ್ಯಾ ॥೭॥

ಗಿದ್ದೀಯೆ. ಮತ್ತು ಸತ್ಕುಲಪ್ರಸೂತರಾದವರಲ್ಲಿ ಲಜ್ಜಾರೂಪಳಾಗಿದ್ದೀಯೆ, ಅಂತಹ ನಿನ್ನನ್ನು ನಾವು ವಂದಿಸುವೆವು. ಕರುಣೆಯಿಂದ ವಿಶ್ವವನ್ನು ರಕ್ಷಿಸು.

೬. ಮಹಾದೇವಿಯೇ! ಅಸುರ-ದೇವ-ಶಕ್ತಿಗಣ ಮುಂತಾದ ಸಮಸ್ತ ವ್ಯಕ್ತಿಗಳಲ್ಲಿಯೂ ಅದ್ಭುತವನ್ನುಂಟುಮಾಡುವ ನಿನ್ನ ಚರಿತ್ರಗಳನ್ನೂ ಮತ್ತು ಮನಸ್ಸಿನಿಂದ ಚಿಂತಿಸಲಾಗದಿರುವ ಅತಿವೀರ್ಯದಿಂದ ಕೂಡಿದ, ಹಾಗು ಹೆಚ್ಚಾಗಿ ಅಸುರರನ್ನು ಸಂಹಾರಮಾಡಿದ ಯುದ್ಧರಂಗದಲ್ಲಿ ಕಾಣಿಸಿದ, ನಿನ್ನ ರೂಪವನ್ನೂ ನಾವು ಹೇಗೆ ವರ್ಣಿಸೋಣ.

೭. ದೇವಿಯೇ! ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಗುಣತ್ರಯದ ಉಪಾಧಿಯಿಂದ ಸ್ವೀಕರಿಸಿದ ಮೂರ್ತಿತ್ರಯದಿಂದ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡುವ ನೀನು ಜಗತ್ತಿಗೆ ಕಾರಣಳಾಗಿದ್ದೀಯೆ, ಅನಂತಳಾದ ನೀನು ಹರಿ-ಹರ-ಬ್ರಹ್ಮದೇವರಿಂದಲೂ ತಿಳಿಯಲಾಗದಂತೆ ಇರುತ್ತೀಯೆ, ನೀನು ಸರ್ವಕ್ಕೂ ಆಶ್ರಯಳಾಗಿದ್ದೀಯೆ. ಮತ್ತು ವಾಙ್ಮನಸಗಳಿಗೆ ಅಗೋಚರಳೂ ಅನಾದಿಯಾದ ಪರಮಪ್ರಕೃತಿಸ್ವರೂಪಳೂ ಮತ್ತು ಪರಬ್ರಹ್ಮಸ್ವರೂಪಿಣಿಯೂ ಆಗಿದ್ದೀಯೆ. ಈ ಸಕಲ ಪ್ರಪಂಚವು ನಿನ್ನ ಅಂಶವಾಗಿರುವುದು.

ಯಸ್ಯಾಃ ಸಮಸ್ತಸುರತಾಃ ಸಮುದೀರಣೇನ
ತೃಪ್ತಿಂ ಪ್ರಯಾನ್ತಿ ಸಕಲೇಷು ಮಖೇಷು ದೇವೀ ।
ಸ್ವಾಹಾಸಿ ವೈ ಪಿತೃಗಣಸ್ಯ ಚ ತೃಪ್ತಿಹೇತು-
ರುಚ್ಚಾರ್ಯಸೇ ತ್ವಮತ ಏವ ಜನೈಃ ಸ್ವಧಾ ಚ ॥೮॥

ಯಾ ಮುಕ್ತಿಹೇತುರವಿಚಿನ್ತ್ಯಮಹಾವ್ರತಾ ತ್ವ-
ಮಭ್ಯಸ್ಯಸೇ ಸುನಿಯತೇನ್ದ್ರಿಯತತ್ತ್ವಸಾರೈಃ ।
ಮೋಕ್ಷಾರ್ಥಿಭಿರ್ಮುನಿಭಿರಸ್ತಸಮಸ್ತದೋಷೈ-
ರ್ವಿದ್ಯಾಸಿ ಸಾ ಭಗವತೀ ಪರಮಾ ಹಿ ದೇವಿ ॥೯॥

ಶಬ್ದಾತ್ಮಿಕಾ ಸುವಿಮಲರ್ಗ್ಯಜುಷಾಂ ನಿಧಾನ-
ಮುದ್ಗೀಥರಮ್ಯಪದಪಾಠವತಾಂ ಚ ಸಾಮ್ನಾಮ್ ।

---

೮. ಸಮಸ್ತ ದೇವತೆಗಳು ಯಾವ ಸ್ವಾಹಾದೇವಿಯ ಶಬ್ದ ಕೀರ್ತನದಿಂದ ಸಕಲ ಯಜ್ಞಗಳಲ್ಲಿ ಹವಿಸ್ಸನ್ನು ಭುಂಜಿಸಿ ತೃಪ್ತಿಯನ್ನು ಹೊಂದುವರೋ ಅಂತಹ ಸ್ವಾಹಾದೇವಿಯು ನೀನೇ ಆಗಿದ್ದೀಯೆ. ಮತ್ತು ಜನರಿಂದ ಪಿತೃಗಳಿಗೆ ಶ್ರಾದ್ಧಾನ್ನವನ್ನು ಕೊಡುವ ಸಮಯದಲ್ಲಿ ಉಚ್ಚರಿಸಲ್ಪಡುವ ಸ್ವಧಾಶಬ್ದದಿಂದ ಬೋಧಿಸಲ್ಪಡುವ ಪಿತೃದೇವತಾಗಣಕ್ಕೆ ತೃಪ್ತಿಯನ್ನು ಕೊಡಲು ಕಾರಣಳಾದ ಸ್ವಧಾದೇವಿಯು ನೀನೇ ಆಗಿದ್ದೀಯೆ.

೯. ದೃಢವಾಗಿ ನಿಗ್ರಹಿಸಿದ ಇಂದ್ರಿಯವುಳ್ಳವರೂ, ಪರಮಾರ್ಥ-ತತ್ತ್ವದಲ್ಲಿ ಅತ್ಯಾದರವುಳ್ಳವರೂ, ತ್ಯಜಿಸಿದ ರಾಗ-ದ್ವೇಷ ಮುಂತಾದ ಸಕಲ ದೋಷವುಳ್ಳವರೂ ಮತ್ತು ಮೋಕ್ಷಾರ್ಥಿಗಳೂ ಆದ ಮುನಿಗಳು ಮುಕ್ತಿಗೆ ಕಾರಣವಾಗಿ ಚಿಂತಿಸಲು ಕ್ಲೇಶಕರವಾದ ಉಪವಾಸಾದಿವ್ರತಗಳುಳ್ಳ ಸರ್ವೋತ್ತಮ ಬ್ರಹ್ಮವಿದ್ಯೆಯನ್ನು ಅಭ್ಯಾಸಮಾಡುವರು. ಸಕಲ ಸಿದ್ಧಿಯನ್ನು ಕೊಡುವ ನೀನು ಬ್ರಹ್ಮವಿದ್ಯಾಸ್ವರೂಪಳಾಗಿದ್ದೀಯೆ.

೧೦. ದೇವಿಯೇ ! ಓಂಕಾರ, ರಮ್ಯವಾದ ಪದಪಾಠಗಳಿಂದ ಕೂಡಿರುವ ನಿರ್ಮಲವಾದ ಋಙ್ಮಂತ್ರ ಯಜುರ್ವೇದ ಮತ್ತು ಸಾಮಮಂತ್ರಗಳಿಗೆ ಶಬ್ದ-ಸ್ವರೂಪಳಾದ ನೀನು ನಿಧಿಯಾಗಿದ್ದೀಯೆ, ಸಮಸ್ತ ಜಗತ್ತಿನ ಪೀಡೆಯನ್ನು

ದೇವಿ ತ್ರಯೀ ಭಗವತೀ ಭವಭಾವನಾಯ
ವಾರ್ತಾಸಿ ಸರ್ವಜಗತಾಂ ಪರಮಾರ್ತಿಹನ್ತ್ರೀ ||೧೦||

ಮೇಧಾಸಿ ದೇವಿ ವಿದಿತಾಖಿಲಶಾಸ್ತ್ರಸಾರಾ
ದುರ್ಗಾಸಿ ದುರ್ಗಭವಸಾಗರನೌರಸಙ್ಗಾ ।
ಶ್ರೀಃ ಕೈಟಭಾರಿಹೃದಯೈಕಕೃತಾಧಿವಾಸಾ
ಗೌರೀ ತ್ವಮೇವ ಶಶಿಮೌಳಿಕೃತಪ್ರತಿಷ್ಠಾ ||೧೧||

ಈಷತ್ಸಹಾಸಮಮಲಂ ಪರಿಪೂರ್ಣಚನ್ದ್ರ
ಬಿಮ್ಬಾನುಕಾರಿ ಕನಕೋತ್ತಮಕಾನ್ತಿಕಾನ್ತಮ್ ।
ಅತ್ಯದ್ಭುತಂ ಪ್ರಹೃತಮಾತ್ತರುಷಾ ತಥಾಪಿ
ವಕ್ತ್ರಂ ವಿಲೋಕ್ಯ ಸಹಸಾ ಮಹಿಷಾಸುರೇಣ ||೧೨||

ಪರಿಹರಿಸುವುದೂ, ಜಗತ್ತಿನ ಯೋಗಕ್ಷೇಮಗಳಿಗೆ ಸಾಧನವಾದ ವಾರ್ತಾ (ಕೃಷಿ-ವಾಣಿಜ್ಯ) ವಿದ್ಯೆಯನ್ನು ಬೋಧಿಸುವುದೂ ಆದ ಪೂಜ್ಯವಾದ ವೇದ-ವಿದ್ಯೆಯು ನೀನೇ ಆಗಿದ್ದೀಯೆ.

೧೧. ಮಹಾದೇವಿಯೇ! ತಿಳಿಯಲ್ಪಟ್ಟಿರುವ ಸಮಸ್ತ ಶಾಸ್ತ್ರಾರ್ಥ-ತತ್ತ್ವಗಳ ಸಾರವುಳ್ಳವಳಾದ ಮೇಧಾದೇವಿಯು ನೀನೇ ಆಗಿದ್ದೀಯೆ. ದುರ್ಗವಾದ ಸಂಸಾರ ಸಮುದ್ರವನ್ನು ದಾಟಿಸುವ ನಿರಪಾಯವಾದ ನೌಕೆಯಂತಿರುವ ದುರ್ಗಾದೇವಿಯು ನೀನೇ ಆಗಿದ್ದೀಯೆ. ಕೈಟಭಾಸುರನನ್ನು ವಧಿಸಿದ ಮಹಾ-ವಿಷ್ಣುವಿನ ಹೃದಯದಲ್ಲಿ ವಾಸಮಾಡಿರುವ ಮಹಾಲಕ್ಷ್ಮಿಯು ನೀನೇ ಆಗಿದ್ದೀಯೆ. ಮತ್ತು ಚಂದ್ರಶೇಖರನಲ್ಲಿ ನೆಲೆಸಿದ ಗೌರಿಯು ನೀನೇ ಆಗಿದ್ದೀಯೆ.

೧೨. ದೇವಿಯೇ! ಮಂದಹಾಸದಿಂದ ಕೂಡಿರುವುದೂ, ನಿರ್ಮಲವೂ, ಸಂಪೂರ್ಣಕಲೆಗಳಿಂದ ತುಂಬಿರಾಜಿಸುವ ಪೂರ್ಣಚಂದ್ರನ ಬಿಂಬವನ್ನು ಅನು-ಕರಿಸುವುದೂ, ಚಿನ್ನದಂತೆ ಉತ್ತಮ ಕಾಂತಿಯುಳ್ಳದ್ದೂ ಆದ ನಿನ್ನ ಮುಖವು ಸುಂದರವಾಗಿರುವುದು. ಆದರೆ ಇಂತಹ ಮುಖವನ್ನು ನೋಡಿ ಅನಿರೀಕ್ಷಿತವಾಗಿ ಕೋಪಗೊಂಡ ಮಹಿಷಾಸುರನಿಂದ ಪ್ರಹರಿಸಲ್ಪಟ್ಟಿತು. ಜಗನ್ಮೋಹನವಾದ ಮುಖವನ್ನು ನೋಡಿ ಅಸುರನಿಗೆ ಕೋಪವುಂಟಾದುದು ಅದ್ಭುತವು.

ದೃಷ್ಟ್ವಾ ತು ದೇವಿ ಕುಪಿತಂ ಭ್ರುಕುಟೀಕರಾಲ-
ಮುದ್ಯಚ್ಛಶಾಙ್ಕಸದೃಶಚ್ಛವಿ ಯನ್ನ ಸದ್ಯಃ ।
ಪ್ರಾಣಾನ್ಮುಮೋಚ ಮಹಿಷಸ್ತದತೀವ ಚಿತ್ರಂ
ಕೈರ್ಜೀವ್ಯತೇ ಹಿ ಕುಪಿತಾನ್ತಕದರ್ಶನೇನ ॥೧೩॥

ದೇವಿ ಪ್ರಸೀದ ಪರಮಾ ಭವತೀ ಭವಾಯ
ಸದ್ಯೋ ವಿನಾಶಯತಿ ಕೋಪವತೀ ಕುಲಾನಿ ।
ವಿಜ್ಞಾತಮೇತದಧುನೈವ ಯದಸ್ತಮೇತ-
ನ್ನೀತಂ ಬಲಂ ಸುವಿಪುಲಂ ಮಹಿಷಾಸುರಸ್ಯ ॥೧೪॥

ತೇ ಸಮ್ಮತಾ ಜನಪದೇಷು ಧನಾನಿ ತೇಷಾಂ
ತೇಷಾಂ ಯಶಾಂಸಿ ನ ಚ ಸೀದತಿ ಬನ್ಧುವರ್ಗಃ ।

---

೧೩. ಮಹಾದೇವಿಯೆ! ಆಗ ಕೋಪಗೊಂಡಿರುವುದೂ, ಗಂಟಿಕ್ಕಿದ ಹುಬ್ಬುಗಳ ವಕ್ರತೆಯಿಂದ ಭಯಂಕರವೂ ಮತ್ತು ಉದಯಿಸುತ್ತಿದ್ದ ಚಂದ್ರ-ಮಂಡಲದಂತೆ ಕೆಂಪುಕಾಂತಿಯುಳ್ಳದ್ದೂ ಆದ ನಿನ್ನ ಮುಖವನ್ನು ನೋಡಿ ಮಹಿಷಾಸುರನು ಪ್ರಾಣವನ್ನು ತ್ಯಜಿಸದಿರುವುದು ತುಂಬ ಆಶ್ಚರ್ಯವು. ಕೋಪ-ಗೊಂಡ ಅಂತಕನನ್ನು ನೋಡಿ ಬದುಕುವವರು ಯಾರಿರುವರು ?

೧೪. ಜಗನ್ಮಾತೆಯೆ! ಪ್ರಸನ್ನಳಾಗು. ನೀನು ಭಕ್ತರಿಗೆ ಐಶ್ವರ್ಯವನ್ನು ಕೊಡುವ ಮಹಾಲಕ್ಷ್ಮಿಯಾಗಿದ್ದೀಯೆ. ಹಾಗು ಕೋಪವುಳ್ಳವಳಾದರೆ ದುಷ್ಟ-ಜನರ ವಂಶವನ್ನು ನಾಶಮಾಡುತ್ತೀಯೆ! ಈ ನಿನ್ನ ಕೋಪವಫಲವು ಈಗಲೆ ಪ್ರತ್ಯಕ್ಷವಾಗಿ ಕಂಡಿರುವುದು. ಮಹಿಷಾಸುರನ ಅಪಾರವಾದ ಸೈನ್ಯವು ನಿನ್ನಿಂದ ಕ್ಷಯಗೊಳಿಸಲ್ಪಟ್ಟಿರುವುದು.

೧೫. ದೇವಿಯೆ! ನೀನು ಯಾರವಿಷಯದಲ್ಲಿ ಪ್ರಸನ್ನಳಾಗಿ ಅಭ್ಯುದಯ-ವನ್ನು ಕೊಡಲು ಬದ್ಧಕಂಕಣಳಾಗಿರುವೆಯೋ ಅವರು ನಾನಾವಿಧವಾದ ಶ್ರೇಯಸ್ಸಿಗೆ ಭಾಗಿಗಳಾಗುವರು. ಅಂತಹವರು ದೇಶದ ಮೆಚ್ಚಿಗೆಗೆ ಪಾತ್ರರಾಗು-

ಧನ್ಯಾಸ್ತ ಏವ ನಿಭೃತಾತ್ಮಜಭೃತ್ಯದಾರಾ
ಯೇಷಾಂ ಸದಾಭ್ಯುದಯಾ ಭವತೀ ಪ್ರಸನ್ನಾ ||೧೫||

ಧರ್ಮ್ಯಾಣಿ ದೇವಿ ಸಕಲಾನಿ ಸದೈವ ಕರ್ಮಾಣ್ಯ-
ತ್ಯಾದೃತಃ ಪ್ರತಿದಿನಂ ಸುಕೃತೀ ಕರೋತಿ ।
ಸ್ವರ್ಗಂ ಪ್ರಯಾತಿ ಚ ತತೋ ಭವತೀಪ್ರಸಾದಾ-
ಲ್ಲೋಕತ್ರಯೇಽಪಿ ಫಲದಾ ನನು ದೇವಿ ತೇನ ||೧೬||

ದುರ್ಗೇ ಸ್ಮೃತಾ ಹರಸಿ ಭೀತಿಮಶೇಷಜನ್ತೋಃ
ಸ್ವಸ್ಥೈಃ ಸ್ಮೃತಾಮತಿಮತೀವ ಶುಭಾಂ ದದಾಸಿ ।
ದಾರಿದ್ರ್ಯದುಃಖಭಯಹಾರಿಣಿ ಕಾ ತ್ವದನ್ಯಾ
ಸರ್ವೋಪಕಾರಕರಣಾಯ ಸದಾರ್ದ್ರಚಿತ್ತಾ ||೧೭||

ವರು. ಅವರು ಧನವಂತರಾಗುವರು. ಅವರು ಕೀರ್ತಿಶಾಲಿಗಳಾಗುವರು. ಅವರ ಬಂಧುವರ್ಗವು ಕಷ್ಟಕ್ಕೆ ಗುರಿಯಾಗುವುದಿಲ್ಲ ಮತ್ತು ಧನ್ಯರಾದ ಮಹಾತ್ಮರು ವಿನಯವಂತರಾದ ಪತ್ನಿ-ಪುತ್ರ-ಭೃತ್ಯ ಮುಂತಾದ ಪರಿವಾರವುಳ್ಳವರಾಗುವರು.

೧೬. ದೇವಿಯೆ! ನಿನ್ನ ಅನುಗ್ರಹಕ್ಕೆ ಪಾತ್ರನಾದ ಪುಣ್ಯವಂತನು ಧಾರ್ಮಿಕವಾದ ಸಕಲ ಕರ್ಮಗಳನ್ನು ಅಧಿಕವಾದ ಶ್ರದ್ಧಾ-ಆದರಗಳಿಂದ ಕೂಡಿದನಾಗಿ ಪ್ರತಿದಿನವೂ, ನಿರಂತರವಾಗಿ ಮಾಡುತ್ತಿರುವನು ಮತ್ತು ಅದರ ಪರಿಣಾಮವಾಗಿ ಸ್ವರ್ಗ ಸದ್ಗತಿಯನ್ನು ಅನುಭವಿಸುವನು. ಆದುದರಿಂದ ಮೂರು-ಲೋಕಗಳಲ್ಲಿ ನಾನಾವಿಧವಾದ ಇಷ್ಟಫಲಗಳನ್ನು ಕೊಡುವವಳು ನೀನೇ ಆಗಿದ್ದೀಯೆ. ನೀನು ಸತ್ಕರ್ಮಗಳನ್ನು ಮಾಡಿಸಿ ಫಲವನ್ನು ನೀಡುತ್ತೀಯೆ.

೧೭. ದುರ್ಗಾದೇವಿಯೇ! ಕಷ್ಟಸಮಯದಲ್ಲಿ ಸ್ಮರಿಸಲ್ಪಟ್ಟವಳಾಗಿ ಸಮಸ್ತ ಜಂತುವಿಗೆ ಉಂಟಾದ ಭೀತಿಯನ್ನು ನಿವಾರಣಮಾಡುತ್ತೀಯೆ. ಶಾಂತಿ-ಸಮಯದಲ್ಲಿ ಸ್ಮರಿಸಲ್ಪಟ್ಟವಳಾಗಿ ಅತ್ಯಂತ ಶ್ರೇಯಸ್ಕರವಾದ ವಿವೇಕವನ್ನು ಕೊಡುತ್ತೀಯೆ. ದಾರಿದ್ರ್ಯದುಃಖ-ಭಯಗಳನ್ನು ಪರಿಹರಿಸುವ ದೇವಿಯೇ! ಸಮಸ್ತ ಉಪಕಾರಗಳನ್ನು ಮಾಡಲು ಯಾವಾಗಲೂ ದಯಾರ್ದ್ರವಾದ ಹೃದಯ-ವುಳ್ಳವಳು ನಿನ್ನನ್ನು ಬಿಟ್ಟು ಮತ್ತಾರು ಇರುವರು?

ಏಭಿರ್ಹತೈರ್ಜಗದುಪೈತಿ ಸುಖಂ ತಥೈತೇ
ಕುರ್ವನ್ತು ನಾಮ ನರಕಾಯ ಚಿರಾಯ ಪಾಪಮ್ ।
ಸಙ್ಗ್ರಾಮಮೃತ್ಯುಮಧಿಗಮ್ಯ ದಿವಂ ಪ್ರಯಾನ್ತು
ಮತ್ವೇತಿ ನೂನಮಹಿತಾನ್ವಿನಿಹಂಸಿ ದೇವಿ ॥೧೮॥

ದೃಷ್ಟ್ವೈವ ಕಿಂ ನ ಭವತೀ ಪ್ರಕರೋತಿ ಭಸ್ಮ
ಸರ್ವಾಸುರಾನರಿಷು ಯತ್ಪ್ರಹಿಣೋಷಿ ಶಸ್ತ್ರಮ್ ।
ಲೋಕಾನ್ಪ್ರಯಾನ್ತು ರಿಪವೋಽಪಿ ಹಿ ಶಸ್ತ್ರಪೂತಾ
ಇತ್ಥಂ ಮತಿರ್ಭವತಿ ತೇಷ್ವಹಿತೇಷು ಸಾಧ್ವೀ ॥೧೯॥

ಖಡ್ಗಪ್ರಭಾನಿಕರವಿಸ್ಫುರಣೈಸ್ತಥೋಗ್ರೈಃ
ಶೂಲಾಗ್ರಕಾನ್ತಿನಿವಹೇನ ದೃಶೋಽಸುರಾಣಾಮ್ ।

---

೧೮. ದೇವಿಯೇ ! ಲೋಕಕಂಟಕರಾದ ಅಸುರರು ಹತರಾದುದರಿಂದ ಜಗತ್ತು ಸುಖಮಯವಾಗಿರುವುದು. ಈ ಮಹಿಷಾಸುರನು ಮುಂತಾದವರು ನರಕವನ್ನು ಕೊಡುವ ಪಾಪಕರ್ಮವನ್ನು ದೀರ್ಘಕಾಲ ಮಾಡಿರಲಿ. ಆದರೆ ಅಂತಹ ದುಷ್ಟರು ಸಂಗ್ರಾಮದಲ್ಲಿ ಮರಣವನ್ನು ಹೊಂದಿ ಸ್ವರ್ಗಸುಖವನ್ನು ಹೊಂದಲಿ ಎಂದು ಭಾವಿಸಿ ನೀನು ನಿಷ್ಕರುಣೆಯಂತೆ ವರ್ತಿಸಿ ಶತ್ರುಗಳನ್ನು ಸಂಹಾರಮಾಡುತ್ತೀಯೆ. ಇದು ನಿನ್ನ ಶತ್ರುಜನರಲ್ಲಿ ನೀನು ಮಾಡುವ ಉಪಕಾರವು.

೧೯. ದೇವಿಯೆ! ನಿನ್ನ ಚಂಡದೃಷ್ಟಿಯಿಂದಲೆ ಸಮಸ್ತ ಶತ್ರುಗಳನ್ನು ಏಕೆ ಭಸ್ಮಮಾಡುವುದಿಲ್ಲ ? ಸಮಸ್ತ ಅಸುರರಲ್ಲಿ ಶಸ್ತ್ರಗಳನ್ನು ಏಕೆ ಪ್ರಯೋಗಿಸು-ತ್ತೀಯೆ? " ಶತ್ರುಗಳು ಕೂಡ ಶಸ್ತ್ರಪೀಡೆಯಿಂದ ಪಾವನರಾಗಿ ಪುಣ್ಯಲೋಕಕ್ಕೆ ಸೇರಲಿ " ಎಂಬ ಸತ್ಸಂಕಲ್ಪವನ್ನು ಆ ಶತ್ರುಗಳಲ್ಲಿ ಇಟ್ಟು ಪ್ರೀತಿಯಿಂದ ಅವರನ್ನು ಉದ್ಧಾರಮಾಡುತ್ತೀಯೆ.

೨೦. ದೇವಿಯೆ ! ನಿನ್ನ ಖಡ್ಗದಿಂದ ಹೊರಸೂಸುವ ಪ್ರಭಾ ಸಮೂಹದ ಪ್ರಸಾರಗಳಿಂದಲೂ ಹಾಗು ಉಗ್ರವಾದ ಶೂಲದ ಅಗ್ರಭಾಗದ ತೀಕ್ಷ್ಣಕಾಂತಿ ಪ್ರವಾಹದಿಂದಲೂ ದುಷ್ಟದೈತ್ಯರ ದೃಷ್ಟಿಗಳು ನಾಶಹೊಂದದೆ ಇರುವುವು.

ಯನ್ನಾಗತಾ ವಿಲಯಮಂಶುಮದಿನ್ದುಖಣ್ಡ-
ಯೋಗ್ಯಾನನಂ ತವ ವಿಲೋಕಯತಾಂ ತದೇತತ್ ||೨೦||

ದುರ್ವೃತ್ತವೃತ್ತಶಮನಂ ತವ ದೇವಿ ಶೀಲಂ
ರೂಪಂ ತಥೈತದವಿಚಿನ್ತ್ಯಮತುಲ್ಯಮನ್ಯೈಃ ।
ವೀರ್ಯಂ ಚ ಹನ್ತೃ ಹೃತದೇವಪರಾಕ್ರಮಾಣಾಂ
ವೈರಿಷ್ವಪಿ ಪ್ರಕಟಿತೈವ ದಯಾ ತ್ವಯೇತ್ಥಮ್ ||೨೧||

ಕೇನೋಪಮಾ ಭವತು ತೇಽಸ್ಯ ಪರಾಕ್ರಮಸ್ಯ
ರೂಪಂ ಚ ಶತ್ರುಭಯಕಾರ್ಯತಿಹಾರಿ ಕುತ್ರ ।
ಚಿತ್ತೇ ಕೃಪಾ ಸಮರನಿಷ್ಠುರತಾ ಚ ದೃಷ್ಟಾ
ತ್ವಯ್ಯೇವ ದೇವಿ ವರದೇ ಭುವನತ್ರಯೇಽಪಿ ||೨೨||

ಚಂದ್ರಕಲೆಯಿಂದ ಕೂಡಿ ಅಮೃತಕಿರಣಗಳ ಸ್ಪರ್ಶವಿರುವ ನಿನ್ನ ಮುಖವನ್ನು ನೋಡುತ್ತಿರುವುದೇ ಹಾಗೆ ಅಸುರರ ದೃಷ್ಟಿ ಭಂಗವಾಗದಿರಲು ಕಾರಣವಾಗಿದೆ.

೨೧. ದೇವಿಯೆ ! ನಿನ್ನ ಶೀಲವು ದುರ್ಮಾರ್ಗದಲ್ಲಿ ನಡೆಯುವ ಮದಾಂಧರನ್ನು ಶಮನಮಾಡುವುದಾಗಿದೆ. ನಿನ್ನ ರೂಪವು ಮನಸ್ಸಿನಿಂದಲೂ ಯೋಚಿಸಲಾಗದ ಹಾಗೆ ಸರ್ವೋತ್ತಮವೂ ನಿರುಪಮವೂ ಆಗಿದೆ. ಮತ್ತು ವೀರ್ಯವು ದೇವತೆಗಳನ್ನು ಗೆದ್ದಿರುವ ಪರಾಕ್ರಮಶಾಲಿಗಳಾದ ರಾಕ್ಷಸರನ್ನು ನಿಗ್ರಹಿಸುವುದು. ಇಂತಹ ಗುಣಪೂರ್ಣಳಾದ ನೀನು ವೈರಿಗಳಲ್ಲಿ ಕೂಡ ದಯೆಯನ್ನು ಪ್ರಕಾಶಪಡಿಸಿದ್ದೀಯೆ.

೨೨. ಭಕ್ತರಿಗೆ ವರವನ್ನು ಅನುಗ್ರಹಿಸುವ ದೇವಿಯೆ ! ನಿನ್ನ ಅದ್ಭುತ ಪರಾಕ್ರಮಕ್ಕೆ ಉಪಮಾನವೆಲ್ಲಿರುವುದು ? ಶತ್ರುಗಳಿಗೆ ಭಯವನ್ನುಂಟು-ಮಾಡುವುದೂ ಸಾಧುಗಳಿಗೆ ಮನೋಹರವೂ ಆದ ನಿನ್ನ ರೂಪದಂತಹ ರೂಪವು ಬೇರೊಂದು ಎಡೆಯಲ್ಲಿ ಎಲ್ಲಿರುವುದು ? ಮನಸ್ಸಿನಲ್ಲಿ ನಿಷ್ಠುರತೆ ಮತ್ತು ದಯಾರ್ದ್ರತೆಗಳು ಮೂರು ಲೋಕಗಳಲ್ಲಿ ನಿನ್ನೊಬ್ಬಳಲ್ಲಿಯೆ ಕಂಡುಬರುವುವು.

ತ್ರೈಲೋಕ್ಯಮೇತದಖಿಲಂ ರಿಪುನಾಶನೇನ
ತ್ರಾತಂ ತ್ವಯಾ ಸಮರಮೂರ್ಧನಿ ತೇಽಪಿ ಹತ್ವಾ ।
ನೀತಾ ದಿವಂ ರಿಪುಗಣಾ ಭಯಮಪ್ಯಪಾಸ್ತ-
ಮಸ್ಮಾಕಮುನ್ಮದಸುರಾರಿಭವಂ ನಮಸ್ತೇ ॥೨೩॥

ಶೂಲೇನ ಪಾಹಿ ನೋ ದೇವಿ ಪಾಹಿ ಖಡ್ಗೇನ ಚಾಮ್ಬಿಕೇ ।
ಘಣ್ಟಾಸ್ವನೇನ ನಃ ಪಾಹಿ ಚಾಪಜ್ಯಾನಿಃಸ್ವನೇನ ಚ ॥೨೪॥

ಪ್ರಾಚ್ಯಾಂ ರಕ್ಷ ಪ್ರತೀಚ್ಯಾಂ ಚ ಚಣ್ಡಿಕೇ ರಕ್ಷ ದಕ್ಷಿಣೇ ।
ಭ್ರಾಮಣೇನಾತ್ಮಶೂಲಸ್ಯ ಉತ್ತರಸ್ಯಾಂ ತಥೇಶ್ವರಿ ॥೨೫॥

ಸೌಮ್ಯಾನಿ ಯಾನಿ ರೂಪಾಣಿ ತ್ರೈಲೋಕ್ಯೇ ವಿಚರನ್ತಿ ತೇ ।
ಯಾನಿ ಚಾತ್ಯನ್ತಘೋರಾಣಿ ತೈ ರಕ್ಷಾಸ್ಮಾಂಸ್ತಥಾ ಭುವಮ್ ॥೨೬॥

---

೨೩. ದೇವಿಯೇ! ನಿನ್ನಿಂದ ಶತ್ರುಗಳನ್ನು ಸಂಹಾರ ಮಾಡಿ ಈ ಸಮಸ್ತ ತ್ರೈಲೋಕ್ಯವು ಸಂರಕ್ಷಿಸಲ್ಪಟ್ಟಿತು. ಅಂತಹ ಶತ್ರುಗಳ ಗುಂಪುಗಳು ರಣರಂಗದಲ್ಲಿ ಶಸ್ತ್ರಪಾತದಿಂದ ಪಾವನಗೊಳಿಸಲ್ಪಟ್ಟವುಗಳಾಗಿ ಸ್ವರ್ಗಕ್ಕೆ ಕಳುಹಿಸಲ್ಪಟ್ಟವು. ಮದಾಂಧರಾದ ರಾಕ್ಷಸರನ್ನು ಕೊಂದು ನಮಗೆ ಆ ಭಯವು ನಿವಾರಿಸಲ್ಪಟ್ಟಿತು. ಹೀಗೆ ಸಮಸ್ತ ಜಂತುಗಳಿಗೆ ಉಪಕಾರಮಾಡಿದ ನಿನ್ನನ್ನು ವಂದಿಸುವೆವು.

೨೪. ಮಹಾದೇವಿಯೆ! ನಮ್ಮನ್ನು ಯಾವಾಗಲೂ ನಿನ್ನ ಶೂಲಾಯುಧದಿಂದ ನಮ್ಮ ಅರಿಗಳನ್ನು ನಾಶಮಾಡಿ ರಕ್ಷಿಸು. ಜಗನ್ಮಾತೆಯೆ! ಖಡ್ಗಾಯುಧದಿಂದ ನಮ್ಮನ್ನು ಪಾಲಿಸು. ದೇವಿಯೆ! ಘಂಟಾಧ್ವನಿಯಿಂದ ನಮ್ಮನ್ನು ಸಲಹು. ಹಾಗು ಬಿಲ್ಲಿನ ಹೆದೆಯಿಂದ ನಮ್ಮನ್ನು ಸಂರಕ್ಷಿಸು.

೨೫. ಸರ್ವೇಶ್ವರಿಯಾದ ದೇವಿಯೇ! ಚಂಡಿಕಾಂಬಿಕೆಯೆ! ನಿನ್ನ ಶೂಲವನ್ನು ಸುತ್ತಲೂ ಬೀಸುತ್ತ ನಮ್ಮನ್ನು ಪೂರ್ವ-ಪಶ್ಚಿಮ ದಿಕ್ಕುಗಳಲ್ಲಿ ರಕ್ಷಣೆಮಾಡು, ಹಾಗು ದಕ್ಷಿಣ-ಉತ್ತರ ದಿಕ್ಕುಗಳಲ್ಲಿ ಭಯವನ್ನು ನಿವಾರಣಮಾಡು.

೨೬. ದೇವಿಯೆ! ನಿನ್ನ ಕೆಲವು ಸೌಮ್ಯರೂಪಗಳು ತ್ರಿಲೋಕಗಳಲ್ಲಿ ಸಂಚರಿಸುತ್ತಿವೆ. ಮತ್ತೆ ಕೆಲವು ಅತ್ಯಂತ ಘೋರವಾದ ರೂಪಗಳು ಎಲ್ಲೆಡೆಗಳಲ್ಲಿಯೂ ಸಂಚಾರಮಾಡುತ್ತಿವೆ. ಆ ರೂಪಗಳಿಂದ ನೀನು ನಮ್ಮನ್ನೂ ಅಖಂಡ ಭೂಮಿಯನ್ನೂ ರಕ್ಷಿಸು.

ಖಡ್ಗಶೂಲಗದಾದೀನಿ ಯಾನಿ ಚಾಸ್ತ್ರಾಣಿ ತೇಽಮ್ಬಿಕೇ ।
ಕರಪಲ್ಲವಸಙ್ಗೀನಿ ತೈರಸ್ಮಾನ್ರಕ್ಷ ಸರ್ವತಃ ॥೨೭॥

ಋಷಿರುವಾಚ :—

ಏವಂ ಸ್ತುತಾ ಸುರೈರ್ದಿವ್ಯೈಃ ಕುಸುಮೈರ್ನನ್ದನೋದ್ಭವೈಃ ।
ಅರ್ಚಿತಾ ಜಗತಾಂ ಧಾತ್ರೀ ತಥಾ ಗನ್ಧಾನುಲೇಪನೈಃ ॥೨೮॥

ಭಕ್ತ್ಯಾ ಸಮಸ್ತೈಸ್ತ್ರಿದಶೈರ್ದಿವ್ಯಧೂಪೈಃ ಸುಧೂಪಿತಾ ।
ಪ್ರಾಹ ಪ್ರಸಾದಸುಮುಖೀ ಸಮಸ್ತಾನ್ಪ್ರಣತಾನ್ ಸುರಾನ್ ॥೨೯॥

---

೨೭. ಚಂಡಿಕಾಂಬಿಕೆಯೇ ! ಖಡ್ಗ-ಶೂಲ-ಗದೆ ಮುಂತಾದ ಯಾವ ಬಗೆಬಗೆಯ ಆಯುಧಗಳು ಚಿಗುರಿನಂತೆ ಸುಂದರವಾದ ನಿನ್ನ ಕೈಗಳಲ್ಲಿ ಶೋಭಿಸುತ್ತಿವೆಯೊ ಆ ಸಮಸ್ತ ಆಯುಧಗಳಿಂದ ನಮ್ಮನ್ನು ಎಲ್ಲೆಡೆಗಳಲ್ಲಿಯೂ ರಕ್ಷಣಮಾಡು.

ಸುಮೇಧ ಋಷಿಯು ಹೇಳಿದನು :—

೨೮. ಜಗತ್ತಿನ ರಕ್ಷಣೆಗೆ ಅವತರಿಸಿದ ದೇವಿಯು ಸಮಸ್ತ ದೇವತೆಗಳಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟಳು. ನಂದನವನದಲ್ಲಿರುವ ದಿವ್ಯ ಕುಸುಮಗಳನ್ನು ತಂದು ಅರ್ಚಿಸಲ್ಪಟ್ಟಳು. ಮತ್ತು ಸುಗಂಧದ ಅನುಲೇಪನದಿಂದ ಪೂಜಿಸಲ್ಪಟ್ಟಳು.

೨೯. ಮತ್ತು ದೇವಿಯು ಸಮಸ್ತ ದೇವತೆಗಳಿಂದ ಭಕ್ತಿಪೂರ್ವಕವಾಗಿ ಉತ್ತಮವಾದ ಧೂಪೋಪಚಾರವನ್ನು ಅರ್ಪಿಸಿ ಪೂಜಿಸಲ್ಪಟ್ಟಳು. ತರುವಾಯ ನಮಸ್ಕರಿಸಿದ ದೇವತೆಗಳನ್ನು ಕುರಿತು ಅನುಗ್ರಹಮಾಡುವ ಮುಖಭಾವವನ್ನು ತೋರಿಸುತ್ತ ಮಾತನಾಡಿದಳು.

ಶ್ರೀದೇವ್ಯುವಾಚ :—

ವ್ರಿಯತಾಂ ತ್ರಿದಶಾಃ ಸರ್ವೇ ಯದಸ್ಮತ್ತೋಽಭಿವಾಂಛಿತಮ್ ।
ದದಾಮ್ಯಹಮಿತಿ ಪ್ರೀತ್ಯಾ ಸ್ತವೈರೇಭಿಃ ಸುಪೂಜಿತಾ ॥೩೦॥

ಕರ್ತವ್ಯಮಪರಂ ಯಚ್ಚ ದುಷ್ಕರಂ ತನ್ನ ವಿದ್ಮಹೇ ।
ಇತ್ಯಾಕರ್ಣ್ಯ ವಚೋ ದೇವ್ಯಾಃ ಪ್ರತ್ಯೂಚುಸ್ತೇ ದಿವೌಕಸಃ ॥೩೧॥

ದೇವಾ ಊಚುಃ :—

ಭಗವತ್ಯಾ ಕೃತಂ ಸರ್ವಂ ನ ಕಿಂಚಿದವಶಿಷ್ಯತೇ ।
ಯದಯಂ ನಿಹತಃ ಶತ್ರುರಸ್ಮಾಕಂ ಮಹಿಷಾಸುರಃ ॥೩೨॥

ದೇವಿಯು ಹೀಗೆಂದಳು :—

೩೦. ದೇವತೆಗಳೆ! ನೀವು ನನ್ನಿಂದ ಹೊಂದಬೇಕೆಂದಿರುವ ಇಷ್ಟ-ಫಲವೇನಿದೆಯೊ ಅದನ್ನು ಕೇಳಿಕೊಳ್ಳಿರಿ. ಹೀಗೆ ಬಹು ಪ್ರೀತಿಪೂರ್ವಕವಾಗಿ ಸ್ತುತಿಪಾಠ-ಪುಷ್ಪೋಪಹಾರಾದಿಗಳಿಂದ ಪೂಜಿಸಲ್ಪಟ್ಟಿರುವ ನಾನು ನಿಮ್ಮಲ್ಲಿ ಪ್ರೀತಿಯಿಂದ ವರವನ್ನು ಕೊಡುವವಳಾಗಿದ್ದೇನೆ.

೩೧. ಈಗ ಜರುಗಿದ ದುಷ್ಟರಾಕ್ಷಸ ಮರ್ದನವನ್ನು ಬಿಟ್ಟು ನಿಮಗೆ ಅಸಾಧ್ಯವಾದ ಕರ್ತವ್ಯವು ಇನ್ನೇನಿದೆಯೋ ಅದು ನನಗೆ ತಿಳಿಯದು. ಹೀಗೆಂಬ ದೇವಿಯ ವಚನವನ್ನು ಕೇಳಿದ ದೇವತೆಗಳೆಲ್ಲರೂ ಪ್ರತ್ಯುತ್ತರವನ್ನು ನಿವೇದಿಸಿದರು.

ದೇವತೆಗಳಿಂತೆಂದರು :—

೩೨. ಅಖಂಡೈಶ್ವರ್ಯಸಂಪನ್ನಳಾದ ನೀನು ನಮ್ಮ ಸಕಲ ಇಷ್ಟವನ್ನು ಸಾಧಿಸಿ ಅನುಗ್ರಹಿಸಿದ್ದೀಯೆ. ಇನ್ನಾವುದೂ ಉಳಿದಿಲ್ಲ. ನಮಗೆ ಶತ್ರುವಾಗಿ ದೇವಲೋಕದಿಂದ ನಮ್ಮನ್ನು ಭ್ರಂಶಗೊಳಿಸಿದ ಮಹಿಷಾಸುರನನ್ನು ವಧಿಸ-ಬೇಕೆಂಬುದೇ ನಮ್ಮ ಇಷ್ಟವಾಗಿದ್ದಿತು. ಅಸುರನು ಹತನಾದನು.

ಯದಿ ಚಾಪಿ ವರೋ ದೇಯಸ್ತ್ವಯಾಸ್ಮಾಕಂ ಮಹೇಶ್ವರಿ ।
ಸಂಸ್ಮೃತಾ ಸಂಸ್ಮೃತಾ ತ್ವಂ ನೋ ಹಿಂಸೇಥಾಃ ಪರಮಾಪದಃ ॥೩೩॥

ಯಶ್ಚ ಮರ್ತ್ಯಃ ಸ್ತವೈರೇಭಿಸ್ತ್ವಾಂ ಸ್ತೋಷ್ಯತ್ಯಮಲಾನನೇ ।
ತಸ್ಯ ವಿತ್ತರ್ಧಿವಿಭವೈರ್ಧನದಾರಾದಿಸಮ್ಪದಾಮ್ ॥೩೪॥

ವೃದ್ಧಯೇಽಸ್ಮತ್ಪ್ರಸನ್ನಾ ತ್ವಂ ಭವೇಥಾಃ ಸರ್ವದಾಮ್ಬಿಕೇ ॥೩೫॥

ಋಷಿರುವಾಚ :—

ಇತಿ ಪ್ರಸಾದಿತಾ ದೇವೈರ್ಜಗತೋಽರ್ಥೇ ತಥಾತ್ಮನಃ ।
ತಥೇತ್ಯುಕ್ತ್ವಾ ಭದ್ರಕಾಲೀ ಬಭೂವಾನ್ತರ್ಹಿತಾ ನೃಪ ॥೩೬॥

---

೩೩. ಮಹೇಶ್ವರಿಯೆ! ಆದರೂ ಇನ್ನು ಕೇಳಿಕೊಳ್ಳುವೆವು. ಪ್ರಸನ್ನಳಾದ ನೀನು ನಮಗೆ ವರವನ್ನು ಕೊಡುವೆಯಾದರೆ ಪರಿಹರಿಸಿಕೊಳ್ಳಲಾಗದ ಕಷ್ಟದಶೆಯು ನಮಗೆ ಉಂಟಾಗಿ ನಾವು ನಿನ್ನನ್ನು ಸ್ಮರಿಸಿಕೊಂಡಾಗ ಯಾವಾಗಲೂ ನೀನು ಬಂದು ನಮ್ಮ ಕಷ್ಟಗಳನ್ನು ಪರಿಹರಿಸಬೇಕು.

೩೪. ನಿರ್ಮಲವಾಗಿ ಶೋಭಿಸುವ ಮುಖವುಳ್ಳ ದೇವಿಯೆ! ಯಾವ ಮಾನವನು ಈ ಪವಿತ್ರವಾದ ಸ್ತುತಿವಚನಗಳಿಂದ ನಿನ್ನನ್ನು ಸ್ತೋತ್ರಮಾಡುವನೋ ಅವನಿಗೆ ಐಶ್ವರ್ಯ ಸಮೃದ್ಧಿಯನ್ನು ಮತ್ತು ಪತ್ನಿ-ಪುತ್ರ-ಗೃಹ-ಕ್ಷೇತ್ರ ಮುಂತಾದ ವಿಭವವನ್ನು ಅನುಗ್ರಹಿಸು.

೩೫. ಜಗದಂಬಿಕೆಯೆ! ಮತ್ತು ನಮ್ಮಲ್ಲಿ ಅನುಗ್ರಹ ತೋರಿಸಿರುವ ನೀನು ನಮ್ಮ ವಿಜ್ಞಾಪನೆಯಂತೆ ಈ ಸ್ತೋತ್ರದಿಂದ ನಿನ್ನನ್ನು ಭಜಿಸಿದ ಮಾನವನಿಗೆ ಯಾವಾಗಲೂ ಸರ್ವವಿಧವಾದ ಐಶ್ವರ್ಯಸಮೃದ್ಧಿಗೆ ಕಾರಣಳಾಗು.

ಸುಮೇಧ ಮುನಿಯು ಹೇಳಿದನು :—

೩೬. ಎಲೈ, ಸುರಥರಾಜನೇ! ದೇವತೆಗಳಿಂದ ಜಗತ್ತಿನ ಕಲ್ಯಾಣ ಮತ್ತು ತಮ್ಮ ಹಿತಕ್ಕೋಸ್ಕರ ಈ ರೀತಿಯಾಗಿ ಪ್ರಾರ್ಥಿಸಲ್ಪಟ್ಟು ಪ್ರಸನ್ನಳಾದ ಭದ್ರಕಾಳೀದೇವಿಯು "ಹಾಗೆ ಆಗಲಿ" ಎಂದು ಹೇಳಿ ವರವನ್ನು ಕೊಟ್ಟು ಅದೃಶ್ಯಳಾದಳು.

ಇತ್ಯೇತತ್ಕಥಿತಂ ಭೂಪ ಸಮ್ಭೂತಾ ಸಾ ಯಥಾ ಪುರಾ ।
ದೇವೀ ದೇವಶರೀರೇಭ್ಯೋ ಜಗತ್ತ್ರಯಹಿತೈಷಿಣೀ ॥೩೭॥

ಪುನಶ್ಚ ಗೌರೀದೇಹಾತ್ಸಾ ಸಮುದ್ಭೂತಾ ಯಥಾಭವತ್ ।
ವಧಾಯ ದುಷ್ಟದೈತ್ಯಾನಾಂ ತಥಾ ಶುಮ್ಭನಿಶುಮ್ಭಯೋಃ ॥೩೮॥

ರಕ್ಷಣಾಯ ಚ ಲೋಕಾನಾಂ ದೇವಾನಾಮುಪಕಾರಿಣೀ ।
ತಚ್ಛೃಣುಷ್ವ ಮಯಾಖ್ಯಾತಂ ಯಥಾವತ್ಕಥಯಾಮಿ ತೇ ॥೩೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ಏಕಾಶೀತಿತಮೋಽಧ್ಯಾಯಃ

---

೩೭. ಸುರಥರಾಜನೇ! ಮಹಾಮಾಯಾರೂಪಿಣಿಯಾದ ದೇವಿಯು ಪೂರ್ವಕಲ್ಪದಲ್ಲಿ ಮೂರು ಜಗತ್ತಿನ ಹಿತವನ್ನು ಉಂಟುಮಾಡುವ ಸಂಕಲ್ಪವುಳ್ಳವಳಾಗಿ ದೇವಶರೀರಗಳ ತೇಜಸ್ಸುಗಳಿಂದ ಹೇಗೆ ಸಂಭವಿಸಿದಳೆಂಬುದು ನನ್ನಿಂದ ನಿನಗೆ ಹೇಳಲ್ಪಟ್ಟಿತು.

೩೮. ಮತ್ತೆ ಮಹಾದೇವಿಯು ಅನೇಕ ಮಂದಿ ದುಷ್ಟದೈತ್ಯರನ್ನು ಮತ್ತು ಶುಂಭ-ನಿಶುಂಭ ಎಂಬ ಪ್ರಧಾನ ರಾಕ್ಷಸರನ್ನು ವಧಿಸಲು ಗೌರಿಯ ದೇಹದಿಂದ ಹೇಗೆ ಆವಿರ್ಭವಿಸಿದಳೊ ಆ ಚರಿತ್ರೆಯನ್ನು ಹೇಳುವೆನು.

೩೯. ಮತ್ತು ಮಹಾದೇವಿಯು ಲೋಕಗಳನ್ನು ರಕ್ಷಿಸುವುದಕ್ಕೂ, ದೇವತೆಗಳಿಗೆ ಮತ್ತೆ ಉಪಕಾರಮಾಡುವುದಕ್ಕೂ ಗೌರಿಯ ದೇಹದಿಂದ ಆವಿರ್ಭಾವವನ್ನು ಹೊಂದಿರುವಳು. ಅದನ್ನು ಹಿಂದೆ ನಡೆದಂತೆ ನಿನಗೆ ಹೇಳುವೆನು. ನಾನು ಹೇಳುವ ಆ ಚರಿತ್ರೆಯನ್ನು ನೀನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತೊಂದನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವ್ಯಶೀತಿತಮೋಽಧ್ಯಾಯಃ

(ದೇವೀ ಶುಮ್ಭ-ನಿಶುಮ್ಭದೂತಯೋಃ ಸಂವಾದಃ)

ಋಷಿರುವಾಚ :—

ಪುರಾ ಶುಮ್ಭನಿಶುಮ್ಭಾಭ್ಯಾಮಸುರಾಭ್ಯಾಂ ಶಚೀಪತೇಃ ।
ತ್ರೈಲೋಕ್ಯಂ ಯಜ್ಞಭಾಗಾಶ್ಚ ಹೃತಾ ಮದಬಲಾಶ್ರಯಾತ್ ॥೧॥

ತಾವೇವ ಸೂರ್ಯತಾಂ ತದ್ವದಧಿಕಾರಂ ತಥೈನ್ದವಮ್ ।
ಕೌಬೇರಮಥ ಯಾಮ್ಯಂ ಚ ಚಕ್ರಾತೇ ವರುಣಸ್ಯ ಚ ॥೨॥

ಎಂಭತ್ತೆರಡನೆಯ ಅಧ್ಯಾಯ

ಸುಮೇಧ ಋಷಿಯು ಹೇಳಿದನು :—

೧. ಹಿಂದೆ ಒಂದು ಕಲ್ಪದಲ್ಲಿ ಶುಂಭ-ನಿಶುಂಭ ಎಂಬ ನಾಮಾಂಕಿತರಾದ ಇಬ್ಬರು ಅಸುರರಿಂದ ಅಹಂಕಾರ ಸೈನ್ಯಬಲಗಳ ಆಶ್ರಯದಿಂದ ದೇವೇಂದ್ರನ ತ್ರೈಲೋಕಾಧಿಕಾರ ಮತ್ತು ದೇವತೆಗಳ ಹವಿರ್ಭಾಗಗಳು ಅಪಹರಿಸಲ್ಪಟ್ಟುವು.

೨. ಇದರ ಪರಿಣಾಮವಾಗಿ ಶುಂಭ-ನಿಶುಂಭ ಅಸುರರು ಸೂರ್ಯ-ಚಂದ್ರರ ಅಧಿಕಾರವನ್ನು ವಹಿಸಿಕೊಂಡರು. ಹಾಗು ಕುಬೇರ-ಯಮ-ವರುಣ ಎಂಬೀ ಲೋಕಪಾಲಕರ ಪದವಿಗಳನ್ನು ಆಕ್ರಮಿಸಿದರು.

ತಾವೇವ ಪವನರ್ಧಿಂ ಚ ಚಕ್ರತುರ್ವಹ್ನಿಕರ್ಮ ಚ ||೩||

ಅನ್ಯೇಷಾಂ ಚಾಧಿಕಾರಾನ್ಸ ಸ್ವಯಮೇವಾಧಿತಿಷ್ಠತಿ |
ತತೋ ದೇವಾ ವಿನಿರ್ಧೂತಾ ಭ್ರಷ್ಟರಾಜ್ಯಾಃ ಪರಾಜಿತಾಃ ||೪||

ಹೃತಾಧಿಕಾರಾಸ್ತ್ರಿವಶಾಸ್ತಾಭ್ಯಾಂ ಸರ್ವೇ ನಿರಾಕೃತಾಃ |
ಮಹಾಸುರಾಭ್ಯಾಂ ತಾಂ ದೇವೀಂ ಸಂಸ್ಮರನ್ತ್ಯಪರಾಜಿತಾಮ್ ||೫||

ತಯಾಸ್ಮಾಕಂ ವರೋ ದತ್ತೋ ಯಥಾಪತ್ಸು ಸ್ಮೃತಾಖಿಲಾಃ |
ಭವತಾಂ ನಾಶಯಿಷ್ಯಾಮಿ ತತ್ಕ್ಷಣಾತ್ ಪರಮಾಪದಃ ||೬||

---

೩. ಹಾಗೆಯೇ ಶುಂಭ–ನಿಶುಂಭಾಸುರರು ವಾಯುದೇವತೆಯ ಅಧಿಕಾರ ವೈಭವವನ್ನೂ ಅಗ್ನಿದೇವನು ಅನುಭವಿಸುತ್ತಿದ್ದ ಅಧಿಕಾರಗೌರವವನ್ನೂ ಬಲಾತ್ಕಾರವಾಗಿ ಕಿತ್ತುಕೊಂಡರು.

೪. ಹೀಗೆ ಶುಂಭಾಸುರನು ಇತರ ದೇವತೆಗಳ ಅಧಿಕಾರಗಳನ್ನು ತಾನು ಆಕ್ರಮಿಸಿ ನಡೆಯಿಸಿದನು. ತರುವಾಯ ದೇವತೆಗಳು ಅಸುರರಿಂದ ಧಿಕ್ಕರಿಸಲ್ಪಟ್ಟವರೂ ರಾಜ್ಯಭ್ರಷ್ಟರೂ ಮತ್ತು ಅಸುರರಿಂದ ಪರಾಜಯಹೊಂದಿದವರೂ ಆದರು.

೫. ಆಗ ಹಾಗೆ ಮದಿಸಿದ ಶುಂಭ-ನಿಶುಂಭ ಮಹಾಸುರರಿಂದ ಅಪಹರಿಸಲ್ಪಟ್ಟ ಅಧಿಕಾರವುಳ್ಳವರೂ ಮತ್ತು ದೂರ ಓಡಿಸಲ್ಪಟ್ಟವರೂ ಆದ ದೇವತೆಗಳು ಎಲ್ಲರೂ ಸೇರಿ ಎಲ್ಲಿಲ್ಲೂ ಪರಾಜಯಹೊಂದದಂತೆ ಜಯಪ್ರಾಪ್ತಿಗೆನಿಮಿತ್ತಳಾದ ದೇವಿಯನ್ನು ಸ್ಮರಿಸಿದರು.

೬. "ಆಪತ್ತಿಗೆ ಗುರಿಯಾಗಿರುವಾಗ ನೀವು ನನ್ನನ್ನು ಸ್ಮರಿಸಿರಿ. ಆ ಕ್ಷಣದಲ್ಲಿ ನಾನು ನಿಮ್ಮ ಮಹಾಸಂಕಟಗಳನ್ನು ನಾಶಮಾಡಿ ನಿಮ್ಮನ್ನು ತಮ್ಮ ತಮ್ಮ ಪದದಲ್ಲಿ ಸುಖವಾಗಿರಿಸುವೆನು" ಹೀಗೆಂದು ದೇವಿಯಿಂದ ನಮಗೆ ವರವು ನೀಡಲ್ಪಟ್ಟದೆ.

ಇತಿ ಕೃತ್ವಾ ಮತಿಂ ದೇವಾ ಹಿಮವನ್ತಂ ನಗೇಶ್ವರಮ್ ।
ಜಗ್ಮುಸ್ತತ್ರ ತತೋ ದೇವೀಂ ವಿಷ್ಣುಮಾಯಾಂ ಪ್ರತುಷ್ಟುವುಃ ॥೭॥

ದೇವಾ ಊಚುಃ :—

ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ ।
ನಮಃ ಪ್ರಕೃತ್ಯೈ ಭದ್ರಾಯೈ ನಿಯತಾಃ ಪ್ರಣತಾಃ ಸ್ಮ ತಾಮ್ ॥೮॥

ರೌದ್ರಾಯೈ ನಮೋ ನಿತ್ಯಾಯೈ ಗೌರ್ಯೈ ಧಾತ್ರ್ಯೈ ನಮೋ ನಮಃ ।
ನಮೋ ಜಗತ್ಪ್ರತಿಷ್ಠಾಯೈ ದೇವ್ಯೈ ಕೃತ್ಯೈ ನಮೋ ನಮಃ ॥೯॥

ಜ್ಯೋತ್ಸ್ನಾಯೈ ಚನ್ದ್ರರೂಪಿಣ್ಯೈ ಸುಖಾಯೈ ಸತತಂ ನಮಃ ।
ಕಲ್ಯಾಣ್ಯೈ ಪ್ರಣತಾವೃದ್ಧ್ಯೈ ಸಿದ್ಧ್ಯೈ ಕೂರ್ಮ್ಯೈ ನಮೋ ನಮಃ ॥೧೦॥

---

೭. ಹೀಗೆಂದು ದೇವಿಯ ವಚನವನ್ನು ನೆನೆಸಿಕೊಂಡಿರುವ ದೇವತೆಗಳು ಪರ್ವತರಾಜನಾದ ಹಿಮಾಲಯಗಿರಿಗೆ ಹೋದರು. ಮತ್ತು ಅಲ್ಲಿ ಶರಣಾಗತ-ವತ್ಸಲೆಯಾದ ವಿಷ್ಣುಮಾಯಾಸ್ವರೂಪಳಾದ ದೇವಿಯನ್ನು ಸ್ತುತಿಮಾಡಿದರು.

ದೇವತೆಗಳು ಇಂತು ಸ್ತುತಿಸಿದರು :—

೮. ಪ್ರಕಾಶಸ್ವರೂಪಳೂ, ಮಹಾದೇವನ ಪತ್ನಿಯೂ ಮತ್ತು ಮಂಗಳವನ್ನು ಕೊಡುವವಳೂ ಆದ ದೇವಿಗೆ ನಿರಂತರವಾಗಿ ವಂದಿಸುವೆವು. ಮತ್ತು ಜಗತ್ತಿಗೆ ಮೂಲಕಾರಣಳೂ ಮಂಗಳಾಂಗಿಯೂ ಆದ ಮಹಾದೇವಿಯನ್ನು ಜಿತೇಂದ್ರಿಯರಾದ ನಾವು ನಮಸ್ಕರಿಸುವೆವು.

೯. ರೌದ್ರಾಕಾರವುಳ್ಳವಳೂ, ತ್ರಿಕಾಲಾತೀತಳೂ, ಪಾರ್ವತೀ-ಸ್ವರೂಪಳೂ ಮತ್ತು ಭೂಮಿದೇವತಾರೂಪಳೂ ಆದ ನಿನ್ನನ್ನು ಮತ್ತೆ ಮತ್ತೆ ವಂದಿಸುವೆವು. ಜಗತ್ತಿಗೆ ಉತ್ತಮ ಆಧಾರಸ್ವರೂಪಳೂ, ಜಂತುವಿನ ಕೃತಿ-ಸ್ವರೂಪಳೂ ಆದ ದೇವಿಗೆ ಅನೇಕ ವಂದನೆಗಳು.

೧೦. ಬೆಳದಿಂಗಳಿನ ರೂಪಳೂ, ಚಂದ್ರನ ಸ್ವರೂಪಳೂ ಮತ್ತು ಸಮಸ್ತ ಲೋಕಕ್ಕೆ ಸುಖಪ್ರದಳೂ ಆದ ದೇವಿಯನ್ನು ಸಂತತವಾಗಿ ವಂದಿಸುವೆವು. ಹಾಗು ಮಂಗಳವನ್ನು ಕೊಡುವವಳೂ, ತನ್ನನ್ನು ಭಜಿಸುವ ಮಾನವರಿಗೆ ಸಮೃದ್ಧಿ, ಕಾರ್ಯಸಿದ್ಧಿಯನ್ನು ಅನುಗ್ರಹಿಸುವವಳೂ ಮತ್ತು ಕೂರ್ಮದೇವತಾ-ಶಕ್ತಿಸ್ವರೂಪಳೂ ಆದ ದೇವಿಗೆ ವಂದನೆಗಳು.

ನೈರ್ಋತ್ಯೈ ಭೂಭೃತಾಂ ಲಕ್ಷ್ಮ್ಯೈ ಶರ್ವಾಣ್ಯೈ ತೇ ನಮೋ ನಮಃ ||೧೧||

ದುರ್ಗಾಯೈ ದುರ್ಗಪಾರಾಯೈ ಸಾರಾಯೈ ಸರ್ವಕಾರಿಣಿ |
ಖ್ಯಾತ್ಯೈ ತಥೈವ ಕೃಷ್ಣಾಯೈ ಧೂಮ್ರಾಯೈ ಸತತಂ ನಮಃ ||೧೨||

ಅತಿಸೌಮ್ಯಾತಿರೌದ್ರಾಯೈ ನಮಸ್ತಸ್ಯೈ ನಮೋ ನಮಃ |
ನಮೋ ಜಗತ್ಪ್ರತಿಷ್ಠಾಯೈ ದೇವ್ಯೈ ಕೃತ್ಯೈ ನಮೋ ನಮಃ ||೧೩||

ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ |
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||೧೪||

---

೧೧. ಅನೀತಿಯಿಂದ ಆರ್ಜಿಸುವ ಅಲಕ್ಷ್ಮೀಸ್ವರೂಪಳೂ, ರಾಜಾಧಿರಾಜರಲ್ಲಿರುವ ಅಖಂಡ ಐಶ್ವರ್ಯಸ್ವರೂಪಳೂ ಮತ್ತು ಜಗತ್ತನ್ನು ಆನಂದಪಡಿಸುವ ಸರ್ವೇಶ್ವರನ ಪತ್ನಿಯೂ ಆದ ನಿನ್ನನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇವೆ.

೧೨. ಸರ್ವವಸ್ತುಗಳಿಗೆ ಕಾರಣಳಾದ ಮಹಾಮಾಯಾದೇವಿಯೆ! ತಿಳಿಯಲು ಅಶಕ್ಯಸ್ವರೂಪಳೂ, ದುರ್ಗಮವಾದ ಪಾರವುಳ್ಳ ಅನಾದಿಮಾಯಾಸ್ವರೂಪಳೂ ಮತ್ತು ಸರ್ವೋತ್ತಮಳೂ ಆದ ನಿನಗೆ ಅನೇಕ ನಮಸ್ಕಾರಗಳು. ಖ್ಯಾತಿಸ್ವರೂಪಳೂ, ಕೃಷ್ಣವರ್ಣವುಳ್ಳ ಕಾಲರಾತ್ರಿಯೂ ಮತ್ತು ಧೂಮ್ರವರ್ಣಶೋಭಿತಳೂ ಆದ ನಿನಗೆ ನಮಸ್ಕಾರವು.

೧೩. ಎಲ್ಲ ಸೌಮ್ಯವಸ್ತುಗಳನ್ನು ಮೀರಿಸಿದ ಸೌಮ್ಯಸ್ವರೂಪ, ರೌದ್ರವಸ್ತುಗಳನ್ನು ಮೀರಿಸಿದ ರೌದ್ರಸ್ವರೂಪಗಳುಳ್ಳವಳಾದ ದೇವಿಯನ್ನು ಅತಿಶಯವಾಗಿ ನಮಸ್ಕರಿಸುವೆವು. ಜಗತ್ತಿನ ಪ್ರತಿಷ್ಠಾಸ್ವರೂಪಳೂ, ಸೃಷ್ಟಿ-ಸ್ಥಿತಿ-ಸಂಹಾರಗಳಿಗೆ ಅನುಕೂಲವಾದ ಯತ್ನಸ್ವರೂಪಳೂ ಆದ ಮಹಾದೇವಿಯನ್ನು ಪುನಃ ಪುನಃ ನಮಸ್ಕರಿಸುತ್ತೇವೆ.

೧೪. ಕಾಲತ್ರಯದ ವ್ಯಾಪ್ತಿಯಿಂದ ಆವರಿಸಲ್ಪಟ್ಟ ಸಮಸ್ತ ಭೂತಗಳಲ್ಲಿ ಅವಿದ್ಯೆಯನ್ನು ವಿಸ್ತರಿಸುವವಳಾದ, ವಿಷ್ಣುಮಾಯೆಯೆಂದು ಕರೆಯಲ್ಪಡುವ ಮಹಾದೇವಿಯನ್ನು ಕಾಯ-ವಾಕ್-ಮಾನಸಗಳೆಂಬ ತ್ರಿಕರಣಪೂರ್ವಕವಾಗಿ ಮತ್ತೆ ಮತ್ತೆ ಭಕ್ತಿಯಿಂದ ವಂದಿಸುವೆವು.

ಯಾ ದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೧೫॥

ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೧೬॥

ಯಾ ದೇವೀ ಸರ್ವಭೂತೇಷು ನಿದ್ರಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೧೭॥

ಯಾ ದೇವೀ ಸರ್ವಭೂತೇಷು ಕ್ಷುಧಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೧೮॥

---

೧೫. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ವ್ಯವಹಾರಕ್ಕೆ ಮೂಲವಾಗಿರುವ ಚೇತನಶಕ್ತಿಯೆಂದು ಅಥವಾ ಜ್ಞಾನಶಕ್ತಿಯೆಂದು ಕರೆಯಲ್ಪಡುವಳೋ ಅಂತಹ ದೇವಿಯನ್ನು ಮತ್ತೆ ಮತ್ತೆ ತ್ರಿಕರಣಗಳಿಂದ ನಮಸ್ಕರಿಸುತ್ತೇವೆ.

೧೬. ಎಲ್ಲ ಪ್ರಾಣಿಗಳಲ್ಲಿಯೂ ಯಾವ ದೇವಿಯು ಧರ್ಮಾನುಷ್ಠಾನಕ್ಕೆ ನಿಮಿತ್ತವಾದ ನಿಶ್ಚಯರೂಪವಾದ ಬುದ್ಧಿಯೆನಿಸಿರುವಳೋ ಅಂತಹ ದೇವಿಯನ್ನು ಮತ್ತೆ ಮತ್ತೆ ನಾವು ತ್ರಿಕರಣಗಳಿಂದ ವಂದಿಸುವೆವು.

೧೭. ಯಾವ ದೇವಿಯು ಸಮಸ್ತ ಭೂತಗಳಲ್ಲಿ ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಅವಸ್ಥಾತ್ರಯಗಳಲ್ಲಿ ಸ್ವಪ್ನ-ಸುಷುಪ್ತಿಗಳಿಗೆ ಕಾರಣವಾಗಿ ವಿಶ್ರಾಂತಿಯನ್ನು ಕೊಡುವ ನಿದ್ರೆಯ ರೂಪದಿಂದ ಇರುವಳೊ ಆ ದೇವಿಯನ್ನು ಮತ್ತೆ ಮತ್ತೆ ನಮಸ್ಕರಿಸುವೆವು.

೧೮. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ಶೋಕ-ಮೋಹ, ಜರಾ-ಮೃತ್ಯು, ಕ್ಷುತ್-ಪಿಪಾಸೆಯೆಂದು ಕರೆಯಲ್ಪಡುವ ಆರು ಊರ್ಮಿಗಳಲ್ಲಿ ಒಂದಾದ ಕ್ಷುಧೆಯೆಂಬ ರೂಪದಿಂದ ಇರುವಳೋ ಆ ದೇವಿಯನ್ನು ಮತ್ತೆ ಮತ್ತೆ ನಮಸ್ಕರಿಸುವೆವು.

ಯಾ ದೇವೀ ಸರ್ವಭೂತೇಷು ಛಾಯಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೧೯॥

ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೦॥

ಯಾ ದೇವೀ ಸರ್ವಭೂತೇಷು ತೃಷ್ಣಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೧॥

ಯಾ ದೇವೀ ಸರ್ವಭೂತೇಷು ಕ್ಷಾನ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೨॥

---

೧೯. ಯಾವ ದೇವಿಯು ಸಕಲ ಪ್ರಾಣಿವರ್ಗದಲ್ಲಿ ಪ್ರತಿಬಿಂಬ ರೂಪದಿಂದ ಜೀವವೆಂದು ಕರೆಯಲ್ಪಡುತ್ತ ಸಮಸ್ತ ಪುರುಷಾರ್ಥ ಸಾಧಕವಾದ ವ್ಯವಹಾರವನ್ನು ನಡೆಸುತ್ತ ಇರುವಳೊ ಅಂತಹ ದೇವಿಯನ್ನು ಪದೇ ಪದೇ ವಂದಿಸುವೆವು.

೨೦. ಯಾವ ದೇವಿಯು ಸಕಲ ಪ್ರಾಣಿಗಳಲ್ಲಿ ಆಯಾಯ ಭೂತ-ವ್ಯಕ್ತಿಯಲ್ಲಿರುವ ಅಸಾಧಾರಣವಾದ ಕ್ರಿಯಾನಿರ್ವಾಹಮಾಡುವ ಶಕ್ತಿರೂಪದಿಂದ ಇರುವಳೋ ಆ ದೇವಿಯನ್ನು ತ್ರಿಕರಣಪೂರ್ವಕವಾಗಿ ಮತ್ತೆ ಮತ್ತೆ ವಂದಿಸುತ್ತೇವೆ.

೨೧. ಯಾವ ದೇವಿಯು ಸಮಸ್ತ ಪ್ರಾಣಿವರ್ಗದಲ್ಲಿ ಸಂಸಾರಬಂಧದಲ್ಲಿ ಬಂಧಿಸಲು ನಿಮಿತ್ತವಾದ, ಅರಿಷಡ್ವರ್ಗಗಳಲ್ಲಿ ಒಂದಾದ ತೃಷ್ಣಾರೂಪದಿಂದ ಇರುವಳೋ ಅಂತಹ ದೇವಿಯನ್ನು ಅನನ್ಯಗತಿಯಿಂದ ಮತ್ತೆ ಮತ್ತೆ ವಂದಿಸುವೆವು.

೨೨. ಯಾವ ದೇವಿಯು ಸರ್ವಭೂತಗಳಲ್ಲಿ ಎಂತಹ ಪ್ರಸಂಗದಲ್ಲಿಯೂ ರೌದ್ರಆಕಾರದ ವಿಕಾರವನ್ನು ಹೊಂದದಿರುವ ಕ್ಷಮಾ ಎಂಬ ಉತ್ತಮ ಗುಣ-ರೂಪದಿಂದಿರುವಳೊ ಆ ದೇವಿಯನ್ನು ಕಾಯ-ವಾಕ್-ಮಾನಸಗಳಿಂದ ಸಂತತವಾಗಿ ವಂದಿಸುವೆವು.

ಯಾ ದೇವೀ ಸರ್ವಭೂತೇಷು ಜಾತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೩॥

ಯಾ ದೇವೀ ಸರ್ವಭೂತೇಷು ಲಜ್ಜಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೪॥

ಯಾ ದೇವೀ ಸರ್ವಭೂತೇಷು ಶಾನ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೫॥

ಯಾ ದೇವೀ ಸರ್ವಭೂತೇಷು ಶ್ರದ್ಧಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೬॥

---

೨೩. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ಒಂದೊಂದು ವರ್ಗದಲ್ಲಿ ಪ್ರತ್ಯೇಕವಾಗಿ ನಿತ್ಯವೂ ಅನೇಕ ವ್ಯಕ್ತಿಗಳಲ್ಲಿರುವುದೂ ಮತ್ತು ಒಂದು ಧರ್ಮರೂಪವೂ ಆದ ಜಾತಿರೂಪದಿಂದ ಇರುವಳೋ ಅಂತಹ ದೇವಿಯನ್ನು ಮತ್ತೆ ಮತ್ತೆ ವಂದಿಸುವೆವು.

೨೪. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ನಾರಿಯರಿಗೆ ಭೂಷಣವೆಂದೂ ಮತ್ತು ಸಾಧುಗುಣಗಳಲ್ಲಿ ಒಂದು ಗಣ್ಯಗುಣವೆಂದೂ ವರ್ಣಿಸಲ್ಪಡುವ ಲಜ್ಜಾರೂಪದಿಂದ ಇರುವಳೋ ಅಂತಹ ದೇವಿಯನ್ನು ತ್ರಿಕರಣಪೂರ್ವಕವಾಗಿ ನಮಸ್ಕರಿಸುವೆವು.

೨೫. ಯಾವ ದೇವಿಯು ಸಮಸ್ತ ಭೂತಗಳಲ್ಲಿ ಕಾಮ-ಕ್ರೋಧ ಮುಂತಾದ ಬಗೆಬಗೆಯ ಭಾವಗಳು ಅಡಗಿ ಮಾನಸಕ್ಕೆ ಆನಂದವನ್ನು ಉಂಟುಮಾಡುವ ಶಾಂತಿರೂಪದಿಂದ ಇರುವಳೊ ಅಂತಹ ದೇವಿಯನ್ನು ಪುನಃ ಪುನಃ ನಮಸ್ಕರಿಸುವೆವು.

೨೬. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ದೈವ-ಪುರುಷಾರ್ಥ-ಸ್ವರ್ಗ-ನರಕ ಅವುಗಳ ಸಾಧನಗಳಲ್ಲಿ ಆಸ್ತಿಕತೆಯೆಂಬ ಶ್ರದ್ಧೆಯ ರೂಪದಿಂದ ಇರುವಳೊ ಆ ದೇವಿಯನ್ನು ಅನನ್ಯಭಕ್ತಿಯಿಂದ ಯಾವಾಗಲೂ ನಮಸ್ಕರಿಸುತ್ತೇವೆ.

ಯಾ ದೇವೀ ಸರ್ವಭೂತೇಷು ಕಾನ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೭॥

ಯಾ ದೇವೀ ಸರ್ವಭೂತೇಷು ಲಕ್ಷ್ಮೀರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೮॥

ಯಾ ದೇವೀ ಸರ್ವಭೂತೇಷು ಧೃತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೨೯॥

ಯಾ ದೇವೀ ಸರ್ವಭೂತೇಷು ವೃತ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೦॥

---

೨೭. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ಒಂದಕ್ಕಿಂತ ಮತ್ತೊಂದು ವ್ಯಕ್ತಿಯಲ್ಲಿ ತಾರತಮ್ಯದಿಂದ ಇರುವ ಮನರಂಜಕವಾದ ಕಾಂತಿ-ರೂಪದಿಂದ ಇರುವಳೋ ಅಂತಹ ದೇವಿಯನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇವೆ.

೨೮. ಯಾವ ದೇವಿಯು ಸರ್ವ ಪ್ರಾಣಿಗಳಲ್ಲಿ ಸಾಮ್ರಾಜ್ಯ-ಐಶ್ವರ್ಯ-ಜಯ-ಮುಕ್ತಿ ಮುಂತಾದ ಪರಿವಾರದಿಂದ ಕೂಡಿದ ಬಗೆ ಬಗೆಯ ಲಕ್ಷ್ಮೀರೂಪ-ದಿಂದ ಇರುವಳೋ ಅಂತಹ ದೇವಿಯನ್ನು ನಾವು ಮತ್ತೆ ಮತ್ತೆ ವಂದಿಸುವೆವು.

೨೯. ಯಾವ ದೇವಿಯು ಸರ್ವಪ್ರಾಣಿಗಳಲ್ಲಿ ಧೈರ್ಯ-ಸಂತೋಷ ಅಥವಾ ಸುಖರೂಪವಾಗಿ ತೋರುವ ಧೃತಿಯ ರೂಪದಿಂದ ಪ್ರಕಾಶಿಸುತ್ತ ಇರುವಳೋ ಅಂತಹ ದೇವಿಯನ್ನು ನಾವು ಶುದ್ಧವಾದ ತ್ರಿಕರಣಗಳಿಂದ ಮತ್ತೆ ಮತ್ತೆ ವಂದಿಸುತ್ತೇವೆ.

೩೦. ಯಾವ ದೇವಿಯು ಸಮಸ್ತಪ್ರಾಣಿಗಳಲ್ಲಿ ಆಯಾಯ ಪ್ರಾಣಿಯ ಪ್ರಾಣಧಾರಣದ ಉಪಾಯವಾದ ಕೃಷಿ-ವಾಣಿಜ್ಯ ಅಥವಾ ಮತ್ತಾವುದಾದ-ರೊಂದು ಜೀವನೋಪಾಯದ ರೂಪದಿಂದ ಇರುವಳೋ ಅಂತಹ ದೇವಿಯನ್ನು ಮತ್ತೆ ಮತ್ತೆ ವಂದಿಸುತ್ತೇವೆ.

ಯಾ ದೇವೀ ಸರ್ವಭೂತೇಷು ಸ್ಮೃತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೧॥

ಯಾ ದೇವೀ ಸರ್ವಭೂತೇಷು ದಯಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೨॥

ಯಾ ದೇವೀ ಸರ್ವಭೂತೇಷು ನೀತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೩॥

ಯಾ ದೇವೀ ಸರ್ವಭೂತೇಷು ತುಷ್ಟಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೪॥

---

೩೧. ಯಾವ ದೇವಿಯು ಸಮಸ್ತ ಪ್ರಾಣಿವರ್ಗದಲ್ಲಿ ಹಿಂದೆ ಎಂದಾದರೂ ಅನುಭವಿಸಿರುವ ವಿಷಯದಲ್ಲಿ ಆಯಾಯ ಸಂಸ್ಕಾರಗಳಿಂದ ಮತ್ತೊಮ್ಮೆ ಜನಿಸುವ ಸ್ಮರಣರೂಪದಿಂದ ಇರುವಳೋ ಅಂತಹ ದೇವಿಯನ್ನು ತ್ರಿಕರಣಗಳಿಂದ ನಮಸ್ಕರಿಸುತ್ತೇವೆ.

೩೨. ಯಾವ ದೇವಿಯು ಸರ್ವಭೂತಗಳಲ್ಲಿ ಪರರ ದುಃಖವನ್ನು ನೋಡಿ ಮನಸ್ಸು ಕರಗಿ ಹೇಗಾದರೂ ಅದನ್ನು ನೀಗಿಸಬೇಕೆಂದು ಉದಯಿಸುವ ದಯಾರೂಪದಿಂದ ಇರುವಳೋ ಅಂತಹ ದೇವಿಯನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇವೆ.

೩೩. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ಲೋಕವ್ಯವಹಾರವನ್ನು ನಡೆಸುವ ನಿಯಮವನ್ನು ಪಾಲಿಸುವ ರಾಜನೀತಿ ಮುಂತಾದ ನೀತಿಯ ರೂಪದಿಂದ ಇರುವಳೋ ಅಂತಹ ದೇವಿಯನ್ನು ನಾವು ಏಕಾಗ್ರಚಿತ್ತರಾಗಿ ಮತ್ತೆ ಮತ್ತೆ ವಂದಿಸುತ್ತೇವೆ.

೩೪. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ತಮ್ಮ ಮನಸ್ಸಿಗೆ ಇಷ್ಟವಾದ ವಿಷಯಸುಖದ ಉಪಭೋಗದಿಂದ ಉಂಟಾಗುವ ತುಷ್ಟಿರೂಪದಿಂದ ಇರುವಳೋ ಆ ದೇವಿಯನ್ನು ಬೇರೊಂದು ಕಡೆಗೆ ಗಮನವನ್ನಿಡದೆ ಮತ್ತೆ ಮತ್ತೆ ವಂದಿಸುತ್ತೇವೆ.

ಯಾ ದೇವೀ ಸರ್ವಭೂತೇಷು ಪುಷ್ಟಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೫॥

ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೬॥

ಯಾ ದೇವೀ ಸರ್ವಭೂತೇಷು ಭ್ರಾನ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೭॥

ಇನ್ದ್ರಿಯಾಣಾಮಧಿಷ್ಠಾತ್ರೀ ಭೂತಾನಾಮಖಿಲೇಷು ಯಾ ।
ಭೂತೇಷು ಸತತಂ ವ್ಯಾಪ್ತ್ಯೈ ತಸ್ಯೈ ದೇವ್ಯೈ ನಮೋ ನಮಃ ॥೩೮॥

---

೩೫. ಯಾವ ದೇವಿಯು ಸಮಸ್ತ ಭೂತವರ್ಗದಲ್ಲಿ ಅವಯವಗಳು ಆಯಾಯ ಪ್ರಾಣಿಗೆ ತಕ್ಕಂತೆ ತುಂಬಿಕೊಳ್ಳುವಿಕೆಯೆಂಬ ಪುಷ್ಟಿರೂಪದಿಂದ ಇರುವಳೊ ಅಂತಹ ದೇವಿಯನ್ನು ಕಾಯ-ವಾಕ್-ಮಾನಸಗಳ ವ್ಯಾಪಾರದಿಂದ ಮತ್ತೆ ಮತ್ತೆ ನಮಸ್ಕರಿಸುವೆವು.

೩೬. ಯಾವ ದೇವಿಯು ಸರ್ವ ಪ್ರಾಣಿಗಳಲ್ಲಿ ಗರ್ಭಧಾರಣ ಮೂಲಕವಾಗಿ ಪ್ರಸವಕ್ಕೆ ಕಾರಣಳೂ ಮತ್ತು ಮಾನ್ಯಳೂ ಆದ ಜನನಿಯ ರೂಪದಿಂದಲೂ ಅಥವಾ ಬ್ರಾಹ್ಮೀ ಮುಂತಾದ ಅಷ್ಟಮಾತೃಕೆಯರ ರೂಪದಿಂದಲೂ ಇರುವಳೋ ಅಂತಹ ದೇವಿಯನ್ನು ನಮಸ್ಕರಿಸುವೆವು.

೩೭. ಯಾವ ದೇವಿಯು ಸಮಸ್ತ ಪ್ರಾಣಿಗಳಲ್ಲಿ ಒಂದನ್ನು ಮತ್ತೊಂದಾಗಿ ತಿಳಿಯುವಿಕೆಯೆಂಬ ಸರ್ವಾನರ್ಥಗಳಿಗೆ ಕಾರಣವಾದ ಭ್ರಾಂತಿಯ ರೂಪದಿಂದ ಇರುವಳೊ ಅಂತಹ ದೇವಿಯನ್ನು ಅನನ್ಯವ್ಯಾಪಾರದಿಂದ ಮತ್ತೆ ಮತ್ತೆ ವಂದಿಸುತ್ತೇವೆ.

೩೮. ಮತ್ತು ಯಾವ ದೇವಿಯು ಸಮಸ್ತ ಪ್ರಾಣಿವರ್ಗದಲ್ಲಿರುವ ಕರ್ಮ-ಜ್ಞಾನೇಂದ್ರಿಯಗಳ ಆಯಾಯ ಕಾರ್ಯಪ್ರವೃತ್ತಿಯಲ್ಲಿ ಕಾರಣಳಾಗಿ ಸಮಸ್ತ ಭೂತಗಳಲ್ಲಿ ಯಾವಾಗಲೂ ವ್ಯಾಪಿಸಿ ಸರ್ವಾತ್ಮಕಳಾಗಿರುವಳೊ ಆ ದೇವಿಯನ್ನು ಪುನಃ ಪುನಃ ವಂದಿಸುವೆವು.

ಚಿತಿರೂಪೇಣ ಯಾ ಕೃತ್ಸ್ನಮೇತದ್ವ್ಯಾಪ್ಯ ಸ್ಥಿತಾ ಜಗತ್ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥೩೯॥

ಸುರಾಸುರೈಃ ಪೂರ್ವಮಭೀಷ್ಟಸಂಶ್ರಯಾ-
ತ್ತಥಾ ಸುರೇನ್ದ್ರೇಣ ದಿನೇಶಸೇವಿತಾ ।
ಕರೋತು ಸಾ ನಃ ಶುಭಹೇತುರೀಶ್ವರೀ
ಶುಭಾನಿ ಭದ್ರಾಣ್ಯಭಿಹನ್ತು ಚಾಪದಃ ॥೪೦॥

ಯಾ ಸಾಮ್ಪ್ರತಂ ಚೋದ್ಧತದೈತ್ಯತಾಪಿತೈ-
ರಸ್ಮಾಭಿರೀಶಾ ಚ ಸುರೈರ್ನಮಸ್ಯತೇ ।
ಯಾ ಚ ಸ್ಮೃತಾ ತತ್ಕ್ಷಣಮೇವ ಹನ್ತಿ ನಃ
ಸರ್ವಾಪದೋ ಭಕ್ತಿವಿನಮ್ರಮೂರ್ತಿಭಿಃ ॥೪೧॥

---

೩೯. ಯಾವ ದೇವಿಯು ಚೈತನ್ಯರೂಪದಿಂದ ಸಂಪೂರ್ಣ ಜಗತ್ತನ್ನು ವ್ಯಾಪಿಸಿ ಎಲ್ಲ ಚರ-ಅಚರ ಪ್ರಾಣಿಗಳಲ್ಲಿ ಆತ್ಮರೂಪದಿಂದ ಇರುವಳೊ ಅಂತಹ ದೇವಿಯನ್ನು ತ್ರಿಕರಣಗಳ ಪೂರ್ವಕವಾಗಿ ಮತ್ತೆ ಮತ್ತೆ ನಮಸ್ಕರಿಸುತ್ತೇವೆ.

೪೦. ಪೂರ್ವಕಲ್ಪದಲ್ಲಿ ಒಂದು ಸಮಯ ನಿಖಿಲ ದೇವತೆಗಳಿಂದ ಸ್ತುತಿಸಲ್ಪಟ್ಟವಳೂ, ದೇವರಾಜನಾದ ಇಂದ್ರ-ಶಂಕರ ಮತ್ತು ಸೂರ್ಯದೇವರಿಂದ ತಮ್ಮ ತಮ್ಮ ಇಷ್ಟಫಲದ ಪ್ರಾಪ್ತಿಗೋಸ್ಕರ ಸೇವಿಸಲ್ಪಟ್ಟವಳೂ, ಮಂಗಳ-ವಾಗಲೆಂದು ಸಂಕಲ್ಪಿಸುವವಳೂ ಮತ್ತು ಕಲ್ಯಾಣಪ್ರಾಪ್ತಿಗೆ ಕಾರಣಳೂ ಆದ ಸರ್ವೇಶ್ವರಿಯು ನಮಗೆ ಮಂಗಳಪರಂಪರೆಯನ್ನು ಕೊಡಲಿ ಮತ್ತು ನಮ್ಮ ಆಪತ್ತುಗಳನ್ನು ಪರಿಹರಿಸಲಿ.

೪೧. ಮದಾಂಧರಾದ ದೈತ್ಯರಿಂದ ಪೀಡಿಸಲ್ಪಟ್ಟ ದೇವಲೋಕದಿಂದ ಭ್ರಷ್ಟರಾದ ನಮ್ಮಿಂದ ಈಗ ಯಾವ ದೇವಿಯು ಸ್ತುತಿಸಲ್ಪಡುತ್ತಿರುವಳೊ ಮತ್ತು ಭಕ್ತಿಯಿಂದ ಬಾಗಿದ ಅವಯವವುಳ್ಳ ಭಕ್ತಾಗ್ರೇಸರರಿಂದ ಸ್ಮರಿಸಲ್ಪಟ್ಟ ಯಾವ ದೇವಿಯು ತತ್‌ಕ್ಷಣದಲ್ಲಿ ನಮ್ಮ ಸರ್ವ ವಿಪತ್ತುಗಳನ್ನು ನಾಶಮಾಡುವಳೊ ಅಂತಹ ದೇವಿಯು ನಮ್ಮ ಸಂಕಟಗಳನ್ನು ನಾಶಮಾಡಿ ಕಲ್ಯಾಣವನ್ನು ಕೊಡಲಿ.

ಋಷಿರುವಾಚ :—

ಏವಂ ಸ್ತವಾಭಿಯುಕ್ತಾನಾಂ ದೇವಾನಾಂ ತತ್ರ ಪಾರ್ವತೀ ।
ಸ್ನಾತುಮಭ್ಯಾಯಯೌ ತೋಯೇ ಜಾಹ್ನವ್ಯಾ ನೃಪನನ್ದನ ॥೮೨॥

ಸಾಬ್ರವೀತ್ತಾನ್ ಸುರಾನ್ ಸುಭ್ರೂರ್ಭವದ್ಭಿಃ ಸ್ತೂಯತೇಽತ್ರ ಕಾ ।
ಶರೀರಕೋಶತಶ್ಚಾಸ್ಯಾಃ ಸಮುದ್ಭೂತಾಬ್ರವೀಚ್ಛಿವಾ ॥೮೩॥

ಸ್ತೋತ್ರಂ ಮಮೈತತ್ಕ್ರಿಯತೇ ಶುಮ್ಭದೈತ್ಯನಿರಾಕೃತೈಃ ।
ದೇವೈಃ ಸಮಸ್ತೈಃ ಸಮರೇ ನಿಶುಮ್ಭೇನ ಪರಾಜಿತೈಃ ॥೮೪॥

ಶರೀರಕೋಶಾದ್ಯತ್ತಸ್ಯಾಃ ಪಾರ್ವತ್ಯಾ ನಿಃಸೃತಾಮ್ಬಿಕಾ ।
ಕೌಶಿಕೀತಿ ಸಮಸ್ತೇಷು ತತೋ ಲೋಕೇಷು ಗೀಯತೇ ॥೮೫॥

ಸುಮೇಧ ಮುನಿಯು ಇಂತೆಂದನು :—

೮೨. ಎಲೈ ರಾಜನಂದನನಾದ ಸುರಥನೇ! ದೇವತೆಗಳು ಈ ರೀತಿಯಾಗಿ ದೇವಿಯ ಸ್ತುತಿಯಲ್ಲಿ ಆಸಕ್ತಿಯನ್ನು ಹೊಂದಿರಲು ಪಾರ್ವತಿಯು ಜಾಹ್ನವೀನದಿಯ ಜಲಪ್ರವಾಹದಲ್ಲಿ ಸ್ನಾನಮಾಡಲು ಬಂದು ದೇವತೆಗಳಿಗೆ ಕಾಣಿಸಿಕೊಂಡಳು.

೮೩. ಆಗ ಸುಂದರವಾದ ಹುಬ್ಬುಗಳಿಂದ ಶೋಭಿಸುವ ಪಾರ್ವತಿಯು ದೇವತೆಗಳನ್ನು ಕುರಿತು " ಈ ಹಿಮಾಚಲಪ್ರದೇಶದಲ್ಲಿ ನಿಮ್ಮಿಂದ ಸ್ತುತಿಸಲ್ಪಡು-ವವಳಾರು? " ಎಂದು ಪ್ರಶ್ನಿಸಿದಳು. ಅಷ್ಟರಲ್ಲಿ ಪಾರ್ವತಿಯ ಶರೀರಕೋಶದಿಂದ ಉದ್ಭವಿಸಿದ ಮಂಗಳಮೂರ್ತಿಯಾದ ದೇವಿಯು ಪಾರ್ವತಿಗೆ ಪ್ರತ್ಯುತ್ತರವನ್ನು ಹೇಳಿದಳು.

೮೪. ಶುಂಭಾಸುರನೆಂಬ ದೈತ್ಯರಾಜನಿಂದ ದೇವಲೋಕಭ್ರಷ್ಟರೂ, ನಿಶುಂಭಾಸುರನಿಂದ ಪರಾಜಯವನ್ನು ಹೊಂದಿದವರೂ ಆದ ಸಮಸ್ತ ದೇವತೆಗಳು ನನ್ನ ಸ್ತುತಿಯನ್ನು ಈಗ ಮಾಡುತ್ತಿರುವರು.

೮೫. ಹೀಗೆ ಪ್ರತ್ಯುತ್ತರವನ್ನು ಇತ್ತಿರುವ ಜಗನ್ಮಾತೆಯಾದ ದೇವಿಯು ಪಾರ್ವತಿಯ ಶರೀರಕೋಶದಿಂದ ಉದ್ಭವಿಸಿ ಬಂದವಳಾದುದರಿಂದ ಸರ್ವ ಪ್ರಪಂಚದಲ್ಲಿ " ಕೌಶಿಕೀ " ಎಂಬ ಯಥಾರ್ಥವಾದ ಹೆಸರಿನಿಂದ ಸ್ತುತಿಸ-ಲ್ಪಡುವಳು.

ತಸ್ಯಾಂ ವಿನಿರ್ಗತಾಯಾಂ ತು ಕೃಷ್ಣಾಭೂತ್ಸಾಪಿ ಪಾರ್ವತೀ ।
ಕಾಲಿಕೇತಿ ಸಮಾಖ್ಯಾತಾ ಹಿಮಾಚಲಕೃತಾಶ್ರಯಾ ॥೪೬॥

ತತೋಽಮ್ಬಿಕಾಂ ಪರಂ ರೂಪಂ ಬಿಭ್ರಾಣಾಂ ಸುಮನೋಹರಮ್ ।
ದದರ್ಶ ಚಣ್ಡೋ ಮುಣ್ಡಶ್ಚ ಭೃತ್ಯೌ ಶುಮ್ಭನಿಶುಮ್ಭಯೋಃ ॥೪೭॥

ತಾಭ್ಯಾಂ ಶುಮ್ಭಾಯ ಚಾಖ್ಯಾತಾ ಅತೀವ ಸುಮನೋಹರಾ ।
ಕಾಪ್ಯಾಸ್ತೇ ಸ್ತ್ರೀ ಮಹಾರಾಜ ಭಾಸಯನ್ತೀ ಹಿಮಾಚಲಮ್ ॥೪೮॥

ನೈವ ತಾದೃಕ್ ಕ್ವಚಿದ್ರೂಪಂ ದೃಷ್ಟಂ ಕೇನ ಚಿದುತ್ತಮಮ್ ।
ಜ್ಞಾಯತಾಂ ಕಾಪ್ಯಸೌ ದೇವೀ ಗೃಹ್ಯತಾಂ ಚಾಸುರೇಶ್ವರ ॥೪೯॥

---

೪೬. ಹೀಗೆ ಪಾರ್ವತಿಯ ದೇಹದಿಂದ ಅಂಬಿಕೆಯು ಹೊರಟುಬರಲಾಗಿ ಪಾರ್ವತಿಯ ಮೂರ್ತಿಯು ಕಪ್ಪಾಯಿತು. ಹಿಮಾಚಲದಲ್ಲಿ ವಾಸಮಾಡಿರುವ ಪಾರ್ವತಿಯು ಕಪ್ಪಾದುದರಿಂದ "ಕಾಲಿಕಾ" ಎಂದು ಕರೆಯಲ್ಪಟ್ಟಿರುವಳು.

೪೭. ತರುವಾಯ ನಿರುಪಮವಾದ ಮತ್ತು ರಮಣೀಯವಾದ ರೂಪವನ್ನು ಧರಿಸಿರುವ ಜಗನ್ಮಾತೆಯನ್ನು ಶುಂಭ-ನಿಶುಂಭ ಅಸುರರಿಗೆ ಭೃತ್ಯರಾಗಿರುವ ಚಂಡ-ಮುಂಡರೆಂಬ ಇಬ್ಬರು ಅಸುರರು ನೋಡಿದರು.

೪೮. ಕೂಡಲೆ ಚಂಡ-ಮುಂಡರಿಂದ ಶುಂಭ ಅಸುರನಿಗೆ ಹೀಗೆ ವಿಜ್ಞಾಪಿಸಲ್ಪಟ್ಟಿತು— ಮಹಾರಾಜನೇ! ಅತಿಯಾದ ಸೌಂದರ್ಯದಿಂದ ಕೂಡಿರುವವಳೂ, ಹಿಮಾಚಲವನ್ನು ತನ್ನ ಕಾಂತಿಯಿಂದ ಬೆಳಗುವವಳೂ ಆದ ಒಬ್ಬಳು ನಾರಿಯಿರುವಳು.

೪೯. ಅಸುರರಾಜನೇ! ಈ ಲೋಕದಲ್ಲಿ ಯಾರಿಂದಲೂ ಎಲ್ಲಿಯೂ ಅಂತಹ ಸರ್ವೋತ್ತಮವಾದ ರೂಪವು ನೋಡಲ್ಪಟ್ಟಿರುವುದಿಲ್ಲ. ಈ ದೇವಿಯು ಯಾರಿರಬಹುದೆಂದು ತಿಳಿಯೋಣಾಗಲಿ. ಮತ್ತು ಆಕೆಯು ನಿನ್ನಿಂದ ಪರಿಗ್ರಹಿಸಲ್ಪಡಲಿ.

ಸ್ತ್ರೀರತ್ನಮತಿಚಾರ್ವಙ್ಗೀ ದ್ಯೋತಯನ್ತೀ ದಿಶಸ್ತ್ವಿಷಾ ।
ಸಾ ತು ತಿಷ್ಠತಿ ದೈತ್ಯೇನ್ದ್ರ ತಾಂ ಭವಾನ್ ದ್ರಷ್ಟುಮರ್ಹತಿ ॥೫೦॥

ಯಾನಿ ರತ್ನಾನಿ ಮಣಯೋ ಗಜಾಶ್ವಾದೀನಿ ವೈ ಪ್ರಭೋ ।
ತ್ರೈಲೋಕ್ಯೇ ತು ಸಮಸ್ತಾನಿ ಸಾಮ್ಪ್ರತಂ ತಾನಿ ತೇ ಗೃಹೇ ॥೫೧॥

ಐರಾವತಃ ಸಮಾನೀತೋ ಗಜರತ್ನಂ ಪುರನ್ದರಾತ್ ।
ಪಾರಿಜಾತತರುಶ್ಚಾಯಂ ತಥೈವೋಚ್ಚೈಃಶ್ರವಾ ಹಯಃ ॥೫೨॥

ವಿಮಾನಂ ಹಂಸಸಂಯುಕ್ತಮೇತತ್ತಿಷ್ಠತಿ ತೇಽಙ್ಗಣೇ ।
ರತ್ನಭೂತಮಿಹಾನೀತಂ ಯದಾಸೀದ್ವೇಧಸೋಽದ್ಭುತಮ್ ॥೫೩॥

---

೫೦. ದೈತ್ಯರಾಜನೇ ! ಶುಂಭಾಸುರನೇ ! ಅಂತಹ ನಾರೀರತ್ನವು ಅತಿ ಸುಂದರವಾದ ಮೂರ್ತಿಯುಳ್ಳವಳೂ, ಶರೀರಕಾಂತಿಯಿಂದ ದಿಕ್ಕುಗಳನ್ನು ಬೆಳಗುವವಳೂ ಆಗಿ ಹಿಮಾಚಲದಲ್ಲಿರುವಳು. ನೀನು ಆ ನಾರೀಮಣಿಯನ್ನು ನೋಡಬೇಕು.

೫೧. ಅಸುರ ರಾಜನೇ ! ಮೂರು ಲೋಕಗಳಲ್ಲಿ ಪ್ರಶಸ್ತವಾದ ಆನೆ-ಕುದುರೆ ಮುಂತಾದ ರತ್ನಪ್ರಾಯವಾದ ವಸ್ತುವಾಗಲಿ, ಪದ್ಮರಾಗ ಮುಂತಾದ ಮಣಿರೂಪವಾದ ರತ್ನಗಳಾಗಲಿ ಎಲ್ಲವೂ ಈಗ ನಿನ್ನ ಮಂದಿರದಲ್ಲಿ ಬಂದು ಸೇರಿವೆಯಲ್ಲವೆ !

೫೨. ದೇವರಾಜನಾದ ಇಂದ್ರನಿಂದ ಅವನ ವಾಹನವಾದ ಐರಾವತ ಆನೆಯೂ, ಉಚ್ಚೈಶ್ರವ ಎಂಬ ಕುದುರೆಯೂ ಮತ್ತು ನಂದನವನದ ಅಲಂಕಾರ-ವಾದ ಪಾರಿಜಾತ ವೃಕ್ಷವೂ ನಿನ್ನಿಂದ ತರಲ್ಪಟ್ಟಿರುವುವು.

೫೩. ಹಂಸವಾಹನಗಳಿಂದ ಕೂಡಿದ ಆಶ್ಚರ್ಯಕರವಾದ ಮತ್ತು ರತ್ನಪ್ರಾಯವಾದ ಬ್ರಹ್ಮದೇವನ ಸಮೀಪದಲ್ಲಿದ್ದ ವಿಮಾನವು ನಿನ್ನಿಂದ ಇಲ್ಲಿಗೆ ತರಲ್ಪಟ್ಟು ಅದೀಗ ನಿನ್ನ ಮನೆಯ ಅಂಗಣದಲ್ಲಿರುವುದು.

ನಿಧಿರೇಷಮಹಾಪದ್ಮಃ ಸಮಾನೀತೋ ಧನೇಶ್ವರಾತ್ ।
ಕಿಞ್ಜಲ್ಕಿನೀಂ ದದೌ ಚಾಬ್ಧಿರ್ಮಾಲಾಮಮ್ಲಾನಪಙ್ಕಜಾಮ್ ॥೫೪॥

ಛತ್ರಂ ತೇ ವಾರುಣಂ ಗೇಹೇ ಕಾಞ್ಚನಸ್ರಾವಿ ತಿಷ್ಠತಿ ।
ತಥಾಯಂ ಸ್ಯನ್ದನವರೋ ಯಃ ಪುರಾಸೀತ್ಪ್ರಜಾಪತೇಃ ॥೫೫॥

ಮೃತ್ಯೋರುತ್ಕ್ರಾನ್ತಿದಾ ನಾಮ ಶಕ್ತಿರೀಶ ತ್ವಯಾ ಹೃತಾ ।
ಪಾಶಃ ಸಲಿಲರಾಜಸ್ಯ ಭ್ರಾತುಸ್ತವ ಪರಿಗ್ರಹೇ ॥೫೬॥

ನಿಶುಮ್ಭಸ್ಯಾಬ್ಧಿಜಾತಾಶ್ಚ ಸಮಸ್ತಾ ರತ್ನಜಾತಯಃ ।
ವಹ್ನಿಶ್ಚಾಪಿ ದದೌ ತುಭ್ಯಮಗ್ನಿಶೌಚೇ ಚ ವಾಸಸೀ ॥೫೭॥

---

೫೪. ಮತ್ತು ಕುಬೇರನ ಐಶ್ವರ್ಯಗಳಲ್ಲಿ ಒಂದಾದ ಮಹಾಪದ್ಮವೆಂಬ ಉತ್ತಮನಿಧಿಯು ಅವನಿಂದ ಕಿತ್ತು ಇಲ್ಲಿ ತರಲ್ಪಟ್ಟಿರುವುದು. ಹಾಗು ಸಮುದ್ರ-ರಾಜನು ಬಾಡದಿರುವ ಕಮಲಗಳಿಂದ ಸುಗಂಧವಾದ, ಕೇಸರಗಳಿಂದ ರಮ್ಯವಾದ ಮಾಲಿಕೆಯನ್ನು ನಿನಗೆ ಕೊಟ್ಟಿರುವನು.

೫೫. ವರುಣದೇವನಲ್ಲಿದ್ದ, ಸುವರ್ಣರಸವನ್ನು ಸುರಿಸಿ ಕಾಂತಿಪುಂಜ-ವನ್ನು ಚಲ್ಲುತ್ತಿರುವ ಶ್ವೇತಛತ್ರವು ನಿನ್ನ ಮನೆಯಲ್ಲಿರುವುದು. ಹಾಗು ಪ್ರಜಾ-ಪತಿದೇವನಲ್ಲಿದ್ದ ಶ್ರೇಷ್ಠವಾದ ಈ ರಥವು ನಿನ್ನ ಮನೆಯಲ್ಲಿರುವುದು.

೫೬. ಮಹಾಪ್ರಭುವೇ ! ಮೃತ್ಯುದೇವತೆಯ ಬಳಿಯಲ್ಲಿದ್ದ ಉತ್ಕ್ರಾಂ-ತಿಯನ್ನು ಕೊಡುವುದರಿಂದ ಉತ್ಕ್ರಾಂತಿದಾ ಎಂದು ಕರೆಯಲ್ಪಡುವ ಶಕ್ತಿ ಆಯುಧವು ನಿನ್ನಿಂದ ಅಪಹರಿಸಲ್ಪಟ್ಟಿದೆ. ಜಲದೇವತೆಯಾದ ವರುಣನ ಪಾಶಾಯುಧವು ನಿನ್ನ ಭ್ರಾತೃವಾದ ನಿಶುಂಭನ ಉಪಕರಣಗಳಲ್ಲಿ ಒಂದಾಗಿದೆ.

೫೭. ಸಮುದ್ರದಲ್ಲಿ ಬೆಳೆಯುವ ಎಲ್ಲವಿಧದ ರತ್ನರಾಶಿಗಳು ನಿನ್ನ ತಮ್ಮನಾದ ನಿಶುಂಭನ ಅಧೀನವಾಗಿವೆ. ಅಗ್ನಿದೇವನು ನಿನಗೆ ಅಗ್ನಿಸಂಸ್ಕಾರದಿಂದ ಶುಚಿಯಾದ ವಸ್ತ್ರಯುಗ್ಮವನ್ನು ತಂದುಕೊಟ್ಟಿರುವನು.

ಏವಂ ದೈತ್ಯೇನ್ದ್ರ ರತ್ನಾನಿ ಸಮಸ್ತಾನ್ಯಾಹೃತಾನಿ ತೇ ।
ಸ್ತ್ರೀರತ್ನಮೇಷಾ ಕಲ್ಯಾಣೀ ತ್ವಯಾ ಕಸ್ಮಾನ್ನ ಗೃಹ್ಯತೇ ॥೫೮॥

ಋಷಿರುವಾಚ :—

ನಿಶಮ್ಯೇತಿ ವಚಃ ಶುಮ್ಭಃ ಸ ತದಾ ಚಣ್ಡಮುಣ್ಡಯೋಃ ।
ಪ್ರೇಷಯಾಮಾಸ ಸುಗ್ರೀವಂ ದೂತಂ ದೇವ್ಯಾ ಮಹಾಸುರಃ ॥೫೯॥

ಶುಮ್ಭ ಉವಾಚ :—

ಇತಿ ಚೇತಿ ಚ ವಕ್ತವ್ಯಾ ಸಾ ಗತ್ವಾ ವಚನಾನ್ಮಮ ।
ಯಥಾ ಚಾಭ್ಯೇತಿ ಸಂಪ್ರೀತ್ಯಾ ತಥಾ ಕಾರ್ಯಂ ತ್ವಯಾ ಲಘು॥೬೦॥

ಸ ತತ್ರ ಗತ್ವಾ ಯತ್ರಾಸ್ತೇ ಶೈಲೋದ್ದೇಶೇಽತಿಶೋಭನೇ ।
ತಾಂ ಚ ದೇವೀಂ ತತಃ ಪ್ರಾಹ ಶ್ಲಕ್ಷ್ಣಂ ಮಧುರಯಾ ಗಿರಾ ॥೬೧॥

---

೫೮. ದೈತ್ಯರಾಜನೇ! ಹೀಗೆ ಎಲ್ಲೆಡೆಗಳಿಂದಲೂ ರತ್ನವಸ್ತುಗಳು ನಿನ್ನಿಂದ ತರಲ್ಪಟ್ಟಿರುವುವು. ಹೀಗಿರಲು ಮಂಗಳಮೂರ್ತಿಯಾಗಿರುವ ಈ ನಾರೀರತ್ನವು ಮಾತ್ರ ನಿನ್ನಿಂದ ಏಕೆ ತರಲ್ಪಡಬಾರದು?

ಸುಮೇಧ ಮುನಿಯು ಹೇಳಿದನು :—

೫೯. ಮಹಾಸುರನಾದ ಶುಂಭನು ಚಂಡ-ಮುಂಡರೆಂಬ ದೂತರ ಮಾತನ್ನು ಕೇಳಿ ಅದರಂತೆ ನಾರೀರತ್ನವನ್ನು ವಶಪಡಿಸಿಕೊಳ್ಳಬೇಕೆಂಬ ಸಂಕಲ್ಪ-ದಿಂದ ದೇವಿಯಬಳಿಗೆ ಸುಗ್ರೀವನೆಂಬ ದೂತನನ್ನು ಕಳುಹಿಸಿದನು.

ಶುಂಭಾಸುರನು ಹೀಗೆಂದನು :—

೬೦. ಎಲೈ, ಸುಗ್ರೀವನೇ! ನೀನು ಆ ನಾರಿಯಬಳಿಗೆ ಹೋಗಿ ನನ್ನ ಅಪ್ಪಣೆಯಂತೆ ಹೀಗೆ ಹೀಗೆ ಮಾತನಾಡಬೇಕು. ನಿನ್ನ ಮಾತನ್ನು ಕೇಳಿ ಆಕೆಯು ಪ್ರೀತಿಯಿಂದ ನನ್ನ ಸಮೀಪಕ್ಕೆ ಬರುವಹಾಗೆ ನೀನು ಬೇಗ ಯತ್ನವನ್ನು ಮಾಡಬೇಕು.

೬೧. ತರುವಾಯ ದೂತನು ದೇವಿಯು ಇದ್ದ ಬಲು ಶೋಭಾಯ-ಮಾನವಾದ ಹಿಮಾಲಯದ ಪ್ರದೇಶಕ್ಕೆ ಹೋಗಿ ಆ ದೇವಿಯನ್ನು ಕುರಿತು ಮಧುರವಾದ ಮಾತುಗಳಿಂದ ನಯವಾಗಿ ಹೇಳಿದನು.

ದೂತ ಉವಾಚ :—

ದೇವಿ ದೈತ್ಯೇಶ್ವರಃ ಶುಮ್ಭಸ್ತ್ರೈಲೋಕ್ಯೇ ಪರಮೇಶ್ವರಃ ।
ದೂತೋಽಹಂ ಪ್ರೇಷಿತಸ್ತೇನ ತ್ವತ್ಸಕಾಶಮಿಹಾಗತಃ ॥೬೨॥

ಅವ್ಯಾಹತಾಜ್ಞಃ ಸರ್ವಾಸು ಯಃ ಸದಾ ದೇವಯೋನಿಷು ।
ನಿರ್ಜಿತಾಖಿಲದೈತ್ಯಾರಿಃ ಸ ಯದಾಹ ಶೃಣುಷ್ವ ತತ್ ॥೬೩॥

ಮಮ ತ್ರೈಲೋಕ್ಯಮಖಿಲಂ ಮಮ ದೇವಾ ವಶಾನುಗಾಃ ।
ಯಜ್ಞಭಾಗಾನಹಂ ಸರ್ವಾನುಪಾಶ್ನಾಮಿ ಪೃಥಕ್ ಪೃಥಕ್ ॥೬೪॥

ತ್ರೈಲೋಕ್ಯೇ ವರರತ್ನಾನಿ ಮಮ ವಶ್ಯಾನ್ಯಶೇಷತಃ ।
ತಥೈವ ಗಜರತ್ನಂ ಚ ಹೃತಂ ದೇವೇನ್ದ್ರವಾಹನಮ್ ॥೬೫॥

ದೂತನು ಇಂತೆಂದನು :—

೬೨. ದೇವಿಯೇ! ದೈತ್ಯೇಶ್ವರನಾದ ಶುಂಭಾಸುರನು ಮೂರು ಲೋಕಗಳಿಗೆ ನಿರಂಕುಶನಾದ ಪ್ರಭುವಾಗಿರುವನು. ನಾನು ಆ ಪ್ರಭುವಿನ ದೂತನಾಗಿರುವೆನು. ಅವನ ಅಪ್ಪಣೆಯಂತೆ ನಾನು ನಿನ್ನ ಬಳಿಗೆ ಬಂದಿರುವೆನು.

೬೩. ಯಾವ ನನ್ನ ಪ್ರಭುವು ಸರ್ವಕಾಲದಲ್ಲಿಯೂ ಸಮಸ್ತ ದೇವ-ಜಾತಿಯಲ್ಲಿ ಅಕುಂಠಿತವಾದ ಆಜ್ಞಾಪ್ರಸಾರವುಳ್ಳವನೂ, ಮತ್ತು ಸೋಲಿಸಿದ ಸಮಸ್ತ ದೈತ್ಯಶತ್ರುಗಳುಳ್ಳವನೂ ಆಗಿದ್ದಾನೆಯೊ. ಅವನು ಹೇಳಿಕಳುಹಿಸಿದ ಸಂದೇಶವನ್ನು ಕೇಳು.

೬೪. ಮೂರು ಲೋಕಗಳು ಈಗ ನನ್ನದಾಗಿವೆ. ಎಲ್ಲ ದೇವತೆಗಳು ನನಗೆ ವಶರಾಗಿರುವರು. ಅಲ್ಲಲ್ಲಿ ನಡೆಯುವ ಸಮಸ್ತ ಯಜ್ಞಕರ್ಮಗಳಲ್ಲಿ ಅರ್ಪಿಸುವ ಹವಿರ್ಭಾಗಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ನಾನು ಭುಂಜಿಸುವೆನು.

೬೫. ಮತ್ತು ಮೂರು ಲೋಕಗಳಲ್ಲಿರುವ ಉತ್ತಮೋತ್ತಮ ವಸ್ತು-ಗಳೆಲ್ಲವೂ ನನಗೆ ವಶವಾಗಿವೆ. ಹಾಗು ದೇವೇಂದ್ರನ ವಾಹನವೂ ಗಜರತ್ನವೂ ಆದ ಐರಾವತವು ನನ್ನಿಂದ ವಶದಲ್ಲಿ ಇರಿಸಲ್ಪಟ್ಟಿರುವುದು.

ಕ್ಷೀರೋದಮಥನೋದ್ಭೂತಮಶ್ವರತ್ನಂ ಮಮಾಮರೈಃ ।
ಉಚ್ಚೈಃಶ್ರವಸಸಞ್ಜ್ಞಂ ತು ಪ್ರಣಿಪತ್ಯ ಸಮರ್ಪಿತಮ್ ॥೬೬॥

ಯಾನಿ ಚಾನ್ಯಾನಿ ದೇವೇಷು ಗನ್ಧರ್ವೇಷೂರಗೇಷು ಚ ।
ರತ್ನಭೂತಾನಿ ಭೂತಾನಿ ತಾನಿ ಮಯ್ಯೇವ ಶೋಭನೇ ॥೬೭॥

ಸ್ತ್ರೀರತ್ನಭೂತಾಂ ತ್ವಾಂ ದೇವಿ ಲೋಕೇ ಮನ್ಯಾಮಹೇ ವಯಮ್ ।
ಸಾ ತ್ವಮಸ್ಮಾನುಪಾಗಚ್ಛ ಯತೋ ರತ್ನಭುಜೋ ವಯಮ್ ॥೬೮॥

ಮಾಂ ವಾ ಮಮಾನುಜಂ ವಾಪಿ ನಿಶುಮ್ಭಮುರುವಿಕ್ರಮಮ್ ।
ಭಜ ತ್ವಂ ಚಞ್ಚಲಾಪಾಙ್ಗಿ ರತ್ನಭೂತಾಸಿ ವೈ ಯತಃ ॥೬೯॥

---

೬೬. ಕ್ಷೀರಸಮುದ್ರದ ಮಥನದಿಂದ ಹುಟ್ಟಿದ, ಉಚ್ಚೈಃಶ್ರವ ಎಂಬ ನಾಮಾಂಕಿತವಾದ ಅಶ್ವರತ್ನವು ದೇವತೆಗಳಿಂದ ನಮಸ್ಕಾರಪೂರ್ವಕವಾಗಿ ನನಗೆ ಅರ್ಪಿಸಲ್ಪಟ್ಟಿರುವುದು.

೬೭. ಮಂಗಳಾಂಗಿಯೇ! ಹಾಗು ದೇವತೆ, ಗಂಧರ್ವ, ನಾಗ ಮುಂತಾದವರಲ್ಲಿ ಇನ್ನು ಯಾವ ಯಾವ ಅಮೂಲ್ಯವಾದ ರತ್ನವಸ್ತುಗಳಿವೆಯೊ ಅವೆಲ್ಲವೂ ಜಗದೇಕವೀರನಾದ ನನ್ನಲ್ಲಿಯೇ ಇರುವುವು.

೬೮. ಎಲೈ, ದೇವಿಯೇ! ನಾವು ನಿನ್ನನ್ನು ಲೋಕವಲ್ಲೆಲ್ಲ ನಾರೀ-ರತ್ನವೆಂದು ಅರಿತಿರುವೆವು. ಹಾಗೆ ನಾರೀರತ್ನವಾದ ನೀನು ನಮ್ಮ ಬಳಿಗೆ ಬರಬೇಕು. ನಾವು ರತ್ನವಸ್ತುಗಳ ಭೋಗವನ್ನು ಅನುಭವಿಸುವವರಾಗಿದ್ದೇವೆ.

೬೯. ಚಂಚಲವಾದ ಕಡೆಗಣ್ಣಿನ ನೋಟವುಳ್ಳವಳೇ! ನೀನು ರತ್ನರೂಪಳಾಗಿರುವುದರಿಂದ ರತ್ನವಸ್ತುಭೋಗಕ್ಕೆ ಅರ್ಹರಾದ ನನ್ನನ್ನು ಅಥವಾ ಹೆಚ್ಚಾದ ವಿಕ್ರಮದಿಂದ ಖ್ಯಾತಿಯನ್ನು ಪಡೆದ ನನ್ನ ತಮ್ಮನಾದ ನಿಶುಂಭನನ್ನು ಸೇವಿಸುವವಳಾಗು.

ಪರಮೈಶ್ವರ್ಯಮತುಲಂ ಪ್ರಾಪ್ಸ್ಯಸೇ ಮತ್ಪರಿಗ್ರಹಾತ್ ।
ಏತದ್ಬುದ್ಧ್ಯಾ ಸಮಾಲೋಚ್ಯ ಮತ್ಪರಿಗ್ರಹತಾಂ ವ್ರಜ ॥೭೦॥

ಋಷಿರುವಾಚ :—

ಇತ್ಯುಕ್ತಾ ಸಾ ತದಾ ದೇವೀ ಗಮ್ಭೀರಾನ್ತಃಸ್ಮಿತಾ ಜಗೌ ।
ದುರ್ಗಾ ಭಗವತೀ ಭದ್ರಾ ಯಯೇದಂ ಧಾರ್ಯತೇ ಜಗತ್ ॥೭೧॥

ಸತ್ಯಮುಕ್ತಂ ತ್ವಯಾ ನಾತ್ರ ಮಿಥ್ಯಾ ಕಿಂಚಿತ್ತ್ವಯೋದಿತಮ್ ।
ತ್ರೈಲೋಕ್ಯಾಧಿಪತಿಃ ಶುಮ್ಭೋ ನಿಶುಮ್ಭಶ್ಚಾಪಿ ತಾದೃಶಃ ॥೭೨॥

ಕಿಂ ತ್ವತ್ರ ಯತ್ಪ್ರತಿಜ್ಞಾತಂ ಮಿಥ್ಯಾ ತತ್ಕ್ರಿಯತೇ ಕಥಮ್ ।
ಶ್ರೂಯತಾಮಲ್ಪಬುದ್ಧಿತ್ವಾತ್ಪ್ರತಿಜ್ಞಾ ಯಾ ಕೃತಾ ಪುರಾ ॥೭೩॥

---

೭೦. ನಾರೀಮಣಿಯೇ ! ಶುಂಭಾಸುರನಲ್ಲಿ ಪತ್ನಿಯಾಗಿ ಸೇರುವುದರಿಂದ ಅವನಲ್ಲಿರುವ ಅಖಂಡೈಶ್ವರ್ಯಕ್ಕೆ ನೀನು ಪ್ರಭುವಾದ ರಾಣಿಯಾಗುತ್ತೀಯೆ. ಇದನ್ನು ವಿವೇಕದಿಂದ ಆಲೋಚಿಸಿ ದೈತ್ಯರಾಜನಾದ ನನ್ನ ರಾಜ್ಞೀಪಟ್ಟವನ್ನು ಅಂಗೀಕರಿಸು.

ಋಷಿಯು ಹೀಗೆ ಹೇಳಿದನು :—

೭೧. ಅಖಂಡೈಶ್ವರ್ಯದಿಂದ ರಾಜಿತಳೂ ದುರ್ಗವನ್ನು ಪರಿಹರಿಸುವವಳೂ ಮಂಗಳಕರಳೂ ಮತ್ತು ಪ್ರಪಂಚವನ್ನು ಧರಿಸಿರುವವಳೂ ಆದ ದೇವಿಯು ಶುಂಭಾಸುರನ ದೂತನಿಂದ ಈ ವಿಧವಾಗಿ ಹೇಳಲ್ಪಟ್ಟಳು. ಆಗ ದೇವಿಯು ಗಂಭೀರವಾದ ನಗುಮುಖವುಳ್ಳವಳಾಗಿ ಹೇಳಿದಳು.

೭೨. ದೂತನೇ ! ಶುಂಭಾಸುರನ ವಿಷಯದಲ್ಲಿ ನಿಜವನ್ನು ಹೇಳಿದ್ದೀಯೆ! ನೀನು ಆ ವಿಷಯದಲ್ಲಿ ಒಂದಾದರೂ ಸುಳ್ಳನ್ನು ಹೇಳಲಿಲ್ಲ. ಶುಂಭಾಸುರನು ತ್ರೈಲೋಕ್ಯಕ್ಕೆ ಅಧಿಪತಿಯಾಗಿರುವನೆಂಬುದು ನಿಜವು. ಹಾಗು ನಿಶುಂಭಾಸುರನೂ ಅಂತೆಯೇ ಇರುವನು.

೭೩. ಆದರೆ ನಾನು ಒಬ್ಬ ಪುರುಷನಲ್ಲಿ ಪತ್ನೀಭಾವವನ್ನು ಹೊಂದಿರುವ ವಿಷಯದಲ್ಲಿ ಏನು ಪ್ರತಿಜ್ಞೆ ಮಾಡಿರುವೆನೊ ಆ ಪ್ರತಿಜ್ಞೆಯನ್ನು ಹೇಗೆ ಸುಳ್ಳಾಗಿಮಾಡಲಿ. ಬುದ್ಧಿವಿಕಾಸವಿಲ್ಲದ್ದರಿಂದ ಹಿಂದೆ ನಾನು ಮಾಡಿಕೊಂಡಿರುವ ಪ್ರತಿಜ್ಞೆಯನ್ನು ನಿನಗೆ ಹೇಳುವೆನು, ಕೇಳು.

ಯೋ ಮಾಂ ಜಯತಿ ಸಙ್ಗ್ರಾಮೇ ಯೋ ಮೇ ದರ್ಪಂ ವ್ಯಪೋಹತಿ।
ಯೋ ಮೇ ಪ್ರತಿಬಲೋ ಲೋಕೇ ಸ ಮೇ ಭರ್ತಾ ಭವಿಷ್ಯತಿ ॥೭೪॥

ತದಾಗಚ್ಛತು ಶುಮ್ಭೋಽತ್ರ ನಿಶುಮ್ಭೋ ವಾ ಮಹಾಸುರಃ।
ಮಾಂ ಜಿತ್ವಾ ಕಿಂ ಚಿರೇಣಾತ್ರ ಪಾಣಿಂ ಗೃಹ್ಣಾತು ಮೇ ಲಘು ॥೭೫॥

ದೂತ ಉವಾಚ :—

ಅವಲಿಪ್ತಾಸಿ ಮೈವಂ ತ್ವಂ ದೇವಿ ಬ್ರೂಹಿ ಮಮಾಗ್ರತಃ।
ತ್ರೈಲೋಕ್ಯೇ ಕಃ ಪುಮಾಂಸ್ತಿಷ್ಠೇದಗ್ರೇ ಶುಮ್ಭನಿಶುಮ್ಭಯೋಃ ॥೭೬॥
ಅನ್ಯೇಷಾಮಪಿ ದೈತ್ಯಾನಾಂ ಸರ್ವೇ ದೇವಾ ನ ವೈ ಯುಧಿ।
ತಿಷ್ಠನ್ತಿ ಸಮ್ಮುಖಂ ದೇವಿ ಕಿಂ ಪುನಃ ಸ್ತ್ರೀ ತ್ವಮೇಕಿಕಾ ॥೭೭॥

---

೭೪. ಯಾವ ಪುರುಷನು ಸಂಗ್ರಾಮದಲ್ಲಿ ನನ್ನನ್ನು ಜಯಿಸುವನೋ; ಯಾವನು ನನ್ನ ವೀರ್ಯದರ್ಪವನ್ನು ಅಡಗಿಸುವನೋ, ಮತ್ತು ಯಾವನು ನನಗೆ ಅನುರೂಪನಾದ ಪ್ರತಿಪಕ್ಷನಾಗುವನೋ ಅಂತಹವನು ನನಗೆ ಪತಿಯಾಗಬೇಕು.

೭೫. ಹೀಗೆ ನಾನು ಪ್ರತಿಜ್ಞೆಯನ್ನು ಮಾಡಿಕೊಂಡಿರುವುದರಿಂದ ಶುಂಭಾಸುರನೊ ಅಥವಾ ನಿಶುಂಭಾಸುರನೋ ಇಲ್ಲಿಗೆ ಬರಲಿ. ವಿಳಂಬವೇಕೆ? ಯಾರಾದರೊಬ್ಬರು ಬಂದು ನನ್ನನ್ನು ಜಯಿಸಿ ಬೇಗ ನನ್ನ ಪಾಣಿಯನ್ನು ಗ್ರಹಿಸಲಿ.

ದೂತನು ಇಂತೆಂದನು :—

೭೬. ಎಲೈ, ದೇವಿಯೇ! ಬಲು ಅಹಂಕಾರವುಳ್ಳವಳಾಗಿದ್ದೀಯೆ. ನೀನು ಹೀಗೆಲ್ಲ ನನ್ನ ಎದುರಿನಲ್ಲಿ ಹೇಳಬೇಡ. ಮೂರು ಲೋಕಗಳಲ್ಲೆಲ್ಲ ಯಾವ ಪುರುಷನು ತಾನೆ ಶುಂಭ-ನಿಶುಂಭಾಸುರರ ಎದುರಿನಲ್ಲಿ ಸ್ಪರ್ಧೆಯಿಂದ ನಿಲ್ಲಬಲ್ಲನು.

೭೭. ಸಮಸ್ತ ದೇವತೆಗಳು ಶುಂಭಾಸುರನ ಕಡೆಯ ಇತರ ದೈತ್ಯ-ರೊಡನೆ ಯುದ್ಧಮಾಡಲು ಅವರ ಎದುರಿನಲ್ಲಿ ಕೂಡ ನಿಲ್ಲಲಾರರು. ಹೀಗಿರಲು ಏಕಾಕಿನಿಯೂ ಅನಾಥೆಯೂ ಆಗಿರುವ ಸ್ತ್ರೀಯಾದ ನಿನ್ನ ಪಾಡೇನು?

ಇನ್ದ್ರಾದ್ಯಾಃ ಸಕಲಾ ದೇವಾಸ್ತಸ್ಥುರ್ಯೇಷಾಂ ನ ಸಂಯುಗೇ ।
ಶುಮ್ಭಾದೀನಾಂ ಕಥಂ ತೇಷಾಂ ಸ್ತ್ರೀ ಪ್ರಯಾಸ್ಯಸಿ ಸಮ್ಮುಖಮ್ ॥೭೮॥

ಸಾ ತ್ವಂ ಗಚ್ಛ ಮಯೈವೋಕ್ತಾ ಪಾರ್ಶ್ವಂ ಶುಮ್ಭನಿಶುಮ್ಭಯೋಃ ।
ಕೇಶಾಕರ್ಷಣನಿರ್ಧೂತಗೌರವಾ ಮಾ ಗಮಿಷ್ಯಸಿ ॥೭೯॥

ಶ್ರೀ ದೇವ್ಯುವಾಚ :—

ಏವಮೇತದ್ಬಲೀ ಶುಮ್ಭೋ ನಿಶುಮ್ಭಶ್ಚಾತಿವೀರ್ಯವಾನ್ ।
ಕಿಂ ಕರೋಮಿ ಪ್ರತಿಜ್ಞಾ ಮೇ ಯದನಾಲೋಚಿತಾ ಪುರಾ ॥೮೦॥

---

೭೮. ಶುಂಭಾಸುರ ಮುಂತಾದ ವೀರ ರಾಕ್ಷಸರ ಮುಂದೆ ಯುದ್ಧಕ್ಕೆ ಇಂದ್ರನು ಮೊದಲಾದ ಸಮಸ್ತ ದೇವತೆಗಳು ನಿಲ್ಲಲಾರದವರಾದರು. ಅಬಲೆಯಾದ ನೀನು ಅವರ ಸಂಮುಖದಲ್ಲಿ ಯುದ್ಧಕ್ಕೆ ನಿಲ್ಲುತ್ತೀಯಾ ?

೭೯. ಹೀಗೆಲ್ಲ ನಡೆಯದಿರುವ ಪ್ರತಿಜ್ಞೆಯನ್ನು ಕೈಗೊಂಡಿರುವ ನೀನು ನನ್ನ ಮಾತಿನಂತೆ ಶುಂಭ-ನಿಶುಂಭ ದೈತ್ಯರ ಬಳಿಗೆ ಹೋಗಿ ಸೇರು. ನನ್ನ ಉಪದೇಶವನ್ನು ನೀನು ಅಂಗೀಕರಿಸಿದರೆ ಮುಡಿಹಿಡಿದೆಳೆಸಿಕೊಳ್ಳುವುದರಿಂದ ಗೌರವವನ್ನು ಕಳೆದುಕೊಂಡು ಹೋದಂತೆ ಆಗುವುದಿಲ್ಲ.

ದೇವಿಯು ಮತ್ತೆ ಹೀಗೆಂದಳು :—

೮೦. ದೂತನೇ ! ನಿನ್ನ ಮಾತು ಒಪ್ಪುವಂತಹುದು. ಶುಂಭಾಸುರನು ಬಲಿಷ್ಠನಹುದು. ನಿಶುಂಭಾಸುರನು ಹಾಗೆಯೆ ಅತಿವೀರ್ಯವಂತನು ನಿಜ. ನಾನೇನು ಮಾಡಲಿ. ಹಿಂದೆ ನಾನು ಇದನ್ನೆಲ್ಲ ಯೋಚಿಸದೆ ಪ್ರತಿಜ್ಞೆಯನ್ನು ಕೈಗೊಂಡೆನಲ್ಲ.

ಸ ತ್ವಂ ಗಚ್ಛ ಮಯೋಕ್ತಂ ತೇ ಯದೇತತ್ಸರ್ವಮಾದೃತಃ ।
ತದಾಚಕ್ಷ್ವಾಸುರೇನ್ದ್ರಾಯ ಸ ಚ ಯುಕ್ತಂ ಕರೋತು ತತ್ ॥೮೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ದ್ವ್ಯಶೀತಿತಮೋಽಧ್ಯಾಯಃ

---

೮೧. ಆದ್ದರಿಂದ ಈಗ ದೂತನ ಕೆಲಸವನ್ನು ನಿರ್ವಹಿಸಿದ ನೀನು ಇಲ್ಲಿಂದ ಹೊರಡು. ನಾನು ಹೇಳಿದುದನ್ನೆಲ್ಲ ಆದರದಿಂದ ಅಸುರೇಂದ್ರನಾದ ಶುಂಭಾಸುರನಿಗೆ ಹೇಳು. ಮುಂದೆ ಯುಕ್ತತೋರಿದುದನ್ನು ಅಸುರರಾಜನು ಮಾಡಲಿ.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತೆರಡನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರ್ಯಶೀತಿತಮೋऽಧ್ಯಾಯಃ

(ಧೂಮ್ರಲೋಚನವಧಃ)

ಋಷಿರುವಾಚ :—

ಇತ್ಯಾಕರ್ಣ್ಯ ವಚೋ ದೇವ್ಯಾಃ ಸ ದೂತೋऽಮರ್ಷಪೂರಿತಃ ।
ಸಮಾಚಷ್ಟ ಸಮಾಗಮ್ಯ ದೈತ್ಯರಾಜಾಯ ವಿಸ್ತರಾತ್ ॥೧॥

ತಸ್ಯ ದೂತಸ್ಯ ತದ್ವಾಕ್ಯಮಾಕರ್ಣ್ಯಾಸುರರಾಟ್ತತಃ ।
ಸಕ್ರೋಧಃ ಪ್ರಾಹ ದೈತ್ಯಾನಾಮಧಿಪಂ ಧೂಮ್ರಲೋಚನಮ್ ॥೨॥

ಎಂಭತ್ತಮೂರನೆಯ ಅಧ್ಯಾಯ

ಋಷಿಯು ಹೇಳಿದನು :—

೧. ಸುಗ್ರೀವನೆಂಬ ಆ 'ದೂತನು ದೇವಿಯು ಆಡಿದ ಈ ಮಾತನ್ನು ಕೇಳಿ ತಾನೇ ಅಸಹನೆ–ಕೋಪಗಳ ಆವೇಶಹೊಂದಿದವನಾಗಿ ಹಿಂದಕ್ಕೆ ಬಂದು ಅಸುರರಾಜನಿಗೆ ವಿಸ್ತಾರವಾಗಿ ಎಲ್ಲವನ್ನೂ ನಿವೇದಿಸಿದನು.

೨. ತರುವಾಯ ದೈತ್ಯರಾಜನಾದ ಶುಂಭಾಸುರನು ಆ ದೂತನ ಎಲ್ಲ ಮಾತನ್ನು ಕೇಳಿ ಕೋಪಾವೇಶವುಳ್ಳವನಾಗಿ ಅನೇಕ ದೈತ್ಯಗಣಕ್ಕೆ ಪ್ರಭುವಾದ ಧೂಮ್ರಲೋಚನನೆಂಬ ಅಸುರನಿಗೆ ಹೇಳಿದನು.

ಹೇ ಧೂಮ್ರಲೋಚನಾಶು ತ್ವಂ ಸ್ವಸೈನ್ಯಪರಿವಾರಿತಃ ।
ತಾಮಾನಯ ಬಲಾದ್ದುಷ್ಟಾಂ ಕೇಶಾಕರ್ಷಣವಿಹ್ವಲಾಮ್ ॥೩॥

ತತ್ಪರಿತ್ರಾಣದಃ ಕಶ್ಚಿದ್ಯದಿ ವೋತ್ತಿಷ್ಠತೇ ಪರಃ ।
ಸ ಹನ್ತವ್ಯೋಽಮರೋ ವಾಪಿ ಯಕ್ಷೋ ಗನ್ಧರ್ವ ಏವ ವಾ ॥೪॥

ಋಷಿರುವಾಚ :—

ತೇನಾಜ್ಞಪ್ತಸ್ತತಃ ಶೀಘ್ರಂ ಸ ದೈತ್ಯೋ ಧೂಮ್ರಲೋಚನಃ ।
ವೃತಃ ಷಷ್ಟ್ಯಾ ಸಹಸ್ರಾಣಾಮಸುರಾಣಾಂ ದ್ರುತಂ ಯಯೌ ॥೫॥

ಸ ದೃಷ್ಟ್ವಾ ತಾಂ ತತೋ ದೇವೀಂ ತುಹಿನಾಚಲಸಂಸ್ಥಿತಾಮ್ ।
ಜಗಾದೋಚ್ಚೈಃ ಪ್ರಯಾಹೀತಿ ಮೂಲಂ ಶುಮ್ಭನಿಶುಮ್ಭಯೋಃ ॥೬॥

---

೩. ಎಲೈ, ಧೂಮ್ರಲೋಚನನೇ! ನೀನು ನಿನ್ನ ಸೈನ್ಯಪರಿವಾರದಿಂದ ಕೂಡಿ ಆ ದುಷ್ಟಳಾದ ನಾರಿಯನ್ನು ಮುಡಿಹಿಡಿದೆಳೆದುಕೊಂಡು ಅಗೌರವ-ಪಡಿಸುತ್ತ ಬೇಗ ಇಲ್ಲಿಗೆ ಕರೆದುಕೊಂಡು ಬಾ.

೪. ನೀನು ಆಕೆಯನ್ನು ಬಲಾತ್ಕಾರದಿಂದ ಎಳೆದು ತರುವಾಗ ಅವಳ ರಕ್ಷಣೆಗಾಗಿ ಬೇರೊಬ್ಬನು ಒಂದು ವೇಳೆ ಎದ್ದು ಬಂದರೆ ಅವನು ಅಮರ, ಯಕ್ಷ, ಗಂಧರ್ವ ಯಾರಾಗಿದ್ದರೂ ಅವನನ್ನು ಅಲ್ಲಿಯೆ ವಧಿಸತಕ್ಕದ್ದು.

ಋಷಿಯು ಹೀಗೆಂದನು :—

೫. ತರುವಾಯ ಶುಂಭಾಸುರನಿಂದ ಆಜ್ಞಾಪಿಸಲ್ಪಟ್ಟು ಧೂಮ್ರ-ಲೋಚನನೆಂಬ ದೈತ್ಯನು ಅರವತ್ತು ಸಹಸ್ರ ಸಂಖ್ಯೆಯ ರಾಕ್ಷಸ ಸೈನ್ಯ ಪರಿವಾರದೊಡನೆ ಬೇಗ ದೇವಿಯ ಬಳಿಗೆ ಹೋದನು.

೬. ಅನಂತರದಲ್ಲಿ ಧೂಮ್ರಲೋಚನಾಸುರನು ಹಿಮಾಚಲದ ಪ್ರಾಂತ-ದಲ್ಲಿದ್ದ ಆ ದೇವಿಯನ್ನು ನೋಡಿ "ಶುಂಭ-ನಿಶುಂಭ ಅಸುರರ ಪಾದದಡಿಗೆ ಬೇಗ ನಡೆ" ಎಂದು ಗಟ್ಟಿಯಾಗಿ ಗರ್ಜಿಸಿ ಹೇಳಿದನು.

ನ ಚೇತ್ಪ್ರೀತ್ಯಾದ್ಯ ಭವತೀ ಮದ್ಭರ್ತಾರಮುಪೈಷ್ಯತಿ ।
ತತೋ ಬಲಾನ್ನಯಾಮ್ಯೇಷ ಕೇಶಾಕರ್ಷಣವಿಹ್ವಲಾಮ್ ॥೭॥

ಶ್ರೀ ದೇವ್ಯುವಾಚ :—

ದೈತ್ಯೇಶ್ವರೇಣ ಪ್ರಹಿತೋ ಬಲವಾನ್ ಬಲಸಂಯುತಃ ।
ಬಲಾನ್ನಯಸಿ ಮಾಮೇವಂ ತತಃ ಕಿಂ ತೇ ಕರೋಮ್ಯಹಮ್ ॥೮॥

ಋಷಿರುವಾಚ :—

ಇತ್ಯುಕ್ತಃ ಸೋಽಭ್ಯಧಾವತ್ತಾಮಸುರೋ ಧೂಮ್ರಲೋಚನಃ ।
ಹುಙ್ಕಾರೇಣೈವ ತಂ ಭಸ್ಮ ಸಾ ಚಕಾರಾಮ್ಬಿಕಾ ತತಃ ॥೯॥

ಅಥ ಕ್ರುದ್ಧಂ ಮಹಾಸೈನ್ಯಮಸುರಾಣಾಂ ತಥಾಮ್ಬಿಕಾ ।
ವವರ್ಷ ಸಾಯಕೈಸ್ತೀಕ್ಷ್ಣೈಸ್ತಥಾ ಶಕ್ತಿಪರಶ್ವಧೈಃ ॥೧೦॥

---

೭. ನೀನು ನನ್ನ ಸ್ವಾಮಿಯ ಬಳಿಗೆ ಈಗ ಪ್ರೇಮದಿಂದ ಹೋಗಿ ಸೇರದಿದ್ದರೆ ಆಗ ನಾನು ಬಲಾತ್ಕಾರದಿಂದ ಕೂದಲನ್ನು ಹಿಡಿದು ಎಳೆದು ಅವಮಾನಪೂರ್ವಕವಾಗಿ ಕರೆದೊಯ್ಯುವೆನು.

ದೇವಿಯು ಇಂತೆಂದಳು :—

೮. ದೈತ್ಯರಾಜನಿಂದ ಕಳುಹಿಸಲ್ಪಟ್ಟವನು ನೀನು. ಮತ್ತು ಬಲಿಷ್ಠನೂ ಸೈನ್ಯಪರಿವಾರ ಸಮೇತನೂ ಆಗಿದ್ದೀಯೆ. ಇಂತಹ ನೀನು ಬಲಾತ್ಕಾರದಿಂದ ನನ್ನನ್ನು ಎಳೆದೊಯ್ಯಲು ಸಿದ್ಧನಾಗಿದ್ದೀಯೆ. ಹೀಗಿರಲು ನಾನೇನು ನಿನಗೆ ಪ್ರತೀಕಾರಮಾಡುವೆ ?

ಋಷಿಯು ಹೇಳಿದನು :—

೯. ದೇವಿಯಿಂದ ಈ ರೀತಿಯಾಗಿ ನುಡಿಯಲ್ಪಟ್ಟ ಧೂಮ್ರಲೋಚನಾಸುರನು ಕೂಡಲೆ ದೇವಿಯ ಮೇಲೆ ಎರಗಲು ಓಡಿಹೋದನು. ಅಷ್ಟರಲ್ಲಿ ದೇವಿಯು ಹುಂಕಾರದಿಂದ ಆ ಅಸುರನನ್ನು ಭಸ್ಮಮಾಡಿಬಿಟ್ಟಳು.

೧೦. ಅನಂತರದಲ್ಲಿ ಕೋಪದಿಂದ ಮೇಲೆ ಧುಮುಕಿದ ಮಹತ್ತಾದ ಅಸುರ ಸೈನ್ಯವನ್ನು ಜಗದಂಬಿಕೆಯಾದ ದೇವಿಯು ತೀಕ್ಷ್ಣವಾದ ಬಾಣ, ಶಕ್ತ್ಯಾಯುಧ ಮತ್ತು ಪರಶು ಮುಂತಾದ ಆಯುಧಗಳಿಂದ ಮುಚ್ಚಿಹಾಕಿದಳು.

ತತೋ ಧುತಸಟಃ ಕೋಪಾತ್ಕೃತ್ವಾ ನಾದಂ ಸುಭೈರವಮ್ ।
ಪಪಾತಾಸುರಸೇನಾಯಾಂ ಸಿಂಹೋ ದೇವ್ಯಾಸ್ತು ವಾಹನಃ ॥೧೧॥

ಕಾಂಶ್ಚಿತ್ಕರಪ್ರಹಾರೇಣ ದೈತ್ಯಾನಾಸ್ಯೇನ ಚಾಪರಾನ್ ।
ಆಕ್ರಮ್ಯ ಚರಣೇನಾನ್ಯಾನ್ನಿಜಘಾನ ಮಹಾಸುರಾನ್ ॥೧೨॥

ಕೇಷಾಂ ಚಿತ್ಪಾಟಯಾಮಾಸ ನಖೈಃ ಕೋಷ್ಠಾನಿ ಕೇಸರೀ ।
ತಥಾ ತಲಪ್ರಹಾರೇಣ ಶಿರಾಂಸಿ ಕೃತವಾನ್ ಪೃಥಕ್ ॥೧೩॥

ವಿಚ್ಛಿನ್ನಬಾಹುಶಿರಸಃ ಕೃತಾಸ್ತೇನ ತಥಾಪರೇ ।
ಪಪೌ ಚ ರುಧಿರಂ ಕೋಷ್ಠಾದನ್ಯೇಷಾಂ ಧುತಕೇಸರಃ ॥೧೪॥

ಕ್ಷಣೇನ ತದ್ಬಲಂ ಸರ್ವಂ ಕ್ಷಯಂ ನೀತಂ ಮಹಾತ್ಮನಾ ।
ತೇನ ಕೇಸರಿಣಾ ದೇವ್ಯಾ ವಾಹನೇನಾತಿಕೋಪಿನಾ ॥೧೫॥

---

೧೧. ತರುವಾಯ ದೇವಿಯ ವಾಹನವಾಗಿದ್ದ ಸಿಂಹವು ಕೋಪದಿಂದ ತನ್ನ ಕೇಸರಗಳನ್ನು ಕೊಡವಿಕೊಂಡು ಭಯಂಕರವಾಗಿ ಗರ್ಜನೆಯನ್ನು ಮಾಡುತ್ತ ಅಸುರಸೈನ್ಯದ ನಡುವೆ ಧುಮುಕಿತು.

೧೨. ಮತ್ತು ಆ ಸಿಂಹವು ಕೆಲವರು ದೈತ್ಯರನ್ನು ಕೈಯ ಏಟಿನಿಂದ ಮತ್ತೆ ಕೆಲವರನ್ನು ಬಾಯಿಯಲ್ಲಿ ಹಾಕಿಕೊಂಡು ಅಗಿಯುವುದರಿಂದ ಮತ್ತು ಇನ್ನು ಕೆಲವರನ್ನು ಕಾಲಿನಿಂದ ತುಳಿಯುವುದರಿಂದ ಕೊಂದುಹಾಕಿತು.

೧೩. ಮತ್ತು ಆ ಸಿಂಹವು ಕೆಲವು ಮಂದಿ ರಾಕ್ಷಸರ ಹೊಟ್ಟೆಗಳನ್ನು ಉಗುರುಗಳಿಂದ ಬಗೆಯಿತು. ಮತ್ತು ಇನ್ನು ಕೆಲವರನ್ನು ಕೈಯಿಂದ ಪ್ರಹರಿಸಿ ತಲೆಗಳನ್ನು ಬೇರ್ಪಡಿಸಿತು.

೧೪. ಮತ್ತೆ ಕೆಲವು ಮಂದಿ ರಾಕ್ಷಸರು ಕತ್ತರಿಸಲ್ಪಟ್ಟ ಬಾಹು-ಶಿರ ಮುಂತಾದ ಅವಯವವುಳ್ಳವರಾದರು. ಮತ್ತು ಹಾಗೆಯೆ ಸಿಂಹವು ಕೇಸರಗಳನ್ನು ಕೊಡವಿಕೊಳ್ಳುತ್ತ ಕೆಲವರ ಹೊಟ್ಟೆಯಿಂದ ರಕ್ತವನ್ನು ಹೀರಿ ಕುಡಿಯಿತು.

೧೫. ಹೆಚ್ಚಾದ ಮಾಹಾತ್ಮ್ಯವುಳ್ಳದ್ದೂ, ಅತಿಕೋಪಗೊಂಡಿರುವುದೂ ಆದ ದೇವಿಯ ವಾಹನವಾದ ಸಿಂಹದಿಂದ ನಿಮಿಷಮಾತ್ರದಲ್ಲಿ ಆ ಅಸುರರ ಎಲ್ಲ ಸೈನ್ಯವು ಧ್ವಂಸಗೊಳಿಸಲ್ಪಟ್ಟಿತು.

ಶ್ರುತ್ವಾ ತಮಸುರಂ ದೇವ್ಯಾ ನಿಹತಂ ಧೂಮ್ರಲೋಚನಮ್ ।
ಬಲಂ ಚ ಕ್ಷಯಿತಂ ಕೃತ್ಸ್ನಂ ದೇವೀಕೇಸರಿಣಾ ತತಃ ॥೧೬॥

ಚುಕೋಪ ದೈತ್ಯಾಧಿಪತಿಃ ಶುಮ್ಭಃ ಪ್ರಸ್ಫುರಿತಾಧರಃ ।
ಆಜ್ಞಾಪಯಾಮಾಸ ಚ ತೌ ಚಣ್ಡಮುಣ್ಡೌ ಮಹಾಸುರೌ ॥೧೭॥

ಹೇ ಚಣ್ಡ ಹೇ ಮುಣ್ಡ ಬಲೈರ್ಬಹುಭಿಃ ಪರಿವಾರಿತೌ ।
ಗಚ್ಛತಂ ತತ್ರ ಗತ್ವಾ ಚ ಸಾ ಸಮಾನೀಯತಾಂ ಲಘು ॥೧೮॥

ಕೇಶೇಷ್ವಾಕೃಷ್ಯ ಬದ್ಧ್ವಾ ವಾ ಯದಿ ವಃ ಸಂಶಯೋ ಯುಧಿ ।
ತದಾಶೇಷಾಯುಧೈಃ ಸರ್ವೈರಸುರೈರ್ವಿನಿಹನ್ಯತಾಮ್ ॥೧೯॥

---

೧೬. ಇಷ್ಟರಲ್ಲಿ ದೈತ್ಯರಾಜನಾದ ಶುಂಭಾಸುರನು ದೇವಿಯಿಂದ ಧೂಮ್ರಲೋಚನ ದೈತ್ಯನು ಹತನಾದುವನ್ನೂ ಮತ್ತು ದೇವಿಯ ಸಿಂಹದಿಂದ ಸಮಸ್ತ ಅಸುರ ಸೈನ್ಯವು ಕ್ಷಯಗೊಳಿಸಲ್ಪಟ್ಟಿರುವುದನ್ನೂ ಕೇಳಿದನು.

೧೭. ಆಗ ದೈತ್ಯೇಶ್ವರನಾದ ಶುಂಭಾಸುರನು ಕೋಪತಾಳಿದನು. ಮತ್ತು ಕೋಪದಿಂದ ಚಲಿಸುವ ಕೆಳತುಟಿಯುಳ್ಳವನಾಗಿ ಚಂಡ-ಮುಂಡರೆಂಬ ಇಬ್ಬರು ದೈತ್ಯರನ್ನು ಕರೆದು ಹೀಗೆ ಆಜ್ಞಾಪಿಸಿದನು.

೧೮. ಎಲೈ, ಚಂಡಾಸುರನೇ! ಎಲೈ, ಮುಂಡಾಸುರನೇ! ಸಮಸ್ತ ಸೈನ್ಯದೊಡಗೂಡಿ ನೀವು ಈಗಲೇ ಅಲ್ಲಿಗೆ ಹೋಗಿರಿ. ಮತ್ತು ದೇವಿಯ ಬಳಿಗೆ ಹೋಗಿ ಅವಳನ್ನು ಬೇಗ ಇಲ್ಲಿಗೆ ಕರೆದುಕೊಂಡು ಬನ್ನಿ.

೧೯. ನೀವು ಆಕೆಯನ್ನು ಕೂದಲು ಹಿಡಿದು, ಅಥವಾ ಹಗ್ಗಗಳಿಂದ ಕಟ್ಟಿ ಬಿಗಿದು ಕರೆತನ್ನಿರಿ. ಒಂದು ವೇಳೆ ಎಳೆತರುವ ವಿಷಯದಲ್ಲಿ ನಿಮಗೆ ಸಂಶಯವುಂಟಾದರೆ ಯುದ್ಧಮಾಡಿ ಸರ್ವ ಅಸುರರೂ ಸೇರಿ ಎಲ್ಲ ಆಯುಧಗಳಿಂದ ಅವಳು ವಶೀಕರಿಸಲ್ಪಡಲಿ.

ತಸ್ಯಾಂ ಹತಾಯಾಂ ದುಷ್ಟಾಯಾಂ ಸಿಹ್ಮೇ ಚ ವಿನಿಪಾತಿತೇ ।
ಶೀಘ್ರಮಾಗಮ್ಯತಾಂ ಬದ್ಧ್ವಾ ಗೃಹೀತ್ವಾ ತಾಮಥಾಮ್ಬಿಕಾಮ್ ॥೨೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ ಧೂಮ್ರಲೋಚನವಧೋ ನಾಮ ತ್ರ್ಯಶೀತಿತಮೋಽಧ್ಯಾಯಃ

---

೨೦. ಅನಂತರವಲ್ಲಿ ದುಷ್ಟಳಾದ ಅಂಗನೆಯು ಹೊಡೆದು-ಬಡೆದು ಮರಗೊಳಿಸಲ್ಪಡಲಾಗಿ ಮತ್ತು ಸಿಂಹವು ವಧಿಸಲ್ಪಡಲಾಗಿ ಆ ಅಂಬಿಕೆಯನ್ನು ಕಟ್ಟಿಹಿಡಿದು ಬೇಗ ಇಲ್ಲಿಗೆ ಕರೆತನ್ನಿರಿ.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತಮೂರನೆಯ ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಚತುರಶೀತಿತಮೋಽಧ್ಯಾಯಃ

ಋಷಿರುವಾಚ :—

ಆಜ್ಞಪ್ತಾಸ್ತೇ ತತೋ ದೈತ್ಯಾಶ್ಚಣ್ಡಮುಣ್ಡಪುರೋಗಮಾಃ ।
ಚತುರಙ್ಗಬಲೋಪೇತಾ ಯಯುರಭ್ಯುದ್ಯತಾಯುಧಾಃ ॥೧॥

ದದೃಶುಸ್ತೇ ತತೋ ದೇವೀಮೀಷದ್ಧಾಸಾಂ ವ್ಯವಸ್ಥಿತಾಮ್ ।
ಸಿಹ್ಮಸ್ಯೋಪರಿ ಶೈಲೇನ್ದ್ರಶೃಙ್ಗೇ ಮಹತಿ ಕಾಞ್ಚನೇ ॥೨॥

ಎಂಭತ್ತನಾಲ್ಕನೆಯ ಅಧ್ಯಾಯ

ಸುಮೇಧ ಋಷಿಯು ಇಂತೆಂದನು :—

೧. ತರುವಾಯ ಚಂಡ-ಮುಂಡ ಮುಂತಾದ ಅನೇಕ ದೈತ್ಯರು ಶುಂಭಾಸುರನಿಂದ ಆಜ್ಞೆಪಡೆದವರಾಗಿ ಚತುರಂಗ ಬಲಸಮೇತರೂ ಮತ್ತು ಎತ್ತಿಹಿಡಿದ ಆಯುಧವುಳ್ಳವರೂ ಆಗಿ ದೇವಿಯಿದ್ದ ಸ್ಥಳಕ್ಕೆ ಧಾವಿಸಿದರು.

೨. ಅನಂತರದಲ್ಲಿ ಸುವರ್ಣಮಯವಾದ, ದೊಡ್ಡ ಹಿಮವತ್ಪರ್ವತದ ಶಿಖರದಲ್ಲಿ ಸಿಂಹವಾಹನವನ್ನು ಏರಿ ಕುಳಿತುಕೊಂಡವಳೂ, ಸ್ವಲ್ಪ ನಗುಮುಖ-ದಿಂದ ಕೂಡಿದವಳೂ ಮತ್ತು ಹಾಗೆಯೆ ದೃಢಸಂಕಲ್ಪದಿಂದ ಅಚಲವಾಗಿ ನಿಂತವಳೂ ಆದ ದೇವಿಯನ್ನು ಕಂಡರು.

ತೇ ದೃಷ್ಟ್ವಾ ತಾಂ ಸಮಾದಾತುಮುದ್ಯಮಂ ಚಕ್ರುರುದ್ಯತಾಃ ।
ಆಕೃಷ್ಟಚಾಪಾಸಿಧರಾಸ್ತಥಾನ್ಯೇ ತತ್ಸಮೀಪಗಾಃ ॥೩॥

ತತಃ ಕೋಪಂ ಚಕಾರೋಚ್ಚೈರಂಬಿಕಾ ತಾನರೀನ್ಪ್ರತಿ ।
ಕೋಪೇನ ಚಾಸ್ಯಾ ವದನಂ ಮಷೀವರ್ಣಮಭೂತ್ತದಾ ॥೪॥

ಭ್ರುಕುಟೀಕುಟಿಲಾತ್ತಸ್ಯಾ ಲಲಾಟಫಲಕಾದ್ದ್ರುತಮ್ ।
ಕಾಲೀಕರಾಲವದನಾ ವಿನಿಷ್ಕ್ರಾಂತಾಸಿಪಾಶಿನೀ ॥೫॥

ವಿಚಿತ್ರಖಟ್ವಾಙ್ಗಧರಾ ನರಮಾಲಾವಿಭೂಷಣಾ ।
ದ್ವೀಪಿಚರ್ಮಪರೀಧಾನಾ ಶುಷ್ಕಮಾಂಸಾತಿಭೈರವಾ ॥೬॥

---

೩. ಚಂಡ-ಮುಂಡ ಮುಂತಾದ ಅಸುರರು ಸಿದ್ಧರಾಗಿ ಬಂದು ದೇವಿಯನ್ನು ನೋಡಿ ಅವಳನ್ನು ಎತ್ತಿಕೊಂಡು ಹೋಗಲು ಸೆಳೆದ ಬಿಲ್ಲು-ಬಾಣ-ಕತ್ತಿ ಮುಂತಾದ ಆಯುಧವುಳ್ಳವರೂ ಕೆಲವರು ದೇವಿಯ ಹತ್ತಿರಕ್ಕೆ ಹೋದವರೂ ಆಗಿ ಯತ್ನಮಾಡಲು ಆರಂಭಿಸಿದರು.

೪. ಹೀಗೆ ಅಸುರರು ಮುತ್ತಿಗೆ ಹಾಕಿಕೊಂಡಾಗ ಚಂಡಿಕಾಂಬಿಕೆಯು ಆ ಅಸುರರ ಮೇಲೆ ಅಧಿಕವಾಗಿ ಕೋಪಹೊಂದಿದಳು. ಆಗ ಮಿತಿಮೀರಿದ ಕೋಪದಿಂದ ಅಂಬಿಕೆಯ ಮುಖವು ಮಷಿಯಂತೆ ಕಪ್ಪಾಗಿಹೋಯಿತು.

೫. ಹುಬ್ಬು ಗಂಟಿಕ್ಕಿದುದರಿಂದ ವಕ್ರವಾದ, ವಿಶಾಲವಾದ ದೇವಿಯ ಲಲಾಟಭಾಗದಿಂದ ಕತ್ತಿ-ಪಾಶಗಳನ್ನು ಧರಿಸಿದವಳೂ ಮತ್ತು ಭಯಂಕರವಾದ ಮುಖವುಳ್ಳವಳೂ ಆದ ಕಾಳೀದೇವಿಯು ಆವಿರ್ಭವಿಸಿದಳು.

೬. ಆ ಕಾಲಿಕಾದೇವಿಯು ವಿಚಿತ್ರವಾದ ಖಟ್ವಾಂಗ ಆಯುಧವನ್ನು ಧರಿಸಿದವಳೂ, ನರರ ಮುಂಡಮಾಲೆಯನ್ನು ಧರಿಸಿದವಳೂ, ವ್ಯಾಘ್ರಚರ್ಮಾಂಬರವನ್ನು ಧರಿಸಿದವಳೂ ಆಗಿದ್ದಳು.

ಅತಿವಿಸ್ತಾರವದನಾ ಜಿಹ್ವಾಲಲನಭೀಷಣಾ ।
ನಿಮಗ್ನಾರಕ್ತನಯನಾ ನಾದಾಪೂರಿತದಿಙ್ಮುಖಾ ॥೭॥

ಸಾ ವೇಗೇನಾಭಿಪತಿತಾ ಘಾತಯನ್ತೀ ಮಹಾಸುರಾನ್ ।
ಸೈನ್ಯೇ ತತ್ರ ಸುರಾರೀಣಾಮಭಕ್ಷಯತ ತದ್ಬಲಮ್ ॥೮॥

ಪಾರ್ಷ್ಣಿಗ್ರಾಹಾಙ್ಕುಶಗ್ರಾಹಯೋಧಘಣ್ಟಾಸಮನ್ವಿತಾನ್ ।
ಸಮಾದಾಯೈಕಹಸ್ತೇನ ಮುಖೇ ಚಿಕ್ಷೇಪ ವಾರಣಾನ್ ॥೯॥

ತಥೈವ ಯೋಧಂ ತುರಗೈ ರಥಂ ಸಾರಥಿನಾ ಸಹ ।
ನಿಕ್ಷಿಪ್ಯ ವಕ್ತ್ರೇ ದಶನೈಶ್ಚರ್ವಯನ್ತ್ಯತಿಭೈರವಮ್ ॥೧೦॥

---

೭. ಮತ್ತು ಬಹಳ ವಿಸ್ತಾರವಾದ ಮುಖವುಳ್ಳವಳೂ, ನಾಲಿಗೆಯ ಚಂಚಲತೆಯಿಂದ ಭಯಂಕರಳೂ, ಹೆಚ್ಚಾಗಿ ಒಳಗೆ ಸೇರಿಕೊಂಡ ಕೆಂಪುಕಣ್ಣು-ಗಳುಳ್ಳವಳೂ ಮತ್ತು ಅಟ್ಟಹಾಸ ಧ್ವನಿಯಿಂದ ವ್ಯಾಪಿಸಿದ ದಿಗಂತವುಳ್ಳವಳೂ ಆಗಿದ್ದಳು.

೮. ಆ ಕಾಲಿಕಾದೇವಿಯು ವೇಗದಿಂದ ಎದುರು ಬಿದ್ದು ದೊಡ್ಡ ದೊಡ್ಡ ರಾಕ್ಷಸರನ್ನು ವಧಿಸುತ್ತ ದೇವಶತ್ರುಗಳ ಸೈನ್ಯದ ಮಧ್ಯಕ್ಕೆ ನುಗ್ಗಿ ಆ ಸೈನ್ಯವನ್ನು ನುಂಗಿ ಹಾಕಿದಳು.

೯. ಕಾಲಿಕಾದೇವಿಯು ಬೆಂಬಲಿಗರು, ಅಂಕುಶವನ್ನು ಹಿಡಿದ ಮಾವ-ಟಿಗರು, ಶಿಪಾಯಿಗಳು ಮತ್ತು ಘಂಟೆ ಮುಂತಾದ ಪರಿವಾರ ಸಮೇತವಾದ ಆನೆಗಳನ್ನು ಒಂದು ಕೈಯ್ಯಲ್ಲಿ ಎತ್ತಿ ಬಾಯಿಯಲ್ಲಿ ಹಾಕಿಕೊಂಡು ನುಂಗಿದಳು.

೧೦. ಕಾಳೀದೇವಿಯು ಹಾಗೆಯೆ ಕುದುರೆಗಳೊಡನೆ ಶಿಪಾಯಿಗಳನ್ನೂ ಸಾರಥಿಗಳೊಡನೆ ರಥಗಳನ್ನೂ ಬಾಯಿಗೆ ಹಾಕಿಕೊಂಡು ಬಲು ಭಯಂಕರವಾಗಿ ಹಲ್ಲುಗಳಿಂದ ಅಗಿದು ಹಾಕಿದಳು.

ಏಕಂ ಜಗ್ರಾಹ ಕೇಶೇಷು ಗ್ರೀವಾಯಾಮಥ ಚಾಪರಮ್ ।
ಪಾದೇನಾಕ್ರಮ್ಯ ಚೈವಾನ್ಯಮುರಸಾನ್ಯಮಪೋಥಯತ್ ॥೧೧॥

ತೈರ್ಮುಕ್ತಾನಿ ಚ ಶಸ್ತ್ರಾಣಿ ಮಹಾಸ್ತ್ರಾಣಿ ತಥಾಸುರೈಃ ।
ಮುಖೇನ ಜಗ್ರಾಹ ರುಷಾ ದಶನೈರ್ಮಥಿತಾನ್ಯಪಿ ॥೧೨॥

ಬಲಿನಾಂ ತದ್ಬಲಂ ಸರ್ವಮಸುರಾಣಾಂ ದುರಾತ್ಮನಾಮ್ ।
ಮಮರ್ದಾಭಕ್ಷಯಚ್ಚಾನ್ಯಾನನ್ಯಾಂಶ್ಚಾತಾಡಯತ್ತಥಾ ॥೧೩॥

ಅಸಿನಾ ನಿಹತಾಃ ಕೇಚಿತ್ಕೇಚಿತ್ಖಟ್ವಾಙ್ಗತಾಡಿತಾಃ ।
ಜಗ್ಮುರ್ವಿನಾಶಮಸುರಾ ದನ್ತಾಗ್ರಾಭಿಹತಾ ರಣೇ ॥೧೪॥

---

೧೧. ಮತ್ತು ಆ ಕಾಲಿಕಾದೇವಿಯು ಅಸುರ ಸೈನ್ಯದಲ್ಲಿ ಒಬ್ಬನನ್ನು ಕೂದಲು ಹಿಡಿದೆತ್ತಿದಳು. ಮತ್ತೊಬ್ಬನನ್ನು ಕತ್ತಿನಲ್ಲಿ ಹಿಡಿದಳು. ಇನ್ನೊಬ್ಬನನ್ನು ಕಾಲಿನಿಂದ ಮೆಟ್ಟಿಹಿಡಿದಳು. ಹಾಗು ಇನ್ನೊಬ್ಬನನ್ನು ಎದೆಯಲ್ಲಿ ಅಪ್ಪಳಿಸಿದಳು.

೧೨. ಆ ಅಸುರರಿಂದ ಪ್ರಯೋಗಿಸಲ್ಪಟ್ಟಿರುವ ಶಸ್ತ್ರ ಮತ್ತು ಮಂತ್ರಮಯವಾದ ಅಸ್ತ್ರಗಳನ್ನು ಆ ಕಾಲಿಕಾದೇವಿಯು ಕೋಪದಿಂದ ಕೂಡಿ ಬಾಯಿಯಿಂದ ಕಚ್ಚಿಹಿಡಿದು ಕೋರೆಹಲ್ಲುಗಳಿಂದ ಪುಡಿಮಾಡಿದಳು.

೧೩. ಆ ಕಾಳೀದೇವಿಯು ಬಲಿಷ್ಠರೂ ನೀಚಸ್ವಭಾವದವರೂ ಆದ ಆ ಅಸುರರ ಸೈನ್ಯದಲ್ಲಿ ಕೆಲವುಭಾಗವನ್ನು ಮರ್ದಿಸಿದಳು. ಕೆಲವರನ್ನು ತಿಂದುಹಾಕಿದಳು. ಇನ್ನು ಕೆಲವರನ್ನು ಪ್ರಹರಿಸಿದಳು. ಹೀಗೆ ಬಗೆಬಗೆಯಾಗಿ ಎಲ್ಲ ಸೈನ್ಯವನ್ನು ಸಂಹರಿಸತೊಡಗಿದಳು.

೧೪. ಹೀಗೆ ಕಾಳೀದೇವಿಯು ಮಾಡುತ್ತಿದ್ದ ಯುದ್ಧದಲ್ಲಿ ಕೆಲವರು ಅಸುರರು ಕತ್ತಿಯಿಂದ ಸತ್ತುಬಿದ್ದರು. ಮತ್ತೆ ಕೆಲವರು ಖಟ್ವಾಂಗ ಆಯುಧದಿಂದ ಪೀಡಿತರಾಗಿ ಬಿದ್ದರು. ಇನ್ನೂ ಕೆಲವರು ಕೋರೆಹಲ್ಲುಗಳ ಅಗ್ರದಿಂದ ಚುಚ್ಚಲ್ಪಟ್ಟವರಾಗಿ ನಾಶಹೊಂದಿದರು.

ಕ್ಷಣೇನ ತನ್ಮಹಾಸೈನ್ಯಮಸುರಾಣಾಂ ನಿಪಾತಿತಮ್ ।
ದೃಷ್ಟ್ವಾ ಚಣ್ಡೋಽಭಿದುದ್ರಾವ ತಾಂ ಕಾಲೀಮತಿಭೀಷಣಾಮ್ ॥೧೫॥

ಶರವರ್ಷೈರ್ಮಹಾಭೀಮೈರ್ಭೀಮಾಕ್ಷೀಂ ತಾಂ ಮಹಾಸುರಃ ।
ಛಾದಯಾಮಾಸ ಚಕ್ರೈಶ್ಚ ಮುಣ್ಡಕ್ಷಿಪ್ತೈಃ ಸಹಸ್ರಶಃ ॥೧೬॥

ತಾನಿ ಚಕ್ರಾಣ್ಯನೇಕಾನಿ ವಿಶಮಾನಾನಿ ತನ್ಮುಖಮ್ ।
ಬಭುರ್ಯಥಾರ್ಕಬಿಮ್ಬಾನಿ ಸುಬಹೂನಿ ಘನೋದರಮ್ ॥೧೭॥

ತತೋ ಜಹಾಸಾತಿರುಷಾ ಭೀಮಂ ಭೈರವನಾದಿನೀ ।
ಕಾಲೀ ಕರಾಲವಕ್ತ್ರಾನ್ತರ್ದುರ್ದರ್ಶದಶನೋಜ್ಜ್ವಲಾ ॥೧೮॥

---

೧೫. ಹೀಗೆ ಸ್ವಲ್ಪಹೊತ್ತಿನಲ್ಲಿ ಆ ರಾಕ್ಷಸರ ಭಾರಿಯಾದ ಸೈನ್ಯವು ಕಾಳಿಕಾದೇವಿಯಿಂದ ಸಂಹರಿಸಲ್ಪಟ್ಟಿರುವುದನ್ನು ಕಂಡು ಚಂಡಾಸುರನು ಅತಿಭಯಂಕರಳಾದ ಆ ಕಾಳಿಕಾದೇವಿಯನ್ನು ಎದುರಿಸಿ ಮುಂದೆ ಬಂದನು.

೧೬. ಆಗ ಮಹಾಸುರನಾದ ಚಂಡನು ಅತಿಭೀಷಣವಾದ ಬಾಣವೃಷ್ಟಿಯಿಂದ ಭಯಂಕರವಾದ ಕಣ್ಣುಗಳುಳ್ಳ ಕಾಲಿಕಾದೇವಿಯನ್ನು ಮುಚ್ಚಿಹಾಕಿದನು. ಮತ್ತು ಅನೇಕ ಮುಂಡಗಳನ್ನು ಕತ್ತರಿಸಿದ ಚಕ್ರಾಯುಧಗಳನ್ನು ಕಾಳಿಯ ಮೇಲೆ ಬಿಟ್ಟನು.

೧೭. ಚಂಡಾಸುರನು ಪ್ರಯೋಗಿಸಿದ ಅನೇಕ ಚಕ್ರಾಯುಧಗಳು ಕಾಳೀದೇವಿಯ ಮುಖವನ್ನು ಪ್ರವೇಶಿಸುವಾಗ ಅನೇಕ ಸೂರ್ಯಬಿಂಬಗಳು ಮೋಡಗಳ ನಡುವೆ ಹೊಕ್ಕಂತೆ ಕಾಣಿಸುತ್ತಿದ್ದುವು.

೧೮. ತರುವಾಯ ಭೀಷಣವಾದ ಗರ್ಜನವುಳ್ಳವಳೂ, ವಿಕಾರವಾದ ಮುಖದ ಒಳಭಾಗದಲ್ಲಿ ನೋಡಲಾಗದ ಹಾಗೆ ಭಯಂಕರವಾದ ಹಲ್ಲುಗಳಿಂದ ಉಜ್ವಲಳೂ ಆದ ಕಾಳೀದೇವಿಯು ಬಹಳ ಕೋಪದಿಂದ ಭಯವಾಗುವ ಹಾಗೆ ಅಟ್ಟಹಾಸಮಾಡಿದಳು.

ಉತ್ಥಾಯ ಚ ಮಹಾಸಿಹ್ಮಂ ದೇವೀ ಚಣ್ಡಮಧಾವತ ।
ಗೃಹೀತ್ವಾ ಚಾಸ್ಯ ಕೇಶೇಷು ಶಿರಸ್ತೇನಾಸಿನಾಚ್ಛಿನತ್ ॥೧೯॥

ಛಿನ್ನೇ ಶಿರಸಿ ದೈತ್ಯೇನ್ದ್ರಶ್ಚಕ್ರೇ ನಾದಂ ಸುಭೈರವಮ್ ।
ತೇನ ನಾದೇನ ಮಹತಾ ತ್ರಾಸಿತಂ ಭುವನತ್ರಯಮ್ ॥೨೦॥

ಅಥ ಮುಣ್ಡೋಽಭ್ಯಧಾವತ್ತಾಂ ದೃಷ್ಟ್ವಾ ಚಣ್ಡಂ ನಿಪಾತಿತಮ್ ।
ತಮಪ್ಯಪಾತಯದ್ಭೂಮೌ ಖಟ್ವಾಙ್ಗಾಭಿಹತಂ ರುಷಾ ॥೨೧॥

ಹತಶೇಷಂ ತತಃ ಸೈನ್ಯಂ ದೃಷ್ಟ್ವಾ ಚಣ್ಡಂ ನಿಪಾತಿತಮ್ ।
ಮುಣ್ಡಂ ಚ ಸುಮಹಾವೀರ್ಯಂ ದಿಶೋ ಭೇಜೇ ಭಯಾತುರಮ್ ॥೨೨॥

ಶಿರಶ್ಚಣ್ಡಸ್ಯ ಕಾಲೀ ಸಾ ಗೃಹೀತ್ವಾ ಮುಣ್ಡಮೇವ ಚ ।
ಪ್ರಾಹ ಪ್ರಚಣ್ಡಾಟ್ಟಹಾಸಮಿಶ್ರಮಭ್ಯೇತ್ಯ ಚಣ್ಡಿಕಾಮ್ ॥೨೩॥

---

೧೯. ಮತ್ತು ಕಾಲಿಕಾದೇವಿಯು ದೊಡ್ಡದಾದ ಕತ್ತಿಯನ್ನು ಎತ್ತಿಹಿಡಿದವಳಾಗಿ ಕೋಪದಿಂದ ಚಂಡಾಸುರನ ಹತ್ತಿರಕ್ಕೆ ಧಾವಿಸಿದಳು. ಮತ್ತು ಅವನ ಜುಟ್ಟನ್ನು ಹಿಡಿದು ಬಾಗಿಸಿ ಆ ಕತ್ತಿಯಿಂದ ಅವನ ಶಿರವನ್ನು ಕತ್ತರಿಸಿದಳು.

೨೦. ಹೀಗೆ ಕಾಲಿಯಿಂದ ಶಿರಶ್ಛೇದವಾಗುತ್ತಿರಲು ದೈತ್ಯರಲ್ಲಿ ಪ್ರಮುಖನಾದ ಚಂಡಾಸುರನು ಭಯಂಕರವಾಗಿ ಗರ್ಜನಮಾಡಿದನು. ಆ ಗರ್ಜನೆಯ ದೊಡ್ಡ ಧ್ವನಿಯಿಂದ ಮೂರು ಲೋಕಗಳು ಬೆದರಿದುವು.

೨೧. ಅನಂತರ ಮುಂಡಾಸುರನು ಚಂಡನು ವಧೆಯಾಗಿ ಬಿದ್ದುದನ್ನು ಕಂಡು ಆ ದೇವಿಯನ್ನು ಕೋಪದಿಂದ ಎದುರಿಸಲು ಹೋದನು. ಆಗ ದೇವಿಯು ಕೋಪದಿಂದ ಖಟ್ವಾಂಗ ಆಯುಧದಿಂದ ಹೊಡೆದು ಅವನನ್ನು ಕೊಂದು ಉರುಳಿಸಿದಳು.

೨೨. ಚಂಡ-ಮುಂಡರ ವಧವಾದ ಬಳಿಕ ಹತರಾಗಿ ಬಿದ್ದವರ ಹೊರತು ಉಳಿದ ಸೈನ್ಯವು ಚಂಡ-ಮುಂಡರು ಮಹಾ ವೀರ್ಯವಂತರು ಕೂಡ ದೇವಿಯಿಂದ ಮಡಿದು ಬಿದ್ದುದನ್ನು ಕಂಡು ಭಯದಿಂದ ಹತ್ತು ದಿಕ್ಕುಗಳಿಗೆ ಓಡಿಹೋಯಿತು.

೨೩. ಕಾಲಿಕಾದೇವಿಯು ಚಂಡ–ಮುಂಡರಿಬ್ಬರು ಅಸುರರ ಮುಂಡಗಳನ್ನು ಹಿಡಿದುಕೊಂಡು ಚಂಡಿಕಾಂಬಿಕೆಯ ಎದುರು ಬಂದು ಪ್ರಚಂಡವಾಗಿ ಅಟ್ಟಹಾಸಮಾಡುತ್ತ ಹೀಗೆ ಹೇಳಿದಳು.

ಮಯಾ ತವಾತ್ರೋಪಹೃತೌ ಚಣ್ಡಮುಣ್ಡೌ ಮಹಾಪಶೂ ।
ಯುದ್ಧಯಜ್ಞೇ ಸ್ವಯಂ ಶುಮ್ಭಂ ನಿಶುಮ್ಭಂ ಚ ಹನಿಷ್ಯಸಿ ॥೨೪॥

ಋಷಿರುವಾಚ :—

ತಾವಾನೀತೌ ತತೋ ದೃಷ್ಟ್ವಾ ಚಣ್ಡಮುಣ್ಡೌ ಮಹಾಸುರೌ ।
ಉವಾಚ ಕಾಲೀಂ ಕಲ್ಯಾಣೀ ಲಲಿತಂ ಚಣ್ಡಿಕಾ ವಚಃ ॥೨೫॥

ಶ್ರೀದೇವ್ಯುವಾಚ :—

ಯಸ್ಮಾಚ್ಚಣ್ಡಂ ಚ ಮುಣ್ಡಂ ಚ ಗೃಹೀತ್ವಾ ತ್ವಮುಪಾಗತಾ ।
ಚಾಮುಣ್ಡೇತಿ ತತೋ ಲೋಕೇ ಖ್ಯಾತಾ ದೇವೀ ಭವಿಷ್ಯಸಿ ॥೨೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ಚಣ್ಡ-ಮುಣ್ಡವಧೋ ನಾಮ ಚತುರಶೀತಿತಮೋಽಧ್ಯಾಯಃ

---

೨೪. ದೇವಿಯೆ! ಈಗ ಜರುಗಿದ ಯುದ್ಧಯಜ್ಞದಿಂದ ಚಂಡ-ಮುಂಡರೆಂಬ ಎರಡು ಪಶುಗಳನ್ನು ನಿನಗೆ ಬಲಿಯಾಗಿ ತಂದು ಒಪ್ಪಿಸಿದ್ದೇನೆ. ಇನ್ನು ನೀನು ಶುಂಭ-ನಿಶುಂಭರನ್ನು ಸಂಹರಿಸು.

ಋಷಿಯು ಹೇಳಿದನು :—

೨೫. ತರುವಾಯ ಮಂಗಳಕರಳಾದ ಚಂಡಿಕಾಂಬಿಕೆಯು ಚಂಡ-ಮುಂಡರೆಂಬ ಮಹಾ ಅಸುರರನ್ನು ವಧಿಸಿ ಮುಂಡಗಳನ್ನು ಕಾಳಿಯು ತಂದಿರು-ರುವುದನ್ನು ಕಂಡು ಅವಳನ್ನು ಕುರಿತು ಉಲ್ಲಾಸಕರವಾದ ಈ ವಚನವನ್ನು ಹೇಳಿದಳು.

ಶ್ರೀ ದೇವಿಯು ಹೇಳಿದಳು :—

೨೬. ಯಾವ ಕಾರಣದಿಂದ ನೀನು ಯುದ್ಧದಲ್ಲಿ ಜಯಿಸಿ ಚಂಡ-ಮುಂಡರ ಶಿರಗಳನ್ನು ಬಲಿಯಾಗಿ ತಂದೊಪ್ಪಿಸಿದೆಯೋ ಆ ಕಾರಣದಿಂದ ನೀನು ಇನ್ನು ಮುಂದೆ ಚಾಮುಂಡಿಯೆಂದು ಲೋಕದಲ್ಲಿ ಖ್ಯಾತಿಯನ್ನು ಹೊಂದುತ್ತೀಯೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚಾಶೀತಿತಮೋಽಧ್ಯಾಯಃ

(ರಕ್ತಬೀಜಾಸುರವಧಃ)

ಋಷಿರುವಾಚ :—

ಚಣ್ಡೇ ಚ ನಿಹತೇ ದೈತ್ಯೇ ಮುಣ್ಡೇ ಚ ವಿನಿಪಾತಿತೇ ।
ಬಹುಲೇಷು ಚ ಸೈನ್ಯೇಷು ಕ್ಷಯಿತೇಷ್ವಸುರೇಶ್ವರಃ ||೧||

ತತಃ ಕೋಪಪರಾಧೀನಚೇತಾಃ ಶುಮ್ಭಃ ಪ್ರತಾಪವಾನ್ ।
ಉದ್ಯೋಗಂ ಸರ್ವಸೈನ್ಯಾನಾಂ ದೈತ್ಯಾನಾಮಾದಿದೇಶ ಹ ||೨||

ಎಂಭತ್ತೈದನೆಯ ಅಧ್ಯಾಯ

ಋಷಿಯು ಹೀಗೆಂದನು :—

೧. ಅಸುರೇಶ್ವರನಾದ ಶುಂಭಾಸುರನಿಗೆ ದೇವಿಯೊಡನೆ ಯುದ್ಧಹೂಡಿದ ಪರಿಣಾಮವಾಗಿ ಚಂಡಾಸುರನು ಮಡಿದುಹೋದನು. ಮುಂಡಾಸುರನು ಮರಣಹೊಂದಿದನು. ಮತ್ತು ಅನೇಕ ಸೈನ್ಯಭಾಗವು ಕ್ಷಯಿಸಿಹೋಯಿತು.

೨. ತರುವಾಯ ಕೋಪಕ್ಕೆ ಅಧೀನವಾದ ಮಾನಸವುಳ್ಳ ಪರಾಕ್ರಮಿಯಾದ ಶುಂಭಾಸುರನು ಸಮಸ್ತ ಸೈನ್ಯವು ದೇವಿಯೊಡನೆ ಯುದ್ಧಕ್ಕೆ ಹೊರಡುವ ಉದ್ಯೋಗ ಮಾಡುವಂತೆ ದೈತ್ಯರಿಗೆ ಆದೇಶ ಮಾಡಿದನು.

ಅದ್ಯ ಸರ್ವಬಲೈರ್ದೈತ್ಯಾಃ ಷಡಶೀತಿರುದಾಯುಧಾಃ ।
ಕಮ್ಬೂನಾಂ ಚತುರಾಶೀತಿರ್ನಿರ್ಯಾನ್ತು ಸ್ವಬಲೈರ್ವೃತಾಃ ॥೪॥

ಕೋಟಿವೀರ್ಯಾಣಿ ಪಞ್ಚಾಶದಸುರಾಣಾಂ ಕುಲಾನಿ ವೈ ।
ಶತಂ ಕುಲಾನಿ ಧೂಮ್ರಾಣಾಂ ನಿರ್ಗಚ್ಛನ್ತು ಮಮಾಜ್ಞಯಾ ॥೫॥

ಕಾಲಕಾ ದೌರ್ಹೃದಾ ಮೌರ್ಯಾಃ ಕಾಲಕೇಯಾಸ್ತಥಾಸುರಾಃ ।
ಯುದ್ಧಾಯ ಸಜ್ಜಾ ನಿರ್ಯಾನ್ತು ಆಜ್ಞಯಾ ತ್ವರಿತಾ ಮಮ ॥೬॥

ಇತ್ಯಾಜ್ಞಾಪ್ಯಾಸುರಪತಿಃ ಶುಮ್ಭೋ ಭೈರವಶಾಸನಃ ।
ನಿರ್ಜಗಾಮ ಮಹಾಸೈನ್ಯಸಹಸ್ರೈರ್ಬಹುಭಿರ್ವೃತಃ ॥೭॥

---

೪. ಈಗ ನನ್ನ ಆಜ್ಞೆಯಂತೆ ಪ್ರಧಾನರಾದ ಎಂಭತ್ತಾರುಮಂದಿ ರಾಕ್ಷಸರು ಎತ್ತಿದ ಶಸ್ತ್ರವುಳ್ಳವರಾಗಿ ಸಮಸ್ತ ಚತುರಂಗ ಸೈನ್ಯದ ಸಂಗಡ ಯುದ್ಧಕ್ಕೆ ಹೊರಡಲಿ. ಮತ್ತು ಕಂಬು ಎಂಬ ಎಂಭತ್ತುನಾಲ್ಕುಮಂದಿ ರಾಕ್ಷಸರು ತಮ್ಮ ಸೈನ್ಯ ಪರಿವಾರದೊಡನೆ ಹೊರಡಲಿ.

೫. ಕೋಟಿವೀರ್ಯ ಎಂದು ನಾಮಾಂಕಿತವೂ ಮತ್ತು ಆ ಹೆಸರಿಗೆ ತಕ್ಕಂತೆ ಕೋಟಿಸಂಖ್ಯೆಯಷ್ಟು ಅಧಿಕ ವೀರ್ಯವುಳ್ಳದ್ದೂ ಆದ ಐವತ್ತು ಅಸುರ ಸಂಘಗಳು ಹೊರಡಲಿ. ಮತ್ತು ಧೂಮ್ರರಾಕ್ಷಸರ ಒಂದು ನೂರು ಗುಂಪುಗಳು ನನ್ನ ಆಜ್ಞೆಯಿಂದ ಈಗ ಹೊರಡಲಿ.

೬. ಹಾಗು ಕಾಲಕ, ದೌರ್ಹೃದ, ಮೌರ್ಯ ಮತ್ತು ಕಾಲಕೇಯ ಎಂಬ ನಾಮಾಂಕಿತರಾದ ಅನೇಕ ಮಂದಿ ಅಸುರರ ತಂಡಗಳು ನನ್ನ ಆಜ್ಞೆಯಂತೆ ಈಗ ಯುದ್ಧಕ್ಕೆ ಸಿದ್ಧರಾಗಿ ಹೊರಡಲಿ.

೭. ಹೀಗೆಂದು ಆಜ್ಞಾಪಿಸಿ ಭಯಂಕರವಾದ ಶಾಸನವುಳ್ಳ ಅಸುರ-ರಾಜನಾದ ಶುಂಭಾಸುರನು ಸಹಸ್ರಾರು ಸಂಖ್ಯೆಯ ಅನೇಕ ಚತುರಂಗ ಸೈನ್ಯ-ಸಮೇತನಾಗಿ ತಾನು ಯುದ್ಧಕ್ಕೆ ಸಿದ್ಧನಾಗಿ ಹೊರಟನು.

ಆಯಾನ್ತಂ ಚಣ್ಡಿಕಾ ದೃಷ್ಟ್ವಾ ತತ್ಸೈನ್ಯಮತಿಭೀಷಣಮ್ ।
ಜ್ಯಾಸ್ವನೈಃ ಪೂರಯಾಮಾಸ ಧರಣೀಗಗನಾನ್ತರಮ್ ॥೭॥

ಸ ಚ ಸಿಹ್ಮೋ ಮಹಾನಾದಮತೀವ ಕೃತವಾನ್ನೃಪ ।
ಘಣ್ಟಾಸ್ವನೇನ ತನ್ನಾದಮಮ್ಬಿಕಾ ಚಾಪ್ಯಬೃಹ್ಮಯತ್ ॥೮॥

ಧನುರ್ಜ್ಯಾಸಿಹ್ಮಘಣ್ಟಾನಾಂ ನಾದಾಪೂರಿತದಿಙ್ಮುಖಾ ।
ನಿನಾದೈರ್ಭೀಷಣೈಃ ಕಾಲೀ ಜಿಗ್ಯೇ ವಿಸ್ತಾರಿತಾನನಾ ॥೯॥

ತನ್ನಿನಾದಮುಪಶ್ರುತ್ಯ ದೈತ್ಯಸೈನ್ಯೈಶ್ಚತುರ್ದಿಶಮ್ ।
ದೇವೀ ಸಿಹ್ಮಸ್ತಥಾ ಕಾಲೀ ಶರೌಘೈಃ ಪರಿವಾರಿತಾಃ ॥೧೦॥

ಏತಸ್ಮಿನ್ನನ್ತರೇ ಭೂಪ ವಿನಾಶಾಯ ಸುರದ್ವಿಷಾಮ್ ।
ಭವಾಯಾಮರಸಿಹ್ಮಾನಾಮತಿವೀರ್ಯಬಲಾನ್ವಿತಾಃ ॥೧೧॥

---

೭. ಇಷ್ಟರಲ್ಲಿ ಚಂಡಿಕಾದೇವಿಯು ತನ್ನೆದುರು ಯುದ್ಧಕ್ಕೆ ಬರುತ್ತಿದ್ದ ಅತಿ ಭಯಂಕರವಾದ ಆ ಸೈನ್ಯವನ್ನು ನೋಡಿ ಬಿಲ್ಲನ್ನು ಹೆದೆಯೇರಿಸಿ ಬಿಲ್ಲಿನ ಟಂಕಾರಶಬ್ದದಿಂದ ಭೂಮಿ ಆಕಾಶಗಳ ಬಿಲವನ್ನೆಲ್ಲ ತುಂಬಿಸಿದಳು.

೮. ಎಲೈ, ಸುರಥರಾಜನೇ! ಆಗ ದೇವಿಯ ವಾಹನವಾದ ಸಿಹ್ಮವು ಗಟ್ಟಿಯಾದ ಗರ್ಜನವನ್ನು ಮಾಡಿತು. ದೇವಿಯು ಆ ಸಿಹ್ಮನಾದವನ್ನು ತನ್ನ ಉಗ್ರವಾದ ಘಂಟೆಯ ಧ್ವನಿಯಿಂದ ಹೆಚ್ಚಿಸಿದಳು.

೯. ಬಿಲ್ಲಿನ ಟಂಕಾರಶಬ್ದ, ಸಿಂಹದ ಗರ್ಜನೆ, ಘಂಟಾಧ್ವನಿ—ಈ ನಾದಗಳಿಂದ ತುಂಬಿಸಿದ ದಿಗಂತವುಳ್ಳ ಕಾಳಿಕಾದೇವಿಯು ತೆರೆದ ಮುಖವುಳ್ಳವಳಾಗಿ ಭಯವುಂಟುಮಾಡುವ ಶಬ್ದಗಳಿಂದಲೆ ಶತ್ರುಗಳನ್ನು ಹಿಮ್ಮೆಟ್ಟಿಸಿದಳು.

೧೦. ಆದರೂ ಹೀಗೆ ಕೋಲಾಹಲವನ್ನು ಕೇಳಿ ರಚ್ಚೆಗೆದ್ದ ದೈತ್ಯಸೈನ್ಯಗಳಿಂದ ತತ್ಕ್ಷಣವಲ್ಲಿ ದೇವಿಯು ಸಿಂಹ ಮತ್ತು ಕಾಲಿಕಾದೇವಿಯರು ಬಾಣವೃಷ್ಟಿಯನ್ನು ಸುರಿಸಿ ನಾಲ್ಕು ದಿಕ್ಕಿನಿಂದಲೂ ಮುಚ್ಚಲ್ಪಟ್ಟರು.

೧೧. ಸುರಥರಾಜನೆ! ಈ ವಿಷಮ ಸಮಯದಲ್ಲಿ ದೇವತೆಗಳ ನಿಸರ್ಗಶತ್ರುಗಳಾದ ರಾಕ್ಷಸರ ಸಂಹಾರಕ್ಕೂ ಮತ್ತು ದೇವತಾಪ್ರಮುಖರ ಸಂಪತ್ಸಮೃದ್ಧಿಗೂ ಅತಿಯಾದ ವೀರ್ಯ-ಪರಾಕ್ರಮಗಳಿಂದ ಕೂಡಿದ ಶಕ್ತಿದೇವತೆಗಳು ಬಂದು ಒಟ್ಟಾಗಿ ಸೇರಿದರು.

ಬ್ರಹ್ಮೇಶಗುಹವಿಷ್ಣೂನಾಂ ತಥೇನ್ದ್ರಸ್ಯ ಚ ಶಕ್ತಯಃ ।
ಶರೀರೇಭ್ಯೋ ವಿನಿಷ್ಕ್ರಮ್ಯ ತದ್ರೂಪೈಶ್ಚಣ್ಡಿಕಾಂ ಯಯುಃ ॥೧೨॥

ಯಸ್ಯ ದೇವಸ್ಯ ಯದ್ರೂಪಂ ಯಥಾ ಭೂಷಣವಾಹನಮ್ ।
ತದ್ವದೇವ ಹಿ ತಚ್ಛಕ್ತಿರಸುರಾನ್ ಯೋದ್ಧುಮಾಯಯೌ ॥೧೩॥

ಹಂಸಯುಕ್ತವಿಮಾನಸ್ಥಾ ಸಾಕ್ಷಸೂತ್ರಕಮಣ್ಡಲುಃ ।
ಆಯಾತಾ ಬ್ರಹ್ಮಣಃ ಶಕ್ತಿರ್ಬ್ರಹ್ಮಾಣೀ ಸಾಭಿಧೀಯತೇ ॥೧೪॥

ಮಾಹೇಶ್ವರೀ ವೃಷಾರೂಢಾ ತ್ರಿಶೂಲವರಧಾರಿಣೀ ।
ಮಹಾಹಿವಲಯಾ ಪ್ರಾಪ್ತಾ ಚನ್ದ್ರಲೇಖಾವಿಭೂಷಣಾ ॥೧೫॥

---

೧೨. ಬ್ರಹ್ಮ–ಈಶ್ವರ–ಕುಮಾರಸ್ವಾಮಿ–ವಿಷ್ಣು–ಇಂದ್ರ ಮುಂತಾದ ದೇವತೆಗಳ ಶಕ್ತಿಗಳು ಆಯಾಯ ದೇವತಾ ಮೂರ್ತಿಗಳಿಂದ ಆಯಾಯ ರೂಪದಿಂದ ಪ್ರತ್ಯೇಕವಾಗಿ ಆವಿರ್ಭವಿಸಿ ಚಂಡಿಕಾಂಬಿಕೆಯ ಬಳಿಯಲ್ಲಿ ಸೇರಿದರು.

೧೩. ಬ್ರಹ್ಮಾದಿ ದೇವತೆಗಳ ಪೈಕಿ ಯಾವ ದೇವತೆಯಲ್ಲಿ ಯಾವ ರೂಪ-ಭೂಷಣ-ವಾಹನಗಳು ಇವೆಯೋ ಅದೇ ರೂಪ-ಭೂಷಣ-ವಾಹನಗಳನ್ನು ಹೊಂದಿದ ಆ ದೇವತಾಶಕ್ತಿಯು ಅಸುರರೊಂದಿಗೆ ಯುದ್ಧಮಾಡಲು ಬಂದು ಸೇರಿದಳು.

೧೪. ಹಂಸವಾಹನದಿಂದ ಕೂಡಿದ ವಿಮಾನದಲ್ಲಿರುವವಳೂ, ಜಪಮಾಲೆ-ಕಮಂಡಲುಗಳನ್ನು ಧರಿಸಿದವಳೂ ಆಗಿ ಬಂದಿರುವ ಬ್ರಹ್ಮದೇವನ ಶಕ್ತಿಯು ಬ್ರಹ್ಮಾಣಿ ಎಂದು ಕರೆಯಲ್ಪಡುವಳು.

೧೫. ಮತ್ತು ನಂದಿವಾಹನವನ್ನು ಏರಿದವಳೂ ಉತ್ತಮವಾದ ತ್ರಿಶೂಲವನ್ನು ಧರಿಸಿದವಳೂ ದೊಡ್ಡ ಸರ್ಪಗಳ ಕಂಕಣವುಳ್ಳವಳೂ ಮತ್ತು ಚಂದ್ರಕಲೆಯಿಂದ ರಾಜಿಸುವ ಶಿರವುಳ್ಳವಳೂ ಆಗಿ ಬಂದ ಶಕ್ತಿದೇವಿಯು ಮಾಹೇಶ್ವರಿ ಎಂದು ಕರೆಯಲ್ಪಡುವಳು.

ಕೌಮಾರೀ ಶಕ್ತಿಹಸ್ತಾ ಚ ಮಯೂರವರವಾಹನಾ ।
ಯೋದ್ಧುಮಭ್ಯಾಯಯೌ ದೈತ್ಯಾನಮ್ಬಿಕಾ ಗುಹರೂಪಿಣೀ ॥೧೬॥

ತಥೈವ ವೈಷ್ಣವೀ ಶಕ್ತಿರ್ಗರುಡೋಪರಿಸಂಸ್ಥಿತಾ ।
ಶಙ್ಖಚಕ್ರಗದಾಶಾರ್ಙ್ಗಖಡ್ಗಹಸ್ತಾಭ್ಯುಪಾಯಯೌ ॥೧೭॥

ಜಜ್ಞೇ ವಾರಾಹಮತುಲಂ ರೂಪಂ ಯಾ ಬಿಭ್ರತೋ ಹರೇಃ ।
ಶಕ್ತಿಃ ಸಾಪ್ಯಾಯಯೌ ತತ್ರ ವಾರಾಹೀಂ ಬಿಭ್ರತೀ ತನುಮ್ ॥೧೮॥

ನಾರಸಿಹ್ಮೀ ನೃಸಿಹ್ಮಸ್ಯ ಬಿಭ್ರತೀ ಸದೃಶಂ ವಪುಃ ।
ಪ್ರಾಪ್ತಾ ತತ್ರ ಸಟಾಕ್ಷೇಪಕ್ಷಿಪ್ತನಕ್ಷತ್ರಸಂಹತಿಃ ॥೧೯॥

---

೧೬. ಹಾಗು ಶಕ್ತಿ ಆಯುಧವನ್ನು ಪಾಣಿಯಲ್ಲಿ ಧರಿಸಿದವಳೂ, ಉತ್ತಮವಾದ ನವಿಲು ವಾಹನವನ್ನು ಏರಿದವಳೂ ಮತ್ತು ಕುಮಾರಸ್ವಾಮಿಯ ರೂಪದಿಂದ ಶೋಭಿತಳೂ ಆದ ಅಂಬಿಕೆಯು ವ್ಯಷ್ಟಿರೂಪವಾದ ಕೌಮಾರೀ ಶಕ್ತಿಯು ದೈತ್ಯರ ಸಂಗಡ ಯುದ್ಧ ಮಾಡಲು ಬಂದಳು.

೧೭. ಹಾಗೆಯೇ ಗರುಡವಾಹನದ ಮೇಲೆ ಕುಳಿತಿರುವವಳೂ, ಶಂಖ-ಚಕ್ರ-ಗದಾ-ಶಾರ್ಙ್ಗ ಮತ್ತು ಖಡ್ಗಗಳೆಂಬ ಉಪಕರಣಗಳನ್ನು ಧರಿಸಿದವಳೂ ಆದ ವೈಷ್ಣವೀಶಕ್ತಿಯು ದೈತ್ಯರನ್ನು ನಾಶಮಾಡಲು ಬಂದಳು.

೧೮. ಯಜ್ಞರಕ್ಷಣೆಗಾಗಿ ನಿರುಪಮವಾದ ವರಾಹರೂಪವನ್ನು ಧರಿಸಿದ ವಿಷ್ಣುವಿನ ಮೂರ್ತಿಯಿಂದ ಯಾವ ಶಕ್ತಿಯು ಆವಿರ್ಭವಿಸಿದಳೋ, ವರಾಹ-ಮೂರ್ತಿಯ ಆಕೃತಿಯನ್ನು ಧರಿಸಿದ ಆ ವಾರಾಹೀಶಕ್ತಿಯು ಯುದ್ಧರಂಗಕ್ಕೆ ಬಂದಳು.

೧೯. ಹಾಗು ನೃಸಿಂಹಸ್ವಾಮಿಯ ಆಕಾರವನ್ನು ಧರಿಸಿರುವವಳೂ ಮತ್ತು ತನ್ನ ಕೇಸರಗಳನ್ನು ಕೊಡವಿಕೊಂಡು ದೂರ ಒತ್ತರಿಸಿದ ನಕ್ಷತ್ರ-ಶ್ರೇಣಿಗಳುಳ್ಳವಳೂ ಆದ ನಾರಸಿಂಹೀ ಶಕ್ತಿಯು ಆ ಸಂಗ್ರಾಮಭೂಮಿಗೆ ಬಂದಳು.

ವಜ್ರಹಸ್ತಾ ತಥೈವೈನ್ದ್ರೀ ಗಜರಾಜೋಪರಿಸ್ಥಿತಾ ।
ಸಹಸ್ರನಯನಾ ಪ್ರಾಪ್ತಾ ಯಥಾ ಶಕ್ರಸ್ತಥೈವ ಸಾ ॥೨೦॥

ತತಃ ಪರಿವೃತಸ್ತಾಭಿರೀಶಾನೋ ದೇವಶಕ್ತಿಭಿಃ ।
ಹನ್ಯನ್ತಾಮಸುರಾಃ ಶೀಘ್ರಂ ಮಮ ಪ್ರೀತ್ಯಾಹ ಚಣ್ಡಿಕಾಮ್॥೨೧॥

ತತೋ ದೇವೀಶರೀರಾತ್ತು ವಿನಿಷ್ಕ್ರಾನ್ತಾತಿಭೀಷಣಾ ।
ಚಣ್ಡಿಕಾಶಕ್ತಿರತ್ಯುಗ್ರಾ ಶಿವಾಶತನಿನಾದಿನೀ ॥೨೨॥

ಸಾ ಚಾಹ ಧೂಮ್ರಜಟಿಲಮೀಶಾನಮಪರಾಜಿತಾ ।
ದೂತತ್ವಂ ಗಚ್ಛ ಭಗವನ್ ಪಾರ್ಶ್ವಂ ಶುಮ್ಭನಿಶುಮ್ಭಯೋಃ ॥೨೩॥

---

೨೦. ದೇವೇಂದ್ರನ ಮೂರ್ತಿಯು ಎಂತಿರುವುದೋ ಅಂತೆಯೇ ಸಹಸ್ರ ನೇತ್ರಗಳಿಂದ ಕೂಡಿರುವವಳೂ, ವಜ್ರಾಯುಧವನ್ನು ಕೈಯಲ್ಲಿ ಧರಿಸಿದವಳೂ ಮತ್ತು ಐರಾವತ ಗಜವಾಹನವನ್ನು ಏರಿದವಳೂ ಆದ ಐಂದ್ರೀ ಶಕ್ತಿಯು ಬಂದಳು.

೨೧. ತರುವಾಯ ಬ್ರಹ್ಮಾಣೀ ಮುಂತಾದ ದೇವಶಕ್ತಿಗಳಿಂದ ಸುತ್ತಲೂ ಆವರಿಸಲ್ಪಟ್ಟ ಮಹೇಶ್ವರನು "ನನ್ನ ಪ್ರೀತಿ ನಿಮಿತ್ತವಾಗಿ ಸಮಸ್ತ ರಾಕ್ಷಸರು ನಿನ್ನಿಂದ ಶೀಘ್ರವಾಗಿ ಸಂಹರಿಸಲ್ಪಡಲಿ" ಎಂದು ಚಂಡಿಕಾಂಬಿಕೆಗೆ ಹೇಳಿದನು.

೨೨. ಅನಂತರದಲ್ಲಿ ಹೆಚ್ಚಾಗಿ ಉಗ್ರರೂಪಳೂ, ನೂರಾರು ನರಿಗಳ ಕಠೋರ ನಾದದಿಂದ ಕೂಡಿದವಳೂ ಮತ್ತು ಭಯಂಕರಳೂ ಆದ ಚಂಡಿಕಾ ಶಕ್ತಿಯು ದೇವಿಯ ದೇಹದಿಂದ ಪ್ರತ್ಯೇಕವಾಗಿ ಆವಿರ್ಭವಿಸಿದಳು.

೨೩. ಪರಾಜಯವಿಲ್ಲದ ವಿಕ್ರಮವುಳ್ಳ, ವಿಷ್ಣುಮಾಯೆಯೆಂದು ಕರೆಯಲ್ಪಡುವ ಆ ಚಂಡಿಕಾದೇವಿಯು ಧೂಮ್ರವರ್ಣದ ಜಡೆಗಳನ್ನು ಧರಿಸಿದ ರುದ್ರನನ್ನು ನೋಡಿ "ಪೂಜ್ಯನೇ! ನೀನೀಗ ಶುಂಭ-ನಿಶುಂಭ ಅಸುರರ ಬಳಿಗೆ ದೂತನಾಗಿ ಹೋಗು" ಎಂದು ಹೇಳಿದಳು.

ಬ್ರೂಹಿ ಶುಮ್ಭಂ ನಿಶುಮ್ಭಂ ಚ ದಾನವಾವತಿಗರ್ವಿತೌ ।
ಯೇ ಚಾನ್ಯೇ ದಾನವಾಸ್ತತ್ರ ಯುದ್ಧಾಯ ಸಮುಪಸ್ಥಿತಾಃ ॥೨೪॥

ತ್ರೈಲೋಕ್ಯಮಿನ್ದ್ರೋ ಲಭತಾಂ ದೇವಾಃ ಸನ್ತು ಹವಿರ್ಭುಜಃ ।
ಯೂಯಂ ಪ್ರಯಾತ ಪಾತಾಲಂ ಯದಿ ಜೀವಿತುಮಿಚ್ಛಥ ॥೨೫॥

ಬಲಾವಲೇಪಾದಥ ಚೇದ್ಭವನ್ತೋ ಯುದ್ಧಕಾಙ್ಕ್ಷಿಣಃ ।
ತದಾಗಚ್ಛತ ತೃಪ್ಯನ್ತು ಮಚ್ಛಿವಾಃ ಪಿಶಿತೇನ ವಃ ॥೨೬॥

ಯತೋ ನಿಯುಕ್ತೋ ದೌತ್ಯೇನ ತಯಾ ದೇವ್ಯಾ ಶಿವಃ ಸ್ವಯಮ್ ।
ಶಿವದೂತೀತಿ ಲೋಕೇಽಸ್ಮಿಂಸ್ತತಃ ಸಾ ಖ್ಯಾತಿಮಾಗತಾ ॥೨೭॥

---

೨೪. ಅಸುರರಾಜನ ಬಳಿಗೆ ಹೋಗಿ ಶುಂಭ-ನಿಶುಂಭರೆಂಬ ಅಹಂಕಾರದಿಂದ ಮೆರೆಯುವ ದಾನವರಿಗೂ ಮತ್ತು ಯುದ್ಧಕ್ಕೋಸ್ಕರವೇ ಸಿದ್ಧವಾಗಿರುವ ಇತರ ದಾನವರಿಗೂ ನನ್ನ ಈ ಸಂದೇಶವನ್ನು ಹೇಳು.

೨೫. ಇಂದ್ರನು ದೇವರಾಜ ಪದದಲ್ಲಿದ್ದು ತ್ರೈಲೋಕ್ಯ ರಾಜ್ಯವನ್ನು ಹೊಂದಲಿ. ದೇವತೆಗಳು ತಮ್ಮ ತಮ್ಮ ಹವಿರ್ಭಾಗಗಳನ್ನು ಮತ್ತೆ ಭುಂಜಿಸಲಿ. ನೀವು ದೀರ್ಘಕಾಲ ಬದುಕಿನ ಆಶೆಯುಳ್ಳವರಾಗಿದ್ದರೆ ಕೂಡಲೆ ಪಾತಾಲಕ್ಕೆ ಹೊರಟುಹೋಗಿ.

೨೬. ಒಂದು ಪಕ್ಷದಲ್ಲಿ ಶಕ್ತಿ-ಸಾಮರ್ಥ್ಯಗಳ ಅಹಂಕಾರದಿಂದ ನೀವೆಲ್ಲರೂ ಯುದ್ಧಮಾಡಲು ಬಯಸುವುದಾದರೆ ಕೂಡಲೆ ಯುದ್ಧಕ್ಕೆ ಬನ್ನಿರಿ. ಯುದ್ಧದಲ್ಲಿ ಹತರಾದ ನಿಮ್ಮ ರಕ್ತ-ಮಾಂಸಗಳಿಂದ ನನ್ನ ನರಿಗಳ ತಂಡಗಳು ತೃಪ್ತಿಹೊಂದಲಿ.

೨೭. ಹೀಗೆ ಸಂದೇಶವನ್ನು ಕಳುಹಿಸುತ್ತ ಚಂಡಿಕಾಂಬಿಕೆಯಿಂದ ಈಶ್ವರನು ದೂತನಾಗಿ ನಿಯೋಜಿಸಲ್ಪಟ್ಟನಾದುದರಿಂದ ಆ ದೇವಿಯು ಈ ಸಮಸ್ತಲೋಕದಲ್ಲಿ ಶಿವದೂತಿಯೆಂದು ಖ್ಯಾತಿಯನ್ನು ಹೊಂದಿದಳು.

ತೇಽಪಿ ಶ್ರುತ್ವಾ ವಚೋ ದೇವ್ಯಾಃ ಶರ್ವಾಖ್ಯಾತಂ ಮಹಾಸುರಾಃ ।
ಅಮರ್ಷಾಪೂರಿತಾ ಜಗ್ಮುರ್ಯತ್ರ ಕಾತ್ಯಾಯನೀ ಸ್ಥಿತಾ ॥೨೮॥

ತತಃ ಪ್ರಥಮಮೇವಾಗ್ರೇ ಶರಶಕ್ತ್ಯೃಷ್ಟಿವೃಷ್ಟಿಭಿಃ ।
ವವರ್ಷುರುದ್ಧತಾಮರ್ಷಾಸ್ತಾಂ ದೇವೀಮಮರಾರಯಃ ॥೨೯॥

ಸಾ ಚ ತತ್ಪ್ರಹಿತಾನ್ಬಾಣಾನ್ ಶೂಲಶಕ್ತಿಪರಶ್ವಧಾನ್ ।
ಚಿಚ್ಛೇದ ಲೀಲಯಾಧ್ಮಾತಧನುರ್ಮುಕ್ತೈರ್ಮಹೇಷುಭಿಃ ॥೩೦॥

ತಸ್ಯಾಗ್ರತಸ್ತಥಾ ಕಾಲೀ ಶೂಲಪಾತವಿದಾರಿತಾನ್ ।
ಖಟ್ವಾಙ್ಗಪೋಥಿತಾಂಶ್ಚಾರೀನ್ಕುರ್ವತೀ ವ್ಯಚರತ್ತದಾ ॥೩೧॥

---

೨೮. ಆಗ ವೀರರಾದ ಅಸುರರೆಲ್ಲರೂ ಈಶ್ವರನು ಒಪ್ಪಿಸಿದ ದೇವಿಯ ಸಂದೇಶವಾಣಿಯನ್ನು ಕೇಳಿ ಕೋಪ-ಅಸಹನೆಗಳಿಂದ ಪರಿಪೂರ್ಣರಾಗಿ ಎಲ್ಲಿ ಕಾತ್ಯಾಯನೀ ಎಂದು ಕರೆಯಲ್ಪಡುವ ಚಂಡಿಕಾಂಬಿಕೆಯು ಇದ್ದಳೊ ಅಲ್ಲಿಗೆ ಬಂದರು.

೨೯. ತರುವಾಯ ಮದದಿಂದ ಕೊಬ್ಬಿದ ಮತ್ತು ಕೋಪಾವೇಶವುಳ್ಳ ದಾನವರು ತಾವು ಮೊದಲು ಬಾಣ-ಶಕ್ತಿ-ಋಷ್ಟಿ ಮುಂತಾದ ಶಸ್ತ್ರಾಸ್ತ್ರಗಳನ್ನು ದೇವಿಯ ಮೇಲೆ ಸುರಿಸಿದರು.

೩೦. ಆಗ ಚಂಡಿಕಾದೇವಿಯು ಅಸುರರು ಪ್ರಯೋಗಿಸಿದ ಬಾಣ, ಶೂಲ, ಶಕ್ತಿ, ಪರಶು ಮುಂತಾದ ಶಸ್ತ್ರಾಸ್ತ್ರಗಳನ್ನು ಲೀಲೆಯಿಂದ ಹೆದೆಯೇರಿಸಿದ ಬಿಲ್ಲಿನಲ್ಲಿಟ್ಟು ಪ್ರಯೋಗಿಸಿದ ತನ್ನ ದೊಡ್ಡ ಬಾಣವೃಷ್ಟಿಯಿಂದ ಕತ್ತರಿಸಿದಳು.

೩೧. ಆಗ ಚಂಡಿಕಾಂಬಿಕೆಯ ಮುಂದುಗಡೆಯಲ್ಲಿ ಕಾಲೀದೇವಿಯು ಅನೇಕ ದಾನವರನ್ನು ತನ್ನ ಶೂಲಾಯುಧವನ್ನು ಚುಚ್ಚಿ ಸೀಳುತ್ತಲೂ ಖಟ್ವಾಂಗಾಯುಧದಿಂದ ಬಡಿದು ಉರುಳಿಸುತ್ತಲೂ ರಣರಂಗದಲ್ಲಿ ಸಂಚರಿಸಿದಳು.

ಕಮಣ್ಡಲುಜಲಾಕ್ಷೇಪಹತವೀರ್ಯಾನ್ ಹತೌಜಸಃ ।
ಬ್ರಹ್ಮಾಣೀ ಚಾಕರೋಚ್ಛತ್ರೂನ್ ಯೇನ ಯೇನ ಸ್ಮ ಧಾವತಿ ॥೩೨॥

ಮಾಹೇಶ್ವರೀ ತ್ರಿಶೂಲೇನ ತಥಾ ಚಕ್ರೇಣ ವೈಷ್ಣವೀ ।
ದೈತ್ಯಾಞ್ಜಘಾನ ಕೌಮಾರೀ ತಥಾ ಶಕ್ತ್ಯಾತಿಕೋಪನಾ ॥೩೩॥

ಐನ್ದ್ರೀಕುಲಿಶಪಾತೇನ ಶತಶೋ ದೈತ್ಯದಾನವಾಃ ।
ಪೇತುರ್ವಿದಾರಿತಾಃ ಪೃಥ್ವ್ಯಾಂ ರುಧಿರೌಘಪ್ರವರ್ಷಿಣಃ ॥೩೪॥

ತುಣ್ಡಪ್ರಹಾರವಿಧ್ವಸ್ತಾ ದಂಷ್ಟ್ರಾಗ್ರಕ್ಷತವಕ್ಷಸಃ ।
ವಾರಾಹಮೂರ್ತ್ಯಾ ನ್ಯಪತಂಶ್ಚಕ್ರೇಣ ಚ ವಿದಾರಿತಾಃ ॥೩೫॥

---

೩೨. ಈ ಸಮಯದಲ್ಲಿ ಬ್ರಹ್ಮಾಣೀ ಶಕ್ತಿಯು ಯಾವ ಯಾವ ಸ್ಥಳದಲ್ಲಿ ಧಾವಿಸಿದಳೊ ಅಲ್ಲೆಲ್ಲ ಶತ್ರುಗಳಾದ ದಾನವರಲ್ಲಿ ಕಮಂಡಲುವಿನ ನೀರನ್ನು ಎರಚುವುದರಿಂದ ವೀರ್ಯ-ತೇಜಸ್ಸುಗಳು ಭಂಗವಾಗುವಂತೆ ಮಾಡಿದಳು.

೩೩. ಹಾಗೆಯೇ ಮಾಹೇಶ್ವರೀ ಶಕ್ತಿಯು ತ್ರಿಶೂಲಾಯುಧದಿಂದಲೂ, ವೈಷ್ಣವೀ ಶಕ್ತಿಯು ಚಕ್ರಾಯುಧದಿಂದಲೂ, ಮತ್ತು ಶತ್ರುಗಳಲ್ಲಿ ಬಲುಕೋಪ-ತಾಳಿದ ಕೌಮಾರೀ ಶಕ್ತಿಯು ಶಕ್ತ್ಯಾಯುಧದಿಂದಲೂ ಅನೇಕ ದೈತ್ಯರನ್ನು ಸಂಹರಿಸಿದರು.

೩೪. ಐಂದ್ರೀ ಶಕ್ತಿಯ ವಜ್ರಾಯುಧದಿಂದ ಭೇದಿಸಲ್ಪಟ್ಟ ಅನೇಕ ಮಂದಿ ದೈತ್ಯ-ದಾನವರು ರಕ್ತಪ್ರವಾಹವನ್ನು ಭೂಮಿಯಲ್ಲಿ ಸುರಿಸುತ್ತ ಕೆಳಕ್ಕೆ ಉರುಳಿದರು.

೩೫. ಮತ್ತು ವಾರಾಹೀ ಮೂರ್ತಿಯ ಮೂತಿಯ ತಿವಿತದಿಂದ ಧ್ವಂಸ-ಹೊಂದಿದವರೂ ಕೋರೆಹಲ್ಲುಗಳ ಅಗ್ರಗಳಿಂದ ಚುಚ್ಚಲ್ಪಟ್ಟವರೂ ಮತ್ತು ಚಕ್ರಾಯುಧದಿಂದ ಸೀಳಲ್ಪಟ್ಟವರೂ ಆಗಿ ಅನೇಕ ದಾನವರು ಬಿದ್ದುಹೋದರು.

ನಖೈರ್ವಿದಾರಿತಾಂಶ್ಚಾನ್ಯಾನ್ಭಕ್ಷಯನ್ತೀ ಮಹಾಸುರಾನ್ ।
ನಾರಸಿಹ್ಮೀ ಚಚಾರಾಜೌ ನಾದಾಪೂರ್ಣದಿಗನ್ತರಾ ॥೩೬॥

ಚಣ್ಡಾಟ್ಟಹಾಸೈರಸುರಾಃ ಶಿವದೂತ್ಯಭಿದೂಷಿತಾಃ ।
ಪೇತುಃ ಪೃಥಿವ್ಯಾಂ ಪತಿತಾಂಸ್ತಾಂಶ್ಚಖಾದಾಥ ಸಾ ತದಾ ॥೩೭॥

ಇತಿ ಮಾತೃಗಣಂ ಕ್ರುದ್ಧಂ ಮರ್ದಯನ್ತಂ ಮಹಾಸುರಾನ್ ।
ದೃಷ್ಟ್ವಾಭ್ಯುಪಾಯೈರ್ವಿವಿಧೈರ್ನೇಶುರ್ದೇವಾರಿಸೈನಿಕಾಃ ॥೩೮॥

ಪಲಾಯನಪರಾನ್ದೃಷ್ಟ್ವಾ ದೈತ್ಯಾನ್ ಮಾತೃಗಣಾರ್ದಿತಾನ್ ।
ಯೋದ್ಧುಮಭ್ಯಾಯಯೌ ಕ್ರುದ್ಧೋ ರಕ್ತಬೀಜೋ ಮಹಾಸುರಃ ॥೩೯॥

---

೩೬. ಒಂದು ಕಡೆಯಲ್ಲಿ ನಾರಸಿಂಹೀ ಶಕ್ತಿಯು ತನ್ನ ಉಗುರುಗಳಿಂದ ಎದೆಬಗೆದು ಅನೇಕ ಅಸುರರನ್ನು ತಿನ್ನುತ್ತ ಸಿಂಹನಾದದಿಂದ ದಿಕ್ಕು-ಮೂಲೆಗಳನ್ನು ನಡುಗಿಸುತ್ತ ರಣರಂಗದಲ್ಲಿ ಓಡಾಡಿದಳು.

೩೭. ಶಿವದೂತಿಯೆನಿಸಿದ, ಚಂಡಿಕಾ ಮೂರ್ತಿಯಿಂದ ಉದ್ಭವಿಸಿದ ಶಕ್ತಿಯು ಮಾಡಿದ ಅಟ್ಟಹಾಸ ಪ್ರಭಾವದಿಂದ ಎಷ್ಟೋ ಮಂದಿ ರಾಕ್ಷಸರು ಕೆಳಗೆ ಬಿದ್ದರು. ಆಗ ಆ ದೇವಿಯು ಅಸುರರನ್ನು ನುಂಗಿಹಾಕಿದಳು.

೩೮. ಹೀಗೆ ಬಗೆಬಗೆಯ ಸಾಧನಗಳಿಂದ ಎಲ್ಲೆಲ್ಲೂ ಅಸುರಗಣವನ್ನು ಮರ್ದನ ಮಾಡುತ್ತಿದ್ದ ಕೋಪಾವೇಶಗೊಂಡ ಬ್ರಾಹ್ಮೀ ಮುಂತಾದ ಮಾತೃ-ದೇವತಾಗಣವನ್ನು ನೋಡಿ ದೇವಶತ್ರುಗಳಾದ ರಾಕ್ಷಸ ಸೈನಿಕರು ಅನೇಕ ಮಂದಿ ಮಡಿದರು.

೩೯. ಹೀಗೆ ಮಾತೃದೇವತಾಗಣದಿಂದ ಪೀಡಿತರಾಗಿ ನಿಲ್ಲಲಾರದೆ ದೈತ್ಯರು ರಣರಂಗದಿಂದ ಓಡಲಾರಂಭಿಸಿದುದನ್ನು ನೋಡಿ ಬಹಳ ಕೋಪಗೊಂಡ ರಕ್ತಬೀಜನೆಂಬ ಮಹಾಅಸುರನು ತಾನು ಯುದ್ಧಮಾಡಲು ಮುಂದೆ ಬಂದನು.

ರಕ್ತಬಿನ್ದುರ್ಯದಾ ಭೂಮೌ ಪತತ್ಯಸ್ಯ ಶರೀರತಃ ।
ಸಮುತ್ಪತತಿ ಮೇದಿನ್ಯಾಸ್ತತ್ಪ್ರಮಾಣೋ ಮಹಾಸುರಃ ॥೪೦॥

ಯುಯುಧೇ ಸ ಗದಾಪಾಣಿರಿನ್ದ್ರಶಕ್ತ್ಯಾ ಮಹಾಸುರಃ ।
ತತಶ್ಚೈನ್ದ್ರೀ ಸ್ವವಜ್ರೇಣ ರಕ್ತಬೀಜಮತಾಡಯತ್ ॥೪೧॥

ಕುಲಿಶೇನಾಹತಸ್ಯಾಶು ಬಹು ಸುಸ್ರಾವ ಶೋಣಿತಮ್ ।
ಸಮುತ್ತಸ್ಥುಸ್ತತೋ ಯೋಧಾಸ್ತದ್ರೂಪಾಸ್ತತ್ಪರಾಕ್ರಮಾಃ ॥೪೨॥

ಯಾವನ್ತಃ ಪತಿತಾಸ್ತಸ್ಯ ಶರೀರಾದ್ರಕ್ತಬಿನ್ದವಃ ।
ತಾವನ್ತಃ ಪುರುಷಾ ಜಾತಾಸ್ತದ್ವೀರ್ಯಬಲವಿಕ್ರಮಾಃ ॥೪೩॥

---

೪೦. ರಕ್ತಬೀಜಾಸುರನ ದೇಹದಿಂದ ಯಾವಾಗ ಒಂದು ತೊಟ್ಟು ರಕ್ತವು ನೆಲವಲ್ಲಿ ಬೀಳುವುದೋ ಆಗ ಆ ರಕ್ತದ ಬಿಂದುವಿನಿಂದ ಆ ಅಸುರನ ಪ್ರಮಾಣವಂತಿದ್ದ ಮತ್ತೊಬ್ಬ ಅಸುರನು ನೆಲದಿಂದ ಹುಟ್ಟಿಬರುವನು. ಇದೊಂದು ರಕ್ತಬೀಜಾಸುರನ ಮಹಿಮೆಯಿದ್ದಿತು.

೪೧. ಅಂತಹ ರಕ್ತಬೀಜಾಸುರನು ಕೈಯಲ್ಲಿ ಗದೆಯನ್ನು ಧರಿಸಿ ಇಂದ್ರನ ಶಕ್ತಿಯಾದ ಐಂದ್ರೀ ದೇವಿಯೊಡನೆ ಯುದ್ಧಮಾಡಿದನು. ಐಂದ್ರೀ ಶಕ್ತಿಯು ತನ್ನ ವಜ್ರಾಯುಧದಿಂದ ರಕ್ತಬೀಜನನ್ನು ಪ್ರಹರಿಸಿದಳು.

೪೨. ಆಗ ವಜ್ರಾಯುಧದಿಂದ ಹೊಡೆಯಲ್ಪಟ್ಟ ರಕ್ತಬೀಜನ ದೇಹದಿಂದ ತುಂಬ ರಕ್ತವು ಕೆಳಗೆ ಸುರಿಯಿತು. ಅದರಿಂದ ಅದೇ ರೂಪ-ಅದೇ ಪರಾಕ್ರಮಗಳಿಂದ ಕೂಡಿದ ಅನೇಕ ಮಂದಿ ಯೋಧ ರಾಕ್ಷಸರು ಜನಿಸಿದರು.

೪೩. ಆ ರಕ್ತಬೀಜಾಸುರನ ದೇಹದಿಂದ ಎಷ್ಟು ಸಂಖ್ಯೆಯ ರಕ್ತದ ಬಿಂದುಗಳು ಕೆಳಗೆ ಬಿದ್ದುವೊ ಅಷ್ಟು ಸಂಖ್ಯೆಯ ಯೋಧಪುರುಷರು ಆ ಅಸುರನ ವೀರ್ಯ-ಬಲ-ಪರಾಕ್ರಮಗಳಿಂದ ಕೂಡಿದವರಾಗಿ ಜನಿಸಿದರು.

ತೇ ಚಾಪಿ ಯುಯುಧುಸ್ತತ್ರ ಪುರುಷಾ ರಕ್ತಸಮ್ಭವಾಃ ।
ಸಮಂ ಮಾತೃಭಿರತ್ಯುಗ್ರಂ ಶಸ್ತ್ರಪಾತಾತಿಭೀಷಣಮ್ ॥೪೪॥

ಪುನಶ್ಚ ವಜ್ರಪಾತೇನ ಕ್ಷತಮಸ್ಯ ಶಿರೋ ಯದಾ ।
ವವಾಹ ರಕ್ತಂ ಪುರುಷಾಸ್ತತೋ ಜಾತಾಸ್ಸಹಸ್ರಶಃ ॥೪೫॥

ವೈಷ್ಣವೀ ಸಮರೇ ಚೈನಂ ಚಕ್ರೇಣಾಭಿಜಘಾನ ಹ ।
ಗದಯಾ ತಾಡಯಾಮಾಸ ಐನ್ದ್ರೀ ತಮಸುರೇಶ್ವರಮ್ ॥೪೬॥

ವೈಷ್ಣವೀಚಕ್ರಭಿನ್ನಸ್ಯ ರುಧಿರಸ್ರಾವಸಮ್ಭವೈಃ ।
ಸಹಸ್ರಶೋ ಜಗದ್ವ್ಯಾಪ್ತಂ ತತ್ಪ್ರಮಾಣೈರ್ಮಹಾಸುರೈಃ ॥೪೭॥

ಶಕ್ತ್ಯಾ ಜಘಾನ ಕೌಮಾರೀ ವಾರಾಹೀ ಚ ತಥಾಸಿನಾ ।
ಮಾಹೇಶ್ವರೀ ತ್ರಿಶೂಲೇನ ರಕ್ತಬೀಜಂ ಮಹಾಸುರಮ್ ॥೪೮॥

---

೪೪. ಆ ರಣರಂಗದಲ್ಲಿ ರಕ್ತದ ಬಿಂದುಗಳಿಂದ ಜನಿಸಿದ ಯೋಧ-ರಾಕ್ಷಸರು ಬ್ರಾಹ್ಮೀ ಮುಂತಾದ ಮಾತೃಗಣದ ಸಂಗಡ ಅಧಿಕವಾದ ಶಸ್ತ್ರ-ಪ್ರಹಾರಗಳಿಂದ ಭೀಷಣವೂ ಮತ್ತು ಉಗ್ರವೂ ಆಗಿರುವಂತೆ ಯುದ್ಧಮಾಡಿದರು.

೪೫. ಮತ್ತೆ ರಕ್ತಬೀಜಾಸುರನ ತಲೆಯು ಯಾವಾಗ ವಜ್ರಾಯುಧದಿಂದ ಗಾಯಗೊಳಿಸಲ್ಪಟ್ಟಿತೋ ಆಗ ಅಧಿಕವಾಗಿ ರಕ್ತವು ಪ್ರವಹಿಸಿತು. ಅದರಿಂದ ಮತ್ತೆ ಸಾವಿರಾರು ಮಂದಿ ರಾಕ್ಷಸರು ಹುಟ್ಟಿದರು.

೪೬. ಸಮರಾಂಗಣದಲ್ಲಿ ವೈಷ್ಣವೀಶಕ್ತಿಯು ರಕ್ತಬೀಜಾಸುರನನ್ನು ಚಕ್ರಾಯುಧದಿಂದ ಹೊಡೆದಳು. ಹಾಗು ಐಂದ್ರೀಶಕ್ತಿಯು ಅವನನ್ನು ಗದಾ-ಯುಧದಿಂದ ಪ್ರಹರಿಸಿದಳು.

೪೭. ವೈಷ್ಣವೀಶಕ್ತಿಯ ಚಕ್ರಾಯುಧದಿಂದ ಭೇದಿಸಲ್ಪಟ್ಟ ಆ ಅಸುರನಿಂದ ಸುರಿದ ರಕ್ತಪ್ರವಾಹದಿಂದ ಉದ್ಭವಿಸಿದ, ಅದೇ ಪ್ರಮಾಣದ ಸಾವಿರಾರು ಮಂದಿ ಮಹಾ ಅಸುರರಿಂದ ರಣರಂಗದ ಜಗತ್ತು ವ್ಯಾಪಿಸಲ್ಪಟ್ಟಿತು.

೪೮. ಮತ್ತೆ ಕೌಮಾರೀ ಶಕ್ತಿಯು ತನ್ನ ಶಕ್ತ್ಯಾಯುಧದಿಂದ ಹೊಡೆದಳು. ವಾರಾಹೀ ಶಕ್ತಿಯು ಕತ್ತಿಯಿಂದ ಕತ್ತರಿಸಿದಳು. ಮತ್ತು ಮಾಹೇಶ್ವರೀ ಶಕ್ತಿಯು ಆ ರಕ್ತಬೀಜಮಹಾಸುರನನ್ನು ತ್ರಿಶೂಲದಿಂದ ಚುಚ್ಚಿದಳು.

ಸ ಚಾಪಿ ಗದಯಾ ದೈತ್ಯಃ ಸರ್ವಾ ಏವಾಹನತ್ಪೃಥಕ್ ।
ಮಾತ್ರೀಃ ಕೋಪಸಮಾವಿಷ್ಟೋ ರಕ್ತಬೀಜೋ ಮಹಾಸುರಃ ॥೪೯॥

ತಸ್ಯಾಹತಸ್ಯ ಬಹುಧಾ ಶಕ್ತಿಶೂಲಾದಿಭಿರ್ಭುವಿ ।
ಪಪಾತ ಯೋ ವೈ ರಕ್ತೌಘಸ್ತೇನಾಸಞ್ಛತಶೋಽಸುರಾಃ ॥೫೦॥

ತೈಶ್ಚಾಸುರಾಸೃಕ್ಸಮ್ಭೂತೈರಸುರೈಃ ಸಕಲಂ ಜಗತ್ ।
ವ್ಯಾಪ್ತಮಾಸೀತ್ತತೋ ದೇವಾ ಭಯಮಾಜಗ್ಮುರುತ್ತಮಮ್ ॥೫೧॥

ತಾನ್ ವಿಷಣ್ಣಾನ್ ಸುರಾನ್ ದೃಷ್ಟ್ವಾ ಚಣ್ಡಿಕಾ ಪ್ರಾಹ ಸತ್ವರಾ ।
ಉವಾಚ ಕಾಲೀಂ ಚಾಮುಣ್ಡೇ ವಿಸ್ತೀರ್ಣಂ ವದನಂ ಕುರು ॥೫೨॥

ಮಚ್ಛಸ್ತ್ರಪಾತಸಮ್ಭೂತಾನ್ರಕ್ತಬಿನ್ದೂನ್ಮಹಾಸುರಾನ್ ।
ರಕ್ತಬೀಜಾತ್ಪ್ರತೀಚ್ಛ ತ್ವಂ ವಕ್ತ್ರೇಣಾನೇನ ವೇಗಿನಾ ॥೫೩॥

---

೪೯. ಹಾಗೆ ಎಲ್ಲ ಶಕ್ತಿದೇವತೆಗಳಿಂದ ಎದುರಿಸಲ್ಪಟ್ಟವನೂ, ಕೋಪದಿಂದ ಜ್ವಲಿಸುವವನೂ ಆದ ಆ ರಕ್ತಬೀಜಮಹಾಸುರನು ಎಲ್ಲ ಮಾತೃ-ದೇವತೆಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಗದೆಯಿಂದ ಪ್ರಹರಿಸಿದನು.

೫೦. ಶಕ್ತಿ-ಶೂಲ ಮುಂತಾದ ಶಸ್ತ್ರಾಸ್ತ್ರಗಳಿಂದ ಬಹುವಿಧವಾಗಿ ಹೊಡೆಯಲ್ಪಟ್ಟಿರುವ ರಕ್ತಬೀಜಾಸುರನಿಂದ ಯಾವ ರಕ್ತಪ್ರವಾಹವು ನೆಲದಲ್ಲಿ ಹರಿಯಿತೋ ಅವರಿಂದ ಅನೇಕ ಮಂದಿ ಬಲಿಷ್ಠ ಅಸುರರು ಜನ್ಮವೆತ್ತಿದರು.

೫೧. ಹಾಗೆ ರಕ್ತಬೀಜಾಸುರನ ರಕ್ತದಿಂದ ಉದ್ಭವಿಸಿದ ಸಂಖ್ಯಾ-ತೀತರಾದ ರಾಕ್ಷಸರಿಂದ ಜಗತ್ತೆಲ್ಲವೂ ತುಂಬಿಹೋಯಿತು. ಆ ಪ್ರಸಂಗದಿಂದ ದೇವತೆಗಳು ವರ್ಣಿಸಲಾಗದ ಅಧಿಕ ಭಯದಿಂದ ಗ್ರಸ್ತರಾದರು.

೫೨. ಆಗ ಚಂಡಿಕಾಂಬಿಕೆಯು ದೇವತೆಗಳು ವಿಷಾದಾಕ್ರಾಂತ-ರಾಮುವನ್ನು ಕಂಡು ತ್ವರೆಪಡುತ್ತ ಕಾಳಿಕಾದೇವಿಗೆ ಹೀಗೆಂದಳು—ಚಾಮುಂಡೆಯೆ! ನೀನು ನಿನ್ನ ಮುಖವನ್ನು ತೆರೆ.

೫೩. ನನ್ನ ಶಸ್ತ್ರಗಳ ಪ್ರಹಾರಗಳು ಬಿದ್ದು ರಕ್ತಬೀಜಾಸುರನ ಶರೀರದಿಂದ ಹೊರಚಿಮ್ಮುತ್ತಿರುವ ರಕ್ತದ ಹನಿಗಳನ್ನೂ ಮತ್ತು ಅದರಿಂದ ಹುಟ್ಟುವ ರಾಕ್ಷಸರನ್ನೂ ಜಾಗ್ರತೆಯಾಗಿ ವಿಸ್ತಾರಗೊಳಿಸಿರುವ ನಿನ್ನ ಮುಖದಿಂದ ನುಂಗಿಬಿಡು.

ಭಕ್ಷಯನ್ತೀ ಚರ ರಣೇ ತದುತ್ಪನ್ನಾನ್ಮಹಾಸುರಾನ್ ॥೫೪॥

ಏವಮೇಷ ಕ್ಷಯಂ ದೈತ್ಯಃ ಕ್ಷೀಣರಕ್ತೋ ಗಮಿಷ್ಯತಿ ।
ಭಕ್ಷ್ಯಮಾಣಾಸ್ತ್ವಯಾ ಚೋಗ್ರಾ ನ ಚೋತ್ಪತ್ಸ್ಯನ್ತಿ ಚಾಪರೇ ॥೫೫॥

ಋಷಿರುವಾಚ :—

ಇತ್ಯುಕ್ತ್ವಾ ತಾಂ ತತೋ ದೇವೀ ಶೂಲೇನಾಭಿಜಘಾನ ತಮ್ ।
ಮುಖೇನ ಕಾಲೀ ಜಗೃಹೇ ರಕ್ತಬೀಜಸ್ಯ ಶೋಣಿತಮ್ ॥೫೬॥

ತತೋಽಸಾವಾಜಘಾನಾಥ ಗದಯಾ ತತ್ರ ಚಣ್ಡಿಕಾಮ್ ।
ನ ಚಾಸ್ಯಾ ವೇದನಾಂ ಚಕ್ರೇ ಗದಾಪಾತೋಽಲ್ಪಿಕಾಮಪಿ ॥೫೭॥

---

೫೪. ಮತ್ತು ರಕ್ತಬೀಜಾಸುರನ ರಕ್ತಪ್ರವಾಹದಿಂದ ಹುಟ್ಟಿಬಂದ, ಅವನಲ್ಲಿದ್ದಷ್ಟು ಬಲ ಪರಾಕ್ರಮಗಳಿಂದ ಕೂಡಿದ ಮಹಾಸುರರನ್ನು ತಿನ್ನುತ್ತ ಭೈರವರೂಪದಿಂದ ರಣರಂಗದಲ್ಲಿ ಸಂಚರಿಸು.

೫೫. ಹೀಗೆ ಮಾಡುವುದರಿಂದ ರಕ್ತವೆಲ್ಲವೂ ಕ್ಷಯಿಸಿ ಈ ಅಸುರನು ಕ್ಷಯಹೊಂದುವನು. ಮತ್ತು ಇದುವರೆಗೆ ಹುಟ್ಟಿದ ಅಸುರರನ್ನು ನೀನು ತಿಂದು ನಾಶಮಾಡು. ಮುಂದೆ ಇಂತಹ ರಾಕ್ಷಸರು ಹುಟ್ಟುವಂತಿಲ್ಲ.

ಋಷಿಯು ಹೇಳಿದನು:—

೫೬. ಚಂಡಿಕಾಂಬಿಕೆಯು ಕಾಲಿದೇವಿಗೆ ಹೀಗೆಂದು ಹೇಳಿ ತರುವಾಯ ಶೂಲದಿಂದ ಆ ಅಸುರನನ್ನು ಹೊಡೆದಳು. ಆಗ ಸುರಿದುಬಂದ ರಕ್ತಬೀಜಾಸುರನ ರಕ್ತಕ್ಕೆ ಕಾಳಿಯು ಬಾಯಿಕೊಟ್ಟು ಪಾನಮಾಡಿದಳು.

೫೭. ಆಮೇಲೆ ರಕ್ತಬೀಜಾಸುರನು ಯುದ್ಧಮಾಡುತ್ತ ಗದೆಯಿಂದ ಚಂಡಿಕಾದೇವಿಯನ್ನು ಹೊಡೆದನು. ಆದರೆ ಆ ಗದಾಪ್ರಹಾರವು ದೇವಿಗೆ ಸ್ವಲ್ಪವೂ ನೋವನ್ನು ಉಂಟುಮಾಡಲಿಲ್ಲ.

ತಸ್ಯಾಹತಸ್ಯ ದೇಹಾತ್ತು ಬಹು ಸುಸ್ರಾವ ಶೋಣಿತಮ್ ।
ಯತಸ್ತತಃ ಸ್ವವಕ್ತ್ರೇಣ ಚಾಮುಣ್ಡಾ ಸಂಪ್ರತೀಚ್ಛತಿ ॥೫೮॥

ಮುಖೇ ಸಮುದ್ಗತಾ ಯೇಽಸ್ಯಾ ರಕ್ತಪಾತಾನ್ಮಹಾಸುರಾಃ ।
ತಾಂಶ್ಚಖಾದಾಥ ಚಾಮುಣ್ಡಾ ಪಪೌ ತಸ್ಯ ಚ ಶೋಣಿತಮ್ ॥೫೯॥

ದೇವೀ ಶೂಲೇನ ಚಕ್ರೇಣ ಬಾಣೈರಸಿಭಿರಿಷ್ಟಿಭಿಃ ।
ಜಘಾನ ರಕ್ತಬೀಜಂ ತಂ ಚಾಮುಣ್ಡಾಪೀತಶೋಣಿತಮ್ ॥೬೦॥

ಸ ಪಪಾತ ಮಹೀಪೃಷ್ಠೇ ಶಸ್ತ್ರಸಂಹತಿತೋ ಹತಃ ।
ನೀರಕ್ತಶ್ಚ ಮಹೀಪಾಲ ರಕ್ತಬೀಜೋ ಮಹಾಸುರಃ ॥೬೧॥

---

೫೮. ಯುದ್ಧದಲ್ಲಿ ಎಲ್ಲ ಮಾತೃಗಣದಿಂದಲೂ ದೇವಿಯಿಂದಲೂ ಪ್ರಹರಿಸಲ್ಪಟ್ಟ ಆ ಅಸುರನ ದೇಹದಿಂದ ಬಹಳ ರಕ್ತವು ಸುರಿಯಿತು. ಆದರೆ ರಕ್ತವು ಕೆಳಕ್ಕೆ ಬೀಳಲು ಅವಕಾಶವಾಗದಂತೆ ಚಾಮುಂಡೆಯು ತನ್ನ ಬಾಯಿಯಿಂದ ಅದನ್ನು ಹೀರಿಕೊಂಡಳು.

೫೯. ಈ ಅಸುರನ ರಕ್ತಸ್ರಾವದಿಂದ ಎಷ್ಟು ಮಂದಿ ಮಹಾ ಅಸುರರು ಕಾಳೀದೇವಿಯ ಮುಖದಲ್ಲಿ ಹುಟ್ಟಿದರೊ ಅವರೆಲ್ಲರನ್ನೂ ಕಾಳೀದೇವಿಯು ತಿಂದುಹಾಕಿದಳು. ಮತ್ತು ಅಸುರನ ರಕ್ತವನ್ನು ಹೀರಿ ಕುಡಿದಳು.

೬೦. ಆ ಸಮಯದಲ್ಲಿ ಚಾಮುಂಡಾಂಬಿಕೆಯು ಹೀರಿ ಕುಡಿದು ರಕ್ತಶೂನ್ಯನಾದ ರಕ್ತಬೀಜ ಅಸುರನನ್ನು ದೇವಿಯು ಶೂಲ-ಚಕ್ರ-ಬಾಣ-ಕತ್ತಿ-ಋಷ್ಟಿ ಮುಂತಾದ ಬಗೆಬಗೆಯ ಆಯುಧಗಳಿಂದ ಹೊಡೆದಳು.

೬೧. ಎಲೈ ಸುರಥಮಹಾರಾಜನೆ! ಹೀಗೆ ಮೇಲೆ ಮೇಲೆ ಅನೇಕ ಶಸ್ತ್ರಸಮೂಹದಿಂದ ಹೊಡೆಯಲ್ಪಟ್ಟ ರಕ್ತಬೀಜ ಮಹಾಸುರನು ರಕ್ತವೇ ಇಲ್ಲದಂತಾಗಿ ಸತ್ತು ನೆಲದಮೇಲೆ ಬಿದ್ದನು.

ತತಸ್ತೇ ಹರ್ಷಮತುಲಮವಾಪುಸ್ತ್ರಿದಶಾ ನೃಪ ।
ತೇಷಾಂ ಮಾತೃಗಣೋ ಮತ್ತೋ ನನರ್ತಾಸೃಙ್ಮದೋದ್ಧತಃ ॥೬೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ರಕ್ತಬೀಜವಧೋ ನಾಮ ಪಞ್ಚಾಶೀತಿತಮೋಽಧ್ಯಾಯಃ

---

೬೨. ಸುರಥಮಹಾರಾಜನೇ! ತರುವಾಯ ದೇವತೆಗಳು ಭಯಂಕರನಾದ ರಾಕ್ಷಸನ ವಧೆಯಿಂದ ಅತಿಶಯವಾದ ಸಂತೋಷವನ್ನು ಹೊಂದಿದರು. ಮತ್ತು ಆಯಾಯ ದೇವತಾಂಶಗಳಿಂದ ಜನಿಸಿದ ಮಾತೃದೇವತೆಗಳ ಗಣವು ಆ ರಾಕ್ಷಸರ ರಕ್ತವನ್ನು ಪಾನಮಾಡಿ ಮದವೇರಿ ಕುಣಿದಾಡಿತು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತೈದನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಡಶೀತಿತಮೋಽಧ್ಯಾಯಃ

(ನಿಶುಂಭಾಸುರವಧಃ)

ರಾಜೋವಾಚ :—

ವಿಚಿತ್ರಮಿದಮಾಖ್ಯಾತಂ ಭಗವನ್ ಭವತಾ ಮಮ ।
ದೇವ್ಯಾಶ್ಚರಿತಮಾಹಾತ್ಮ್ಯಂ ರಕ್ತಬೀಜವಧಾಶ್ರಿತಮ್ ॥೧॥

ಭೂಯಶ್ಚೇಚ್ಛಾಮ್ಯಹಂ ಶ್ರೋತುಂ ರಕ್ತಬೀಜೇ ನಿಪಾತಿತೇ ।
ಚಕಾರ ಶುಂಭೋ ಯತ್ಕರ್ಮ ನಿಶುಂಭಶ್ಚಾತಿಕೋಪನಃ ॥೨॥

ಎಂಭತ್ತಾರನೆಯ ಅಧ್ಯಾಯ

ಸುರಥರಾಜನು ಇಂತೆಂದನು :—

೧. ಮಹಾಮಹಿಮನಾದ ಸುಮೇಧಮುನಿಯೇ ! ರಕ್ತಬೀಜಾಸುರನ ಸಂಹಾರವನ್ನು ಪ್ರಕಾಶಿಸುವ, ವಿಚಿತ್ರವಾದ ದೇವಿಯ ಚರಿತ್ರದ ಮಹಿಮೆಯು ನಿನ್ನಿಂದ ನನಗೆ ವರ್ಣಿಸಲ್ಪಟ್ಟಿದೆ.

೨. ಹೀಗೆ ರಕ್ತಬೀಜಾಸುರನ ವಧೆಯಾದ ಮೇಲೆ ಅತಿಯಾದ ಕೋಪದ ಸ್ವಭಾವವುಳ್ಳ ಶುಂಭಾಸುರನೂ ಹಾಗು ನಿಶುಂಭಾಸುರನೂ ಮುಂದೇನು ಸಾಹಸವನ್ನು ಮಾಡಿದರೆಂಬುದನ್ನು ಮತ್ತೆ ನಾನು ಕೇಳಲು ಇಷ್ಟವುಳ್ಳವನಾಗಿದ್ದೇನೆ.

ಋಷಿರುವಾಚ :—

ಚಕಾರ ಕೋಪಮತುಲಂ ರಕ್ತಬೀಜೇ ನಿಪಾತಿತೇ ।
ಶುಮ್ಭಾಸುರೋ ನಿಶುಮ್ಭಶ್ಚ ಹತೇಷ್ವನ್ಯೇಷು ಚಾಹವೇ ॥೧॥

ಹನ್ಯಮಾನಂ ಮಹಾಸೈನ್ಯಂ ವಿಲೋಕ್ಯಾಮರ್ಷಮುದ್ವಹನ್ ।
ಅಭ್ಯಧಾವನ್ನಿಶುಮ್ಭೋಽಥ ಮುಖ್ಯಯಾಸುರಸೇನಯಾ ॥೨॥

ತಸ್ಯಾಗ್ರತಸ್ತಥಾ ಪೃಷ್ಠೇ ಪಾರ್ಶ್ವಯೋಶ್ಚ ಮಹಾಸುರಾಃ ।
ಸನ್ದಷ್ಟೌಷ್ಠಪುಟಾಃ ಕ್ರುದ್ಧಾ ಹನ್ತುಂ ದೇವೀಮುಪಾಯಯುಃ ॥೩॥

ಆಜಗಾಮ ಮಹಾವೀರ್ಯಃ ಶುಮ್ಭೋಽಪಿ ಸ್ವಬಲೈರ್ವೃತಃ ।
ನಿಹನ್ತುಂ ಚಣ್ಡಿಕಾಂ ಕೋಪಾತ್ಕೃತ್ವಾ ಯುದ್ಧಂ ತು ಮಾತೃಭಿಃ॥೪॥

ಸುಮೇಧ ಋಷಿಯು ಹೇಳಿದನು :—

೧. ರಕ್ತಬೀಜಾಸುರನು ಸತ್ತುಬಿದ್ದು ಹಾಗೆಯೇ ರಣರಂಗದಲ್ಲಿ ಇತರ ಅನೇಕ ರಾಕ್ಷಸರು ಹತರಾಗಿ ಹೋಗಲು ಶುಂಭ-ನಿಶುಂಭಾಸುರರಿಬ್ಬರು ಅತಿಯಾಗಿ ಕೋಪಾವೇಶತಾಳಿದರು.

೨. ಪ್ರತಿಕ್ಷಣದಲ್ಲಿ ತನ್ನ ಭಾರಿಯಾದ ಸೈನ್ಯವು ಸಂಹರಿಸಲ್ಪಡು-ತ್ತಿದ್ದುದನ್ನು ಕಂಡು ಕೋಪ-ಅಸಹನೆಗಳನ್ನು ಹೊಂದಿದ ನಿಶುಂಭಾಸುರನು ಪ್ರಧಾನವಾದ ರಾಕ್ಷಸಸೈನ್ಯದೊಡನೆ ದೇವಿಯ ಮೇಲೆ ಯುದ್ಧಕ್ಕೆ ಬಂದನು.

೩. ಆ ನಿಶುಂಭಾಸುರನ ಮುಂಭಾಗ, ಹಿಂಭಾಗ ಮತ್ತು ಎರಡು ಪಾರ್ಶ್ವಗಳಲ್ಲಿ ದೊಡ್ಡ ರಾಕ್ಷಸರು ಗುಂಪುಕೂಡಿದವರೂ ಕೋಪಾವೇಶವುಳ್ಳವರೂ ಮತ್ತು ಕಡಿಯುತ್ತಿದ್ದ ತುಟಿಗಳುಳ್ಳವರೂ ಆಗಿ ದೇವಿಯನ್ನು ಸಂಹಾರಮಾಡಲು ಬಂದರು.

೪. ಮಹತ್ತಾದ ವೀರ್ಯದಿಂದ ಕೂಡಿದ ಶುಂಭಾಸುರನೂ ತನ್ನ ಸೈನ್ಯಪರಿವಾರಸಮೇತನಾಗಿ ಮಾತೃದೇವತೆಗಳೊಡನೆ ಯುದ್ಧಮಾಡಿ ಚಂಡಿಕಾಂ-ಬಿಕೆಯನ್ನು ಸಂಹರಿಸುವೆನೆಂಬ ಸಂಕಲ್ಪದಿಂದ ಕೋಪಾವೇಶದಿಂದ ಬಂದನು.

ತತೋ ಯುದ್ಧಮತೀವಾಸೀದ್ದೇವ್ಯಾಃ ಶುಮ್ಭನಿಶುಮ್ಭಯೋಃ ।
ಶರವರ್ಷಮತೀವೋಗ್ರಂ ಮೇಘಯೋರಿವ ವರ್ಷತೋಃ ॥೭॥

ಚಿಚ್ಛೇದಾಸ್ತಾಞ್ಛರಾಂಸ್ತಾಭ್ಯಾಂ ಚಣ್ಡಿಕಾ ಸ್ವಶರೋತ್ಕರೈಃ ।
ತಾಡಯಾಮಾಸ ಚಾಙ್ಗೇಷು ಶಸ್ತ್ರೌಘೈರಸುರೇಶ್ವರೌ ॥೮॥

ನಿಶುಮ್ಭೋ ನಿಶಿತಂ ಖಡ್ಗಂ ಚರ್ಮ ಚಾದಾಯ ಸುಪ್ರಭಮ್ ।
ಅತಾಡಯನ್ಮೂರ್ಧ್ನಿ ಸಿಂಹಂ ದೇವ್ಯಾ ವಾಹನಮುತ್ತಮಮ್ ॥೯॥

ತಾಡಿತೇ ವಾಹನೇ ದೇವೀ ಕ್ಷುರಪ್ರೇಣಾಸಿಮುತ್ತಮಮ್ ।
ನಿಶುಮ್ಭಸ್ಯಾಶು ಚಿಚ್ಛೇದ ಚರ್ಮ ಚಾಪ್ಯಷ್ಟಚನ್ದ್ರಕಮ್ ॥೧೦॥

---

೭. ತರುವಾಯ ಮಳೆಯನ್ನು ಸುರಿಸುತ್ತಿರುವ ಎರಡು ಮೋಡಗಳಂತೆ ಉಗ್ರವಾಗಿ ಬಾಣಗಳ ಮಳೆಯನ್ನು ಸುರಿಸುತ್ತಿರುವ ಶುಂಭ-ನಿಶುಂಭ ಅಸುರರಿಗೂ ಚಂಡಿಕಾಂಬಿಕೆಗೂ ಅತಿ ಬಿರುಸಿನಿಂದ ಘೋರವಾದ ಯುದ್ಧವು ಜರುಗಿತು.

೮. ಈ ಸಂದರ್ಭದಲ್ಲಿ ಶುಂಭ-ನಿಶುಂಭರು ಪ್ರಯೋಗಿಸಿದ ಬಾಣಗಳನ್ನು ದೇವಿಯು ತನ್ನ ಬಾಣರಾಶಿಯಿಂದ ಕತ್ತರಿಸಿದಳು. ಮತ್ತು ರಾಕ್ಷಸರ ಪ್ರಭುಗಳಾದ ಶುಂಭ-ನಿಶುಂಭ ಅಸುರರ ದೇಹದ ಮೇಲೆ ಅನೇಕ ಬಾಣ-ಸಮೂಹಗಳಿಂದ ಪ್ರಹರಿಸಿದಳು.

೯. ನಿಶುಂಭಾಸುರನು ಹರಿತವೂ, ಉಜ್ವಲವಾದ ಪ್ರಭೆಯಿಂದ ಹೊಳೆಯುತ್ತಿರುವುದೂ ಆದ ಖಡ್ಗವನ್ನೂ ಫಲಕಾಯುಧವನ್ನೂ ತೆಗೆದುಕೊಂಡು ಬಂದು ದೇವಿಯ ಉತ್ತಮ ವಾಹನವಾದ ಸಿಂಹದ ತಲೆಯ ಮೇಲೆ ಹೊಡೆದನು.

೧೦. ಹೀಗೆ ನಿಶುಂಭನು ದೇವಿಯ ವಾಹನವನ್ನು ಹೊಡೆದಿರಲು ದೇವಿಯು ಕ್ಷುರಪ್ರವೆಂಬ ಒಂದು ಆಯುಧದಿಂದ ನಿಶುಂಭನು ಹಿಡಿದಿದ್ದ ಉತ್ತಮವಾದ ಖಡ್ಗಾಯುಧವನ್ನೂ ಮತ್ತು ಎಂಟು ಚಂದ್ರಾಕೃತಿಗಳಿಂದ ಕೂಡಿದ ಫಲಕಾಯುಧವನ್ನೂ ಕ್ಷಣಮಾತ್ರದಲ್ಲಿ ಕತ್ತರಿಸಿದಳು.

ಛಿನ್ನೇ ಚರ್ಮಣಿ ಖಡ್ಗೇ ಚ ಶಕ್ತಿಂ ಚಿಕ್ಷೇಪ ಸೋಽಸುರಃ ।
ತಾಮಪ್ಯಸ್ಯ ದ್ವಿಧಾ ಚಕ್ರೇ ಚಕ್ರೇಣಾಭಿಮುಖಾಗತಾಮ್ ॥೧೧॥

ಕೋಪಾಧ್ಮಾತೋ ನಿಶುಮ್ಭೋಽಥ ಶೂಲಂ ಜಗ್ರಾಹ ದಾನವಃ ।
ಆಯಾನ್ತಂ ಮುಷ್ಟಿಪಾತೇನ ದೇವೀ ತಚ್ಚಾಪ್ಯಚೂರ್ಣಯತ್ ॥೧೨॥

ಅಥಾದಾಯ ಗದಾಂ ಸೋಽಪಿ ಚಿಕ್ಷೇಪ ಚಣ್ಡಿಕಾಂ ಪ್ರತಿ ।
ಸಾಪಿ ದೇವ್ಯಾ ತ್ರಿಶೂಲೇನ ಭಿನ್ನಾ ಭಸ್ಮತ್ವಮಾಗತಾ ॥೧೩॥

ತತಃ ಪರಶುಹಸ್ತಂ ತಮಾಯಾನ್ತಂ ದೈತ್ಯಪುಙ್ಗವಮ್ ।
ಆಹತ್ಯ ದೇವೀ ಬಾಣೌಘೈರಪಾತಯತ ಭೂತಲೇ ॥೧೪॥

---

೧೧. ಆ ನಿಶುಂಭಾಸುರನು ತನ್ನ ಚರ್ಮ ಖಡ್ಗಗಳೆಂಬ ಎರಡು ಆಯುಧಗಳು ಕತ್ತರಿಸಲ್ಪಡಲಾಗಿ ಶಕ್ತಿ ಆಯುಧವನ್ನು ದೇವಿಯಮೇಲೆ ಪ್ರಯೋಗಿಸಿದನು. ಆಗ ದೇವಿಯು ತನ್ನ ಎದುರುಬರುತ್ತಿದ್ದ ಆ ಶಕ್ತಿ ಆಯುಧವನ್ನು ಚಕ್ರದಿಂದ ಎರಡು ತುಂಡನ್ನಾಗಿ ಮಾಡಿದಳು.

೧೨. ಶಕ್ತಿ ಆಯುಧವು ಕತ್ತರಿಸಿಹೋದ ಬಳಿಕ ಅತಿ ಕೋಪದಿಂದ ಮೈಮರೆತ ನಿಶುಂಭದಾನವನು ಶೂಲಾಯುಧವನ್ನು ತೆಗೆದುಕೊಂಡನು. ದೇವಿಯು ತನ್ನ ಅಭಿಮುಖವಾಗಿ ಬರುತ್ತಿದ್ದ ಶೂಲವನ್ನು ಮುಷ್ಟಿಪ್ರಹಾರದಿಂದ ಪುಡಿಮಾಡಿದಳು.

೧೩. ಅನಂತರದಲ್ಲಿ ಆ ಅಸುರನು ಗದೆಯನ್ನು ಎತ್ತಿ ಚಂಡಿಕಾದೇವಿಯ ಮೇಲೆ ಎಸೆದನು. ಆ ಗದೆಯು ದೇವಿಯ ತ್ರಿಶೂಲದಿಂದ ಭೇದಿಸಲ್ಪಟ್ಟು ಉರಿದು ಬೂದಿಯಾಗಿ ಬಿದ್ದಿತು.

೧೪. ತರುವಾಯ ಕೈಯಲ್ಲಿ ಕೊಡಲಿಯನ್ನು ಎತ್ತಿಕೊಂಡು ಸಮ್ಮುಖವಾಗಿ ಬರುತ್ತಿದ್ದ ದೈತ್ಯೋತ್ತಮನಾದ ನಿಶುಂಭನನ್ನು ದೇವಿಯು ಬಾಣರಾಶಿಯಿಂದ ಹೊಡೆದು ನೆಲಕ್ಕೆ ಉರುಳಿಸಿದಳು.

ತಸ್ಮಿನ್ನಿಪತಿತೇ ಭೂಮೌ ನಿಶುಮ್ಭೇ ಭೀಮವಿಕ್ರಮೋ ।
ಭ್ರಾತರ್ಯತೀವ ಸಂಕ್ರುದ್ಧಃ ಪ್ರಯಯೌ ಹನ್ತುಮಮ್ಬಿಕಾಮ್ ॥೧೩॥

ಸ ರಥಸ್ಥಸ್ತದಾತ್ಯುಚ್ಚೈರ್ಗೃಹೀತಪರಮಾಯುಧೈಃ ।
ಭುಜೈರಷ್ಟಾಭಿರತುಲೈರ್ವ್ಯಾಪ್ಯಾಶೇಷಂ ಬಭೌ ನಭಃ ॥೧೪॥

ಸಮಾಯಾನ್ತಂ ಸಮಾಲೋಕ್ಯ ದೇವೀ ಶಙ್ಖಮವಾದಯತ್ ।
ಜ್ಯಾಶಬ್ದಂ ಚಾಪಿ ಧನುಷಶ್ಚಕಾರಾತೀವ ದುಃಸಹಮ್ ॥೧೫॥

ಪೂರಯಾಮಾಸ ಕಕುಭೋ ನಿಜಘಣ್ಟಾಸ್ವನೇನ ಚ ।
ಸಮಸ್ತದೈತ್ಯಸೈನ್ಯಾನಾಂ ತೇಜೋವಧವಿಧಾಯಿನಾ ॥೧೬॥

---

೧೩. ಹೀಗೆ ಭಯಂಕರವಾದ ವಿಕ್ರಮವುಳ್ಳ ತಮ್ಮನಾದ ನಿಶುಂಭಾಸುರನು ದೇವಿಯಿಂದ ಹೊಡೆಯಲ್ಪಟ್ಟು ಮೂರ್ಛೆಹೊಂದಿ ಕೆಳಗೆ ಬೀಳಲಾಗಿ ಶುಂಭಾಸುರನು ಬಲು ಕೋಪಗೊಂಡವನಾಗಿ ಚಂಡಿಕಾದೇವಿಯನ್ನು ಕೊಲ್ಲಲು ಬಂದನು.

೧೪. ಆಗ ರಥವನ್ನೇರಿ ಕುಳಿತಿರುವ ಶುಂಭಾಸುರನು ಹಿಡಿದುಕೊಂಡಿರುವ ಉತ್ತಮವಾದ ಆಯುಧಗಳುಳ್ಳದ್ದೂ, ಅತಿ ದೀರ್ಘವೂ ಮತ್ತು ನಿರುಪಮವೂ ಆದ ಎಂಟು ಭುಜಗಳಿಂದ ಸಂಪೂರ್ಣ ಆಕಾಶವನ್ನು ಮುಚ್ಚಿದಂತೆ ಪ್ರಕಾಶಿಸಿದನು.

೧೫. ಆಗ ದೇವಿಯು ತನ್ನ ಸಮ್ಮುಖದಲ್ಲಿ ಬರುತ್ತಿದ್ದ ಶುಂಭಾಸುರನನ್ನು ನೋಡಿ ಗಟ್ಟಿಯಾಗಿ ಶಂಖವನ್ನು ಊದಿದಳು. ಮತ್ತು ಬಿಲ್ಲಿನ ಹುರಿಯನ್ನು ಎಳೆದು ಕೇಳಲಾಗದಂತಹ ಟಂಕಾರಶಬ್ದವನ್ನು ಮಾಡಿದಳು.

೧೬. ಮತ್ತು ದೇವಿಯು ಎಲ್ಲ ದೈತ್ಯ-ದಾನವರ ತೇಜಸ್ಸನ್ನು ಭಂಗಗೊಳಿಸುವಂತಹ ತನ್ನ ಘಂಟಾಧ್ವನಿಯಿಂದ ದಿಕ್ಕು-ಮೂಲೆಗಳನ್ನು ತುಂಬಿಸಿದಳು. ಶಂಖ-ಬಿಲ್ಲಿನ ಟಂಕಾರ-ಘಂಟಾಧ್ವನಿಗಳು ರಾಕ್ಷಸರಿಗೆ ಭಯಂಕರವಾಗಿದ್ದುವು.

ತತಃ ಸಿಹ್ಮೋ ಮಹಾನಾದೈಸ್ತ್ಯಾಜಿತೇಭಮಹಾಮದೈಃ ।
ಪೂರಯಾಮಾಸ ಗಗನಂ ಗಾಂ ತಥೈವ ದಿಶೋ ದಶ ॥೧೯॥

ತತಃ ಕಾಲೀ ಸಮುತ್ಪತ್ಯ ಗಗನಂ ಕ್ಷ್ಮಾಮತಾಡಯತ್ ।
ಕರಾಭ್ಯಾಂ ತನ್ನಿನಾದೇನ ಪ್ರಾಕ್ಸ್ವನಾಸ್ತೇ ತಿರೋಹಿತಾಃ ॥೨೦॥

ಅಟ್ಟಾಟ್ಟಹಾಸಮತುಲಂ ಶಿವದೂತೀ ಚಕಾರ ಹ ।
ತೈಃ ಶಬ್ದೈರಸುರಾಸ್ತ್ರೇಸುಃ ಶುಮ್ಭಃ ಕೋಪಂ ಪರಂ ಯಯೌ ॥೨೧॥

ದುರಾತ್ಮಂಸ್ತಿಷ್ಠ ತಿಷ್ಠೇತಿ ವ್ಯಾಜಹಾರಾಮ್ಬಿಕಾ ಯದಾ ।
ತದಾ ಜಯೇತ್ಯಭಿಹಿತಂ ದೇವೈರಾಕಾಶಸಂಸ್ಥಿತೈಃ ॥೨೨॥

---

೧೯. ತರುವಾಯ ದೇವಿಯ ವಾಹನವಾದ ಸಿಂಹವು ಆನೆಗಳ ಮದವನ್ನು ಇಳಿಸುವಂತಹ ದೊಡ್ಡ ಗರ್ಜನೆಗಳಿಂದ ಆಕಾಶವನ್ನು ಮತ್ತು ಹತ್ತು ದಿಕ್ಕುಗಳನ್ನು ಶಬ್ದಮಯವನ್ನಾಗಿ ಮಾಡಿತು.

೨೦. ಅನಂತರವಲ್ಲಿ ಕಾಲೀದೇವಿಯು ಆಕಾಶಕ್ಕೆ ನೆಗೆದು ಕೈಗಳಿಂದ ನೆಲವನ್ನು ಅಪ್ಪಳಿಸಿದಳು. ಅದರಿಂದ ಉಂಟಾದ ಕಠೋರ ಧ್ವನಿಯಿಂದ ಮೊದಲಿನ ಧ್ವನಿಗಳೆಲ್ಲವೂ ಅಡಗಿಹೋದುವು.

೨೧. ಅಷ್ಟರಲ್ಲಿ ಚಂಡಿಕಾದೇವಿಯ ದೇಹದಿಂದ ಹುಟ್ಟಿದ ಶಿವದೂತಿಯು ಕರ್ಣಕಠೋರವಾದ ಅಟ್ಟಹಾಸವನ್ನು ಮಾಡಿದಳು. ಆ ಅಟ್ಟಹಾಸದ ಶಬ್ದಗಳಿಂದ ಅಸುರರು ಭಯಗೊಂಡರು. ಶುಂಭಾಸುರನು ಹೆಚ್ಚಾದ ಕೋಪವುಳ್ಳವನಾದನು.

೨೨. ಆ ಸಮಯದಲ್ಲಿ ದೇವಿಯು ಯಾವಾಗ ನೀಚರಾಕ್ಷಸನನ್ನು ನೋಡಿ "ಎಲೈ ದುರುಳನೇ ! ನಿಲ್ಲು, ನಿಲ್ಲು" ಎಂದು ಗರ್ಜಿಸಿದಳೋ ಆಗ ಆಕಾಶದಲ್ಲಿ ನಿಂತಿದ್ದ ದೇವತೆಗಳು ದೇವಿಗೆ ಜಯವನ್ನು ಕೋರಿ ಜಯಘೋಷಣೆಯನ್ನು ಮಾಡಿದರು.

ಶುಮ್ಭೇನಾಗತ್ಯ ಯಾ ಶಕ್ತಿರ್ಮುಕ್ತಾ ಜ್ವಾಲಾತಿಭೀಷಣಾ ।
ಆಯಾನ್ತೀ ವಹ್ನಿಕೂಟಾಭಾ ಸಾ ನಿರಸ್ತಾ ಮಹೋಲ್ಕಯಾ ॥೨೩॥

ಸಿಮ್ಹನಾದೇನ ಶುಮ್ಭಸ್ಯ ವ್ಯಾಪ್ತಂ ಲೋಕತ್ರಯಾನ್ತರಮ್ ।
ನಿರ್ಘಾತನಿಸ್ವನೋ ಘೋರೋ ಜಿತವಾನವನೀಪತೇ ॥೨೪॥

ಶುಮ್ಭಮುಕ್ತಾನ್ಶರಾನ್ದೇವೀ ಶುಮ್ಭಸ್ತತ್ಪ್ರಹಿತಾನ್ಶರಾನ್ ।
ಚಿಚ್ಛೇದ ಸ್ವಶರೈರುಗ್ರೈಃ ಶತಶೋಽಥ ಸಹಸ್ರಶಃ ॥೨೫॥

ತತಃ ಸಾ ಚಣ್ಡಿಕಾ ಕ್ರುದ್ಧಾ ಶೂಲೇನಾಭಿಜಘಾನ ತಮ್ ।
ಸ ತದಾಭಿಹತೋ ಭೂಮೌ ಮೂರ್ಛಿತೋ ನಿಪಪಾತ ಹ ॥೨೬॥

---

೨೩. ಶುಂಭಾಸುರನಿಂದ ಉರಿಯುತ್ತಿದ್ದ ಬೆಂಕಿಯ ಜ್ವಾಲೆಗಳಿಂದ ಭಯಂಕರವಾದ ಯಾವ ಶಕ್ತಿ ಆಯುಧವು ಪ್ರಯೋಗಿಸಲ್ಪಟ್ಟಿತೋ ಬೆಂಕಿಯ-ರಾಶಿಯಂತೆ ಹೊಳೆಯುತ್ತ ತನ್ನ ಎದುರು ಬರುತ್ತಿದ್ದ ಆ ಶಕ್ತಿ ಆಯುಧವನ್ನು ದೇವಿಯು ತನ್ನ ದೊಡ್ಡ ಉಲ್ಕಾಯುಧದಿಂದ ನಿವಾರಿಸಿದಳು.

೨೪. ಎಲೈ ರಾಜನೆ! ಶುಂಭಾಸುರನ ಸಿಂಹನಾದದಿಂದ ಮೂರು ಲೋಕಗಳ ಮಧ್ಯಭಾಗವೆಲ್ಲವೂ ತುಂಬಿಹೋಯಿತು. ಆದರೆ ಅವನ ಸೈನಿಕರ "ಹೊಡಿ, ಬಡಿ" ಮುಂತಾದ ವೀರಾವೇಶದ ಕೂಗಿನಿಂದ ಸಿಂಹನಾದವು ಅಡಗಿಹೋಯಿತು.

೨೫. ಶುಂಭಾಸುರನು ಬಿಟ್ಟ ಬಾಣಗಳನ್ನು ದೇವಿಯು ಕತ್ತರಿಸಿದಳು. ಅಂತೆಯೇ ದೇವಿಯು ಪ್ರಯೋಗಿಸಿದ ಬಾಣಗಳನ್ನು ಶುಂಭಾಸುರನು ಕತ್ತರಿಸಿದನು. ಹೀಗೆ ಇಬ್ಬರು ತಮ್ಮ ತಮ್ಮ ಉಗ್ರ ಬಾಣಗಳಿಂದ ಶತ-ಸಹಸ್ರಸಂಖ್ಯೆಯ ಪ್ರತಿಬಾಣಗಳನ್ನು ಕತ್ತರಿಸಿದರು.

೨೬. ತರುವಾಯ ಚಂಡಿಕಾದೇವಿಯು ಬಹಳ ಕೋಪಗೊಂಡು ಶೂಲಾಯುಧದಿಂದ ಆ ರಾಕ್ಷಸನನ್ನು ಹೊಡೆದಳು. ಆಗ ಆ ರಾಕ್ಷಸನು ಶೂಲದಿಂದ ತಿವಿಯಲ್ಪಟ್ಟು ಮೂರ್ಛೆ ಹೊಂದಿ ನೆಲದ ಮೇಲೆ ಬಿದ್ದನು.

ತತೋ ನಿಶುಮ್ಭಃ ಸಮ್ಪ್ರಾಪ್ಯ ಚೇತನಾಮಾತ್ತಕಾರ್ಮುಕಃ ।
ಆಜಘಾನ ಶರೈರ್ದೇವೀಂ ಕಾಲೀಂ ಕೇಸರಿಣಂ ತಥಾ ॥೨೭॥

ಪುನಶ್ಚ ಕೃತ್ವಾ ಬಾಹೂನಾಮಯುತಂ ದನುಜೇಶ್ವರಃ ।
ಚಕ್ರಾಯುತೇನ ದಿತಿಜಶ್ಛಾದಯಾಮಾಸ ಚಣ್ಡಿಕಾಮ್ ॥೨೮॥

ತತೋ ಭಗವತೀ ಕ್ರುದ್ಧಾ ದುರ್ಗಾ ದುರ್ಗಾರ್ತಿನಾಶಿನೀ ।
ಚಿಚ್ಛೇದ ತಾನಿ ಚಕ್ರಾಣಿ ಸ್ವಶರೈಃ ಸಾಯಕಾಂಶ್ಚ ತಾನ್ ॥೨೯॥

ತತೋ ನಿಶುಮ್ಭೋ ವೇಗೇನ ಗದಾಮಾದಾಯ ಚಣ್ಡಿಕಾಮ್ ।
ಅಭ್ಯಧಾವತ ವೈ ಹನ್ತುಂ ದೈತ್ಯಸೇನಾಸಮಾವೃತಃ ॥೩೦॥

---

೨೭. ಇಷ್ಟರಲ್ಲಿ ನಿಶುಂಭಾಸುರನು ಪ್ರಜ್ಞೆಯನ್ನು ಹೊಂದಿ ಮತ್ತೆ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಬಂದು ಬಾಣಗಳಿಂದ ದೇವಿಯನ್ನೂ, ಕಾಳಿಯನ್ನೂ ಮತ್ತು ಸಿಂಹವನ್ನೂ ಹೊಡೆದನು.

೨೮. ದಾನವರಿಗೆ ಪ್ರಭುವೂ, ದಿತಿವಂಶದಲ್ಲಿ ಜನಿಸಿದವನೂ ಆದ ನಿಶುಂಭಾಸುರನು ಮತ್ತೆ ಮಾಯೆಯಿಂದ ಹತ್ತು ಸಹಸ್ರ ತೋಳುಗಳಿಂದ ಹತ್ತು ಸಹಸ್ರ ಚಕ್ರಾಯುಧಗಳನ್ನು ಹಿಡಿದು ಬಂದು ಆ ಆಯುಧಗಳನ್ನು ಪ್ರಯೋಗಿಸಿ ದೇವಿಯನ್ನು ಆವರಿಸಿದನು.

೨೯. ತರುವಾಯ ಅಖಂಡೈಶ್ವರ್ಯಸಂಪನ್ನಳೂ, ಅತಿಸಂಕಷ್ಟಗಳನ್ನು ಪರಿಹರಿಸುವವಳೂ ಆದ ಚಂಡಿಕಾದೇವಿಯು ಕೋಪಗೊಂಡವಳಾಗಿ ನಿಶುಂಭಾಸುರನ ಚಕ್ರಾಯುಧಗಳನ್ನೂ ಮತ್ತು ಬಾಣಗಳನ್ನೂ ಕತ್ತರಿಸಿದಳು.

೩೦. ತರುವಾಯ ನಿಶುಂಭಾಸುರನು ದೈತ್ಯಸೇನೆಯಿಂದ ಸುತ್ತಲ್ಪಟ್ಟವನಾಗಿ ಗದೆಯನ್ನು ತೆಗೆದುಕೊಂಡು ದೇವಿಯನ್ನು ಕೊಲ್ಲಬೇಕೆಂಬ ಸಂಕಲ್ಪದಿಂದ ವೇಗದಿಂದ ದೇವಿಯ ಬಳಿಗೆ ಓಡಿಬಂದನು.

ತಸ್ಯಾಪತತ ಏವಾಶು ಗದಾಂ ಚಿಚ್ಛೇದ ಚಣ್ಡಿಕಾ ।
ಖಡ್ಗೇನ ಶಿತಧಾರೇಣ ಸ ಚ ಶೂಲಂ ಸಮಾದದೇ ॥೩೧॥

ಶೂಲಹಸ್ತಂ ಸಮಾಯಾನ್ತಂ ನಿಶುಮ್ಭಮಮರಾರ್ದನಮ್ ।
ಹೃದಿ ವಿವ್ಯಾಧ ಶೂಲೇನ ವೇಗಾವಿದ್ಧೇನ ಚಣ್ಡಿಕಾ ॥೩೨॥

ಭಿನ್ನಸ್ಯ ತಸ್ಯ ಶೂಲೇನ ಹೃದಯಾನ್ನಿಃಸೃತೋಽಪರಃ ।
ಮಹಾಬಲೋ ಮಹಾವೀರ್ಯಸ್ತಿಷ್ಠೇತಿ ಪುರುಷೋ ವದನ್ ॥೩೩॥

ತಸ್ಯ ನಿಷ್ಕ್ರಾಮತೋ ದೇವೀ ಪ್ರಹಸ್ಯ ಸ್ವನವತ್ತತಃ ।
ಶಿರಶ್ಚಿಚ್ಛೇದ ಖಡ್ಗೇನ ತತೋಽಸಾವಪತದ್ಭುವಿ ॥೩೪॥

---

೩೧. ಆಗ ಚಂಡಿಕಾದೇವಿಯು ತನ್ನ ಬಳಿಗೆ ನಿಶುಂಭಾಸುರನು ಬರುತ್ತಿದ್ದ ಹಾಗೆಯೆ ಹರಿತವಾದ ಮೊನೆಯುಳ್ಳ ಖಡ್ಗದಿಂದ ಅವನ ಗದೆಯನ್ನು ಕತ್ತರಿಸಿದಳು. ಆಗ ಅಸುರನು ಮತ್ತೆ ಶೂಲವನ್ನು ತೆಗೆದುಕೊಂಡನು.

೩೨. ಆಗ ಚಂಡಿಕಾದೇವಿಯು ಅಮರರನ್ನು ಪೀಡಿಸುವ ನಿಶುಂಭಾಸುರನು ಶೂಲವನ್ನು ಹಿಡಿದು ತನ್ನ ಎದುರು ಬರುತ್ತಿರುವಷ್ಟರಲ್ಲಿ ತನ್ನ ಶೂಲವನ್ನು ಎತ್ತಿ ವೇಗವಾಗಿ ಅಸುರನ ಹೃದಯಕ್ಕೆ ಪ್ರಹರಿಸಿದಳು.

೩೩. ಹೀಗೆ ದೇವಿಯ ಶೂಲದಿಂದ ಪ್ರಹರಿಸಲ್ಪಟ್ಟ ನಿಶುಂಭಾಸುರನ ಹೃದಯದಿಂದ ಮಹಾಬಲಿಷ್ಠನೂ, ಅತಿಯಾದ ವೀರ್ಯದಿಂದ ಕೂಡಿದವನೂ ಮತ್ತು " ನಿಲ್ಲು " ಎಂದು ಕೂಗಿಕೊಳ್ಳುವವನೂ ಆದ ಮತ್ತೊಬ್ಬ ಪುರುಷನು ಹೊರಟು ಬಂದನು.

೩೪. ತರುವಾಯ ಚಂಡಿಕಾದೇವಿಯು ಆ ಪುರುಷನು ಅಸುರನ ಎದೆಯಿಂದ ಹೊರಗೆ ಹೊರಡುವಷ್ಟರಲ್ಲಿ ಶಬ್ದವಾಗುವ ಹಾಗೆ ನಗುತ್ತ ಖಡ್ಗಾಯುಧದಿಂದ ಅವನ ತಲೆಯನ್ನು ಕತ್ತರಿಸಿದಳು. ಆ ಮೇಲೆ ಪುರುಷನು ನೆಲದ ಮೇಲೆ ಬಿದ್ದನು.

ತತಃ ಸಿಹ್ಮಶ್ಚಖಾದೋಗ್ರದಂಷ್ಟ್ರಾಕ್ಷುಣ್ಣಶಿರೋಧರಾನ್ ।
ಅಸುರಾಂಸ್ತಾಂಸ್ತಥಾ ಕಾಲೀ ಶಿವದೂತೀ ತಥಾಪರಾನ್ ॥೩೫॥

ಕೌಮಾರೀಶಕ್ತಿನಿರ್ಭಿನ್ನಾಃ ಕೇಚಿನ್ನೇಶುರ್ಮಹಾಸುರಾಃ ।
ಬ್ರಹ್ಮಾಣೀಮನ್ತ್ರಪೂತೇನ ತೋಯೇನಾನ್ಯೇ ನಿರಾಕೃತಾಃ ॥೩೬॥

ಮಾಹೇಶ್ವರೀತ್ರಿಶೂಲೇನ ಭಿನ್ನಾಃ ಪೇತುಸ್ತಥಾಪರೇ ।
ವಾರಾಹೀತುಣ್ಡಘಾತೇನ ಕೇಚಿಚ್ಚೂರ್ಣೀಕೃತಾ ಭುವಿ ॥೩೭॥

ಖಣ್ಡಂ ಖಣ್ಡಂ ಚ ಚಕ್ರೇಣ ವೈಷ್ಣವ್ಯಾ ದಾನವಾಃ ಕೃತಾಃ ।
ವಜ್ರೇಣ ಚೈನ್ದ್ರೀ ಹಸ್ತಾಗ್ರವಿಮುಕ್ತೇನ ತಥಾ ಪರೇ ॥೩೮॥

---

೩೫. ಆ ಮೇಲೆ ದೇವಿಯ ವಾಹನವಾದ ಸಿಂಹವು ತನ್ನ ಕೋರೆ ಹಲ್ಲುಗಳಿಂದ ಪುಡಿಮಾಡಿದ ಕತ್ತು ಉಳ್ಳವರನ್ನಾಗಿ ಮಾಡುತ್ತ ಅನೇಕ ರಾಕ್ಷಸರನ್ನು ತಿಂದಿತು. ಕಾಳೀದೇವಿಯು ಕೆಲವರನ್ನು ತಿಂದಳು. ಮತ್ತು ಶಿವದೂತಿಯು ಮತ್ತೆ ಕೆಲವರನ್ನು ನುಂಗಿಹಾಕಿದಳು.

೩೬. ಹೀಗಿರಲು ಕೌಮಾರೀ ಶಕ್ತಿಯ ಶಕ್ತಿ ಆಯುಧದಿಂದ ಭೇದಿಸಲ್ಪಟ್ಟು ಕೆಲವರು ಅಸುರರು ನಾಶಹೊಂದಿದರು. ಬ್ರಹ್ಮಾಣಿಯ ಮಂತ್ರದಿಂದ ಪವಿತ್ರವಾದ ಕಮಂಡಲು ತೀರ್ಥದಿಂದ ಇನ್ನು ಕೆಲವರು ನಾಶವಾದರು.

೩೭. ಹಾಗು ಮಾಹೇಶ್ವರೀದೇವಿಯ ತ್ರಿಶೂಲದಿಂದ ಭೇದಿಸಲ್ಪಟ್ಟು ಹಲವಾರು ಮಂದಿ ರಾಕ್ಷಸರು ಹತರಾದರು. ವಾರಾಹೀ ದೇವಿಯ ಮೂತಿಯ ತಿವಿತದಿಂದ ಇನ್ನು ಕೆಲವರು ತುಂಡು ತುಂಡಾಗಿ ನೆಲಕ್ಕೆ ಬಿದ್ದರು.

೩೮. ಮತ್ತು ವೈಷ್ಣವೀಶಕ್ತಿಯಿಂದ ಕೆಲವರು ದಾನವರು ಚಕ್ರಾಯುಧದ ಏಟಿನಿಂದ ತುಂಡುತುಂಡಾಗಿ ಮಾಡಲ್ಪಟ್ಟರು. ಹಾಗು ಐಂದ್ರೀಶಕ್ತಿಯ ಹಸ್ತಾಗ್ರದಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧದಿಂದ ಮತ್ತೆ ಕೆಲವರು ವಧಿಸಲ್ಪಟ್ಟರು.

ಕೇಚಿದ್ವಿನೇಶುರಸುರಾಃ ಕೇಚಿನ್ನಷ್ಟಾ ಮಹಾಹವಾತ್ ।
ಭಕ್ಷಿತಾಶ್ಚಾಪರೇ ಕಾಲೀಶಿವದೂತೀಮೃಗಾಧಿಪೈಃ ॥೩೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ ನಿಶುಮ್ಭಾಸುರವಧೋ ನಾಮ ಷಡಶೀತಿತಮೋಽಧ್ಯಾಯಃ

---

೩೯. ಹೀಗಿರಲು ಕೆಲವರು ರಾಕ್ಷಸರು ಅಲ್ಲಲ್ಲಿ ಸತ್ತು ಬಿದ್ದರು. ಮತ್ತೆ ಕೆಲವರು ದೊಡ್ಡ ರಣರಂಗದಿಂದ ಓಡಿಹೋಗಿ ಅದೃಶ್ಯರಾದರು. ಇನ್ನು ಕೆಲವರು ಕಾಳೀ, ಶಿವದೂತಿ ಮತ್ತು ಮೃಗರಾಜನಾದ ಸಿಂಹ ಇವರಿಂದ ತಿನ್ನಲ್ಪಟ್ಟರು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತಾಶೀತಿತಮೋಽಧ್ಯಾಯಃ

(ಶುಮ್ಭಾಸುರವಧಃ)

ಋಷಿರುವಾಚ :—

ನಿಶುಮ್ಭಂ ನಿಹತಂ ದೃಷ್ಟ್ವಾ ಭ್ರಾತರಂ ಪ್ರಾಣಸಮ್ಮಿತಮ್ ।
ಹನ್ಯಮಾನಂ ಬಲಂ ಚೈವ ಶುಮ್ಭಃ ಕ್ರುದ್ಧೋಽಬ್ರವೀದ್ವಚಃ ॥೧॥

ಬಲಾವಲೇಪಾದ್ದುಷ್ಟೇ ತ್ವಂ ಮಾ ದುರ್ಗೇ ಗರ್ವಮಾವಹ ।
ಅನ್ಯಾಸಾಂ ಬಲಮಾಶ್ರಿತ್ಯ ಯುದ್ಧ್ಯಸೇ ಯಾತಿಮಾನಿನೀ ॥೨॥

ಎಂಭತ್ತೇಳನೆಯ ಅಧ್ಯಾಯ

ಸುಮೇಧಮುನಿಯು ಹೇಳಿದನು :—

೧. ತರುವಾಯ ದೈತ್ಯೇಶ್ವರನಾದ ಶುಂಭಾಸುರನು ತನ್ನ ಪ್ರಾಣಗಳಿಗೆ ಸಮಾನನಾದ ತಮ್ಮನಾದ ನಿಶುಂಭನು ಹತನಾದುದನ್ನೂ ಮತ್ತು ಅಸುರಸೈನ್ಯವು ವಧಿಸಲ್ಪಡುತ್ತಿದ್ದುದನ್ನೂ ನೋಡಿ ಬಲು ಕೋಪಗೊಂಡವನಾಗಿ ದೇವಿಯನ್ನು ಕುರಿತು ಹೀಗೆ ಹೇಳಿದನು.

೨. ಎಲೈ, ದುಷ್ಟಳೇ! ಸಮಸ್ತ ದಾನವರ ಮೃತ್ಯುವೇ! ಸೈನ್ಯ-ಸಹಾಯ ಸಂಪರ್ಕದಿಂದ ನೀನು ಅಹಂಕಾರವನ್ನು ತೋರಿಸಬೇಡ, ಅತ್ಯಹಂ-ಕಾರವನ್ನು ಪ್ರಕಾಶಪಡಿಸುತ್ತಿದ್ದ ನೀನು ಬ್ರಹ್ಮಾಣೀ ಮುಂತಾದ ಇತರರ ಬಲವನ್ನು ತೆಗೆದುಕೊಂಡು ಯುದ್ಧಮಾಡುತ್ತಿದ್ದೀಯೆ.

ಶ್ರೀ ದೇವ್ಯುವಾಚ :—

ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾಪರಾ ।
ಪಶ್ಯೈತಾ ದುಷ್ಟ ಮಯ್ಯೇವ ವಿಶನ್ತ್ಯೋ ಮದ್ವಿಭೂತಯಃ ॥೩॥

ಋಷಿರುವಾಚ :—

ತತಸ್ಸಮಸ್ತಾಸ್ತಾ ದೇವ್ಯೋ ಬ್ರಹ್ಮಾಣೀಪ್ರಮುಖಾ ಲಯಮ್ ।
ತಸ್ಯಾ ದೇವ್ಯಾಸ್ತನೌ ಜಗ್ಮುರೇಕೈವಾಸೀತ್ತದಾಮ್ಬಿಕಾ ॥೪॥

ಶ್ರೀದೇವ್ಯುವಾಚ :—

ಅಹಂ ವಿಭೂತ್ಯಾ ಬಹುಭಿರಿಹ ರೂಪೈರ್ಯದಾ ಸ್ಥಿತಾ ।
ತತ್ಸಂಹೃತಂ ಮಯೈಕೈವ ತಿಷ್ಠಾಮ್ಯಾಜೌ ಸ್ಥಿರೋ ಭವ ॥೫॥

ದೇವಿಯು ಇಂತೆಂದಳು :—

೩. ಎಲೈ, ದುಷ್ಟರಾಕ್ಷಸನೇ! ಈ ಪ್ರಪಂಚದಲ್ಲಿ ನಾನು ಒಬ್ಬಳೇ ಇರುವೆನು. ನನಗೆ ದ್ವಿತೀಯಳಾಗಿ ಬೇರೊಬ್ಬಳು ಯಾರಿರುವಳು? ಇಗೋ! ಇತ್ತನೋಡು. ನನ್ನ ವಿಭೂತಿಯಿಂದ ವ್ಯಷ್ಟಿರೂಪರಾಗಿ ಬಂದಿರುವ ಶಕ್ತಿಮೂರ್ತಿಗಳು ನನ್ನಲ್ಲಿಯೆ ಐಕ್ಯವನ್ನು ಹೊಂದುವರು.

ಸುಮೇಧ ಋಷಿಯು ಹೇಳಿದನು :—

೪. ಅನಂತರ ಬ್ರಹ್ಮಾಣೀ ಮುಂತಾದ ಆ ಎಲ್ಲ ಶಕ್ತಿದೇವತೆಗಳು ಜಗನ್ಮಾತೆಯಾದ ದೇವಿಯ ಮೂರ್ತಿಯಲ್ಲಿ ಸೇರಿಹೋದರು. ವ್ಯಷ್ಟಿಮೂರ್ತಿಗಳು ಐಕ್ಯವನ್ನು ಹೊಂದಿದಾಗ ದೇವಿಯು ಅದ್ವಿತೀಯಳಾಗಿದ್ದಳು.

ದೇವಿಯು ಇಂತೆಂದಳು :—

೫. ನಾನು ನನ್ನ ವಿಭೂತಿವಿಸ್ತಾರದಿಂದ ಅನೇಕರೂಪಗಳನ್ನು ತೆಗೆದುಕೊಂಡಿದ್ದೆನು. ಈಗ ಆ ವಿಭೂತಿಯ ವ್ಯಷ್ಟಿರೂಪಗಳು ನನ್ನಲ್ಲಿ ಅಡಗಿಸಲ್ಪಟ್ಟವು. ಈಗ ನಾನೊಬ್ಬಳೇ ಅದ್ವಿತೀಯಳಾಗಿರುವೆನು. ಈಗ ಯುದ್ಧಮಾಡಲು ಸ್ಥಿರನಾಗಿ ನಿಲ್ಲು.

ಋಷಿರುವಾಚ :—

ತತಃ ಪ್ರವವೃತೇ ಯುದ್ಧಂ ದೇವ್ಯಾಃ ಶುಮ್ಭಸ್ಯ ಚೋಭಯೋಃ ।
ಪಶ್ಯತಾಂ ಸರ್ವದೇವಾನಾಮಸುರಾಣಾಂ ಚ ದಾರುಣಮ್ ॥೧॥

ಶರವರ್ಷೈಃ ಶಿತೈಃ ಶಸ್ತ್ರೈಸ್ತಥಾ ಚಾಸ್ತ್ರೈಃ ಸುದಾರುಣೈಃ ।
ತಯೋರ್ಯುದ್ಧಮಭೂದ್ಭೂಯಃ ಸರ್ವಲೋಕಭಯಙ್ಕರಮ್ ॥೨॥

ದಿವ್ಯಾನ್ಯಸ್ತ್ರಾಣಿ ಶತಶೋ ಮುಮುಚೇ ಯಾನ್ಯಥಾಮ್ಬಿಕಾ ।
ಬಭಞ್ಜ ತಾನಿ ದೈತ್ಯೇನ್ದ್ರಸ್ತತ್ಪ್ರತೀಘಾತಕರ್ತೃಭಿಃ ॥೩॥

ಮುಕ್ತಾನಿ ತೇನ ಚಾಸ್ತ್ರಾಣಿ ದಿವ್ಯಾನಿ ಪರಮೇಶ್ವರೀ ।
ಬಭಞ್ಜ ಲೀಲಯೈವೋಗ್ರಹುಙ್ಕಾರೋಚ್ಚಾರಣಾದಿಭಿಃ ॥೪॥

ಋಷಿಯು ಹೇಳಿದನು :—

೧. ಹೀಗೆಂದು ದೇವಿಯು ಹೇಳಿದ ಕೂಡಲೆ ದೇವಿ ಮತ್ತು ಶುಂಭಾಸುರರು ಇಬ್ಬರಿಗೆ ದೇವತೆಗಳು ಮತ್ತು ರಾಕ್ಷಸರು ನೋಡುತ್ತ ನಿಂತಿರುವಹಾಗೆ ಭಯಂಕರವಾದ ಸಂಗ್ರಾಮವು ನಡೆಯಿತು.

೨. ಹರಿತವಾದ ಬಾಣಗಳ ವೃಷ್ಟಿಯಿಂದ, ಶಸ್ತ್ರ ಪ್ರಹಾರದಿಂದ ಮತ್ತು ಭಯಂಕರವಾದ ಮಂತ್ರಾಸ್ತ್ರ ಪ್ರಯೋಗಗಳಿಂದ ಸಮಸ್ತ ಲೋಕಗಳಿಗೆ ಭಯವನ್ನುಂಟುಮಾಡುವಂತೆ ದೇವೀ-ಶುಂಭಾಸುರರಿಗೆ ಘೋರಯುದ್ಧವು ಜರುಗಿತು.

೩. ಹೀಗಿರಲು ದೇವಿಯು ಯಾವ ನೂರಾರು ದಿವ್ಯಾಸ್ತ್ರಗಳನ್ನು ರಾಕ್ಷಸನ ಮೇಲೆ ಪ್ರಯೋಗಿಸಿದಳೋ ದೈತ್ಯೇಶ್ವರನಾದ ಶುಂಭಾಸುರನು ಅವುಗಳನ್ನು ಅಡಗಿಸಬಲ್ಲ ಪ್ರತ್ಯಸ್ತ್ರಗಳಿಂದ ಭಂಗಗೊಳಿಸಿದನು.

೪. ಹಾಗೆಯೇ ಶುಂಭಾಸುರನಿಂದ ದೇವಿಯ ಮೇಲೆ ಪ್ರಯೋಗಿಸಲ್ಪಟ್ಟ ದಿವ್ಯವಾದ ಅಸ್ತ್ರಗಳನ್ನು ಚಂಡಿಕಾದೇವಿಯು ಉಗ್ರವಾದ "ಹುಂ"ಕಾರದ ಉಚ್ಚಾರಣ ಮುಂತಾದ ಅನಾಯಾಸದ ಉಪಾಯಗಳಿಂದ ನಾಶಗೊಳಿಸಿದಳು.

ತತಃ ಶರಶತೈರ್ದೇವೀಮಾಚ್ಛಾದಯತ ಸೋಽಸುರಃ ।
ಸಾ ಚ ತತ್ಕುಪಿತಾ ದೇವೀ ಧನುಶ್ಚಿಚ್ಛೇದ ಚೇಷುಭಿಃ ॥೧೦॥

ಛಿನ್ನೇ ಧನುಷಿ ದೈತ್ಯೇನ್ದ್ರಸ್ತಥಾ ಶಕ್ತಿಮಥಾದದೇ ।
ಚಿಚ್ಛೇದ ದೇವೀ ಚಕ್ರೇಣ ತಾಮಪ್ಯಸ್ಯ ಕರೇ ಸ್ಥಿತಾಮ್ ॥೧೧॥

ತತಃ ಖಡ್ಗಮುಪಾದಾಯ ಶತಚನ್ದ್ರಂ ಚ ಭಾನುಮತ್ ।
ಅಭ್ಯಧಾವತ ತಾಂ ದೇವೀಂ ದೈತ್ಯಾನಾಮಧಿಪೇಶ್ವರಃ ॥೧೨॥

ತಸ್ಯಾಪತತ ಏವಾಶು ಖಡ್ಗಂ ಚಿಚ್ಛೇದ ಚಣ್ಡಿಕಾ ।
ಧನುರ್ಮುಕ್ತೈಃ ಶಿತೈರ್ಬಾಣೈಶ್ಚರ್ಮ ಚಾರ್ಕಕರಾಮಲಮ್ ॥೧೩॥

---

೧೦. ತರುವಾಯ ಆ ಶುಂಭಾಸುರನು ನೂರಾರು ಬಾಣಗಳನ್ನು ಸುರಿಸಿ ದೇವಿಯನ್ನು ಮುಚ್ಚಿಹಾಕಿದನು. ಆಗ ಕೋಪತಾಳಿದ ದೇವಿಯು ತನ್ನ ಬಾಣಗಳಿಂದ ಅಸುರನು ಹಿಡಿದಿರುವ ಬಿಲ್ಲನ್ನು ಕತ್ತರಿಸಿದಳು.

೧೧. ಹೀಗೆ ತನ್ನ ಕೈಯ್ಯಲ್ಲಿ ಹಿಡಿದ ಬಿಲ್ಲು ಕತ್ತರಿಸಲ್ಪಡಲು ಆ ದೈತ್ಯರಾಜನು ಅದನ್ನು ಬಿಟ್ಟು ಶಕ್ತಿ ಆಯುಧವನ್ನು ತೆಗೆದುಕೊಂಡನು. ಆಗ ದೇವಿಯು ಚಕ್ರಾಯುಧದಿಂದ ಅಸುರನ ಕೈಯಲ್ಲಿದ್ದ ಶಕ್ತಿ ಆಯುಧವನ್ನು ಕತ್ತರಿಸಿದಳು.

೧೨. ಶಕ್ತಿ ಆಯುಧವು ಕತ್ತರಿಸಿಹೋದ ಬಳಿಕ ದೈತ್ಯರ ಅಧಿಪರಾದ ಅನೇಕ ರಾಕ್ಷಸರಿಗೆ ಈಶ್ವರನಾದ ಶುಂಭಾಸುರನು ಚಂದ್ರಹಾಸಖಡ್ಗವನ್ನೂ ಮತ್ತು ನೂರಾರು ಚಂದ್ರರಿಂದ ಅಂಕಿತವಾಗಿ ಹೊಳೆಯುತ್ತಿರುವ ಫಲಕಾಯುಧ-ವನ್ನೂ ತೆಗೆದುಕೊಂಡು ಬಂದು ಎದುರಿಸಿದನು.

೧೩. ಹೀಗೆ ಆವೇಶದಿಂದ ಖಡ್ಗ-ಚರ್ಮಗಳನ್ನು ಧರಿಸಿದ ಅಸುರನು ಬರುತ್ತಿರುವಷ್ಟರಲ್ಲಿ ಚಂಡಿಕಾದೇವಿಯು ಬೇಗ ತನ್ನ ಬಿಲ್ಲಿನಲ್ಲಿಟ್ಟು ಪ್ರಯೋಗಿಸಿದ ಹರಿತವಾದ ಬಾಣಗಳಿಂದ ಅಸುರನ ಕತ್ತಿಯನ್ನೂ ಸೂರ್ಯಕಿರಣಗಳಂತಿದ್ದ ಫಲಕವನ್ನೂ ಕತ್ತರಿಸಿದಳು.

ಅಶ್ವಾಂಶ್ಚ ಪಾತಯಾಮಾಸ ರಥಂ ಸಾರಥಿನಾ ಸಹ ॥೧೪॥

ಹತಾಶ್ವಃ ಸ ತದಾ ದೈತ್ಯಶ್ಛಿನ್ನಧನ್ವಾ ವಿಸಾರಥಿಃ ।
ಜಗ್ರಾಹ ಮುದ್ಗರಂ ಘೋರಮಮ್ಬಿಕಾನಿಧನೋದ್ಯತಃ ॥೧೫॥

ಚಿಚ್ಛೇದಾಪತತಸ್ತಸ್ಯ ಮುದ್ಗರಂ ನಿಶಿತೈಃ ಶರೈಃ ।
ತಥಾಪಿ ಸೋಽಭ್ಯಧಾವತ್ತಾಂ ಮುಷ್ಟಿಮುದ್ಯಮ್ಯ ವೇಗವಾನ್ ॥೧೬॥

ಸ ಮುಷ್ಟಿಂ ಪಾತಯಾಮಾಸ ಹೃದಯೇ ದೈತ್ಯಪುಙ್ಗವಃ ।
ದೇವ್ಯಾಸ್ತಂ ಚಾಪಿ ಸಾ ದೇವೀ ತಲೇನೋರಸ್ಯತಾಡಯತ್ ॥೧೭॥

---

೧೪. ಮತ್ತು ಶುಂಭಾಸುರನ ಮೇಲೆ ದೇವಿಯ ಬಾಣವೃಷ್ಟಿಯನ್ನು ಸುರಿಸಿ ಅವನೇರಿದ ರಥದ ಕುದುರೆಗಳನ್ನೂ ಸಾರಥಿಯನ್ನೂ ಧ್ವಂಸಮಾಡಿ ರಥವನ್ನು ಪುಡಿಮಾಡಿ ಕೆಡವಿದಳು.

೧೫. ಹೀಗೆ ಸತ್ತುಹೋದ ಅಶ್ವಗಳುಳ್ಳವನೂ, ಭಂಗಹೊಂದಿದ ಬಿಲ್ಲುಉಳ್ಳವನೂ ಮತ್ತು ಸಾರಥಿಯಿಲ್ಲದವನೂ ಆದ ಆ ದೈತ್ಯನು ಆಗ ಚಂಡೀದೇವಿಯನ್ನು ವಧಿಸುವ ಯತ್ನವುಳ್ಳವನಾಗಿ ಘೋರವಾದ ಮುದ್ಗರ ಆಯುಧವನ್ನು ತೆಗೆದುಕೊಂಡು ಪ್ರಯೋಗಮಾಡಿದನು.

೧೬. ಆಗ ದೇವಿಯು ಹರಿತವಾದ ತನ್ನ ಬಾಣಗಳಿಂದ ತನ್ನನ್ನು ವಧಿಸಬೇಕೆಂದು ಬರುತ್ತಿದ್ದ ಅಸುರನ ಮುದ್ಗರಾಯುಧವನ್ನು ಕತ್ತರಿಸಿಹಾಕಿದಳು. ಆಗಲೂ ಧೀರನಾದ ಅಸುರನು ವೇಗದಿಂದ ಮುಷ್ಟಿಯನ್ನು ಎತ್ತಿಕೊಂಡು ದೇವಿಯನ್ನು ಹೊಡೆಯಲು ಓಡಿಬಂದನು.

೧೭. ದೈತ್ಯೋತ್ತಮನಾದ ಶುಂಭಾಸುರನು ದೇವಿಯ ಹೃದಯದಲ್ಲಿ ಮುಷ್ಟಿಯಿಂದ ಹೊಡೆದನು. ಆಗ ಆ ದೇವಿಯು ತನ್ನ ಹಸ್ತತಲದಿಂದ ದೈತ್ಯನನ್ನೂ ಎದೆಯಲ್ಲಿ ಬಲವಾಗಿ ಹೊಡೆದಳು.

ತಲಪ್ರಹಾರಾಭಿಹತೋ ನಿಪಪಾತ ಮಹೀತಲೇ ।
ಸ ದೈತ್ಯರಾಜಃ ಸಹಸಾ ಪುನರೇವ ತಥೋತ್ಥಿತಃ ॥೧೮॥

ಉತ್ಪತ್ಯ ಚ ಪ್ರಗೃಹ್ಯೋಚ್ಚೈರ್ದೇವೀಂ ಗಗನಮಾಸ್ಥಿತಃ ।
ತತ್ರಾಪಿ ಸಾ ನಿರಾಧಾರಾ ಯುಯುಧೇ ತೇನ ಚಣ್ಡಿಕಾ ॥೧೯॥

ನಿಯುದ್ಧಂ ಖೇ ತದಾ ದೈತ್ಯಶ್ಚಣ್ಡಿಕಾ ಚ ಪರಸ್ಪರಮ್ ।
ಚಕ್ರತುಃ ಪ್ರಥಮಂ ಸಿದ್ಧಮುನಿವಿಸ್ಮಯಕಾರಕಮ್ ॥೨೦॥

ತತೋ ನಿಯುದ್ಧಂ ಸುಚಿರಂ ಕೃತ್ವಾ ತೇನಾಮ್ಬಿಕಾ ಸಹ ।
ಉತ್ಪಾಟ್ಯ ಭ್ರಾಮಯಾಮಾಸ ಚಿಕ್ಷೇಪ ಧರಣೀತಲೇ ॥೨೧॥

ಸ ಕ್ಷಿಪ್ತೋ ಧರಣೀಂ ಪ್ರಾಪ್ಯ ಮುಷ್ಟಿಮುದ್ಯಮ್ಯ ವೇಗಿತಃ ।
ಅಭ್ಯಧಾವತ ದುಷ್ಟಾತ್ಮಾ ಚಣ್ಡಿಕಾನಿಧನೇಚ್ಛಯಾ ॥೨೨॥

---

೧೮. ಆ ಸಮಯದಲ್ಲಿ ದೈತ್ಯೇಶ್ವರನಾದ ಶುಂಭಾಸುರನು ದೇವಿಯಿಂದ ಹಸ್ತತಲದಿಂದ ಹೊಡೆಯಲ್ಪಟ್ಟವನಾಗಿ ನೆಲಕ್ಕೆ ಉರುಳಿದನು. ಆದರೆ ಮತ್ತೆ ಅನಿರೀಕ್ಷಿತವಾದ ಬಲ-ವೇಗಗಳಿಂದ ಮತ್ತೆ ಎದ್ದು ಬಂದನು.

೧೯. ನೆಲದಿಂದ ಮೇಲಕ್ಕೆ ಎದ್ದ ಅಸುರನು ಕೂಡಲೆ ದೇವಿಯನ್ನು ಎತ್ತಿಕೊಂಡು ಆಕಾಶದಲ್ಲಿ ಎತ್ತರವಾಗಿ ನೆಗೆದನು. ದೇವಿಯು ಆಕಾಶದಲ್ಲಿ ಕೂಡ ಆಧಾರವಿಲ್ಲದೆ ನಿಂತವಳಾಗಿ ಅಸುರನೊಡನೆ ಯುದ್ಧಮಾಡಿದಳು.

೨೦. ಹೀಗೆ ಆಕಾಶಕ್ಕೆ ಹೋದ ಕೂಡಲೆ ಮೊದಲು ದೇವಿಯು ಮತ್ತು ಶುಂಭಾಸುರನು ಸಿದ್ಧಜನ-ಮಹರ್ಷಿಜನರಿಗೆ ಆಶ್ಚರ್ಯವನ್ನು ಉಂಟುಮಾಡು-ವಂತಹ ಬಾಹುಯುದ್ಧವನ್ನು ಮಾಡಿದರು.

೨೧. ತರುವಾಯ ಜಗನ್ಮಾತೆಯಾದ ದೇವಿಯು ಅಸುರನೊಡನೆ ಬಹಳ ಹೊತ್ತು ಬಾಹುಯುದ್ಧವನ್ನು ಮಾಡಿ ಆಮೇಲೆ ಆ ಅಸುರನನ್ನು ಹಿಡಿದೆತ್ತಿ ಗಿರಗಿರನೆ ಸುತ್ತಿಸಿ ನೆಲಕ್ಕೆ ಎಸೆದಳು.

೨೨. ನೀಚಸ್ವಭಾವದ ಶುಂಭಾಸುರನು ದೇವಿಯಿಂದ ನೆಲಕ್ಕೆ ಎಸೆಯಲ್ಪಟ್ಟು ನೆಲದ ಮೇಲೆ ಬಿದ್ದು ಮತ್ತೆ ವೇಗವುಳ್ಳವನಾಗಿ ಎದ್ದು ಮುಷ್ಟಿಯನ್ನೆತ್ತಿ ಚಂಡಿಕಾಂಬಿಕೆಯನ್ನು ವಧಿಸುವ ಸಂಕಲ್ಪದಿಂದ ಓಡಿಬಂದನು.

ತವಾಯಾಂತಂ ತತೋ ದೇವೀ ಸರ್ವದೈತ್ಯಜನೇಶ್ವರಮ್ ।
ಜಗತ್ಯಾಂ ಪಾತಯಾಮಾಸ ಭಿತ್ವಾ ಶೂಲೇನ ವಕ್ಷಸಿ ॥೨೩॥

ಸ ಗತಾಸುಃ ಪಪಾತೋರ್ವ್ಯಾಂ ದೇವೀಶೂಲಾಗ್ರವಿಕ್ಷತಃ ।
ಚಾಲಯನ್ಸಕಲಾಂ ಪೃಥ್ವೀಂ ಸಾಬ್ಧಿದ್ವೀಪಾಂ ಸಪರ್ವತಾಮ್ ॥೨೪॥

ತತಃ ಪ್ರಸನ್ನಮಖಿಲಂ ಹತೇ ತಸ್ಮಿನ್ದುರಾತ್ಮನಿ ।
ಜಗತ್ಸ್ವಾಸ್ಥ್ಯಮತೀವಾಪ ನಿರ್ಮಲಂ ಚಾಭವನ್ನಭಃ ॥೨೫॥

ಉತ್ಪಾತಮೇಘಾಃ ಸೋಲ್ಕಾ ಯೇ ಪ್ರಾಗಾಸಂಸ್ತೇ ಶಮಂ ಯಯುಃ।
ಸರಿತೋ ಮಾರ್ಗವಾಹಿನ್ಯಸ್ತಥಾ ಶುಸ್ತ್ಫೇ ನಿಪಾತಿತೇ ॥೨೬॥

---

೨೩. ತರುವಾಯ ದೇವಿಯು ತನ್ನನ್ನು ವಧಿಸಲು ವೇಗದಿಂದ ಬರುತ್ತಿರುವ ಸಮಸ್ತ ದೈತ್ಯಗಣಕ್ಕೆ ಅಧಿಪತಿಯಾದ ಶುಂಭಾಸುರನ ಎದೆಯನ್ನು ಶೂಲಪ್ರಹಾರದಿಂದ ಭೇದಿಸಿ ಅವನನ್ನು ನೆಲದಲ್ಲಿ ಕೆಡುಹಿದಳು.

೨೪. ಹೀಗೆ ದೇವಿಯ ಶೂಲದ ತುದಿಯಿಂದ ಜುಚ್ಚಲ್ಪಟ್ಟವನಾಗಿ ಹಾರಿಹೋದ ಪ್ರಾಣವಾಯುವುಳ್ಳ ಶುಂಭಾಸುರನು ಅನೇಕ ಸಮುದ್ರ-ದ್ವೀಪ-ಪರ್ವತ ಮುಂತಾದ ಭಾಗಗಳಿಂದ ಕೂಡಿದ ಸಮಸ್ತ ಭೂಮಿಯನ್ನು ನಡುಗಿಸುತ್ತ ನೆಲದ ಮೇಲೆ ಬಿದ್ದನು.

೨೫. ಲೋಕಕಂಟಕನಾದ ಆ ನೀಚಶುಂಭಾಸುರನು ಮರಣ ಹೊಂದಿರಲು ಎಲ್ಲ ಉಪದ್ರವವೂ ಶಾಂತವಾಯಿತು. ಜಗತ್ತೆಲ್ಲವೂ ಅತಿಶಯವಾದ ಸ್ವಸ್ಥತೆಯನ್ನು ಹೊಂದಿತು. ಮತ್ತು ಆಕಾಶವು ನಿರ್ಮಲವಾಗಿ ಹೊಳೆಯಿತು.

೨೬. ನೀಚಾತ್ಮನಾದ ಶುಂಭಾಸುರನು ಹತನಾಗಿ ಹೋಗಲು ಅವನ ನಾಶವನ್ನು ಸೂಚಿಸುವ ಶಕುನಗಳಾಗಿ ಮೊದಲು ಕೊಳ್ಳಿಮಳೆಗಳನ್ನು ಸುರಿಸುವ ಯಾವ ಉತ್ಪಾತ ಮೇಘಗಳಿದ್ದುವೋ ಅವು ಅಡಗಿಹೋದುವು. ಉಕ್ಕಿಬಂದಿದ್ದ ನದಿಗಳು ತಮ್ಮ ಪಾತ್ರಗಳಲ್ಲಿ ಹರಿಯಲಾರಂಭಿಸಿತು.

ತತೋ ದೇವಗಣಾಃ ಸರ್ವೇ ಹರ್ಷನಿರ್ಭರಮಾನಸಾಃ ।
ಬಭೂವುರ್ನಿಹತೇ ತಸ್ಮಿನ್ಗನ್ಧರ್ವಾ ಲಲಿತಂ ಜಗುಃ ॥೨೭॥

ಅವಾದಯಂಸ್ತಥೈವಾನ್ಯೇ ನನೃತುಶ್ಚಾಪ್ಸರೋಗಣಾಃ ।
ವವುಃ ಪುಣ್ಯಾಸ್ತಥಾ ವಾತಾಃ ಸುಪ್ರಭೋಽಭೂದ್ದಿವಾಕರಃ ॥೨೮॥

ಜಜ್ವಲುಶ್ಚಾಗ್ನಯಃ ಶಾನ್ತಾಃ ಶಾನ್ತದಿಗ್ಜನಿತಸ್ವನಾಃ ॥೨೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ಶುಮ್ಭಾಸುರವಧೋ ನಾಮ ಸಪ್ತಾಶೀತಿತಮೋಽಧ್ಯಾಯಃ

---

೨೭. ತರುವಾಯ ಸಮಸ್ತ ದೇವತೆಗಳ ಗುಂಪುಗಳು ಹರ್ಷ ಉದ್ರೇಕದಿಂದ ಪೂರ್ಣವಾದ ಮಾನಸವುಳ್ಳವರಾದರು. ಅಂತೆಯೆ ಶುಂಭಾಸುರನ ಮೃತ್ಯುವಿನಿಂದ ಸಂತುಷ್ಟರಾದ ಗಂಧರ್ವರು ಮಧುರವಾಗಿ ಗಾನಮಾಡಿದರು.

೨೮. ಹಾಗು ಮತ್ತೆ ಕೆಲವರು ಗಂಧರ್ವರು ವಾದ್ಯಗಳನ್ನು ಧ್ವನಿಸಿದರು. ಅಪ್ಸರಾಂಗನೆಯರು ನರ್ತನಮಾಡಿದರು. ಗಾಳಿಯು ಸ್ಪೃಹಣೀಯವಾಗಿಯೂ ಪಾವನವಾಗಿಯೂ ಬೀಸಿತು. ಮತ್ತು ಸೂರ್ಯಬಿಂಬವು ಜನ್ಯಾದ ಕಾಂತಿಯಿಂದ ಥಳಥಳಿಸಿತು.

೨೯. ಶುಂಭಾಸುರನ ಉಪದ್ರವದಿಂದ ನಿಂತುಹೋದ ಯಜ್ಞಾದಿಕರ್ಮಗಳು ಮತ್ತೆ ನಡೆಯುವಂತಾಗಿ ಪ್ರಸನ್ನವಾಗಿ ಅಗ್ನಿಗಳು ಜ್ವಲಿಸಿದುವು. ಮತ್ತು ಉತ್ಪಾತಸೂಚನೆಗಾಗಿ ದಿಗಂತಗಳಲ್ಲಿ ಕೇಳಿಸುತ್ತಿದ್ದ ಕ್ರೂರಶಬ್ದಗಳು ಅಡಗಿದುವು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತೇಳನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾಶೀತಿತಮೋಽಧ್ಯಾಯಃ

(ನಾರಾಯಣೀದೇವೀಸ್ತುತಿಃ)

ಋಷಿರುವಾಚ :—

ದೇವ್ಯಾ ಹತೇ ತತ್ರ ಮಹಾಸುರೇನ್ದ್ರೇ
ಸೇನ್ದ್ರಾಃ ಸುರಾ ವಹ್ನಿಪುರೋಗಮಾಸ್ತಾಮ್ ।
ಕಾತ್ಯಾಯನೀಂ ತುಷ್ಟುವುರಿಷ್ಟಲಾಭಾ-
ದ್ವಿಕಾಶಿವಕ್ತ್ರಾಬ್ಜವಿಕಾಶಿತಾಶಾಃ ॥೧॥

ದೇವಾ ಊಚುಃ :—

ದೇವಿ ಪ್ರಪನ್ನಾರ್ತಿಹರೇ ಪ್ರಸೀದ
ಪ್ರಸೀದ ಮಾತರ್ಜಗತೋಽಖಿಲಸ್ಯ ।

ಎಂಭತ್ತೆಂಟನೆಯ ಅಧ್ಯಾಯ

ಸುಮೇಧ ಋಷಿಯು ಹೇಳಿದನು :—

೧. ದೇವಿಯಿಂದ ಮಹಾಅಸುರರಿಗೆ ರಾಜನಾದ ಶುಂಭಾಸುರನು ಹತನಾಗಲು ದೇವರಾಜನಾದ ಇಂದ್ರ–ಅಗ್ನಿ ಮುಂತಾದ ಸಮಸ್ತ ದೇವತೆಗಳು ತಮಗೆ ಇಷ್ಟವಾದ ಶತ್ರುಸಂಹಾರವು ಪೂರ್ಣವಾಗಿ ನೆರವೇರಿದುದರಿಂದ ಅರಳಿದ ಮುಖಕಮಲಗಳಿಂದ ಬೆಳಗಿದ ಸಮಸ್ತ ದಿಕ್ಕುಗಳುಳ್ಳವರಾಗಿ ಕಾತ್ಯಾಯನೀ ಎಂದು ಕರೆಯಲ್ಪಡುವ ಚಂಡಿಕಾದೇವಿಯನ್ನು ಸ್ತುತಿಮಾಡಿದರು.

ದೇವತೆಗಳು ಸ್ತುತಿಸಿದರು :—

೨. ದೇವಿಯೇ ! ಶರಣಾಗತ ಜನರ ಪೀಡೆಯನ್ನು ಪರಿಹರಿಸುವವಳೇ ! ನೀನು ಪ್ರಸನ್ನಳಾಗು. ಚರ-ಅಚರ ಸಹಿತವಾದ ಸಕಲ ಪ್ರಪಂಚಕ್ಕೆ ಜನನಿಯೇ !

ಪ್ರಸೀದ ವಿಶ್ವೇಶ್ವರಿ ಪಾಹಿ ವಿಶ್ವಂ
ತ್ವಮೀಶ್ವರೀ ದೇವಿ ಚರಾಚರಸ್ಯ ॥೨॥

ಆಧಾರಭೂತಾ ಜಗತಸ್ತ್ವಮೇಕಾ
ಮಹೀಸ್ವರೂಪೇಣ ಯತಃ ಸ್ಥಿತಾಸಿ ।
ಅಪಾಂ ಸ್ವರೂಪಸ್ಥಿತಯಾ ತ್ವಯೈತ-
ದಾಪ್ಯಾಯ್ಯತೇ ಕೃತ್ಸ್ನಮಲಙ್ಘ್ಯವೀರ್ಯೇ ॥೩॥

ತ್ವಂ ವೈಷ್ಣವೀಶಕ್ತಿರನನ್ತವೀರ್ಯಾ
ವಿಶ್ವಸ್ಯ ಬೀಜಂ ಪರಮಾಸಿ ಮಾಯಾ ।
ಸಂಮೋಹಿತಂ ದೇವಿ ಸಮಸ್ತಮೇತ-
ತ್ತ್ವಂ ವೈ ಪ್ರಸನ್ನಾ ಭುವಿ ಮುಕ್ತಿಹೇತುಃ ॥೪॥

ವಿದ್ಯಾಃ ಸಮಸ್ತಾಸ್ತವ ದೇವಿ ಭೇದಾಃ
ಸ್ತ್ರಿಯಃ ಸಮಸ್ತಾಃ ಸಕಲಂ ಜಗತ್ಸು ।

ನೀನು ಪ್ರಸನ್ನಳಾಗು. ವಿಶ್ವದ ನಿಯಾಮಕಳೇ ! ನೀನು ಪ್ರಸನ್ನಳಾಗು. ನೀನು ಚರಾಚರಪ್ರಪಂಚದ ಈಶ್ವರಿಯಾಗಿದ್ದೀಯೆ. ವಿಶ್ವವನ್ನು ರಕ್ಷಿಸು.

೩. ಪರರಿಂದ ಮೀರಲಾಗದ ವೀರ್ಯವುಳ್ಳವಳೇ ! ದೇವಿಯೇ ! ನೀನು ಭೂಮಿಯ ಸ್ವರೂಪದಿಂದ ಇರುವುದರಿಂದ ಸಮಸ್ತ ಜಗತ್ತಿಗೆ ಆಧಾರಳಾಗಿರುತ್ತೀಯೆ. ಮತ್ತು ಜಲತತ್ತ್ವದ ರೂಪದಿಂದ ಇರುವ ನಿನ್ನಿಂದ ಈ ಸಂಪೂರ್ಣ ವಿಶ್ವವು ನೀರಿನಿಂದಾಗುವ ಉಪಕಾರವನ್ನು ಮಾಡಿ ಪೋಷಣಗೊಳಿಸಲ್ಪಡುತ್ತದೆ.

೪. ಅಪಾರವಾದ ವೀರ್ಯದಿಂದ ಕೂಡಿರುವ, ವಿಶ್ವಕ್ಕೆ ಬೀಜವಾದ, ವಿಷ್ಣುವಿನ ಅಂಶರೂಪವಾದ ಮತ್ತು ಸರ್ವವ್ಯಾಪಕವಾದ ಮಾಯಾಶಕ್ತಿಯು ನೀನೇ ಆಗಿದ್ದೀಯೆ. ದೇವಿಯೆ ! ನಿನ್ನ ಮಾಯಾರೂಪದಿಂದ ಸಮಸ್ತ ವಿಶ್ವವು ಮೋಹಹೊಂದಿರುವುದು. ಭೂಮಂಡಲದಲ್ಲಿ ನೀನು ಅನುಗ್ರಹಬುದ್ಧಿಯುಳ್ಳವಳಾದರೆ ಮುಕ್ತಿಯನ್ನು ಕರುಣಿಸುತ್ತೀಯೆ.

೫. ಚಂಡಿಕಾದೇವಿಯೆ ! ಸಮಸ್ತ ವಿದ್ಯೆಗಳು ನಿನ್ನ ಬಗೆಬಗೆಯ ಅಂಶರೂಪಗಳಾಗಿವೆ. ಸಮಸ್ತ ಸ್ತ್ರೀಯರು ನಿನ್ನ ಅಂಶಸ್ವರೂಪರಾಗಿರುವರು. ಸಕಲ ಭುವನವು ನಿನ್ನೊಬ್ಬಳಿಂದ ಪರಿಪೂರ್ಣವಾಗಿರುವುದು. ಹೀಗೆ ಸಮಸ್ತ

ತ್ವಯೈಕಯಾ ಪೂರಿತಮಂಬಯೈತ-
ತ್ಕಾ ತೇ ಸ್ತುತಿಃ ಸ್ತವ್ಯಪರಾಪರೋಕ್ತಿಃ ||೫||

ಸರ್ವಭೂತಾ ಯದಾ ದೇವೀ ಭುಕ್ತಿಮುಕ್ತಿಪ್ರದಾಯಿನೀ |
ತ್ವಂ ಸ್ತುತಾ ಸ್ತುತಯೇ ಕಾ ವಾ ಭವಂತು ಪರಮೋಕ್ತಯಃ ||೬||

ಸರ್ವಸ್ಯ ಬುದ್ಧಿರೂಪೇಣ ಜನಸ್ಯ ಹೃದಿ ಸಂಸ್ಥಿತೇ |
ಸ್ವರ್ಗಾಪವರ್ಗದೇ ದೇವಿ ನಾರಾಯಣಿ ನಮೋಽಸ್ತು ತೇ ||೭||

ಕಲಾಕಾಷ್ಠಾದಿರೂಪೇಣ ಪರಿಣಾಮಪ್ರದಾಯಿನಿ |
ವಿಶ್ವಸ್ಯೋಪರತೌ ಶಕ್ತೇ ನಾರಾಯಣಿ ನಮೋಽಸ್ತು ತೇ ||೮||

ವಸ್ತುವು ನಿನ್ನ ಅಂಶವಾಗಿರಲು ಬೇರೊಂದು ಸ್ತುತಿಸಲು ಅರ್ಹವಾದ ವಸ್ತುವನ್ನು ಬೇರೊಬ್ಬನು ಸ್ತುತಿಮಾಡುವುದೆಂಬ ವಚನಕ್ಕೆ ಅದ್ವಿತೀಯಳಾದ ನಿನ್ನಲ್ಲಿ ಅವಕಾಶವೆಲ್ಲಿಯದು ?

೬. ದೇವಿಯೇ ! ಸರ್ವ ವಿಶ್ವಾತ್ಮಕಳು ಮತ್ತು ಸ್ವರ್ಗಾದಿ ಭೋಗಗಳನ್ನೂ ನಿತ್ಯಾನಂದ ರೂಪವಾದ ಮೋಕ್ಷವನ್ನು ಕೊಡುವವಳೆಂದು ಪರಮಾರ್ಥವಾಗಿ ನೀನು ಸ್ತುತಿಸಲ್ಪಟ್ಟಿದ್ದೀಯೆ. ಇವಕ್ಕಿಂತಲೂ ಮಿಗಿಲಾದ ಸ್ತೋತ್ರಮಾಡುವ ಮಾತುಗಳು ಏನಿವೆ ?

೭. ಸಮಸ್ತ ಜಂತುಗಳ ಹೃದಯದಲ್ಲಿ ಬುದ್ಧಿಯ ರೂಪದಿಂದ ಇರುವವಳು ನೀನು. ಅಂತಹ ಬುದ್ಧಿಯಲ್ಲಿ ಸ್ವರ್ಗ-ಮೋಕ್ಷಸಾಧನಗಳ ಪ್ರವೃತ್ತಿಯನ್ನು ಉಂಟುಮಾಡಿ ಸ್ವರ್ಗ-ಮೋಕ್ಷಗಳನ್ನು ಕರುಣಿಸುವವಳು ನೀನು. ಇಂತಹ ನಾರಾಯಣನ ವಲ್ಲಭೆಯಾದ ನಿನ್ನನ್ನು ನಮಸ್ಕರಿಸುವೆವು.

೮. ಮಹಾಕಾಲವನ್ನು ಸೂಕ್ಷ್ಮಾಂಶರೂಪವಾಗಿ ವಿಭಜಿಸುವಾಗ ಕಡೆಯದಾದ ಕಾಷ್ಠಾ ಮತ್ತು ಕಲಾ ಎಂಬ ಸೂಕ್ಷ್ಮಾಂಶಗಳು ಮೊದಲಾಗಿ ಸಮಸ್ತ ಕಾಲಾವಯವಗಳ ರೂಪದಿಂದ ಜಗತ್ತಿನ ಪರಿಣಾಮವನ್ನುಂಟುಮಾಡುವವಳು ನೀನು. ವಿಶ್ವವನ್ನು ಸಂಹಾರಗೊಳಿಸುವ ಶಕ್ತಿಯುಳ್ಳವಳು ನೀನು. ಇಂತಹ ನಾರಾಯಣಿಯನ್ನು ನಾವು ವಂದಿಸುವೆವು.

ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಽಸ್ತು ತೇ ॥೯॥

ಸೃಷ್ಟಿಸ್ಥಿತಿವಿನಾಶಾನಾಂ ಶಕ್ತಿಭೂತೇ ಸನಾತನಿ ।
ಗುಣಾಶ್ರಯೇ ಗುಣಮಯೇ ನಾರಾಯಣಿ ನಮೋಽಸ್ತು ತೇ ॥೧೦॥

ಶರಣಾಗತದೀನಾರ್ತಪರಿತ್ರಾಣಪರಾಯಣೇ ।
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಽಸ್ತು ತೇ ॥೧೧॥

ಹಂಸಯುಕ್ತವಿಮಾನಸ್ಥೇ ಬ್ರಹ್ಮಾಣೀರೂಪಧಾರಿಣಿ ।
ಕೌಶಾಂಭಃಕ್ಷರಿಕೇ ದೇವಿ ನಾರಾಯಣಿ ನಮೋಽಸ್ತು ತೇ ॥೧೨॥

---

೯. ಸಮಸ್ತ ಮಂಗಳಗಳನ್ನು ಕರುಣಿಸುವ ಮಂಗಳಮೂರ್ತಿಯೆ! ಶಾಂತಸ್ವರೂಪಳೆ! ಸಮಸ್ತ ಇಷ್ಟಾರ್ಥಗಳನ್ನು ಸಾಧಿಸುವವಳೇ! ಶರಣಾಗತವತ್ಸಲೆಯೇ! ಮೂರು ಕಣ್ಣುಗಳಿಂದ ಕೂಡಿದವಳೇ! ಪಾರ್ವತೀರೂಪಳೇ! ಮತ್ತು ನಾರಾಯಣನ ಪ್ರಿಯೆಯೆ! ನಿನ್ನನ್ನು ಪುನಃ ಪುನಃ ವಂದಿಸುವೆವು.

೧೦. ಪ್ರಪಂಚದ ಸೃಷ್ಟಿ-ಸ್ಥಿತಿ-ಸಂಹಾರಗಳಿಗೆ ಕಾರಣಳಾದ ಶಕ್ತಿಸ್ವರೂಪಳೂ, ಅನಾದಿಯೂ, ಸತ್ತ್ವ-ರಜ-ತಮ ಎಂಬ ಗುಣಗಳಿಗೆ ಆಶ್ರಯಳೂ ಮತ್ತು ಗುಣಮಯವಾದ ಪ್ರವೃತ್ತಿಯುಳ್ಳವಳೂ ಆದ ನಾರಾಯಣಿಯೆ! ನಿನ್ನನ್ನು ವಂದಿಸುವೆವು.

೧೧. ಶರಣುಹೊಂದಿದ ದೀನರೂ, ನೊಂದವರೂ ಆದ ಜನರನ್ನು ರಕ್ಷಿಸುವ ಆಸಕ್ತಿಯನ್ನು ಹೊಂದಿರುವವಳೂ, ಮತ್ತು ಲೋಕದಲ್ಲಿ ಎಲ್ಲ ಭಕ್ತಜನರ ಸಂಕಟಗಳನ್ನು ನೀಗಿಸುವವಳೂ ಆದ ನಾರಾಯಣೀ ದೇವಿಯನ್ನು ನಮಸ್ಕರಿಸುತ್ತೇವೆ.

೧೨. ದೇವಿಯೆ! ಹಂಸಗಳಿಂದ ಶೋಭಿಸುವ ವಿಮಾನದಲ್ಲಿ ಕುಳಿತುಕೊಂಡವಳೂ, ಕಮಂಡಲುವಿನ ದರ್ಭೋದಕವನ್ನು ಆಯುಧವನ್ನಾಗಿ ಉಪಯೋಗಿಸುವವಳೂ ಆದ ಬ್ರಹ್ಮಾಣೀರೂಪವನ್ನು ಧರಿಸಿದವಳು ನೀನು. ಇಂತಹ ನಾರಾಯಣಿಯನ್ನು ನಮಸ್ಕರಿಸುತ್ತೇವೆ.

ತ್ರಿಶೂಲಚಂದ್ರಾಹಿಧರೇ ಮಹಾವೃಷಭವಾಹಿನಿ ।
ಮಾಹೇಶ್ವರೀಸ್ವರೂಪೇಣ ನಾರಾಯಣಿ ನಮೋಽಸ್ತು ತೇ ॥೧೩॥

ಮಯೂರಕುಕ್ಕುಟವೃತೇ ಮಹಾಶಕ್ತಿಧರೇಽನಘೇ ।
ಕೌಮಾರೀರೂಪಸಂಸ್ಥಾನೇ ನಾರಾಯಣಿ ನಮೋಽಸ್ತು ತೇ ॥೧೪॥

ಶಙ್ಖಚಕ್ರಗದಾಶಾರ್ಙ್ಗಗೃಹೀತಪರಮಾಯುಧೇ ।
ಪ್ರಸೀದ ವೈಷ್ಣವೀರೂಪೇ ನಾರಾಯಣಿ ನಮೋಽಸ್ತು ತೇ ॥೧೫॥

ಗೃಹೀತೋಗ್ರಮಹಾಚಕ್ರೇ ದಂಷ್ಟ್ರೋದ್ಧೃತವಸುನ್ಧರೇ ।
ವರಾಹರೂಪಿಣಿ ಶಿವೇ ನಾರಾಯಣಿ ನಮೋಽಸ್ತು ತೇ ॥೧೬॥

---

೧೩. ತ್ರಿಶೂಲಾಯುಧ, ಚಂದ್ರಕಲಿ, ನಾಗಾಭರಣಗಳನ್ನು ಧರಿಸಿದವಳೂ, ಮಹತ್ತಾದ ವೃಷಭವಾಹನವನ್ನು ಏರಿದವಳೂ ಆದ ಮಾಹೇಶ್ವರೀರೂಪದಿಂದ ಇರುವ ನಾರಾಯಣೀದೇವಿಯೆ ! ನಿನ್ನನ್ನು ನಾವು ವಂದಿಸುವೆವು.

೧೪. ವಾಹನ ಮತ್ತು ಧ್ವಜರೂಪದಿಂದ ನವಿಲು-ಕುಕ್ಕುಟಗಳಿಂದ ಕೂಡಿರುವ, ಮಹತ್ತಾದ ಶಕ್ತ್ಯಾಯುಧವನ್ನು ಧರಿಸಿರುವ, ನಿಷ್ಕಲಂಕಳಾದ, ಮತ್ತು ಕುಮಾರಸ್ವಾಮಿಯ ರೂಪದಿಂದ ರಾಜಿಸುವ ಕುಮಾರಶಕ್ತಿಸ್ವರೂಪಳಾದ ನಾರಾಯಣಿಯೆ ! ನಿನ್ನನ್ನು ನಾವೆಲ್ಲರು ನಮಸ್ಕರಿಸುತ್ತೇವೆ.

೧೫. ಮತ್ತು ಶಂಖ-ಚಕ್ರ-ಗದೆ-ಶಾರ್ಙ್ಗ ಮುಂತಾದ ಉತ್ತಮಾಯುಧಗಳನ್ನು ಧರಿಸಿದವಳೇ ! ವೈಷ್ಣವೀಶಕ್ತಿರೂಪಳೇ ! ನೀನು ಪ್ರಸನ್ನಳಾಗು. ನಾರಾಯಣನ ಪ್ರಿಯೆಯಾದ ಮಹಾಲಕ್ಷ್ಮಿಯೆ ! ನಿನಗೆ ನಮಸ್ಕಾರವು.

೧೬. ಧರಿಸಲ್ಪಟ್ಟ ಭಯಂಕರವಾದ ಚಕ್ರಾಯುಧವುಳ್ಳವಳೇ ! ಕೋರೆಹಲ್ಲಿನ ತುದಿಯಿಂದ ಭೂಮಿಯನ್ನು ಮೇಲಕ್ಕೆ ಎತ್ತಿದವಳೇ ! ವರಾಹಮೂರ್ತಿಯ ಶಕ್ತಿಸ್ವರೂಪಳೇ ! ಮಂಗಳಕರಳೇ ! ಮತ್ತು ನಾರಾಯಣಿಯೆ ! ನಿನ್ನನ್ನು ವಂದಿಸುವೆವು.

ನೃಸಿಹ್ಮರೂಪೇಣೋಗ್ರೇಣ ಹನ್ತುಂ ದೈತ್ಯಾನ್ಕೃತೋದ್ಯಮೇ ।
ತ್ರೈಲೋಕ್ಯತ್ರಾಣಸಹಿತೇ ನಾರಾಯಣಿ ನಮೋಽಸ್ತು ತೇ ॥೧೭॥

ಕಿರೀಟಿನಿ ಮಹಾವಜ್ರೇ ಸಹಸ್ರನಯನೋಜ್ಜ್ವಲೇ ।
ವೃತ್ರಪ್ರಾಣಹರೇ ಚೈನ್ದ್ರಿ ನಾರಾಯಣಿ ನಮೋಽಸ್ತು ತೇ ॥೧೮॥

ಶಿವದೂತೀಸ್ವರೂಪೇಣ ಹತದೈತ್ಯೇ ಮಹಾಬಲೇ ।
ಘೋರರೂಪೇ ಮಹಾರಾವೇ ನಾರಾಯಣಿ ನಮೋಽಸ್ತು ತೇ ॥೧೯॥

ದಂಷ್ಟ್ರಾಕರಾಲವದನೇ ಶಿರೋಮಾಲಾವಿಭೂಷಣೇ ।
ಚಾಮುಣ್ಡೇ ಮುಣ್ಡಮಥನೇ ನಾರಾಯಣಿ ನಮೋಽಸ್ತು ತೇ ॥೨೦॥

---

೧೭. ಭಯಂಕರವಾದ ನೃಸಿಂಹರೂಪದಿಂದ ದುಷ್ಟರಾಕ್ಷಸರನ್ನು ಸಂಹರಿಸಲು ಯತ್ನವನ್ನು ಮಾಡಿರುವ ನೃಸಿಹ್ಮಶಕ್ತಿಸ್ವರೂಪಳೇ ! ಮೂರು-ಲೋಕಗಳನ್ನು ರಕ್ಷಿಸುವ ಕಾರ್ಯದಿಂದ ಕೂಡಿದವಳೇ ! ನಾರಾಯಣಿಯೆ ! ನಿನ್ನನ್ನು ವಂದಿಸುವೆವು.

೧೮. ನಾರಾಯಣನ ಪ್ರಿಯೆಯೆ ! ಕಿರೀಟವನ್ನು ಧರಿಸಿರುವವಳೂ, ಸಹಸ್ರ ಕಣ್ಣುಗಳಿಂದ ಶೋಭಿತಳೂ, ಮತ್ತು ವೃತ್ರಾಸುರನ ಪ್ರಾಣಗಳನ್ನು ತೆಗೆದವಳೂ ಆದ ಇಂದ್ರಾಣೀ ಶಕ್ತಿಯು ನೀನಾಗಿದ್ದೀಯೆ. ನಿನ್ನನ್ನು ನಾವು ನಮಸ್ಕರಿಸುವೆವು.

೧೯. ಶಿವನನ್ನು ದೂತನನ್ನಾಗಿ ನಿಯೋಜಿಸಿದ ಶಿವದೂತಿ ಎಂಬ ದೇವಿಯ ಶಕ್ತಿರೂಪದಿಂದ ಅನೇಕ ದೈತ್ಯರನ್ನು ಮರ್ದಿಸಿದವಳೇ ! ಮಹಾ-ಬಲಿಷ್ಠಳೇ ! ಘೋರವಾದ ರೂಪವುಳ್ಳವಳೇ ! ದೊಡ್ಡ ಗರ್ಜನವುಳ್ಳವಳೇ ! ಮತ್ತು ನಾರಾಯಣಿಯೇ ! ನಿನಗೆ ನಮಸ್ಕಾರವು.

೨೦. ಕೋರೆಹಲ್ಲುಗಳಿಂದ ಭಯಂಕರವಾದ ಮುಖವುಳ್ಳವಳೇ ! ಮುಂಡ ಮಾಲಿಕೆಯ ಭೂಷಣವುಳ್ಳವಳೇ ! ಚಾಮುಂಡಾಂಬಿಕೆಯೇ ! ಮುಂಡಾಸುರ-ನನ್ನು ಭಂಜಿಸಿದವಳೇ ! ಮತ್ತು ನಾರಾಯಣೀಸ್ವರೂಪಳೇ ! ನಾವು ನಿನ್ನನ್ನು ವಂದಿಸುವೆವು.

ಲಕ್ಷ್ಮಿ ಲಜ್ಜೇ ಮಹಾವಿದ್ಯೇ ಶ್ರದ್ಧೇ ಪುಷ್ಟೇ ಸ್ವಧೇ ಧ್ರುವೇ ।
ಮಹಾರಾತ್ರೇ ಮಹಾಮಾಯೇ ನಾರಾಯಣಿ ನಮೋಽಸ್ತು ತೇ॥೨೧॥

ಮೇಧೇ ಸರಸ್ವತಿ ವರೇ ಭೂತಿ ಬಾಭ್ರವಿ ತಾಮಸಿ ।
ನಿಯತೇ ತ್ವಂ ಪ್ರಸೀದೇಶೇ ನಾರಾಯಣಿ ನಮೋಽಸ್ತು ತೇ ॥೨೨॥

ಸರ್ವತಃಪಾಣಿಪಾದಾನ್ತೇ ಸರ್ವತೋಽಕ್ಷಿಶಿರೋಮುಖಿ ।
ಸರ್ವತಃಶ್ರವಣಘ್ರಾಣೇ ನಾರಾಯಣಿ ನಮೋಽಸ್ತು ತೇ ॥೨೩॥

ಸರ್ವಸ್ವರೂಪೇ ಸರ್ವೇಶೇ ಸರ್ವಶಕ್ತಿಸಮನ್ವಿತೇ ।
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಽಸ್ತು ತೇ॥೨೪॥

---

೨೧. ಭೋಗಸಾಧನವಾದ ಐಶ್ವರ್ಯರೂಪಳೇ ! ಲಜ್ಜಾಸ್ವರೂಪಳೇ ! ತತ್ತ್ವಜ್ಞಾನವನ್ನು ಹೊಂದಿಸುವ ಮಹಾವಿದ್ಯಾರೂಪಿಣಿಯೇ ! ಶ್ರದ್ಧಾಸ್ವರೂಪಳೇ ! ಜಗತ್ತಿನ ಪುಷ್ಟಿಸ್ವರೂಪಳೇ ! ಸ್ವಧಾಮಂತ್ರಸ್ವರೂಪಿಣಿಯೆ ! ಶಾಶ್ವತಳೇ ! ಪ್ರಲಯವನ್ನುಂಟುಮಾಡುವ ಮಹಾರಾತ್ರಿಸ್ವರೂಪಳೆ ! ಮಹಾಮಾಯಾರೂಪಿಣಿಯೆ ! ಮತ್ತು ನಾರಾಯಣಿಯೆ ! ನಿನಗೆ ನಮಸ್ಕಾರವು.

೨೨. ಧಾರಣಾರೂಪವಾದ ಬುದ್ಧಿರೂಪಳೇ ! ಸರಸ್ವತೀದೇವಿಯೇ ! ಐಶ್ವರ್ಯರೂಪಳೇ ! ವಿಷ್ಣುಭಗಿನೀಸ್ವರೂಪಳೇ ! ಸಂಹಾರಮಾಡುವ ತಾಮಸೀಮೂರ್ತಿಯೆ ! ನಿಯಮವತಿಯೆ ! ಈಶ್ವರಾತ್ಮಕಳೇ ! ನೀನು ನಮ್ಮಲ್ಲಿ ಅನುಗ್ರಹತೋರು. ನಾರಾಯಣಿಯೇ ! ನಾವು ವಂದಿಸುವೆವು.

೨೩. ಎಲ್ಲ ಕಡೆಯಲ್ಲಿಯೂ ಕೈಕಾಲುಗಳ ಅಗ್ರವುಳ್ಳವಳೇ ! ಸರ್ವದಿಕ್ಕುಗಳಲ್ಲಿ ಕಣ್ಣು-ತಲೆ-ಮುಖಗಳುಳ್ಳವಳೇ ! ಎಲ್ಲೆಡೆಗಳಲ್ಲಿಯೂ ಶ್ರೋತ್ರ-ಘ್ರಾಣ ಇಂದ್ರಿಯಗಳುಳ್ಳವಳೇ ! ಮತ್ತು ನಾರಾಯಣಿಯೆ ! ನಿನ್ನನ್ನು ನಾವು ನಮಸ್ಕರಿಸುವೆವು.

೨೪. ಸರ್ವ ವಿಶ್ವದ ಸ್ವರೂಪವನ್ನು ಹೊಂದಿದವಳೇ ! ಸರ್ವ ವಿಶ್ವದ ಈಶ್ವರಿಯೆ ! ಸರ್ವ ಶಕ್ತಿಗಳಿಂದ ಪರಿಪೂರ್ಣಳೇ ! ದುರ್ಗಾದೇವಿಯೆ ! ನಮ್ಮನ್ನು ಸಮಸ್ತಭಯಗಳಿಂದ ರಕ್ಷಣಮಾಡು. ದೇವಿಯೆ ! ನಿನಗೆ ನಮಸ್ಕಾರವು.

ಏತತ್ತೇ ವದನಂ ಸೌಮ್ಯಂ ಲೋಚನತ್ರಯಭೂಷಿತಮ್ ।
ಪಾತು ನಃ ಸರ್ವಭೀತಿಭ್ಯಃ ಕಾತ್ಯಾಯನಿ ನಮೋಽಸ್ತು ತೇ ॥೨೫॥

ಜ್ವಾಲಾಕರಾಲಮತ್ಯುಗ್ರಮಶೇಷಾಸುರಸೂದನಮ್ ।
ತ್ರಿಶೂಲಂ ಪಾತು ನೋ ಭೀತೇರ್ಭದ್ರಕಾಲಿ ನಮೋಽಸ್ತು ತೇ ॥೨೬॥

ಹಿನಸ್ತಿ ದೈತ್ಯತೇಜಾಂಸಿ ಸ್ವನೇನಾಪೂರ್ಯ ಯಾ ಜಗತ್ ।
ಸಾ ಘಣ್ಟಾ ಪಾತು ನೋ ದೇವಿ ಪಾಪೇಭ್ಯೋ ನಃ ಸುತಾನಿವ ॥೨೭॥

ಅಸುರಾಸೃಗ್ವಸಾಪಙ್ಕಚರ್ಚಿತಸ್ತೇ ಕರೋಜ್ಜ್ವಲಃ ।
ಶುಭಾಯ ಖಡ್ಗೋ ಭವತು ಚಣ್ಡಿಕೇ ತ್ವಾಂ ನತಾ ವಯಮ್॥೨೮॥

---

೨೫. ಕಾತ್ಯಾಯಿನೀಸ್ವರೂಪಳಾದ ಮಹಾದೇವಿಯೇ! ಮೂರು ಕಣ್ಣುಗಳಿಂದ ಶೋಭಿಸುವ ಈ ನಿನ್ನ ಸೌಮ್ಯವಾದ ಮುಖವು ನಮ್ಮನ್ನು ಸಮಸ್ತ ಭೀತಿಗಳಿಂದ ರಕ್ಷಿಸಲಿ. ಮಹಾದೇವಿಯೆ! ನಿನ್ನನ್ನು ನಾವು ವಂದಿಸುವೆವು.

೨೬. ಮಂಗಳ-ಭೀಷಣ ರೂಪಗಳಿಂದ ಭದ್ರಕಾಳಿಯೆಂದು ಕರೆಯಲ್ಪಡುವ ದೇವಿಯೆ! ಜ್ವಾಲೆಗಳಿಂದ ಭಯಂಕರವೂ, ಘೋರರೂಪವೂ, ನಿಶ್ಶೇಷವಾಗಿ ರಾಕ್ಷಸರನ್ನು ಧ್ವಂಸಮಾಡುವುದೂ ಆದ ನಿನ್ನ ತ್ರಿಶೂಲವು ನಮ್ಮನ್ನು ಭಯದಿಂದ ಪಾರುಮಾಡಲಿ. ನಿನಗೆ ನಮಸ್ಕಾರವು.

೨೭. ಯಾವ ಘಂಟೆಯು ತನ್ನ ಭಾರಿಯಾದ ನಾದದಿಂದ ಲೋಕವನ್ನು ತುಂಬಿಸಿ ಸಮಸ್ತ ಅಸುರರ ತೇಜಸ್ಸನ್ನು ಅಡಗಿಸುವುದೋ ಅಂತಹ ನಿನ್ನ ಘಂಟೆಯು ನಮ್ಮನ್ನು ಮಕ್ಕಳನ್ನು ಹೇಗೋ ಹಾಗೆ ಪಾಪಫಲಗಳಿಂದ ರಕ್ಷಿಸಲಿ.

೨೮. ಚಂಡಿಕಾಂಬಿಕೆಯೇ! ನಾವು ನಿನ್ನನ್ನು ನಮಸ್ಕರಿಸಿದವರಾಗಿದ್ದೇವೆ. ಅಸುರರ ರಕ್ತ-ವಸಾ ಧಾತುಗಳ ಕೆಸರಿನಿಂದ ಲೇಪಿಸಲ್ಪಟ್ಟ, ನಿನ್ನ ಹಸ್ತಸಂಗದಿಂದ ಉಜ್ವಲವಾದ ಖಡ್ಗವು ನಮಗೆ ಮಂಗಳವನ್ನು ಉಂಟುಮಾಡಲಿ.

ರೋಗಾನಶೇಷಾನಪಹಂಸಿ ತುಷ್ಟಾ
　　ದದಾಸಿ ಕಾಮಾನ್ಸಕಲಾನಭೀಷ್ಟಾನ್ ।
ತ್ವಾಮಾಶ್ರಿತಾನಾಂ ನ ವಿಪನ್ನರಾಣಾಂ
　　ತ್ವಾಮಾಶ್ರಿತಾ ಹ್ಯಾಶ್ರಯತಾಂ ಪ್ರಯಾನ್ತಿ　　॥೨೯॥

ಏತತ್ಕೃತಂ ಯತ್ಕದನಂ ತ್ವಯಾದ್ಯ
　　ಧರ್ಮದ್ವಿಷಾಂ ದೇವಿ ಮಹಾಸುರಾಣಾಮ್ ।
ರೂಪೈರನೇಕೈರ್ಬಹುಧಾತ್ಮಮೂರ್ತಿಂ
　　ಕೃತ್ವಾಮ್ಬಿಕೇ ತತ್ಪ್ರಕರೋತಿ ಕಾನ್ಯಾ　　॥೩೦॥

ವಿದ್ಯಾಸು ಶಾಸ್ತ್ರೇಷು ವಿವೇಕದೀಪೇ-
　　ಷ್ವಾದ್ಯೇಷು ವಾಕ್ಯೇಷು ಚ ಕಾ ತ್ವದನ್ಯಾ ।
ಮಮತ್ವಗರ್ತೇಽತಿಮಹಾನ್ಧಕಾರೇ
　　ವಿಭ್ರಾಮಯಸ್ಯೇತದತೀವ ವಿಶ್ವಮ್　　॥೩೧॥

---

೨೯. ಭಕ್ತರಲ್ಲಿ ಸಂತೋಷಗೊಂಡ ನೀನು ಅಶೇಷವಾದ ರೋಗಗಳನ್ನು ಪರಿಹಾರಮಾಡುತ್ತೀಯೆ. ಇಷ್ಟವಾದ ಸಕಲ ಮನೋರಥಗಳನ್ನು ಕೊಡುತ್ತೀಯೆ. ನಿನ್ನನ್ನು ಆಶ್ರಯಿಸಿದ ಭಕ್ತಜನರಿಗೆ ವಿಪತ್ತು ಸಂಭವಿಸುವುದಿಲ್ಲ. ಮತ್ತು ನಿನ್ನನ್ನು ಆಶ್ರಯಿಸಿದವರು ಪರರಿಗೆ ಆಶ್ರಯದಾತರಾಗುವರು.

೩೦. ಮಹಾದೇವಿಯೆ! ಇಂದು ಧರ್ಮಮಾರ್ಗವನ್ನು ದ್ವೇಷಿಸುವ ಮಹಾಸುರರೊಡನೆ ಈ ಮಹಾಸಂಗ್ರಾಮವನ್ನು ನೀನು ಅನೇಕರೂಪಗಳಿಂದ ವಿಧವಿಧವಾದ ವ್ಯಷ್ಟಿಮೂರ್ತಿಗಳನ್ನು ಸ್ವೀಕರಿಸಿ ಮಾಡಿರುತ್ತೀಯೆ. ಈ ಲೋಕೋಪಕಾರವನ್ನು ಇನ್ನಾರು ಮಾಡಬಲ್ಲರು?

೩೧. ವಿವೇಕವನ್ನು ಉಜ್ವಲಗೊಳಿಸುವ ದೀಪಗಳಂತಿರುವ ಅನೇಕ ವಿದ್ಯೆಗಳು, ಶಾಸ್ತ್ರಗಳು ಮತ್ತು ಪುರಾತನವಾದ ವೇದವಾಙ್ಮಯಗಳು—ಇವು-ಗಳನ್ನು ಮೂಲೆಗೊತ್ತಿ ಮಹತ್ತಾದ ಅಂಧಕಾರದಿಂದ ತುಂಬಿದ ಮಮತ್ವ ಅಭಿಮಾನವೆಂಬ ದೊಡ್ಡ ಹಳ್ಳದಲ್ಲಿ ಹಾಕಿ ವಿಶ್ವವನ್ನು ತಿರುಗಿಸುತ್ತಿದ್ದೀಯೆ. ಅಂತಹ ಮಾಯೆಯು ನೀನಲ್ಲದೆ ಮತ್ತಾರು?

ರಕ್ಷಾಂಸಿ ಯತ್ರೋಗ್ರವಿಷಾಶ್ಚ ನಾಗಾ
ಯತ್ರಾರಯೋ ದಸ್ಯುಬಲಾನಿ ಯತ್ರ ।
ದಾವಾನಲೋ ಯತ್ರ ತಥಾಬ್ಧಿಮಧ್ಯೇ
ತತ್ರ ಸ್ಥಿತಾ ತ್ವಂ ಪರಿಪಾಸಿ ವಿಶ್ವಮ್ ॥೩೨॥

ವಿಶ್ವೇಶ್ವರೀ ತ್ವಂ ಪರಿಪಾಸಿ ವಿಶ್ವಂ
ವಿಶ್ವಾತ್ಮಿಕಾ ಧಾರಯಸೀತಿ ವಿಶ್ವಮ್ ।
ವಿಶ್ವೇಶವನ್ದ್ಯಾ ಭವತೀ ಭವನ್ತಿ
ವಿಶ್ವಾಶ್ರಯಾ ಯೇ ತ್ವಯಿ ಭಕ್ತಿನಮ್ರಾಃ ॥೩೩॥

ದೇವಿ ಪ್ರಸೀದ ಪರಿಪಾಲಯ ನೋಽರಿಭೀತೇ-
ರ್ನಿತ್ಯಂ ಯಥಾಸುರವಧಾದಧುನೈವ ಸದ್ಯಃ ।
ಪಾಪಾನಿ ಸರ್ವಜಗತಾಂ ಪ್ರಶಮಂ ನಯಾಶು
ಉತ್ಪಾತಪಾಕಜನಿತಾಂಶ್ಚ ತಥೋಪಸರ್ಗಾನ್ ॥೩೪॥

---

೩೨. ಎಲ್ಲಿ ಪರೋಪದ್ರವವನ್ನು ಮಾಡುತ್ತ ರಾಕ್ಷಸರಿರುವರೋ, ಎಲ್ಲಿ ಹಿಂಸೆಯನ್ನು ಕೊಡುವ ಉಗ್ರವಿಷದಿಂದ ಕೂಡಿದ ಸರ್ಪಗಳಿವೆಯೋ, ಎಲ್ಲಿ ಕಳ್ಳಕಾಕರಿರುವರೋ, ಎಲ್ಲಿ ಕಾಡುಕಿಚ್ಚಿನ ಪೀಡೆಯಿರುವುದೊ ಅಥವಾ ಎಲ್ಲಿ ಸಮುದ್ರದ ಭೀತಿಯಿರುವುದೋ ಅಲ್ಲೆಲ್ಲ ನೀನು ಇದ್ದು ಅಪಾಯಕ್ಕೆ ಈಡಾಗ-ಬಾರದ ಶಿಷ್ಟರನ್ನು ಪಾಲಿಸುತ್ತ ವಿಶ್ವವನ್ನು ರಕ್ಷಿಸುತ್ತೀಯೆ.

೩೩. ನೀನು ವಿಶ್ವದ ಈಶ್ವರಿಯಾಗಿದ್ದು ವಿಶ್ವವನ್ನು ಸಂರಕ್ಷಿಸುತ್ತೀಯೆ. ನೀನು ವಿಶ್ವರೂಪಿಣಿಯಾಗಿದ್ದು ವಿಶ್ವವನ್ನು ಧರಿಸಿಕೊಂಡಿದ್ದೀಯೆ. ನೀನು ವಿಶ್ವೇಶ್ವರರಿಂದ ನಮಸ್ಕಾರ್ಯಳಾಗಿದ್ದೀಯೆ, ಮತ್ತು ಯಾವ ಸಾಧುಜನರು ನಿನ್ನಲ್ಲಿ ಭಕ್ತಿಯಿಂದ ನಮ್ರರಾಗಿ ವರ್ತಿಸುವರೊ ಅವರು ವಿಶ್ವಕ್ಕೆ ಆಶ್ರಯದಾತ-ರಾಗಿರುವರು.

೩೪. ದೇವಿಯೇ! ಈಗ ಅಸುರರನ್ನು ವಧಿಸಿ ಶತ್ರುಭಯದಿಂದ ನಮ್ಮನ್ನು ರಕ್ಷಿಸಿದಂತೆ ಎಂದೆಂದೂ ಕೂಡಲೆ ನಮ್ಮನ್ನು ಶತ್ರುಭಯದಿಂದ ಸಂರಕ್ಷಣಮಾಡು. ನಮ್ಮಲ್ಲಿ ಅನುಗ್ರಹವನ್ನಿಡು. ಸಮಸ್ತ ವಿಶ್ವಕ್ಕೆ ಉಂಟಾ-ಗುವ ಅನರ್ಥವನ್ನು ನಿವಾರಿಸು. ಮತ್ತು ಉತ್ಪಾತಕಾಲದ ಪರಿಣಾಮದಿಂದ ಸಂಭವಿಸುವ ವಧೆ ಮುಂತಾದ ಉಪದ್ರವಗಳನ್ನು ಶಮನಮಾಡು.

ಪ್ರಣತಾನಾಂ ಪ್ರಸೀದ ತ್ವಂ ದೇವಿ ವಿಶ್ವಾರ್ತಿಹಾರಿಣಿ ।
ತ್ರೈಲೋಕ್ಯವಾಸಿನಾಮೀಡ್ಯೇ ಲೋಕಾನಾಂ ವರದಾ ಭವ ॥೩೫॥

ಶ್ರೀದೇವ್ಯುವಾಚ :—

ವರದಾಹಂ ಸುರಗಣಾ ವರಂ ಯಂ ಮನಸೇಚ್ಛಥ ।
ತಂ ವೃಣುಧ್ವಂ ಪ್ರಯಚ್ಛಾಮಿ ಜಗತಾಮುಪಕಾರಕಮ್ ॥೩೬॥

ದೇವಾ ಊಚುಃ :—

ಸರ್ವಬಾಧಾಪ್ರಶಮನಂ ತ್ರೈಲೋಕ್ಯಸ್ಯಾಖಿಲೇಶ್ವರಿ ।
ಏವಮೇತತ್ತ್ವಯಾ ಕಾರ್ಯಮಸ್ಮದ್ವೈರಿವಿನಾಶನಮ್ ॥೩೭॥

---

೩೫. ವಿಶ್ವದ ಸಂಕಟವನ್ನು ಪರಿಹರಿಸುವವಳೇ! ತ್ರಿಲೋಕಗಳಲ್ಲಿ ವಾಸಮಾಡುವ ಸಮಸ್ತರಿಗೂ ಪೂಜ್ಯಳಾದವಳೇ! ಮಹಾದೇವಿಯೆ! ನಿನ್ನನ್ನು ವಂದಿಸುತ್ತಿದ್ದ ನಮ್ಮಲ್ಲಿ ಅನುಗ್ರಹ ತೋರು. ಲೋಕಕಲ್ಯಾಣವಾಗುವಂತೆ ವರಗಳನ್ನು ಕೊಡು.

ದೇವಿಯು ಇಂತೆಂದಳು :—

೩೬. ಎಲೈ ದೇವವೃಂದವೇ! ನಾನು ನಿಮ್ಮಲ್ಲಿ ಸುಪ್ರೀತಳಾಗಿ ವರವನ್ನು ಕೊಡುವವಳಾಗಿದ್ದೇನೆ. ಜಗತ್ತಿಗೆ ಉಪಕಾರವಾಗುವಂತಹ ಯಾವ ವರವನ್ನು ನೀವು ಮನಸ್ಸಿನಲ್ಲಿ ಆಶಿಸುವಿರೋ ಅದನ್ನು ಕೇಳಿರಿ. ನಾನು ಆ ವರವನ್ನು ಕೊಡುವೆನು.

ದೇವತೆಗಳು ನುಡಿದರು :—

೩೭. ಸರ್ವೇಶ್ವರಿಯಾದ ದೇವಿಯೇ! ನೀನು ಈಗ ಮಾಡಿದಂತೆ ಯಾವಾಗಲೂ ತ್ರೈಲೋಕ್ಯಕ್ಕೆ ಸಂಭವಿಸುವ ಪೀಡೆಗಳ ಪರಿಹಾರವನ್ನು ಮಾಡಬೇಕು. ಮತ್ತು ನಮ್ಮಿಂದ ಸಂಹರಿಸಲಾಗದ ನಮ್ಮ ಶತ್ರುಗಳನ್ನು ಸಂಹರಿಸಬೇಕು.

ಶ್ರೀದೇವ್ಯುವಾಚ :—

ವೈವಸ್ವತೇಽನ್ತರೇ ಪ್ರಾಪ್ತೇ ಅಷ್ಟಾವಿಂಶತಿಮೇ ಯುಗೇ ।
ಶುಮ್ಭೋ ನಿಶುಮ್ಭಶ್ಚೈವಾನ್ಯಾವುತ್ಪತ್ಸ್ಯೇತೇ ಮಹಾಸುರೌ ॥೩೮॥

ನನ್ದಗೋಪಕುಲೇ ಜಾತಾ ಯಶೋದಾಗರ್ಭಸಮ್ಭವಾ ।
ತತಸ್ತೌ ನಾಶಯಿಷ್ಯಾಮಿ ವಿನ್ಧ್ಯಾಚಲನಿವಾಸಿನೀ ॥೩೯॥

ಪುನರಪ್ಯತಿರೌದ್ರೇಣ ರೂಪೇಣ ಪೃಥಿವೀತಲೇ ।
ಅವತೀರ್ಯ ಹನಿಷ್ಯಾಮಿ ವೈಪ್ರಚಿತ್ತಾಂಸ್ತು ದಾನವಾನ್ ॥೪೦॥

ಭಕ್ಷಯನ್ತ್ಯಾಶ್ಚ ತಾನುಗ್ರಾನ್ವೈಪ್ರಚಿತ್ತಾನ್ ಸುದಾನವಾನ್ ।
ರಕ್ತಾ ದನ್ತಾ ಭವಿಷ್ಯನ್ತಿ ದಾಡಿಮೀಕುಸುಮೋಪಮಾಃ ॥೪೧॥

ದೇವಿಯು ಹೇಳಿದಳು :—

೩೮. ಮುಂದೆ ಬರುವ ವೈವಸ್ವತ ಮನ್ವಂತರದಲ್ಲಿ ಇಪ್ಪತ್ತೆಂಟನೆಯ ಯುಗಪರ್ಯಾಯದಲ್ಲಿ ಶುಂಭ-ನಿಶುಂಭರೆಂದು ವಿಖ್ಯಾತರಾದ ಮತ್ತೆ ಇಬ್ಬರು ಮಹಾಸುರರು ಜನಿಸುವರು.

೩೯. ಆಗ ವಿಂಧ್ಯಾಚಲದಲ್ಲಿ ವಾಸಮಾಡುವ ನಾನು ನಂದಗೋಪನ ಮನೆಯಲ್ಲಿ ಅವನ ಪತ್ನಿಯಾದ ಯಶೋದೆಯ ಗರ್ಭದಲ್ಲಿ ಜನ್ಮವೆತ್ತಿ ಬಂದು ಆ ಶುಂಭ-ನಿಶುಂಭ ಅಸುರರನ್ನು ವಧಿಸುತ್ತೇನೆ.

೪೦. ಮತ್ತು ಆ ಸಮಯದಲ್ಲಿ ಅತಿ ಭಯಂಕರವಾದ ರೂಪದಿಂದ ಭೂಮಂಡಲದಲ್ಲಿ ಮತ್ತೊಮ್ಮೆ ಅವತರಿಸಿ ಸಾಧುದ್ವೇಷಿಯಾದ ವಿಪ್ರಚಿತ್ತಿ ಎಂಬ ದಾನವನ ಪುತ್ರರನ್ನು ವಧಿಸುವೆನು.

೪೧. ಹಾಗೆ ವಿಪ್ರಚಿತ್ತಿದಾನವನ ಸಂತತಿಗೆ ಸೇರಿದ ಉಗ್ರಸ್ವಭಾವದ ದಾನವೋತ್ತಮರನ್ನು ಭಕ್ಷಿಸುತ್ತಿರುವ ನನ್ನ ಹಲ್ಲುಗಳು ದಾಡಿಂಬಕುಸುಮಗಳಂತೆ ಕೆಂಪುಬಣ್ಣವುಳ್ಳವುಗಳಾಗುತ್ತವೆ.

ತತೋ ಮಾಂ ದೇವತಾಃ ಸ್ವರ್ಗೇ ಮರ್ತ್ಯಲೋಕೇ ಚ ಮಾನವಾಃ ।
ಸ್ತುವನ್ತೋ ವ್ಯಾಹರಿಷ್ಯನ್ತಿ ಸತತಂ ರಕ್ತದನ್ತಿಕಾಮ್ ॥೪೨॥

ಭೂಯಶ್ಚ ಶತವಾರ್ಷಿಕ್ಯಾಮನಾವೃಷ್ಟ್ಯಾಮನಮ್ಭಸಿ ।
ಮುನಿಭಿಃ ಸಂಸ್ತುತಾ ಭೂಮೌ ಸಮ್ಭವಿಷ್ಯಾಮ್ಯಯೋನಿಜಾ ॥೪೩॥

ತತಃ ಶತೇನ ನೇತ್ರಾಣಾಂ ನಿರೀಕ್ಷಿಷ್ಯಾಮಿ ಯನ್ಮುನೀನ್ ।
ಕೀರ್ತಯಿಷ್ಯನ್ತಿ ಮನುಜಾಃ ಶತಾಕ್ಷೀಮಿತಿ ಮಾಂ ತತಃ ॥೪೪॥

ತತೋಽಹಮಖಿಲಂ ಲೋಕಮಾತ್ಮದೇಹಸಮುದ್ಭವೈಃ ।
ಭರಿಷ್ಯಾಮಿ ಸುರಾಃ ಶಾಕೈರಾವೃಷ್ಟೇಃ ಪ್ರಾಣಧಾರಕೈಃ ॥೪೫॥

---

೪೨. ಆದರಿಂದ ಮರ್ತ್ಯಲೋಕದಲ್ಲಿ ಮಾನವರು ಮತ್ತು ದೇವ-ಲೋಕದಲ್ಲಿ ದೇವತೆಗಳು ನನ್ನನ್ನು ಭಕ್ತಿಯಿಂದ ಸ್ತುತಿಸುವಾಗ ಯಾವಾಗಲೂ ದಾನವ ವಧವನ್ನು ಸ್ಮರಿಸಿಕೊಂಡು ರಕ್ತದಂತಿಕಾ ಎಂಬ ಹೆಸರಿನಿಂದ ನನ್ನನ್ನು ಕೀರ್ತಿಸುವರು.

೪೩. ಮತ್ತೊಮ್ಮೆ ಒಂದು ನೂರು ವರ್ಷಗಳವರೆಗಿನ ಅನಾವೃಷ್ಟಿಯಿಂದ ಭೂಮಿಯಲ್ಲಿ ನೀರಿಲ್ಲದಂತಾಗಲು ಮುನಿಜನರಿಂದ ಸ್ತುತಿಸಲ್ಪಟ್ಟವಳಾಗಿ ಅಯೋನಿಜೆಯಾಗಿ ಹುಟ್ಟುವೆನು.

೪೪. ತರುವಾಯ ನಾನು ಮುನಿಜನರನ್ನು ಸಂಜೀವನಗೊಳಿಸಲು ಯಾವ ಕಾರಣ ಒಂದುನೂರು ಕಣ್ಣುಗಳಿಂದ ನೋಡುವೆನೊ ಅದರಿಂದ ಮಾನವರು ನನ್ನನ್ನು ಶತಾಕ್ಷೀ ಎಂಬ ಹೆಸರಿನಿಂದ ಕೀರ್ತಿಸುವರು.

೪೫. ತರುವಾಯ ನಾನು ನನ್ನ ದೇಹದಿಂದ ಹುಟ್ಟಿದ ಪ್ರಾಣಧಾರಣೆಗೆ ಸಾಧನವಾದ ಕಾಯಿ-ಪಲ್ಯಗಳಿಂದ ಮತ್ತೆ ಮಳೆಯು ಸುರಿಯುವಂತಾಗುವ-ವರೆಗೆ ಲೋಕವನ್ನು ಪೋಷಿಸುವೆನು.

ಶಾಕಮ್ಭರೀತಿ ವಿಖ್ಯಾತಿಂ ತದಾ ಯಾಸ್ಯಾಮ್ಯಹಂ ಭುವಿ ||೪೬||

ತತ್ರೈವ ಚ ವಧಿಷ್ಯಾಮಿ ದುರ್ಗಮಾಖ್ಯಂ ಮಹಾಸುರಮ್ ।
ದುರ್ಗಾ ದೇವೀತಿ ವಿಖ್ಯಾತಂ ತನ್ಮೇ ನಾಮ ಭವಿಷ್ಯತಿ ||೪೭||

ಪುನಶ್ಚಾಹಂ ಯದಾ ಭೀಮಂ ರೂಪಂ ಕೃತ್ವಾ ಹಿಮಾಚಲೇ ।
ರಕ್ಷಾಂಸಿ ಭಕ್ಷಯಿಷ್ಯಾಮಿ ಮುನೀನಾಂ ತ್ರಾಣಕಾರಣಾತ್ ||೪೮||

ತದಾ ಮಾಂ ಮುನಯಃ ಸರ್ವೇ ಸ್ತೋಷ್ಯನ್ತ್ಯಾನಮ್ರಮೂರ್ತಯಃ ।
ಭೀಮಾ ದೇವೀತಿ ವಿಖ್ಯಾತಂ ತನ್ಮೇ ನಾಮ ಭವಿಷ್ಯತಿ ||೪೯||

ಯದಾರುಣಾಖ್ಯಸ್ತ್ರೈಲೋಕ್ಯೇ ಮಹಾಬಾಧಾಂ ಕರಿಷ್ಯತಿ ।
ತದಾಹಂ ಭ್ರಾಮರಂ ರೂಪಂ ಕೃತ್ವಾ ಸಙ್ಖ್ಯೇಯಷಟ್ಪದಮ್ ||೫೦||

---

೪೬. ಹೀಗೆ ನಾನು ಅನಾವೃಷ್ಟಿಯಿಂದ ಲೋಕಕ್ಕೆ ಪ್ರಾಣಾಪಾಯವು ಒದಗಿರುವುದನ್ನು ನಿವಾರಿಸಲು ದೇಹದಿಂದ ಹುಟ್ಟಿದ ಶಾಕ (ಕಾಯಿಪಲ್ಯ) ಗಳಿಂದ ಭರಣ (ಪೋಷಣ) ಮಾಡುವ ನಿಮಿತ್ತವಾಗಿ ಲೋಕದಲ್ಲಿ ಶಾಕಂಭರೀ ಎಂಬ ನಾಮದಿಂದ ಖ್ಯಾತಿಹೊಂದುವೆನು.

೪೭. ಆಗಲೆ ದುರ್ಗಮ ಎಂಬ ಹೆಸರಿನ ಮತ್ತೊಬ್ಬ ಉಗ್ರರಾಕ್ಷಸನನ್ನು ಲೋಕರಕ್ಷಣೆಗಾಗಿ ವಧಿಸುವೆನು. ದುರ್ಗಮನನ್ನು ಸಂಹರಿಸಿದ ನಿಮಿತ್ತದಿಂದ ನನಗೆ ದುರ್ಗಾ ಎಂಬ ಹೆಸರು ಲೋಕದಲ್ಲಿ ಖ್ಯಾತಿಯನ್ನು ಹೊಂದುವುದು.

೪೮. ಮತ್ತೆ ಒಂದು ಸಮಯದಲ್ಲಿ ನಾನು ಹಿಮಾಚಲಪರ್ವತದಲ್ಲಿ ಬಲು ಭಯಂಕರವಾದ ರೂಪವನ್ನು ಪರಿಗ್ರಹಿಸಿ ಮಹರ್ಷಿಗಳನ್ನು ರಕ್ಷಿಸುವ ನಿಮಿತ್ತವಾಗಿ ಮುನಿಪೀಡಕರಾದ ರಾಕ್ಷಸರನ್ನು ವಧಿಸುವೆನು.

೪೯. ಆಗ ಸಮಸ್ತ ಮುನಿಜನರು ಭಕ್ತಿಯಿಂದ ಬಾಗಿದ ಮೂರ್ತಿಯುಳ್ಳವರಾಗಿ ನನ್ನನ್ನು ಸ್ತುತಿಮಾಡುತ್ತಾರೆ. ಆಗ ಲೋಕದಲ್ಲಿ ನನಗೆ ಭೀಮಾದೇವಿಯೆಂದು ನಾಮಾಂಕನವು ಖ್ಯಾತಿಹೊಂದುವುದು.

೫೦. ಮತ್ತೊಮ್ಮೆ ಯಾವಾಗ ಅರುಣ ಎಂಬ ಹೆಸರಿನ ಮಹಾರಾಕ್ಷಸನು ತ್ರೈಲೋಕ್ಯಕ್ಕೆ ಮಹಾ ಉಪದ್ರವವನ್ನು ಉಂಟುಮಾಡುವನೋ ಆಗ ಸಂಖ್ಯಾತೀತವಾದ ದುಂಬಿಗಳ ಗುಂಪಿನ ರೂಪದಿಂದ ಭ್ರಾಮರರೂಪವನ್ನು ನಾನು ಸ್ವೀಕರಿಸುವೆನು.

ತ್ರೈಲೋಕ್ಯಸ್ಯ ಹಿತಾರ್ಥಾಯ ವಧಿಷ್ಯಾಮಿ ಮಹಾಸುರಮ್ ।
ಭ್ರಾಮರೀತಿ ಚ ಮಾಂ ಲೋಕಾಸ್ತದಾ ಸ್ತೋಷ್ಯನ್ತಿ ಸರ್ವತಃ ॥೫೧॥

ಇತ್ಥಂ ಯದಾ ಯದಾ ಬಾಧಾ ದಾನವೋತ್ಥಾ ಭವಿಷ್ಯತಿ ।
ತದಾ ತದಾವತೀರ್ಯಾಹಂ ಕರಿಷ್ಯಾಮ್ಯರಿಸಂಕ್ಷಯಮ್ ॥೫೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ನಾರಾಯಣೀಸ್ತುತಿರ್ನಾಮ ಅಷ್ಟಾಶೀತಿತಮೋಽಧ್ಯಾಯಃ

---

೫೧. ಆ ಭ್ರಾಮರರೂಪದಿಂದ ದುಷ್ಟದಾನವನ ವಧೆಮಾಡಿ ತ್ರೈಲೋಕ್ಯಕ್ಕೆ ಹಿತವನ್ನು ಉಂಟುಮಾಡಲು ಅರುಣಾಸುರನನ್ನು ಸಂಹರಿಸುತ್ತೇನೆ. ಅಂದಿನಿಂದ ಜನರು ಎಲ್ಲೆಲ್ಲಿಯೂ ನನ್ನನ್ನು ಭ್ರಾಮರೀ ಎಂದು ಸ್ತುತಿಮಾಡುವರು.

೫೨. ಹೀಗೆ ತ್ರಿಲೋಕಗಳಲ್ಲಿ ದಾನವರಿಂದ ಸಂಭವಿಸುವ ಪೀಡೆಯ ನಿಮಿತ್ತವಾಗಿ ವಿಪತ್ತು ಯಾವಾಗ ಉಂಟಾಗುವುದೋ ಆಗ ನಾನು ಬಗೆಬಗೆಯ ರೂಪಗಳಿಂದ ಅವತರಿಸಿ ಬಂದು ಶತ್ರುಗಳನ್ನು ಸಂಹರಿಸಿ ತ್ರಿಲೋಕವನ್ನು ರಕ್ಷಿಸುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತೆಂಟನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನನವತಿತಮೋಽಧ್ಯಾಯಃ

(ದೇವೀಚರಿತಶ್ರವಣಮ್—ದೇವಾನಾಂ ವರಲಾಭಃ)

ಶ್ರೀ ದೇವ್ಯುವಾಚ :—

ಏಭಿಃ ಸ್ತವೈಶ್ಚ ಮಾಂ ನಿತ್ಯಂ ಸ್ತೋಷ್ಯತೇ ಯಃ ಸಮಾಹಿತಃ ।
ತಸ್ಯಾಹಂ ಸಕಲಾಂ ಬಾಧಾಂ ಶಮಯಿಷ್ಯಾಮ್ಯಸಂಶಯಮ್ ॥೧॥

ಮಧುಕೈಟಭನಾಶಂ ಚ ಮಹಿಷಾಸುರಘಾತನಮ್ ।
ಕೀರ್ತಯಿಷ್ಯನ್ತಿ ಯೇ ತದ್ವದ್ವಧಂ ಶುಮ್ಭನಿಶುಮ್ಭಯೋಃ ॥೨॥

ಎಂಭತ್ತೊಂಭತ್ತನೆಯ ಅಧ್ಯಾಯ

ದೇವಿಯು ಇಂತೆಂದಳು :—

೧. ಯಾವ ಪುರುಷನು ಭಕ್ತಿ-ಶ್ರದ್ಧೆಗಳಿಂದ ಕೂಡಿದವನಾಗಿ ಹಿಂದೆ ವರ್ಣಿಸಿದ ಸ್ತುತಿವಚನಗಳಿಂದ ಮತ್ತೆ ಮತ್ತೆ ನನ್ನನ್ನು ಸ್ತುತಿಮಾಡುವನೋ ಆ ಪುರುಷನ ಸಮಸ್ತ ಅನರ್ಥಬಾಧೆಗಳನ್ನು ನಾನು ಶಮನಮಾಡುವೆನು.

೨. ಹಿಂದೆ ಹೇಳಿದ ದೇವೀಮಾಹಾತ್ಮ್ಯವನ್ನು ಪ್ರಕಾಶಿಸುವ ಸ್ತುತಿಯಲ್ಲಿ ಮಧುಕೈಟಭ ಸಂಹಾರ, ಮಹಿಷಾಸುರ ಸಂಹಾರ ಮತ್ತು ಶುಂಭ-ನಿಶುಂಭ ಸಂಹಾರವೆಂಬ ಮೂರು ಚರಿತ್ರಗಳು ಮುಖ್ಯವಾಗಿವೆ. ಇವುಗಳನ್ನು ಹೇಳಿ ದೇವಿಯನ್ನು ಸ್ತುತಿಸಬೇಕು.

ಅಷ್ಟಮ್ಯಾಂ ಚ ಚತುರ್ದಶ್ಯಾಂ ನವಮ್ಯಾಂ ಚೈಕಚೇತಸಃ ।
ಸ್ತೋಷ್ಯನ್ತಿ ಚೈವ ಯೇ ಭಕ್ತ್ಯಾ ಮಮ ಮಾಹಾತ್ಮ್ಯಮುತ್ತಮಮ್ ॥೩॥

ನ ತೇಷಾಂ ದುಷ್ಕೃತಂ ಕಿಂಚಿದ್ದುಷ್ಕೃತೋತ್ಥಾ ನ ಚಾಪದಃ ।
ನ ಭವಿಷ್ಯತಿ ದಾರಿದ್ರ್ಯಂ ನ ಚೈವೇಷ್ಟವಿಯೋಜನಮ್ ॥೪॥

ಶತ್ರುತೋ ನ ಭಯಂ ತೇಷಾಂ ದಸ್ಯುತೋ ವಾ ನ ರಾಜತಃ ।
ನ ಶಸ್ತ್ರಾನಲತೋಯೌಘಾತ್ಕದಾಚಿತ್ಸಮ್ಭವಿಷ್ಯತಿ ॥೫॥

ತಸ್ಮಾನ್ಮಮೈತನ್ಮಾಹಾತ್ಮ್ಯಂ ಪಠಿತವ್ಯಂ ಸಮಾಹಿತೈಃ ।
ಶ್ರೋತವ್ಯಂ ಚ ಸದಾ ಭಕ್ತ್ಯಾ ಪರಂ ಸ್ವಸ್ತ್ಯಯನಂ ಮಹತ್ ॥೬॥

---

೩. ಮಾನವರು ಭಕ್ತಿ-ಶ್ರದ್ಧಾವಂತರೂ ಮತ್ತು ಏಕಾಗ್ರತೆಯಿಂದ ಕೂಡಿದ ಮಾನಸವುಳ್ಳವರೂ ಆಗಿ ಅಷ್ಟಮೀ-ಚತುರ್ದಶೀ ಅಥವಾ ನವಮೀ ತಿಥಿಗಳಲ್ಲಿ ನನ್ನ ಸರ್ವೋತ್ತಮವಾದ ಮಾಹಾತ್ಮ್ಯವನ್ನು ಸ್ತೋತ್ರಮಾಡಬೇಕು.

೪. ಹಾಗೆ ಸ್ತುತಿಮಾಡಿದ ಮಾನವರಿಗೆ ಸ್ವಲ್ಪವೂ ಪಾಪವುಳಿಯು-ವುದಿಲ್ಲ. ಪಾಪಪರಿಣಾಮವಾಗಿ ಬರುವ ಆಪತ್ತುಗಳು ಸಂಭವಿಸುವುದಿಲ್ಲ. ದಾರಿದ್ರ್ಯ ದುಃಖವುಂಟಾಗುವುದಿಲ್ಲ. ಮತ್ತು ಇಷ್ಟವಸ್ತುವಿನ ಹಾನಿಯು ಸಂಭವಿಸುವುದಿಲ್ಲ.

೫. ಹಾಗು ದೇವೀಮಾಹಾತ್ಮ್ಯವನ್ನು ಕೀರ್ತಿಸಿದ ಮಾನವರಿಗೆ ಶತ್ರುವಿನಿಂದ ಭಯವಿಲ್ಲ. ಕಳ್ಳ-ಕಾಕರ ಭಯವಿಲ್ಲ. ರಾಜಭಯವಿಲ್ಲ. ಅಥವಾ ಶಸ್ತ್ರ, ಬೆಂಕಿ, ಜಲಪ್ರವಾಹಗಳಿಂದಲೂ ಯಾವಾಗಲೂ ಭಯವುಂಟಾಗುವುದಿಲ್ಲ.

೬. ಆದುದರಿಂದ ಮನಸ್ಸಿನ ಏಕಾಗ್ರತೆಯನ್ನು ಹೊಂದಿದ ಮಾನವರಿಂದ ನನ್ನ ಈ ಮಾಹಾತ್ಮ್ಯವು ಭಕ್ತಿಯಿಂದ ಯಾವಾಗಲೂ ಪಠನ ಮತ್ತು ಶ್ರವಣ ಮಾಡತಕ್ಕದ್ದಾಗಿರುವುದು. ನನ್ನ ಮಾಹಾತ್ಮ್ಯವನ್ನು ಪ್ರಕಾಶಪಡಿಸುವ ಚರಿತವ ಶ್ರವಣ ಪಠನಗಳು ಹೆಚ್ಚಾಗಿ ಕ್ಷೇಮವನ್ನು ಕೊಡುವುವು.

ಉಪಸರ್ಗಾನಶೇಷಾಂಸ್ತು ಮಹಾಮಾರೀಸಮುದ್ಭವಾನ್ ।
ತಥಾ ತ್ರಿವಿಧಮುತ್ಪಾತಂ ಮಾಹಾತ್ಮ್ಯಂ ಶಮಯೇನ್ಮಮ ॥೭॥

ಯತ್ರೈತತ್ಪಠ್ಯತೇ ಸಮ್ಯಙ್ ನಿತ್ಯಮಾಯತನೇ ಮಮ ।
ಸದಾ ನ ತದ್ವಿಮೋಕ್ಷ್ಯಾಮಿ ಸಾನ್ನಿಧ್ಯಂ ತತ್ರ ಮೇ ಸ್ಥಿತಮ್ ॥೮॥

ಬಲಿಪ್ರದಾನೇ ಪೂಜಾಯಾಮಗ್ನಿಕಾರ್ಯೇ ಮಹೋತ್ಸವೇ ।
ಸರ್ವಂ ಮಮೈತಚ್ಚರಿತಮುಚ್ಚಾರ್ಯಂ ಶ್ರಾವ್ಯಮೇವ ಚ ॥೯॥

ಜಾನತಾಜಾನತಾ ವಾಪಿ ಬಲಿಂ ಪೂಜಾಂ ತಥಾ ಕೃತಾಮ್ ।
ಪ್ರತೀಚ್ಛಿಷ್ಯಾಮ್ಯಹಂ ಪ್ರೀತ್ಯಾ ವಹ್ನಿಹೋಮಂ ತಥಾ ಕೃತಮ್ ॥೧೦॥

---

೭. ನನ್ನ ಮಾಹಾತ್ಮ್ಯವು ಭಕ್ತಿಯಿಂದ ಶ್ರವಣ-ಪಠನಮಾಡಿದ ಮನುಜರಿಗೆ ಮಹಾಮಾರಿಯಿಂದ ಜನಿಸುವ ಎಲ್ಲ ಉಪದ್ರವಗಳನ್ನು ನಿವಾರಿಸುವುದು. ಮತ್ತು ಆಧ್ಯಾತ್ಮಿಕ-ಆಧಿಭೌತಿಕ-ಆಧಿದೈವಿಕವೆಂದು ಮೂರುವಿಧವಾದ ಉತ್ಪಾತ ದುಃಖವನ್ನು ನನ್ನ ಮಾಹಾತ್ಮ್ಯವು ನಿವಾರಿಸುವುದು.

೮. ಯಾವ ನನ್ನ ಮೂರ್ತಿಯಿರುವ ಮಂದಿರದಲ್ಲಿ ನಿತ್ಯವೂ ನನ್ನ ಮಾಹಾತ್ಮ್ಯವು ಯಥಾವಿಧಿಯಾಗಿ ಪಠಿಸಲ್ಪಡುವುದೋ ಆ ಮಂದಿರವನ್ನು ನಾನು ಎಂದಿಗೂ ಬಿಡುವುದಿಲ್ಲ. ಸರ್ವಕಾಲದಲ್ಲಿಯೂ ನನ್ನ ಸಾನ್ನಿಧ್ಯವು ಆ ಮಂದಿರದಲ್ಲಿ ಇರುವುದು.

೯. ಬಲಿಯಾಗಿ ಪಶುವನ್ನು ಸಮರ್ಪಿಸುವ ಸಂದರ್ಭದಲ್ಲಿ, ಪುಷ್ಪಾದಿ ಉಪಚಾರಗಳನ್ನರ್ಪಿಸಿ ಪೂಜಿಸುವ ಸಮಯದಲ್ಲಿ, ಮಾಲಾಮಂತ್ರ ಪುರಶ್ಚರಣಾಂಗವಾದ ಅಗ್ನಿಕಾರ್ಯದಲ್ಲಿ ಮತ್ತು ಆಯಾಯ ಮಾಸಗಳ ಮಹೋತ್ಸವಗಳಲ್ಲಿ ನನ್ನ ಸಮಸ್ತ ಚರಿತ್ರವನ್ನೂ ಪಠಿಸಬೇಕು ಮತ್ತು ಶ್ರವಣಮಾಡಬೇಕು.

೧೦. ಗುರೂಪದೇಶದಿಂದ ತಿಳಿಯಬೇಕಾದ ಹೋಮ-ಅರ್ಚನಗಳ ಕ್ರಮವನ್ನು ತಿಳಿದ ಅಥವಾ ತಿಳಿಯದ ಪುರುಷನು ಮಾಡಿರುವ ಬಲಿಸಮರ್ಪಣೆ, ಉಪಚಾರಪೂಜೆ ಮತ್ತು ಅಗ್ನಿಕಾರ್ಯರೂಪವಾದ ಹೋಮ-ಇವುಗಳನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ.

ಶರತ್ಕಾಲೇ ಮಹಾಪೂಜಾ ಕ್ರಿಯತೇ ಯಾ ಚ ವಾರ್ಷಿಕೀ ।
ತಸ್ಯಾಂ ಮಮೈತನ್ಮಾಹಾತ್ಮ್ಯಂ ಶ್ರುತ್ವಾ ಭಕ್ತಿಸಮನ್ವಿತಃ ॥೧೧॥

ಸರ್ವಬಾಧಾವಿನಿರ್ಮುಕ್ತೋ ಧನಧಾನ್ಯಸಮನ್ವಿತಃ ।
ಮನುಷ್ಯೋ ಮತ್ಪ್ರಸಾದೇನ ಭವಿಷ್ಯತಿ ನ ಸಂಶಯಃ ॥೧೨॥

ಶ್ರುತ್ವಾ ಮಮೈತನ್ಮಾಹಾತ್ಮ್ಯಂ ತಥೋತ್ಪತ್ತೀಃ ಪೃಥಕ್ ಶುಭಾಃ ।
ಪರಾಕ್ರಮಾಂಶ್ಚ ಯುದ್ಧೇಷು ಜಾಯತೇ ನಿರ್ಭಯಃ ಪುಮಾನ್ ॥೧೩॥

ರಿಪವಃ ಸಂಕ್ಷಯಂ ಯಾನ್ತಿ ಕಲ್ಯಾಣಂ ಚೋಪಪದ್ಯತೇ ।
ನನ್ದತೇ ಚ ಕುಲಂ ಪುಂಸಾಂ ಮಾಹಾತ್ಮ್ಯಂ ಮಮ ಶೃಣ್ವತಾಮ್ ॥೧೪॥

---

೧೧. ಪ್ರತಿವರ್ಷದಲ್ಲಿಯೂ ಶರತ್ಕಾಲದಲ್ಲಿ ವಿಶೇಷವಾಗಿ ಮಹಾಪೂಜೆಯನ್ನು ಮಾಡಿ ವರ್ಷೋತ್ಸವವನ್ನು ಆಚರಿಸಬೇಕು. ಆಗ ಭಕ್ತಿಯಿಂದ ಕೂಡಿ ಚರಿತ್ರತ್ರಯದಿಂದ ಕೂಡಿದ ನನ್ನ ಮಾಹಾತ್ಮ್ಯವನ್ನು ಶ್ರವಣಮಾಡಬೇಕು.

೧೨. ಹಾಗೆ ಭಕ್ತಿಯಿಂದ ಕೂಡಿ ಮಾಹಾತ್ಮ್ಯವನ್ನು ಶ್ರವಣ ಮಾಡಿದ ಮಾನವನು ಸಮಸ್ತ ಬಾಧೆಗಳಿಂದ ಬಿಡಲ್ಪಟ್ಟವನೂ ಮತ್ತು ಧನ-ಧಾನ್ಯ ಸಮೃದ್ಧಿಯುಳ್ಳವನೂ ಆಗಿ ನನ್ನ ಅನುಗ್ರಹದಿಂದ ಸುಖಭೋಗಿಯಾಗುವನು. ಸಂಶಯವಿಲ್ಲ.

೧೩. ಮಾನವನು ಸಮಗ್ರವಾಗಿ ನನ್ನ ಮಾಹಾತ್ಮ್ಯವನ್ನು ಶ್ರವಣ ಮಾಡಿ, ಅಲ್ಲಲ್ಲಿ ಪ್ರತಿಪಾದಿಸುವ ನನ್ನ ಉತ್ಪತ್ತಿಗಳನ್ನು ಕೇಳಿ ಹಾಗು ರಾಕ್ಷಸರೊಡನೆ ಯುದ್ಧಪ್ರಸಂಗಗಳಲ್ಲಿ ವರ್ಣಿಸಿದ ಪರಾಕ್ರಮಗಳನ್ನು ಭಾವಿಸಿ ಪಾವನನಾದವನು ನಿರ್ಭಯನಾಗುವನು.

೧೪. ಮತ್ತು ಆಸ್ತಿಕತೆಯಿಂದ ನನ್ನ ಮಾಹಾತ್ಮ್ಯವನ್ನು ಶ್ರವಣ ಮಾಡಿದ ಮಾನವರಿಗೆ ಶತ್ರುಗಳು ಕ್ಷಯಿಸಿಹೋಗುವರು. ಕಲ್ಯಾಣಪರಂಪರೆಯು ಉಂಟಾಗುವುದು. ಮತ್ತು ವಂಶವು ಸುಖ-ಸಂತೋಷಗಳಿಂದ ಮೆರೆದು ವೃದ್ಧಿ-ಹೊಂದುವುದು.

ಶಾನ್ತಿಕರ್ಮಾಣಿ ಸರ್ವತ್ರ ತಥಾ ದುಃಸ್ವಪ್ನದರ್ಶನೇ ।
ಗ್ರಹಪೀಡಾಸು ಚೋಗ್ರಾಸು ಮಾಹಾತ್ಮ್ಯಂ ಶೃಣುಯಾನ್ಮಮ ॥೧೫॥

ಉಪಸರ್ಗಾಃ ಶಮಂ ಯಾನ್ತಿ ಗ್ರಹಪೀಡಾಶ್ಚ ದಾರುಣಾಃ ।
ದುಃಸ್ವಪ್ನಂ ಚ ನೃಭಿರ್ದೃಷ್ಟಂ ಸುಸ್ವಪ್ನಮುಪಜಾಯತೇ ॥೧೬॥

ಬಾಲಗ್ರಹಾಭಿಭೂತಾನಾಂ ಬಾಲಾನಾಂ ಶಾನ್ತಿಕಾರಕಮ್ ।
ಸಙ್ಘಾತಭೇದೇ ಚ ನೃಣಾಂ ಮೈತ್ರೀಕರಣಮುತ್ತಮಮ್ ॥೧೭॥

ದುರ್ವೃತ್ತಾನಾಮಶೇಷಾಣಾಂ ಬಲಹಾನಿಕರಂ ಪರಮ್ ।
ರಕ್ಷೋಭೂತಪಿಶಾಚಾನಾಂ ಪಠನಾದೇವ ನಾಶನಮ್ ॥೧೮॥

---

೧೫. ಪೀಡಾ ಪರಿಹಾರಾರ್ಥವಾಗಿ ಮಾಡುವ ಶಾಂತಿಕರ್ಮ, ಕೆಟ್ಟ ಸ್ವಪ್ನಗಳನ್ನು ಕಂಡ ಭೀತಿಪರಿಹಾರ, ಮತ್ತು ಅತ್ಯುಗ್ರವಾದ ದುಷ್ಟಗ್ರಹಗಳಿಂದ ಸಂಭವಿಸುವ ಪೀಡಾಪರಿಹಾರ ಕರ್ಮಗಳಲ್ಲಿ ನನ್ನ ಮಾಹಾತ್ಮ್ಯವನ್ನು ಶ್ರವಣ ಮಾಡಬೇಕು. ಇದರಿಂದ ಶಾಂತಿಯಾಗುವುದು.

೧೬. ಮಾಹಾತ್ಮ್ಯವನ್ನು ಶ್ರವಣ ಮಾಡುವುದರಿಂದ ಸಮಸ್ತ ಪೀಡೆಗಳು ಪರಿಹಾರವಾಗುವುವು. ಭಯಂಕರವಾದ ಗ್ರಹಪೀಡೆಗಳು ಶಮನವಾಗುವುವು. ಮತ್ತು ಮಾನವರು ಕಂಡ ದುಸ್ಸ್ವಪ್ನವು ಸುಸ್ವಪ್ನದ ಫಲವನ್ನು ಕೊಡುವಂತಾಗು-ವುದು.

೧೭. ಬಾಲಕರನ್ನು ಪೀಡಿಸುವ ಪೂತನಾ ಮುಂತಾದ ದುರ್ದೇವತೆ-ಗಳಿಂದ ಶೋಷಣ ಮುಂತಾದ ವಿಕಾರವು ಪ್ರಾಪ್ತವಾದ ಸಂದರ್ಭದಲ್ಲಿ ಮಾಹಾ-ತ್ಮ್ಯವನ್ನು ಶ್ರವಣ ಮಾಡಿದರೆ ಪೀಡಾಪರಿಹಾರವಾಗುವುದು. ಒಂದು ಕೆಲಸದಲ್ಲಿ ಮೈತ್ರಿಯಿಂದ ಸೇರಿದ ಗುಂಪಿನಲ್ಲಿ ಒಡಕು ಉಂಟಾದರೆ ಮತ್ತೆ ಮೈತ್ರಿಯನ್ನು ಉಂಟುಮಾಡುವುದು.

೧೮. ನನ್ನ ಮಾಹಾತ್ಮ್ಯದ ಶ್ರವಣವು ದುರ್ಮಾರ್ಗದಲ್ಲಿ ನಡೆಯತಕ್ಕ ಎಲ್ಲ ಹಿಂಸಕ ಜನರ ಬಲವನ್ನು ಕುಗ್ಗಿಸುವುದು. ಮತ್ತು ರಾಕ್ಷಸ-ಭೂತ-ಪ್ರೇತ-ಪಿಶಾಚ ಮುಂತಾದುವುಗಳನ್ನು ಮಾಹಾತ್ಮ್ಯಪಠನ ಮಾತ್ರವು ನಾಶಮಾಡುವುದು.

ಸರ್ವಂ ಮಮೈತನ್ಮಾಹಾತ್ಮ್ಯಂ ಮಮ ಸನ್ನಿಧಿಕಾರಕಮ್ ||೧೯||

ಪಶುಪುಷ್ಪಾರ್ಘ್ಯಧೂಪೈಶ್ಚ ಗನ್ಧದೀಪೈಸ್ತಥೋತ್ತಮೈಃ |
ವಿಪ್ರಾಣಾಂ ಭೋಜನೈರ್ಹೋಮೈಃ ಪ್ರೋಕ್ಷಣೀಯೈರಹರ್ನಿಶಮ್ ||೨೦||

ಅನ್ಯೈಶ್ಚ ವಿವಿಧೈರ್ಭೋಗೈಃ ಪ್ರದಾನೈರ್ವತ್ಸರೇಣ ಯಾ |
ಪ್ರೀತಿರ್ಮೇ ಕ್ರಿಯತೇ ಸಾಸ್ಮಿನ್ ಸಕೃದುಚ್ಚರಿತೇ ಶ್ರುತೇ ||೨೧||

ಶ್ರುತಂ ಹರತಿ ಪಾಪಾನಿ ತಥಾರೋಗ್ಯಂ ಪ್ರಯಚ್ಛತಿ |
ರಕ್ಷಾಂ ಕರೋತಿ ಭೂತೇಭ್ಯೋ ಜನ್ಮನಾಂ ಕೀರ್ತನಂ ಮಮ ||೨೨||

---

೧೯. ಮೂರು ಚರಿತ್ರ ಭಾಗಗಳಿಂದ ಕೂಡಿದ ನನ್ನ ಮಾಹಾತ್ಮ್ಯ ಕೀರ್ತನವು ಆಯಾಯ ಸ್ಥಳದಲ್ಲಿ ನನ್ನ ಸನ್ನಿಧಿಯನ್ನು ಉಂಟುಮಾಡುವುದು. ಮತ್ತು ಭಕ್ತರಿಗೆ ಉತ್ತಮವಾದ ನಿಧಿಸಂಪತ್ತನ್ನು ಕೊಡುವುದು.

೨೦. ಪಶುಬಲಿಯನ್ನು ಅರ್ಪಿಸುವುದು, ಅರ್ಘ್ಯ-ಗಂಧ-ಪುಷ್ಪ-ಧೂಪ-ದೀಪ ಮುಂತಾದ ಉತ್ತಮೋಪಚಾರಗಳನ್ನು ಸಮರ್ಪಿಸಿ ಪೂಜಿಸುವುದು, ಬ್ರಾಹ್ಮಣ ಭೋಜನ, ಹೋಮ ಮತ್ತು ಹಗಲು-ರಾತ್ರಿವೇಳೆಗಳಲ್ಲಿ ಸೇವಾರೂಪ-ವಾಗಿ ಅರ್ಪಿಸುವ ನೃತ್ಯ-ಗೀತಾದಿಗಳಿಂದ ನನಗೆ ತೃಪ್ತಿಯಾಗುವುದು.

೨೧. ಮತ್ತು ಇನ್ನೂ ಅನೇಕವಿಧವಾದ ವಸ್ತ್ರಾಲಂಕಾರ ಪೂಜೆ ಮುಂತಾದ ಭೋಗ ಸಮರ್ಪಣ ಮತ್ತು ವಿಶೇಷವಾಗಿ ಆಚರಿಸುವ ದಾನಕರ್ಮ-ಇವುಗಳನ್ನು ಒಂದು ಸಂವತ್ಸರ ಪೂರ್ತಿಯಾಗಿ ಆಚರಿಸಿದರೆ ನನಗೆ ಯಾವ ಪ್ರೀತಿಯುಂಟಾಗುವುದೊ ಆ ಪ್ರೀತಿಯು ಈ ಮಾಹಾತ್ಮ್ಯವನ್ನು ಒಂದುಸಲ ಶ್ರವಣಮಾಡುವುದರಿಂದ ಮಾತ್ರವೇ ಉಂಟಾಗುವುದು.

೨೨. ಆಯಾಯ ನಿಮಿತ್ತಗಳಿಂದ ಆಗುವ ನನ್ನ ಉತ್ಪತ್ತಿಗಳ ಚರಿತ್ರ ಶ್ರವಣವು ಪಾಪಗಳನ್ನು ದೂರಮಾಡುವುದು. ಆರೋಗ್ಯವನ್ನು ಕೊಡುವುದು. ಮತ್ತು ನನ್ನ ಚರಿತ್ರದ ಕೀರ್ತನವು ಭೂತಗಳಿಂದ ರಕ್ಷೆಯನ್ನು ನೀಡುವುದು.

ಯುದ್ಧೇಷು ಚರಿತಂ ಯನ್ಮೇ ದುಷ್ಟದೈತ್ಯನಿಬರ್ಹಣಮ್ ।
ತಸ್ಮಿಞ್ಛ್ರುತೇ ವೈರಿಕೃತಂ ಭಯಂ ಪುಂಸಾಂ ನ ಜಾಯತೇ ॥೨೩॥

ಯುಷ್ಮಾಭಿಃ ಸ್ತುತಯೋ ಯಾಶ್ಚ ಯಾಶ್ಚ ಬ್ರಹ್ಮರ್ಷಿಭಿಃ ಕೃತಾಃ ।
ಬ್ರಹ್ಮಣಾ ಚ ಕೃತಾ ಯಾಸ್ತಾಃ ಪ್ರಯಚ್ಛನ್ತಿ ಶುಭಾಂ ಗತಿಮ್॥೨೪॥

ಅರಣ್ಯೇ ಪ್ರಾನ್ತರೇ ವಾಪಿ ದಾವಾಗ್ನಿಪರಿವಾರಿತಃ ।
ದಸ್ಯುಭಿರ್ವಾ ವೃತಃ ಶೂನ್ಯೇ ಗೃಹೀತೋ ವಾಪಿ ಶತ್ರುಭಿಃ ॥೨೫॥

ಸಿಂಹವ್ಯಾಘ್ರಾನುಯಾತೋ ವಾ ವನೇ ವಾ ವನಹಸ್ತಿಭಿಃ ।
ರಾಜ್ಞಾ ಕ್ರುದ್ಧೇನ ಚಾಜ್ಞಪ್ತೋ ವಧ್ಯೋ ಬನ್ಧಗತೋಽಪಿ ವಾ॥೨೬॥

---

೨೩. ಯುದ್ಧ ಪ್ರಸಂಗಗಳಲ್ಲಿ ದುಷ್ಟದೈತ್ಯರನ್ನು ಸಂಹರಿಸುವ ಚರಿತ್ರ ಭಾಗದ ಶ್ರವಣವು ಮಾನವರಿಗೆ ವೈರಿಗಳಿಂದ ಸಂಭವಿಸುವ ಭಯವನ್ನು ಪರಿಹಾರ ಮಾಡುವುದು.

೨೪. ಮತ್ತು ಮಾಹಾತ್ಮ್ಯದಲ್ಲಿ ಸೇರಿದ ನಿಮ್ಮಿಂದ ಮಾಡಲ್ಪಟ್ಟಿರುವ ಸ್ತೋತ್ರಗಳು, ಬ್ರಹ್ಮರ್ಷಿಗಳು ಮಾಡಿರುವ ಸ್ತುತಿಪಾಠಗಳು ಮತ್ತು ಬ್ರಹ್ಮದೇವನು ಮಾಡಿದ ಸ್ತೋತ್ರಗಳು—ಇವು ಪಠಿಸಿದ ಮಾನವರಿಗೆ ಶುಭಗತಿಯನ್ನು ಕೊಡುವುವು.

೨೫. ಅರಣ್ಯ ಮತ್ತು ನಿರ್ಜನದೂರಪ್ರದೇಶಗಳಲ್ಲಿ ಸಿಕ್ಕಿಕೊಂಡಿರುವ, ಕಾಡುಕಿಚ್ಚಿನಿಂದ ಆವರಿಸಲ್ಪಟ್ಟಿರುವ, ಕಳ್ಳ-ಕಾಕರಿಂದ ಸುತ್ತಲ್ಪಟ್ಟಿರುವ ಅಥವಾ ನಿರ್ಜನಪ್ರದೇಶದಲ್ಲಿ ಶತ್ರುಗಳಿಂದ ಹಿಡಿಯಲ್ಪಟ್ಟಿರುವ ಸಮಯದಲ್ಲಿ ಕೂಡ ನನ್ನ ಮಾಹಾತ್ಮ್ಯಕೀರ್ತನವು ಪೀಡೆಯನ್ನು ಪರಿಹರಿಸುವುದು.

೨೬. ಅಥವಾ ಕಾಡಿನಲ್ಲಿ ಸಿಂಹ, ಹುಲಿ, ಕಾಡಾನೆಗಳು ಅಟ್ಟಿಸಿಕೊಂಡು ಬಂದ ಭಯಪ್ರಸಂಗ ಮತ್ತು ರಾಜನು ಕೋಪಗೊಂಡು ಬಂಧನ-ಮರಣಗಳನ್ನು ಆಜ್ಞಾಪಿಸಿ ಶಿಕ್ಷೆಗೆ ಗುರಿಯಾಗಿರುವ ಪ್ರಸಂಗಗಳಲ್ಲಿ ನನ್ನ ಮಾಹಾತ್ಮ್ಯಕೀರ್ತನವು ಅಭಯವನ್ನು ಕೊಡುವುದು.

ಆಘೂರ್ಣಿತೋ ವಾ ವಾತೇನ ಸ್ಥಿತಃ ಪೋತೇ ಮಹಾರ್ಣವೇ ।
ಪತತ್ಸು ಚಾಪಿ ಶಸ್ತ್ರೇಷು ಸಙ್ಗ್ರಾಮೇ ಭೃಶದಾರುಣೇ ॥೨೭॥

ಸರ್ವಾಬಾಧಾಸು ಘೋರಾಸು ವೇದನಾಭ್ಯರ್ದಿತೋಽಪಿ ವಾ ।
ಸ್ಮರನ್ಮಮೈತಚ್ಚರಿತಂ ನರೋ ಮುಚ್ಯೇತ ಸಙ್ಕಟಾತ್ ॥೨೮॥

ಮಮ ಪ್ರಭಾವಾತ್ಸಿಹ್ಮಾದ್ಯಾ ದಸ್ಯವೋ ವೈರಿಣಸ್ತಥಾ ।
ದೂರಾದೇವ ಪಲಾಯನ್ತೇ ಸ್ಮರತಶ್ಚರಿತಂ ಮಮ ॥೨೯॥

ಋಷಿರುವಾಚ :—

ಇತ್ಯುಕ್ತ್ವಾ ಸಾ ಭಗವತೀ ಚಣ್ಡಿಕಾ ಚಣ್ಡವಿಕ್ರಮಾ ।
ಪಶ್ಯತಾಮೇವ ದೇವಾನಾಂ ತತ್ರೈವಾನ್ತರಧೀಯತ ॥೩೦॥

---

೨೭. ಮತ್ತು ಹಡಗಿನಲ್ಲಿ ಪ್ರಯಾಣಮಾಡುವಾಗ ಬಿರುಗಾಳಿಯಿಂದ ಹಡಗು ಸಮುದ್ರದಲ್ಲಿ ಮುಳುಗಿಹೋಗುವಂತಹ ಕಷ್ಟಪ್ರಸಂಗದಲ್ಲಿ, ಅಥವಾ ಅತಿಭಯಂಕರವಾದ ರಣರಂಗದಲ್ಲಿ ಶಸ್ತ್ರಗಳು ಮೇಲೆ ಬೀಳುತ್ತಿರುವಂತಹ ಪ್ರಸಂಗದಲ್ಲಿ ನನ್ನ ಮಾಹಾತ್ಮ್ಯಕೀರ್ತನವು ವಿಪತ್ತನ್ನು ದೂರಮಾಡುವುದು.

೨೮. ಇನ್ನೂ ಘೋರವಾದ ಸಮಸ್ತ ಪೀಡೆಗಳಲ್ಲಿಯೂ ಹಾಗು ಸಹಿಸಲಾಗದ ತೀವ್ರವಾದ ವೇದನೆಗಳಲ್ಲಿಯೂ ನನ್ನ ಮಾಹಾತ್ಮ್ಯ ಚರಿತ್ರವನ್ನು ಸ್ಮರಣಮಾಡಿದ ಮಾನವನು ಸಂಕಟದಿಂದ ಬಿಡುಗಡೆಯನ್ನು ಹೊಂದುವನು.

೨೯. ನನ್ನ ಚರಿತ್ರೆಯನ್ನು ಸ್ಮರಣಮಾಡುತ್ತಿದ್ದ ಮಾನವನ ಬಳಿಯಿಂದ ನನ್ನ ಪ್ರಭಾವದಿಂದ ಪೀಡಿಸಲು ಬಂದ ಸಿಂಹ ಮುಂತಾದ ಕ್ರೂರಜಂತು, ಕಳ್ಳರು ಮತ್ತು ಶತ್ರುಗಳು ದೂರದಿಂದಲೇ ಓಡಿಹೋಗುವರು.

ಸಮೇಧ ಋಷಿಯು ಹೇಳಿದನು :—

೩೦. ಅಖಂಡೈಶ್ವರ್ಯಸಂಪನ್ನಳೂ, ಪ್ರಚಂಡವಾದ ವಿಕ್ರಮವುಳ್ಳವಳೂ ಆದ ಚಂಡಿಕಾದೇವಿಯು ಹೀಗೆಂದು ಹೇಳಿ ದೇವತೆಗಳು ನೋಡುತ್ತಿರುವ ಹಾಗೆ ಅಲ್ಲಿಯೆ ಅಂತರ್ಧಾನ ಹೊಂದಿದಳು.

§

ತೇಽಪಿ ದೇವ್ಯಾ ನಿರಾತಙ್ಕಾಃ ಸ್ವಾಧಿಕಾರಾನ್ಯಥಾ ಪುರಾ ।
ಯಜ್ಞಭಾಗಭುಜಃ ಸರ್ವೇ ಚಕ್ರುರ್ವಿನಿಹತಾರಯಃ ॥೩೧॥

ದೈತ್ಯಾಶ್ಚ ದೇವ್ಯಾ ನಿಹತೇ ಶುಮ್ಭೇ ದೇವರಿಪೌ ಯುಧಿ ॥೩೨॥

ಜಗದ್ವಿಧ್ವಂಸಕೇ ತಸ್ಮಿನ್ಮಹೋಗ್ರೇಽತುಲವಿಕ್ರಮೇ ।
ನಿಶುಮ್ಭೇ ಚ ಮಹಾವೀರ್ಯೇ ಶೇಷಾಃ ಪಾತಾಲಮಾಯಯುಃ ॥೩೩॥

ಏವಂ ಭಗವತೀ ದೇವೀ ಸಾ ನಿತ್ಯಾಪಿ ಪುನಃ ಪುನಃ ।
ಸಮ್ಭೂಯ ಕುರುತೇ ಭೂಪ ಜಗತಃ ಪರಿಪಾಲನಮ್ ॥೩೪॥

ತಯೈತನ್ಮೋಹ್ಯತೇ ವಿಶ್ವಂ ಸೈವ ವಿಶ್ವಂ ಪ್ರಸೂಯತೇ ।
ಸಾ ಯಾಚಿತಾ ಚ ವಿಜ್ಞಾನಂ ತುಷ್ಟಾ ಋದ್ಧಿಂ ಪ್ರಯಚ್ಛತಿ ॥೩೫॥

---

೩೧. ತರುವಾಯ ಎಲ್ಲ ದೇವತೆಗಳು ನಾಶಹೊಂದಿದ ಶತ್ರುಗಳುಳ್ಳವರಾಗಿ ಅಡ್ಡಿ-ಆತಂಕಗಳಿಲ್ಲದಂತೆ ಯಜ್ಞಗಳ ಹವಿರ್ಭಾಗವನ್ನು ಸ್ವೀಕರಿಸುವವರಾಗಿ ಮತ್ತೆ ಮೊದಲಿನಂತೆ ತಮ್ಮ ತಮ್ಮ ಅಧಿಕಾರಗಳನ್ನು ನೆರವೇರಿಸಿದರು.

೩೨. ದೇವಿಯಿಂದ ದೇವತೆಗಳ ಶತ್ರುವಾದ ಶುಂಭಾಸುರನು ರಣರಂಗದಲ್ಲಿ ವಧಿಸಲ್ಪಡಲು ದೈತ್ಯರು ತಮ್ಮ ರಾಜನನ್ನು ಕಳೆದುಕೊಂಡು ಅನಾಥರಾದರು.

೩೩. ಹಾಗು ಜಗತ್ತನ್ನು ಧ್ವಂಸಮಾಡುವ, ನಿರುಪಮವಾದ ವಿಕ್ರಮವುಳ್ಳ ಮತ್ತು ಅತ್ಯುಗ್ರನಾದ ನಿಶುಂಭಾಸುರನೂ ದೇವಿಯಿಂದ ವಧಿಸಲ್ಪಡಲು ಇತರ ದೈತ್ಯರು ಪಾತಾಲಲೋಕಕ್ಕೆ ಧಾವಿಸಿದರು.

೩೪. ಸುರಥಮಹಾರಾಜನೇ! ಷಡ್ಗುಣೈಶ್ವರ್ಯಗಳಿಂದ ಕೂಡಿದ ದೇವಿಯು ತಾನು ನಿತ್ಯಳಾಗಿದ್ದರೂ ಆಯಾಯ ನಿಮಿತ್ತಗಳಿಂದ ಮತ್ತೆ ಮತ್ತೆ ಜನ್ಮವೆತ್ತಿ ಜಗತ್ತಿನ ಪಾಲನೆಯನ್ನು ಮಾಡುವಳು.

೩೫. ಆ ದೇವಿಯಿಂದ ಈ ವಿಶ್ವವು ಭ್ರಾಂತಿಗೊಳಿಸಲ್ಪಡುವುದು. ಆ ದೇವಿಯು ವಿಶ್ವವನ್ನು ಸೃಜಿಸುವಳು. ಆ ದೇವಿಯು ಪ್ರಾರ್ಥಿಸಲ್ಪಟ್ಟು ತತ್ತ್ವಜ್ಞಾನವನ್ನು ಕೊಡುವಳು ಮತ್ತು ಆ ದೇವಿಯು ಸಂತೋಷಹೊಂದಿ ಸಂಪತ್ತಿನ ಸಮೃದ್ಧಿಯನ್ನು ಕೊಡುವಳು.

ವ್ಯಾಪ್ತಂ ತಯೈತತ್ಸಕಲಂ ಬ್ರಹ್ಮಾಣ್ಡಂ ಮನುಜೇಶ್ವರ ।
ಮಹಾಕಾಲ್ಯಾ ಮಹಾಕಾಲೇ ಮಹಾಮಾರೀಸ್ವರೂಪಯಾ ॥೩೬॥

ಸೈವ ಕಾಲೇ ಮಹಾಮಾರೀ ಸೈವ ಸೃಷ್ಟಿರ್ಭವತ್ಯಜಾ ।
ಸ್ಥಿತಿಂ ಕರೋತಿ ಭೂತಾನಾಂ ಸೈವ ಕಾಲೇ ಸನಾತನೀ ॥೩೭॥

ಭವಕಾಲೇ ನೃಣಾಂ ಸೈವ ಲಕ್ಷ್ಮೀರ್ವೃದ್ಧಿಪ್ರದಾ ಗೃಹೇ ।
ಸೈವಾಭಾವೇ ತಥಾಲಕ್ಷ್ಮೀರ್ವಿನಾಶಾಯೋಪಜಾಯತೇ ॥೩೮॥

ಸ್ತುತಾ ಸಮ್ಪೂಜಿತಾ ಪುಷ್ಪೈರ್ಗನ್ಧಧೂಪಾದಿಭಿಸ್ತಥಾ ।
ದದಾತಿ ವಿತ್ತಂ ಪುತ್ರಾಂಶ್ಚ ಮತಿಂ ಧರ್ಮೇ ಗತಿಂ ಶುಭಾಮ್ ॥೩೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೇವೀಮಾಹಾತ್ಮ್ಯೇ
ಶುಮ್ಭ-ನಿಶುಮ್ಭವಧೋ ನಾಮ ಏಕೋನನವತಿತಮೋಽಧ್ಯಾಯಃ

---

೩೬. ಎಲೈ ಸುರಥಮಹಾರಾಜನೇ! ಮಹತ್ತಾದ ಪ್ರಲಯಕಾಲದಲ್ಲಿ ಮಹಾಮಾರಿಯ ಸ್ವರೂಪದಿಂದಿರುವ, ತಮೋಗುಣದಿಂದ ತುಂಬಿದ ಮಹಾ-ಕಾಲೀದೇವಿಯಿಂದ ಸಕಲ ಬ್ರಹ್ಮಾಂಡವು ವ್ಯಾಪಿಸಲ್ಪಟ್ಟಿರುವುದು.

೩೭. ಮತ್ತು ಜನ್ಮವಿಲ್ಲದವಳೂ ನಿತ್ಯಳೂ ಆದ ಮಹಾದೇವಿಯು ಪ್ರಲಯಕಾಲದಲ್ಲಿ ತಮೋಗುಣದ ಪ್ರಾಧಾನ್ಯದಿಂದ ಮಹಾಮಾರಿಯಾಗುವಳು. ಸೃಷ್ಟಿಸಮಯದಲ್ಲಿ ರಜೋಗುಣಮಯಳಾಗಿ ಸೃಷ್ಟಿಶಕ್ತಿಯಾಗುವಳು. ಮತ್ತು ಮಿಕ್ಕಸಮಯದಲ್ಲಿ ಸ್ಥಿತಿಕಾಲದಲ್ಲಿ ಸತ್ತ್ವಗುಣದಿಂದ ಸ್ಥಿತಿ ಕಾರಣಳಾಗುವಳು.

೩೮. ಮಹಾದೇವಿಯು ತನ್ನ ಸನ್ನಿಧಿಯನ್ನು ಇಟ್ಟಿರುವ ಕಾಲದಲ್ಲಿ ಮಾನವರಿಗೆ ಲಕ್ಷ್ಮೀರೂಪಳಾಗಿ ಮನೆಯಲ್ಲಿ ವೃದ್ಧಿಯನ್ನು ಉಂಟುಮಾಡುವಳು. ಸನ್ನಿಧಿಯ ಅಭಾವಕಾಲದಲ್ಲಿ ಅಲಕ್ಷ್ಮೀರೂಪಳಾಗಿ ವಿನಾಶಕ್ಕೆ ಕಾರಣಳಾಗುವಳು.

೩೯. ಅಂತಹ ಮಹಾದೇವಿಯು ಸ್ತುತಿಮಾಡಲ್ಪಟ್ಟವಳೂ ಮತ್ತು ಗಂಧ-ಧೂಪ ಮುಂತಾದ ಉಪಚಾರಗಳಿಂದ ಅರ್ಚಿಸಲ್ಪಟ್ಟವಳೂ ಆಗಿ ಧನವನ್ನೂ ಪುತ್ರಸಂತತಿಯನ್ನೂ, ಧರ್ಮಶ್ರದ್ಧೆಯನ್ನೂ ಮತ್ತು ಮಂಗಳಕರವಾದ ಗತಿಯನ್ನೂ ಕೊಡುವಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಭತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ನವತಿತಮೋಽಧ್ಯಾಯಃ

(ಸಾವರ್ಣಿಕಮನ್ವನ್ತರೋಪಸಂಹಾರಃ)

ಋಷಿರುವಾಚ :—

ಏತತ್ತೇ ಕಥಿತಂ ಭೂಪ ದೇವೀಮಾಹಾತ್ಮ್ಯಮುತ್ತಮಮ್ ।
ಏವಂಪ್ರಭಾವಾ ಸಾ ದೇವೀ ಯಯೇದಂ ಧಾರ್ಯತೇ ಜಗತ್ ॥೧॥

ವಿದ್ಯಾ ತಥೈವ ಕ್ರಿಯತೇ ಭಗವದ್ವಿಷ್ಣುಮಾಯಯಾ ॥೨॥

ತೊಂಭತ್ತನೆಯ ಅಧ್ಯಾಯ

ಋಷಿಯು ಹೀಗೆಂದನು :—

೧. ಎಲೈ ಸುರಥರಾಜನೇ! ಹೀಗೆ ನಿನಗೆ ಉತ್ತಮವಾದ ದೇವೀ-ಮಾಹಾತ್ಮ್ಯವು ನನ್ನಿಂದ ಹೇಳಲ್ಪಟ್ಟಿದೆ. ಆ ಮಹಾದೇವಿಯು ಇಂತಹ ಪ್ರಭಾವವುಳ್ಳವಳು. ಅವಳು ಈ ಜಗತ್ತನ್ನು ಧರಿಸಿಕೊಂಡಿರುವಳು.

೨. ಹೀಗೆ ಜಗತ್ತನ್ನು ಧರಿಸಿಕೊಂಡಿರುವವಳೂ, ವಿಷ್ಣುಮಾಯೆಯೆಂದು ವರ್ಣಿಸಲ್ಪಡುವವಳೂ ಆದ ಮಹಾದೇವಿಯು ಉಪನಿಷತ್ತಿನ ರೂಪದಿಂದ ತತ್ತ್ವಜ್ಞಾನವನ್ನು ಕೊಡುವಳು.

ತಥಾ ತ್ವಮೇಷ ವೈಶ್ಯಶ್ಚ ತಥೈವಾನ್ಯೇ ವಿವೇಕಿನಃ ।
ಮೋಹ್ಯನ್ತೇ ಮೋಹಿತಾಶ್ಚೈವ ಮೋಹಮೇಷ್ಯನ್ತಿ ಚಾಪರೇ ॥೩॥

ತಾಮುಪೈಹಿ ಮಹಾರಾಜ ಶರಣಂ ಪರಮೇಶ್ವರೀಮ್ ।
ಆರಾಧಿತಾ ಸೈವ ನೃಣಾಂ ಭೋಗಸ್ವರ್ಗಾಪವರ್ಗದಾ ॥೪॥

ಮಾರ್ಕಣ್ಡೇಯ ಉವಾಚ :—

ಇತಿ ತಸ್ಯ ವಚಃ ಶ್ರುತ್ವಾ ಸುರಥಃ ಸ ನರಾಧಿಪಃ ।
ಪ್ರಣಿಪತ್ಯ ಮಹಾಭಾಗಂ ತಮೃಷಿಂ ಸಂಶಿತವ್ರತಮ್ ॥೫॥

ನಿರ್ವಿಣ್ಣೋಽತಿಮಮತ್ವೇನ ರಾಜ್ಯಾಪಹರಣೇನ ಚ ।
ಜಗಾಮ ಸದ್ಯಸ್ತಪಸೇ ಸ ಚ ವೈಶ್ಯೋ ಮಹಾಮುನೇ ॥೬॥

---

೩. ಮತ್ತು ದೇವಿಯು ವಿವೇಕಿಗಳನ್ನು ಮೋಹಗೊಳಿಸುವಳು. ಮಹಾರಾಜನಾದ ನೀನು ಮತ್ತು ಸಮಾಧಿ ಎಂಬ ಈ ವೈಶ್ಯನು ಮೋಹ-ಹೊಂದಿರುವಿರಿ. ಹಾಗು ಇತರ ವಿವೇಕಿಜನರು ಕೂಡ ಮಾಯೆಯಿಂದ ಮೋಹಗೊಳಿಸಲ್ಪಟ್ಟಿರುವರು, ಮೋಹಗೊಳಿಸಲ್ಪಡುತ್ತಿದ್ದಾರೆ. ಮತ್ತು ಮುಂದೆ ಮೋಹಗೊಳಿಸಲ್ಪಡುವರು.

೪. ಮಹಾರಾಜನೇ! ನೀನು ಸರ್ವೇಶ್ವರಿಯಾದ ಮಹಾದೇವಿಯನ್ನು ಶರಣುಹೊಂದು. ಸರ್ವಭಾವಗಳಿಂದ ಆರಾಧಿಸಲ್ಪಟ್ಟ ಮಹಾದೇವಿಯು ಮಾನವರಿಗೆ ಐಹಿಕಸುಖಭೋಗ, ಸ್ವರ್ಗಸುಖ ಮತ್ತು ಮೋಕ್ಷಗಳನ್ನು ಕೊಡುವಳು.

ಮಾರ್ಕಂಡೇಯ ಮುನಿಯು ಹೇಳಿದನು :—

೫. ಮಮತೆಯಿಂದ ಖಿನ್ನನಾದ ಆ ಸುರಥಮಹಾರಾಜನು ಸುಮೇಧ-ಮುನಿಯ ಉಪದೇಶವಾಣಿಯನ್ನು ಕೇಳಿ ಮಹಾತ್ಮನೂ, ಅತಿಕಠಿನವಾದ ತಪಶ್ಚರ್ಯೆಯುಳ್ಳವನೂ ಆದ ಮುನಿಯನ್ನು ಗುರುಭಾವನೆಯಿಂದ ವಂದಿಸಿದನು.

೬. ಕ್ರೌಷ್ಟುಕಿಮುನಿಯೆ! ಸುರಥರಾಜನು ಇದುವರೆಗೆ ಪುತ್ರ- ಮಿತ್ರ-ಪರಿವಾರವಲ್ಲಿದ್ದ ಮಮತ್ವದಿಂದಲೂ, ರಾಜ್ಯಾಪಹಾರದುಃಖದಿಂದಲೂ ಬೇಸರ-ಗೊಂಡವನಾಗಿ ಕೂಡಲೆ ತಪಸ್ಸಿಗೆ ಹೊರಟುಹೋದನು. ಹಾಗು ಆ ವೈಶ್ಯನೂ ತಪಸ್ಸಿಗೆ ಹೋದನು.

ಸನ್ದರ್ಶನಾರ್ಥಮಮ್ಬಾಯಾ ನದೀಪುಲಿನಸಂಸ್ಥಿತಃ ।
ಸ ಚ ವೈಶ್ಯಸ್ತಪಸ್ತೇಪೇ ದೇವೀಸೂಕ್ತಂ ಪರಂ ಜಪನ್ ॥೭॥

ತೌ ತಸ್ಮಿನ್ ಪುಲಿನೇ ದೇವ್ಯಾಃ ಕೃತ್ವಾ ಮೂರ್ತಿಂ ಮಹೀ
ಮಯೀಮ್ ।
ಅರ್ಹಣಾಂ ಚಕ್ರತುಸ್ತಸ್ಯಾಃ ಪುಷ್ಪಧೂಪಾಗ್ನಿತರ್ಪಣೈಃ ॥೮॥

ನಿರಾಹಾರೌ ಯತಾತ್ಮಾನೌ ತನ್ಮನಸ್ಕೌ ಸಮಾಹಿತೌ ।
ದದತುಸ್ತೌ ಬಲಿಂ ಚೈವ ನಿಜಗಾತ್ರಾಸೃಗುಕ್ಷಿತಮ್ ॥೯॥

ಏವಂ ಸಮಾರಾಧಯತೋಸ್ತ್ರಿಭಿರ್ವರ್ಷೈರ್ಯತಾತ್ಮನೋಃ ।
ಪರಿತುಷ್ಟಾ ಜಗದ್ಧಾತ್ರೀ ಪ್ರತ್ಯಕ್ಷಂ ಪ್ರಾಹ ಚಣ್ಡಿಕಾ ॥೧೦॥

---

೭. ಸುರಥಮಹಾರಾಜನು ಮತ್ತು ಸಮಾಧಿವೈಶ್ಯನು ಇಬ್ಬರೂ ಜಗನ್ಮಾತೆಯಾದ ದೇವಿಯ ಸಾಕ್ಷಾತ್ಕಾರಕ್ಕೋಸ್ಕರ ನದಿಯ ಮರಳು ದಿಣ್ಣೆಯಲ್ಲಿ ಕುಳಿತು ಉತ್ತಮವಾದ ದೇವೀಸೂಕ್ತವನ್ನು ಜಪಿಸುತ್ತ ತಪಸ್ಸನ್ನು ಮಾಡಿದರು.

೮. ಆ ರಾಜನು ಮತ್ತು ವೈಶ್ಯನು ಇಬ್ಬರು ನದೀತೀರದ ಮರಳಿನಲ್ಲಿ ಮಣ್ಣಿನಿಂದ ದೇವಿಯ ಮೂರ್ತಿಯನ್ನು ಮಾಡಿಟ್ಟುಕೊಂಡು ಪುಷ್ಪ-ಧೂಪ ಮುಂತಾದ ಉಪಚಾರ ಸಮರ್ಪಣ, ಅಗ್ನಿಹೋಮ, ಮತ್ತು ತರ್ಪಣಗಳಿಂದ ದೇವಿಯ ಆರಾಧನವನ್ನು ಮಾಡಿದರು.

೯. ಅವರಿಬ್ಬರೂ ಆಹಾರವನ್ನು ಸೇವಿಸದಿರುವವರೂ, ವಿಷಯಗಳನ್ನು ವರ್ಜಿಸಿದ ಇಂದ್ರಿಯವರ್ಗವುಳ್ಳವರೂ, ಸ್ಥಿರವಾದ ಮಾನಸವುಳ್ಳವರೂ ಮತ್ತು ಗುರುವಿನಿಂದ ಉಪದೇಶಹೊಂದಿದ ಅರ್ಥದಲ್ಲಿ ತತ್ಪರತೆಯುಳ್ಳವರೂ ಆಗಿ ಆ ದೇವಿಯನ್ನು ಆರಾಧಿಸುತ್ತ ತಮ್ಮ ದೇಹದ ರಕ್ತವನ್ನು ಪ್ರೋಕ್ಷಿಸಿದ ಬಲಿಯನ್ನು ದೇವಿಗೆ ಸಮರ್ಪಿಸಿದರು.

೧೦. ಹೀಗೆ ಜಿತೇಂದ್ರಿಯರಾಗಿ ರಾಜ-ವೈಶ್ಯರಿಬ್ಬರು ದೇವಿಯನ್ನು ಆರಾಧಿಸುತ್ತ ಮೂರು ವರ್ಷಗಳು ಕಳೆಯಲಾಗಿ ಇವರ ಭಕ್ತಿಯ ಆರಾಧನೆಯಿಂದ ಪ್ರಸನ್ನಳಾದವಳೂ ಮತ್ತು ಜಗತ್ಕಾರಣಳೂ ಆದ ಚಂಡಿಕಾದೇವಿಯು ಪ್ರತ್ಯಕ್ಷಳಾಗಿ ಬಂದು ಹೀಗೆ ಹೇಳಿದಳು.

ಶ್ರೀ ದೇವ್ಯುವಾಚ :—

ಯತ್ಪ್ರಾರ್ಥ್ಯತೇ ತ್ವಯಾ ಭೂಪ ತ್ವಯಾ ಚ ಕುಲನನ್ದನ ।
ಮತ್ತಸ್ತತ್ಪ್ರಾಪ್ಯತಾಂ ಸರ್ವಂ ಪರಿತುಷ್ಟಾ ದದಾಮಿ ತತ್ ॥೧೧॥

ಮಾರ್ಕಣ್ಡೇಯ ಉವಾಚ :—

ತತೋ ವವ್ರೇ ನೃಪೋ ರಾಜ್ಯಮವಿಭ್ರಂಶ್ಯನ್ಯಜನ್ಮನಿ ।
ಅತ್ರೈವ ಚ ನಿಜಂ ರಾಜ್ಯಂ ಹತಶತ್ರುಬಲಂ ಬಲಾತ್ ॥೧೨॥

ಸೋಽಪಿ ವೈಶ್ಯಸ್ತತೋ ಜ್ಞಾನಂ ವವ್ರೇ ನಿರ್ವಿಣ್ಣಮಾನಸಃ ।
ಮಮೇತ್ಯಹಮಿತಿ ಪ್ರಾಜ್ಞಃ ಸಙ್ಗವಿಚ್ಯುತಿಕಾರಕಮ್ ॥೧೩॥

ದೇವಿಯು ಇಂತೆಂದಳು :—

೧೧. ಎಲೈ, ಮಹಾರಾಜನೇ! ಎಲೈ, ವಂಶವನ್ನು ಆನಂದಗೊಳಿಸುವ ವೈಶ್ಯನೇ! ನಿಮ್ಮಿಂದ ಯಾವ ಇಷ್ಟವು ಪ್ರಾರ್ಥಿಸಲ್ಪಡುವುದೋ ಅವೆಲ್ಲವನ್ನೂ ನೀವು ಹೊಂದುವಿರಿ. ನಿಮ್ಮ ಆರಾಧನೆಯಿಂದ ಸಂತುಷ್ಟಳಾದ ನಾನು ನಿಮ್ಮ ಮನೋರಥವನ್ನು ಕೊಡುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೨. ತರುವಾಯ ಸುರಥಮಹಾರಾಜನು ಮುಂದಿನ ಜನ್ಮದಲ್ಲಿ ಭ್ರಂಶವಾಗದಿರುವ ಮನುಪದವಿಯರೂಪವಾದ ರಾಜ್ಯಾಧಿಕಾರವನ್ನು ಕೇಳಿ-ಕೊಂಡನು. ಹಾಗು ಈ ಜನ್ಮದಲ್ಲಿ ಬಲದಿಂದ ಶತ್ರುಗಳನ್ನು ನಿಶ್ಶೇಷಮಾಡಿದ ತನ್ನ ರಾಜ್ಯವನ್ನು ಪ್ರಾರ್ಥಿಸಿದನು.

೧೩. ಪ್ರಜ್ಞಾಸಂಪನ್ನನಾದ ಆ ವೈಶ್ಯನು ವಿರಕ್ತವಾದ ಅಂತಃಕರಣ-ವುಳ್ಳವನಾಗಿ ಅಹಂ-ಮಮ (ತಾನು-ತನ್ನದು) ಎಂಬ ಭಾವನೆಯನ್ನು ಉಂಟು-ಮಾಡುವ ಅಭಿಮಾನವನ್ನು ದೂರಮಾಡುವ ತತ್ತ್ವಜ್ಞಾನವುಂಟಾಗುವಂತೆ ವರವನ್ನು ಬೇಡಿದನು.

ಶ್ರೀ ದೇವ್ಯುವಾಚ :—

ಸ್ವಲ್ಪೈರಹೋಭಿರ್ನೃಪತೇ ಸ್ವಂ ರಾಜ್ಯಂ ಪ್ರಾಪ್ಸ್ಯತೇ ಭವಾನ್ ।
ಹತ್ವಾ ರಿಪೂನಸ್ಖಲಿತಂ ತವ ತತ್ರ ಭವಿಷ್ಯತಿ ॥೧೪॥

ಮೃತಶ್ಚ ಭೂಯಃ ಸಂಪ್ರಾಪ್ಯ ದೇವಾಜ್ಜನ್ಮ ವಿವಸ್ವತಃ ।
ಸಾವರ್ಣಿಕೋ ನಾಮ ಮನುರ್ಭವಾನ್ ಭುವಿ ಭವಿಷ್ಯತಿ ॥೧೫॥

ವೈಶ್ಯವರ್ಯ ತ್ವಯಾ ಯಶ್ಚ ವರೋಽಸ್ಮತ್ತೋಽಭಿವಾಂಛಿತಃ ।
ತಂ ಪ್ರಯಚ್ಛಾಮಿ ಸಂಸಿದ್ಧ್ಯೈ ತವ ಜ್ಞಾನಂ ಭವಿಷ್ಯತಿ ॥೧೬॥

ಮಾರ್ಕಣ್ಡೇಯ ಉವಾಚ :—

ಇತಿ ದತ್ವಾ ತಯೋರ್ದೇವೀ ಯಥಾಭಿಲಷಿತಂ ವರಮ್ ।
ಬಭೂವಾಂತರ್ಹಿತಾ ಸದ್ಯೋ ಭಕ್ತ್ಯಾ ತಾಭ್ಯಾಮಭಿಷ್ಟುತಾ ॥೧೭॥

ದೇವಿಯು ಇಂತೆಂದಳು :—

೧೪. ಎಲೈ ರಾಜನೇ ! ಇನ್ನು ಮುಂದೆ ಸ್ವಲ್ಪ ದಿವಸಗಳಲ್ಲಿಯೇ ನೀನು ನಿನ್ನ ರಾಜ್ಯವನ್ನು ಹೊಂದುತ್ತೀಯೆ. ಮತ್ತು ಶತ್ರುಗಳನ್ನು ಸಂಹಾರ-ಮಾಡಿ ಜಯಶಾಲಿಯಾದ ನಿನ್ನಲ್ಲಿ ರಾಜ್ಯಲಕ್ಷ್ಮಿಯು ಭ್ರಂಶವಾಗದಂತೆ ಸ್ಥಿರವಾಗಿ ಉಳಿಯುವಳು.

೧೫. ಮತ್ತು ಆಯುಷ್ಯವು ಸಮಾಪ್ತಿಯಾಗಿ ಮರಣ ಹೊಂದಿದ ಮೇಲೆ ಮತ್ತೆ ನೀನು ಸೂರ್ಯದೇವನಿಂದ ಜನ್ಮವನ್ನು ಹೊಂದಿ ಭೂಮಿಯಲ್ಲಿ ಸಾವರ್ಣಿಕ ಎಂಬ ಮನುವಾಗಿ ಲೋಕವನ್ನು ರಕ್ಷಿಸುತ್ತೀಯೆ.

೧೬. ಎಲೈ, ಸಾಧುವಾದ ವೈಶ್ಯನೇ ! ನನ್ನಲ್ಲಿ ನೀನು ಯಾವ ಇಷ್ಟವಾದ ವರವನ್ನು ಪ್ರಾರ್ಥಿಸಿದೆಯೊ ಆ ವರವನ್ನು ಕೊಟ್ಟಿರುವೆನು. ವರ-ಪ್ರಭಾವದಿಂದ ನಿನಗೆ ಮುಕ್ತಿಯನ್ನು ಕೊಡುವ ತತ್ತ್ವಜ್ಞಾನವು ಲಭಿಸುವುದು.

ಮಾರ್ಕಂಡೇಯ ಮುನಿಯು ಹೇಳಿದನು :—

೧೭. ಮಹಾದೇವಿಯು ಸುರಥ-ವೈಶ್ಯರಿಗೆ ಈ ರೀತಿಯಾಗಿ ಅವರವರಿಗೆ ಇಷ್ಟವಾದ ವರಗಳನ್ನು ಕೊಟ್ಟು ಮತ್ತೆ ಭಕ್ತಿಯಿಂದ ಅವರಿಂದ ಸ್ತುತಿಸಲ್ಪಟ್ಟ ಕೂಡಲೆ ಆ ಸ್ಥಳದಲ್ಲಿ ಅಂತರ್ಧಾನ ಹೊಂದಿದಳು.

ಏವಂ ದೇವ್ಯಾ ವರಂ ಲಬ್ಧ್ವಾ ಸುರಥಃ ಕ್ಷತ್ರಿಯರ್ಷಭಃ ।
ಸೂರ್ಯಾಜ್ಜನ್ಮ ಸಮಾಸಾದ್ಯ ಸಾವರ್ಣಿರ್ಭವಿತಾ ಮನುಃ ॥೧೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸೂರ್ಯಸಾವರ್ಣಿಕೇ ಮನ್ವನ್ತರೇ ಶ್ರೀ ದೇವೀಮಾಹಾತ್ಮ್ಯೇ ನವತಿತಮೋಽಧ್ಯಾಯಃ

(ದೇವೀಮಾಹಾತ್ಮ್ಯಂ ಸಂಪೂರ್ಣಮ್)

---

೧೮. ಈ ರೀತಿಯಾಗಿ ಕ್ಷತ್ರಿಯೋತ್ತಮನಾದ ಸುರಥಮಹಾರಾಜನು ದೇವಿಯಿಂದ ವರವನ್ನು ಹೊಂದಿದನು. ಆ ರಾಜನು ಮತ್ತೆ ತನ್ನ ರಾಜ್ಯಭಾರವನ್ನು ನಿರ್ವಹಿಸಿ ಮರಣಾನಂತರದಲ್ಲಿ ಮತ್ತೆ ಸೂರ್ಯದೇವನಿಂದ ಜನ್ಮವೆತ್ತಿದವನಾಗಿ ಸಾವರ್ಣಿಕನೆಂಬ ಮನುರಾಜನಾಗುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತನೆಯ ಅಧ್ಯಾಯವು ಮುಗಿದುದು.

ದೇವೀಮಾಹಾತ್ಮ್ಯವು ಸಂಪೂರ್ಣವು.